ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ

ಭಾಗ–24

ಶಾಂತಿಪರ್ವದ

ರಾಜಧರ್ಮಪರ್ವ

ಪ್ರಕಾಶಕರು:

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ಶ್ರೀರಾಮಶ್ರೀ॥

ಭಗವಾನ್ ಶ್ರೀವೇದವ್ಯಾಸಪ್ರಣೀತ

ಮಹಾಭಾರತ

ಭಾಗ - ೨೪

ಶಾಂತಿಪರ್ವದ

ರಾಜಧರ್ಮಪರ್ವ

(ಅಧ್ಯಾಯಗಳು ೧೫ರಿಂದ ೩೬ರವರೆಗೆ)

ಸಮಗ್ರಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ
ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷ್ಮಲಂಕಾರದೊಂದಿಗೆ

ಅನುಗ್ರಹ

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥಶ್ರೀಪಾದರು

ಶ್ರೀಹೃಷೀಕೇಶಸಂಸ್ಥಾನಮ್, ಪಲಿಮಾರು ಮಠ, ಉಡುಪಿ.

ಅನುವಾದಕರು

ವಿದ್ವಾನ್ ಶ್ರೀಬೆಮ್ಮತ್ತಿ ವೇಂಕಟೇಶಾಚಾರ್ಯ, ಬೆಂಗಳೂರು

ಪ್ರಕಾಶಕರು

ತತ್ತ್ವಸಂಶೋಧನಸಂಸತ್ (ರಿ)

ಕರ್ನಾಟಕಸಂಸ್ಕೃತವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವ - ಮಹಾಭಾರತತಾತ್ಪರ್ಯನಿರ್ಣಯ-ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ-ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥಶ್ರೀಪಾದರ ದ್ವಿತೀಯಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣ -ಗೊಂಡಿತು.

ರಾಜಧರ್ಮಪರ್ವ - ಭಾಗ ೨ಳ

ಅನುವಾದಕರು - ವಿದ್ವಾನ್ ಬೆಮ್ಮತ್ತಿ ವೇಂಕಟೇಶಾಚಾರ್ಯ, ಬೆಂಗಳೂರು.

ಪ್ರಕಾಶಕರು – ತತ್ವಸಂಶೋಧನಸಂಸತ್ (ರಿ.), ಪಲಿಮಾರುಮಠ, ಉಡುಪಿ.

ಈ ಗ್ರಂಥವು ಕರ್ನಾಟಕಸರ್ಕಾರದ ಆರ್ಥಿಕನೆರವಿನಿಂದ ಮುದ್ರಿತವಾಗಿದೆ.

ಪುಟಗಳು – XXiV + 498 = 522

ಮುದ್ರಿತಪ್ರತಿಗಳು - 1000

ಬೆಲೆ - ರೂ 500/-

©ತತ್ವಸಂಶೋಧನಸಂಸತ್ (ರಿ.), ಪಲಿಮಾರುಮಠ, ಉಡುಪಿ.

ಅಕ್ಷರಜೋಡಣೆ - ಶ್ರೀಮತಿ ನಾಗಲತಾ, ಬೆಂಗಳೂರು.

ಪುಟಸಂಯೋಜನೆ - ಸುಬ್ಬಣ್ಣ ಕೆಂಪದಾಳಿಹಳ್ಳಿ , (9141311280)

ಮುದ್ರಕರು – ಪವನ್ ಪ್ರಿಂಟರ್ಸ್, ಬೆಂಗಳೂರು -18
ಮೊಬೈಲ್- 9686489131

ಗ್ರಂಥಪ್ರಾಪ್ತಿ - ಪಲಿಮಾರುಮಠ, ಉಡುಪಿ

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮನೀನ್ಮುಮಃ

ಶ್ರೀಶ್ರೀವಿದ್ಯಾಧೀಶತೀರ್ಥಶ್ರೀಪಾದಂಗಳವರು,
ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನ,
ಪರ್ಯಾಯ ಶ್ರೀಹೃಷೀಕೇಶಸಂಸ್ಥಾನಮ್,
ಪಲಿಮಾರು ಮಠ, ಉಡುಪಿ

ಅನುಗ್ರಹಸಂದೇಶ

ಮಹಾಭಾರತವು ಕೇವಲ ಕಥೆಯನ್ನು ಹೇಳಲು ಹೊರಟಿರುವ ಗ್ರಂಥವಲ್ಲ. ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ನಿರೂಪಿಸುವ ಮಹಾಗ್ರಂಥವೆನಿಸಿದೆ. ಧರ್ಮಾರ್ಥಕಾಮಗಳನ್ನು ಮಾತ್ರ ಸ್ವೀಕರಿಸುವವರು ಅಲ್ಪಬುದ್ಧಿಗಳೇ ಸರಿ. ಧರ್ಮದಿಂದ ಮನಃಶುದ್ಧಿಯನ್ನು, ಅರ್ಥದಿಂದ ಯಜ್ಞದಾನಗಳನ್ನು, ಕಾಮದಿಂದ ವೈರಾಗ್ಯಯುತಜೀವನವನ್ನು ನಡೆಸಿ ಈ ಮೂರರಿಂದ ಮೋಕ್ಷವನ್ನು ಪಡೆಯಲು ಬಯಸುವವರು ಉತ್ತಮರೆನಿಸುತ್ತಾರೆ. ಈ ನಾಲ್ಕನ್ನೂ ಹೊಂದಾಣಿಕೆ ಮಾಡಿಕೊಂಡು ಜೀವನವನ್ನು ನಡೆಸಿದ ಮಹಾನುಭಾವರು ಪಾಂಡವರಾದರೆ, ಸ್ವಾರ್ಥಕ್ಕಾಗಿ ಧರ್ಮವನ್ನು ಆಚರಿಸಿ ಧನಕಾಮನೆಗಳೇ ಪುರುಷಾರ್ಥವೆಂದು ಭಾವಿಸಿದ್ದಕ್ಕೆ ಕೌರವರು ದೃಷ್ಟಾಂತವಾಗಿದ್ದಾರೆ. ಶಾಂತಿಸಮೃದ್ಧಿಗಳು ಚತುರ್ವಿಧಪುರುಷಾರ್ಥಗಳನ್ನು ಅರಿತವರಿಗಲ್ಲದೇ ಐಹಿಕಸುಖವೇ ಶ್ರೇಷ್ಠವೆಂದು ತಿಳಿದವರಿಗೆ ಉತ್ತಮಪುರುಷಾರ್ಥಗಳು ದೊರೆಯವು. ಪುರುಷಾರ್ಥಗಳಿಗೆ ಸಂಬಂಧಿಸಿದಂತೆ ವಿಸ್ತಾರವಾದ ದೃಷ್ಟಾಂತಪೂರ್ವಕವಾದ ಉಪದೇಶವು ಶಾಂತಿಪರ್ವದಲ್ಲಿ ಮೂಡಿಬಂದಿದೆ. ಶಾಂತಿಪರ್ವದಲ್ಲಿ ಆರಂಭದ ಉಪಪರ್ವವು ರಾಜಧರ್ಮಪರ್ವವೆನಿಸಿದೆ. ರಾಜರ ಕರ್ತವ್ಯಗಳನ್ನು ವಿಸ್ತಾರವಾಗಿ ಈ ಉಪಪರ್ವದಲ್ಲಿ ಪ್ರತಿಪಾದಿಸಲಾಗಿದೆ. ಆರಂಭದಲ್ಲಿಯೇ ಬರುವ ಒಂದು ರೋಚಕವಾದ ಕಥೆ. ಶಂಖಲಿಖಿತರ ಕಥೆ.

ಬಾಹುದಾ ನದೀತೀರದಲ್ಲಿ ಶಂಖಲಿಖಿತರೆಂಬ ಸೋದರ ಮುನಿಗಳು ವಾಸಿಸು-ತ್ತಿದ್ದರು. ಅವರ ಆಶ್ರಮಗಳು ನಿತ್ಯಪುಷ್ಪಫಲಗಳಿಂದ ರಮಣೀಯವಾಗಿದ್ದವು. ಒಂದು ದಿನ ಲಿಖಿತನು ಶಂಖನ ಆಶ್ರಮಕ್ಕೆ ಆಗಮಿಸಿದನು. ಆಗ ಶಂಖನು ಆಶ್ರಮದಲ್ಲಿ ಇರಲಿಲ್ಲ. ಲಿಖಿತನು ಸಹೋದರನು ಇಲ್ಲದಿದ್ದಾಗ ಆ ಆಶ್ರಮದ

ಫಲಪುಷ್ಪಗಳನ್ನು ಸ್ವೀಕರಿಸಿದನು. ಶಂಖನು ಆಗಮಿಸಿ ನನ್ನನ್ನು ಕೇಳದೇ ಫಲವನ್ನು ಸ್ವೀಕರಿಸಿದ ನೀನು ಕಳ್ಳನಂತಾಗಿರುವಿ. ರಾಜನ ಬಳಿಗೆ ಹೋಗಿ ಕಳ್ಳನಿಗೆ ಕೊಡುವ ಶಿಕ್ಷೆಯನ್ನು ಹೊಂದಿ ಶುದ್ಧನಾಗಿ ಬಾ ಎಂದು ಹೇಳಿದನು. ಲಿಖಿತನು ಅಣ್ಣನ ಮಾತಿನಂತೆ ಅಂದಿನ ರಾಜನಾದ ಸುದ್ಯುಮ್ನನ ಬಳಿ ಹೋಗಿ ಚೋರರಿಗೆ ನೀಡುವ ಶಿಕ್ಷೆಯನ್ನು ನನಗೆ ನೀಡು ಎಂದು ಬೇಡಿದನು. ಬ್ರಾಹ್ಮಣನಿಗೆ ಶಿಕ್ಷೆಯನ್ನು ಹೇಗೆ ನೀಡಬೇಕೆಂದು ಸುದ್ಯುಮ್ನನು ಕಂಗಾಲಾದಾಗ ಲಿಖಿತನು ಉತ್ತರಿಸುತ್ತಾನೆ – ರಾಜಶಾಸನದಿಂದ ದಂಡಿತನಾಗದಿದ್ದಲ್ಲಿ ಯಮಶಾಸನಕ್ಕೆ ತುತ್ತಾಗುತ್ತೇನೆ. ಆದ್ದರಿಂದ ಚೋರರಿಗೆ ನೀಡುವ ಶಿಕ್ಷೆಯನ್ನು ನನಗೆ ನೀಡು ಎಂದು ಕೇಳಿಕೊಳ್ಳುತ್ತಾನೆ. ರಾಜನಾದರೂ ಅವನ ಮಾತಿಗನುಗುಣವಾಗಿ ಲಿಖಿತನ ಎರಡೂ ಕೈಗಳನ್ನೂ ದೂತರ ಮೂಲಕ ತುಂಡರಿಸಿ ಕಳುಹಿಸಿದನು. ಲಿಖಿತನು ಸಹೋದರನ ಬಳಿ ತಾನು ಮಾಡಿದ ಅಪರಾಧಕ್ಕೆ ಪ್ರಾಯಶ್ಚಿತ್ತವನ್ನು ಪಡೆದು ಬಂದಿದ್ದೇನೆಂದು ತನ್ನ ತುಂಡಾದ ಕೈಗಳನ್ನು ತೋರಿಸಿದನು. ಇದರಿಂದ ಪ್ರಸನ್ನನಾದ ಶಂಖನು ಬಾಹುದಾ ನದಿಯಲ್ಲಿ ಮಿಂದು ಪಿತೃಗಳಿಗೆ ತರ್ಪಣವನ್ನು ನೀಡಿ ಬಾ ಎಂದು ಹೇಳಿದನು. ಅಣ್ಣನ ಮಾತಿನಂತೆ ನದಿಯಲ್ಲಿ ಮಿಂದು ತರ್ಪಣವನ್ನು ಹೇಗೆ ನೀಡಲಿ? ಎಂದು ಚಿಂತಿಸುವಾಗಲೇ ಅವನಿಗೆ ಕಮಲಸದೃಶವಾದ ಕರಗಳು ಮೂಡಿಬಂದವು. ಇದರಿಂದ ವಿಸ್ಮಿತನಾದ ಲಿಖಿತನು ಶಂಖನ ಬಳಿ ಬಂದು ಕೈಗಳನ್ನು ತೋರಿ ವಂದಿಸಿದನು. ಬಳಿಕ ಲಿಖಿತನು ಇಂತಹ ಕರುಣಾಶಾಲಿಯಾದ ನೀನು ಹಣ್ಣನ್ನು ತಿಂದ ನನ್ನನ್ನು ಮೊದಲೇ ಏಕೆ ಕ್ಷಮಿಸಲಿಲ್ಲ ಎಂದು ಪ್ರಶ್ನಿಸಿದನು. ಆಗ ಶಂಖನು ಉತ್ತರಿಸುತ್ತಾನೆ. ದಂಡಧಾರಣವು ರಾಜರ ಕರ್ತವ್ಯವು. ರಾಜರ ಮೂಲಕವೇ ದಂಡನೆಯನ್ನು ನೀಡಬೇಕೆಂದು ನಿನ್ನನ್ನು ಅಲ್ಲಿಗೆ ಕಳುಹಿಸಿದ್ದೇನೆ. ದಂಡಿಸಲ್ಪಟ್ಟ ನೀನು ಪಾವನನಾಗಿರುವಿ. ನಿನ್ನನ್ನು ದಂಡಿಸಿದ ರಾಜನು ಪುಣ್ಯಭಾಗಿಯಾಗಿದ್ದಾನೆ. ದಂಡನೆ ನೀಡದ ರಾಜರಿಗೆ ಪ್ರಜೆಗಳ ಪಾಪವು ಸೇರುತ್ತದೆ. ದಂಡನೆ ಹೊಂದಿದ ಪ್ರಜೆಗಳಿಗೆ ಪಾಪವು ಪರಿಹಾರವಾಗುತ್ತದೆ. ಇದು ಧರ್ಮದ ಮರ್ಮವಾಗಿದೆ. ಹೀಗೆ ಧರ್ಮ, ಅರ್ಥ, ಕಾಮ, ಮೋಕ್ಷಗಳ ನಿಜವಾದ ಗತಿಗಳನ್ನು ಅರಿತು ನಡೆಯುವವನೇ ರಾಜನೆನಿಸುತ್ತಾನೆ. ಧರ್ಮರಾಜನೇ! ನೀನು ಈ ರೀತಿಯಾದ ಧರ್ಮಾರ್ಥಕಾಮಮೋಕ್ಷಗಳನ್ನು

ಅನುಭವಿಸು. ಯೋಗ್ಯರೀತಿಯಲ್ಲಿ ಕರ್ತವ್ಯಗಳನ್ನು ನಿರ್ವಹಿಸು. ಎಂದು ವ್ಯಾಸರು ಧರ್ಮರಾಜನಿಗೆ ರಾಜರ ಕರ್ತವ್ಯಗಳೇನೆಂಬುದನ್ನು ಅನೇಕ ದೃಷ್ಟಾಂತಗಳಿಂದ ವಿಸ್ತಾರವಾಗಿ ವರ್ಣಿಸಿದ್ದಾರೆ. ಇಂತಹ ರಮಣೀಯವಾದ ಮನಃಶಾಂತಿಗೆ ಕಾರಣ-ವಾದ ಶಾಂತಿಪರ್ವದ ಉಪಪರ್ವವೆನಿಸಿದ ರಾಜಧರ್ಮಪರ್ವದ ಪ್ರಥಮ ಮೂವತ್ತಾರು ಅಧ್ಯಾಯಗಳನ್ನು ವಿದ್ವಾನ್ ಬೆಮ್ಮತ್ತಿ ವೇಂಕಟೇಶಾಚಾರ್ಯರು ಸುಂದರವಾಗಿ ಅನುವಾದಿಸಿ ಕೊಟ್ಟಿದ್ದಾರೆ. ಮಹಾಭಾರತದ ಈ ಯೋಜನೆಗೆ ಪ್ರೇರಕರಾದ ಶ್ರೀಯುತರು ಅನೇಕ ಕ್ರಮದಲ್ಲಿ ಮಹಾಭಾರತದ ಸತ್ಕರ್ಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಲ್ಲದೇ ಅನುವಾದದ ಸೇವೆಯಲ್ಲಿಯೂ ಭಾಗ-ವಹಿಸಿದ್ದು ನಮಗೆ ಪರಮಸಂತೋಷವಾಗಿದೆ. ಉತ್ತಮವಿದ್ವಾಂಸರೂ, ಲೇಖಕರೂ, ಸಂಪಾದಕರೂ ಆದ ಬೆಮ್ಮತ್ತಿವೇಂಕಟೇಶಾಚಾರ್ಯರಿಗೆ ಭಗವಂತನು ವಿಶೇಷವಾಗಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಇದರಂತೆ ಇವರ ಸಹೋದರರಾದ ವಿದ್ವಾನ್ ಸೀತಾರಾಮಾಚಾರ್ಯರು ವಿದ್ವಾನ್ ವಿಜಯೀಂದ್ರಾಚಾರ್ಯರು ಇವರ ಪರಿಶ್ರಮವು ಈ ಸಂಶೋಧನೆಯ ಕೆಲಸದಲ್ಲಿ ಬಹಳವಾಗಿದೆ. ಅವರನ್ನು ಭಗವಂತನು ವಿಶೇಷವಾಗಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಇತ್ಯನೇಕ ನಾರಾಯಣಸ್ಮರಣೆಗಳು

ಶ್ರೀಶ್ರೀವಿದ್ಯಾಧೀಶತೀರ್ಥಶ್ರೀಪಾದಂಗಳವರು,

ಪರ್ಯಾಯ ಪಲಿಮಾರುಮಠ.

ಉಡುಪಿ.

ಮುನ್ನುಡಿ

ಇದೀಗ ಶಾಂತಿಪರ್ವದತ್ತ ಪಯಣ. ಸಂಸಾರದ ಮಂದಿ ಮುಪ್ಪಿನೆಡೆ ಎಳೆದು ಶಾಂತಿಮಾಡಿ ಸುಖಿಸುವರು. ಆದರೆ ಯಾವ ಮಹಾಭಾರತವು ನಮ್ಮನ್ನು ಮುಪ್ಪಿನಿಂದ ಯೌವನದೆಡೆ ಸೆಳೆದು ಹೃದಯದಲ್ಲಿ ಶಾಂತಿಯ ಪ್ರತಿಷ್ಠೆ ಮಾಡುವುದೋ ಅದುವೇ ಶಾಂತಿಪರ್ವ.

ಜೀವನದ ಉದ್ದಗಲ ಅಶಾಂತಿಯಿಂದ ಚಡಪಡಿಸಿದವಗೆ ಅರವತ್ತು, ಎಂಭತ್ತು, ತೊಂಭತ್ತುಗಳು ಕೇವಲ ಮರಣದ ಮೂರು ಬಾಗಿಲುಗಳು. ಇವುಗಳೇ ಶಾಂತಿಯಾದಲ್ಲಿ ಐವತ್ತೊಂಭತ್ತು, ಎಪ್ಪತ್ತೊಂಭತ್ತು, ಎಂಭತ್ತೊಂಭತ್ತುಗಳೇಕೆ ಶಾಂತಿಯಾಗದೇ ಕುಳಿತವು!!

ಈ ಜಗದಲ್ಲಿ ಶಾಂತಿಗಾಗಿ ಏನೆಲ್ಲಾ ಬವಣೆ ಪಡುತ್ತಾರೆ!! ಶಾಂತಿನಿಲಯ ಹೊಕ್ಕುತ್ತಾರೆ!! ಗಂಟೆಗಟ್ಟಳೆ ತುಳಸೀಸರ ತಿರುಗಿಸುತ್ತಾರೆ!! ತಾವೂ ತಿರುಗುತ್ತಾರೆ!! ಶಾಂತಿಪರ್ವದ ಪುಸ್ತಕಗಳನ್ನು ಷೋಕೇಸ್‌ನಲ್ಲಿ ಜೋಡಿಸಿಡುತ್ತಾರೆ!! ಶಾಂತಿಪರ್ವದ ಶ್ಲೋಕಗಳನ್ನು ತಿರುವುತ್ತಾರೆ!! ''ಭದ್ರಂ ಕರ್ಣೇಭಿಃ'' ಇತ್ಯಾದಿ ಶಾಂತಿಮಂತ್ರಗಳನ್ನು ಘೋಷಿಸುತ್ತಾರೆ!! ಆದರೆ ಇವರೆಲ್ಲರೂ ಹಿಮಾಲಯಕ್ಕೆ ಹೋಗಬೇಕೆಂಬ ಆಸೆಯಿಂದ ರಾಮೇಶ್ವರದೆಡೆ ಧಾವಿಸುವವರೇ ಆಗಿದ್ದಾರೆ!!

ಹಾಗಾದರೆ ಶಾಂತಿಯ ದಾರಿ ಗೋಜಲಾಯಿತು. ಯಾರ ಬಳಿ ಕೇಳೋಣ! ಕಂಡವರೆಲ್ಲರೂ ಅಶಾಂತಿಯ ಖಜಾನೆಗೆ ಶಾಂತಿಯ ಬೀಗ ಜಡಿದವರು. ಶಾಂತರು ಅಶಾಂತರಿಗೆ ಹೆದರಿ ಕಣ್ಮರೆಯಾಗಿರುವರು.

ಹಾಗಿದ್ದರೆ ಯಾವುದು ಶಾಂತಿ? ಯಾವಾಗ ಶಾಂತಿ?

ಹೃದಯದ ಗರ್ಭಗುಡಿಯಲ್ಲಿ ಪ್ರತಿಷ್ಠಿತವಾದ ಅಹಂಕಾರ ಮತ್ತು ದುರಾಸೆಗಳೆಂಬ ಪ್ರತೀಕಗಳನ್ನು ಕಿತ್ತೊಗೆದು ಲಕ್ಷ್ಮೀ ಹಾಗೂ ನಾರಾಯಣರ ಪ್ರತೀಕದ

ಪ್ರತಿಷ್ಠೆಯು ಯಾವಾಗ ಆಗುತ್ತದೋ ಆಗಲಷ್ಟೇ ಶಾಂತಿಯ ಅನುಭಾವ. ಅದುವೇ ನಿಜವಾದ ಶಾಂತಿಪರ್ವ.

ಅಶಾಂತನ ಉದ್ವಿಗ್ನತೆ ಕಂಡೇ ಶಾಂತಿಕಂಡು ಶಾಂತನಾದ ಶಾಂತನವ ಆಗಮಿಸಿದ. ಅಶಾಂತಿಯ ಸಂಸಾರಸಮುದ್ರದಿಂದ ಶಾಂತಿಸಾಗರಕ್ಕೆ ಸೇತುವೆ ನಿರ್ಮಿಸಿದ. ಶ್ರೀರಾಮ ಹನುಮನ ಮೂಲಕ ಉಪ್ಪಿನ ಸಮುದ್ರಕ್ಕೆ ಸೇತುವೆ ಕಟ್ಟಿಸಿದ್ದು ಎಲ್ಲರಿಗೂ ಗೊತ್ತು. ಶ್ರೀಕೃಷ್ಣ ಭೀಷ್ಮನ ಮೂಲಕ ಸಂಸಾರಸಮುದ್ರಕ್ಕೆ ಸೇತುವೆ ಕಟ್ಟಿಸಿದ್ದು ಶಾಂತಿಸಾಗರಕ್ಕೆ ಧಾವಿಸಲು ಬಯಸಿದ ಅನುಭಾವಿಗಷ್ಟೆ ಗೊತ್ತು.

ಮನೆಯ ಬಾಗಿಲು ಕಿಟಕಿಗಳನ್ನು ಜಡಿದು ಕೋಣೆಯನ್ನು ಕತ್ತಲು ಮಾಡಿ, ಅಂಧಕಾರದಲ್ಲಿ ಬಿದ್ದುಕೊಳ್ಳುವವನಿಗೆ ಯಾವ ಸೇತುವೆ ಕಟ್ಟಿಕೊಂಡೇನು! ಅವನಿಗೆ ಮಲಗುಮನೆಯ ಹೊಸ್ತಿಲು ದಾಟಿದರೆ ಸಾಕು!

ಅದೊಂದು ದಿನ ಎಲ್ಲ ಪಾಂಡವರು ಸಂತಸದ ಕ್ಷಣಗಳಲ್ಲಿದ್ದಾರೆ. ಜಗದೊಡೆಯ ಶ್ರೀಕೃಷ್ಣನೂ ಕುಳಿತಿದ್ದಾನೆ. ಪಾಂಡವರ ಸಂತಸವನ್ನು ಕಂಡು ಎಂದೂ ಹಿರಿಹಿಗ್ಗುವ ಶ್ರೀಕೃಷ್ಣ ಇಂದು ಮಾತ್ರ ಮುಖ ಸಪ್ಪೆ ಮಾಡಿದ್ದಾನೆ. ಬೇಸರದಿಂದ ಕೈ ಹಿಸುಕುತ್ತಿದ್ದಾನೆ. ಕೃಷ್ಣನ ಬಾಡಿದ ಮುಖ ಕಂಡ ಯುಧಿಷ್ಠಿರ ಪ್ರಶ್ನಿಸುತ್ತಾನೆ.

''ಎಂದೂ ಇಲ್ಲದ ಬೇಸರ ಇಂದೇಕೆ ಕೃಷ್ಣ?''

ಕೃಷ್ಣ ಉತ್ತರಿಸಿದ – ''ಅಲ್ಲಿ ಭೀಷ್ಮನೆಂಬ ಜ್ಞಾನಸೂರ್ಯ ಮುಳುಗುತ್ತಿದ್ದಾನೆ. ನಿಮಗೆ ಅದರ ಬಗ್ಗೆ ಎಚ್ಚರವೇ ಇಲ್ಲ. ಇಂಥಲ್ಲಿ ಸಡಗರ ನೋಡಿ ನನಗೆ ಅಚ್ಚರಿಯಾಗಿದೆ!''

ಆಗ ಯುಧಿಷ್ಠಿರ ಎಚ್ಚೆತ್ತುಗೊಂಡ. ಶ್ರೀಕೃಷ್ಣನೇ ಯುಧಿಷ್ಠಿರಾದಿಗಳನ್ನು ಕರೆದುಕೊಂಡು ಹೋದ. ಭೀಷ್ಮಾಚಾರ್ಯರ ಎದುರು ಕುಳ್ಳಿರಿಸಿದ. ಭೀಷ್ಮನಲ್ಲಿ ನಿಂತು ಉಪದೇಶ ಮಾಡಿಸಿದ. ಅದುವೇ ಶಾಂತಿಪರ್ವ ಹಾಗೂ ಅನುಶಾಸನಪರ್ವ. ಇವುಗಳೇ ಮಹಾಭಾರತದ ಹೃದಯಗಳು.

ಶಾಂತಿಪರ್ವದ ಮೂರು ಮಜಲುಗಳಲ್ಲಿ ರಾಜಧರ್ಮಪರ್ವವೇ ಮೊದ-

ಲನೆಯದ್ದು. ಆಪದ್ಧರ್ಮಪರ್ವ, ಮೋಕ್ಷಧರ್ಮಪರ್ವಗಳು ಅನಂತರದವು. ಧರ್ಮ, ಅರ್ಥ, ಕಾಮಗಳ ಬಗ್ಗೆ ಇದಮಿತ್ಥಂ ಎಂಬ ನಿರ್ಣಯ ದೊರೆಯುವುದು ಇದೇ ರಾಜಧರ್ಮಪರ್ವದಲ್ಲಿ.

ರಾಜಾನಂ ಪ್ರಥಮಂ ವಿಂದೇತ್
ತತೋ ಭಾರ್ಯಾಂ ತತೋ ಧನಮ್ ।
ರಾಜನ್ಯಸತಿ ಲೋಕಸ್ಯ
ಕುತೋ ಭಾರ್ಯಾ ಕುತೋ ಧನಮ್ ॥

ಹಣದಿಂದ ನೆಮ್ಮದಿ ಇದೆ. ಇದನ್ನು ಅನುಭವಿಸುವ ಮೊದಲು ಮನೆಯಲ್ಲಿ ಹೆಂಡತಿಯಿಂದ ನೆಮ್ಮದಿ ಇರಬೇಕು. ಆದರೆ ಇದಕ್ಕೂ ಮೊದಲು ರಾಜನ ಆಡಳಿತದಿಂದ ನೆಮ್ಮದಿ ಇರಬೇಕು. ಆದ್ದರಿಂದ ಎಲ್ಲಕ್ಕೂ ಮೂಲ ರಾಜಧರ್ಮ-ಪರ್ವ.

ಯಥಾ ಹಿ ರಶ್ಮಯೋ ಅಶ್ವಸ್ಯ ದ್ವಿರದಸ್ಯಾಂಕುಶೋ ಯಥಾ ।
ನರೇಂದ್ರಧರ್ಮೋ ಲೋಕಸ್ಯ ತಥಾ ಪ್ರಗ್ರಹಣಂ ಸ್ಮೃತಮ್ ॥

ಕುದುರೆಗೆ ಲಗಾಮಿನಂತೆ ಆನೆಗೆ ಅಂಕುಶದಂತೆ ಪ್ರತಿಯೊಬ್ಬ ಪ್ರಜೆಯನ್ನು ಋಜುಪಥದಲ್ಲಿ ಸಾಗಿಸುವುದು ಬೇರೆ ಯಾವುದೂ ಅಲ್ಲ. ಅದುವೇ ರಾಜನ ಧರ್ಮನೀತಿ ಎನ್ನುತ್ತದೆ ಇದೇ ರಾಜಧರ್ಮಪರ್ವ.

ಇಲ್ಲಿರುವ ಒಂದೊಂದು ಶ್ಲೋಕಗಳೂ ಶಾಂತಿಯ ಸುಂದರ ದಿವ್ಯ ಅರಮನೆ-ಗಳು. ಇದರ ಒಳಹೊಕ್ಕಲು ದೇಹ, ಮನ, ಆತ್ಮಗಳು ಪರಿಶುದ್ಧವಾಗಿರಬೇಕು. ಅಂತಹ ಯೋಗ್ಯತೆ ಎನ್ನಲ್ಲಿ ಇಲ್ಲವಾದ್ದರಿಂದಲೇ ಅರಮನೆಯ ಹೊಸ್ತಿಲಲ್ಲಿ ನಿಂತು ಒಳಗೆ ಇಣುಕಿ, ಕೈಮುಗಿದು ಚಕಿತನಾಗಿರುವೆ.

''ಈ ನನ್ನ ಪುಟ್ಟ ಅನುವಾದಕಾರ್ಯವು ಪರ್ಯಾಯಪೀಠದಲ್ಲಿ ವಿರಾಜ-ಮಾನರಾದ ನನ್ನ ನೆಚ್ಚಿನ ಗುರುಗಳಾದ ಶ್ರೀವಿದ್ಯಾಧೀಶತೀರ್ಥಶ್ರೀಪಾದಂಗಳವರ ಸೇವಾರೂಪವಾಗಲಿ'' ಎಂದಷ್ಟೇ ಶ್ರೀಕೃಷ್ಣನಲ್ಲಿ ಭಕ್ತಿಯಿಂದ ಪ್ರಾರ್ಥಿಸುವೆ.

ಅಧ್ಯಾತ್ಮಪಥದಲ್ಲಿ ಕೈಹಿಡಿದು ಉತ್ಸಾಹತುಂಬಿ ಇಂಥ ಅನೇಕಸತ್ಕಾರ್ಯ ಮಾಡಿಸಿ ಮಹಾಭಾರತದ ಮಹೋನ್ನತಯೋಜನೆಯ ಗೊಂಡಾರಣ್ಯದಲ್ಲಿ ದಿಕ್ಕು-ತಪ್ಪಿ ಕುಳಿತಾಗ ಗುರುರಕ್ಷಣೆ ತಪ್ಪದಂತೆ ಲೋಕ ಬಯ್ಯದಂತೆ ಸ್ವತಃ ನಿಂತು ನಿಷ್ಕಾಮಿ-ಯಾಗಿ ಯೋಜನೆ ಮುಗಿಸಿದ ಅಣ್ಣ ಬೆ.ನಾ. ವಿಜಯೀಂದ್ರಾಚಾರ್ಯರ ಉಪ-ಕಾರವನ್ನೊಮ್ಮೆ ಕಣ್ಮುಚ್ಚಿ ನೆನೆದು ಆನಂದಬಾಷ್ಪದ ಧನ್ಯವಾದ ಸಲ್ಲಿಸುವೆ.

ಶ್ರೀಕೃಷ್ಣಾರ್ಪಣಮಸ್ತು

ವಿದ್ವಾನ್ ಬೆಮ್ಮತ್ತಿ ವೇಂಕಟೇಶಾಚಾರ್ಯ

ಬೆಂಗಳೂರು

ಪ್ರಕಾಶಕರ ನುಡಿ

ಶಾಂತಿಪರ್ವ ಮತ್ತು ಅನುಶಾಸನಪರ್ವಗಳು ಭೀಷ್ಮರ ವಿಸ್ತಾರವಾದ ಉಪದೇಶವೆನಿಸಿವೆ. ಭೀಷ್ಮರಲ್ಲಿ ನಿಂತು ಕೃಷ್ಣನೇ ನುಡಿದ ಉಪದೇಶಗಳಿವು. ಆದ್ದರಿಂದ ಜಗತ್ತಿನ ಎಲ್ಲ ವಿಧವಾದ ವಿಚಾರಗಳು ಈ ಶಾಂತಿಪರ್ವದಲ್ಲಿ ಅಡಕವಾಗಿವೆ.

ಧರ್ಮರಾಜನು ಯುದ್ಧವನ್ನು ಪೂರೈಸಿದರೂ ರಾಜ್ಯವನ್ನಾಳಲು ಹಿಂದೆ ಸರಿದಾಗ ಭೀಮಾರ್ಜುನನಕುಲ ಸಹದೇವರು ಅರ್ಥವತ್ತಾಗಿ ಬೋಧಿಸುವ ಪ್ರಸಂಗವು ವನಪರ್ವದಂತೆ ಇಲ್ಲಿಯೂ ವಿಭಿನ್ನಶೈಲಿಯಲ್ಲಿ ಮೂಡಿಬಂದಿದೆ.

ಧರ್ಮರಾಜನಿಗೆ ಭೀಮಸೇನನು ಕ್ಷಾತ್ರಧರ್ಮದ ಮಹತ್ತ್ವವನ್ನು ಹೇಳುತ್ತಾ– ''ಅಯೋಗ್ಯರಲ್ಲಿ ಕ್ಷಮಾ, ದಯೆ, ಅನುಕಂಪ, ಕಾರುಣ್ಯಗಳನ್ನು ತೋರಿಸಬಾರದು. ಕ್ಷತ್ರಿಯನಾದವನು ಅಯೋಗ್ಯರವಿಷಯದಲ್ಲಿಯೂ ಈ ಗುಣಗಳನ್ನು ಅಳವಡಿಸಿಕೊಂಡಲ್ಲಿ ಸಾಯುವ ತನಕ ಭಿಕ್ಷಾಟನೆಯನ್ನೇ ಮಾಡಿ ಬದುಕಬೇಕಾಗುತ್ತದೆ. ಶತ್ರುವಧೆಯಿಲ್ಲದೇ ರಾಜ್ಯಲಾಭವಾಗುವುದಿಲ್ಲ. ದುಷ್ಟರಾದ ದುರ್ಯೋಧನಾದಿಗಳ ಹನನವು ಪಾಪಕಾರಣವಾಗುವುದಿಲ್ಲ. ಧರ್ಮದಿಂದ ರಾಜ್ಯ ಹೊಂದಿದ್ದೇವೆ. ಸ್ನಾನ ಮಾಡಿದವರು ಮತ್ತೆ ಕೆಸರಲ್ಲಿ ಮುಳುಗಬಾರದು. ಜೇನುಗೂಡನ್ನು ಕಷ್ಟದಿಂದ ತೆಗೆದು ಮಧುವನ್ನು ಸ್ವೀಕರಿಸದೇ ಮಣ್ಣಿನಲ್ಲಿ ಚೆಲ್ಲಬಾರದು. ರಾಜ್ಯಲಕ್ಷ್ಮಿಯು ಒದಗಿ ಬಂದಾಗ ದೈವಾನುಗ್ರಹವೆಂದು ಭಾವಿಸಿ ಅನುಭವಿಸುವುದು ಯೋಗ್ಯವಾಗಿದೆ. ಮಕ್ಕಳು ಮೊಮ್ಮಕ್ಕಳನ್ನು ತ್ಯಜಿಸಿ ಸನ್ಯಾಸಿಯಂತೆ ಬದುಕುವುದು ರಾಜನಿಗೆ ಮೋಕ್ಷಸಾಧನವಾಗುವುದಾದರೆ ವರಾಹ, ಶೃಗಾಲಾದಿಗಳಿಗೆ ಮೊದಲೇ ಮೋಕ್ಷವಾಗಬೇಕಾದೀತು. ಮನೆಯಿಲ್ಲದ ಕಪೆಹಾವುಗಳಿಗೂ ಮೋಕ್ಷವಾಗಬೇಕಾದೀತು. ಮನಃಶುದ್ಧಿ ಶ್ರವಣ ಮನನ ಧ್ಯಾನಗಳು ಭಕ್ತಿ ತಾರತಮ್ಯಜ್ಞಾನ ಇವು ಮೋಕ್ಷಕ್ಕೆ ಕಾರಣಗಳು. ಕೇವಲ ಸನ್ಯಾಸವಲ್ಲ. ಗೃಹಸ್ಥನಾಗಿ ಸಾಧನೆ ಮಾಡಲಾಗುವುದಿಲ್ಲ ಎಂದು ಯಾವ ಶಾಸ್ತ್ರವೂ ಹೇಳುತ್ತಿಲ್ಲ. ರಾಜನು ಮಾಡಬೇಕಾದ ಕರ್ತವ್ಯ

ಸ್ವಧರ್ಮಪಾಲನೆ. ಇದರಿಂದಲೇ ಈಶಾನುಗ್ರಹವನ್ನು ಹೊಂದಬಹುದು. ಭಗವತ್ಪ್ರೀತಿಗಾಗಿ ಮಾಡುವ ಇತರ ಕಾಮ್ಯಗಳು. ಅವನು ನೀಡಿದ ಅನಿಷಿದ್ಧಕಾಮವನ್ನು ಹೊಂದುವುದೇ ಪುರುಷಾರ್ಥವೆನಿಸಿದೆ'' ಎಂದು ಭೀಮಸೇನನು ಹೇಳಿದಾಗ,

ಇವನ ಮಾತನ್ನು ಅಂಗೀಕರಿಸಿ – ''ಧರ್ಮರಾಜನೇ! ಈ ಶರೀರವೇ ಅರ್ಥಸಾಧನವಾಗಿದೆ. ಮೋಕ್ಷವೇ ಕಾಮ ಎನಿಸಿದೆ. ಧರ್ಮವೇ ಅರ್ಥವೆನಿಸಿದೆ. ಇದನ್ನು ತಿಳಿದು ನಿಷಿದ್ಧವಾದದ್ದನ್ನು ತೊರೆದು ವಿಹಿತವಾದುದ್ದರಲ್ಲಿ ಜೀವಿಸುವುದೇ ಧರ್ಮವಾಗಿದೆ. ಕರ್ಮಜ್ಞಾನಗಳಿಗೆ ಪರಸ್ಪರವಿರೋಧ ಬರದಂತೆ ವರ್ತಿಸುವ ಗೃಹಸ್ಥನು ಶ್ರೀಹರಿಪ್ರೀತಿಗೆ ಪಾತ್ರನಾಗುತ್ತಾನೆ. ಗೃಹಸ್ಥನಿಂದ ಇತರಾಶ್ರಮಿಗಳು ಜೀವಿಸಿ ಯೋಗ್ಯ ಸತ್ಕರ್ಮಾನುಷ್ಠಾನವನ್ನು ನಡೆಸುವಂತಾಗಬೇಕು. ಕುಟುಂಬವನ್ನು ಹರಿಕೊಟ್ಟ ಪರಿವಾರವೆಂದು ಬಗೆದು ಅವರನ್ನು ಪೋಷಿಸುತ್ತಾ, ಅತಿಥಿಗಳನ್ನು ಸೇವಿಸುತ್ತಾ, ದೇವಪಿತೃಋಷಿಪೂಜೆಯನ್ನು ಮಾಡಿ ಮಿಕ್ಕದ್ದನ್ನು ಭುಂಜಿಸುವವನು ವಿಘಸಾಶನಿ ಎನಿಸುತ್ತಾನೆ. ಮನುಷ್ಯರಿಂದ ಸಂಪಾದಿಸಿದ ಅರ್ಥವು ವಿದ್ಯೆಗೆ ಕಾರಣವಾಗುತ್ತದೆ. ಹಿರಣ್ಯ ಅರ್ಥಗಳಿಂದ ಸಂತುಷ್ಟರಾದ ಗುರುಗಳು ಮೋಕ್ಷಕ್ಕೆ ಕಾರಣವಾದ ಜ್ಞಾನವನ್ನು ಕೊಟ್ಟು ಹರಿ ಒಲುಮೆಗೆ ಪಾತ್ರರನ್ನಾಗಿ ಮಾಡುತ್ತಾರೆ. ಅರ್ಥವು ಗುರುಗಳ ಸಂತೋಷವನ್ನು ಪುಣ್ಯವನ್ನು ಹುಟ್ಟಿಸುತ್ತದೆ. ಆದ್ದರಿಂದ ಮೋಕ್ಷವು ಉತ್ತಮಪುರುಷಾರ್ಥವೆನಿಸಿದೆ. ಅದು ಧರ್ಮದಿಂದ ಸಾಧ್ಯವು. ಧರ್ಮವು ಅರ್ಥಸಾಧ್ಯವಾಗಿದೆ. ಇದನ್ನು ಅರ್ಥೈಸಿಕೊಂಡು ರಾಜ್ಯಾದಿ ಸಂಪತ್ತನ್ನು ಶ್ರೀಹರಿಯು ಕೊಟ್ಟಿದ್ದಾನೆಂದು ಅನುಭವಿಸು'' ಎಂದು ಅರ್ಜುನನು ಹೇಳಲು,

ಇದರಿಂದ ಪ್ರೇರಿತನಾದ ನಕುಲನು ಧರ್ಮವೇ ಶ್ರೇಷ್ಠವೆಂದು ಪ್ರತಿಪಾದಿಸುತ್ತಾನೆ. ''ಸ್ವರ್ಗ ಮುಕ್ತಿಗಳಿಗೆಲ್ಲ ಯಜ್ಞಾದಿ ಧರ್ಮಾಚರಣೆಯೇ ಕಾರಣವಾಗಿದೆ. ಧರ್ಮಾಚರಣೆಯು ಧನದಿಂದ ಸಾಧ್ಯವಾಗಿದೆ. ಧರ್ಮದಿಂದ ಒದಗಿಬಂದ ಧನಕನಕಾದಿಗಳಿಂದ ಯಜ್ಞದಾನಾದಿಗಳನ್ನು ಆಚರಿಸಿ ಕೃತಕೃತ್ಯನಾಗು'' ಎಂದು ನಕುಲನು ನುಡಿಯಲು,

ಸಹದೇವನು ಹೇಳುತ್ತಾನೆ – ಅಣ್ಣನೇ ಮಮ ಎನ್ನುವುದೇ ಮೃತ್ಯುವೆನಿಸಿದೆ, ನ

ಮಮ ಎಂಬುದೇ ಅಮೃತವೆನಿಸಿದೆ. ಅವೆರಡೂ ಮನಸ್ಸಿನ ವ್ಯಾಪಾರಗಳು. ಮಮತೆಯನ್ನು ತ್ಯಜಿಸಿ, ಕ್ರೋಧಗಳನ್ನು ಬಿಟ್ಟು, ಅಮೃತತ್ವವನ್ನು ಹೊಂದಬೇಕು. ಮಮಕಾರ ಇಲ್ಲದೇ ರಾಜ್ಯವನ್ನು ರಕ್ಷಿಸು. ನಿನ್ನ ಜೀವನವನ್ನು ವ್ಯರ್ಥಗೊಳಿಸಿಕೊಳ್ಳಬೇಡ. ನೀನೇ ನಮಗೆ ತಂದೆ, ತಾಯಿ, ಗುರುವೂ ಆಗಿರುವಿ''. ಹೀಗೆ ಧರ್ಮರಾಜನ ಬಳಿ ನಾಲ್ವರೂ ಯುಕ್ತಿಬದ್ಧವಾಗಿ ರಾಜ್ಯಪರಿಪಾಲನೆಗೆ ಪ್ರಾರ್ಥಿಸುವ ಪ್ರಸಂಗಗಳು ರಾಜಧರ್ಮದ ಪ್ರಾರಂಭದಲ್ಲಿ ನೋಡಬಹುದಾಗಿದೆ. ಇದಕ್ಕೆ ಪೂರಕ-ವಾಗಿ ಅನೇಕ ಉಪಾಖ್ಯಾನಗಳನ್ನು ಭೀಷ್ಮರು ಉಪದೇಶಿಸಿದ್ದಾರೆ.

ಹೀಗೆ ಮಹಾಭಾರತದ ಅದ್ಭುತರಸ ಭಾಗವಾದ ಶಾಂತಿಪರ್ವದ ಉಪಪರ್ವ-ವಾದ ರಾಜಧರ್ಮಪರ್ವದಲ್ಲಿ ನಮ್ಮ ದೈನಂದಿನ ಜೀವನಕ್ಕೆ ಅಗತ್ಯವಾದ ಅನೇಕ ವಿಚಾರಗಳನ್ನು ಕುರುಕುಲಪಿತಾಮಹರಾದ ಭೀಷ್ಮರು ಉಪದೇಶಿಸಿದ್ದಾರೆ. ಇದನ್ನು ಚೆನ್ನಾಗಿ ಅರ್ಥೈಸಿಕೊಂಡರೆ ನಮಗೆ ಧರ್ಮದ ಬಗ್ಗೆ ಅರಿವು ಮೂಡಲು ಸಾಧ್ಯ. ಇದಕ್ಕಾಗಿ ನಮ್ಮ ಸಂಸ್ಥೆಯ ಅಧ್ಯಕ್ಷರಾದ, ಪ್ರಕೃತ ಶ್ರೀಕೃಷ್ಣಪೂಜಾಪರ್ಯಾಯ-ಪೀಠಾರೂಢರಾದ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು ಮಹತ್ತಾದ ಮಹಾಭಾರತ ಶುದ್ಧಪಾಠದ ಯೋಜನೆಯನ್ನು ಕೈಗೆತ್ತಿಕೊಂಡಿದ್ದಾರೆ. ಎಲ್ಲಾರೀತಿಯಲ್ಲಿ ತಮ್ಮ ಅನುಗ್ರಹದೃಷ್ಟಿಯನ್ನು ನಮ್ಮ ಮೇಲೆ ಬೀರುತ್ತಿರುವ ಶ್ರೀಪಾದರಿಗೆ ಅನಂತಾನಂತನಮನಗಳನ್ನು ಸಲ್ಲಿಸುತ್ತೇನೆ.

ಇಂತಹ ಅರ್ಥಪೂರ್ಣವಾದ ರಾಜಧರ್ಮಪರ್ವದ ಪ್ರಥಮ ೩೬ ಅಧ್ಯಾಯ-ಗಳನ್ನು ಅನೇಕವಿವರಣೆಗಳ ಜೊತೆಗೆ ಅನುವಾದಿಸಿಕೊಟ್ಟ ಬೆಮ್ಮತ್ತಿ ವೇಂಕಟೇಶಾಚಾರ್ಯರನ್ನು ತತ್ವಸಂಶೋಧನಸಂಸತ್ತಿನ ವತಿಯಿಂದ ಅಭಿನಂದಿಸುತ್ತೇವೆ.

ಹಾಗೆಯೇ ಇನ್ನುಳಿದ ಸಂಪೂರ್ಣ ರಾಜಧರ್ಮಪರ್ವವನ್ನು ಸುಂದರವಾಗಿ ಅನುವಾದಿಸಿಕೊಟ್ಟಿರುವ ನಾಡಿನ ಶ್ರೇಷ್ಠಸಂಶೋಧಕರು, ವಿದ್ವನ್ಮಣಿಗಳಾದ ಶ್ರೀ ಶೇಷಗಿರಿ ಆಚಾರ್ಯರನ್ನು ನಮಗಳ ಪೂರ್ವಕ ಅಭಿವಂದಿಸುತ್ತೇನೆ.

ಇಂತಹ ಐತಿಹಾಸಿಕ ಕಾರ್ಯ ಸಂಪೂರ್ಣಗೊಳ್ಳಲು ಆರ್ಥಿಕವಾಗಿ ನೆರವನ್ನು ನೀಡಿರುವ ಘನತೆವೆತ್ತ ಕರ್ನಾಟಕಸರ್ಕಾರಕ್ಕೆ, ಇದಕ್ಕಾಗಿ ಸಹಕರಿಸಿದ ಎಲ್ಲ ಪದಾ-

ಧಿಕಾರಿಗಳಿಗೆ ಸಂಸ್ಥೆಯ ವತಿಯಿಂದ ಹೃತ್ಪೂರ್ವಕ ಧನ್ಯವಾದಗಳನ್ನು ಸಮರ್ಪಿಸುತ್ತೇನೆ. ಇಂತಹ ಸಹಕಾರ ಸದಾ ನಮ್ಮ ಸಂಸ್ಥೆಗೆ ಇರಲೆಂದು ಆಶಿಸುತ್ತೇನೆ.

ಬೃಹತ್ತಾದ ಮಹಾಭಾರತಪ್ರಕಟಣೆಯ ಜವಾಬ್ದಾರಿಯನ್ನು ತಮ್ಮ ಹೆಗಲಮೇಲೆ ಹೊತ್ತು ಸಮರ್ಥವಾಗಿ ಮುನ್ನಡೆಸುತ್ತಿರುವ, ಅದಕ್ಕಾಗಿ ಹಗಲಿರುಳು ಶ್ರಮಿಸುತ್ತಿರುವ ಡಾ॥ ಬೆಮ್ಮತ್ತಿ ವಿಜಯೀಂದ್ರಾಚಾರ್ಯರಿಗೆ ಹಾಗೂ ಶ್ರಮಿಸಿದ ಎಲ್ಲ ವಿದ್ವನ್ಮಣಿಗಳಿಗೆ ಸಂಸ್ಥೆಯಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಅದೇ ರೀತಿಯಲ್ಲಿ ಇದರ ಕರಡುಪ್ರತಿಯನ್ನು ತಿದ್ದುವ ಕೆಲಸದಲ್ಲಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡ ಶ್ರೀಯುತ ಶ್ರೀವತ್ಸಆಚಾರ್ಯ(ಸಿದ್ಧಾಂತಿ)ರಿಗೆ , ರಾಜಧರ್ಮಪರ್ವದ ಅಕ್ಷರಜೋಡಣೆ-ಪುಟಸಂಯೋಜನೆಯನ್ನು ನಡೆಸಿದ ಶ್ರೀ-ಸುಬ್ಬಣ್ಣ ಅವರಿಗೆ, ಅಚ್ಚುಕಟ್ಟಾಗಿ, ಕ್ಲಪ್ತಕಾಲದಲ್ಲಿ ಮುದ್ರಿಸಿಕೊಟ್ಟ ಪವನ್ ಪ್ರಿಂಟರ್ಸ್‌ನ ಶ್ರೀಮಂಜುನಾಥ್ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಹಾಗೆಯೇ ನಮ್ಮ ಸಂಶೋಧನ ಸಂಸತ್ತಿನ ಎಲ್ಲ ಕಾರ್ಯಗಳಲ್ಲಿ ಸಂಪೂರ್ಣ ತಮ್ಮನ್ನು ತೊಡಗಿಸಿಕೊಂಡ ಸಂಸತ್ತಿನ ಕಾರ್ಯಕಾರಿವರ್ಗಕ್ಕೂ ಧನ್ಯವಾದಗಳನ್ನು ಅರ್ಪಿಸುತ್ತಾ, ರಾಜಧರ್ಮಪರ್ವದ ಈ ಸಂಚಿಕೆಗಳನ್ನು ಕೊಂಡು, ಅಧ್ಯಯನ ನಡೆಸಿ ಧಾರ್ಮಿಕರಾಗಲು ಹೊರಟಿರುವ ಎಲ್ಲ ಸಾಧಕವರ್ಗಕ್ಕೆ ಆಭಾರಿಯಾಗಿದ್ದೇನೆ. ಸಮಸ್ತ ಆಸ್ತಿಕ ಬಂಧುಗಳು ಇದನ್ನು ಸ್ವೀಕರಿಸಿ, ಧರ್ಮವನ್ನು ಜೀವನದಲ್ಲಿ ಅಳವಡಿಸಿಕೊಂಡು ಉದ್ಧೃತರಾಗಬೇಕೆಂದು ಆಶಿಸುತ್ತಾ.....

ಹರಿದಾಸರಸೇವಕ

ಡಾ॥ ವಂಶೀಕೃಷ್ಣಾಚಾರ್ಯ ಪುರೋಹಿತ್
ನಿರ್ದೇಶಕರು,
ತತ್ವಸಂಶೋಧನಸಂಸತ್

ವಿಷಯಾನುಕ್ರಮಣಿಕೆ

೧. ಒಂದನೆಯ ಅಧ್ಯಾಯ

ಯುಧಿಷ್ಠಿರನು ಯುದ್ಧದಲ್ಲಿ ಮೃತಪಟ್ಟ ಬಂಧುಗಳಿಗೆ ಧರ್ಮೋದಕವನ್ನು ನೀಡಲು ಗಂಗಾತೀರಕ್ಕೆ ತೆರಳಿದ್ದನು. ಅಲ್ಲಿಗೆ ವೇದವ್ಯಾಸರು ನಾರದರೇ ಮೊದಲಾದ ಮಹರ್ಷಿಗಳು ಆಗಮಿಸಿದರು. ನಾರದರ ಮೂಲಕ ಯುಧಿಷ್ಠಿರನು ಕರ್ಣನ ವೃತ್ತಾಂತವನ್ನು ತಿಳಿಯಲು ಪ್ರಾರ್ಥಿಸಿದನು 1

೨. ಎರಡನೆಯ ಅಧ್ಯಾಯ

ಬ್ರಹ್ಮಾಸ್ತ್ರವನ್ನು ಪಡೆಯಬೇಕೆಂಬ ಇಚ್ಛೆ ಕರ್ಣನಿಗೆ ಉಂಟಾಯಿತು. ದ್ರೋಣಾಚಾರ್ಯರ ಬಳಿ ತೆರಳಿದಾಗ ಅದು ದೊರಕಲಿಲ್ಲ ಎಂಬ ಉದ್ದೇಶದಿಂದ ಪರಶುರಾಮದೇವರ ಬಳಿ, ತಾನು ಬ್ರಾಹ್ಮಣನೆಂದು ಹೇಳಿಕೊಂಡನು. ಅದಕ್ಕಾಗಿ ಅವರ ಶಿಷ್ಯತ್ವವನ್ನು ವಹಿಸಿದನು. ಅಲ್ಲಿ ಪ್ರಮಾದದಿಂದ ಬ್ರಾಹ್ಮಣರ ಹಸುವಿನ ಕರುವನ್ನು ಕೊಂದುಬಿಟ್ಟನು. ಇದರಿಂದ ಕರ್ಣನಿಗೆ ಆ ಬ್ರಾಹ್ಮಣನ ಶಾಪವು ಉಂಟಾಯಿತು. 17

೩. ಮೂರನೆಯ ಅಧ್ಯಾಯ

ಒಮ್ಮೆ ಪರಶುರಾಮದೇವರು ಕರ್ಣನ ತೊಡೆಯ ಮೇಲೆ ತಲೆಯಿಟ್ಟು ಮಲಗಿದ್ದರು. ಆ ಸಂದರ್ಭದಲ್ಲಿ ಒಂದು ಕ್ರಿಮಿ ಕರ್ಣನ ತೊಡೆಯನ್ನು ಭೇದಿಸಿತು. ರಕ್ತವು ಧಾರಾಕಾರವಾಗಿ ಹರಿಯಿತು. ಇದರಿಂದ ಪರಶುರಾಮದೇವರಿಗೆ ಎಚ್ಚರವಾಯಿತು. ಕರ್ಣನಿಗೆ ಶಾಪ ನೀಡಿದರು. ಪರಶುರಾಮದೇವರ ಆಜ್ಞೆಯಿಂದ ಕರ್ಣನು ತನ್ನ ದೇಶಕ್ಕೆ ತೆರಳಿದನು 30

೪. ನಾಕನೆಯ ಅಧ್ಯಾಯ

ದುರ್ಯೋಧನನು ಸ್ವಯಂವರಮಂಟಪದಲ್ಲಿ ಕಳಿಂಗರಾಜನ ಕನ್ಯೆಯನ್ನು ಅಪಹರಿಸಿದನು. ಆಗ ಕರ್ಣನು ದುರ್ಯೋಧನನ ಪರವಾಗಿ ಬಂದ ಎಲ್ಲಾ ರಾಜರನ್ನು ಸೋಲಿಸಿದನು. 42

೫. ಐದನೆಯ ಅಧ್ಯಾಯ

ಕರ್ಣನ ಬಲ ಮತ್ತು ಪರಾಕ್ರಮಗಳ ವರ್ಣನೆ. 53

೬. ಆರನೆಯ ಅಧ್ಯಾಯ

ಕರ್ಣವಧೆಯಿಂದ ದುಃಖಿತನಾದ ಯುಧಿಷ್ಠಿರನಿಗೆ ಕುಂತಿಯಿಂದ ಸಮಾಧಾನ. ಸ್ತ್ರೀಯರಲ್ಲಿ ರಹಸ್ಯವು ನಿಲ್ಲಬಾರದೆಂದು ಯುಧಿಷ್ಠಿರನಿಂದ ಶಾಪಪ್ರದಾನ. 62

೭. ಏಳನೆಯ ಅಧ್ಯಾಯ

ಯುಧಿಷ್ಠಿರನು ಕರ್ಣನ ವಧೆಯಿಂದ ಅತ್ಯಂತ ಖಿನ್ನನಾದನು. ತನ್ನ ಆತಂಕವನ್ನು ಅರ್ಜುನನ ಜೊತೆ ಪ್ರಕಟಪಡಿಸಿದನು. ರಾಜ್ಯವನ್ನು ಪರಿತ್ಯಾಗ ಮಾಡಿ, ಕಾಡಿಗೆ ಹೋಗುತ್ತೇನೆಂದು ತಿಳಿಸಿದನು. 65

೮. ಎಂಟನೆಯ ಅಧ್ಯಾಯ

ಯುಧಿಷ್ಠಿರನ ಅಭಿಪ್ರಾಯವನ್ನು ಅರ್ಜುನನು ನಿರಾಕರಣೆ ಮಾಡಿದನು. ಸಂಪತ್ತನ್ನು ಗಳಿಸುವುದು ಕ್ಷತ್ರಿಯರ ಮುಖ್ಯಧರ್ಮವಾಗಿದೆ. ಗಳಿಸಿದ ಸಂಪತ್ತಿನಿಂದ ಯುಧಿಷ್ಠಿರನಿಗೆ ಯಜ್ಞ ಮಾಡುವಂತೆ ಅರ್ಜುನನು ಪ್ರೇರಿಸಿದುದು. 84

೯. ಒಂಬತ್ತನೆಯ ಅಧ್ಯಾಯ

ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ಸನ್ಯಾಸಧರ್ಮವನ್ನು ಪಾಲಿಸುತ್ತೇನೆಂದು ಯುಧಿಷ್ಠಿರನು ಅರ್ಜುನನಿಗೆ ಪ್ರತ್ಯುತ್ತರವನ್ನು ಹೇಳಿದುದು. 98

೧೦. ಹತ್ತನೆಯ ಅಧ್ಯಾಯ

ಯುಧಿಷ್ಠಿರನಿಗೆ ಭೀಮಸೇನದೇವರ ಸಲಹೆ. 109

೧೧. ಹನ್ನೊಂದನೆಯ ಅಧ್ಯಾಯ

ಪಕ್ಷಿರೂಪಿಯಾದ ಇಂದ್ರನಿಗೆ ಮತ್ತು ಪಕ್ಷಿರೂಪಿಯಾದ ಇಂದ್ರನಿಗೂ ಋಷಿಕುಮಾರರಿಗೂ ನಡೆದ ಸಂಭಾಷಣೆಯನ್ನು ಉದಾಹರಿಸಿ ಅರ್ಜುನನು ಯುಧಿಷ್ಠಿರನನ್ನು ಕುರಿತು ಗೃಹಸ್ಥ ಧರ್ಮವೇ ಶ್ರೇಷ್ಠವೆಂದು ನಿರೂಪಿಸಿದುದು. 117

೧೨. ಹನ್ನೆರಡನೆಯ ಅಧ್ಯಾಯ

ಯುಧಿಷ್ಠಿರನಿಗೆ ನಕುಲನು ಗೃಹಸ್ಥಧರ್ಮವನ್ನು ಪ್ರಶಂಸೆ ಮಾಡುತ್ತಾ, ಸಮಾಧಾನದ ಮಾತುಗಳನ್ನು ಹೇಳಿದುದು. 125

೧೩. ಹದಿಮೂರನೆಯ ಅಧ್ಯಾಯ

ಯುಧಿಷ್ಠಿರನನ್ನು ಕುರಿತು ಸಹದೇವನ ಮಾತು. 138

೧೪. ಹದಿನಾಕನೆಯ ಅಧ್ಯಾಯ

ದ್ರೌಪದೀದೇವಿಯು ಯುಧಿಷ್ಠಿರನನ್ನು ಕುರಿತು ರಾಜ್ಯಭಾರವನ್ನು ಮಾಡು ಎಂಬುದಾಗಿ ವಿವರವಾಗಿ ತಿಳಿಸುತ್ತಾಳೆ. ಕ್ಷತ್ರಿಯರು ಬ್ರಾಹ್ಮಣಧರ್ಮವನ್ನು ಆಶ್ರಯಿಸಬಾರದು. ಕ್ಷತ್ರಿಯರ ಧರ್ಮ ಹಾಗೂ ಬ್ರಾಹ್ಮಣ ಧರ್ಮದ ಬಗ್ಗೆ ವಿವೇಚನೆ. ದಂಡನೀತಿಯ ಅನುಸರಣೆಯಿಂದ

ಆಗುವ ಲಾಭಗಳು. ಅಳವಡಿಸಿಕೊಂಡ ಕ್ಷತ್ರಿಯನ ವೈಭವ. ಬ್ರಾಹ್ಮಣರೂ ಕೂಡ ಕೆಲವೊಮ್ಮೆ ಯುದ್ಧಮಾಡಬೇಕು ಎಂಬ ಬೋಧನೆ. ಅವೈಷ್ಣವನಿಗೆ ಮತ್ತು ಪಾತಕಿಗಳಿಗೆ ಕಟ್ಟೆಚ್ಚರ. ದುರ್ಯೋಧನಾದಿಗಳು ಮಹಾಪಾತಕಿಗಳು ಎಂಬುದರ ಬೋಧನೆ. ಯುಧಿಷ್ಠಿರನಿಗೆ ಕರ್ತವ್ಯತ್ವದ ಬೋಧನೆ. 142

ಹದಿನೈದನೆಯ ಅಧ್ಯಾಯ

ಅರ್ಜುನನು ಯುಧಿಷ್ಠಿರನಿಗೆ ದಂಡಪ್ರಯೋಗದ ಮಹತ್ವವನ್ನು ತಿಳಿಸುತ್ತಿದ್ದಾನೆ. ಲೋಕದಲ್ಲಿ ನಾಕುವರ್ಣದವರು, ನಾಕು ಆಶ್ರಮದವರು ತಮ್ಮತಮ್ಮ ಕರ್ತವ್ಯದಲ್ಲಿ ದಂಡನೀತಿಗೆ ಭಯಪಟ್ಟೇ ಅನುಷ್ಠಾನವನ್ನು ಮಾಡುತ್ತಿದ್ದಾರೆ. ಸಕಲ ಪ್ರಾಣಿಗಳೂ ಕೂಡ ದಂಡಪ್ರಯೋಗಕ್ಕೆ ಹೆದರುತ್ತವೆ. ದುಷ್ಟರಂ 187

೧೬. ಹದಿನಾರನೆಯ ಅಧ್ಯಾಯ

ದುರ್ಯೋಧನಾದಿಗಳಿಂದ ಹಿಂದೆ ಅನುಭವಿಸಿದ ದುಃಖಗಳನ್ನು ನೆನಪು ಮಾಡಿ ಮೋಹವನ್ನು ತ್ಯಾಗಮಾಡುವಂತೆ ರಾಜ್ಯಭಾರ ಕಾರ್ಯದಲ್ಲಿ ತೊಡಗುವಂತೆ ಭೀಮಸೇನದೇವರ ಸಲಹೆ. 213

೧೭. ಹದಿನೇಳನೆಯ ಅಧ್ಯಾಯ

ಭೀಮಸೇನದೇವರ ಮಾತುಗಳನ್ನು ಅಂಗೀಕರಿಸದೆ ಜ್ಞಾನಿಜನರ ಮಾರ್ಗವನ್ನು ಪ್ರಶಂಸೆ ಮಾಡಿದ ಯುಧಿಷ್ಠಿರ. 220

೧೮. ಹದಿನೆಂಟನೆಯ ಅಧ್ಯಾಯ

ಅರ್ಜುನನು ಅಣ್ಣನಾದ ಧರ್ಮರಾಜನಿಗೆ ಮಾಡಬೇಕಾದ ಕರ್ತವ್ಯವನ್ನು ಬೋಧಿಸುತ್ತಿದ್ದಾನೆ. ಅದಕ್ಕಾಗಿ ಜನಕರಾಜನಿಗೂ ಮತ್ತುಅವನ ಪತ್ನಿಗೂ ನಡೆದ ಸಂವಾದವನ್ನು ತಿಳಿಸಿ ಸನ್ನ್ಯಾಸವನ್ನು ತೆಗೆದುಕೊಳ್ಳುವಂತೆ ಯುಧಿಷ್ಠಿರನನ್ನು ತಡೆದನು. 227

೧೯. ಹತ್ತೊಂಬತ್ತನೆಯ ಅಧ್ಯಾಯ

ಅರ್ಜುನನ ಬಳಿ ಯುಧಿಷ್ಠಿರ ತನ್ನ ನಿಲುವನ್ನು ಸಮರ್ಥನೆ ಮಾಡಿಕೊಂಡನು. ಸನ್ನ್ಯಾಸವೇ ಉತ್ತಮ ಧರ್ಮವೆಂದು ಪ್ರತಿಪಾದನೆ ಮಾಡಿದನು. 244

೨೦. ಇಪ್ಪತ್ತನೆಯ ಅಧ್ಯಾಯ

ದೇವಸ್ಥಾನ ಎಂಬ ಋಷಿಗಳು ಯುಧಿಷ್ಠಿರನಿಗೆ ಯಜ್ಞಮಹತ್ವವನ್ನು ತಿಳಿಸಿ ಯಜ್ಞ ಮಾಡಲು ಉಪದೇಶಿಸಿದರು. 256

೨೧. ಇಪ್ಪತ್ತೊಂದನೆಯ ಅಧ್ಯಾಯ

ದೇವಸ್ಥಾನಮುನಿಗಳು ಯುಧಿಷ್ಠಿರನಿಗೆ ಸ್ವಧರ್ಮಾನುಷ್ಠಾನವೇ ಶ್ರೇಯಸ್ಕರವೆಂದು ಉಪದೇಶ ಮಾಡಿದರು. 263

೨೨. ಇಪ್ಪತ್ತೆರಡನೆಯ ಅಧ್ಯಾಯ

ಕ್ಷತ್ರಿಯಧರ್ಮವೇ ಶ್ರೇಷ್ಠ ಎಂಬುದಾಗಿ ಸಮರ್ಥನೆ ಮಾಡುವ ಮೂಲಕ ಪುನಃ ಯುಧಿಷ್ಠಿರನನ್ನು ಸಮಾಧಾನ ಪಡಿಸಲು ಅರ್ಜುನನ ಪ್ರಯತ್ನ. 269

೨೩. ಇಪ್ಪತ್ಮೂರನೆಯ ಅಧ್ಯಾಯ

ವೇದವ್ಯಾಸಋಷಿಗಳು ಯುಧಿಷ್ಠಿರನಿಗೆ ಕ್ಷಾತ್ರಧರ್ಮದ ಅನುಷ್ಠಾನವೇ ನಿನಗೆ ಉಚಿತವೆಂದು ಉಪದೇಶಿಸಿದರು. ಇದಕ್ಕೆ ಶಂಖಲಿಖಿತರ ಕಥೆಯನ್ನು ಹೇಳುವ ಪ್ರಸಂಗದಲ್ಲಿ ಸುದ್ಯುಮ್ನರಾಜನ ದಂಡಧರ್ಮಪರಿಪಾಲನೆಯ ಮಹತ್ವವನ್ನು ಉದಾಹರಣೆಯನ್ನಾಗಿ ತಿಳಿಸಿದರು. 274

೨೪. ಇಪ್ಪತ್ನಾಕನೆಯ ಅಧ್ಯಾಯ

ಯುಧಿಷ್ಠಿರನಿಗೆ ವೇದವ್ಯಾಸದೇವರಿಂದ ರಾಜಧರ್ಮದ ಉಪದೇಶ. ಶಂಖಲಿಖಿತರ ಕಥೆಯ ಉಲ್ಲೇಖ. ಅಪರಾಧಿಗಳಿಗೆ ಶಿಕ್ಷೆ ನೀಡುವುದರಿಂದಲೇ ರಾಜನಿಗೆ ಶುದ್ಧಿ. ಕಳ್ಳತನ ಮಾಡಿದ ಪ್ರೀತಿಯ ತಮ್ಮನಿಗೆ ಶಿಕ್ಷೆ ನೀಡಿದ ಅಣ್ಣನ ಉದಾತ್ತಚಿಂತನೆ. ಕಳ್ಳತನವು ಮಹಾಪಾತಕಗಳಲ್ಲಿ ಒಂದಾಗಿದೆ. ಬ್ರಹ್ಮಹತ್ಯೆಗೆ ಸಮಾನವಾಗಿದೆ. ಬ್ರಾಹ್ಮಣನಾದರೂ ಅಪರಾಧಮಾಡಿದ ಲಿಖಿತನಿಗೆ ಶಿಕ್ಷೆ ನೀಡಿದ್ದರಿಂದಲೇ ಸುದ್ಯುಮ್ನನು ಉದ್ಧಾರವಾದನು. ಅಪರಾಧಮಾಡಿದ ದುರ್ಯೋಧನಾದಿಗಳಿಗೆ ಮರಣಶಿಕ್ಷೆಯನ್ನು ನೀಡಿದ್ದರಿಂದ ನೀನೂ ಸಹ ಉದ್ಧೃತನಾಗಿರುವಿ ಎಂದು ವ್ಯಾಸರ ಉಪದೇಶ. 278

೨೫. ಇಪ್ಪತ್ತೈದನೆಯ ಅಧ್ಯಾಯ

ಶ್ರೀವೇದವ್ಯಾಸದೇವರು ಧರ್ಮರಾಜನಿಗೆ ದಂಡನೀತಿಯ ಬಗ್ಗೆ ವಿವರಿಸುತ್ತಿದ್ದಾರೆ. ಬಹಳ ಜಾಗ್ರತೆಯಲ್ಲಿ ದಂಡನೀತಿಯನ್ನು ಅನುಸರಿಸಬೇಕು. ಪಂಡಿತರನ್ನು ಗೌರವಿಸಬೇಕು ಎಂಬುದರ

ಬಗ್ಗೆ ವಿಶ್ಲೇಷಣೆ. ಹಯಗ್ರೀವ ಎಂಬ ರಾಜನ ವೃತ್ತಾಂತ. ಕರ್ತವ್ಯನಿರತನಾದ ರಾಜನು ಯುದ್ಧದಲ್ಲಿ ಅಸು ನೀಗಿದರೂ ಸಂತೋಷ ಪಡುತ್ತಾನೆ. ದಂಡನೀತಿಯನ್ನು ಅನುಸರಿಸುವುದೇ ರಾಜನ ಮುಖ್ಯಕರ್ತವ್ಯ. ಹಯಗ್ರೀವರಾಜನು ಸ್ವಧರ್ಮನಿಷ್ಠೆಯಿಂದ ಪುಣ್ಯಾತ್ಮನಾದುದರ ಬಗ್ಗೆ ವಿವರಣೆ. 290

೨೬. ಇಪ್ಪತ್ತಾರನೆಯ ಅಧ್ಯಾಯ

ವೇದವ್ಯಾಸದೇವರಿಂದ ಯುಧಿಷ್ಠಿರನಿಗೆ ರಾಜಧರ್ಮದ ಉಪದೇಶ. ಸೇನಜಿತ್ ಎಂಬ ರಾಜನು ಉಪದೇಶಿಸಿದ ಧರ್ಮದ ಅನುವಾದ. ದ್ವಂದ್ವಾತೀತನಾಗಬೇಕೆಂಬುದರ ಉಪದೇಶ. ಕ್ಷಣಿಕವಾದ ಸಂಸಾರದಲ್ಲಿ ಆಸೆಯನ್ನು ಪರಿತ್ಯಾಗ ಮಾಡಬೇಕೆಂಬುದರ ವಿವರಣೆ. 306

೨೭. ಇಪ್ಪತ್ತೇಳನೆಯ ಅಧ್ಯಾಯ

ಸಕಲವನ್ನು ಪರಿತ್ಯಾಗ ಮಾಡುವುದೇ ಶ್ರೇಷ್ಠವೆಂದು ಯುಧಿಷ್ಠಿರನ ಸಮರ್ಥನೆ. 321

೨೮. ಇಪ್ಪತ್ತೆಂಟನೆಯ ಅಧ್ಯಾಯ

ಧರ್ಮರಾಜನು ವೇದವ್ಯಾಸರ ಬಳಿ ಬಿಕ್ಕಿ ಬಿಕ್ಕಿ ಅತ್ತನು. ಪ್ರಾಯೋಪವೇಶವನ್ನು ಮಾಡಿ ದೇಹವನ್ನು ಪರಿತ್ಯಾಗ ಮಾಡುತ್ತೇನೆಂದು ಗೋಳಿಟ್ಟನು. ಆಗ ವೇದವ್ಯಾಸದೇವರು ಅಸ್ವತಂತ್ರ-ನಾದ ನಿನಗೆ ಇದರಲ್ಲಿ ಅಧಿಕಾರವಿಲ್ಲ. ನಿನ್ನ ಕರ್ತವ್ಯಪರಿಪಾಲನೆ ಮಾಡುವುದೇ ನಿನಗೆ ಧರ್ಮ ಎಂದು ಉಪದೇಶಿಸಿದರು. 331

೨೯. ಇಪ್ಪತ್ತೊಂಬತ್ತನೆಯ ಅಧ್ಯಾಯ

ಅಶ್ಮಮಹರ್ಷಿ ಮತ್ತು ಜನಕರ ಸಂವಾದವನ್ನು ಉಪಾಖ್ಯಾನವನ್ನು ಹೇಳುವ ಮೂಲಕ ವೇದವ್ಯಾಸದೇವರು ಯುಧಿಷ್ಠಿರನಿಗೆ ಕ್ಷತ್ರಿಯಧರ್ಮದ ಶ್ರೇಷ್ಠತೆಯನ್ನು ಉಪದೇಶಿಸಿದರು. 340

೩೦. ಮೂವತ್ತನೆಯ ಅಧ್ಯಾಯ

ಮರುತ್ ರಾಜನ ಸಾಧನೆ 367

ಸುಹೋತ್ರ ರಾಜನ ಸಾಧನೆ 370

ಬೃಹದ್ರಥರಾಜನ ಸಾಧನೆ 372

ಶಿಬಿ ಚಕ್ರವರ್ತಿಯ ಸಾಧನೆ 374

ಭರತ ಚಕ್ರವರ್ತಿಯ ಸಾಧನೆ 376

ದಿಲೀಪರಾಜನ ಸಾಧನೆ 384

ಮಾಂಧಾತ ರಾಜನ ಸಾಧನೆ 387

ಶಶಬಿಂದು ರಾಜನ ಸಾಧನೆ 397

ಗಯ ರಾಜನ ಸಾಧನೆ 399

ರಂತಿದೇವನ ಸಾಧನೆ 402

ಸಗರ ಚಕ್ರವರ್ತಿಯ ಸಾಧನೆ 407

೩೧. ಮೂವತ್ತೊಂದನೆಯ ಅಧ್ಯಾಯ

ನಾರದ ಹಾಗೂ ಪರ್ವತರ ಕಥೆಯನ್ನು ಶ್ರೀ ಕೃಷ್ಣನು ಧರ್ಮರಾಜನಿಗೆ ತಿಳಿಸುತ್ತಿದ್ದಾನೆ.414

೩೨. ಮೂವತ್ತೆರಡನೆಯ ಅಧ್ಯಾಯ

ಸುವರ್ಣಷ್ಠೀವಿಯ ಜನನ, ಮರಣ, ಪುನರ್ಜನ್ಮಗಳ ಚರಿತ್ರೆಯನ್ನು ನಾರದರು ಯುಧಿಷ್ಠಿರನಿಗೆ ಹೇಳಿದರು. 425

೩೩. ಮೂವತ್ಮೂರನೆಯ ಅಧ್ಯಾಯ

ವೇದ್ಯವ್ಯಾಸದೇವರು ಯುಕ್ತಿಯುಕ್ತವಾದ ಮಾತುಗಳಿಂದ ಯುಧಿಷ್ಠಿರನನ್ನು ಸಮಾಧಾನ ಮಾಡುತ್ತಾರೆ. ಅನೇಕ ತತ್ವಗಳನ್ನು ಹೇಳುವ ಮೂಲಕ ಕ್ಷತ್ರಿಯ ಧರ್ಮದ ಪರಿಪಾಲನೆಯ ಬಗ್ಗೆ ಉಪದೇಶಿಸುತ್ತಾರೆ. 442

೩೪. ಮೂವತ್ನಾಕನೆಯ ಅಧ್ಯಾಯ

ವೇದವ್ಯಾಸದೇವರು ಯುಧಿಷ್ಠಿರನಿಗೆ ಅನೇಕ ಬಗೆಯಲ್ಲಿ ಸಮಾಧಾನವನ್ನು ಮಾಡುತ್ತಿದ್ದಾರೆ. ಪಾಪಗಳಿಗೆ ಪ್ರಾಯಶ್ಚಿತ್ತಾದಿಗಳನ್ನು ತಿಳಿಸುತ್ತಿದ್ದಾರೆ. ಕಾಲದ ಪ್ರಾಬಲ್ಯವನ್ನು ಹೇಳಿ, ದೇವಾಸುರರ ಯುದ್ಧದ ಉದಾಹರಣೆಯನ್ನು ನೀಡುವ ಮೂಲಕ ಅಧಾರ್ಮಿಕರನ್ನು ದಮನ ಮಾಡುವುದು ಅತ್ಯಂತ ಉಚಿತವೆಂದು ವಿವರಿಸುತ್ತಿದ್ದಾರೆ. 456

೩೫. ಮೂವತ್ತೈದನೆಯ ಅಧ್ಯಾಯ

ವೇದವ್ಯಾಸದೇವರು ಯುಧಿಷ್ಠಿರನಿಗೆ ಪ್ರಾಯಶ್ಚಿತ್ತಕ್ಕೆ ಕಾರಣವಾದ ಪಾಪಕರ್ಮಗಳ ಬಗ್ಗೆ, ಪ್ರಾಯಶ್ಚಿತ್ತಗಳ ಬಗ್ಗೆ ವಿವರಿಸುತ್ತಾರೆ. ಯಾವ ಪ್ರಾಯಶ್ಚಿತ್ತವನ್ನು ಮಾಡುವುದರಿಂದ ಯಾವ ಪಾಪವು ಪರಿಹಾರವಾಗುತ್ತದೆ ಎಂಬುದರ ವಿವೇಚನೆ. 468

೩೬. ಮೂವತ್ತಾರನೆಯ ಅಧ್ಯಾಯ

ಪರಸ್ತ್ರೀಗಮನ, ಪರಪುರುಷಸಂಪರ್ಕ, ಬ್ರಹ್ಮಹತ್ಯಾ, ಸುರಾಪಾನ, ವಿವಿಧ ಪಾತಕಗಳು, ಉಪಪಾತಕಗಳು. ಈ ಎಲ್ಲಾ ದೋಷಗಳಿಗೆ ಪ್ರಾಯಶ್ಚಿತ್ತಗಳು. 482

* * * * * *

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತನರಹರಿರಾಮಕೃಷ್ಣವೇದವ್ಯಾಸಾಯ ನಮಃ

ಶ್ರೀಮನ್ಮಹಾಭಾರತ

ಶಾಂತಿಪರ್ವ

ರಾಜಧರ್ಮಪರ್ವ

ಒಂದನೆಯ ಅಧ್ಯಾಯ

ಯುಧಿಷ್ಠಿರನು ಯುದ್ಧದಲ್ಲಿ ಮೃತಪಟ್ಟ ಬಂಧುಗಳಿಗೆ ಧರ್ಮೋದಕವನ್ನು ನೀಡಲು ಗಂಗಾತೀರಕ್ಕೆ ತೆರಳಿದ್ದನು. ಅಲ್ಲಿಗೆ ವೇದವ್ಯಾಸರು ನಾರದರೇ ಮೊದಲಾದ ಮಹರ್ಷಿಗಳು ಆಗಮಿಸಿದರು. ನಾರದರ ಮೂಲಕ ಯುಧಿಷ್ಠಿರನು ಕರ್ಣನ ವೃತ್ತಾಂತವನ್ನು ತಿಳಿಯಲು ಪ್ರಾರ್ಥಿಸಿದನು

ವೈಶಂಪಾಯನಃ

ಕೃತೋದಕಾಸ್ತೇ ಸುಹೃದಾಂ ಸರ್ವೇಷಾಂ ಪಾಂಡುನಂದನಾಃ।
ವಿದುರೋ ಧೃತರಾಷ್ಟ್ರಶ್ಚ ಸರ್ವಾಶ್ಚ ಭರತಸ್ತ್ರಿಯಃ ॥೧॥

ವೈಶಂಪಾಯನರು – ಎಲ್ಲಾ ಪಾಂಡವರು ಯುದ್ಧದಲ್ಲಿ ಮೃತಪಟ್ಟ ಬಂಧುಗಳಿಗೆ ಧರ್ಮೋದಕವನ್ನು ನೀಡಲು ಗಂಗಾತೀರದಲ್ಲಿ ಸೇರಿದ್ದರು. ವಿದುರ, ಧೃತರಾಷ್ಟ್ರ ಹಾಗೂ ಭರತವಂಶದ ಎಲ್ಲಾ ಹಿರಿಯರು ತಮ್ಮ ನೆಚ್ಚಿನ ಸ್ನೇಹಿತರಾದ ಬಂಧುಗಳಿಗೆ ಧರ್ಮೋದಕಗಳನ್ನು ಎಲ್ಲರೂ ಸೇರಿ ನೀಡಿದರು.

ತತ್ರ ತೇ ಸುಮಾಹಾತ್ಮನೋ ನ್ಯವಸನ್ ಕುರುನಂದನಾಃ।
ಶೌಚಂ ನಿವರ್ತಯಿಷ್ಯಂತೋ ಮಾಸಮೇಕಂ ಬಹಿಃ ಪುರಾತ್ ॥೨॥

ಧರ್ಮೋದಕವನ್ನು ಸಾಂಗೋಪಾಂಗವಾಗಿ ಎಲ್ಲರೂ ನೀಡಿದರು. ಅವರೆಲ್ಲರೂ ಶ್ರೇಷ್ಠರಾದ, ಮಹಾತ್ಮರಾದ ಪಾಂಡವರ ಜೊತೆ ಒಂದು ತಿಂಗಳ ಕಾಲ ಅಲ್ಲಿಯೇ ಇದ್ದುಬಿಟ್ಟರು. ನಗರದ ಹೊರಭಾಗದಲ್ಲಿರುವ ಗಂಗಾನದಿಯ ತೀರದಲ್ಲಿ ಶುದ್ಧಿಯ ಕಾರ್ಯಗಳನ್ನು ಆಚರಿಸುತ್ತಾ ಕಾಲ ಕಳೆದರು.

ಟಿಪ್ಪಣಿ - ಶೌಚಂನಿವರ್ತಯಿಷ್ಯಂತ ಇತ್ಯತ್ರ ನಿವರ್ತಯಿಷ್ಯಂತಃ ನಿತರಾಂ ವರ್ತಯಿಷ್ಯಂತಃ । – 'ನಿವರ್ತಯಿಷ್ಯಂತ' ಎನ್ನುವುದಕ್ಕೆ ಚೆನ್ನಾಗಿ ಆಚರಿಸುವವರಾಗಿ ಎಂದರ್ಥ. ಕುರುನಂದನರು ಒಂದು ತಿಂಗಳುಗಳ ಕಾಲ ಶೌಚವನ್ನು ಚೆನ್ನಾಗಿ ಆಚರಿಸುವವರಾಗಿ ಎಂದಭಿಪ್ರಾಯ.

ಒಂದುವಿಮರ್ಶೆ - 'ತತ್ರ ತೇ ಸುಮಹಾತ್ಮಾನೋ' ಎಂಬ ಎರಡನೆಯ ಶ್ಲೋಕವು ಆಶೌಚದ ಆಚರಣೆಗೋಸ್ಕರ ಪಾಂಡವರು ಒಂದು ತಿಂಗಳುಗಳ ಕಾಲ ನಗರವನ್ನು ಬಿಟ್ಟು, ಹೊರಗಡೆ ವಾಸ ಮಾಡಿದರು ಎಂದು ಹೇಳುತ್ತಿದೆ. ಇದು ಹೇಗೆ ಸರಿ ? ಎಂಬುದನ್ನು ಈಗ ವಿಮರ್ಶಿಸಬೇಕು.

ದಶಾಹಾಚ್ಛುಧ್ಯತೇ ವಿಪ್ರೋ ದ್ವಾದಶಾಧೇನ ಭೂಪತಿಃ ।
ವೈಶ್ಯಃ ಪಂಚದಶಾಹೇನ ಶೂದ್ರೋ ಮಾಸೇನ ಶುಧ್ಯತಿ ॥
(ಮ.ಸ್ಮೃತಿ.೫-೮೨)

ಮೃತಾಶೌಚವನ್ನು ವಿಪ್ರನು ಹತ್ತುದಿವಸಗಳ ಕಾಲ ಆಚರಿಸಬೇಕು. ಕ್ಷತ್ರಿಯನು ಹನ್ನೆರಡು ದಿವಸಗಳು ಆಚರಿಸಬೇಕು. ವೈಶ್ಯನು ಹದಿನೈದು ದಿವಸಗಳ ಕಾಲ ಆಚರಿಸಿದರೆ ಶುದ್ಧನಾಗುತ್ತಾನೆ. ಶೂದ್ರನು ಒಂದು ತಿಂಗಳ ಕಾಲ ಆಚರಣೆ ಮಾಡಿದರೆ ಶುದ್ಧನಾಗುತ್ತಾನೆ.

ಈ ವಾಕ್ಯದಂತೆ ಕ್ಷತ್ರಿಯರಿಗೆ ಒಂದು ತಿಂಗಳ ಕಾಲ ಆಶೌಚವು ಇರುವುದೇ ಇಲ್ಲ. ಹೀಗಿರುವಾಗ ಪಾಂಡವರೇಕೆ ಮಾಸಪರ್ಯಂತವಾಗಿ ಗಂಗಾತೀರದಲ್ಲಿ ಆಶೌಚವನ್ನು ಆಚರಿಸಿದರು ?

ಮತ್ತೊಂದು ಪ್ರಶ್ನೆ ಇಲ್ಲಿ ಎದುರಾಗುತ್ತದೆ ? ಯುದ್ಧದಲ್ಲಿ ಮೃತನಾದರೆ ಅವನ ಸಂಬಂಧಿಗಳಿಗೆ ಆಶೌಚವೇ ಇರುವುದಿಲ್ಲ. ಇದನ್ನೂ ಸಹ ಮನುಸ್ಮೃತಿ ಹೀಗೆ ಹೇಳಿದೆ -

ಉದ್ಯತೈರಾಹವೇ ಶಸ್ತ್ರೈಃ ಕ್ಷತ್ರಧರ್ಮಾಹತಸ್ಯ ಚ।
ಸದ್ಯಃ ಸಂತಿಷ್ಯತೇ ಯಜ್ಞಃ ತಥಾ ಶೌಚಮಿತಿಸ್ಥಿತಿಃ ॥

ಯುದ್ಧದಲ್ಲಿ ಆಯುಧಗಳಿಂದ ಹತನಾದ ಕ್ಷಾತ್ರಧರ್ಮಾನುಷ್ಠಾತೃವಿಗೆ ಕೂಡಲೇ ಯಜ್ಞ ಮಾಡಿದ ಫಲವು ಲಭಿಸುತ್ತದೆ. ಮತ್ತು ಸಪಿಂಡರಿಗೆ ಶುದ್ಧಿಯಾಗುತ್ತದೆ.

ಈ ಶ್ಲೋಕದ ಪ್ರಕಾರ ಸಪಿಂಡರಾದ ಸಂಬಂಧಿಕರಿಗೆ ಆಶೌಚ ದೋಷವೇ ಇರುವುದಿಲ್ಲ. ಆದ್ದರಿಂದ ಪಾಂಡವರೇಕೆ ಒಂದು ತಿಂಗಳ ಕಾಲ ಆಶೌಚವನ್ನು ಆಚರಿಸಿದರು? ಎಂಬ ಪ್ರಶ್ನೆ ಮತ್ತಷ್ಟು ದೃಢವಾಗುತ್ತದೆ.

ಮಲಗಿದ್ದಾಗ ಪಶುಗಳಂತೆ ಸಂಹರಿಸಲ್ಪಟ್ಟ ದ್ರೌಪದಿಯ ಮಕ್ಕಳೇ ಮೊದಲಾದವರ ಉದ್ದೇಶಕ್ಕಾಗಿ ಆಶೌಚವನ್ನು ಆಚರಿಸುತ್ತಿದ್ದಾರೆ ಎಂಬ ಸಮಾಧಾನ ಹೇಳಿದರೂ ಕೂಡ ಹನ್ನೆರಡು ದಿವಸವೇ ಸಾಕಿತ್ತು ಮೂವತ್ತು ದಿವಸಗಳ ಅವಶ್ಯಕತೆ ಇರಲಿಲ್ಲ ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ.

ಇದಕ್ಕೆ ಎರಡು ರೀತಿಯಲ್ಲಿ ಸಮಾಧಾನವನ್ನು ತಿಳಿಯಬಹುದು. ಧರ್ಮಶಾಸ್ತ್ರದ ಚೌಕಟ್ಟಿನಲ್ಲಿ ಒಂದು ತಿಂಗಳ ಕಾಲ ಆಶೌಚವನ್ನು ಆಚರಿಸುತ್ತಿದ್ದಾರೆಂದು ಇಲ್ಲಿ ವಿವಕ್ಷಿಸಬೇಕಾಗಿಲ್ಲ. ಅತ್ಯಂತ ಆತ್ಮೀಯರು ಹಾಗೂ ಆ ದೇಶದ ಮುಖ್ಯಸ್ಥರು ಮೃತರಾದಾಗ ಕೆಲವು ದಿವಸಗಳ ಕಾಲ ಶೋಕಾಚರಣೆ ಮಾಡುವ ವಾಡಿಕೆ ಪ್ರಸ್ತುತ ಕಾಲದಲ್ಲೂ ಪ್ರಾಪ್ತವಾಗಿದೆ. ಈ ಪಾಂಡವರೆಲ್ಲರೂ ತಮಗೆ ಅತ್ಯಂತ ಆತ್ಮೀಯರಾದ ಮತ್ತು ಪ್ರಧಾನರಾದ ವ್ಯಕ್ತಿಗಳ ಮರಣನಿಮಿತ್ತವಾಗಿ ಶೌಚಾಚಾರವನ್ನು ಮಾಡಲು ಒಂದು ತಿಂಗಳಕಾಲ ತಾವೇ ನಿರ್ಧಾರ ಮಾಡಿಕೊಂಡು ಗಂಗಾತೀರದಲ್ಲಿ ವಾಸಮಾಡಿದರು. ಮತ್ತು ಮೃತರಾದ ವ್ಯಕ್ತಿಗಳಿಗೆ ಜಲತರ್ಪಣಾದಿಗಳನ್ನು ನೀಡುವ ಮೂಲಕ ಅವರನ್ನು ಸ್ಮರಿಸಿಕೊಂಡು ಅವರಿಗೆ ಕೃತಜ್ಞತೆಯನ್ನು ಹೇಳುವ ಉದ್ದೇಶವೂ ಕೂಡ ಆ ಪಾಂಡವರಿಗಿತ್ತು. ಒಂದುವೇಳೆ ಗಂಗಾತೀರದಲ್ಲಿ ವಾಸಮಾಡದೇ ನಗರದಲ್ಲೇ ವಾಸಮಾಡಿದ್ದರೆ, ಅಂತ್ಯಕ್ರಿಯಾದಿಗಳನ್ನು ಸಾಂಗೋಪಾಂಗವಾಗಿ ನೆರವೇರಿಸಲು ಮೃತಪಟ್ಟ ವ್ಯಕ್ತಿಗಳಿಗೆ ಕೃತಜ್ಞತೆ ಮೊದಲಾದವುಗಳನ್ನು ಸಮರ್ಪಿಸಲು ಅನುಕೂಲವಾಗುತ್ತಿರಲಿಲ್ಲ.

ಮತ್ತೊಂದು ಸಮಾಧಾನ ಹೀಗಿದೆ - ಹದಿನೆಂಟು ದಿವಸಗಳ ಕಾಲ ಯುದ್ಧವಾದ ಕೂಡಲೆ ಯುಧಿಷ್ಠಿರನು ರಾಜ್ಯಭಾರವನ್ನು ವಹಿಸಿಕೊಂಡು. ತನ್ನ ವಿಜೃಂಭಣೆಯ ಜೀವನವನ್ನು ನಡೆಸಲು ಪ್ರಾರಂಭ ಮಾಡಿದರೆ. ಯಾರಿಗೂ ಇದರಿಂದ ಸಂತೋಷವಾಗುತ್ತಿರಲಿಲ್ಲ. ಸ್ವತಃ ಪಾಂಡವರಿಗೂ ಕೂಡ ತೃಪ್ತಿಯು ಸಿಗುತ್ತಿರಲಿಲ್ಲ. ಸಾಮಾಜಿಕ ದೃಷ್ಟಿಯಿಂದ ವೈಯಕ್ತಿಕ ಮನಃಶುದ್ಧಿಯ ದೃಷ್ಟಿಯಿಂದ ಈ ಒಂದು ತಿಂಗಳ ಕಾಲ ಶೋಕಾಚರಣೆಯನ್ನು ಆಚರಿಸಿದರು. ಮತ್ತು ಅತ್ಯಂತ ಆತ್ಮೀಯರಾದ ತಂದೆ, ತಾಯಿ, ಮಕ್ಕಳು ಮೊದಲಾದವರು ಮೃತರಾದಾಗ ಅದೇ ತಿಂಗಳಿನಲ್ಲೇ ಯಾವುದೇ ಮಂಗಳ ಕಾರ್ಯವನ್ನು ಮಾಡುವುದು ಉಚಿತವಲ್ಲ ಎಂಬುದನ್ನೂ ಕೂಡ ಈ ಮೂಲಕ ಪಾಂಡವರು ಮಾರ್ಗದರ್ಶನ ಮಾಡಿರುವರು.

ಕೃತೋದಕಂ ತು ರಾಜಾನಂ ಧರ್ಮಾತ್ಮಾನಂ ಯುಧಿಷ್ಠಿರಮ್ ।
ಅಭಿಜಗ್ಮುರ್ಮಹಾತ್ಮನಃ ಸಿದ್ಧಾ ಬ್ರಹ್ಮರ್ಷಿಸತ್ತಮಾಃ ॥೩॥

ತನ್ನೆಲ್ಲಾ ಬಂಧುಜನರಿಗೆ ಮತ್ತು ಸ್ನೇಹಿತರಿಗೆ ಧರ್ಮೋದಕವನ್ನು ಧರ್ಮರಾಜನು ನೀಡಿದನು. ಕುಳಿತಿದ್ದ ಅವನ ಬಳಿ ಅನೇಕ ಮಹಾತ್ಮರಾದ ಸಿದ್ಧಪುರುಷರೆನಿಸಿದ ಬ್ರಹ್ಮರ್ಷಿಗಳು ಬಂದರು.

ದ್ವೈಪಾಯನೋ ನಾರದಶ್ಚ ದೇವಲಶ್ಚ ಮಹಾನ್ ಋಷಿಃ ।
ದೇವಸ್ಥಾನಶ್ಚ ಕಣ್ವಶ್ಚ ತೇಷಾಂ ಶಿಷ್ಯಾಶ್ಚ ಸತ್ತಮಾಃ ॥೪॥

ವೇದವ್ಯಾಸದೇವರು, ನಾರದಮಹರ್ಷಿಗಳು, ದೇವಲಋಷಿಗಳು, ಮಹಾತ್ಮರಾದ ದೇವಸ್ಥಾನ ಎಂಬ ಮತ್ತೊಬ್ಬ ಋಷಿಗಳು, ಕಣ್ವರೂ ಸಹ ಶಿಷ್ಯಸಹಿತರಾಗಿ ಧರ್ಮರಾಜನ ಬಳಿಗೆ ಬಂದರು. ('ದೇವಸ್ಥಾನ' ಎಂಬ ಋಷಿಯ ಹೆಸರು ಅಪೂರ್ವವಾಗಿದೆ. ಅದನ್ನು ಇಲ್ಲಿ ವ್ಯಾಸರು ಉಲ್ಲೇಖ ಮಾಡಿದ್ದನ್ನು ಗಮನಿಸಬೇಕು).

ಅನ್ಯೇ ಚ ವೇದವಿದ್ವಾಂಸಃ ಕೃತಪ್ರಜ್ಞಾ ದ್ವಿಜಾತಯಃ ।
ಗೃಹಸ್ಥಾಃ ಸ್ನಾತಕಾಃ ಸರ್ವೇ ದದೃಶುಃ ಕುರುಸತ್ತಮಮ್ ॥೫॥

ಇಷ್ಟೇ ಅಲ್ಲದೇ ವೇದಜ್ಞಾನಿಗಳಾದ ಅತ್ಯಂತ ಪ್ರಜ್ಞಾವಂತರಾದ ಅನೇಕ ಬ್ರಾಹ್ಮಣರೂ ಕೂಡ ಅಲ್ಲಿಗೆ ಆಗಮಿಸಿದರು. ಗೃಹಸ್ಥರೂ, ಸ್ನಾತಕರು ಅನೇಕ ಸಾಧುಸಜ್ಜನರು ಆ ಕುರುಶ್ರೇಷ್ಠನಾದ ಯುಧಿಷ್ಠಿರನ ಸಮಾಗಮವನ್ನು ಅಪೇಕ್ಷಿಸಿ ಅಲ್ಲಿಗೆ ಬಂದರು.

ಅಭಿಗಮ್ಯ ಮಹಾತ್ಮಾನಃ ಪೂಜಿತಾಶ್ಚ ಯಥಾವಿಧಿ।
ಆಸನೇಷು ಮಹಾರ್ಹೇಷು ವಿವಿಶುಸ್ತೇ ಮಹರ್ಷಯಃ ॥೬॥

ಅಲ್ಲಿಗೆ ಆಗಮಿಸಿದ ಮಹಾತ್ಮರಾದ ಎಲ್ಲ ಸಾಧುಸಜ್ಜನರನ್ನು, ಋಷಿಪುಂಗವರನ್ನು ಪಾಂಡವರು ಯಥೋಚಿತವಾಗಿ ಸತ್ಕಾರ ಮಾಡಿದರು. ಅವರವರಿಗೆ ತಕ್ಕಂತೆ ಆಸನಗಳನ್ನು ನೀಡಿದರು. ಮಹರ್ಷಿಗಳೆಲ್ಲರೂ ಆಸೀನರಾದರು.

ಪ್ರತಿಗೃಹ್ಯ ತತಃ ಪೂಜಾಂ ತತ್ಕಾಲಸದೃಶೀಂ ತದಾ।
ಪರ್ಯುಪಾಸನ್ ಯಥಾನ್ಯಾಯಂ ಪರಿವಾರ್ಯ ಯುಧಿಷ್ಠಿರಮ್॥೭॥

ತತ್ಕಾಲಕ್ಕೆ ತಕ್ಕಂತೆ ಸತ್ಕಾರವನ್ನು ಎಲ್ಲಾ ಋಷಿಮುನಿಗಳು ಸ್ವೀಕರಿಸಿದರು. ಯಥಾನುಕ್ರಮವಾಗಿ ಯುಧಿಷ್ಠಿರನನ್ನು ಸುತ್ತುವರೆದು ಕುಳಿತರು.

ವಿಶೇಷವಿಚಾರ - ಒಂದು ತಿಂಗಳುಗಳ ಕಾಲ ಅಶೌಚವನ್ನು ಆಚರಿಸುವ ಉದ್ದೇಶದಿಂದ ಪಾಂಡವರೇ ಮೊದಲಾದವರು ಊರಿನ ಹೊರಗೆ ವಾಸಿಸಿದರು. ಅಶೌಚವಿದ್ದಾಗ ಊರಿನಲ್ಲಿ ವಾಸಿಸುವ ಸಂಪ್ರದಾಯವು ಆ ಕಾಲದಲ್ಲಿ ಇರಲಿಲ್ಲ ಎಂಬುದು ಇದರಿಂದ ತಿಳಿಯುತ್ತದೆ. ಊರಿನ ಹೊರಗಿರುವ ಗಂಗಾನದಿಯ ತೀರದಲ್ಲಿ ಎಲ್ಲಾ ಋಷಿಮುನಿಗಳು ಯುಧಿಷ್ಠಿರಾದಿಗಳಿಗೆ ಸಾಂತ್ವನಗಳನ್ನು ಹೇಳುವುದಕ್ಕಾಗಿ ಆಗಮಿಸಿದರು. ಆಗ ಅಲ್ಲಿಗೆ ಆಗಮಿಸಿದ ಋಷಿಪುಂಗವರಿಗೆ ಯುಧಿಷ್ಠಿರಾದಿಗಳು ಸತ್ಕಾರವನ್ನು ಮಾಡಿದರು. ಆದರೆ ಊರಿನ ಅರಮನೆಯಲ್ಲಿ ಇದ್ದಾಗ ಹೇಗೆ ವೈಭವದ ಸತ್ಕಾರವಿರುತ್ತದೋ, ಆ ರೀತಿಯ ಸತ್ಕಾರವನ್ನು ಇಲ್ಲಿ ಮಾಡಲಿಲ್ಲ. ಆದ್ದರಿಂದಲೇ 'ತತ್ಕಾಲಸದೃಶೀಂ' ಎಂಬುದಾಗಿ ಹೇಳಿದ್ದಾರೆ. ಅರ್ಥಾತ್ ಮಾತಿನ ಮೂಲಕ ಅಶೌಚದಲ್ಲಿ ಮಾಡಲು ಧರ್ಮಸಮ್ಮತಿಯಲ್ಲಿರುವ ರೀತಿಯಲ್ಲಷ್ಟೇ ಸತ್ಕಾರವನ್ನು ಮಾಡಿದರೆಂದು ತಿಳಿಯಬೇಕು.

ಪುಣ್ಯೇ ಭಾಗೀರಥೀತೀರೇ ಶೋಕವ್ಯಾಕುಲಚೇತಸಮ್ ।
ಆಶ್ವಾಸಯಂತೋ ರಾಜಾನಂ ವಿಪ್ರಾಃ ಶತಸಹಸ್ರಶಃ ॥೮॥

ಅತ್ಯಂತ ಪುಣ್ಯಕರವಾದ ಭಾಗೀರಥೀ ನದಿಯ ತೀರದಲ್ಲಿ ರಾಜನಾದ ಯುಧಿಷ್ಠಿರನು ದುಃಖದಿಂದ ಕಳವಳಗೊಂಡ ಮನಸ್ಸುಳ್ಳವನಾಗಿದ್ದನು. ಆ ಸಂದರ್ಭ-ದಲ್ಲಿ ನೂರಾರು, ಸಾವಿರಾರು ಬ್ರಾಹ್ಮಣರು ದುಃಖಿತನಾದ ಆ ಧರ್ಮರಾಜನನ್ನು ಪರಿಪರಿಯಾಗಿ ಸಂತೈಸುತ್ತಿದ್ದರು.

ನಾರದಸ್ತ್ವಬ್ರವೀತ್ ಕಾಲೇ ಧರ್ಮಾತ್ಮಾನಂ ಯುಧಿಷ್ಠಿರಮ್ ।
ವಿಚಾರ್ಯ ಮುನಿಭಿಃ ಸಾರ್ಧಂ ತತ್ಕಾಲಸದೃಶಂ ವಚಃ ॥೯॥

ಧರ್ಮಾತ್ಮನೆಂದೇ ಪ್ರಸಿದ್ಧನಾದ ಯುಧಿಷ್ಠಿರನ ಜೊತೆ ನಾರದರು ಮಾತನಾ-ಡಲು ಇಚ್ಛಿಸಿದರು. ಅನೇಕ ಮುನಿಗಳ ಜೊತೆ ಸಮಾಲೋಚನೆ ಮಾಡಿ, ಆ ಕಾಲಕ್ಕೆ ಉಚಿತವಾದ ಯಾವ ಮಾತುಗಳನ್ನಾಡಬೇಕೆಂದು ವಿಚಾರ ಮಾಡಿ ಹೀಗೆ ಹೇಳಿ-ದರು-

ಭವತೋ ಬಾಹುವೀರ್ಯೇಣ ಪ್ರಸಾದಾನ್ಮಾಧವಸ್ಯ ಚ।
ಜಿತೇಯಮವನಿಃ ಕೃತ್ಸ್ನಾ ಧರ್ಮೇಣ ಚ ಯುಧಿಷ್ಠಿರ ॥೧೦॥

ಯುಧಿಷ್ಠಿರನೇ ! ನೀನು ನಿನ್ನ ತೋಳಿನ ಪರಾಕ್ರಮದಿಂದ ಶ್ರೀಕೃಷ್ಣಪರಮಾತ್ಮನ ದಿವ್ಯವಾದ ಅನುಗ್ರಹದಿಂದ ಧರ್ಮದ ಬೆಂಬಲದಿಂದ ಸಮಗ್ರ ಭೂಮಂಡಲವನ್ನು ಗೆದ್ದಿರುವಿ.

ದಿಷ್ಟ್ಯಾ ಮುಕ್ತಸ್ತು ಸಂಗ್ರಾಮಾದಸ್ಮಾಲ್ಲೋಕಭಯಂಕರಾತ್ ।
ಕ್ಷತ್ರಧರ್ಮರತಶ್ಚಾಪಿ ಕಚ್ಚಿನ್ನೋದಸಿ ಪಾಂಡವ ॥೧೧॥

ಸೌಭಾಗ್ಯವಶದಿಂದ ನೀನು ಅತ್ಯಂತ ಲೋಕಭಯಂಕರವಾದ ದೊಡ್ಡ ಸಂಗ್ರಾಮ-ದಿಂದ ಮುಕ್ತನಾಗಿ ಗೆದ್ದು ಬಂದಿರುವಿ. ಇದುವೇ ನಿನ್ನ ಕ್ಷತ್ರಧರ್ಮದ ಪರಿಪಾಲನೆ-ಯಾಗಿದೆ. ಕ್ಷತ್ರಿಯಧರ್ಮದಲ್ಲಿ ನಿರತನಾಗಿರುವ ನೀನು ಇದರಿಂದ ಸಂತುಷ್ಟನಾಗಿ-ರುವಿ ಅಲ್ಲವೇ?

ಕಚ್ಚಿಚ್ಚ ನಿಹತಾಮಿತ್ರಃ ಪ್ರೀಣಾಸಿ ಸುಹೃದೋ ನೃಪ।
ಕಚ್ಚಿಚ್ಚ್ರಿಯಮಿಮಾಂ ಪ್ರಾಪ್ಯ ನ ತ್ವಾಂ ಶೋಕಃ ಪ್ರಬಾಧತೇ ॥೧೨॥

ಎಲ್ಲಾ ಶತ್ರುಗಳನ್ನು ಕೊಂದಿರುವುದರಿಂದ ತೃಪ್ತನಾಗಿರುವಿಯಲ್ಲವೇ? ಎಲ್ಲಾ ನಿನ್ನ ಸಹೋದರರನ್ನು ಸಂತೋಷಪಡಿಸುತ್ತಿರುವಿ ಅಲ್ಲವೇ? ಈ ರಾಜ್ಯಲಕ್ಷ್ಮಿಯನ್ನು ಪಡೆದ ಮೇಲೆ ನಿನಗೆ ಯಾವ ಶೋಕವೂ ಕೂಡ ಪ್ರಬಲವಾಗಿ ಬಾಧಿಸುತ್ತಿಲ್ಲ ಅಲ್ಲವೇ?

ಯುಧಿಷ್ಠಿರಃ

ವಿಜಿತೇಯಂ ಮಹೀ ಕೃತ್ಸ್ನಾ ಕೃಷ್ಣಬಾಹುಬಲಾಶ್ರಯಾತ್।
ಬ್ರಾಹ್ಮಣಾನಾಂ ಪ್ರಸಾದೇನ ಭೀಮಾರ್ಜುನಬಲೇನ ಚ ॥೧೩॥

ಯುಧಿಷ್ಠಿರ – ಓ ನಾರದ ಮಹರ್ಷಿಗಳೇ ! ಶ್ರೀಕೃಷ್ಣಪರಮಾತ್ಮನ ಬಾಹುವಿನ ಪರಾಕ್ರಮದಿಂದಷ್ಟೇ ಈ ಸಮಗ್ರಭೂಮಂಡಲವು ಜಯಸಲ್ಪಟ್ಟಿದೆ. ಬ್ರಾಹ್ಮಣರ ಅನುಗ್ರಹ, ಭೀಮಾರ್ಜುನರ ಬಲವೂ ಕೂಡ ಇದಕ್ಕೆ ಕಾರಣವಾಗಿದೆ.

ಇದಂ ತು ಮೇ ಮಹದ್ ದುಃಖಂ ವರ್ತತೇ ಹೃದಿ ನಿತ್ಯದಾ।
ಕೃತ್ವಾ ಜ್ಞಾತಿಕ್ಷಯಮಿಮಂ ಮಹಾಂತಂ ಲೋಭಕಾರಿತಮ್ ॥೧೪॥

ಆದರೆ ನನ್ನ ಹೃದಯದ ಅಂತರಾಳದಲ್ಲಿ ಬಹುದೊಡ್ಡ ದುಃಖವುಂಟಾಗಿದೆ. ಎಲ್ಲಾ ಬಂಧುಜನರ ಸಂಹಾರವನ್ನು ನಾನು ಮಾಡಿಬಿಟ್ಟೆ. ರಾಜ್ಯಲೋಭದ ಕಾರಣ-ಬಿಟ್ಟರೆ ಇದಕ್ಕೆ ಬೇರೆ ಕಾರಣ ಇಲ್ಲ. ಈ ದುಃಖ ನನ್ನನ್ನು ಸುಡುತ್ತಿದೆ.

ಸೌಭದ್ರಂ ದ್ರೌಪದೇಯಾಂಶ್ಚ ಘಾತಯಿತ್ವಾಪ್ರಿಯಾನ್ ಸುತಾನ್।
ಜಯೋऽಯಮಜಯಾಕಾರೋ ಭಗವನ್ ಪ್ರತಿಭಾತಿ ಮೇ ॥೧೫॥

ಸುಭದ್ರೆಯ ಮಗನಾದ ಅಭಿಮನ್ಯುವನ್ನು ಮತ್ತು ದ್ರೌಪದಿಯ ಐದುಮಂದಿ ಪ್ರಿಯರಾದ ಮಕ್ಕಳನ್ನು ಯುದ್ಧದಲ್ಲಿ ಸಾಯಿಸಿ, ನಾನು ಜಯವನ್ನು ಹೊಂದಿರು-

ವೆನು. ಓ ಪೂಜ್ಯರೇ ! ಈ ಜಯವು ನನಗೆ ಪರಾಜಯರೂಪವಾಗಿದೆ ಎಂದೆನಿಸುತ್ತಿದೆ.

ಕಿನ್ನು ವಕ್ಷ್ಯತಿ ವಾರ್ಷ್ಣೇಯೀ ವಧೂರ್ಮೇ ಮಧುಸೂದನಮ್ ।
ದ್ವಾರಕಾವಾಸಿನೀ ಕೃಷ್ಣಂ ಇತಃ ಪ್ರತಿಗತಂ ಹರಿಮ್ ॥೧೬॥

ವೃಷ್ಣಿಕುಲದಲ್ಲಿ ಜನಿಸಿದ ನನಗೆ ಸೊಸೆಯಂತಿರುವ ಸುಭದ್ರೆಯು ನನ್ನ ವಿಷಯದಲ್ಲಿ ಏನೆಂದುಕೊಳ್ಳುತ್ತಾಳೆ. ಮಧುಸೂದನನಾದ ಶ್ರೀಕೃಷ್ಣನು ದ್ವಾರಕೆಗೆ ತೆರಳಿದ ಮೇಲೆ ಅಲ್ಲಿರುವ ಜನರು ಕೃಷ್ಣನನ್ನು ಕುರಿತು, ತನ್ನ ಬಗ್ಗೆ ಏನೆಲ್ಲಾ ಮಾತನಾಡುತ್ತಾರೆ.

ವಿಶೇಷವಿಚಾರ - 'ದ್ವಾರಕಾವಾಸಿನೀ' ಎಂಬುದಕ್ಕೆ ವ್ಯಾಖ್ಯಾನದಲ್ಲಿ ದ್ವಾರಕೆಯಲ್ಲಿರುವ ಜನಸಮೂಹವು ಎಂಬರ್ಥವನ್ನು ತಿಳಿಸಿದ್ದಾರೆ. 'ಕೃಷ್ಣಂ' ಎಂಬುದಕ್ಕೆ 'ಹರಿಂ ಮಧುಸೂದನಮ್' ಎಂದೆರಡು ವಿಶೇಷಣಗಳನ್ನಾಗಿ ತಿಳಿಯಬೇಕು.

ಸುಭದ್ರೆಯು ಧರ್ಮರಾಜನ ಸೊಸೆಯೆಂದು 'ಮೇ ವಧೂಃ' ಎಂಬ ಪದದಿಂದ ತಿಳಿಯುತ್ತದೆ. ಆದರೆ ನಿಜವಾದ ಸೊಸೆಯಲ್ಲ. ತಮ್ಮನಾದ ಅರ್ಜುನನ ವಿಷಯದಲ್ಲಿ ಯುಧಿಷ್ಠಿರನು ಮಗನಂತೆ ವಾತ್ಸಲ್ಯವನ್ನು ಇಟ್ಟುಕೊಂಡಿದ್ದನು. ಈ ದೃಷ್ಟಿಯಿಂದ ಅವನ ಹೆಂಡತಿಯನ್ನು ಸೊಸೆಯೆಂದು ಹೇಳಲಾಗಿದೆ. ನನ್ನ ಸೊಸೆಯು 'ರಾಜ್ಯಲೋಭಕ್ಕೋಸ್ಕರ ನನ್ನ ಪ್ರಿಯನಾದ ಮಗನನ್ನು ಬಲಿ ಕೊಟ್ಟೆಯಾ?' ಎಂದು ಪ್ರಶ್ನಿಸಿದರೆ ನಾನು ಏನೆಂದು ಅವಳಿಗೆ ಉತ್ತರಿಸಲಿ? ಎಂದು ಧರ್ಮರಾಜನ ಆತಂಕ. ಮತ್ತು ಕೃಷ್ಣಪರಮಾತ್ಮನು ಮುಂದೆ ದ್ವಾರಕೆಗೆ ತೆರಳುತ್ತಾನೆ. ಆಗ ಅಲ್ಲಿರುವ ದ್ವಾರಕೆಯ ಜನರು ಕೃಷ್ಣನನ್ನು ಕುರಿತು 'ಆ ಧರ್ಮರಾಜನು ರಾಜ್ಯಲೋಭಕ್ಕೋಸ್ಕರ ಅಭಿಮನ್ಯು ಮೊದಲಾದವರನ್ನು ಕೊಂದುಬಿಟ್ಟನಲ್ಲಾ' ಎಂದು ಪ್ರಶ್ನಿಸಿದರೆ ಏನುತ್ತರ? ಎಂಬುದು ಯುಧಿಷ್ಠಿರನ ಗೊಂದಲ.

ದ್ರೌಪದೀ ಹತಪುತ್ರೇಯಂ ಕೃಪಣಾ ಹತಬಾಂಧವಾ ।
ಅಸ್ಮತ್ಪ್ರಿಯಹಿತೇ ಯುಕ್ತಾ ಭೂಯಃ ಪೀಡಯತೀವ ಮಾಮ್ ॥೧೭॥

ದ್ರೌಪದಿಯ ಸ್ಥಿತಿ ಅತ್ಯಂತದಯನೀಯವಾಗಿದೆ. ಎಲ್ಲಾ ಮಕ್ಕಳನ್ನು ಕಳೆದುಕೊಂಡಿದ್ದಾಳೆ. ತಂದೆ ಮೊದಲಾದವರನ್ನೂ ಕೂಡ ಕಳೆದುಕೊಂಡು ಅತ್ಯಂತ

ದುಃಖಿತಳಾಗಿದ್ದಾಳೆ. ಇವಳು ನಿರಂತರ ನಮಗೆಲ್ಲಾ ಜಯವನ್ನೇ ಉಂಟುಮಾಡುವಳಾಗಿದ್ದಾಳೆ. ಇಂಥ ಇವಳಿಗೆ ಒದಗಿದ ದುಃಖವು ನನ್ನನ್ನು ಬಹಳ ಪೀಡಿಸುತ್ತಿದೆ.

ವಿವರಣೆ - ಜೀವನದಲ್ಲಿ ಪ್ರತೀಕ್ಷಣವೂ ನಮಗೆಲ್ಲ ಹಿತವನ್ನೇ ಬಯಸಿದವಳು ದ್ರೌಪದೀದೇವಿ. ಆದರೆ ಅವಳ ತಂದೆಯಾದ ದ್ರುಪದನನ್ನು, ನೆಚ್ಚಿನ ಐದುಮಂದಿ ಮಕ್ಕಳನ್ನು ಇಂದು ನಾನು ಯುದ್ಧದಲ್ಲಿ ಕೊಂದುಬಿಟ್ಟಿರುವೆ ಎಂಬುದು ಧರ್ಮರಾಜನ ಆತಂಕ.

ಇದಮನ್ಯಚ್ಚ ಭಗವನ್ ಯತ್ ತ್ವಾಂ ವಕ್ಷ್ಯಾಮಿ ನಾರದ।
ಮಂತ್ರಸಂವರಣೇನಾಸ್ಮಿ ಕುಂತ್ಯಾ ದುಃಖೇನ ಯೋಜಿತಃ ॥೧೮॥

ಓ ನಾರದರೇ ! ನನ್ನ ದುಃಖ ಇಷ್ಟೇ ಅಲ್ಲ. ಇನ್ನೂ ಅನೇಕ ದುಃಖಗಳಿವೆ. ಅವುಗಳಲ್ಲಿ ಒಂದು ಪ್ರಧಾನವಾದ ಮತ್ತೊಂದು ದುಃಖವಿದೆ. ಅದನ್ನು ನಿಮ್ಮ ಬಳಿ ಹಂಚಿಕೊಳ್ಳುತ್ತೇನೆ. ನನ್ನ ತಾಯಿಯಾದ ಕುಂತಿಯು ಕರ್ಣನ ಜನ್ಮವೃತ್ತಾಂತವನ್ನು ಮುಚ್ಚಿಟ್ಟಿದ್ದರಿಂದ ಆ ಭ್ರಾತೃವಿಯೋಗದ ದುಃಖ ನನ್ನನ್ನು ಸುಡುತ್ತಿದೆ.

ಯೋಽಸೌ ನಾಗಾಯುತಬಲೋ ಲೋಕೇಽಪ್ರತಿರಥೋ ರಣೇ।
ಸಿಂಹಖೇಲಗತಿರ್ಧೀಮಾನ್ ಘೃಣೀ ದಾಂತಾ ಯತವ್ರತಃ ॥೧೯॥

ಆ ಕರ್ಣನು ಎಂಥ ಪರಾಕ್ರಮಿ ಎಂದರೆ ಹತ್ತುಸಾವಿರ ಆನೆಗಳ ಬಲವನ್ನು ಹೊಂದಿದ್ದನು. ಅವನಿಗೆ ಸರಿಸಾಟಿಯಾದ ಮಹಾರಥಿಕರು ರಣರಂಗದಲ್ಲೇ ಇರಲಿಲ್ಲ. ಅರಣ್ಯದಲ್ಲಿ ನಿರ್ಭೀತವಾಗಿ ಸಂಚರಿಸುವ ಸಿಂಹದಂತೆ ರಣರಂಗದಲ್ಲಿ ಭಯರಹಿತನಾಗಿ ಸಂಚರಿಸುತ್ತಿದ್ದನು. ಅತ್ಯಂತ ಧೀಮಂತನಾಗಿದ್ದನು. ಇಂದ್ರಿಯನಿಗ್ರಹವನ್ನು ಹೊಂದಿದ್ದನು. ಮಹಾದಾನಿಯಾಗಿದ್ದನು. ಅನೇಕ ವ್ರತಾನುಷ್ಠಾನಗಳಲ್ಲಿ ತತ್ಪರನಾಗಿದ್ದನು.

ಆಶ್ರಯೋ ಧಾರ್ತರಾಷ್ಟ್ರಾಣಾಂ ಮಾನೀ ತೀಕ್ಷ್ಣಪರಾಕ್ರಮಃ।
ಅಮರ್ಷೀ ನಿತ್ಯಸಂರಂಭೀ ಕ್ಷೇಪ್ತಾಸ್ಮಾಕಂ ರಣೇ ರಣೇ ॥೨೦॥

ಎಲ್ಲಾ ಧೃತರಾಷ್ಟ್ರನ ಮಕ್ಕಳಿಗೆ ತಾನೊಬ್ಬನೇ ಆಶ್ರಯನಾಗಿದ್ದನು. ಆದ್ದರಿಂದಲೇ ಅತ್ಯಂತ ಮಾನ್ಯನಾಗಿದ್ದನು. ಉಗ್ರವಾದ ಪರಾಕ್ರಮವನ್ನು ಹೊಂದಿದ್ದನು. ಕೋಪಿಷ್ಠನಾಗಿರುತ್ತಿದ್ದನು. ಎಲ್ಲಾ ಯುದ್ಧಗಳಲ್ಲಿ ನಮ್ಮೆಲ್ಲರನ್ನು ಪರಾಭವಗೊಳಿಸುತ್ತಿದ್ದನು.

ಶೀಘ್ರಾಸ್ತ್ರಶಿಚ್ಚಿತ್ರಯೋಧೀ ಚ ಕೃತೀ ಚಾದ್ಭುತವಿಕ್ರಮಃ।
ಗೂಢೋತ್ಪನ್ನಃ ಸುತಃ ಕುಂತ್ಯಾ ಭ್ರಾತಾऽಸ್ಮಾಕಂ ಚ ಸೋದರಃ ॥೨೧॥

ಶೀಘ್ರವಾದ ಅಸ್ತ್ರಪ್ರಯೋಗವನ್ನು ಮಾಡುವುದರಲ್ಲಿ ಹೆಸರುವಾಸಿಯಾಗಿದ್ದನು. ವಿಚಿತ್ರವಾಗಿ ಯುದ್ಧವನ್ನು ಮಾಡುವುದರಿಂದ ಚಿತ್ರಯೋಧಿ ಎನಿಸಿದ್ದನು. ಮಹಾಪರಾಕ್ರಮಶಾಲಿಯಾಗಿದ್ದನು. ಇಂಥ ಕರ್ಣನು ನಮ್ಮ ತಾಯಿಯಾದ ಕುಂತಿಗೆ ರಹಸ್ಯದಲ್ಲಿ ಹುಟ್ಟಿದ ಮಗನಾಗಿದ್ದಾನೆ. ನಮ್ಮೆಲ್ಲರ ಹಿರಿಯ ಸಹೋದರನಾಗಿದ್ದಾನೆ.

ಗಮನೀಯ ಅಂಶ - ಯುಧಿಷ್ಠಿರನು ನಾರದರ ಬಳಿ ಕರ್ಣನ ಬಗ್ಗೆ ಹೇಳುವಾಗ ಮೊದಲೇ ಅವನ ಹೆಸರನ್ನು ಹೇಳಲಿಲ್ಲ. ಅವನಲ್ಲಿರುವ ಎಲ್ಲಾ ಗುಣಗಳನ್ನು ಹೊಗಳಿ, ಇಂಥ ಗುಣಗಳುಳ್ಳವನು ಕರ್ಣನು ಎಂಬುದಾಗಿ ತಿಳಿಸಿದ್ದಾನೆ. ಅನುವಾದ ಸೌಕರ್ಯಕ್ಕೋಸ್ಕರ ಮೊದಲೇ ಕರ್ಣನ ಹೆಸರನ್ನು ಅನುವಾದದಲ್ಲಿ ಉಲ್ಲೇಖಿಸಲಾಗಿದೆ.

ತೋಯಕರ್ಮಣಿ ಯಂ ಕುಂತೀ ಕಥಯಾಮಾಸ ಸೂರ್ಯಜಮ್।
ಪುತ್ರಂ ಸರ್ವಗುಣೋಪೇತಮವಕೀರ್ಣಂ ಜಲೇ ಪುರಾ।
ಮಂಜೂಷಾಯಾಂ ಸಮಾಧಾಯ ಗಂಗಾಸ್ರೋತಸ್ಯಮಜ್ಜಯತ್ ॥೨೨॥

ಧರ್ಮೋದಕ ನೀಡುವ ಸಂದರ್ಭದಲ್ಲಿ ಸೂರ್ಯನಿಂದ ತನ್ನಲ್ಲಿ ಈ ಕರ್ಣನು ಹುಟ್ಟಿದ ಕಥೆಯನ್ನು ನನ್ನ ತಾಯಿಯಾದ ಕುಂತಿಯು ತಿಳಿಸಿದ್ದಾಳೆ. ಎಲ್ಲಾ ಗುಣಗಳಿಂದ ಕೂಡಿದ ಎಲ್ಲ ಲಕ್ಷಣಗಳಿಂದ ಕೂಡಿದ ಆ ಪುತ್ರನನ್ನು ಸೂರ್ಯನಿಂದ ಹೊಂದಿದ ಮೇಲೆ ತಾನು ನೀರಿನಲ್ಲಿ ತೇಲಿಬಿಟ್ಟೆನು ಎಂಬುದಾಗಿ ನನ್ನ ತಾಯಿ ತಿಳಿಸಿದಳು. ನೀರಿನಲ್ಲಿ ಮುಳುಗಬಾರದೆಂಬ ಉದ್ದೇಶದಿಂದ ಒಂದು ಪೆಟ್ಟಿಗೆಯ ಒಳಗೆ ಆ ಮಗುವನ್ನು ಮಲಗಿಸಿ ಗಂಗಾನದಿಯಲ್ಲಿ ಬಿಟ್ಟುಬಿಟ್ಟಳು.

ಯಂ ಸೂತಪುತ್ರಂ ಲೋಕೋಽಯಂ ರಾಧೇಯಂ ಚಾಪ್ಯಮನ್ಯತ।
ಸ ಜ್ಯೇಷ್ಠಪುತ್ರಃ ಕುಂತ್ಯಾ ವೈ ಭ್ರಾತಾಸ್ಮಾಕಂ ಚ ಮಾತೃಜಃ ॥೨೩॥

ಸಮಸ್ತಲೋಕವು ಯಾರನ್ನು ಸೂತನ ಮಗ, ರಾಧೇಯನಾಗಿದ್ದಾನೆಂದು ತಿಳಿದಿದೆಯೋ, ಅವನು ಬೇರಾರೂ ಅಲ್ಲ, ನಮ್ಮೆಲ್ಲರ ಹಿರಿಯಣ್ಣ. ನಮ್ಮ ತಾಯಿಯ ಹೊಟ್ಟೆಯಲ್ಲಿ ಹುಟ್ಟಿಬಂದ ನಮ್ಮ ಸಹೋದರ.

ಅಜಾನತಾ ಮಯಾ ಸಂಖ್ಯೇ ರಾಜ್ಯಲುಬ್ಧೇನ ಘಾತಿತಃ।
ತನ್ಮೇ ದಹತಿ ಗಾತ್ರಾಣಿ ತೂಲರಾಶಿಮಿವಾನಲಃ ॥೨೪॥

ಈ ವಿಷಯ ನನಗೆ ತಿಳಿದೇ ಇರಲಿಲ್ಲ. ರಾಜ್ಯಲೋಭಕ್ಕೋಸ್ಕರ ತಮ್ಮನ ಮೂಲಕ ಅಣ್ಣನನ್ನು ಕೊಲ್ಲಿಸಿಬಿಟ್ಟೆ. ಹತ್ತಿಯ ರಾಶಿಯನ್ನು ಬೆಂಕಿಯು ಸುಟ್ಟು ಭಸ್ಮ ಮಾಡುವಂತೆ ಈ ವಿಷಯವೆಂಬ ಅಗ್ನಿಯು ನನ್ನ ಅಂಗಾಂಗಗಳನ್ನು ಸುಡುತ್ತಿದೆ.

ನಹಿ ತಂ ವೇದ ಪಾರ್ಥೋಽಪಿ ಭ್ರಾತರಂ ಶ್ವೇತವಾಹನಃ।
ನಾಹಂ ನ ಭೀಮೋ ನ ಯಮೌ ಸ ತ್ವಸ್ಮಾನ್ ವೇದ ಸುವ್ರತಃ ॥೨೫॥

ನನಗಷ್ಟೇ ಅಲ್ಲ, ನನ್ನ ತಮ್ಮನಾದ ಶ್ವೇತವಾಹನನಾದ ಅರ್ಜುನನಿಗೂ ಕೂಡ ಕರ್ಣನು ತನ್ನ ಅಣ್ಣನೆಂಬ ವಿಷಯವು ತಿಳಿದೇ ಇರಲಿಲ್ಲ. ಭೀಮಸೇನನಿಗೂ ತಿಳಿದಿರಲಿಲ್ಲ. ನಕುಲ-ಸಹದೇವರಿಗೂ ಕೂಡ ತಿಳಿದಿರಲಿಲ್ಲ. ಆದರೆ ವ್ರತನಿಷ್ಠನಾದ ಆ ಕರ್ಣನಿಗೆ ನಾವೆಲ್ಲರೂ ಅವನ ತಮ್ಮಂದಿರು ಎಂಬ ವಿಚಾರವು ತಿಳಿದಿತ್ತು.

ಗತಾ ಕಿಲ ಪೃಥಾ ತಸ್ಯ ಸಕಾಶಮಿತಿ ನಃ ಶ್ರುತಮ್।
ಅಸ್ಮಾಕಂ ಶಮಕಾಮಾ ವೈ ತ್ವಂ ಚ ಪುತ್ರೋ ಮಮೇತ್ಯಥ ॥೨೬॥

ಕರ್ಣನ ಜೊತೆ ನಮಗೆ ಸಂಧಿ ಮಾಡಿಸಬೇಕೆಂಬ ಇಚ್ಛೆಯಿಂದ ಕುಂತೀದೇವಿಯು ಹಿಂದೊಮ್ಮೆ ಕರ್ಣನ ಬಳಿ ತೆರಳಿದ್ದಳೆಂಬ ವಾರ್ತೆಯನ್ನು ನಾವು ಕೇಳಿದ್ದೇವೆ. ಕರ್ಣನ ಬಳಿ ತೆರಳಿದ ಕುಂತಿಯು ''ನೀನು ನನ್ನ ಮಗ'' ಎಂದು ಹೇಳಿದಳಂತೆ.

ಪೃಥಾಯ ನ ಕೃತಃ ಕಾಮಸ್ತೇನ ಚಾಪಿ ಮಹಾತ್ಮನಾ ।
ಅಪಿ ಪಶ್ಚಾದಿದಂ ಮಾತರ್ಯವೋಚದಿತಿ ನಃ ಶ್ರುತಮ್ ॥೨೭॥

ಪೃಥೆಯ ಅಭಿಲಾಷೆಯನ್ನು ಮಾತ್ರ ಆ ಕರ್ಣನು ಪೂರೈಸಲಿಲ್ಲ. ಅಲ್ಲದೇ ಮಹಾತ್ಮನಾದ ಕರ್ಣನು ನಮ್ಮ ತಾಯಿಯ ಬಳಿ ಮುಂದಿನ ಮಾತುಗಳನ್ನು ಹೇಳಿದನೆಂದು ಕೇಳಿದ್ದೇನೆ.

ನಹಿ ಶಕ್ಷ್ಯಾಮ್ಯಹಂ ತ್ಯಕ್ತುಂ ನೃಪಂ ದುರ್ಯೋಧನಂ ರಣೇ ।
ಅನಾರ್ಯತ್ವಂ ನೃಶಂಸತ್ವಂ ಚ ಕೃತಘ್ನತ್ವಂ ಚ ಮೇ ಭವೇತ್ ॥೨೮॥

ಮಹಾಯುದ್ಧ ನಡೆಯುವ ಇಂಥ ಇಂಥ ಸಂದರ್ಭದಲ್ಲಿ ದುರ್ಯೋಧನನ ಪಕ್ಷವನ್ನು ಪರಿತ್ಯಾಗ ಮಾಡಲು ನನಗೆ ಸಾಧ್ಯವೇ ಇಲ್ಲ. ಹಾಗೇನಾದರೂ ದುರ್ಯೋಧನನ್ನು ಪರಿತ್ಯಾಗ ಮಾಡಿ, ಪಾಂಡವರ ಪಕ್ಷಕ್ಕೆ ನಾನು ಸೇರಿದರೆ ನನಗೆ 'ಅನಾರ್ಯತ್ವ, ನೃಶಂಸತ್ವ, ಕೃತಘ್ನತ್ವ' ಇತ್ಯಾದಿ ದೋಷಗಳು ಬರುತ್ತವೆ.

ವಿವರಣೆ - 'ಅನಾರ್ಯತ್ವ' = ನೀಚನಾಗುವಿಕೆ, 'ನೃಶಂಸತ್ವ' = ಕ್ರೂರಿಯಾಗುವಿಕೆ, 'ಕೃತಘ್ನತ್ವ' = ಉಪಕಾರಸ್ಮರಣೆ ಇಲ್ಲದಿರುವಿಕೆ. ಎಲ್ಲಾ ಜನರು ನನ್ನನ್ನು ನೀಚನೆಂದು, ಕ್ರೂರಿಯೆಂದು ಉಪಕಾರಸ್ಮರಣೆ ಇಲ್ಲದವನೆಂದು ನಿಂದಿಸುತ್ತಾರೆ ಆದ್ದರಿಂದ ನಾನು ದುರ್ಯೋಧನನ ಪಕ್ಷವನ್ನು ಪರಿತ್ಯಾಗ ಮಾಡುವುದಿಲ್ಲ ಎಂಬುದು ಕರ್ಣನ ಅಭಿಪ್ರಾಯ.

ಯುಧಿಷ್ಠಿರೇಣ ಸಂಧಿಂ ಚ ಯದಿ ಕುರ್ಯಾಂ ಮತೇ ತವ ।
ಭೀತೋ ರಣೇ ಶ್ವೇತವಾಹಾದಿತಿ ಮಾಂ ಮಂಸ್ಯತೇ ಜನಃ ॥೨೯॥

ಒಂದು ವೇಳೆ ನೀನು ಹೇಳುವಂತೆ ಯುಧಿಷ್ಠಿರನ ಜೊತೆ ಸಂಧಿಯನ್ನು ನಾನು ಮಾಡಿಕೊಳ್ಳುವುದಾದರೆ, ಆಗ ಜನರೆಲ್ಲರು ನನ್ನನ್ನು ನಿಂದಿಸುತ್ತಾರೆ. ಅರ್ಜುನನಿಗೆ ಭಯಪಟ್ಟು ಕರ್ಣನು ಯುಧಿಷ್ಠಿರನ ಜೊತೆ ಸಂಧಿಮಾಡಿಕೊಂಡನೆಂದು ತಿಳಿದು-ಬಿಡುತ್ತಾರೆ.

ಸೋಽಹಂ ನಿರ್ಜಿತ್ಯ ಸಮರೇ ವಿಜಯಂ ಸಹಕೇಶವಮ್ ।
ಸಂಧಾಸ್ಯೇ ಧರ್ಮಪುತ್ರೇಣ ಪಶ್ಚಾದಿತಿ ಚ ಸೋಽಬ್ರವೀತ್ ॥೩೦॥

ಆದ್ದರಿಂದ ನಾನು ರಣರಂಗದಲ್ಲಿ ಮೊದಲು ಕೃಷ್ಣನಿಂದ ಕೂಡಿದ ಆ ಅರ್ಜುನನನ್ನು ಸೋಲಿಸುತ್ತೇನೆ. ಅನಂತರ ನೀನು ಹೇಳಿದಂತೆ ಧರ್ಮರಾಜನ ಜೊತೆ ಸಂಧಾನ ಮಾಡಿಕೊಳ್ಳುತ್ತೇನೆ. ಹೀಗೆ ಕರ್ಣನು ನಮ್ಮ ತಾಯಿಗೆ ಹೇಳಿದನು.

ತಮವೋಚತ್ ಕಿಲ ಪೃಥಾ ಪುನಃ ಪುಥುಳವಕ್ಷಸಮ್ ।
ಚತುರ್ಣಾಮಭಯಂ ದೇಹಿ ಕಾಮಂ ಯುದ್ಧ್ಯಸ್ವ ಫಲ್ಗುನಮ್ ॥೩೧॥

ಕರ್ಣನ ಮಾತನ್ನು ಕೇಳಿದ ಆ ಕುಂತಿಯು ವಿಶಾಲವಾದ ವಕ್ಷಸ್ಥಳದಿಂದ ಕೂಡಿದ ತನ್ನ ಹಿರಿಯ ಮಗನಾದ ಕರ್ಣನನ್ನು ಕುರಿತು ಹೀಗೆ ಹೇಳಿದಳು - ''ಅರ್ಜುನನ ಜೊತೆ ನೀನು ಇಚ್ಛೆ ಬಂದಂತೆ ಯುದ್ಧ ಮಾಡು. ಆದರೆ ಉಳಿದ ನಾಕುಮಂದಿ ನನ್ನ ಮಕ್ಕಳನ್ನು ಕೊಲ್ಲುವುದಿಲ್ಲ'' ಎಂಬುದಾಗಿ ನನಗೆ ಅಭಯಪ್ರದಾನ ಮಾಡು.

ಸೋಽಬ್ರವೀನ್ಮಾತರಂ ಧೀಮಾನ್ ವೇಪಮಾನಃ ಕೃತಾಂಜಲಿಃ ।

ಕಣ್ಣೀರು ಸುರಿಸುತ್ತಾ, ನಡುಗುತ್ತಿರುವ ತನ್ನ ತಾಯಿಯನ್ನು ಕುರಿತು ಧೀಮಂತನಾದ ಕರ್ಣನು ಕೈಮುಗಿದನು. ಮತ್ತು ಹೀಗೆ ಅಭಯದಾನ ಮಾಡಿದನು.

ಪ್ರಾಪ್ತಾನ್ ವಿಷಹ್ಯಾಂಶ್ಚತುರೋ ನ ಹನಿಷ್ಯಾಮಿ ತೇ ಸುತಾನ್॥೩೨॥

ಪಂಚೈವ ಹಿ ಸುತಾ ಮಾತರ್ಭವಿಷ್ಯಂತಿ ಹಿ ತೇ ಧ್ರುವಮ್ ।
ಸಕರ್ಣಾ ವಾ ಹತೇ ಪಾರ್ಥೇ ಸಾರ್ಜುನಾ ವಾ ಹತೇ ಮಹಿ ॥೩೩॥

ತಾಯಿಯೇ ! ಅರ್ಜುನನ್ನು ಬಿಟ್ಟು ಉಳಿದ ಆ ನಿನ್ನ ನಾಕುಮಂದಿ ಮಕ್ಕಳನ್ನು ಯುದ್ಧದಲ್ಲಿ ನಾನು ಸಂಹಾರ ಮಾಡಲಾರೆ. ನನ್ನಿಂದ ಅವರು ಸೋಲುತ್ತಾರೆ. ಮತ್ತು ಅವರನ್ನು ಸಂಹಾರ ಮಾಡುವ ಸಾಮರ್ಥ್ಯವೂ ನನಗಿದೆ. ಆದರೂ ನಿನಗೆ ಈಗ ಕೊಡುತ್ತಿರುವ ಮಾತಿನಂತೆ ನಾನು ಅವರನ್ನು ಕೊಲ್ಲುವುದಿಲ್ಲ. ಒಂದು ವೇಳೆ ಆ

ರಣರಂಗದಲ್ಲಿ ಅರ್ಜುನನು ಸತ್ತರೆ ಕರ್ಣನನ್ನು ಸೇರಿಸಿಕೊಂಡು ನಿನಗೆ ಐದುಮಂದಿ ಮಕ್ಕಳು ಉಳಿಯುತ್ತಾರೆ. ಒಂದುವೇಳೆ ಕರ್ಣನು ಮೃತಪಟ್ಟರೆ, ಅರ್ಜುನನ್ನು ಸೇರಿಸಿಕೊಂಡು ನಿನಗೆ ಐದುಮಂದಿ ಮಕ್ಕಳು ಉಳಿಯುತ್ತಾರೆ. ಏನೇ ಆದರೂ ನಿನಗೆ ಐದುಮಂದಿ ಮಕ್ಕಳು ಉಳಿಯುವುದರಲ್ಲಿ ಸಂಶಯವಿಲ್ಲ. ಇದು ನಿಶ್ಚಯ.

ಟಿಪ್ಪಣಿ - ಪ್ರಾಪ್ತಾನ್ ವಿಷಹ್ಯಾಂಶ್ಚತುರ ಇತ್ಯತ್ರ ವಿಷಹ್ಯಾನ್ ವಿಶೇಷೇಣ ಸೋಢುಂ ಶಕ್ಯಾನ್, ಸಂಹರ್ತುಂ ಶಕ್ಯನಾಪೀತಿ ಯಾವತ್ ॥

'ವಿಷಹ್ಯಾನ್' ಎಂದರೆ ಉಳಿದ ನಾಲ್ವರನ್ನು ಎದುರಿಸಲು ಸಮರ್ಥನಾಗಿದ್ದೇನೆ. ಸಂಹಾರ ಮಾಡಲು ಸಮರ್ಥನಾಗಿದ್ದೇನೆ ಎಂದಭಿಪ್ರಾಯ.

ತಂ ಪುತ್ರಗೃದ್ಧಿನೀ ಭೂಯೋ ಮಾತಾ ಪುತ್ರಮಥಾಬ್ರವೀತ್ ।
ಭ್ರಾತೄಣಾಂ ಸ್ವಸ್ತಿ ಕುರ್ವೀಥಾ ಯೇಷಾಂ ಸ್ವಸ್ತಿ ಚಿಕೀರ್ಷಸಿ ॥೩೪॥

ಕರ್ಣನ ಮಾತನ್ನು ಕೇಳಿದ ಕುಂತೀದೇವಿಯು ಎಲ್ಲಾ ಮಕ್ಕಳಿಗೆ ಹಿತವನ್ನು ಅಪೇಕ್ಷಿಸುವವಳಾಗಿ ಪುನಃ ತನ್ನ ಜ್ಯೇಷ್ಠಪುತ್ರನನ್ನು ಕುರಿತು ಹೀಗೆ ಹೇಳಿದಳು - ''ನೀನು ಯಾವ ನಾಕುಮಂದಿ ನಿನ್ನ ಸಹೋದರರಿಗೆ ಕಲ್ಯಾಣವನ್ನು ಅಪೇಕ್ಷಿಸುತ್ತೀಯೋ, ಆ ನಾಕುಮಂದಿ ಸಹೋದರರ ವಿಷಯದಲ್ಲಿ ಅವಶ್ಯವಾಗಿ ಮಂಗಳವನ್ನು ಉಂಟುಮಾಡುವಂತೆ ನಡೆದುಕೋ''.

ತಮೇವಮುಕ್ತ್ವಾ ತು ಪೃಥಾ ವಿಸೃಜ್ಯೋಪಯಯೌ ಗೃಹಾನ್ ॥೩೫॥

ಹೀಗೆ ತನ್ನ ಹಿರಿಯ ಮಗನಿಗೆ ಹೇಳಿ ಕುಂತಿಯು ಆ ಕರ್ಣನನ್ನು ಅಲ್ಲಿಯೇ ಬಿಟ್ಟು ಮನೆಗೆ ವಾಪಸ್ಸು ಬಂದಳು.

ಸೋಽರ್ಜುನೇನ ಹತೋ ವೀರೋ ಭ್ರಾತಾ ಭ್ರಾತ್ರಾ ಸಹೋದರಃ।
ನಚೈವ ವಿವೃತೋ ಮಂತ್ರಃ ಪೃಥಾಯಾಸ್ತಸ್ಯ ವಾ ಮುನೇ ॥೩೬॥

ಓ ನಾರದಮುನಿಗಳೇ! ಇಂಥ ಕರ್ಣನನ್ನು ಅರ್ಜುನನೇ ಸಂಹಾರ ಮಾಡಿದನು. ಸ್ವತಃ ತಮ್ಮನೇ ಅಣ್ಣನನ್ನು ಕೊಂದನು. ಕರ್ಣನು ನಮ್ಮ ಸಹೋದರನೆಂಬ

ರಹಸ್ಯವನ್ನು ಕೊನೆಯತನಕ ಕುಂತಿಯು ನಮಗೆ ತಿಳಿಸಲೇ ಇಲ್ಲ. ಕರ್ಣನೂ ಕೂಡ ತಿಳಿಸಲಿಲ್ಲ.

ಅಥ ಶೂರೋ ಮಹೇಷ್ವಾಸಃ ಪಾರ್ಥೇನಾಸೌ ನಿಪಾತಿತಃ।
ಅಹಂ ತ್ವಜ್ಞಾಸಿಷಂ ಪಶ್ಚಾತ್ ಸ್ವಸೋದರ್ಯಂ ದ್ವಿಜೋತ್ತಮ ॥೩೭॥

ಪೂರ್ವಜಂ ಭ್ರಾತರಂ ಕರ್ಣಂ ಪೃಥಾಯಾ ವಚನಾತ್ ಪ್ರಭೋ।
ತೇನ ಮೇ ದೂಯತೇಽತೀವ ಹೃದಯಂ ಭ್ರಾತೃಘಾತಿನಃ ॥೩೮॥

ಓ ಬ್ರಾಹ್ಮಣಶ್ರೇಷ್ಠರೇ ! ಯಾವ ಕಾರಣದಿಂದ ಕರ್ಣನು ನಮ್ಮ ಹಿರಿಯಣ್ಣನಾಗಿದ್ದಾನೆಂಬ ವಿಚಾರವನ್ನು ನಾವು ತಿಳಿಯಲಿಲ್ಲವೋ, ಆ ಕಾರಣದಿಂದ ಅರ್ಜುನನು ಮಹಾಧನುಷ್ಮಂತನಾದ ಕರ್ಣನನ್ನು ಯುದ್ಧದಲ್ಲಿ ಕೊಂದುಬಿಟ್ಟನು. ಆ ಕರ್ಣನು ಸತ್ತ ಬಳಿಕ ನಾನು ನಮ್ಮ ತಾಯಿಯ ಮೂಲಕ ಕರ್ಣನು ನಮ್ಮ ಹಿರಿಯಣ್ಣನೆಂದು ತಿಳಿದುಕೊಂಡೆನು. ಅಣ್ಣನ ಕೊಲೆಗೆ ಕಾರಣನಾದ ನನ್ನ ಹೃದಯವು ಬಹಳವಾಗಿ ಸಂತಾಪಪಡುತ್ತಿದೆ.

ಕರ್ಣಾರ್ಜುನಸಹಾಯೋಽಹಂ ಜಯೇಯಮಪಿ ವಾಸವಮ್।

ಕರ್ಣ ಮತ್ತು ಅರ್ಜುನ ಇವರಿಬ್ಬರ ಸಹಾಯವು ನನಗೆ ಇದ್ದಿದ್ದರೆ ನಾನು ದೇವರಾಜನಾದ ಇಂದ್ರನನ್ನೂ ಕೂಡ ಗೆದ್ದು ಬಿಡುತ್ತಿದ್ದೆ.

ಸಭಾಯಾಂ ಕ್ಲಿಶ್ಯಮಾನಸ್ಯ ಧಾರ್ತರಾಷ್ಟ್ರೈರ್ದುರಾತ್ಮಭಿಃ।
ಸಹಸೋತ್ಪತಿತಃ ಕ್ರೋಧಃ ಕರ್ಣಂ ದೃಷ್ಟ್ವಾ ಪ್ರಶಾಮ್ಯತಿ ॥೩೯॥

ದುರಾತ್ಮರಾದ ಆ ಧೃತರಾಷ್ಟ್ರನ ಮಕ್ಕಳು ಆ ಸಭೆಯಲ್ಲಿ ನನಗೆ ಬಹಳ ದುಃಖವನ್ನು ಉಂಟುಮಾಡುತ್ತಿದ್ದರು. ಆ ಕ್ಷಣದಲ್ಲಿ ನನಗೆ ಕೋಪವು ಮಿತಿಮೀರಿ ಬರುತ್ತಿತ್ತು. ಆದರೆ ಕರ್ಣನನ್ನು ನೋಡಿದ ಕೂಡಲೇ ಆ ಕೋಪವು ಶಾಂತವಾಗುತ್ತಿತ್ತು.

ಯದಾ ಹ್ಯಸ್ಯ ಗಿರೋ ರೂಕ್ಷಾಃ ಶೃಣೋಮಿ ಕಟುಕೋದಯಾಃ।
ಸಭಾಯಾಂ ಗದತೋ ದ್ಯೂತೇ ದುರ್ಯೋಧನಹಿತೈಷಿಣಃ।
ತದಾ ನಶ್ಯತಿ ಮೇ ಕ್ರೋಧಃ ಪಾದೌ ತಸ್ಯ ನಿರೀಕ್ಷ್ಯ ಹ ॥೩೯॥

ದ್ಯೂತವು ನಡೆಯುವ ಆ ತುಂಬಿದ ಸಭೆಯಲ್ಲಿ ದುರ್ಯೋಧನನಿಗೆ ಸಂತೋಷವನ್ನು ಉಂಟುಮಾಡುವುದಕ್ಕಾಗಿ ಕರ್ಣನು ನನಗೆ ಕರ್ಣಕಠೋರವಾದ ಅತ್ಯಂತ ತೀಕ್ಷ್ಣವಾದ ಮಾತುಗಳಿಂದ ನಿಂದಿಸುತ್ತಿದ್ದನು. ಆ ಮಾತುಗಳನ್ನು ಕೇಳಿ, ನನಗೆ ಬಹಳ ಸಿಟ್ಟು ಬರುತ್ತಿತ್ತು. ಆದರೆ ಆ ಕರ್ಣನ ಎರಡು ಕಾಲುಗಳನ್ನು ನೋಡಿದಾಗ ನನ್ನ ಆ ಕೋಪವು ಶಾಂತವಾಗುತ್ತಿತ್ತು.

ಕುಂತ್ಯಾ ಹಿ ಸದೃಶೌ ಪಾದೌ ಕರ್ಣಸ್ಯೇತಿ ಮತಿರ್ಮಮ।
ಸಾದೃಶ್ಯಹೇತುಮನ್ವಿಚ್ಛನ್ ಪೃಥಾಯಾಸ್ತಸ್ಯ ಚೈವ ಹಿ।
ಕಾರಣಂ ನಾಧಿಗಚ್ಛಾಮಿ ಕಥಂಚಿದಪಿ ಚಿಂತಯನ್ ॥೪೦॥

ಈ ಕುಂತಿಯ ಪಾದಗಳಂತೆ ಕರ್ಣನ ಪಾದಗಳಿದ್ದವು. ಇದನ್ನು ನಾನು ಸ್ಪಷ್ಟವಾಗಿ ತಿಳಿದಿದ್ದೇನೆ. ಇವರಿಬ್ಬರ ಪಾದಗಳು ಒಂದೇ ಲಕ್ಷಣದಿಂದ ಕೂಡಿರಲು ಏನು ಕಾರಣ? ಎಂಬ ಜಿಜ್ಞಾಸೆ ಬಹಳ ಮೂಡುತ್ತಿತ್ತು. ಆದರೆ ಆ ಕಾರಣವನ್ನು ತಿಳಿದು-ಕೊಳ್ಳಲು ನನ್ನಿಂದ ಸಾಧ್ಯವಾಗಲಿಲ್ಲ. ಎಷ್ಟು ಪ್ರಯತ್ನಪಟ್ಟರೂ ಆ ವಿಷಯದಲ್ಲಿ ವಿಫಲನಾದೆ.

ಕಥಂ ನು ತಸ್ಯ ಸಂಗ್ರಾಮೇ ಪೃಥಿವೀ ಚಕ್ರಮಗ್ರಸತ್।
ಕಥಂಚ ಶಪ್ತೋ ಭ್ರಾತಾ ಮೇ ತತ್ತ್ವಂ ವಕ್ತುಮಿಹಾರ್ಹಸಿ ॥೪೧॥

ಓ ನಾರದರೇ ! ಆ ರಣರಂಗದಲ್ಲಿ ಕರ್ಣನ ರಥಚಕ್ರವನ್ನು ಭೂಮಿಯು ಹೇಗೆ ನುಂಗಿತು? ನನ್ನ ಹಿರಿಯಣ್ಣನಾದ ಆ ಕರ್ಣನಿಗೆ ಅಂಥ ಶಾಪವು ಏಕೆ ಬಂದಿತು? ಮತ್ತು ಯಾರಿಂದ ಆ ಶಾಪ ಬಂದಿತು? ಈ ಎಲ್ಲದರ ಬಗ್ಗೆ ಯಥಾರ್ಥವಾಗಿ ನನಗೆ ತಿಳಿಸಿರಿ.

ಶ್ರೋತುಮಿಚ್ಛಾಮಿ ಭಗವಂಸ್ತ್ವತ್ತಃ ಸರ್ವಂ ಯಥಾತಥಮ್ ।
ಭವಾನ್ ಹಿ ಸರ್ವವಿದ್ ವಿದ್ವಾಂಲ್ಲೋಕೇ ವೇದ ಕೃತಾಕೃತಮ್ ॥೪೨॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ
ರಾಜಧರ್ಮೇ ಪ್ರಥಮೋಽಧ್ಯಾಯಃ ॥೧॥

ಓ ಪೂಜ್ಯರೇ! ತಾವು ಎಲ್ಲವನ್ನೂ ಕೂಡ ತಿಳಿದವರಾಗಿದ್ದೀರಿ. ವಿದ್ವಾಂಸರಾಗಿದ್ದೀರಿ. ಹಿಂದೆ ನಡೆದದ್ದನ್ನು ಮತ್ತು ಮುಂದೆ ನಡೆಯುವುದನ್ನು ಸ್ಪಷ್ಟವಾಗಿ ತಿಳಿದಿರುತ್ತೀರಿ. ಆದ್ದರಿಂದ ಈ ಎಲ್ಲಾ ವಿಷಯವನ್ನು ಯಥಾರ್ಥವಾಗಿ ತಮ್ಮಿಂದ ಕೇಳಿ ತಿಳಿದುಕೊಳ್ಳಲು ಅಪೇಕ್ಷಿಸುತ್ತೇನೆ.

ವಿಶೇಷವಿಚಾರ - ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಶಾಂತಿಪರ್ವದ ಪ್ರಾರಂಭವು ಚಾರ್ವಾಕ ಎಂಬ ತ್ರಿದಂಡಿ ಸನ್ಯಾಸಿಯ ಸಂವಾದದಿಂದ ಪ್ರಾರಂಭವಾಗುತ್ತದೆ. ಆದರೆ ಮೂಲ ಮಹಾಭಾರತದಲ್ಲಿ ಗಂಗಾತೀರಕ್ಕೆ ಶೌಚಾಚಾರವನ್ನು ಆಚರಣೆ ಮಾಡುವುದಕ್ಕಾಗಿ ಪಾಂಡವರು ತೆರಳಿದರು ಎಂಬ ಕಥೆಯಿಂದ ಪ್ರಾರಂಭವಾಗುತ್ತದೆ. ಈ ವ್ಯತ್ಯಾಸವನ್ನು ಗಮನಿಸಬೇಕು.

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಮೊದಲನೆಯ ಅಧ್ಯಾಯವು ಮುಗಿಯಿತು.

* * * * * *

೨. ಎರಡನೆಯ ಅಧ್ಯಾಯ

ಬ್ರಹ್ಮಾಸ್ತ್ರವನ್ನು ಪಡೆಯಬೇಕೆಂಬ ಇಚ್ಛೆ ಕರ್ಣನಿಗೆ ಉಂಟಾಯಿತು. ದ್ರೋಣಾಚಾರ್ಯರ ಬಳಿ ತೆರಳಿದಾಗ ಅದು ದೊರಕಲಿಲ್ಲ ಎಂಬ ಉದ್ದೇಶದಿಂದ ಪರಶುರಾಮದೇವರ ಬಳಿ, ತಾನು ಬ್ರಾಹ್ಮಣನೆಂದು ಹೇಳಿಕೊಂಡನು. ಅದಕ್ಕಾಗಿ ಅವರ ಶಿಷ್ಯತ್ವವನ್ನು ವಹಿಸಿದನು. ಅಲ್ಲಿ ಪ್ರಮಾದ- ದಿಂದ ಬ್ರಾಹ್ಮಣರ ಹಸುವಿನ ಕರುವನ್ನು ಕೊಂದುಬಿಟ್ಟನು. ಇದರಿಂದ ಕರ್ಣನಿಗೆ ಆ ಬ್ರಾಹ್ಮಣನ ಶಾಪವು ಉಂಟಾಯಿತು.

ವೈಶಂಪಾಯನಃ

ಸ ಏವಮುಕ್ತಸ್ತು ಮನಿರ್ನಾರದೋ ವದತಾಂ ವರಃ ।
ಕಥಯಾಮಾಸ ತತ್ ಸರ್ವಂ ಯಥಾ ಶಪ್ತಃ ಸ ಸೂತಜಃ ॥೧॥

ವೈಶಂಪಾಯನರು – ಓ ರಾಜನೇ! ವಾಗ್ಮಿಗಳಲ್ಲೇ ಶ್ರೇಷ್ಠರಾದ ಆ ನಾರದ-ಮುನಿಗಳು ಧರ್ಮರಾಜನಿಂದ ಹೀಗೆ ಪ್ರಾರ್ಥಿಸಲ್ಪಟ್ಟರು - ಆ ಧರ್ಮರಾಜನಿಗೆ ಎಲ್ಲವನ್ನು ತಿಳಿಸುವುದಕ್ಕಾಗಿ ಕರ್ಣನು ಆ ಬ್ರಾಹ್ಮಣನಿಂದ ಹೇಗೆ ಶಾಪಕ್ಕೀಡಾದನು ಎಂಬುದನ್ನು ನಾರದರು ಹೇಳಲು ಪ್ರಾರಂಭ ಮಾಡಿದರು.

ಏವಮೇತನ್ಮಹಾಬಾಹೋ ಯಥಾ ವದಸಿ ಭಾರತ।
ನ ಕರ್ಣಾರ್ಜುನಯೋಃ ಕಿಂಚಿದವಿಷಹ್ಯಂ ಭವೇದ್ ರಣೇ ॥೨॥

ಓ ಮಹಾಬಾಹುವಾದ ಯುಧಿಷ್ಠಿರನೇ ! ನೀನು ಹೇಳಿದ್ದು ಸರಿ. ಕರ್ಣ ಮತ್ತು ಅರ್ಜುನರಿಗೆ ಯುದ್ಧದಲ್ಲಿ ಸಾಧಿಸಲು ಆಗದೇ ಇರುವುದು ಯಾವುದೂ ಇಲ್ಲ. ಇವರಿಬ್ಬರೂ ಸೇರಿದರೆ ದೇವೇಂದ್ರನನ್ನೂ ಕೂಡ ಸೋಲಿಸುತ್ತಾರೆ.

ಗುಹ್ಯಮೇತತ್ತು ದೇವಾನಾಂ ಕಥಯಿಷ್ಯಾಮಿ ತೇ ನೃಪ।
ತನ್ನಿಬೋಧ ಮಹಾರಾಜ ಯಥಾ ವೃತ್ತಮಿದಂ ಪುರಾ ॥೩॥

ಓ ರಾಜನೇ ! ಇದು ದೇವಗುಹ್ಯವಾದ ವಿಚಾರ. ಅದನ್ನು ನಿನಗೆ ತಿಳಿಸಲು ಇಚ್ಛಿಸುತ್ತೇನೆ. ಹಿಂದೆ ಇದು ಹೇಗೆ ನಡೆಯಿತು ಎಂಬುದನ್ನು ಯಥಾವತ್ತಾಗಿ ಹೇಳು-ತ್ತೇನೆ ಕೇಳು.

ವಿವರಣೆ - ಕರ್ಣ ಮತ್ತು ಅರ್ಜುನರು ಒಟ್ಟಿಗೆ ಸ್ನೇಹದಿಂದ ಸೇರಬಾರ-ದೆಂಬುದೇ ದೇವತೆಗಳ ಅಭಿಲಾಷೆ. ಆದ್ದರಿಂದ ಕರ್ಣನು ಅರ್ಜುನನಿಂದ ಸಂಹಾರವನ್ನು ಹೊಂದುವುದಕ್ಕಾಗಿ ಅನೇಕ ಹಂತಗಳಲ್ಲಿ ದೇವತೆಗಳು ಉಪಾಯಗಳನ್ನು ಮಾಡುತ್ತಾ ಬಂದರು. ಅದನ್ನು ನಿನಗೆ ತಿಳಿಸುತ್ತೇನೆ ಎಂಬುದು ಇದರ ಅಭಿಪ್ರಾಯ.

ಕ್ಷತ್ರಂ ಸ್ವರ್ಗಂ ಕಥಂ ಗಚ್ಛೇಚ್ಛಸ್ತ್ರಪೂತಮಿತಿ ಪ್ರಭೋ।
ಸಂಘರ್ಷಜನನಸ್ತಸ್ಮಾತ್ ಕನ್ಯಾಗರ್ಭೋ ವಿನಿರ್ಮಿತಃ ॥೪॥

ಓ ಪ್ರಭುವೇ ! ಹಿಂದೊಮ್ಮೆ ದೇವತೆಗಳು ಹೀಗೆ ವಿಚಾರವನ್ನು ಮಾಡಿದರು - ಈ ಭೂಮಂಡಲದಲ್ಲಿರುವ ಎಲ್ಲಾ ಕ್ಷತ್ರಿಯರು ಶಸ್ತ್ರಗಳ ಆಘಾತದಿಂದ ಪವಿತ್ರರಾಗಿ

ಸ್ವರ್ಗಲೋಕಕ್ಕೆ ಹೇಗೆ ಹೋಗುತ್ತಾರೆ? ಇದಕ್ಕೆ ಏನು ಮಾಡಬೇಕು? ಎಂದು ಯೋಚನೆ ಮಾಡಿದರು. ಆಗ ದೇವತೆಗಳು ಕ್ಷತ್ರಿಯರಲ್ಲಿ ಪರಸ್ಪರ ಸಂಘರ್ಷವನ್ನು ಉಂಟುಮಾಡುವುದಕ್ಕಾಗಿ ಸೂರ್ಯನ ಮೂಲಕ ಕುಮಾರಿಯಾದ ಕುಂತಿಯ ಗರ್ಭದಲ್ಲಿ ಒಬ್ಬ ತೇಜಸ್ವಿಯಾದ ಬಾಲಕನನ್ನು ಹುಟ್ಟಿಸಿದರು. ಅವನೇ ಈ ಕ್ಷತ್ರಿಯರ ಪರಸ್ಪರ ಸಂಘರ್ಷಕ್ಕೆ ಮೂಲಕಾರಣನಾದನು.

ವಿವರಣೆ - ಭೂಮಿಯಲ್ಲಿ ಕ್ಷತ್ರಿಯರು ತುಂಬಿದ್ದಾರೆ. ಇವರು ಶಸ್ತ್ರಾಸ್ತ್ರಗಳಿಂದ ಮೃತರಾಗಿ ಸ್ವರ್ಗಸ್ಥರಾಗಬೇಕು. ಆದರೆ ಇದಕ್ಕೆ ಏನು ವಿಧಾನ? ಎಂದು ದೇವತೆಗಳು ಯೋಚನೆ ಮಾಡಿದರು. ಪರಸ್ಪರಸಂಘರ್ಷ ಮಾಡಿದರೆ ಶಸ್ತ್ರ-ಪ್ರಹಾರಗಳಿಂದ ಎಲ್ಲ ಕ್ಷತ್ರಿಯರು ಪವಿತ್ರರಾಗುತ್ತಾರೆ. ಅದರಿಂದ ಸ್ವರ್ಗವನ್ನು ಅವರು ಪಡೆಯಬಹುದು. ಹೀಗೆ ಯೋಚನೆಯನ್ನು ಮಾಡಿ, ಆ ಪರಸ್ಪರ-ಸಂಘರ್ಷಕ್ಕೆ ಕಾರಣವಾದ ಗರ್ಭವನ್ನು ಕುಂತಿಯ ಉದರದಲ್ಲಿಟ್ಟರು. ಇದಕ್ಕೆ ಸೂರ್ಯನನ್ನು ನಿಮಿತ್ತವನ್ನಾಗಿ ಮಾಡಿಕೊಂಡರು ಎಂಬುದು ಈ ಶ್ಲೋಕದ ಸಾರಾಂಶ.

ಕ್ಷತ್ರಂ ಸ್ವರ್ಗಂ ಕಥಂ ಗಚ್ಛೇಚ್ಛಸ್ತ್ರಪೂತಮಿತಿ ಪ್ರಭೋ।
ಸಂಘರ್ಷಜನನಸ್ತಸ್ಮಾತ್ ಕನ್ಯಾಗರ್ಭೋ ವಿನಿರ್ಮಿತಃ॥

ಇತ್ಯತ್ರ ಅಯಂ ಭಾವಃ। ಕರ್ಣಸ್ಯ ಕ್ಷತ್ರಿಯಾಯಾಂ ಜನನಾಭಾವೇ ಕ್ಷತ್ರಂ ಶಸ್ತ್ರಪೂತಂ ಸ್ವರ್ಗಂ ಗಚ್ಛೇದಿತಿ ಪ್ರಮೇಯಂ ನ ಸಿದ್ಧ್ಯೇತ್ । ಅತಃ ಕ್ಷತ್ರಿಯಾಯಾಂ ಜನನಮಾವಶ್ಯಕಮ್। ತಚ್ಚಾರ್ಜುನಾದಿವತ್ ಸ್ಪಷ್ಟಂ ಕುಂತ್ಯಾಂ ಜನನೇ ಕ್ಷತ್ರಿಯತ್ವಸ್ಯ ಸುಪ್ರಸಿದ್ಧತ್ವಾತ್ ದ್ರೋಣಾದ್ವಾ ಪರಶುರಾಮಾದ್ವಾ-ಬ್ರಹ್ಮಕ್ಷತ್ರಯೋರುಭಯೋರಪಿ ಯೋಗ್ಯಂ ಬ್ರಹ್ಮಾಸ್ತ್ರಂ ಲಭೇತೈವ। ಬ್ರಹ್ಮಾಸ್ತ್ರಲಾಭೇ ಚ ಕರ್ಣಸ್ಯ ನ ಕುತಶ್ಚಿಚ್ಛಸ್ತ್ರಘಾತಃ ಸ್ಯಾತ್, ಪ್ರತ್ಯುತ ಸ್ವಶತ್ರುಮೇವ ತೇನ ಹನ್ಯಾತ್ । ಅತಶ್ಚ ಕರ್ಣಸ್ಯ ಶಸ್ತ್ರಘಾತಸಾಧ್ಯಸ್ವರ್ಗೋಽಪಿ ನ ಸ್ಯಾತ್ । ಕನ್ಯಾಗರ್ಭಾಜ್ಜನನೇ ತು ಕ್ಷತ್ರಜಾತಿರಪಿ ಜಾತಾ । ಪುನಃ ಸೂತಪುತ್ರತ್ವಪ್ರಸಿದ್ಧೌ ಚ ಬ್ರಹ್ಮಾಸ್ತ್ರಲಾಭೋಽಪಿ ನಾಭೂತ್ । ಅತಃ ಕ್ಷತ್ರಜಾತಿಮತಃ ಕರ್ಣಸ್ಯ ಶಸ್ತ್ರಪೂತಂ ಮರಣಮಪಿ ನ್ಯಾಯಪ್ರಾಪ್ತಮಿತ್ಯುಭಯಲಾಭಾಯ ಕನ್ಯಾಯಾಂ ಜನನಂ ದೇವೈರ್ನಿರ್ಮಿತಮಿತಿ ವಕ್ತುರ್ನಾರದಸ್ಯ ಹೃದಯಮಿತಿ। ಸಂಘರ್ಷಜನನಃ ದೇವಾನಾಮನ್ಯೋನ್ಯಂ ಸಂಘರ್ಷಣೇನ ಮಥನೇನ ಜನನಂ ಯಸ್ಯ। 'ಸಂಹರ್ಷಜನನಃ' ಇತಿ ಪಾಠೇ ಸ್ಪಷ್ಟೋಽರ್ಥಃ॥

ಈ ಶ್ಲೋಕದ ಅಭಿಪ್ರಾಯ ಹೀಗಿದೆ - ಕರ್ಣನು ಶಸ್ತ್ರಗಳಿಂದ ಪೂತನಾಗಿ ಸ್ವರ್ಗವನ್ನು ಪಡೆಯಬೇಕು ಎಂಬುದು ದೇವತೆಗಳ ಸಂಕಲ್ಪ. ಹಾಗಾಗಬೇಕೆಂದರೆ ಅವನು ಕ್ಷತ್ರಿಯನಾಗಬೇಕು. ಒಂದುವೇಳೆ ಕರ್ಣನು ಕ್ಷತ್ರಿಯಜಾತಿಯಲ್ಲಿ ಹುಟ್ಟದಿದ್ದರೆ ಶಸ್ತ್ರಪೂತನಾಗಿ ಸ್ವರ್ಗವನ್ನು ಹೊಂದಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಕರ್ಣನಿಗೆ ಕ್ಷತ್ರಿಯ ಜಾತಿಯಲ್ಲಿ ಹುಟ್ಟುವುದು ಅನಿವಾರ್ಯವಾಯಿತು. ಎಲ್ಲಾ ದೇವತೆಗಳು ಭಗವಂತನ ಸಂಕಲ್ಪದಂತೆ ಸೂರ್ಯನ ಮೂಲಕ ಕುಂತಿಯು ಕನ್ಯೆಯಾಗಿರುವಾಗ ಕುಂತಿಯ ಗರ್ಭದಿಂದ ಕರ್ಣನನ್ನು ಹುಟ್ಟುವಂತೆ ಮಾಡಿದರು. ಆದರೆ ಅರ್ಜುನಾದಿಗಳಂತೆ ಸ್ಪಷ್ಟವಾದ ಕ್ಷತ್ರಿಯರಿಗೆ ಮಾಡಬೇಕಾದ ಯಾವುದೇ ಸಂಸ್ಕಾರಗಳು ಕರ್ಣನಿಗೆ ಆಗಲಿಲ್ಲ. ಅರ್ಜುನಾದಿಗಳಂತೆ ಸ್ಪಷ್ಟವಾಗಿ ಕುಂತಿಯಲ್ಲಿ ಜನನವಾಗಿದ್ದರೆ ಅವನೂ ಕೂಡ ಅರ್ಜುನಾದಿಗಳಂತೆ ಕ್ಷತ್ರಿಯನೆಂದು ಪ್ರಸಿದ್ಧನಾಗುತ್ತಿದ್ದನು. ಆಗ ದ್ರೋಣಾಚಾರ್ಯರು, ಅಥವಾ ಪರಶುರಾಮದೇವರು ಅರ್ಜುನಾದಿಗಳಿಗೆ ಉಪದೇಶಿಸಿದಂತೆ ಕರ್ಣನಿಗೂ ಕೂಡ ಬ್ರಹ್ಮಾಸ್ತ್ರವನ್ನು ಉಪದೇಶ ಮಾಡುತ್ತಿದ್ದರು. ಏಕೆಂದರೆ ಬ್ರಹ್ಮಾಸ್ತ್ರವನ್ನು ಬ್ರಾಹ್ಮಣರಿಗೆ ಮತ್ತು ಕ್ಷತ್ರಿಯರಿಗೆ ಮಾತ್ರ ಉಪದೇಶ ಮಾಡಬೇಕು. ಆದರೆ ಕರ್ಣನಿಗೆ ಬ್ರಹ್ಮಾಸ್ತ್ರದ ಉಪದೇಶ ಆಗಬಾರದೆಂಬುದೇ ದೈವಸಂಕಲ್ಪ. ಒಂದುವೇಳೆ ಕರ್ಣನಿಗೆ ಬ್ರಹ್ಮಾಸ್ತ್ರದ ಲಾಭವಾದರೆ, ಕರ್ಣನು ಯಾವುದೇ ಶಸ್ತ್ರಘಾತವು ತನಗೆ ಆಗದಂತೆ ತನ್ನನ್ನು ರಕ್ಷಣೆ ಮಾಡಿಕೊಳ್ಳುತ್ತಿದ್ದನು. ಬ್ರಹ್ಮಾಸ್ತ್ರವೆಂಬ ದೊಡ್ಡ ಅಸ್ತ್ರದ ರಕ್ಷಣೆಯಿರುವ ಕರ್ಣನನ್ನು ಅರ್ಜುನನಿಗೆ ಕೊಲ್ಲಲು ಸಾಧ್ಯವಾಗುತ್ತಿರಲಿಲ್ಲ. ಹೊರತಾಗಿ ತಾನೇ ಅರ್ಜುನನ್ನು ಕೊಲ್ಲುತ್ತಿದ್ದನು. ಆದ್ದರಿಂದ ಕರ್ಣನನ್ನು ಕ್ಷತ್ರಿಯನನ್ನಾಗಿ ಹುಟ್ಟಿಸಿದರೂ ಕೂಡ ಕ್ಷತ್ರಿಯೋಚಿತವಾದ ಸಂಸ್ಕಾರಗಳನ್ನು ಮಾಡಿಕೊಳ್ಳಲು ಸಾಧ್ಯವಾಗದಂತೆ ವಿಧಿಯೇ ನಿರ್ಮಾಣ ಮಾಡಿತು. ಕ್ಷತ್ರಿಯೋಚಿತವಾದ ಸಂಸ್ಕಾರಗಳು ಆಗದ ಕಾರಣ ಕರ್ಣನಿಗೆ ಬ್ರಹ್ಮಾಸ್ತ್ರದ ಉಪದೇಶವು ಇರುವುದಿಲ್ಲ. ಕ್ಷತ್ರಿಯನಾಗಿ ಹುಟ್ಟಿದ ಕಾರಣ ಶಸ್ತ್ರಘಾತದಿಂದ ಪ್ರಾಪ್ತವಾಗುವ ಸ್ವರ್ಗವು ಅವನಿಗೆ ಉಂಟಾಯಿತು. ಕನ್ಯೆಯ ಗರ್ಭದಿಂದ ಹುಟ್ಟಿದ್ದರಿಂದ ಅವನು ಕ್ಷತ್ರಿಯನೇ ಆಗಿದ್ದಾನೆ. ಆದರೆ ಮುಂದೆ ಸೂತಪುತ್ರನೆಂದು ಪ್ರಸಿದ್ಧನಾದ ಕಾರಣ ಬ್ರಹ್ಮಾಸ್ತ್ರದ ಲಾಭವು ಅವನಿಗೆ ಆಗಲಿಲ್ಲ. ಹೀಗೆ ಕ್ಷತ್ರಿಯ ಜಾತಿ, ಶಸ್ತ್ರಪೂತವಾದ ಮರಣವೂ ಕೂಡ ನ್ಯಾಯಪ್ರಾಪ್ತವಾಗುತ್ತದೆ. ಈ ದೃಷ್ಟಿಯಿಂದ ಕನ್ಯೆಯಲ್ಲಿ ಕರ್ಣನ ಜನನನವನ್ನು ದೈವವು ನಿರ್ಮಾಣ ಮಾಡಿತು. ಇಷ್ಟು ನಾರದರ ಮಾತಿನ ಅಭಿಪ್ರಾಯವಾಗಿದೆ.

ವಿಮರ್ಶೆ - ಈ ಲಕ್ಷ್ಮಲಂಕಾರಭಾಗವನ್ನು ಪ್ರಕ್ಷಿಪ್ತವೆಂದೇ ಹೇಳಬೇಕು. ಭಾವೀಸಮೀರರೆಂದೇ ಪ್ರಸಿದ್ಧರಾದ ಶ್ರೀವಾದಿರಾಜರು ತಾತ್ಪರ್ಯನಿರ್ಣಯಕ್ಕೆ ವಿರುದ್ಧವಾಗಿ, ಮೂಲ ಮಹಾಭಾರತಕ್ಕೆ ಹೀಗೆ ವ್ಯಾಖ್ಯಾನ ಮಾಡಲು ಸಾಧ್ಯವಿಲ್ಲ. ಏಕೆಂದರೆ ಕರ್ಣನಿಗೆ ಬ್ರಹ್ಮಾಸ್ತ್ರದ ಉಪದೇಶವಿತ್ತು. ಮತ್ತು ಅದನ್ನು ಯುದ್ಧದಲ್ಲಿ ಪ್ರಯೋಗ ಮಾಡಿದನು ಎಂಬುದಕ್ಕೆ ಸ್ಪಷ್ಟ ಆಧಾರವಿದೆ. ಇದೇ ಶಾಂತಿಪರ್ವದ ಮೂರನೆಯ ಅಧ್ಯಾಯದ ಎರಡನೆಯ ಶ್ಲೋಕ ಹೀಗಿದೆ -

ತಸ್ಮೈ ಸ ವಿಧಿವತ್ ಕೃತ್ಸ್ನಂ ಬ್ರಹ್ಮಾಸ್ತ್ರಂ ಸನಿವರ್ತನಮ್ ।
ಪ್ರೋವಾಚಾಖಿಲಮವ್ಯಗ್ರಂ ತಪಸ್ವೀ ತತ್ ತಪಸ್ವಿನೇ ॥2॥

ಈ ಶ್ಲೋಕವು ಪರಶುರಾಮದೇವರು ವಿಧಿಪ್ರಕಾರವಾಗಿ ಬ್ರಹ್ಮಾಸ್ತ್ರವನ್ನು ಕರ್ಣನಿಗೆ ಉಪದೇಶಿಸಿದ್ದಾರೆಂದು ತಿಳಿಸುತ್ತಿದೆ. ಮತ್ತು ಮಹಾಭಾರತ ತಾತ್ಪರ್ಯನಿರ್ಣಯದ ೨೭ ನೇ ಅಧ್ಯಾಯದ ೧೮೧, ೧೮೨ ಈ ಎರಡು ಶ್ಲೋಕಗಳಲ್ಲಿ ಸ್ಪಷ್ಟವಾಗಿ ಕರ್ಣಾರ್ಜುನರಿಬ್ಬರೂ ಪರಸ್ಪರವಾಗಿ ಬ್ರಹ್ಮಾಸ್ತ್ರವನ್ನು ಪ್ರಯೋಗ ಮಾಡಿದರು. ಮತ್ತು ಅಸ್ತ್ರಗಳನ್ನು ಉಪಶಮನ ಮಾಡಿದರು ಎಂದು ಹೇಳಲಾಗಿದೆ. ಹಾಗೂ ಸರ್ಪಾಸ್ತ್ರವನ್ನು ಬಿಟ್ಟಾಗ ಕರ್ಣನು ಅದರಲ್ಲಿ ಬ್ರಹ್ಮಾಸ್ತ್ರಕ್ಕೆ ಉಪಯುಕ್ತವಾದ ಮಂತ್ರವನ್ನೂ ಕೂಡ ಅಭಿಮಂತ್ರಣೆ ಮಾಡಿದ್ದನೆಂದು ಆಚಾರ್ಯರು ನಿರ್ಣಯವನ್ನು ನೀಡಿದ್ದಾರೆ. ಆದ್ದರಿಂದ ಲಕ್ಷ್ಮಲಂಕಾರದ ಈ ವಾಕ್ಯದಲ್ಲಿ ಬ್ರಹ್ಮಾಸ್ತ್ರದ ಉಪದೇಶವು ಕರ್ಣನಿಗೆ ಇರುವುದಿಲ್ಲ ಎಂದು ಹೇಳಿದ್ದು ವಿರುದ್ಧವಾಗುತ್ತದೆ.

ಮಹಾಭಾರತತಾತ್ಪರ್ಯನಿರ್ಣಯದಲ್ಲಿರುವ ಹಾಗೂ ಮಹಾಭಾರತ-ದಲ್ಲಿರುವ 'ಬ್ರಹ್ಮಾಸ್ತ್ರ' ಎಂಬ ಶಬ್ದಕ್ಕೆ ಕೆಲವು ವಿದ್ವಾಂಸರುಗಳು ಆಗ್ನೇಯಾದ್ಯಸ್ತ್ರ ಎಂಬುದಾಗಿ ವ್ಯಾಖ್ಯಾನ ಮಾಡುತ್ತಾರೆ. ಇದು ಸರಿಯಲ್ಲ. ಕ್ಷತ್ರಿಯಸಂಸ್ಕಾರವನ್ನು ಹೊಂದದ ಕರ್ಣನಿಗೆ ವೇದಮಂತ್ರದಲ್ಲೇ ಅಧಿಕಾರವಿಲ್ಲ. ಪ್ರಸಿದ್ಧವಾದ ಗಾಯತ್ರಿ -ಯಿಂದ ಅಭಿಮಂತ್ರಣೆ ಮಾಡಿ, ಪ್ರಯೋಗಿಸಲ್ಪಡುವ ಬ್ರಹ್ಮಾಸ್ತ್ರಕ್ಕೆ ಅನಧಿಕಾರಿ-ಯಾದ ಮೇಲೆ ಆಗ್ನೇಯಾದ್ಯಸ್ತ್ರಗಳ ಪ್ರಯೋಗದಲ್ಲೂ ಕೂಡ ಅವನಿಗೆ ಅಧಿಕಾರ-ವಿರುವುದಿಲ್ಲ. ಬ್ರಹ್ಮಾಸ್ತ್ರವು ಹೇಗೆ ವೇದಮೂಲಕವೋ, ಆಗ್ನೇಯಾದ್ಯಸ್ತ್ರವೂ ಕೂಡ ವೇದಮೂಲಕವೇ ಆಗಿರುತ್ತದೆ. ಆಗ್ನೇಯಾದಿ ಮಂತ್ರಗಳನ್ನು ಸ್ವೀಕರಿಸಲು

ಕರ್ಣನಿಗೆ ಅಧಿಕಾರವಿದೆಯೆಂದು ಹೇಳುವುದಾದರೆ ಗಾಯತ್ರೀಮಂತ್ರವನ್ನು ಸ್ವೀಕರಿಸಲು ಕರ್ಣನಿಗೆ ಹೇಗೆ ಅಧಿಕಾರವಿರುವುದಿಲ್ಲ? ಮತ್ತು ಲಕ್ಷ್ಲಲಂಕಾರವನ್ನು ಆಧರಿಸಿ ವ್ಯಾಖ್ಯಾನ ಮಾಡುವ ವಿದ್ವಾಂಸರು ಒಂದುಕಡೆ ಆಗ್ನೇಯಾದ್ಯಸ್ತ್ರಗಳೆಂದು ವ್ಯಾಖ್ಯಾನ ಮಾಡುತ್ತಾರೆ. ಮತ್ತೊಂದು ಪಂಚಮವೇದೋಕ್ತ ಮಂತ್ರವೆಂದು ಹೇಳುತ್ತಾರೆ. ಆದ್ದರಿಂದ ನಿರ್ಧಾರಾತ್ಮಕವಾಗಿ ಲಕ್ಷ್ಲಲಂಕಾರವನ್ನು ವ್ಯಾಖ್ಯಾನಿಸಲು ಇಲ್ಲಿ ಅವರಿಗೂ ಸಾಧ್ಯವಾಗುವುದಿಲ್ಲ.

ಸ ಬಾಲಸ್ತೇಜಸಾ ಯುಕ್ತಃ ಸೂತಪುತ್ರತ್ವಮಾಗತಃ।
ಚಕಾರಾಂಗಿರಸಾಂ ಶ್ರೇಷ್ಠೇ ಧನುರ್ವೇದಂ ಗುರೌ ತವ ॥೫॥

ಆ ಬಾಲಕನು ಕುಂತಿಯ ಗರ್ಭದಲ್ಲಿ ಹುಟ್ಟಿದರೂ ಕೂಡ ಮುಂದೆ ಸೂತನ ಪುತ್ರನೆಂದು ಪ್ರಸಿದ್ಧನಾದನು. ಅವನು ಅಂಗೀರಸಗೋತ್ರದಲ್ಲಿ ಹುಟ್ಟಿದ ಬ್ರಾಹ್ಮಣ-ಶ್ರೇಷ್ಠರಾದ ನಿನ್ನ ಗುರುಗಳೇ ಆದ ದ್ರೋಣಾಚಾರ್ಯರಿಂದ ಧನುರ್ವೇದವನ್ನು ಅಧ್ಯಯನ ಮಾಡಿದನು.

ಸ ಬಲಂ ಭೀಮಸೇನಸ್ಯ ಫಲ್ಗುನಸ್ಯ ಚ ಲಾಘವಮ್।
ಬುದ್ಧಿಂ ಚ ತವ ರಾಜೇಂದ್ರ ಯಮಯೋರ್ವಿನಯಂ ತದಾ ॥೬॥

ಓ ರಾಜೇಂದ್ರನೇ ! ಆ ಕರ್ಣನು ಭೀಮಸೇನನ ಬಲವನ್ನು, ಅರ್ಜುನನ ಹಸ್ತಲಾಘವವನ್ನು, ನಿನ್ನ ಬುದ್ಧಿಯನ್ನು, ನಕುಲ-ಸಹದೇವರಲ್ಲಿರುವ ವಿನಯಗುಣ-ವನ್ನು ನೋಡಿ ಹೊಟ್ಟೆಕಿಚ್ಚುಪಟ್ಟನು.

ಸಖ್ಯಂ ಚ ವಾಸುದೇವೇನ ಬಾಲ್ಯೇ ಗಾಂಡೀವಧನ್ವನಃ।
ಪ್ರಜಾನಾಮನುರಾಗಂ ಚ ಚಿಂತಯಾನೋ ವ್ಯದಹ್ಯತ ॥೭॥

ಕೃಷ್ಣನ ಜೊತೆಗೆ ಅರ್ಜುನನಿಗೆ ಇದ್ದ ಮೈತ್ರಿಯನ್ನು, ನಿಮ್ಮ ವಿಷಯದಲ್ಲಿ ಪ್ರಜೆಗಳು ತೋರಿಸುತ್ತಿದ್ದ ಅನುರಾಗವನ್ನು, ಚಿಂತಿಸುತ್ತಾ ಅಸೂಯೆಯನ್ನು ಹೊಂದಿ ಬಹಳ ಪರಿತಾಪಪಟ್ಟನು.

ಸ ಸಖ್ಯಮಗಮದ್ ಬಾಲ್ಯೇ ರಾಜ್ಞಾ ದುರ್ಯೋಧನೇನ ವೈ।
ಯುಷ್ಮಾಭಿರ್ನಿತ್ಯಸಂದ್ವಿಷ್ಟೋ ದೈವಾಚ್ಚಾಪಿ ಸ್ವಭಾವತಃ ॥೮॥

ನಿಮ್ಮೆಲ್ಲರ ಮೇಲಿನ ದ್ವೇಷದಿಂದ ಆ ಕರ್ಣನು ರಾಜನಾದ ದುರ್ಯೋಧನನ ಜೊತೆ ಬಾಲ್ಯದಲ್ಲಿಯೇ ಸಖ್ಯವನ್ನು ಬೆಳೆಸಿದನು. ನಿಮ್ಮೆಲ್ಲರನ್ನು ಪ್ರತಿನಿತ್ಯವು ದ್ವೇಷ ಮಾಡುತ್ತಿದ್ದನು. ಹೀಗೆ ದ್ವೇಷಿಸಲು ದೇವತೆಗಳ ಪ್ರೇರಣೆಯೂ ಕಾರಣವಾಗಿತ್ತು. ಮತ್ತು ಅವನ ಸ್ವಭಾವವೂ ಕೂಡ ಕಾರಣವಾಗಿತ್ತು.

ವಿದ್ಯಾಧಿಕಮಥಾಲಕ್ಷ್ಯ ಧನುರ್ವೇದೇ ಧನಂಜಯಮ್।
ದ್ರೋಣಂ ರಹಸ್ಯುಪಾಗಮ್ಯ ಕರ್ಣೋ ವಚನಮಬ್ರವೀತ್ ॥೯॥

ಧನಂಜಯನು ಧನುರ್ವೇದದಲ್ಲಿ ತನಗಿಂತಲೂ ಹೆಚ್ಚು ವಿದ್ಯಾವಂತನಾಗಿದ್ದಾನೆಂಬುದನ್ನು ಕರ್ಣನು ಗಮನಿಸಿದನು. ಅವನನ್ನು ಮೀರಿಸಬೇಕೆಂಬ ಉದ್ದೇಶದಿಂದ ಒಮ್ಮೆ ರಹಸ್ಯವಾಗಿ ದ್ರೋಣಾಚಾರ್ಯರನ್ನು ಸಮೀಪಿಸಿದನು. ಮತ್ತು ಅವರಲ್ಲಿ ಮುಂದಿನ ಈ ಮಾತುಗಳನ್ನು ಹೇಳಿದನು.

ಬ್ರಹ್ಮಾಸ್ತ್ರಂ ವೇತ್ತುಮಿಚ್ಛಾಮಿ ಸರಹಸ್ಯನಿವರ್ತನಮ್।
ಅರ್ಜುನೇನ ಸಮೋ ಯುದ್ಧೇ ಭವೇಯಮಿತಿ ಮೇ ಮತಿಃ ॥೧೦॥

ಸಮಃ ಶಿಷ್ಯೇಷು ವಃ ಸ್ನೇಹಃ ಪುತ್ರೇ ಚೈವ ತಥಾ ಧ್ರುವಮ್।
ತತ್ತ್ವತ್ಪ್ರಸಾದಾನ್ನ ಮಾಂ ಬ್ರೂಯುರಕೃತಾಸ್ತ್ರಂ ವಿಚಕ್ಷಣಾಃ ॥೧೧॥

ಆಚಾರ್ಯರೇ ಬ್ರಹ್ಮಾಸ್ತ್ರವನ್ನು ನನಗೆ ಉಪದೇಶಿಸಿರಿ. ಅದನ್ನು ತಿಳಿದುಕೊಳ್ಳಬೇಕೆಂಬ ಇಚ್ಛೆ ನನಗುಂಟಾಗಿದೆ. ಅದರ ರಹಸ್ಯವನ್ನು ಆ ಬ್ರಹ್ಮಾಸ್ತ್ರವನ್ನು ಹೇಗೆ ಪ್ರಯೋಗ ಮಾಡಬೇಕು? ಹೇಗೆ ಹಿಂದಕ್ಕೆ ತೆಗೆದುಕೊಳ್ಳಬೇಕು ಎಂಬುದನ್ನು ತಮ್ಮಿಂದ ಕಲಿಯಲು ಅಪೇಕ್ಷಿಸುತ್ತೇನೆ. ಯುದ್ಧದಲ್ಲಿ ಅರ್ಜುನನಿಗೆ ಸರಿಸಾಟಿಯಾಗಿ ನಾನು ನಿಲ್ಲಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ತಾವು ನಿಮ್ಮ ಮಗನಲ್ಲಿ ಹೇಗೆ ಪ್ರೀತಿಯನ್ನು ಮಾಡುತ್ತೀರೋ, ಅದರಂತೆ ನಿಮ್ಮ ಶಿಷ್ಯರಲ್ಲಿಯೂ ಕೂಡ ಸಮಾನವಾದ ಪ್ರೀತಿಯನ್ನು ಮಾಡುತ್ತೀರಿ. ಅಂಥ ಪ್ರೀತಿಯನ್ನು ನನ್ನ ಮೇಲೂ ಸಹ

ತೋರಿಸಿರಿ, ಬ್ರಹ್ಮಾಸ್ತ್ರವನ್ನು ಉಪದೇಶಿಸಿರಿ. ನಿಮ್ಮ ಅನುಗ್ರಹದ ಬಲದಿಂದ ಯಾರೊಬ್ಬ ಜ್ಞಾನಿಯೂ ಕೂಡ ನನ್ನನ್ನು ಅಕೃತಾಸ್ತ್ರನೆಂದು (ಬ್ರಹ್ಮಾಸ್ತ್ರದ ಅರಿವಿಲ್ಲದವನೆಂದು) ಹೇಳದಂತಾಗಲಿ.

ವಿಶೇಷವಿಚಾರ - ಕರ್ಣನಿಗೆ ದ್ರೋಣಾಚಾರ್ಯರು ತನ್ನನ್ನು ನಿರಾಕರಿಸಬಹುದೆಂಬ ಭಯವಿತ್ತು. ಆದ್ದರಿಂದ ತಾವು ಯಾರಲ್ಲಿಯೂ ಕೂಡ ಪಕ್ಷಪಾತ ಮಾಡುವುದಿಲ್ಲವೆಂದು ಅವರನ್ನು ಪ್ರಶಂಸೆ ಮಾಡುತ್ತಾನೆ. ಆದರೆ ದ್ರೋಣಾಚಾರ್ಯರಿಗೆ ಅರ್ಜುನನ ಮೇಲೆ ಹೆಚ್ಚು ಒಲವಿದ್ದುದರಿಂದ ಕರ್ಣನ ಅಪೇಕ್ಷೆಯನ್ನು ಪೂರೈಸಲಿಲ್ಲ. ಮತ್ತು ಅರ್ಜುನನಿಗೆ ಸರಿಸಾಟಿಯಾಗಿ ನಿಲ್ಲಬೇಕು. ಅಥವಾ ಅರ್ಜುನನ್ನು ಮೀರಿಸಬೇಕು ಎಂಬ ದುಷ್ಟ ಅಪೇಕ್ಷೆಯನ್ನು ಹೊಂದಿದ್ದನು. ಇದೂ ಸಹ ದ್ರೋಣಾಚಾರ್ಯರಿಗೆ ಇಷ್ಟವಾಗಲಿಲ್ಲ. ಆದ್ದರಿಂದ ಕರ್ಣನನ್ನು ದ್ರೋಣಾಚಾರ್ಯರು ನಿರಾಕರಣೆ ಮಾಡುತ್ತಾರೆ. ನಿಜವಾಗಿಯೂ ಕರ್ಣನನ್ನು ದ್ರೋಣಾಚಾರ್ಯರು ಏಕೆ ನಿರಾಕರಣೆ ಮಾಡಿದರು ಎನ್ನಲು ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಶ್ರೀಮಧ್ವಾಚಾರ್ಯರು ಹೀಗೆ ನಿರ್ಣಯವನ್ನು ನೀಡಿದ್ದಾರೆ

ತದಾ ಕರ್ಣೋ೨ಽಥೈಕಲವ್ಯಶ್ಚ ದಿವ್ಯಾನ್ಯಸ್ತ್ರಾಣ್ಯಾಪ್ತುಂ ದ್ರೋಣಸಮೀಪಮೀಯತುಃ।
ಸೂತೋ ನಿಷಾದ ಇತಿ ನೈತಯೋರದಾದಸ್ತ್ರಾಣಿ ವಿಪ್ರಃ ಸ ತು ರಾಮಶಿಷ್ಯಃ॥

ಆಗ ಕರ್ಣನೂ ಏಕಲವ್ಯನೂ ದಿವ್ಯಾಸ್ತ್ರಗಳನ್ನು ಪಡೆಯಲು ದ್ರೋಣನ ಬಳಿಗೆ ಬಂದರು. ಒಬ್ಬ ಸೂತ, ಇನ್ನೊಬ್ಬ ಬೇಡ ಎಂದು ಇಬ್ಬರಿಗೂ ದ್ರೋಣ ಅಸ್ತ್ರಗಳನ್ನು ನೀಡಲಿಲ್ಲ.

ದ್ರೋಣಸ್ತಥೋಕ್ತಃ ಕರ್ಣೇನ ಸಾಪೇಕ್ಷಃ ಫಲ್ಗುನಂ ಪ್ರತಿ।
ದೌರಾತ್ಮ್ಯಂ ಚಾಪಿ ಕರ್ಣಸ್ಯ ವಿದಿತ್ವಾತಮುವಾಚ ಹ ॥೧೨॥

ಕರ್ಣನು ದ್ರೋಣಾಚಾರ್ಯರನ್ನು ಕುರಿತು ಹೀಗೆ ಪ್ರಾರ್ಥಿಸಿದನು - ದ್ರೋಣಾಚಾರ್ಯರು ಅರ್ಜುನನ ವಿಷಯದಲ್ಲಿ ಸ್ವಾಭಾವಿಕವಾಗಿಯೇ ಹೆಚ್ಚು ಪ್ರೀತಿಯನ್ನು ಇಟ್ಟುಕೊಂಡಿದ್ದರು. ಮತ್ತು ಕರ್ಣನ ದುಷ್ಟ ಆಲೋಚನೆಯನ್ನೂ ಕೂಡ ಗಮನಿಸಿದರು. ಇಂಥ ದ್ರೋಣಾಚಾರ್ಯರು ಕರ್ಣನನ್ನು ಕುರಿತು ಹೀಗೆ ಹೇಳುತ್ತಾರೆ-

ಮಹಾಭಾರತದ ತಾತ್ಪರ್ಯನಿರ್ಣಯದಲ್ಲಿ ದ್ರೋಣಾಚಾರ್ಯರು ಅರ್ಜುನನ ಪಕ್ಷಪಾತಿಯಾಗಿದ್ದರೆಂಬುದನ್ನು ಶ್ರೀಮಧ್ವಾಚಾರ್ಯರು ಹೀಗೆ ಹೇಳಿದ್ದಾರೆ -

ಸ ಪಕ್ಷಪಾತಂ ಚ ಚಕಾರ ತಸ್ಮಿನ್ ಕರೋತಿ ಚಾಸ್ಯೋರುತರಾಂ ಪ್ರಶಂಸಾಮ್ ।
ರಹಸ್ಯವಿದ್ಯಾಶ್ಚ ದದಾತಿ ತಸ್ಯ ನಾನ್ಯಸ್ಯ ಕಸ್ಯಾಪಿ ತಥಾ ಕಥಂಚಿತ್ ॥೪೬॥

ಅಂದಿನಿಂದ ದ್ರೋಣ ಅರ್ಜುನನ ಪಕ್ಷಪಾತಿಯಾದ. ಅವನ ಪ್ರಶಂಸೆಯನ್ನೇ ಹೆಚ್ಚಾಗಿ ಮಾಡಿದ. ಗೋಪ್ಯವಾದ ಮಂತ್ರಗಳನ್ನು ಅವನಿಗೇ ಉಪದೇಶಿಸಿದ. ಹಾಗೆ ಬೇರೆ ಯಾರಿಗೂ ಯಾವ ರೀತಿಯಲ್ಲಿಯೂ ಮಾಡಲಿಲ್ಲ.

ಬ್ರಹ್ಮಾಸ್ತ್ರಂ ಬ್ರಾಹ್ಮಣೋ ವಿದ್ಯಾದ್ ಯಥಾವಚ್ಚರಿತವ್ರತಃ ।
ಕ್ಷತ್ರಿಯೋ ವಾ ತಪಸ್ವೀ ಯೋ ನಾನ್ಯೋ ವಿದ್ಯಾತ್ ಕಥಂಚನ ॥೧೩॥

ಓ ಕುಮಾರನೇ! ವಿಧಿಪ್ರಕಾರವಾಗಿ ಬ್ರಹ್ಮಚರ್ಯವ್ರತವನ್ನು ಪಾಲಿಸುವ ಬ್ರಾಹ್ಮಣನಷ್ಟೇ ಬ್ರಹ್ಮಾಸ್ತ್ರವನ್ನು ತಿಳಿಯಲು ಅಧಿಕಾರಿಯಾಗುತ್ತಾನೆ. ಅಥವಾ ತಪಸ್ವಿಯಾದ ಕ್ಷತ್ರಿಯನು ಬ್ರಹ್ಮಾಸ್ತ್ರವನ್ನು ತಿಳಿಯಲು ಅಧಿಕಾರಿಯಾಗುತ್ತಾನೆ. ಬೇರೆಯವರು ಯಾವುದೇ ಕಾರಣದಿಂದಲೂ ಇದನ್ನು ತಿಳಿಯಲು ಅಧಿಕಾರಿಯಾಗುವುದಿಲ್ಲ.

ಇತ್ಯುಕ್ತೋಽಂಗಿರಸಾಂ ಶ್ರೇಷ್ಠಮಾಮಂತ್ರ್ಯ ಪ್ರತಿಪೂಜ್ಯ ಚ ।
ಜಗಾಮ ಸಹಸಾ ರಾಮಂ ಮಹೇಂದ್ರಂ ಪರ್ವತಂ ಪ್ರತಿ ॥೧೪॥

ದ್ರೋಣಾಚಾರ್ಯರು ಹೀಗೆ ಹೇಳಿದಾಗ ಕರ್ಣನು ಅಂಗೀರಸ ಗೋತ್ರೋದ್ಭವರಲ್ಲಿ ಉತ್ತಮರಾದ ಆ ದ್ರೋಣಾಚಾರ್ಯರನ್ನು ಅಗೌರವ ಮಾಡಲಿಲ್ಲ. ಯಥೋಚಿತವಾಗಿ ಅವರನ್ನು ಗೌರವಿಸಿದನು. ಮತ್ತು ಅವರ ಅನುಮತಿಯನ್ನು ತೆಗೆದುಕೊಂಡು ಕೂಡಲೇ ಮಹೇಂದ್ರಪರ್ವತದಲ್ಲಿದ್ದ ಪರಶುರಾಮದೇವರ ಬಳಿ ತೆರಳಿದನು.

ಕರ್ಣೋಽನವಾಪ್ಯ ನಿಜಮೀಪ್ಸಿತಮುಚ್ಚಮಾನೋ
ಯಸ್ಮಾದವಾಪ ಪುರುಷೋತ್ತಮತೋಽಸ್ತ್ರವೃಂದಮ್ ।
ವಿಪ್ರೋಽಪ್ಯಯಂ ತಮಜಮೇಮಿ ಭೃಗೋಃ ಕುಲೋತ್ಥ
ಮಿತ್ಥಂ ವಿಚಿಂತ್ಯ ಸ ಯಯೌ ಭೃಗುಪಾಶ್ರಮಾಯ ॥೪೭॥

ಬಹಳ ಸ್ವಾಭಿಮಾನಿಯಾದ ಕರ್ಣನು ದ್ರೋಣನಿಂದ ತನ್ನ ಅಭೀಷ್ಟವನ್ನು ಪಡೆಯದಿದ್ದಾಗ 'ಈ ದ್ರೋಣನೂ ಯಾವ ಪರಶುರಾಮರಿಂದ ಅಸ್ತ್ರ ಸಮೂಹವನ್ನು ಪಡೆದನೋ ಭೃಗುಕುಲದಲ್ಲಿ ಅವತರಿಸಿದ ಆ ಹರಿಯನ್ನೇ ನಾನೂ ಆಶ್ರಯಿಸುತ್ತೇನೆ' ಎಂದು ಆಲೋಚಿಸಿ ಪರಶುರಾಮರ ಆಶ್ರಮಕ್ಕೆ ಹೋದ.

ಸ ತು ರಾಮಮುಪಾಗಮ್ಯ ಶಿರಸಾಭಿಪ್ರಣಮ್ಯ ಚ।
ಬ್ರಾಹ್ಮಣೋ ಭಾರ್ಗವೋೇऽಸ್ಮೀತಿ ಗೌರವೇಣಾಭ್ಯಗಚ್ಛತ ॥೧೫॥

ಕರ್ಣನು ಪರಶುರಾಮದೇವರ ಬಳಿ ತೆರಳಿದನು. ಭಕ್ತಿಪೂರ್ವಕವಾಗಿ ತಲೆಬಾಗಿ ನಮಸ್ಕರಿಸಿದನು. ನಾನು ಭೃಗುವಂಶದ ಬ್ರಾಹ್ಮಣನಾಗಿದ್ದೇನೆ ಎಂದು ಹೇಳಿದನು. ಅತ್ಯಂತಗೌರವದಿಂದ ಆ ಪರಶುರಾಮದೇವರನ್ನು ಉಪಸತ್ತಿ ಮಾಡಿದನು.

ಸ ಸರ್ವವೇತ್ತುಶ್ಚವಿಭೋರ್ಭಯೇನ ವಿಪ್ರೋೇऽಹಮಿತ್ಯವದದಸ್ತ್ರವರಾತಿಲೋಭಾತ್ ।
ಜ್ಞಾನನ್ನಪಿ ಪ್ರದದಾವಸ್ಯ ರಾಮೋ ದಿವ್ಯಾನ್ಯಸ್ತ್ರಾಣ್ಯಖಿಲಾನ್ಯವ್ಯಯಾತ್ಮಾ ॥೪೮॥

ಕರ್ಣ ಉತ್ತಮ ಅಸ್ತ್ರಗಳ ಅತಿಲೋಭದಿಂದಲೂ ಭಯದಿಂದಲೂ ಸರ್ವಜ್ಞರಾದ ಪರಶುರಾಮರ ಮುಂದೆ 'ನಾನು ಬ್ರಾಹ್ಮಣ' ಎಂದನು. ಪರಶುರಾಮರು 'ಈತ ಸೂತ'ನೆಂದು ತಿಳಿದೂ ಅವನಿಗೆ ಎಲ್ಲ ದಿವ್ಯ ಅಸ್ತ್ರಗಳನ್ನೂ ಉಪದೇಶಿಸಿದರು.

ರಾಮಸ್ತಂ ಪ್ರತಿಜಗ್ರಾಹ ಪೃಷ್ಟ್ವಾ ಗೋತ್ರಾದಿ ಸರ್ವಶಃ।
ಉಷ್ಯತಾಂ ಸ್ವಾಗತಂ ಚೇತಿ ಪ್ರೀತಿಮಾಂಶ್ಚಾಭವದ್ ಭೃಶಮ್ ॥೧೬॥

ತನ್ನನ್ನು ಉಪಸತ್ತಿ ಮಾಡಿದ ಕರ್ಣನ ಗೋತ್ರ ಮೊದಲಾದವುಗಳನ್ನು ಪರಶುರಾಮದೇವರು ಕೇಳಿ ತಿಳಿದುಕೊಂಡರು. ಮತ್ತು ಅವನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ಬಹಳ ಪ್ರೀತಿಯಿಂದ ವತ್ಸ ! ನೀನು ಇಲ್ಲಿಯೇ ಇರು. ನಿನಗೆ ನಾನು ಸ್ವಾಗತವನ್ನು ಅಪೇಕ್ಷಿಸುತ್ತೇನೆ. ಎಂದು ಹೇಳಿದರು. ಮತ್ತು ಅವನನ್ನು ಅತ್ಯಂತ ಪ್ರೀತಿಯಿಂದಲೇ ಕಾಣುತ್ತಿದ್ದರು.

ತತ್ರ ಕರ್ಣಸ್ಯ ವಸತೋ ಮಹೇಂದ್ರೇ ಪರ್ವತೋತ್ತಮೇ।
ಗಂಧರ್ವೈೇ ರಾಕ್ಷಸೈರ್ಯಕ್ಷೈರ್ದೇವೈಶ್ಚಾಸೀತ್ ಸಮಾಗಮಃ ॥೧೭॥

ಪರ್ವತಗಳಲ್ಲೇ ಶ್ರೇಷ್ಠವಾದ ಆ ಮಹೇಂದ್ರ ಪರ್ವತದಲ್ಲಿ ಕರ್ಣನು ಶಿಷ್ಯನಾಗಿ ಪರಶುರಾಮದೇವರ ಸೇವೆಯಲ್ಲಿ ನಿರತನಾದನು. ಆ ಕಾಲದಲ್ಲಿ ಗಂಧರ್ವರು, ದೇವತೆಗಳು, ಯಕ್ಷರು, ರಾಕ್ಷಸರು ಈ ಕರ್ಣನನ್ನು ಭೇಟಿ ಮಾಡಿದರು.

ಸ ತತ್ರೇಷ್ವಸ್ತ್ರಮಕರೋದ್ ಭೃಗುಶ್ರೇಷ್ಠಾದ್ ಯಥಾವಿಧಿ।
ಪ್ರಿಯಶ್ಚಾಭವದತ್ಯರ್ಥಂ ದೇವಗಂಧರ್ವರಕ್ಷಸಾಮ್ ॥೧೮॥

ಭೃಗುಶ್ರೇಷ್ಠರಾದ ಪರಶುರಾಮದೇವರ ಮೂಲಕ ವಿಧಿಪ್ರಕಾರವಾಗಿ ಎಲ್ಲಾ ಶಸ್ತ್ರಾಸ್ತ್ರಗಳ ವಿದ್ಯೆಯನ್ನು ಅಧ್ಯಯನ ಮಾಡಿದನು. ಆದ್ದರಿಂದಲೇ ದೇವತೆಗಳಿಗೆ, ಗಂಧರ್ವರಿಗೆ ಮತ್ತು ರಾಕ್ಷಸರಿಗೆ ಇವನು ಅತ್ಯಂತ ಪ್ರೀತಿಪಾತ್ರನಾದನು.

ಸ ಕದಾಚಿತ್ ಸಮುದ್ರಾಂತೇ ವಿಚರನ್ನಾಶ್ರಮಾಂತಿಕೇ।
ಏಕಃ ಖಡ್ಗಧನುಷ್ಪಾಣಿಃ ಪರಿಚಕ್ರಾಮ ಸೂರ್ಯಜಃ ॥೧೯॥

ಒಮ್ಮೆ ಕರ್ಣನು ಪರಶುರಾಮದೇವರ ಆಶ್ರಮದ ಸಮೀಪದಲ್ಲೇ ಇರುವ ಸಮುದ್ರದ ತೀರದಲ್ಲಿ ಕತ್ತಿ ಹಾಗೂ ಬಿಲ್ಲುಗಳನ್ನು ಕೈಯಲ್ಲಿ ಹಿಡಿದುಕೊಂಡು ಏಕಾಂಗಿಯಾಗಿ ಸಂಚರಿಸುತ್ತಿದ್ದನು.

ಸೋಽಗ್ನಿಹೋತ್ರಪ್ರಸಕ್ತಸ್ಯ ಕಸ್ಯಚಿದ್ ಬ್ರಹ್ಮವಾದಿನಃ।
ಜಘಾನಾಜ್ಞಾನತಃ ಪಾರ್ಥ ಹೋಮಧೇನುಂ ಯದೃಚ್ಛಯಾ ॥೨೦॥

ಆ ಸಂದರ್ಭದಲ್ಲಿ ಒಬ್ಬ ಅಗ್ನಿಹೋತ್ರಿಯ ಹೋಮಧೇನುವನ್ನು ಕಂಡನು. ಯಾವುದೋ ಪ್ರಾಣಿ ಎಂಬ ಭ್ರಾಂತಿಯಿಂದ ಆ ಹೋಮಧೇನುವನ್ನು ಆಕಸ್ಮಿಕವಾಗಿ ಕೊಂದುಬಿಟ್ಟನು.

ಕರ್ಣನಿಗೆ ಹೋಮಧೇನುವೆಂದು ತಿಳಿದಿರಲಿಲ್ಲ. ಯಾವುದೋ ಹಿಂಸಿಸುವ ಪ್ರಾಣಿ ಎಂದು ಅರಿತು ಕೊಂದುಬಿಟ್ಟನು. ಶಾಪವನ್ನು ಕೊಡಿಸಲು ದೇವತೆಗಳು ಮಾಡಿದ ಉಪಾಯವಿದು.

ತದಜ್ಞಾನಕೃತಂ ಮತ್ವಾ ಬ್ರಾಹ್ಮಣಾಯ ನ್ಯವೇದಯತ್।
ಕರ್ಣಃ ಪ್ರಸಾದಯಂಶ್ಚೈನಮಿದಮಿತ್ಯಬ್ರವೀದ್ ವಚಃ ॥೨೧॥

ಹತ್ತಿರ ಹೋಗಿ ಪರೀಕ್ಷಿಸಿದಾಗ ಅದು ಹೋಮಧೇನುವೆಂದು ಕರ್ಣನಿಗೆ ತಿಳಿಯಿತು. ತನ್ನ ತಪ್ಪಿನ ಅರಿವಾಯಿತು. ಆ ಬ್ರಾಹ್ಮಣನಲ್ಲಿಗೆ ಬಂದು ತಾನು ಮಾಡಿದ ಅಪರಾಧವನ್ನು ತಿಳಿಸಿದನು. ಮತ್ತು ತನ್ನ ವಿಷಯದಲ್ಲಿ ಆ ಬ್ರಾಹ್ಮಣನು ಪ್ರಸನ್ನನಾಗ-ಬೇಕೆಂಬ ಉದ್ದೇಶದಿಂದ ಈ ಮುಂದಿನ ಮಾತುಗಳನ್ನು ಹೇಳಿದನು.

ಅಬುದ್ಧಿಪೂರ್ವಂ ಭಗವನ್ ಧೇನುರೇಷಾ ಹತಾ ತವ।
ಮಯಾ ತತ್ರ ಪ್ರಸಾದಂ ಮೇ ಕುರುಷ್ವೇತಿ ಪುನಃಪುನಃ ॥೨೨॥

ಪೂಜ್ಯರೇ ! ನನ್ನನ್ನು ಕ್ಷಮಿಸಿರಿ. ನನಗೆ ಇದು ಹೋಮಧೇನುವೆಂದು ತಿಳಿಯಲೇ ಇಲ್ಲ. ಕೊಂದುಬಿಟ್ಟೆನು, ಉದ್ದೇಶಪೂರ್ವಕವಾಗಿ ನಾನು ಸರ್ವಥಾ ಕೊಂದಿರು-ವುದಿಲ್ಲ. ನನ್ನ ವಿಷಯದಲ್ಲಿ ಕುಪಿತರಾಗದೇ ತಾವು ಅನುಗ್ರಹಿಸಬೇಕು. ಹೀಗೆ ಪುನಃ ಪುನಃ ಪ್ರಾರ್ಥನೆ ಮಾಡಿದನು.

ತಂ ಸ ವಿಪ್ರೋಽಬ್ರವೀತ್ ಕ್ರುದ್ಧೋ ವಾಚಾ ನಿರ್ಭರ್ತ್ಸಯನ್ನಿವ।
ದುರಾಚಾರ ವಧಾರ್ಹಸ್ತ್ವಂ ಫಲಂ ಪ್ರಾಪ್ನುಹಿ ದುರ್ಮತೇ ॥೨೩॥

ಯೇನ ವಿಸ್ಪರ್ಧಸೇ ನಿತ್ಯಂ ಯದರ್ಥಂ ಘಟಸೇಽನಿಶಮ್।
ಯುದ್ಧ್ಯತಸ್ತೇನ ತೇ ಪಾಪ ಭೂಮಿಶ್ಚಕ್ರಂ ಗ್ರಸಿಷ್ಯತಿ ॥೨೪॥

ಆದರೆ ಕರ್ಣನ ಪ್ರಾರ್ಥನೆ ಉಪಯೋಗವಾಗಲಿಲ್ಲ. ಆ ಬ್ರಾಹ್ಮಣನು ತನ್ನ ಮಾತಿನಿಂದಲೇ ಆ ಕರ್ಣನನ್ನು ನಿಂದನೆ ಮಾಡುವಂತೆ ಹೀಗೆ ಹೇಳಿದನು. ಓ ದುಷ್ಟಬುದ್ಧಿಯವನೇ! ದುರಾಚಾರಿಯೇ! ಹೋಮಧೇನುವನ್ನು ಕೊಂದ ನೀನು ವಧಾರ್ಹನಾಗಿರುವಿ, ಇದರ ಪಾಪದ ಫಲವನ್ನು ಅನುಭವಿಸಿಯೇ ತೀರುವಿ. ''ಓ ದುಷ್ಟನೇ! ನಿನಗಿದು ನನ್ನ ಶಾಪ, ಯಾವ ವ್ಯಕ್ತಿಯ ವಿಷಯದಲ್ಲಿ ನೀನು ಪ್ರತಿನಿತ್ಯವೂ ಸ್ಪರ್ಧೆಯನ್ನು ಮಾಡುತ್ತಿರುವೆಯೋ, ಯಾರನ್ನು ನಾಶ ಮಾಡುವುದಕ್ಕಾಗಿ, ಅಹ-ರ್ನಿಶಿ ಪ್ರಯತ್ನವನ್ನು ಪಡುತ್ತಿರುವೆಯೋ, ಅಂಥ ವೀರನ ಜೊತೆ ನೀನು ಯುದ್ಧ ಮಾಡುವ ಸಂದರ್ಭದಲ್ಲಿ ಭೂಮಿಯು ನಿನ್ನ ರಥದ ಚಕ್ರವನ್ನು ನುಂಗುತ್ತದೆ.

ತತಶ್ಚಕ್ರೇ ಮಹೀಗ್ರಸ್ತೇ ಮೂರ್ಧಾನಂ ತೇ ವಿಚೇತಸಃ।
ಪಾತಯಿಷ್ಯತಿ ವಿಕ್ರಮ್ಯ ಶತ್ರುರ್ಗಚ್ಛನರಾಧಮ ॥೨೫॥

ಯಾವಾಗ ನಿನ್ನ ರಥದ ಚಕ್ರವನ್ನು ಭೂಮಿಯು ನುಂಗುತ್ತದೋ, ಆಗ ವ್ಯಾಕುಲನಾದ ನಿನ್ನ ತಲೆಯನ್ನು ನಿನ್ನ ಶತ್ರುವು ಕತ್ತರಿಸಿ ಬಿಡುವನು. ಓ ನೀಚ-ಮನುಷ್ಯನೇ! ಹೊರಟು ಹೋಗು, ಒಂದು ಕ್ಷಣವೂ ಇಲ್ಲಿರಬೇಡ.

ಯಥೇಯಂ ಗೌರ್ಹತಾ ಮೂಢ ಪ್ರಮತ್ತೇನ ತ್ವಯಾ ಮಮ।
ಪ್ರಮತ್ತಸ್ಯೈವಮೇವಾನ್ಯಃ ಶಿರಸ್ತೇ ಪಾತಯಿಷ್ಯತಿ ॥೨೬॥

ಹೇಗೆ ಎಚ್ಚರ ತಪ್ಪಿ ನನ್ನ ಹೋಮಧೇನುವನ್ನು ನೀನು ಸಂಹಾರ ಮಾಡಿದೆಯೋ, ಅದೇ ರೀತಿಯಲ್ಲಿ ನೀನು ಎಚ್ಚರ ತಪ್ಪಿದಾಗಲೇ ಮುಂದೇನು ಮಾಡಬೇಕೆಂದು ತೋರದೇ, ದಿಗ್ಭ್ರಾಂತನಾದ ಸಂದರ್ಭದಲ್ಲಿ ಶತ್ರುವು ನಿನ್ನ ತಲೆಯನ್ನು ನೆಲಕ್ಕುರುಳಿಸುತ್ತಾನೆ.

ತತಃ ಪ್ರಸಾದಯಾಮಾಸ ಪುನಸ್ತಂ ದ್ವಿಜಸತ್ತಮಮ್।
ಗೋಭಿರ್ಧನೈಶ್ಚ ರತ್ನೈಶ್ಚ ಸ ಚೈನಂ ಪುನರಬ್ರವೀತ್ ॥೨೭॥

ಬ್ರಾಹ್ಮಣನಿಂದ ಶಪಿತನಾದ ಕರ್ಣನು ಅತ್ಯಂತ ದುಃಖಿತನಾದನು. ಹೇಗಾದರೂ ಆ ಬ್ರಾಹ್ಮಣನನ್ನು ಪ್ರಸನ್ನಗೊಳಿಸಬೇಕೆಂಬ ಉದ್ದೇಶದಿಂದ ಅನೇಕ ಹಸುಗಳನ್ನು ನೀಡುತ್ತೇನೆಂದು ಪ್ರಾರ್ಥಿಸಿದನು. ಹಸುಗಳಷ್ಟೇ ಅಲ್ಲದೇ ಧನಕನಕಾದಿಗಳನ್ನೂ ಕೂಡ ಯಥೇಚ್ಛವಾಗಿ ನೀಡುತ್ತೇನೆಂದು ಹೇಳಿ ಪ್ರಸನ್ನಗೊಳಿಸಲು ಪ್ರಯತ್ನಪಟ್ಟನು. ಆದರೆ ಅದರಿಂದ ಶಾಂತನಾಗದ ಆ ಬ್ರಾಹ್ಮಣನು ಪುನಃ ಕರ್ಣನನ್ನು ಕುರಿತು ಹೀಗೆ ಹೇಳಿದನು-

ನೇದಂ ಮದ್ವ್ಯಾಹತಂ ಕುರ್ಯಾತ್ ಸರ್ವಲೋಕೋऽಪಿ ವೈ ಮೃಷಾ।
ಗಚ್ಛ ವಾ ತಿಷ್ಠ ವಾ ಯದ್ವಾ ಕಾರ್ಯಂ ತೇ ತತ್ ಸಮಾಚರ ॥೨೮॥

ಓ ಮೂಢನೇ! ನನ್ನ ಮಾತು ಸುಳ್ಳಾಗಲು ಸಾಧ್ಯವೇ ಇಲ್ಲ. ಎಲ್ಲಾ ಲೋಕಗಳು ಒಟ್ಟಾಗಿ ಸೇರಿದರು, ನನ್ನ ಶಾಪವನ್ನು ತಡೆಯಲು ಸಾಧ್ಯವಾಗುವುದಿಲ್ಲ. ನೀನು ಬೇಕಾದರೆ ಇಲ್ಲೇ ಇರು ಅಥವಾ ಹೊರಟುಹೋಗು, ನಿನ್ನ ಕೆಲಸವನ್ನು ಮಾಡಿಕೋ.

ಇತ್ಯುಕ್ತೋ ಬ್ರಾಹ್ಮಣೇನಾಥ ಕರ್ಣೋ ದೈನ್ಯಾದಧೋಮುಖಃ।
ರಾಮಮಭ್ಯಾಗಮದ್ ಭೀತಸ್ತದೇವ ಮನಸಾ ಸ್ಮರನ್ ॥೨೯॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ದ್ವಿತಿಯೋಽಧ್ಯಾಯಃ ॥೨॥

ಹೀಗೆ ಬ್ರಾಹ್ಮಣನ ಶಾಪದಿಂದ ಕರ್ಣನು ಅತ್ಯಂತ ದೀನನಾದನು. ಮುಖವನ್ನು ಕೆಳಗೆ ಹಾಕಿಕೊಂಡು, ಆ ಬ್ರಾಹ್ಮಣನು ನೀಡಿದ ಶಾಪವನ್ನೇ ಮನಸ್ಸಿನಲ್ಲಿ ಮೆಲಕು ಹಾಕುತ್ತಾ ಭಯಭೀತನಾದನು. ಗುರುವಾದ ಪರಶುರಾಮನ ಬಳಿ ತೆರಳಿದನು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೨ನೇ ಅಧ್ಯಾಯವು ಮುಗಿಯಿತು.

* * * * *

೩. ಮೂರನೆಯ ಅಧ್ಯಾಯ

ಒಮ್ಮೆ ಪರಶುರಾಮದೇವರು ಕರ್ಣನ ತೊಡೆಯ ಮೇಲೆ ತಲೆಯಿಟ್ಟು ಮಲಗಿದ್ದರು. ಆ ಸಂದರ್ಭದಲ್ಲಿ ಒಂದು ಕ್ರಿಮಿ ಕರ್ಣನ ತೊಡೆಯನ್ನು ಭೇದಿಸಿತು. ರಕ್ತವು ಧಾರಾಕಾರವಾಗಿ ಹರಿಯಿತು. ಇದರಿಂದ ಪರಶುರಾಮದೇವರಿಗೆ ಎಚ್ಚರವಾಯಿತು. ಕರ್ಣನಿಗೆ ಶಾಪ ನೀಡಿದರು. ಪರಶುರಾಮದೇವರ ಆಜ್ಞೆಯಿಂದ ಕರ್ಣನು ತನ್ನ ದೇಶಕ್ಕೆ ತೆರಳಿದನು.

ನಾರದಃ

ಕರ್ಣಸ್ಯ ಬಾಹುವೀರ್ಯೇಣ ಪ್ರಶ್ರಯೇಣ ದಮೇನ ಚ।
ತುತೋಷ ಭೃಗುಶಾರ್ದೂಲೋ ಗುರುಶುಶ್ರೂಷಯಾ ತಥಾ ॥೧॥

ನಾರದರು – ಓ ಧರ್ಮರಾಜನೇ! ಕರ್ಣನಿಗಿದ್ದ ಬಾಹುಪರಾಕ್ರಮವನ್ನು ಕಂಡು ಪರಶುರಾಮದೇವರಿಗೆ ಬಹಳ ಸಂತೋಷವಾಯಿತು. ಅಷ್ಟೇ ಅಲ್ಲದೇ ಅವನಲ್ಲಿರುವ ವಿನಯ, ಇಂದ್ರಿಯಜಯ, ತನಗೆ ಮಾಡುತ್ತಿದ್ದ ಗುರುಶೂಶ್ರೂಷೆ ಈ ಎಲ್ಲಾ ಗುಣಗಳಿಂದ ಭೃಗುಶ್ರೇಷ್ಠರಾದ ಪರಶುರಾಮದೇವರು ಸಂತುಷ್ಟರಾದರು.

ತಸ್ಮೈ ಸ ವಿಧಿವತ್ ಕೃತ್ಸ್ನಂ ಬ್ರಹ್ಮಾಸ್ತ್ರಂ ಸನಿವರ್ತನಮ್।
ಪ್ರೋವಾಚಾಖಿಲಮವ್ಯಗ್ರಂ ತಪಸ್ವೀ ಸುತಪಸ್ವಿನೇ ॥೨॥

ಕರ್ಣನ ವಿಷಯದಲ್ಲಿ ಪ್ರೀತರಾದ ಪರಶುರಾಮದೇವರು ಕರ್ಣನಿಗೆ ಅತ್ಯಂತ ಅಪೇಕ್ಷೆ ಇದ್ದ ರಹಸ್ಯವಾದ ಬ್ರಹ್ಮಾಸ್ತ್ರವನ್ನು ವಿಧಿಪ್ರಕಾರವಾಗಿ ಸಂಪೂರ್ಣವಾಗಿ ಉಪದೇಶಿಸಿದರು. ಬ್ರಹ್ಮಾಸ್ತ್ರದ ಪ್ರಯೋಗ ಹಾಗೂ ಉಪಸಂಹಾರಗಳೆರಡನ್ನೂ ಹೇಳಿಕೊಟ್ಟರು. ಇದನ್ನು ಪಡೆಯುವುದಕ್ಕಾಗಿ ಆ ಕರ್ಣನೂ ಸಹ ಒಳ್ಳೆಯ ತಪಸ್ವಿಯೇ ಆಗಿದ್ದನು.

ಟಿಪ್ಪಣಿ -

ಅಸ್ತ್ರಜ್ಞಚೂಡಾಮಣಿಮಿಂದ್ರಸೂನುಂ ವಿಶ್ವಸ್ಯ ಹಂತುಂ ಧೃತರಾಷ್ಟ್ರಪುತ್ರಃ।
ಏನಂ ಸಮಾಶ್ರಿತ್ಯ ದೃಢೋ ಭವೇತೇತ್ಯದಾಜ್ಞಾತ್ತೈವಾಸ್ತ್ರಮಸ್ಮೈ ರಮೇಶಃ (ತಾ.ನಿ.)

ಅಸ್ತ್ರಜ್ಞ ಚೂಡಾಮಣಿಯಿಂದ ಅರ್ಜುನನನ್ನು ಕೊಲ್ಲಲು ದುರ್ಯೋಧನ ಇವನನ್ನು ನಂಬಿ ಆಶ್ರಯಿಸಿ ದೃಢನಾಗಲಿ ಎಂದು ಭಾವಿಸಿ ಅವನಿಗೆ ಪರಶುರಾಮರು ತಿಳಿದೇ ಅಸ್ತ್ರವನ್ನು ನೀಡಿದರು.

ವಿದಿತಾಸ್ತ್ರಸ್ತತಃ ಕರ್ಣೋ ರಮಮಾಣೋऽऽಶ್ರಮೇ ಭೃಗೋಃ।
ಚಕಾರ ವೈ ಧನುರ್ವೇದೇ ಯತ್ನಮದ್ಭುತವಿಕ್ರಮಃ ॥೩॥

ಪರಶುರಾಮದೇವರಿಂದ ಬ್ರಹ್ಮಾಸ್ತ್ರ ಮೊದಲಾದ ಅಸ್ತ್ರವಿದ್ಯೆಯನ್ನು ತಿಳಿದುಕೊಂಡ ಕರ್ಣನಿಗೆ ಆ ಪರಶುರಾಮದೇವರ ಆಶ್ರಮದಲ್ಲಿ ಅತ್ಯಂತ ಉಲ್ಲಾಸದಿಂದ ಕಾಲವನ್ನು ಕಳೆದನು. ಮಹಾಪರಾಕ್ರಮಿಯಾದ ಅವನು ಸತತವಾಗಿ ಧನುರ್ವೇದವನ್ನು ಕರಗತಮಾಡಿಕೊಳ್ಳಲು ಪ್ರಯತ್ನ ಮಾಡುತ್ತಿದ್ದನು.

ಟಿಪ್ಪಣಿ -

ಜ್ಞಾನಂ ಚ ಭಾಗವತಮಪ್ಯಪರಾಶ್ಚವಿದ್ಯಾ
ರಾಮಾದವಾಪ್ಯ ವಿಜಯಂ ಧನುರಗ್ರ್ಯಯಾನಮ್।
ಅಬ್ದೈಶ್ಚತುರ್ಭಿರಥ ಚ ನ್ಯವಸತ್ ತದಂತೇ
ಹಾತುಂ ನ ಶಕ್ತ ಉರುಗಾಯಮಿಮಂ ಸ ಕರ್ಣಃ (ತಾ.ನಿ.)

ನಾಲ್ಕು ವರ್ಷಗಳ ಕಾಲ ಪರಶುರಾಮರಿಂದ ಪರಮಾತ್ಮ ಜ್ಞಾನವನ್ನೂ ಬೇರೆ

ವಿದ್ಯೆಗಳನ್ನೂ ಜಯಪ್ರದವಾದ ಬಿಲ್ಲನ್ನೂ ಒಳ್ಳೆಯ ರಥವನ್ನೂ ಪಡೆದು ಕರ್ಣ ಮತ್ತೂ ಹರಿಯನ್ನು ಬಿಡಲಾಗದೆ ಬಳಿಯಲ್ಲಿ ವಾಸಮಾಡಿದನು.

ತತಃ ಕದಾಚಿತ್ ರಾಮಸ್ತು ಚರನ್ನಾಶ್ರಮಮಂತಿಕಾತ್ ।
ಕರ್ಣೇನ ಸಹಿತೋ ಧೀಮಾನುಪವಾಸೇನ ಕರ್ಶಿತಃ ॥೪॥

ಒಮ್ಮೆ ಪರಶುರಾಮದೇವರು ಕರ್ಣನ ಜೊತೆ ತಮ್ಮ ಆಶ್ರಮದ ಸಮೀಪದಲ್ಲಿ ಸಂಚಾರ ಮಾಡುತ್ತಿದ್ದರು. ಆಗ ಉಪವಾಸವ್ರತದಲ್ಲಿ ನಿರತರಾದ ಪರಶುರಾಮದೇವರಿಗೆ ಆಯಾಸವಾಯಿತು.

ಸುಷ್ವಾಪ ಜಾಮದಗ್ನ್ಯೋ ವೈ ವಿಸ್ರಂಭೋತ್ಪನ್ನಸೌಹೃದಃ ।
ಕರ್ಣಸ್ಯೋತ್ಸಂಗ ಆಧಾಯ ಶರಃ ಕ್ಲಾಂತಮನಾ ಗುರುಃ ॥೫॥

ಕರ್ಣನ ವಿಷಯದಲ್ಲಿ ಪರಶುರಾಮದೇವರಿಗೆ ಬಹಳ ಪ್ರೀತಿಯಿತ್ತು. ವಿಶ್ವಾಸವೂ ಕೂಡ ಅಧಿಕವಾಗಿತ್ತು. ಅವನ ತೊಡೆಯ ಮೇಲೆ ತಲೆಯನ್ನಿಟ್ಟು ಮಲಗಿದರು. ಮನಸ್ಸೂ ಕೂಡ ಅವರಿಗೆ ಬಹಳ ಆಯಾಸವಾಗಿತ್ತು.

ಅಥ ಕೃಮಿಃ ಶ್ಲೇಷ್ಮಮಯೋ ಮಾಂಸಶೋಣಿತಭೋಜನಃ ।
ದಾರುಣೋ ದಾರುಣಸ್ಪರ್ಶಃ ಕರ್ಣಸ್ಯಾಭ್ಯಾಶಮಾಗಮತ್ ॥೬॥

ಪರಶುರಾಮದೇವರು ನಿದ್ದೆಯನ್ನು ಮಾಡುತ್ತಿರುವಾಗ ಒಂದು ಕ್ರಿಮಿಯು ಕರ್ಣನ ಬಳಿಗೆ ಬಂದಿತು. ಅತ್ಯಂತ ಭಯಂಕರವಾಗಿತ್ತು. ಕಫ, ಮೇದಸ್ಸು, ಮಾಂಸ ಮತ್ತು ರಕ್ತಗಳನ್ನು ಆಹಾರವನ್ನಾಗಿ ಸ್ವೀಕರಿಸುವ ಸ್ವಭಾವವುಳ್ಳದ್ದಾಗಿತ್ತು. ಭಯಂಕರವಾಗಿ ಕಚ್ಚುವ ಸ್ವಭಾವವನ್ನು ಹೊಂದಿತ್ತು.

ಸ ತಸ್ಯೋರುಮಥಾಸಾದ್ಯ ಬಿಭೇದ ರುಧಿರಾಶನಃ ।
ನ ಚೈನಮಶಕತ್ ಕ್ಷೇಪ್ತುಂ ಹಂತುಂ ವಾಪಿ ಗುರೋರ್ಭಯಾತ್ ॥೭॥

ರಕ್ತಪಾಯಿಯಾದ ಆ ಕ್ರಿಮಿಯು ಕರ್ಣನ ತೊಡೆಯ ಮೇಲೆ ಕುಳಿತುಕೊಂಡಿತು. ಕರ್ಣನ ತೊಡೆಯನ್ನು ಕೊರೆಯಲು ಪ್ರಾರಂಭಿಸಿತು. ಆದರೆ ಕರ್ಣನಿಗೆ

ಆ ಕ್ರಿಮಿಯನ್ನು ಎತ್ತಿ ಎಸೆಯಲು ಅಥವಾ ಸಾಯಿಸಲು ಸಾಧ್ಯವಾಗಲಿಲ್ಲ. ಏಕೆಂದರೆ ತಾನು ಅಲ್ಲಾಡಿದರೆ ಗುರುಗಳಿಗೆ ಎಚ್ಚರವಾದೀತು ಎಂಬ ಭಯ ಹೊಂದಿದನು.

ಸಂದಶ್ಯಮಾನೋಽಪಿ ತಥಾ ಕೃಮಿಣಾ ತೇನ ಭಾರತ।
ಗುರುಪ್ರಬೋಧಶಂಕೀ ಚ ತಮುಪೈಕ್ಷತ ಸೂತಜಃ ॥೮॥

ಓ ಭರತವಂಶೋದ್ಭವನೇ! ಆ ಕ್ರಿಮಿಯು ಭಯಂಕರವಾಗಿ ಆ ಕರ್ಣನ ತೊಡೆಯನ್ನು ಕಚ್ಚುತ್ತಲೇ ಇದೆ. ಆದರೂ ತಾನೂ ಶರೀರ ಕಂಪನವನ್ನು ಮಾಡಿದರೆ ಗುರುವಿಗೆ ನಿದ್ರಾಭಂಗವಾಗಿ ಬಿಡುವುದೋ ಏನೋ ಎಂಬ ಭಯದಿಂದ ಆ ಸೂತಪುತ್ರನಾದ ಕರ್ಣನು ಸುಮ್ಮನಿದ್ದನು. ಕ್ರಿಮಿಯು ತೊಡೆಯನ್ನು ಕೊರೆಯುತ್ತಲೇ ಇದ್ದರೂ ಕೂಡ ಅದನ್ನು ಉಪೇಕ್ಷಿಸಿದನು.

ಕರ್ಣಸ್ತು ವೇದನಾಂ ಧೈರ್ಯಾದಸಹ್ಯಾಂ ವಿನಿಗೃಹ್ಯ ತಾಮ್।
ಅಕಂಪನ್ನವ್ಯಥಯನ್ ಧಾರಯಾಮಾಸ ಭಾರ್ಗವಮ್ ॥೯॥

ಕರ್ಣನಿಗೆ ಆ ಕ್ರಿಮಿಯಿಂದ ಬಹಳ ನೋವಾಯಿತು. ಅದನ್ನು ಸಹಿಸಲು ಕಷ್ಟವೂ ಆಯಿತು. ಆದರೂ ಕೂಡ ಧೈರ್ಯದಿಂದ ಆ ನೋವನ್ನು ಸಹಿಸಿಕೊಂಡನು. ತನ್ನ ಅಂಗಾಂಗಗಳನ್ನು ಸ್ವಲ್ಪವೂ ಕದಲಿಸದೆ, ಎಚ್ಚರಿಕೆಯಿಂದ ಇದ್ದನು. ಆ ಕ್ರಿಮಿಗೂ ತೊಂದರೆ ಕೊಡಲಿಲ್ಲ. ಗುರುಗಳಿಗೂ ಕೂಡ ತೊಂದರೆ ಕೊಡದೇ ಹಾಗೇ ಮಲಗಿಸಿಕೊಂಡಿದ್ದನು.

ಯದಾ ತು ರುಧಿರೇಣಾಂಗಂ ಪರಿಸ್ಪೃಷ್ಟೋ ಭೃಗೂದ್ವಹಃ।
ತದಾ ಬುದ್ಧ್ಯತ ತೇಜಸ್ವೀ ಸಂತ್ರಸ್ತಶ್ಚೇದಮಬ್ರವೀತ್ ॥೧೦॥

ಆದರೆ ಕ್ರಿಮಿಯು ಕೊರೆದದ್ದರಿಂದ ತೊಡೆಯಿಂದ ರಕ್ತವು ಧಾರಾಕಾರವಾಗಿ ಹರಿಯಿತು. ಅದೇ ರಕ್ತವು ಮಲಗಿದ ಪರಶುರಾಮದೇವರನ್ನೂ ಕೂಡ ತಗುಲಿತು. ಕೂಡಲೇ ಪರಶುರಾಮದೇವರಿಗೆ ಎಚ್ಚರವಾಯಿತು. ಅದನ್ನು ಕಂಡು ಕಳವಳಗೊಂಡ ಪರಶುರಾಮದೇವರು ಹೀಗೆ ಹೇಳಿದರು -

ಅಹೋಽಸ್ಮ್ಯಶುಚಿತಾಂ ಪ್ರಾಪ್ತಃ ಕಿಮಿದಂ ಕ್ರಿಯತೇ ತ್ವಯಾ।
ಕಥಯಸ್ವ ಭಯಂ ತ್ಯಕ್ತ್ವಾ ಯಾಥಾತಥ್ಯಮಿದಂ ಮಮ ॥೧೧॥

ಏನಾಶ್ಚರ್ಯ! ಶಿಷ್ಯನೇ ! ರಕ್ತಸ್ಪರ್ಶದಿಂದ ನಾನು ಅಶುಚಿಯಾದೆನು. ನೀನೇಕೆ ಸುಮ್ಮನೆ ಕುಳಿತಿರುವೆ, ಭಯ ಪಡದೇ ಹೇಳು. ಯಥಾರ್ಥಸಂಗತಿಯನ್ನು ನನಗೆ ತಿಳಿಸು.

ತಸ್ಯ ಕರ್ಣಸ್ತದಾಚಷ್ಟ ಕೃಮಿಣಾ ಪರಿಭಕ್ಷಣಮ್।
ದದರ್ಶ ರಾಮಸ್ತಂ ಚಾಪಿ ಕೃಮಿಂಸೂಕರಸನ್ನಿಭಮ್ ॥೧೨॥

ಆಗ ಕರ್ಣನು ಗುರುಗಳಾದ ಪರಶುರಾಮದೇವರಿಗೆ ಕ್ರಿಮಿಯು ತನ್ನ ತೊಡೆಯನ್ನು ಕಚ್ಚಿದ ಎಲ್ಲಾ ವೃತ್ತಾಂತವನ್ನು ಯಥಾವತ್ತಾಗಿ ತಿಳಿಸಿದನು. ಆಗ ಪರಶುರಾಮದೇವರು ಕ್ರಿಮಿಯಿಂದ ಕೊರೆಯಲ್ಪಟ್ಟ ಕರ್ಣನನ್ನೂ, ಹಂದಿಯಂತಿದ್ದ ಆ ಕ್ರಿಮಿಯನ್ನೂ ಕೂಡ ನೋಡಿದರು.

ಅಷ್ಟಪಾದಂ ತೀಕ್ಷ್ಣದಂಷ್ಟ್ರಂ ಸೂಚೀಭಿರಿವ ಸಂವೃತಮ್।
ರೋಮಭಿಃ ಸನ್ನಿರುದ್ಧಾಂಗಮಲರ್ಕಂ ನಾಮ ನಾಮತಃ ॥೧೩॥

ಆ ಕ್ರಿಮಿಗೆ ಎಂಟು ಕಾಲುಗಳಿದ್ದವು. ತೀಕ್ಷ್ಣವಾದ ಕೋರೆದಾಡಿಗಳಿದ್ದವು. ಸೂಜಿಯಂತಿರುವ ರೋಮಗಳಿಂದ ಆ ಕ್ರಿಮಿಯ ದೇಹವು ಆವೃತವಾಗಿತ್ತು. ಕಷ್ಟದಿಂದ ತನ್ನ ಶರೀರವನ್ನು ಆಗ ಅದು ಸಣ್ಣದನ್ನಾಗಿ ಮಾಡಿಕೊಂಡಿತು. 'ಅಲರ್ಕ' ಎಂಬುದು ಅದರ ಹೆಸರು. ಇದರ ಹೆಸರು ಇದಕ್ಕೆ ಅನ್ವರ್ಥವಾಗಿತ್ತು.

ಸ ದೃಷ್ಟಮಾತ್ರೋ ರಾಮೇಣ ಕೃಮಿಃ ಪ್ರಾಣಾನವಾಸೃಜತ್।
ತಸ್ಮಿನ್ನೇವಾಸೃಜಿಕ್ಲಿನ್ನಪ್ತದದ್ಭೂತಮಿವಾಭವತ್ ॥೧೪॥

ಯಾವಾಗ ಪರಶುರಾಮದೇವರು ಆ ಕ್ರಿಮಿಯನ್ನು ನೋಡಿದರೋ, ಅವರ ದೃಷ್ಟಿಯಿಂದಲೇ ಕರ್ಣನ ರಕ್ತದಿಂದ ತೊಯ್ದುಹೋದ ಆ ಕ್ರಿಮಿಯು ಪ್ರಾಣವನ್ನು ಬಿಟ್ಟಿತು. ಇದು ಪರಶುರಾಮದೇವರಿಗೆ ಅತ್ಯಂತ ಆಶ್ಚರ್ಯಕರವಾಗಿ ಕಂಡಿತು.

ತತೋಽಂತರಿಕ್ಷೇ ದದೃಶೇ ವಿಶ್ವರೂಪಃ ಕರಾಲವಾನ್ ।
ರಾಕ್ಷಸೋ ಲೋಹಿತಗ್ರೀವಃ ಕೃಷ್ಣಾಂಗೋ ಮೇಘವಾಹನಃ ॥೧೫॥

ಮರುಕ್ಷಣದಲ್ಲಿಯೇ ಅಂತರಿಕ್ಷದಲ್ಲಿ ಅನೇಕವಿಧವಾದ ರೂಪಗಳುಳ್ಳ , ಭಯಂಕರವಾದ ಆಕಾರವುಳ್ಳ , ಕಪ್ಪಾದ ಮೈಬಣ್ಣವುಳ್ಳ , ಕಂಠದಲ್ಲಿ ಮಾತ್ರ ಕೆಂಪುಬಣ್ಣವುಳ್ಳ ಮೇಘದ ಮೇಲೆ ನಿಂತಿರುವ ರಾಕ್ಷಸನು ಕಂಡನು.

ಸ ರಾಮಂ ಪ್ರಾಂಜಲಿರ್ಭೂತ್ವಾ ಬಭಾಷೇ ಪೂರ್ಣಮಾನಸಃ ।
ಸ್ವಸ್ತಿ ತೇ ಭೃಗುಶಾರ್ದೂಲ ಗಮಿಷ್ಯಾಮಿ ಯಥಾಗತಮ್ ॥೧೬॥

ಮೋಕ್ಷಿತೋ ನರಕಾದಸ್ಮಿ ಭವತಾ ಮುನಿಸತ್ತಮ ।
ಭದ್ರಂ ಚ ತೇಽಸ್ತು ನಂದಿಶ್ಚ ಪ್ರಿಯಂ ಮೇ ಭವತಾ ಕೃತಮ್ ॥೧೭॥

ಆ ರಾಕ್ಷಸನು ಭಕ್ತಿಯಿಂದ ಕೈಜೋಡಿಸಿದವನಾಗಿ ಪೂರ್ಣವಾದ ಮನೋರಥವುಳ್ಳವನಾಗಿ, ಆ ಪರಶುರಾಮದೇವರನ್ನು ಕುರಿತು ಹೀಗೆ ಮಾತನಾಡುತ್ತಾನೆ- ಭೃಗುಶ್ರೇಷ್ಠರಾದ ಪರಶುರಾಮದೇವರೇ ! ತಮಗೆ ಮಂಗಳವಾಗಲಿ. ನಾನು ಎಲ್ಲಿಂದ ಬಂದೆನೋ, ಅಲ್ಲಿಗೆ ತೆರಳುತ್ತೇನೆ. ಮುನಿಶ್ರೇಷ್ಠರೇ ! ತಮ್ಮ ಅನುಗ್ರಹದಿಂದ ನನಗೆ ಈ ಕ್ರಿಮಿಜನ್ಮವೆಂಬ ನರಕದಿಂದ ಉದ್ಧಾರವಾಯಿತು. ತಮಗೆ ಭಕ್ತಿಪೂರ್ವಕವಾಗಿ ನಮಸ್ಕಾರ ಮಾಡುತ್ತೇನೆ. ತಮಗೆ ಮಂಗಳವಾಗಲಿ ! ನನಗೆ ಯಾವುದು ಪ್ರಿಯವೋ ಅದನ್ನೇ ತಾವು ಮಾಡಿ ಅನುಗ್ರಹಿಸಿರುವಿರಿ.

ತಮುವಾಚ ಮಹಾಬಾಹುರ್ಜಾಮದಗ್ನ್ಯಃ ಪ್ರತಾಪವಾನ್ ।
ಕಸ್ತ್ವಂ ಕಸ್ಮಾಚ್ಚ ನರಕಂ ಪ್ರತಿಪನ್ನೋ ಬ್ರವೀಹಿ ತತ್ ॥೧೮॥

ಮಹಾಬಾಹುಶಾಲಿಯಾದ, ಅತ್ಯಂತ ಪ್ರತಾಪಶಾಲಿಯಾದ ಜಮದಗ್ನಿಋಷಿಗಳ ಮಗನಾದ ಪರಶುರಾಮದೇವರು ಆ ರಾಕ್ಷಸನನ್ನು ಕುರಿತು ಪ್ರಶ್ನಿಸಿದರು. ಯಾರು ನೀನು? ಯಾವ ಕಾರಣಕ್ಕಾಗಿ ನರಕ ಸದೃಶವಾದ ಈ ಕ್ರಿಮಿಶರೀರವನ್ನು ಹೊಂದಿರುವಿ? ನನಗೆ ಕಾರಣವನ್ನು ತಿಳಿಸು.

ಸೋಽಬ್ರವೀದಹಮಾಸಂ ಪ್ರಾಗ್ ।
ಪುರಾ ದೇವಯುಗೇ ತಾತ ಭೃಗೋಸ್ತುಲ್ಯವಯಾ ಇವ ॥೧೯॥

ಆಗ ಆ ರಾಕ್ಷಸನು ಹೀಗೆ ಉತ್ತರಿಸಿದನು - ನಾನು ಹಿಂದೆ ದೇವಯುಗವೆನಿಸಿದ ಕೃತಯುಗದಲ್ಲಿ ದಂಶ ಎಂಬ ಹೆಸರಿನ ದೊಡ್ಡ ಅಸುರನಾಗಿದ್ದೆನು. ಭೃಗುಋಷಿಗೆ ಸಮಾನವಯಸ್ಕನಾಗಿದ್ದೆನು.

ಟಿಪ್ಪಣಿ - ದಂಶ, ದೃತ್ಸ, ಪ್ರಾಗ್ವಂಶ ಹೀಗೆ ಅನೇಕ ಹೆಸರುಗಳಿವೆ. ಒಂದೊಂದು ಪಾಠದಲ್ಲಿ ಒಂದೊಂದು ಬಗೆಯ ಹೆಸರುಗಳ ಉಲ್ಲೇಖವಿದೆ. ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಹೇತಿ ಎಂಬ ಹೆಸರನ್ನು ಹೇಳಿದ್ದಾರೆ.

ಸೋಽಹಂ ಭೃಗೋಃ ಸುದಯಿತಾಂ ಭಾರ್ಯಾಮಪಹರಂ ಬಲಾತ್।
ಮಹರ್ಷೇರಭಿಶಾಪೇನ ಕೃಮಿಭೂತೋಽಪತಂ ಭುವಿ ॥೨೦॥

ಇಂಥ ನಾನು ಭೃಗುಋಷಿಗಳಿಗೆ ಪ್ರೇಮಪಾತ್ರಳಾದ ಪತ್ನಿಯನ್ನು ಬಲಾತ್ಕಾರದಿಂದ ಅಪಹರಿಸಿದೆನು. ಇದರಿಂದ ಭೃಗುಋಷಿಗಳು ಅತ್ಯಂತ ಕುಪಿತರಾದರು. ಕ್ರಿಮಿಯಾಗೆಂದು ನನಗೆ ಶಪಿಸಿದರು. ನಾನು ಭೂಮಿಯಲ್ಲಿ ಕ್ರಿಮಿಯಾಗಿ ಬಿದ್ದೆನು.

ಅಬ್ರವೀತ್ತು ಸ ಮಾಂ ಕ್ರೋಧಾತ್ ತವ ಪೂರ್ವಪಿತಾಮಹಃ।
ಮೂತ್ರಶ್ಲೇಷ್ಮಾಶನಃ ಪಾಪ ನಿರಯಂ ಪ್ರತಿಪತ್ಸ್ಯಸೇ ॥೨೧॥

ಪರಶುರಾಮದೇವರೇ ! ತಮ್ಮ ವಂಶದ ಪಿತಾಮಹರಾದ ಆ ಭೃಗುಋಷಿಗಳು ನನ್ನನ್ನು ಕುರಿತು ಬಹಳ ಕೋಪದಿಂದ ಹೀಗೆ ಹೇಳಿದರು - ''ಮೂತ್ರ , ಕಫ ಮೊದಲಾದವುಗಳನ್ನು ತಿನ್ನುತ್ತಾ , ನರಕಸದೃಶವಾದ ಜನ್ಮವನ್ನು ತಾಳು''.

ಶಾಪಸ್ಯಾಂತೋ ಭವೇದ್ ಬ್ರಹ್ಮನ್ನೀತ್ಯೇವಂ ತಮಥಾಬ್ರುವಮ್ ।
ಭವಿತಾ ಭಾರ್ಗವಾತ್ ರಾಮಾತ್ ಇತಿ ಮಾಮಬ್ರವೀದ್ ಭೃಗುಃ॥೨೨॥

ಅವರು ಶಾಪವನ್ನು ನೀಡಿದ ಮೇಲೆ ನಾನು ಪ್ರಾರ್ಥಿಸಿದೆನು. ಬ್ರಾಹ್ಮಣಶ್ರೇಷ್ಠರೇ ! ಈ ಶಾಪದಿಂದ ನನಗೆ ಮೋಚನೆ ಹೇಗಾಗುತ್ತದೆ? ಎಂದು ಪ್ರಾರ್ಥಿಸಿ-

ದೆನು. ಆಗ ಆ ಭೃಗುಋಷಿಗಳು ತಮ್ಮ ವಂಶದಲ್ಲಿ ಭಾರ್ಗವರಾಮನು ಹುಟ್ಟುತ್ತಾನೆ. ಅವನಿಂದ ನಿನಗೆ ಶಾಪವಿಮೋಚನೆಯಾಗುತ್ತದೆ ಎಂದು ತಿಳಿಸಿದರು.

ಸೋಽಹಮೇನಾಂ ಗತಿಂ ಪ್ರಾಪ್ತೋ ಯಥಾ ನಕುಶಲಂ ತಥಾ ।
ತ್ವಯಾ ಸಾಧೋ ಸಮಾಗಮ್ಯ ವಿಮುಕ್ತಃ ಪಾಪಯೋನಿತಃ ॥೨೩॥

ಓ ಸಾಧುವರೇಣ್ಯರೇ! ನಾನು ಮಾಡಿದ ತಪ್ಪಿಗೆ ಇಂಥ ಪಾಪಯೋನಿಯಲ್ಲಿ ಹುಟ್ಟಿ, ನರಕದುಃಖವನ್ನು ಅನುಭವಿಸಿದೆನು. ಯಾವ ರೀತಿಯಲ್ಲೂ ಕ್ಷೇಮವನ್ನು ಈ ಜನ್ಮದಲ್ಲಿ ನಾನು ಕಂಡಿಲ್ಲ. ತಮ್ಮ ಸಮಾಗಮದ ಫಲವಾಗಿ ಇಂದು ಈ ಪಾಪ-ಜನ್ಮದಿಂದ ಮುಕ್ತನಾಗಿದ್ದೇನೆ.

ಏವಮುಕ್ತ್ವಾ ನಮಸ್ಕೃತ್ಯ ಯಯೌ ರಾಮಂ ಮಹಾಸುರಃ ।
ರಾಮಃ ಕರ್ಣಂ ತು ಸುಕ್ರೋಧಮಿದಂ ವಚನಮಬ್ರವೀತ್ ॥೨೪॥

ಹೀಗೆ ಆ ಮಹಾಸುರನು ಪರಶುರಾಮದೇವರನ್ನು ಕುರಿತು ಹೇಳಿ, ಭಕ್ತಿಯಿಂದ ಪುನಃ ನಮಸ್ಕಾರವನ್ನು ಮಾಡಿದನು. ಅಲ್ಲಿಂದ ತನ್ನ ಸ್ಥಳಕ್ಕೆ ಹೊರಟುಹೋದನು. ಅನಂತರ ಪರಶುರಾಮದೇವರು ಬಹಳ ಸಿಟ್ಟಿನಿಂದ ಕರ್ಣನ ಕಡೆಗೆ ತಿರುಗಿ ಹೀಗೆ ಹೇಳಿದರು -

ಅತಿದುಃಖಮಿದಂ ಮೂಢ ನ ಜಾತು ಬ್ರಾಹ್ಮಣಃ ಸಹೇತ್ ।
ಕ್ಷತ್ರಿಯಸ್ಯೈವ ತೇ ಧೈರ್ಯಂ ಕಾಮಯಾ ಸತ್ಯಮುಚ್ಯತಾಮ್ ॥೨೫॥

ಓ ಮೂಢನೇ! ಇಂಥ ಭಯಂಕರವಾದ ಕ್ರಿಮಿಯ ಬಾಧೆಯನ್ನು ಬ್ರಾಹ್ಮಣ-ನಿಂದ ಸಹಿಸಲು ಸಾಧ್ಯವಿಲ್ಲ. ಕ್ಷತ್ರಿಯರು ಮಾತ್ರ ಇಂಥ ವೇದನೆಯನ್ನು ಸಹಿಸಿ-ಕೊಳ್ಳುವ ಧೈರ್ಯವನ್ನು ಹೊಂದಿರುತ್ತಾರೆ. ಇಂಥ ಗುಣವು ನಿನ್ನಲ್ಲಿ ಕಾಣಿಸುತ್ತಿದೆ. ಸುಳ್ಳು ಹೇಳಬೇಡ. ನನ್ನ ಬಳಿ ನೀನಾಗಿಯೇ ಸತ್ಯವನ್ನು ಹೇಳು.

ತಮುವಾಚ ತತಃ ಕರ್ಣಃ ಶಾಪಾದ್ ಭೀತಃ ಪ್ರಸಾದಯನ್ ।
ಬ್ರಹ್ಮಕ್ಷತ್ರಾಂತರೇ ಸೂತಂ ಜಾತಂ ಮಾಂ ವಿದ್ಧಿ ಭಾರ್ಗವ ॥೨೬॥

ಆಗ ಕರ್ಣನು ಶಾಪಭಯದಿಂದ ನಡುಗುತ್ತಾ, ಆ ಪರಶುರಾಮದೇವರನ್ನು ಪ್ರಸನ್ನೀಕರಿಸಿಕೊಳ್ಳಲು ಹೀಗೆ ಸತ್ಯವನ್ನು ಬಿಚ್ಚಿಡುವನು. ಓ ಭಾರ್ಗವ! ನಾನು ನಿಜವಾಗಿಯೂ ಕೂಡ ಬ್ರಾಹ್ಮಣನಲ್ಲ. ಬ್ರಾಹ್ಮಣ ಹಾಗೂ ಕ್ಷತ್ರಿಯರಿಬ್ಬರಲ್ಲಿ ಹುಟ್ಟಿದ ಸೂತಜಾತಿಯವನೆಂದು ನನ್ನನ್ನು ತಿಳಿ.

ರಾಧೇಯಃ ಕರ್ಣ ಇತಿ ಮಾ ಪ್ರವದಂತಿ ಜನಾ ಭುವಿ।
ಪ್ರಸಾದಂ ಕುರು ಮೇ ಬ್ರಹ್ಮನ್ನಸ್ತ್ರಲುಬ್ಧಸ್ಯ ಭಾರ್ಗವ ॥೨೭॥

ಕರ್ಣನಾದ ನನ್ನನ್ನು ಜನರು ಭೂಲೋಕದಲ್ಲಿ 'ರಾಧೇಯ' ಎಂದೇ ಕರೆಯುತ್ತಾರೆ. ನಾನು ಅಸ್ತ್ರವನ್ನು ಕಲಿಯಬೇಕೆಂಬ ಆಸೆಯಿಂದ ನಿನ್ನಲ್ಲಿ ಬ್ರಾಹ್ಮಣವೇಷವನ್ನು ಧರಿಸಿ ಬಂದಿರುವೆನು. ನನ್ನ ಅಪರಾಧವನ್ನು ಮನ್ನಿಸಿ, ಕೃಪೆ ತೋರು.

ಪಿತಾ ಗುರುರ್ನ ಸಂದೇಹೋ ವೇದವಿದ್ಯಾಪ್ರದಃ ಪ್ರಭುಃ।
ಅತೋ ಭಾರ್ಗವ ಇತ್ಯುಕ್ತಂ ಮಯಾ ಗೋತ್ರಂ ತವಾಂತಿಕೇ ॥೨೮॥

ವಿದ್ಯೆಯನ್ನು ನೀಡುವ ಗುರುವೇ ತಂದೆಯೆಂಬ ವಿಷಯದಲ್ಲಿ ನನಗೆ ಸಂದೇಹವಿಲ್ಲ. ಈ ಕಾರಣದಿಂದಲೇ ನನ್ನನ್ನು ಭಾರ್ಗವ ಗೋತ್ರಜನೆಂದು ತಮ್ಮ ಬಳಿ ತಿಳಿಸಿಬಿಟ್ಟೆನು.

ತಮುವಾಚ ಭೃಗುಶ್ರೇಷ್ಠಃ ಸರೋಷಃ ಪ್ರದಹನ್ನಿವ।
ಭೂಮೌ ನಿಪತಿತಂ ದೀನಂ ವೇಪಮಾನಂ ಕೃತಾಂಜಲಿಮ್ ॥೨೯॥

ಇಷ್ಟು ಹೇಳಿ ಕರ್ಣನು ಕೈಮುಗಿದು ನಡುಗುತ್ತಾ ಭೂಮಿಯ ಮೇಲೆ ಬಿದ್ದನು. ಅತ್ಯಂತ ಖಿನ್ನನಾಗಿ ಬದ್ಧಾಂಜಲಿಯಾಗಿ ಪುನಃ ಪುನಃ ಆ ಪರಶುರಾಮದೇವರಿಗೆ ನಮಿಸಿದನು. ಇಂಥ ಉದ್ವಿಗ್ನ ಪರಿಸ್ಥಿತಿಯಲ್ಲಿರುವ ಕರ್ಣನನ್ನು ಕಂಡು ಪರಶುರಾಮದೇವರು ಹೀಗೆ ಹೇಳುತ್ತಾರೆ -

ಯಸ್ಮಾನ್ಮಿಥ್ಯೋಪಚರಿತೋ ಅಸ್ತ್ರಲೋಭಾದಿಹ ತ್ವಯಾ।
ತಸ್ಮಾದೇತದ್ಧಿ ತೇ ಮೂಢ ಬ್ರಹ್ಮಾಸ್ತ್ರಂ ಪ್ರತಿಭಾಸ್ಯತಿ ॥೩೦॥

ಅನ್ಯತ್ರ ವಧಕಾಲಾತ್ತೇ ಸದೃಶೇನ ಸಮಾಯುಷಃ।

ಎಲೌ ಮೂರ್ಖನೇ! ಬ್ರಹ್ಮಾಸ್ತ್ರವನ್ನು ಪಡೆಯಬೇಕೆಂಬ ದುರಾಸೆಯಿಂದ ನನ್ನ ಬಳಿಯೇ ಸುಳ್ಳನ್ನು ಹೇಳಿ ವಂಚನೆ ಮಾಡಿರುವೆಯಾ? ಈ ಕಾರಣದಿಂದ ನಿನ್ನ ಮೃತ್ಯುಕಾಲವು ಹತ್ತಿರವಾದಾಗ ಮತ್ತು ನಿನಗೆ ಸರಿಸಾಟಿಯಾದ ವೀರನ ಜೊತೆ ಯುದ್ಧಮಾಡುವಾಗ ಆ ಬ್ರಹ್ಮಾಸ್ತ್ರವು ನಿನಗೆ ಸ್ಫುರಣವಾಗದೇ ಇರಲಿ. ಸರಿಯಾದ ಸಮಯದಲ್ಲಿ ಅದರ ಮಂತ್ರವು ನಿನಗೆ ನೆನಪು ಬಾರದಿರಲಿ. ಉಳಿದ ಸಂದರ್ಭದಲ್ಲಿ ಆ ಅಸ್ತ್ರಜ್ಞಾನವು ನಿನಗೆ ಇರುತ್ತದೆ.

ಅಬ್ರಾಹ್ಮಣೇ ನಹಿ ಬ್ರಹ್ಮ ಧ್ರುವಂ ತಿಷ್ಠೇತ್ ಕದಾಚನ ॥೩೧॥

ಗಚ್ಛೈದಾನೀಂ ನ ತೇ ಸ್ಥಾನಮನೃತಸ್ಯೇಹ ವಿದ್ಯತೇ।
ನ ತ್ವಯಾ ಸದೃಶೋ ಯುದ್ಧೇ ಭವಿತಾ ಕ್ಷತ್ರಿಯೋ ಭುವಿ ॥೩೨॥

ಬ್ರಾಹ್ಮಣನಲ್ಲದವನಲ್ಲಿ ಈ ಬ್ರಹ್ಮಾಸ್ತ್ರವು ಹೆಚ್ಚು ಕಾಲ ಎಂದೂ ನಿಲ್ಲುವುದಿಲ್ಲ. ಇನ್ನು ಹೊರಟು ಹೋಗು. ನಿನ್ನಂಥ ಸುಳ್ಳುಹೇಳುವವರಿಗೆ ಇದು ಉಚಿತವಾದ ಸ್ಥಳವಲ್ಲ. ಆದರೂ ನನ್ನ ಬಳಿ ಶಿಷ್ಯತ್ವವನ್ನು ವಹಿಸಿದ್ದು ವ್ಯರ್ಥವಾಗುವುದಿಲ್ಲ. ಯುದ್ಧದಲ್ಲಿ ನಿನಗೆ ಸರಿಸಾಟಿಯಾದ ಮತ್ತೊಬ್ಬ ಕ್ಷತ್ರಿಯನು ಇರಲು ಸಾಧ್ಯವಿಲ್ಲ.

ಏವಮುಕ್ತಸ್ತು ರಾಮೇಣ ನ್ಯಾಯೇನೋಪಜಗಾಮ ಸಃ।
ದುರ್ಯೋಧನಮುಪಾಗಮ್ಯ ಕೃತಾಸ್ತ್ರೋಽಸ್ಮೀತಿ ಚಾಬ್ರವೀತ್ ॥೩೩॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ
ರಾಜಧರ್ಮೇ ತೃತಿಯೋಽಧ್ಯಾಯಃ ॥

ಯುಧಿಷ್ಠಿರನೇ ! ಪರಶುರಾಮದೇವರು ಹೀಗೆ ಹೇಳಿದ ಮೇಲೆ ಕರ್ಣನು ತನ್ನ ಯೋಗ್ಯತೆಗೆ ಅನುಗುಣವಾಗಿ ಆ ಗುರುವನ್ನು ಸತ್ಕಾರ ಮಾಡಿದನು. ಮತ್ತು ಅಲ್ಲಿಂದ ಹೊರಟನು. ಹಸ್ತಿನಾಪಟ್ಟಣಕ್ಕೆ ಬಂದು ದುರ್ಯೋಧನನಲ್ಲಿ 'ಕೃತಾಸ್ತ್ರೋಽಸ್ಮಿ' ನಾನು ಸಕಲ ಅಸ್ತ್ರವಿದ್ಯೆಗಳಲ್ಲಿ ಪಾರಂಗತನಾಗಿದ್ದೇನೆ ಎಂದು ಹೇಳಿದನು.

ಟಿಪ್ಪಣಿ - ತನಗೆ ಬಂದ ಯಾವುದೇ ಶಾಪಗಳನ್ನು ದುರ್ಯೋಧನನಿಗೆ ತಿಳಿಸಲಿಲ್ಲ. ಎಲ್ಲಾ ಅಸ್ತ್ರವಿದ್ಯೆಗಳನ್ನು ಕಲಿತಿದ್ದೇನೆ ಎಂದಷ್ಟೇ ತಿಳಿಸಿದನು.

ತಾತ್ಪರ್ಯನಿರ್ಣಯ -

ಅಂಕೇ ನಿಧಾಯ ಸ ಕದಾಚಿದಮುಷ್ಯ ರಾಮಃ
ಶಿಶ್ಯೇ ಶಿರೋ ವಿಗತನಿದ್ರ ಉದಾರಬೋಧಃ।
ಸಂಸುಪ್ತವತ್ ಸುರವರಃ ಸುರಕಾರ್ಯಹೇತೋ
ರ್ದಾತುಂ ಚ ವಾಲಿನಿಧನಸ್ಯ ಫಲಂ ತದಸ್ಯ ॥

ಒಮ್ಮೆ ಪರಶುರಾಮರು ಕರ್ಣನ ತೊಡೆಯ ಮೇಲೆ ತಲೆಯಿಟ್ಟು ಮಲಗಿದರು. ನಿದ್ದೆ ಇಲ್ಲದ ಉತ್ತಮಜ್ಞಾನರೂಪನಾದ ಆ ದೇವೋತ್ತಮ ದೇವಕಾರ್ಯಕ್ಕಾಗಿ ಮತ್ತು ಸುಗ್ರೀವಾವತಾರದಲ್ಲಿ ವಾಲಿಯನ್ನು ಕೊಲ್ಲಿಸಿದ್ದಕ್ಕೆ ಫಲಕೊಡುವುದಕ್ಕಾಗಿ ನಿದ್ದೆ ಮಾಡುತ್ತಿರುವಂತೆ ಮಲಗಿದ್ದನು.

ತತ್ರಾಸ ರಾಕ್ಷಸವರಃ ಸ ತು ಹೇತಿನಾಮಾ
ಕಾಲೇ ಮಹೇಂದ್ರಮನುಪಾಸ್ಯ ಹಿ ಶಾಪತೋಽಸ್ಯ।
ಕೀಟಸ್ತಮಿಂದ್ರ ಉತ ತತ್ರ ಸಮಾವಿವೇಶ
ಕರ್ಣಸ್ಯ ಶಾಪಮುಪಪಾದಯಿತುಂ ಸುತಾರ್ಥೇ ॥

ಹೇತಿ ಎಂಬ ಉತ್ತಮ ರಾಕ್ಷಸ ಸಕಾಲದಲ್ಲಿ ಇಂದ್ರನ ಸೇವೆ ಮಾಡದಿದ್ದುದಕ್ಕಾಗಿ ಅವನ ಶಾಪದಿಂದ ಕೀಟನಾಗಿ ಅಲ್ಲಿ ಹುಟ್ಟಿದ್ದನು. ತನ್ನ ಮಗನಾದ ಅರ್ಜುನನ ಹಿತಕ್ಕಾಗಿ ಕರ್ಣನಿಗೆ ಪರಶುರಾಮರಿಂದ ಶಾಪಕೊಡಿಸುವ ಉದ್ದೇಶದಿಂದ ಇಂದ್ರ ಆ ಕೀಟದಲ್ಲಿ ಆವೇಶಗೊಂಡನು.

ಕರ್ಣಃ ಸಕೀಟತನುಗೇನ ಕಿರೀಟನೈವ
ಹ್ಯೂರೋರಧಸ್ತಲತ ಔಪರಿಗಾತ್ವಚಶ್ಚ।
ವಿದ್ಧಃ ಶರೇಣ ಸ ಯಥಾ ರುಧಿರಸ್ಯ ಧಾರಾಂ
ಸುಸ್ರಾವ ತಂ ವಿಗತ ನಿದ್ರ ಇವಾಹ ರಾಮಃ ॥

ಕೀಟ ಶರೀರದಲ್ಲಿದ್ದ ಹೇತಿಯೊಂದಿಗೆ ಇಂದ್ರ ಕರ್ಣನ ತೊಡೆಯ ಕೆಳಭಾಗದಿಂದಾರಂಭಿಸಿ ಮೇಲ್ಭಾಗದ ಚರ್ಮದವರೆಗೂ ಬಾಣದಂತೆ ಕೊರೆದು

ಗಾಯ ಮಾಡಿದ. ಆಗ ರಕ್ತದ ಕೋಡಿ ಹರಿಯಿತು. ಪರಶುರಾಮರು ಅದರಿಂದ ಎಚ್ಚೆತ್ತವನಂತೆ ಎದ್ದು ಕೇಳತೊಡಗಿದರು.

ಕಿಂ ತ್ವಂ ನ ಚಾಲಯಸಿ ಮಾಂ ರುಧಿರಪ್ರಸೇಕೇ
ಪ್ರಾಪ್ತೇऽಪಿ ಪಾವನವಿರೋಧಿನಿ ಕೋऽಸಿ ಚೇತಿ ।
ತಂ ಪ್ರಾಹ ಕರ್ಣ ಇಹ ನೈವ ಮಯಾ ವಿಧೇಯೋ
ನಿದ್ರಾವಿರೋಧ ಇತಿ ಕೀಟ ಉಪೇಕ್ಷಿತೋ ಮೇ ॥

'ಅಪವಿತ್ರ ರಕ್ತ ಸ್ಪರ್ಶವಾಗುತ್ತಿದ್ದರೂ ನೀನು ನನ್ನನ್ನು ಏಕೆ ಅಲ್ಲಾಡಿಸಲಿಲ್ಲ? ಯಾರು ನೀನು?' ಪರಶುರಾಮ ಹೀಗೆ ಕೇಳಿದಾಗ ಕರ್ಣನೆಂದ, 'ನಾನು ನಿಮಗೆ, ಈ ಗಾಢ ನಿದ್ರಾಕಾಲದಲ್ಲಿ ನಿದ್ರಾಭಂಗವನ್ನು ಮಾಡಬಾರದೆಂದು ಕೀಟವನ್ನು ಸುಮ್ಮನೆಬಿಟ್ಟೆ'.

ಜಾತ್ಯಾಸ್ಮಿ ಸೂತ ಉತ ತೇ ತನಯೋऽಸ್ಮಿ ಸತ್ಯಂ
ತೇನಾಸ್ಮಿ ವಿಪ್ರ ಇತಿ ಭಾರ್ಗವವಂಶಜೋऽಹಮ್ ।
ಅಗ್ರೇऽಬ್ರುವಂ ಭವತ ಈಶ ನ ಹಿ ತ್ವದನ್ಯೋ
ಮಾತಾ ಪಿತಾ ಗುರುತರೋ ಜಗತೋऽಪಿ ಮುಖ್ಯಃ ॥

''ಜನ್ಮತಃ ನಾನು ಸೂತನಾಗಿದ್ದೇನೆ. ತಮ್ಮ ಮಗನೂ ಆಗಿರುವುದರಿಂದ ಭಾರ್ಗವಗೋತ್ರೋತ್ಪನ್ನಬ್ರಾಹ್ಮಣನೆಂದು ತಮ್ಮ ಮುಂದೆ ಹೇಳಿದ್ದೆ. ಅದೂ ಸತ್ಯವೆ. ಏಕೆಂದರೆ ನಿಮಗಿಂತ ಬೇರೆ ಜಗತ್ತಿಗೆ ಮುಖ್ಯವಾಗಿ ತಾಯಿ ತಂದೆ ಮತ್ತು ಮಹಾಗುರು ಇನ್ನೊಬ್ಬನಿಲ್ಲ ತಾನೆ?'

ಇತ್ಯುಕ್ತಮಾತ್ರವಚನೇ ಸ ತು ಕೀಟಕೋऽಸ್ಯ
ರಾಮಸ್ಯ ದೃಷ್ಟಿವಿಷಯತ್ವತ ಏವ ರೂಪಮ್ ।
ಸಂಪ್ರಾಪ್ಯ ನೈಜಮತಿಪೂರ್ಣಗುಣಸ್ಯ ತಸ್ಯ
ವಿಷ್ಣೋರನುಗ್ರಹತ ಆಪ ವಿಮಾನಗಃ ಸ್ವಃ ॥

ಹೀಗೆ ಕರ್ಣ ಹೇಳಿದ ಮಾತ್ರಕ್ಕೆ ಪರಶುರಾಮರ ದೃಷ್ಟಿಗೋಚರವಾದ ಕೀಟ ತನ್ನ ನಿಜರೂಪ ತಳೆದು ಅತ್ಯಂತ ಪೂರ್ಣಗುಣರಾದ ಆ ಪರಶುರಾಮರ ಅನುಗ್ರಹದಿಂದ ವಿಮಾನವೇರಿ ಸ್ವರ್ಗ ಪಡೆಯಿತು.

ಅಥಾಹ ರಾಮಸ್ತಮಸತ್ಯವಾಚಂ
ನ ತೇ ಸಕಾಶೇ ಮಮ ವಾಸಯೋಗ್ಯತಾ ।
ತಥಾಪಿ ತೇ ನೈವ ವೃಥಾ ಮದೀಯಾ
ಭಕ್ತಿರ್ಭವೇಜ್ಜೇಷ್ಯಸಿ ಸರ್ವ ಶೂತ್ರನ್ ॥

ಸುಳ್ಳು ಹೇಳಿದ ಕರ್ಣನಿಗೆ ಪರಶುರಾಮರು ಶಪಿಸಿದರು - 'ನಿನಗೆ ನನ್ನ ಬಳಿ ಇರಲು ಯೋಗ್ಯತೆ ಇಲ್ಲ. ಆದರೂ ನಿನಗೆ ನನ್ನಲ್ಲಿರುವ ಭಕ್ತಿ ಎಂದೂ ವ್ಯರ್ಥವಾಗದು. ಅದರಿಂದ ನೀನು ಎಲ್ಲ ಶತ್ರುಗಳನ್ನು ಗೆಲ್ಲುವಿ.

ಅಸ್ಪರ್ಧಮಾನಂ ನ ಕಥಂಚನ ತ್ವಾಂ ಚೇತಾ ಕಶ್ಚಿತ್ ಸ್ಪರ್ಧಮಾನಸ್ತ್ಯಾಸಿ ।
ಪರಾಭೂತಿಂ ನಾತ್ರ ವಿಚಾರ್ಯಮಾಸ್ತಿಪ್ರಮಾದೀ ತ್ವಂ ಭವಿತಾ ಚಾಸ್ತ್ರಸಂಘೇ॥

'ನೀನು ಸ್ಪರ್ಧಿಸದಿರುವಾಗ ಯಾರೂ ಯಾವ ರೀತಿಯಿಂದಲೂ ನಿನ್ನನ್ನು ಗೆಲ್ಲಲಾರರು. ಸ್ಪರ್ಧಿಸಿದರೆ ಪರಾಜಯ ಹೊಂದುವಿ, ಅಸ್ತ್ರಸಮೂಹವನ್ನು ಮರೆಯುವಿ, ಇದರಲ್ಲಿ ವಿಚಾರಿಸುವುದೇನಿಲ್ಲ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೩ನೆಯ ಅಧ್ಯಾಯವು ಮುಗಿಯಿತು.

* * * * *

೪. ನಾಕನೆಯ ಅಧ್ಯಾಯ

ದುರ್ಯೋಧನನು ಸ್ವಯಂವರಮಂಟಪದಲ್ಲಿ ಕಳಿಂಗರಾಜನ ಕನ್ಯೆಯನ್ನು ಅಪಹರಿಸಿದನು. ಆಗ ಕರ್ಣನು ದುರ್ಯೋಧನನ ಪರವಾಗಿ ಬಂದ ಎಲ್ಲಾ ರಾಜರನ್ನು ಸೋಲಿಸಿದನು.

ನಾರದಃ

ಕರ್ಣಸ್ತು ಸಮವಾಪ್ಯೈತದಸ್ತ್ರಂ ಭಾರ್ಗವನಂದನಾತ್ ।
ದುರ್ಯೋಧನೇನ ಸಹಿತೋ ಮುಮುದೇ ಭರತರ್ಷಭ ॥೧॥

ನಾರದರು – ಓ ಭರತವಂಶೋದ್ಭವನೇ! ಈ ಪ್ರಕಾರವಾಗಿ ದಿವ್ಯಾಸ್ತ್ರಗಳನ್ನು ಪರಶುರಾಮದೇವರ ದೆಸೆಯಿಂದ ಕರ್ಣನು ಪಡೆದುಕೊಂಡನು. ಮುಂದೆ ದುರ್ಯೋಧನನ ಜೊತೆ ಸಂತೋಷದಿಂದ ಕಾಲ ಕಳೆದನು.

ತತಃ ಕದಾಚಿದ್ ರಾಜಾನಃ ಸಮಾಜಗ್ಮುಃ ಸ್ವಯಂವರೇ।
ಕಲಿಂಗವಿಷಯೇ ರಾಜನ್ ರಾಜ್ಞಶ್ಚಿತ್ರಾಂಗದಸ್ಯ ಚ ॥೨॥

ಹೀಗೆ ಕಾಲ ಕಳೆಯುತ್ತಿರುವಾಗ ಒಮ್ಮೆ ಕಳಿಂಗದೇಶದ ರಾಜನಾದ ಚಿತ್ರಾಂಗದನು ತನ್ನ ಮಗಳ ಸ್ವಯಂವರವನ್ನು ಏರ್ಪಡಿಸಿದನು. ಆ ಸ್ವಯಂವರದ ಮಹೋತ್ಸವಕ್ಕೆ ಅನೇಕ ದೇಶಗಳಿಂದ ರಾಜರುಗಳು ಬಂದು ನೆರೆದಿದ್ದರು.

ಶ್ರೀಮದ್ ರಾಜಪುರಂ ನಾಮ ನಗರಂ ತತ್ರ ಭಾರತ।
ರಾಜಾನಃ ಶತಶಸ್ತತ್ರ ಕನ್ಯಾರ್ಥಂ ಸಮುಪಾಗಮನ್ ॥೩॥

ಸಂಪದ್ಭರಿತವಾದ ಆ ರಾಜಪುರವೆಂಬ ನಗರವು ಕಳಿಂಗ ದೇಶದ ರಾಜಧಾನಿಯಾಗಿತ್ತು. ನೂರಾರು ಮಂದಿ ರಾಜಕುಮಾರರು ಆ ರಾಜಕುಮಾರಿಯನ್ನು ಪಡೆಯುವುದಕ್ಕಾಗಿ ಅಲ್ಲಿಗೆ ಆಗಮಿಸಿದ್ದರು.

ಶ್ರುತ್ವಾ ದುರ್ಯೋಧನಸ್ತತ್ರ ಸಮೇತಾನ್ ಸರ್ವಪಾರ್ಥಿವಾನ್।
ರಥೇನ ಕಾಂಚನಾಂಗೇನ ಕರ್ಣೇನ ಸಹಿತೋ ಯಯೌ ॥೪॥

ಎಲ್ಲಾ ನಗರಗಳಿಂದ ರಾಜಕುಮಾರರು ಆ ಸ್ವಯಂವರಕ್ಕೆ ಬಂದಿರುವರೆಂಬ ವಿಷಯವನ್ನು ದುರ್ಯೋಧನನು ತಿಳಿದನು. ಅಲ್ಲಿಗೆ ತಾನೂ ಹೋಗಬೇಕೆಂದು ಅಪೇಕ್ಷೆ ಪಟ್ಟನು. ಬಂಗಾರಮಯವಾದ ರಥದಲ್ಲಿ ಕುಳಿತು ತನ್ನ ಸ್ನೇಹಿತನಾದ ಕರ್ಣನ ಜೊತೆ ಆ ಸ್ವಯಂವರ ಸ್ಥಳಕ್ಕೆ ಹೊರಟನು.

ತತಃ ಸ್ವಯಂವರೇ ತಸ್ಮಿನ್ ಸಂಪ್ರವೃತ್ತೇ ಮಹೋತ್ಸವೇ।
ಸಮಾಜಗ್ಮುರ್ನೃಪತಯಃ ಕನ್ಯಾರ್ಥೇ ನೃಪಸತ್ತಮ ॥೫॥

ಓ ನರೋತ್ತಮನೇ! ಆ ರಾಜಪುರ ಪಟ್ಟಣದಲ್ಲಿ ಸ್ವಯಂವರಕ್ಕೆ ಸಂಬಂಧಪಟ್ಟ ಮಹೋತ್ಸವವು ಪ್ರಾರಂಭವಾಯಿತು. ಅದೇ ಸಂದರ್ಭದಲ್ಲಿ ಕನ್ಯಾರ್ಥಿಗಳಾಗಿ ಅನೇಕ ರಾಜರುಗಳು ಆಗಮಿಸಿದರು.

ಶಿಶುಪಾಲೋ ಜರಾಸಂಧೋ ಭೀಷ್ಮಕೋ ವಕ್ರ ಏವ ಚ।
ಕಪೋತರೋಮಾ ನೀಲಶ್ಚ ರುಕ್ಮೀ ಚ ದೃಢವಿಕ್ರಮಃ ॥೬॥

ಸೃಗಾಲಶ್ಚ ಮಹಾರಾಜ ಸ್ತ್ರೀರಾಜ್ಯಾಧಿಪತಿಶ್ಚ ಯಃ।
ಅಶೋಕಃ ಶತಧನ್ವಾ ಚ ಭೋಜೋ ವೀರಶ್ಚ ನಾಮತಃ ॥೭॥

ಶಿಶುಪಾಲ, ಜರಾಸಂಧ, ಭೀಷ್ಮ, ದಂತವಕ್ರ, ಕಪೋತರೋಮ, ನೀಲ, ಮಹಾಪರಾಕ್ರಮಶಾಲಿಯಾದ ರುಗ್ಮಿ ಮತ್ತು ಸ್ತ್ರೀರಾಜ್ಯಕ್ಕೆ ಅಧಿಪತಿಯಾದ ಮಹಾರಾಜನೆಂದು ಪ್ರಸಿದ್ಧನಾದ ಸೃಗಾಲವಾಸುದೇವ, ಅಶೋಕ, ಶತಧನ್ವಾ, ಭೋಜ, ವೀರ ಮೊದಲಾದ ರಾಜರುಗಳು ಅಲ್ಲಿಗೆ ಬಂದರು.

ಏತೇ ಚಾನ್ಯೇ ಚ ಬಹವೋ ದಕ್ಷಿಣಾಂ ದಿಶಮಾಶ್ರಿತಾಃ।
ಮ್ಲೇಚ್ಛಾಚಾರ್ಯಾಶ್ಚ ರಾಜಾನಃ ಪ್ರಾಚ್ಯೋದೀಚ್ಯಾಶ್ಚ ಭಾರತ ॥೮॥

ಈ ಎಲ್ಲಾ ರಾಜರುಗಳು ಮತ್ತು ಇನ್ನೂ ಅನೇಕ ರಾಜರುಗಳು ಅಲ್ಲಿಗೆ ಬಂದರು. ದಕ್ಷಿಣದೇಶದಿಂದ ಅನೇಕ ರಾಜಕುಮಾರರು ಆಗಮಿಸಿದರು. ಮ್ಲೇಂಛರು, ಆರ್ಯರು ಹಾಗೂ ಪೂರ್ವದಿಕ್ಕಿನ, ಉತ್ತರದಿಕ್ಕಿನ ರಾಜರುಗಳೂ ಕೂಡ ಅಲ್ಲಿಗೆ ಬಂದರು.

ಕಾಂಚನಾಂಗದಿನಃ ಸರ್ವೇ ಬದ್ಧಜಾಂಬೂನದಸ್ರಜಃ।
ಸರ್ವೇ ಭಾಸ್ವರದೇಹಾಶ್ಚ ವ್ಯಾಘ್ರಾ ಇವ ಮದೋತ್ಕಟಾಃ ॥೯॥

ಆಗಮಿಸಿದ ಎಲ್ಲಾ ರಾಜರು ಸುವರ್ಣಮಯವಾದ ಆಭರಣಗಳನ್ನು ಧರಿಸಿಕೊಂಡಿದ್ದರು. ಸುವರ್ಣದ ಹಾರಗಳನ್ನು ಕಂಠದಲ್ಲಿ ಧರಿಸಿದ್ದರು. ಅವರ ದೇಹದ ಕಾಂತಿಯು ಸುವರ್ಣದಂತೆ ಕಂಗೊಳಿಸುತ್ತಿತ್ತು. ಪ್ರತಿಯೊಬ್ಬರೂ ಕೂಡ ಶುಭ್ರವಾದ ಶರೀರವುಳ್ಳವರಾಗಿದ್ದರು. ಹುಲಿಯಂತೆ ಬಲದಿಂದ ದರ್ಪಿಷ್ಟರಾಗಿದ್ದರು.

ತತಃ ಸಮುಪವಿಷ್ಟೇಷು ತೇಷು ರಾಜಸು ಭಾರತ।
ವಿವೇಶ ರಂಗಂ ಸಾ ಕನ್ಯಾ ಧಾತ್ರೀವರ್ಷಧರಾನ್ವಿತಾ ॥೧೦॥

ಆ ಸ್ವಯಂವರದ ಸಭಾಂಗಣದಲ್ಲಿ ಎಲ್ಲಾ ರಾಜರು ತಮ್ಮ ಯೋಗ್ಯವಾದ ಆಸನಗಳಲ್ಲಿ ಕುಳಿತುಕೊಂಡರು. ಆಗ ರಾಜಕನ್ಯೆಯು ತನ್ನ ಸಖಿಯರ ಜೊತೆ ಮತ್ತು ದಾದಿಯರ ಜೊತೆ ರಂಗಪ್ರವೇಶ ಮಾಡಿದಳು.

ಧಾತ್ರೀವರ್ಷಧರಾನ್ವಿತಾಇತ್ಯತ್ರವರ್ಷಧರಾಃ ಷಂಢಾಃ। 'ಷಂಡೋವರ್ಷಧರಸ್ತುಲ್ಯೌ' ಇತ್ಯಮರಃ॥

'ಧಾತ್ರೀವರ್ಷಧರಾನ್ವಿತಾ' ಎಂಬಲ್ಲಿ ವರ್ಷಧರ ಎಂಬ ಪದಕ್ಕೆ ಷಂಡರು ಎಂದರ್ಥ. 'ಷಂಡೋವರ್ಷಧರಸ್ತುಲ್ಯೌ' ಎಂಬ ಅಮರಕೋಶವು ಇದಕ್ಕೆ ಆಧಾರವಾಗಿದೆ.

ವಿವರಣೆ - ಆ ರಾಜಕುಮಾರಿಯು ರಂಗಪ್ರವೇಶವನ್ನು ಮಾಡುವಾಗ ಅವಳ ಜೊತೆ ಯಾರಿದ್ದರು ? ಎಂಬುದಕ್ಕೆ 'ಧಾತ್ರೀವರ್ಷಧರಾನ್ವಿತಾ' ಎಂಬ ಪದವು ವಿವರಣೆಯನ್ನು ನೀಡುತ್ತಿದೆ. ಧಾತ್ರೀ ಎಂಬ ಪದಕ್ಕೆ ದಾದಿಯರು ಎಂದರ್ಥ. ದಾದಿಯರು ಎಂದರೆ ಸಾಕುತಾಯಿಯರು ಎಂದರ್ಥ. ವಾಸ್ತವಿಕವಾಗಿ ಧಾತ್ರೀ ಎಂಬ ಪದವು ತಾಯಿಯೆಂಬರ್ಥದಲ್ಲಿ ಪ್ರಯುಕ್ತವಾಗಿದೆ. ಆದರೆ ಪಟ್ಟದ ರಾಣಿಯರು ಸಾಮಾನ್ಯವಾಗಿ ಹಾಗೇ ಸಭೆಯ ಮಧ್ಯದಲ್ಲಿ ಎಲ್ಲರ ಎದುರು ನಡೆದಾಡುವುದಿಲ್ಲ. ಆದ್ದರಿಂದ ಧಾತ್ರೀ ಎಂಬ ಪದಕ್ಕೆ ಸಾಕುತಾಯಿ ಎಂಬ ಮತ್ತೊಂದು ಅರ್ಥವನ್ನು ಕೋಶಗಳಲ್ಲಿ ಕಾಣುತ್ತೇವೆ. ಕನ್ಯೆಯನ್ನು ಅತ್ಯಂತ ಪ್ರೀತಿವಾತ್ಸಲ್ಯದಿಂದ ನೋಡಿಕೊಂಡ ಹಿರಿಯ ದಾದಿಯರನ್ನು ಇಲ್ಲಿ ವಿವಕ್ಷಿಸಬೇಕು. ಕೆಲವು ಪುಸ್ತಕಗಳಲ್ಲಿ ಸಖಿಯರು ಎಂಬರ್ಥವನ್ನು ಹೇಳುತ್ತಾರೆ. ಈ ಅರ್ಥವನ್ನು ಸುತರಾಂ ಇಲ್ಲಿ ವಿವಕ್ಷಿಸಲು ಸಾಧ್ಯವಿಲ್ಲ. ಆ ಕನ್ಯೆಗೆ ಆತ್ಮೀಯರಾದ ಹಿರಿಯರಾದ ಅವಳನ್ನು ಸಾಕಿಬೆಳೆಸಿದ ದಾದಿಯರು ಅವಳ ಜೊತೆ ಇದ್ದರು ಎಂಬರ್ಥವನ್ನೇ ವಿವಕ್ಷಿಸಬೇಕು. ಮತ್ತು ಆ ಕನ್ಯೆಯ ಜೊತೆ ವರ್ಷಧರರೂ ಕೂಡ ಇದ್ದರು. ವರ್ಷಧರರು ಎಂದರೆ ನಪುಂಸಕರು ಎಂದರ್ಥ. ಸಾಮಾನ್ಯವಾಗಿ ರಾಜಕನ್ಯೆಯರ ರಕ್ಷಣೆಗಾಗಿ ಷಂಡರು ಇರುತ್ತಿದ್ದರು. ಯಾವುದೇ ರೀತಿ ಇತರರು ಅವಳ ಮೇಲೆ ದೈಹಿಕವಾದ ತೊಂದರೆಗಳನ್ನು ನೀಡಬಾರದೆನ್ನಲು ಷಂಢರನ್ನು ಏರ್ಪಾಡು ಮಾಡಿರುತ್ತಿದ್ದರು. ರಾಜಕನ್ಯೆಯ ಅಂಗರಕ್ಷಕರಾಗಿ ದಾದಿಯರಿದ್ದರೆ, ಅವಳ ರಕ್ಷಕರಾಗಿ ಷಂಢರು ಇರುತ್ತಿದ್ದರೆಂಬುದನ್ನು ನಾವು ಇತಿಹಾಸದ ಕಥೆಗಳಿಂದ ತಿಳಿಯುತ್ತೇವೆ. ಮಹಾಭಾರತದಲ್ಲೂ ಕೂಡ ಇದರ ಉಲ್ಲೇಖವಿರುವುದು ಅತ್ಯಪೂರ್ವ-

ವಾಗಿದೆ. ಆದ್ದರಿಂದ ಈ ಶ್ಲೋಕದಲ್ಲಿರುವ ಈ ವಿಶೇಷಣವು ರಾಣಿಯರ ಮತ್ತು ರಾಜಕನ್ಯೆಯರ ರಕ್ಷಣೆಯನ್ನು ಹೇಗೆ ಮಾಡುತ್ತಿದ್ದರು? ಎಂಬ ವಿಷಯದಲ್ಲಿ ಗಮನೀಯವಾದ ಆಧಾರವಾಗಿದೆ.

ಈಗ ಕಾಣಿಸುವ ಅಮರಕೋಶದ ದಾಕ್ಷಿಣಾತ್ಯಪಾಠ ಹಾಗೂ ಔತ್ತರೇಯ-ಪಾಠಗಳಲ್ಲಿ ವರ್ಷಧರಃ ಎಂಬ ಪಾಠವು ಕಾಣಿಸುವುದಿಲ್ಲ. ವರ್ಷವರ ಎಂಬ ಪಾಠವೇ ಕಾಣಿಸುತ್ತದೆ. ಆದರೆ ಬೇರೆ ಕೋಶಗಳಲ್ಲಿ ವರ್ಷಧರ ಮತ್ತು ವರ್ಷವರ ಎಂಬೆರಡು ಶಬ್ದಗಳು ಸಮಾನಾರ್ಥಕಗಳೆಂದು ಬರೆಯುತ್ತಾರೆ. ಆದ್ದರಿಂದ ಲಕ್ಷ್ಮಾಲಂಕಾರದಲ್ಲಿ ಕಾಣಿಸುವ ವರ್ಷಧರ ಎಂಬ ಪ್ರಯೋಗವು ಸಾಧುವಾಗಿದೆ. ಮತ್ತು ಷಂಢಾಃ ಎಂಬರ್ಥವನ್ನು ಬರೆದಿರುವುದು ಸ್ವರಸವಾದ ಅರ್ಥವಾಗಿದೆ.

ತತಃ ಸಂಶ್ರಾವ್ಯಮಾಣೇಷು ರಾಜ್ಞಾಂ ನಾಮಸು ಭಾರತ।
ಅತ್ಯಕ್ರಾಮದ್ ಧಾರ್ತರಾಷ್ಟ್ರಂ ಸಾ ಕನ್ಯಾ ವರವರ್ಣಿನೀ ॥೧೧॥

ಓ ಭರತನಂದನನೇ! ಅನಂತರ ಆ ರಾಜಕನ್ಯೆಯು ಸ್ವಯಂವರಮಾಲೆಯನ್ನು ಹಿಡಿದುಕೊಂಡು, ಮುಂದೆ ಮುಂದೆ ಸಾಗುತ್ತಿರುವಂತೆ ರಾಜಭಟರು ಅವಳಿಗೆ ಅಲ್ಲಿ ಕುಳಿತಿರುವ ಎಲ್ಲಾ ರಾಜರುಗಳ ಪರಿಚಯವನ್ನು ಮಾಡಿಸುತ್ತಿದ್ದರು. ಆ ರಾಜ-ಕನ್ಯೆಯು ಎಲ್ಲಾ ರಾಜರನ್ನು ನೋಡುತ್ತಾ ಹಾಗೇ ಮುಂದೆ ಸಾಗುತ್ತಿದ್ದಳು. ಆದರೆ ಯಾರಿಗೂ ಸ್ವಯಂವರ ಮಾಲೆಯನ್ನು ಹಾಕುತ್ತಿರಲಿಲ್ಲ. ಅದೇ ರೀತಿಯಾಗಿ ದುರ್ಯೋಧನನ್ನೂ ಕೂಡಿ ಉಪೇಕ್ಷಿಸಿ ಮುಂದೆ ಸಾಗಿದಳು.

ದುರ್ಯೋಧನಸ್ತು ಕೌರವ್ಯೋ ನಾಮರ್ಷಯತ ಲಂಘನಮ್।
ಪ್ರತ್ಯಷೇಧಚ್ಚ ತಾಂ ಕನ್ಯಾಮಸತ್ಕೃತ್ಯ ನರಾಧಿಪಾನ್ ॥೧೨॥

ತನಗೆ ಸ್ವಯಂವರ ಮಾಲೆಯನ್ನು ಹಾಕದೇ ಉಪೇಕ್ಷಿಸಿ, ಆ ಕನ್ಯೆಯು ಮುಂದೆ ಸಾಗಿದ್ದನ್ನು ಕಂಡು ದುರ್ಯೋಧನನಿಗೆ ಸಹಿಸಲು ಸಾಧ್ಯವಾಗಲಿಲ್ಲ. ಅಲ್ಲಿ ನೆರೆದಿ-ರುವ ಎಲ್ಲಾ ರಾಜರನ್ನು ಉಪೇಕ್ಷಿಸಿ, ಆ ದುರ್ಯೋಧನನು ಎದ್ದು ಬಂದು ಆ ಕನ್ಯೆಯು ಮುಂದೆ ಹೋಗದಂತೆ ತಡೆದನು.

ಸ ವೀರ್ಯಮದಮತ್ತತ್ವಾದ್ ಭೀಷ್ಮದ್ರೋಣಾವುಪಾಶ್ರಿತಃ।
ರಥಮಾರೋಪ್ಯ ತಾ ಕನ್ಯಾಮಾಜಹಾರ ನರಾಧಿಪಃ ॥೧೩॥

ಆ ದುರ್ಯೋಧನನಿಗೆ ತನ್ನ ಪರಾಕ್ರಮದ ಬಗ್ಗೆ ಬಹಳ ಕೆಚ್ಚಿತ್ತು. ಭೀಷ್ಮ-ದ್ರೋಣಾದಿಗಳ ಆಶ್ರಯದ ಬಲವೂ ಕೂಡ ಇತ್ತು. ಆದ್ದರಿಂದ ಯಾರನ್ನೂ ಕೂಡ ಲೆಕ್ಕಿಸದೆ ಆ ಕನ್ಯೆಯನ್ನು ಹಿಡಿದು, ಬಲಾತ್ಕಾರವಾಗಿ ತನ್ನ ರಥದಲ್ಲಿ ಕೂಡಿಸಿ-ಕೊಂಡನು. ಅನಂತರ ಅಲ್ಲಿ ನೆರೆದ ಎಲ್ಲ ರಾಜರನ್ನು ಯುದ್ಧಕ್ಕೆ ಕರೆದನು.

ಟಿಪ್ಪಣಿ - ದುರ್ಯೋಧನ ಅಪಹರಿಸಿದ ಈ ಕನ್ಯೆ ಬೇರಾರೂ ಅಲ್ಲ. ಸಾಕ್ಷಾತ್ ಅಲಕ್ಷ್ಮಿಯೇ ಆಗಿದ್ದಾಳೆ. ಮತ್ತು ಇವಳ ತಂದೆ ಕಾಶೀರಾಜನಾಗಿದ್ದಾನೆ. ಇದನ್ನು ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಶ್ರೀಮಧ್ವಾಚಾರ್ಯರು ಹೀಗೆ ನಿರ್ಣ-ಯಿಸಿದ್ದಾರೆ -

ಪೂರ್ವಂ ಹಿ ತೇಷು ವನಗೇಷು ಬಭೂವ ಕಾಶಿ-
ರಾಜ್ಞಃ ಸುತಾಕೃತ ಉರುಕ್ಷಿತಿಪಾಲಯೋಗಃ।
ತತ್ರ ಸ್ವಯಂವರಗತಾಂ ಧೃತರಾಷ್ಟ್ರಪುತ್ರಃ
ಕನ್ಯಾಂ ಬಲಾಜ್ಜಗೃಹ ಆತ್ಮಬಲಾತಿದೃಪ್ತಃ ॥

ದ್ರೌಪದೀ ಸ್ವಯಂವರವಾಗುವುದಕ್ಕೆ ಮೊದಲು, ಪಾಂಡವರು ಹಿಡಿಂಬವನ-ದಲ್ಲಿದ್ದಾಗ, ಕಾಶಿರಾಜನ ಮಗಳ ಸ್ವಯಂವರಕ್ಕಾಗಿ ರಾಜರುಗಳ ಮಹಾ ಸಮ್ಮೇಲನ ನಡೆದಿತ್ತು. ಅದರಲ್ಲಿ ದುರ್ಯೋಧನನು ತಾನೇ ಬಲಿಷ್ಠನೆಂಬ ಮಹಾ ಅಹಂಕಾರದಿಂದ ಸ್ವಯಂವರ ಮಂಟಪದಲ್ಲಿ ನಿಂತಿದ್ದ ಕನ್ಯೆಯನ್ನು ಬಲಾತ್ಕಾರವಾಗಿ ಅಪಹರಿಸಿದ.

ಪೂರ್ವಂ ಹಿ ರಾಜಗಣನೇ ಮಗಧಾಧಿರಾಜಃ
ಸಂಖ್ಯಾತ ಇತ್ಯತಿರುಷಾ ಪ್ರಗೃಹೀತಕನ್ಯೇ।
ದುರ್ಯೋಧನೇ ನೃಪತಯೋ ಯುಯುಧುಃ ಸ್ಮತೇನ
ಭಗ್ನಾಶ್ಚ ಕರ್ಣಸಹಿತೇನ ಸಹಾನುಜೇನ ॥

ಸ್ವಯಂವರಮಂಟಪದಲ್ಲಿ ರಾಜರುಗಳಲ್ಲಿ ಮೊದಲಿಗೆ ಜರಾಸಂಧ ಪರಿ-ಗಣಿತನಾದನೆಂದು ಅಸಹನೆಯಿಂದ ದುರ್ಯೋಧನನು ಕನ್ಯೆಯನ್ನು ಅಪಹರಿ-

ಸಿದ್ದ. ಆಗ ರಾಜರು ಅವನೊಡನೆ ಯುದ್ಧ ಮಾಡಿದರು. ದುರ್ಯೋಧನ ಅವರನ್ನು ಕರ್ಣನ ಮತ್ತು ತಮ್ಮಂದಿರ ಸಹಾಯದಿಂದ ಪರಾಭವಗೊಳಿಸಿದ.

ತಮನ್ವಯಾದ್ ರಥೀ ಖಡ್ಗೀ ಬದ್ಧಗೋಧಾಂಗುಲಿತ್ರವಾನ್ ।
ಕರ್ಣಃ ಶಸ್ತ್ರಭೃತಾಂ ಶ್ರೇಷ್ಠಃ ಪೃಷ್ಠತಃ ಪುರುಷರ್ಷಭ ॥೧೪॥

ಆ ಕರ್ಣನು ಆ ದುರ್ಯೋಧನನಿಗೆ ಬೆಂಬಲಿಗನಾಗಿ ನಿಂತನು. ರಥಾರೂಢನಾಗಿ ಖಡ್ಗವನ್ನು ಹಿಡಿದು ಕೈಚೀಲಗಳನ್ನು ಧರಿಸಿ, ಆ ದುರ್ಯೋಧನನ ಹಿಂದೆ ಸಾಗಿದನು.

ತತೋ ವಿಮರ್ದಃ ಸುಸಾನ್ ರಾಜ್ಞಾಮಾಸೀದ್ ಯುಧಿಷ್ಠಿರ ।
ಸನ್ನಹ್ಯತಾಂ ತನುತ್ರಾಣಿ ರಥಾನ್ ಯೋಜಯತಾಮಪಿ ॥೧೫॥

ಯುಧಿಷ್ಠಿರನೇ! ಆ ದುರ್ಯೋಧನನ ದುಷ್ಟತನವನ್ನು ಕಂಡು ಕುಪಿತರಾದ ಅಲ್ಲಿ ನೆರೆದ ರಾಜರೆಲ್ಲರೂ ಯುದ್ಧಕ್ಕೆ ಸಿದ್ಧರಾದರು. ಕೆಲವರು ಕವಚಗಳನ್ನು ಧರಿಸಿದರು. ಕೆಲವರು ರಥಗಳನ್ನು ಸಜ್ಜುಗೊಳಿಸಿದರು.

ತೇऽಭ್ಯಧಾವಂತ ಸಂಕ್ರುದ್ಧಾಃ ಕರ್ಣದುರ್ಯೋಧನಾವುಭೌ ।
ಶರವರ್ಷಾಣಿ ಮುಂಚಂತೋ ಮೇಘಾಃ ಪರ್ವತಯೋರಿವ ॥೧೬॥

ಅನಂತರ ಭಯಂಕರ ಯುದ್ಧವೇ ಪ್ರಾರಂಭವಾಯಿತು. ಕರ್ಣ, ದುರ್ಯೋಧನರಿಬ್ಬರು ಅತ್ಯಂತ ಕ್ರುದ್ಧರಾಗಿ ಮೇಘಗಳು ಪರ್ವತದ ಮೇಲೆ ಮಳೆಯನ್ನು ಸುರಿಸುವಂತೆ ಎಡೆಬಿಡದೆ ಬಾಣವರ್ಷಗಳನ್ನು ಸುರಿಸಿದರು.

ಟಿಪ್ಪಣಿ - ದುರ್ಯೋಧನ ಮತ್ತು ಕರ್ಣರಿಬ್ಬರು ಒಟ್ಟಿಗೆ ಯುದ್ಧ ಮಾಡಿದರೆಂದು ಇಲ್ಲಿ ಉಲ್ಲೇಖವಿದೆ. ಆದರೆ ಸ್ವಲ್ಪ ಕಾಲ ದುರ್ಯೋಧನನು ಕರ್ಣನ ಮತ್ತು ತಮ್ಮಂದಿರ ಸಹಾಯದಿಂದ ಯುದ್ಧವನ್ನು ಮಾಡುತ್ತಾನೆ. ಅನಂತರ ಮುಂದೆ ಕರ್ಣನೊಬ್ಬನೇ ಯುದ್ಧವನ್ನು ಮಾಡುತ್ತಾನೆ. ಇದನ್ನು ಮುಂದಿನ ಶ್ಲೋಕವು ಇಲ್ಲಿ ಸ್ಪಷ್ಟಪಡಿಸಿದೆ. ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಇದರ ಬಗ್ಗೆ ಸ್ಪಷ್ಟವಾದ ನಿರ್ಣಯವನ್ನು ಶ್ರೀಮಧ್ವಾಚಾರ್ಯರು ಮಾಡಿರುತ್ತಾರೆ. ಮತ್ತು

ಇಲ್ಲಿಲ್ಲದ ಇನ್ನೂ ಹೆಚ್ಚಿನ ವಿಚಾರವನ್ನು ಮಹಾಭಾರತ ತಾತ್ಪರ್ಯನಿರ್ಣಯದಿಂದ ತಿಳಿದುಕೊಳ್ಳಬೇಕು-

ಭಗ್ನೇಷು ತೇಷು ಪುನರಾತ್ತಶರಾಸನೇಷು
ಕರ್ಣೋ ಜಗಾದ ಧೃತರಾಷ್ಟ್ರಸುತಂ ಪ್ರಯಾಹಿ ।
ಯುಕ್ತಃ ಸಹೋದರಜನೈರ್ಗುರುಭೀಷ್ಮಮುಖ್ಯೈ-
ರ್ಯುಕ್ತಸ್ಯ ತೇ ನ ಪರಮೇತ್ಯ ಹಿ ಧರ್ಷಣೇಶಾಃ ॥

ಪರಾಜಿತರಾದ ರಾಜರು ಪುನಃ ಬಿಲ್ಲನೆತ್ತಿದಾಗ ಕರ್ಣ ದುರ್ಯೋಧನನಿಗೆ ಹೇಳಿದ. 'ನೀನು ತಮ್ಮಂದಿರೊಡನೆ ಹಸ್ತಿನಾವತಿಗೆ ಹೋಗು. ಅಲ್ಲಿ ಭೀಷ್ಮ ಮುಂತಾದವರ ರಕ್ಷಣೆಯಲ್ಲಿರುವಾಗ ನಿನ್ನನ್ನು ಈ ರಾಜರು ಬಂದು ಆಕ್ರಮಿಸಲು ಶಕ್ತರಾಗಲಾರರು.

ಏಕಾಂತತೋ ಜಯಮವೀಕ್ಷ್ಯ ಚ ನಾನುಯಾತಿ
ಬಾರ್ಹದ್ರಥಃ ಪುರಗತಸ್ಯ ಜಯೇ ನ ನಿಷ್ಠಾ ।
ದ್ರೌಣಿಂ ಹಿ ರುದ್ರತನುಮೇಷ ಸದಾ ವಿಜಾನನ್
ನೋ ತೇನ ಯುದ್ಧಮಭಿವಾಂಛತಿ ರುದ್ರಭಕ್ತಃ ॥

ಜರಾಸಂಧನೂ ತಾನು ನಿಶ್ಚಿತವಾಗಿ ಜಯಗಳಿಸುವೆನೆಂಬ ವಿಶ್ವಾಸವಿಲ್ಲದೆ ಯುದ್ಧಕ್ಕೆ ಹೊರಡುವುದಿಲ್ಲ. ನೀನು ನಿನ್ನ ಪಟ್ಟಣದಲ್ಲಿದ್ದರೆ ಅವನಿಗೆ ಜಯ-ಗಳಿಸುವ ಬಗ್ಗೆ ಭರವಸೆ ಉಂಟಾಗಲಾರದು. ಇದಲ್ಲದೆ ಅಶ್ವತ್ಥಾಮನನ್ನು ಅವನು ರುದ್ರನ ಅವತಾರವೆಂದು ಸದಾ ತಿಳಿದಿರುವುದರಿಂದ ಅವನೊಡನೆ ಯುದ್ಧವನ್ನು ರುದ್ರಭಕ್ತನಾದ ಆತ ಎಂದಿಗೂ ಇಷ್ಟಪಡುವುದಿಲ್ಲ.

ಏಕೋಽಹಮೇವ ನೃಪತೀನ್ ಪ್ರತಿಯೋಧಯಿಷ್ಯ
ಏತೈರ್ಮಯಿ ಪ್ರವಿಜಿತೇಽಪಿನ ತೇಽಸ್ತ್ಯಕೀರ್ತಿಃ ।
ಏಕಂ ಚ ತೇಽನುಜಮಿಮೇ ಯದಿ ಪೌರುಷೇಣ
ಗೃಹ್ಣೀಯುರತ್ರ ತವ ಕೀರ್ತಿರುಪೈತಿ ನಾಶಂ ॥

ಇಲ್ಲಿ ನಾನೊಬ್ಬನೇ ರಾಜರನ್ನು ಇದಿರಿಸಿ ಯುದ್ಧ ಮಾಡಬಲ್ಲೆ. ಒಂದು ವೇಳೆ ನಾನು ಇವರಿಗೆ ಸೋತರೂ ನಿನಗೆ ಅಪಕೀರ್ತಿ ಇಲ್ಲ. ನೀನು ಇಲ್ಲಿಯೆ ಇದ್ದು ನಿನ್ನ

ಒಬ್ಬ ತಮ್ಮನನ್ನಾದರೂ ಇವರು ಪೌರುಷದಿಂದ ಸೆರೆ ಹಿಡಿದರೂ ನಿನ್ನ ಕೀರ್ತಿ ಹಾಳಾಗುವುದು.

ಭೀಷ್ಮಾದಯೋಽಪಿ ನ ಹಿ ಯೋಧಯಿತುಂ ಸಮರ್ಥಾ
ರಾಜ್ಞ್ಹಾನೇನ ತತ ಏವ ಚ ಬಾಹ್ಲಿಕೋಽಸ್ಯ ।
ಭೃತ್ಯೋ ಬಭೂವ ನ ಹಿ ಭೀಷ್ಮಮಯಂ ಯುಧೇಽಗಾದ್
ರಾಜಾ ನ ಹೀತಿ ನ ಚ ತೇನ ವಿರೋಧ ಆಸೀತ್ ॥

ಭೀಷ್ಮಾದ್ರಿಗಳೂ ಕೂಡ ಈ ಜರಾಸಂಧನೊಡನೆ ಯುದ್ಧ ಮಾಡಲು ಶಕ್ತರಲ್ಲ. ಅದರಿಂದಲೇ ಬಾಹ್ಲಿಕ ಅವನಿಗೆ ಅಡಿಯಾಳಾಗಿದ್ದಾನೆ. ಆದರೂ ಭೀಷ್ಮನನ್ನು ಯುದ್ಧದಲ್ಲಿ ಅವನು ಆಕ್ರಮಿಸಲಿಲ್ಲ. ಏಕೆಂದರೆ ಭೀಷ್ಮ ರಾಜನಲ್ಲ ಎಂದು. ಅದರಿಂದಲೇ ಭೀಷ್ಮನೊಡನೆ ಜರಾಸಂಧ ಎಂದೂ ಯುದ್ಧ ಮಾಡಲಿಲ್ಲ.

ಇತ್ಯುಕ್ತ ಆಶು ಸ ವಿಮೃಶ್ಯ ಯಯೌ ಪುರಂ ಸ್ವಂ
ಕರ್ಣೋಽಪಿ ತೈಃ ಪ್ರತಿಯುಯೋಧ ಜಿಗಾಯ ಚೈತಾನ್ ।
ಕರ್ಣಸ್ಯ ವೀರ್ಯಮಗಣಯ್ಯ ಜರಾಸುತೋಽಪಿ
ಹ್ಯೇಕೈಕಮೇವ ನೃಪತಿಂ ಸ ದಿದೇಶ ಯೋದ್ಧುಮ್ ॥

ಕರ್ಣ ಹೀಗೆ ಹೇಳಿದಾಗ ದುರ್ಯೋಧನ ಆಲೋಚಿಸಿ ತನ್ನ ಪಟ್ಟಣಕ್ಕೆ ಹಿಂತಿರುಗಿದ. ಕರ್ಣ ರಾಜರೊಡನೆ ಯುದ್ಧಮಾಡಿ ಅವರನ್ನು ಗೆದ್ದನು. ಏಕೆಂದರೆ ಕರ್ಣನ ಸಾಮರ್ಥ್ಯವನ್ನು ಲೆಕ್ಕಿಸದೆ ಜರಾಸಂಧ ಒಬ್ಬೊಬ್ಬ ರಾಜನನ್ನೇ ಅವನ ಬಳಿ ಯುದ್ಧ ಮಾಡಲು ಕಳಿಸಿದ್ದ.

ಮಹಾಭಾರತದಲ್ಲಿ ಯುದ್ಧ ಮುಗಿದ ಮೇಲೆ ದುರ್ಯೋಧನ ಕರ್ಣರಿಬ್ಬರೂ ಒಟ್ಟಿಗೆ ತಮ್ಮ ಪಟ್ಟಣಕ್ಕೆ ಹಿಂತಿರುಗಿದರೆಂದು ಹೇಳಲಾಗಿದೆ. ಆದರೆ ನಿರ್ಣಯದಲ್ಲಿ ದುರ್ಯೋಧನ ಮೊದಲೇ ತನ್ನ ಪಟ್ಟಣಕ್ಕೆ ಕನ್ಯೆಯನ್ನು ಕರೆದುಕೊಂಡು ಹೋದನು. ಅನಂತರ ಕರ್ಣನು ತೆರಳಿದನು ಎಂದು ಹೇಳಿರುತ್ತಾರೆ.

ಕರ್ಣಸ್ತೇಷಾಮಾಪತತಾಮೇಕೈಕೇನ ಕ್ಷುರೇಣ ಹ ।
ಧನೂಂಷಿ ಸಶರಾವಾಪಾ ನ್ಯಪಾತಯತ ಭೂತಲೇ ॥೧೭॥

ಅನಂತರ ಕರ್ಣನೊಬ್ಬನೇ ತನ್ನ ಪರಾಕ್ರಮದಿಂದ ಪ್ರತಿಯೊಬ್ಬ ರಾಜರ ಧನುಸ್ಸುಗಳನ್ನು ಮತ್ತು ಬಾಣಗಳ ಸಮೂಹವನ್ನು ತನ್ನ ಬಾಣದಿಂದ ಕತ್ತರಿಸಿದನು. ಮತ್ತು ಆ ರಾಜರನ್ನು ನೆಲದ ಮೇಲೆ ಬೀಳಿಸಿದನು.

ತತೋ ವಿಧನುಷಃ ಕಾಂಶ್ಚಿತ್ ಕಾಂಶ್ಚಿದ್ ಉದ್ಯತಕಾರ್ಮುಕಾನ್ ।
ಕಾಂಶ್ಚಿದುದ್ವಹತೋ ಬಾಣಾನ್ ರಥಶಕ್ತಿಗದಾಸ್ತಥಾ ॥೧೮॥

ಕರ್ಣನು ತನ್ನಲ್ಲಿರುವ ಯುದ್ಧಕೌಶಲ್ಯದಿಂದ ಕೆಲವರ ಬಿಲ್ಲುಬಾಣಗಳನ್ನು ಒಂದೊಂದೇ ತನ್ನ ಬಾಣದಿಂದ ಕತ್ತರಿಸಿ ಉರುಳಿಸಿದನು. ಕೆಲವರನ್ನು ಧನುಸ್ಸಿಲ್ಲದವರನ್ನಾಗಿ ಮಾಡಿದರು. ಕೆಲವರು ಬಿಲ್ಲನ್ನು ಎತ್ತಿ ಬಾಣಗಳನ್ನು ಬಿಡುತ್ತಿರುವಾಗ ಅವರು ಎತ್ತಿದ ಕೈಯ ಜೊತೆ ಹಾಗೆಯೇ ಅವರು ನಿಲ್ಲುವಂತೆ ಮಾಡಿಬಿಟ್ಟನು. ಇನ್ನೂ ಕೆಲವರು ತಮ್ಮ ಬಾಣಗಳನ್ನು, ರಥಗಳನ್ನು, ಶಕ್ತ್ಯಾಯುಧವನ್ನು, ಗದೆ ಮೊದಲಾದ ಆಯುಧಗಳನ್ನು ಅಲ್ಲಿಯೇ ಬಿಟ್ಟು ಓಡಿಹೋಗುವಂತೆ ಮಾಡಿದನು.

ಲಾಘವಾದಾಕುಲೀಕೃತ್ಯ ಕರ್ಣಃ ಪ್ರಹರತಾಂ ವರಃ ।
ಹತಸೂತಾಂಶ್ಚ ಭೂಯಿಷ್ಠಾನವಜಿಗ್ಯೇ ನರಾಧಿಪಾನ್ ॥೧೯॥

ತನ್ನ ಕೈಚಳಕದಿಂದ ಆ ಕರ್ಣನು ಅನೇಕ ರಾಜರುಗಳ ಸಾರಥಿಗಳನ್ನು ಕೊಂದುಬಿಟ್ಟನು. ಅಲ್ಲಿರುವ ಎಲ್ಲಾ ರಾಜರುಗಳಿಗೆ ವ್ಯಾಕುಲತೆಯನ್ನು ಉಂಟುಮಾಡಿದನು. ತನ್ನೆದುರಿಗೆ ನಿಂತ ಎಲ್ಲಾ ರಾಜರುಗಳನ್ನು ತಾನೊಬ್ಬನೇ ಜಯಿಸಿದನು.

ತೇ ಸ್ವಯಂ ವಾಹಯಂತೋऽಶ್ವಾನ್ ಯಾಹಿ ಯಾಹೀತಿ ವಾದಿನಃ ।
ವ್ಯಪೇಯುಸ್ತೇ ರಣಂ ಹಿತ್ವಾ ರಾಜಾನೋ ಭಗ್ನಮಾನಸಾಃ ॥೨೦॥

ಅನಂತರ ಅಲ್ಲಿ ನೆರೆದ ಎಲ್ಲಾ ರಾಜರು ಭಗ್ನಮನೋರಥರಾದರು. ಸಾರಥಿಗಳನ್ನು ಕಳೆದುಕೊಂಡ ಅವರು ರಥಾಶ್ವಗಳನ್ನು ತಾವೇ ನಡೆಸಿಕೊಂಡು, ಓಡಿರಿ ಓಡಿರಿ ಎಂದು ಕೂಗುತ್ತಾ ಪಲಾಯನ ಮಾಡಿದರು.

ದುರ್ಯೋಧನಸ್ತು ಕರ್ಣೇನ ಪಾಲ್ಯಮಾನೋಽಭ್ಯಯಾತ್ ತದಾ ।
ಹೃಷ್ಟಃ ಕನ್ಯಾಮುಪಾದಾಯ ನಗರಂ ನಾಗಸಾಹ್ವಯಮ್ ॥೨೧॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ಚತುರ್ಥೋಽಧ್ಯಾಯಃ ॥೪॥

ಹೀಗೆ ದುರ್ಯೋಧನನು ಕರ್ಣನಿಂದ ರಕ್ಷಿತನಾದನು. ಬಹಳ ಸಂತುಷ್ಟನಾದನು. ಆ ಕನ್ಯೆಯನ್ನು ಅಪಹಾರ ಮಾಡಿಕೊಂಡು ತನ್ನ ಹಸ್ತಿನಾವತಿಗೆ ಬಂದು ಸೇರಿದನು.

ಟಿಪ್ಪಣಿ- ದುರ್ಯೋಧನನು ಅಪಹರಿಸಿದ ಈ ಕನ್ಯೆ ಬೇರೆ ಯಾರು ಅಲ್ಲ. ದುರ್ಯೋಧನನ ಪಟ್ಟದರಸಿಯೇ ಆಗಿದ್ದಾಳೆ. ಅರ್ವಾಚೀನರು ಇವಳನ್ನು ಭಾನುಮತಿ ಎಂದು ಕರೆಯುತ್ತಾರೆ. ಆಶ್ಚರ್ಯವೆಂದರೆ ಸಮಗ್ರ ಮಹಾಭಾರತದಲ್ಲಿ ಎಲ್ಲಿಯೂ ಸಹ ಇವಳ ಹೆಸರು ಉಲ್ಲೇಖವಿರುವುದಿಲ್ಲ. ಶ್ರೀಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಶ್ರೀಮಧ್ವಾಚಾರ್ಯರು ಇವಳನ್ನು ಅಲಕ್ಷ್ಮೀ ಎಂದಷ್ಟೇ ಕರೆದಿದ್ದಾರೆ. ಉಲ್ಲೇಖ ಹೀಗಿದೆ -

ಉದ್ವಾಹ್ಯ ಕಾಶಿತಯಾಂ ಗಿರಿಜಾಭಿವಿಷ್ಟಾಂ
ಸಾಕ್ಷಾನ್ನರೇಷು ಜನಿತಾಂ ಪ್ರಥಮಾಲಕ್ಷ್ಮೀಂ ।
ತಸ್ಯಾಂ ಸುತಂ ತ್ವಜನಯತ್ ಪುರ ಆಸ ಯೋಽಕ್ಷಃ
ಕನ್ಯಾಂ ಪುರಾ ಪ್ರಿಯತಮಾಂ ಚ ಷಡಾನನಸ್ಯ ॥

ಪಾರ್ವತಿಯ ಆವೇಶದೊಂದಿಗೆ ಮನುಷ್ಯರಲ್ಲಿ ಹುಟ್ಟಿದ ಸಾಕ್ಷಾತ್ ಜ್ಯೇಷ್ಠೆ ಅಲಕ್ಷ್ಮಿಯೇ ಆಗಿದ್ದ ಕಾಶಿರಾಜಕುಮಾರಿಯನ್ನು ದುರ್ಯೋಧನ ಮದುವೆಯಾಗಿ ಅವಳಲ್ಲಿ ಹಿಂದೆ ಅಕ್ಷಕುಮಾರನಾಗಿದ್ದವನನ್ನು ಮಗನನ್ನಾಗಿ ಹುಟ್ಟಿಸಿದ. ಹಿಂದೆ ಷಣ್ಮುಖನ ಭಾರ್ಯೆಯಾಗಿದ್ದವಳನ್ನು ಮಗಳನ್ನಾಗಿಯೂ ಹುಟ್ಟಿಸಿದ.

ಪುತ್ರೋ ಬಭೂವ ಸ ತು ಲಕ್ಷಣನಾಮಧೇಯಃ
ಸಾ ಲಕ್ಷಣೇತ್ಯಧಿಕರೂಪಗುಣಾ ಸುಕನ್ಯಾ ।
ತಸ್ಯಾನುಜಾಶ್ಚ ನಿಜಯೋಗ್ಯಗುಣಾ ಅವಾಪು-
ರ್ಭಾರ್ಯಾಃ ಪುನಶ್ಚ ಸ ಸುಯೋಧನ ಆಪ ಭಾರ್ಯಾಃ ॥

ದುರ್ಯೋಧನನ ಮಗನಿಗೆ ಲಕ್ಷಣ ಎಂದು ಹೆಸರು. ಮಗಳಿಗೆ ಲಕ್ಷಣಾ ಎಂದು. ಅವಳು ಅಧಿಕ ಸೌಂದರ್ಯಾದಿಗುಣಗಳಿಂದ ಯುಕ್ತಳು. ದುರ್ಯೋಧನನ ತಮ್ಮಂದಿರೂ ತಮಗೆ ತಕ್ಕುದಾದ ಗುಣವುಳ್ಳ ಹೆಂಡಂದಿರನ್ನು ಪಡೆದರು. ಪುನಃ ದುರ್ಯೋಧನ ಬೇರೆ ಹೆಂಡಂದಿರನ್ನೂ ಪರಿಗ್ರಹಿಸಿದ.

ಪೂರ್ವಂ ಸುರಾಂತಕ ಇತಿ ಪ್ರಥಿತಃ ಸುತೋऽಭೂತ್
ದುಶ್ಶಾಸನಸ್ಯ ತದನು ಪ್ರತಿತಪ್ಯಮಾನಾಃ।
ದೃಷ್ಟ್ವೈವ ಪಾರ್ಥಬಲವೀರ್ಯಗುಣಾನ್ ಸಮೃದ್ಧಿಂ
ತಾಂ ಚೈವ ತೇ ಪ್ರತಿಯಯುಃ ಸ್ಮ ಕಲಿಂಗದೇಶಂ ॥೨೦೩॥

ಹಿಂದೆ ರಾಮಾಯಣ ಕಾಲದಲ್ಲಿ ಸುರಾಂತಕನೆಂದು ಪ್ರಸಿದ್ಧನಾದ ರಾಕ್ಷಸ ದುಃಶಾಸನನಿಗೆ ಮಗನಾಗಿ ಹುಟ್ಟಿದ. ಬಳಿಕ ಪಾಂಡವರ ಬಲ ವೀರ್ಯಗುಣಗಳನ್ನೂ ಆ ಮಹಾಸಂಪತ್ತನ್ನೂ ಕಂಡೇ ಪರಿತಾಪಗೊಂಡ ಕೌರವರು ಕಲಿಂಗ ದೇಶಕ್ಕೆ ಹೋದರು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೪ನೆಯ ಅಧ್ಯಾಯವು ಮುಗಿಯಿತು.

* * * * *

೫. ಐದನೆಯ ಅಧ್ಯಾಯ

ಕರ್ಣನ ಬಲ ಮತ್ತು ಪರಾಕ್ರಮಗಳ ವರ್ಣನೆ.

ನಾರದಃ

ಆವಿಷ್ಕೃತಬಲಂ ಕರ್ಣಂ ಜ್ಞಾತ್ವಾ ರಾಜಾ ಸ ಮಾಗಧಃ।
ಆಹ್ವಯದ್ ದ್ವೈರಥೇನಾಜೌ ಜರಾಸಂಧೋ ಮಹೀಪತಿಃ ॥೧॥

ನಾರದರು ಕರ್ಣನ ಪರಾಕ್ರಮವನ್ನು ವರ್ಣಿಸುತ್ತಿದ್ದಾರೆ. ಓ ಮಹಾರಾಜನೇ! ಎಲ್ಲೆಡೆಯೂ ಕರ್ಣನ ಪರಾಕ್ರಮದ ವಾರ್ತೆ ಹಬ್ಬಿತು. ಮಗಧರಾಜನಾದ ಜರಾಸಂಧನಿಗೂ ಕೂಡ ಈ ವಿಚಾರ ತಿಳಿಯಿತು. ಅವನು ತನ್ನೊಡನೆ ದ್ವಂದ್ವಯುದ್ಧಕ್ಕಾಗಿ ಬರಬೇಕೆಂದು ಕರ್ಣನಿಗೆ ಆಹ್ವಾನ ನೀಡಿದನು.

ತಯೋಃ ಸಮಭವದ್ ಯುದ್ಧಂ ದಿವ್ಯಾಸ್ತ್ರವಿದುಷೋರ್ದ್ವಯೋಃ।
ಯುಧಿ ನಾನಾಪ್ರಹರಣೈರನ್ಯೋನ್ಯಮಭಿವರ್ಷತೋಃ ॥೨॥

ಇಬ್ಬರಿಗೂ ಕೂಡ ದ್ವಂದ್ವಯುದ್ಧವು ಪ್ರಾರಂಭವಾಯಿತು. ಇಬ್ಬರೂ ಕೂಡ ವಿವಿಧವಾದ ದಿವ್ಯಾಸ್ತ್ರಗಳನ್ನು ತಿಳಿದಿದ್ದರು. ಪರಸ್ಪರವಾಗಿ ಆ ಅಸ್ತ್ರಗಳನ್ನು ಪ್ರಯೋಗಿಸುತ್ತಿದ್ದರು.

ಕ್ಷೀಣವಾಣೌ ವಿಧನುಷೌ ಭಗ್ನಖಡ್ಗೌ ಮಹೀಂ ಗತೌ।
ಬಾಹುಭಿಃ ಸಮಸಜ್ಜೇತಾಮುಭಾವಪಿ ಬಲಾನ್ವಿತೌ ॥೩॥

ಎಲ್ಲಾ ಆಯುಧಗಳನ್ನು ಪ್ರಯೋಗಿಸಿದ ಮೇಲೆ ಅವರಿಬ್ಬರಲ್ಲಿ ಬಾಣಗಳೇ ಇಲ್ಲದಂತಾದವು. ಧನುಸ್ಸುಗಳನ್ನೂ ಕೂಡ ಕಳೆದುಕೊಂಡರು. ಖಡ್ಗಗಳೂ ಕೂಡ ತುಂಡಾದವು. ಅನಂತರ ಇಬ್ಬರೂ ಕೂಡ ರಥದಿಂದ ಹಾರಿ ನೆಲದಲ್ಲಿ ನಿಂತು ಬಾಹುಯುದ್ಧಕ್ಕೆ ಸಿದ್ಧರಾದರು.

ಟಿಪ್ಪಣಿ - ಕನ್ಯೆಯನ್ನು ಕರೆದುಕೊಂಡು ನಗರಕ್ಕೆ ತೆರಳಿದ ಮೇಲೆ ಕರ್ಣನ ಪರಾಕ್ರಮವನ್ನು ಕೇಳಿದ ಜರಾಸಂಧನು ಯುದ್ಧಕ್ಕೆ ಬರುತ್ತಾನೆಂದು ಈ ಶ್ಲೋಕಗಳನ್ನು ನೋಡಿದಾಗ ಆಪಾತತಃ ಕಾಣಿಸುತ್ತದೆ. ಆದರೆ ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಆ ಎಲ್ಲಾ ರಾಜರು ಸೋತಮೇಲೆ ಜರಾಸಂಧನು ಕರ್ಣನ ಜೊತೆ ಅಲ್ಲಿಯೇ ಯುದ್ಧ ಮಾಡಿದನೆಂದು ನಿರ್ಣಯಿಸಿದ್ದಾರೆ -

ಸರ್ವೇಷು ತೇಷು ವಿಜಿತೇಷ್ವಭಿಜಗ್ಮಿವಾನ್ ಸ
ಯೋದ್ಧುಂ ಬೃಹದ್ರಥಸಂತೋऽಪ್ಯಮುನಾ ರಥೇನ।
ತಂ ಚೈವ ರಾಮವರತೋ ವಿರಥಂ ವಿಶಸ್ತ್ರಂ
ಚಕ್ರೇ ಸ ಚೈನಮಥ ಮುಷ್ಟಿಭಿರಭ್ಯುಪೇತೌ ॥

ಒಬ್ಬೊಬ್ಬರಾಗಿ ಎಲ್ಲ ರಾಜರೂ ಪರಾಜಿತರಾದಾಗ ಜರಾಸಂಧ ತಾನೆ ಕರ್ಣನೊಡನೆ ಯುದ್ಧ ಮಾಡಲು ರಥವೇರಿ ಹೊರಟ. ಪರಶುರಾಮರ ವರಬಲದಿಂದ ಕರ್ಣ ಜರಾಸಂಧನನ್ನು ವಿರಥನನ್ನಾಗಿಯೂ ನಿರಾಯುಧನನ್ನಾಗಿಯೂ ಮಾಡಿ-

ದನು. ಜರಾಸಂಧನೂ ಕರ್ಣನನ್ನು ಹಾಗೇ ವಿರಥನನ್ನಾಗಿಯೂ ನಿರಾಯುಧನನ್ನಾಗಿಯೂ ಮಾಡಿದನು. ಬಳಿಕ ಇಬ್ಬರೂ ಮುಷ್ಟಿಗಳಿಂದ ಹೋರಾಡಿದರು.

ಬಾಹುಕಂಟಕಯುದ್ಧೇನ ತಸ್ಯ ಕರ್ಣೋಽಥ ಯುದ್ಧ್ಯತಃ।
ಬಿಭೇದ ಸಂಧಿಂ ದೇಹಸ್ಯ ಜರಯಾ ಶ್ಲೇಷಿತಸ್ಯ ಹ ॥೪॥

ಆ ಬಾಹುಯುದ್ಧದಲ್ಲಿ ಕರ್ಣನು ಬಾಹುಕಂಟಕವೆಂಬ ಒಂದು ಯುದ್ಧಕ್ರಮದಿಂದ ಮಲ್ಲಯುದ್ಧವನ್ನು ಮಾಡಲು ಪ್ರಾರಂಭಿಸಿದನು. ಜರಾ ಎಂಬ ರಾಕ್ಷಸಿಯಿಂದ ಜೋಡಿಸಲ್ಪಟ್ಟ ಆ ಜರಾಸಂಧನ ಸಂಧಿಯ ಬಂಧವನ್ನು ಸೀಳಲು ಪ್ರಾರಂಭಿಸಿದನು.

ವಿವರಣೆ -

ಏಕಾಂ ಜಂಘಾಂ ಪದಾಕ್ರಮ್ಯ ಪರಾಮುದ್ದಿಮ್ಯಪಾಠ್ಯತೇ॥
ಕೇತಕೀ ಪತ್ರವತ್ ಛಿತ್ತ್ವೋಃ ಯುದ್ಧ ತದ್‌ಬಾಹುಕಂಟಕಂ ॥

ಶತ್ರುವಿನ ಮೊಣಕಾಲನ್ನು ಮೆಟ್ಟಿ ನಿಂತು, ಮತ್ತೊಂದು ಮೊಣಕಾಲನ್ನು ಮೇಲಕ್ಕೆ ಸೀಳುವುದನ್ನು ಬಾಹುಕಂಟಕಯುದ್ಧ ಎನ್ನುತ್ತಾರೆ. ಕೇತಕೀ ಹೂವನ್ನು ಇಬ್ಭಾಗ ಮಾಡುವಂತೆ ಇದು ಒಂದು ಯುದ್ಧದ ಕ್ರಮ. ಇದನ್ನು ಕರ್ಣನು ತಿಳಿದಿದ್ದನು.

ವಿಮರ್ಶೆ - ವಾಸ್ತವಿಕವಾಗಿ 'ಬಾಹುಕಂಟಕಯುದ್ಧೇನ ತಸ್ಯ ಕರ್ಣೋಽಥ ಯುದ್ಧ್ಯತಃ' ಎಂಬ ಪಾಠವು ದಾಕ್ಷಿಣಾತ್ಯ ಕೋಶಗಳಲ್ಲಿ ಕಾಣಿಸುವುದೇ ಇಲ್ಲ. ಔತ್ತರೇಯಕೋಶದಲ್ಲಷ್ಟೇ ಈ ಪಾಠವಿರುತ್ತದೆ. ಆದ್ದರಿಂದ ಮೇಲೆ ಹೇಳಿದ ನೀಲಕಂಠೀಯವ್ಯಾಖ್ಯಾನದ ಪ್ರಕಾರ ಬಾಹುಕಂಟಕಯುದ್ಧಪದಕ್ಕೆ ಅದೊಂದು ಯುದ್ಧತಂತ್ರವೆಂಬ ಅರ್ಥವನ್ನು ವಿವಕ್ಷಿಸುವುದು ನಿರವಕಾಶವಾಗುವುದಿಲ್ಲ. ಮತ್ತು ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಕರ್ಣ ಹಾಗೂ ಜರಾಸಂಧರ ಯುದ್ಧವನ್ನು ವರ್ಣನೆ ಮಾಡುವಾಗ ಈ ಯುದ್ಧನೀತಿಯನ್ನು ಉಲ್ಲೇಖ ಮಾಡಿರುವುದಿಲ್ಲ.

ಸ ವಿಕಾರಂ ಶರೀರಸ್ಯ ದೃಷ್ಟ್ವಾ ನೃಪತಿರಾತ್ಮನಃ।
ಪ್ರೀತೋಽಸ್ಮೀತ್ಯಬ್ರವೀತ್ ಕರ್ಣಂ ವೈರಮುತ್ಸೃಜ್ಯ ಭಾರತ ॥೫॥

ಓ ಭರತವಂಶೋದ್ಭವನೇ ! ಜರಾಸಂಧನಿಗೆ ಕರ್ಣನನ್ನು ಗೆಲ್ಲುವುದು ಅಸಾಧ್ಯ ಎನಿಸಿತು. ಅವನಿಂದ ತನ್ನ ಶರೀರಕ್ಕುಂಟಾದ ಆಪತ್ತನ್ನು ಗಮನಿಸಿ ಕರ್ಣನ ಪರಾಕ್ರಮವನ್ನು ಮೆಚ್ಚಿದನು. ಕರ್ಣನ ವಿಷಯದಲ್ಲಿ ವೈರವನ್ನು ಪರಿತ್ಯಾಗ ಮಾಡಿದನು. ಸ್ನೇಹಭಾವದಿಂದ ಕರ್ಣನ ವಿಷಯದಲ್ಲಿ ಪ್ರೀತನಾಗಿ ನಿನ್ನ ಬಳಿ ನಾನು ಸ್ನೇಹ ಮಾಡುತ್ತೇನೆ ಎಂದು ಹೇಳಿದನು.

ಪ್ರೀತ್ಯಾ ದದೌ ಸ ಕರ್ಣಾಯ ಮಾಲಿನೀಂ ನಗರೀಮಥ।
ಅಂಗೇಷು ನರಶಾರ್ದೂಲ ಸ ರಾಜಾಸೀತ್ ಸಪತ್ನಜಿತ್ ॥೬॥

ಆಗ ಆ ಜರಾಸಂಧನು ಕರ್ಣನಿಗೆ ತನ್ನ ಅಂಗದೇಶದಲ್ಲಿದ್ದ ಮಾಲಿನೀ ಎಂಬ ನಗರವನ್ನು ಪಾರಿತೋಷಕವಾಗಿ ನೀಡಿದನು. ಆಗ ಕರ್ಣನು ಎಲ್ಲಾ ಶತ್ರುಗಳನ್ನು ಸೋಲಿಸಿ, ಆ ಅಂಗರಾಜ್ಯಕ್ಕೆ ಅಧಿಪತಿಯಾದನು.

ಟಿಪ್ಪಣಿ -

ಸಂಧೌ ಯದೈವ ಜರಯಾ ಪ್ರತಿಸಂಧಿತಸ್ಯ
ಕರ್ಣೋ ಜಘಾನ ನ ಪರತ್ರ ತುತೋಷ ರಾಜಾ।
ನ ಜ್ಞಾತಮೇತದಪಿ ಹೋ ಹಲಿನಾ ತದೇತದ್
ಜ್ಞಾತಂ ತ್ವಯಾ ಭವ ತತೋ ಮಮ ಭೃತ್ಯ ಏವ ॥

ಜರಾಸಂಧನಿಗೆ ಕರ್ಣ ಬೇರೆ ಕಡೆ ಬಿಟ್ಟು ಸಂಧಿಯಲ್ಲಿಯೇ ಯಾವಾಗ ಹೊಡೆಯಲು ತೊಡಗಿದನೋ ಆಗ ಜರಾಸಂಧ ಮೆಚ್ಚಿದ. ನನ್ನ ಮರ್ಮಸ್ಥಳವನ್ನು ಬಲರಾಮನೂ ತಿಳಿಯಲಿಲ್ಲ. ನೀನು ತಿಳಿದುಬಿಟ್ಟೆ. ಅದರಿಂದ ನೀನು ನನ್ನ ಭಟನಾಗಿರು.

ಏವಂವಿಧಂ ಸುಕುಶಲಂ ಬಹುಯುದ್ಧ ಶೌಂಡಂ
ನ ತಾವಂ ಹನಿಷ್ಯ ಉತ ತೇ ಪಿತುರೇವ ಪೂರ್ವಂ।
ಬಾಹ್ವೋರ್ಬಲಾದಭಿಹೃತಂ ಹಿ ಮಯಾऽಂಗರಾಜ್ಯಂ
ತತ್ ತ್ವಂ ಗೃಹಾಣ ಯುಧಿ ಕರ್ಮಕರಶ್ಚ ಮೇ ಸ್ಯಾಃ ॥೧೯೮॥

ಇಂಥ ಒಳ್ಳೆಯ ಕುಶಲನಾದ, ಬಹುಯುದ್ಧ ಸಮರ್ಥನಾದ ನಿನ್ನನ್ನು ನಾನು ಕೊಲ್ಲುವುದಿಲ್ಲ. ಮಾತ್ರವಲ್ಲ, ಹಿಂದೆ ನಿನ್ನ ತಂದೆಯಿಂದ ನಾನು ನನ್ನ ಬಾಹು

ಬಲದಿಂದ ಅಂಗರಾಜ್ಯವನ್ನು ಗೆದ್ದುಕೊಂಡಿದ್ದೆ. ಅದನ್ನು ನೀನು ತೆಗೆದುಕೊ. ಯುದ್ಧಗಳಲ್ಲಿ ನೀನು ನನ್ನ ಭಟನಾಗಿರು.

ಪಾಲಯಾಮಾಸ ಚಂಪಾಂ ತು ಕರ್ಣಃ ಪರಬಲಾರ್ದನಃ।
ದುರ್ಯೋಧನಸ್ಯಾನುಮತೇ ತವಾಪಿ ವಿದಿತಂ ತಥಾ ॥೭॥

ಆ ಕರ್ಣನು ದುರ್ಯೋಧನನ ಅನುಮತಿಯಿಂದ ಚಂಪಾ ಎಂಬ ಪಟ್ಟಣವನ್ನೂ ಕೂಡ ಪರಿಪಾಲನೆ ಮಾಡಿದನು. ಯುಧಿಷ್ಠಿರನೇ! ಈ ಎಲ್ಲಾ ವಿಷಯಗಳು ನಿನಗೂ ಕೂಡ ತಿಳಿದೇ ಇರುತ್ತದೆ.

ಒಂದು ವಿಮರ್ಶೆ - ಚಂಪಾ ಎಂಬ ದೇಶವನ್ನು ದುರ್ಯೋಧನನು ಕರ್ಣನಿಗೆ ನೀಡಿದನೆಂದು ಈ ಶ್ಲೋಕದಲ್ಲಿ ಕಾಣಿಸುತ್ತದೆ. ಆದರೆ ದಾಕ್ಷಿಣಾತ್ಯಕೋಶಗಳಲ್ಲಿ 'ಚಂಪಾಂ ತು' ಎಂಬ ಪಾಠವು ಕಾಣಿಸುವುದಿಲ್ಲ. 'ವರ್ಣಾಂಸ್ತು' ಎಂಬ ಪಾಠವು ಕಾಣಿಸುತ್ತದೆ. ಆದ್ದರಿಂದ ದುರ್ಯೋಧನನು 'ಚಂಪಾ' ಎಂಬ ದೇಶವನ್ನು ನೀಡಿದನು ಎಂಬುದಕ್ಕೆ ಇದು ನಿರವಕಾಶವಾದ ಆಧಾರವಾಗುವುದಿಲ್ಲ. ದಾಕ್ಷಿಣಾತ್ಯ ಪಾಠದ ಪ್ರಕಾರ ಆ ದೇಶದಲ್ಲಿ ಚತುರ್ವರ್ಣದವರನ್ನು ಕರ್ಣನು ರಕ್ಷಣೆ ಮಾಡಿದನು ಎಂದಷ್ಟೇ ಅರ್ಥವಾಗುತ್ತದೆ. ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಹೀಗೆ ಶ್ರೀಮಧ್ವಾಚಾರ್ಯರು ನಿರ್ಣಯವನ್ನು ನೀಡಿದ್ದಾರೆ.

ಇತ್ಯುಕ್ತ ಆಶು ಸ ತಥೈವ ಚಕಾರ ಕರ್ಣಃ
ಪೂರ್ವಂ ಹಿ ತಸ್ಯ ನಿಜರಾಜ್ಯಪದೈಕದೇಶಃ।
ದುರ್ಯೋಧನೇನ ವಿಹಿತೋ ಮಗಧಾಧಿರಾಜಂ
ಜಿತ್ವಾ ವೃಕೋದರಹೃತಃ ಪಿತುರೇವ ದತ್ತಃ ॥

ಜರಾಸಂಧ ಹೀಗೆ ಹೇಳಿದಾಗ ಕರ್ಣ ಬೇಗನೇ ಅಂಗರಾಜ್ಯವನ್ನು ಸ್ವೀಕರಿಸಿದ. ಹಿಂದೆ ಶಸ್ತ್ರಾಭ್ಯಾಸಪ್ರದರ್ಶನಕಾಲದಲ್ಲಿ ದುರ್ಯೋಧನ ಕರ್ಣನಿಗೆ ಕೊಟ್ಟಿದ್ದುದು ಅವನ ಅಂಗರಾಜ್ಯದ ಒಂದು ಭಾಗ ಮಾತ್ರ . ಅದು ದಿಗ್ವಿಜಯಕಾಲದಲ್ಲಿ ಭೀಮ ಜರಾಸಂಧನನ್ನು ಗೆದ್ದು ಅವನಿಂದ ಅಪಹರಿಸಿ ಧೃತರಾಷ್ಟ್ರನಿಗೆ ಕೊಟ್ಟಿದ್ದನು.

ಅಂಗಾಧಿರಾಜ್ಯಮುಪಲಭ್ಯ ಜರಾಸುತಸ್ಯ
ಸ್ನೇಹಂ ಚ ಸೂರ್ಯಸುತ ಆಶು ಕುರೂನ್ ಜಗಾಮ।

ದೃಷ್ಟ್ವೈವ ತಂ ಮುಮುದಿರೇ ಧೃತರಾಷ್ಟ್ರಪುತ್ರಾ
ನಾನೇನ ತುಲ್ಯಮಭಿಜಗ್ಮುರತೋ ಹರಿಂ ಚ ॥೨೦೦॥

ಹೀಗೆ ಅಂಗರಾಜ್ಯವನ್ನೂ ಜರಾಸಂಧನ ಸ್ನೇಹವನ್ನೂ ಸಂಪಾದಿಸಿ ಕರ್ಣನು ಬೇಗನೆ ಕೌರವರ ಬಳಿಗೆ ಬಂದನು. ಅವನನ್ನು ಕಂಡೊಡನೆ ಕೌರವರು ಆನಂದಪಟ್ಟರು. ಅವನಿಗೆ ಶ್ರೀಕೃಷ್ಣನೂ ಸಮನಲ್ಲ ಎಂದುಕೊಂಡರು.

ಕರ್ಣನು ಅಂಗರಾಜ್ಯಾಧಿಪತಿ ಎಂದೇ ಪ್ರಸಿದ್ಧನಾಗಿದ್ದಾನೆ. ಇವನಿಗೆ ಬಂದ ಅಂಗರಾಜ್ಯದ ಬಗ್ಗೆ ವಿವರವನ್ನು ಹೀಗೆ ತಿಳಿಯಬೇಕು - ಕರ್ಣನ ವಂಶದಲ್ಲಿ ಅಂಗ ಎಂಬ ರಾಜನಿದ್ದನು. ಅವನಿಗೆ ಸಂಬಂಧಪಟ್ಟ ದೇಶವೇ ಅಂಗರಾಜ್ಯ ಎನಿಸಿದೆ. ಹಾಗಿದ್ದರೆ ಜರಾಸಂಧನ ಬಳಿ ಈ ಅಂಗರಾಜ್ಯವು ಹೇಗೆ ಬಂದಿತು? ಅವನೇಕೆ ಕರ್ಣನಿಗೆ ಇದನ್ನು ಕೊಟ್ಟನು? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ತಿಳಿಯಬೇಕೆಂದರೆ ಕರ್ಣನ ಪೂರ್ವಜರ ಸಂಕ್ಷೇಪ ಪರಿಚಯವನ್ನು ತಿಳಿಯಬೇಕಾಗುತ್ತದೆ. ಚಂದ್ರವಂಶದಲ್ಲಿ ನಹುಷನು ಹುಟ್ಟಿದನು, ಆ ನಹುಷನಿಗೆ ಯಯಾತಿಯು ಹುಟ್ಟಿದನು. ಆ ಯಯಾತಿಗೆ ನಾಕುಮಂದಿ ಮಕ್ಕಳಿದ್ದರು. ಅವರಲ್ಲಿ ಅನು ಎಂಬುವನೂ ಕೂಡ ಒಬ್ಬನಾಗಿದ್ದನು. ಯಯಾತಿರಾಜನ ಶಾಪದ ಬಲದಿಂದ ಅನು ಎಂಬ ಮಗನ ವಂಶವು ಮುಂದೆ ಕ್ಷತ್ರಿಯ ಪರಂಪರೆಯಲ್ಲಿ ಬರುವುದಿಲ್ಲ. ಸಾಂಕರ್ಯವನ್ನು ಹೊಂದಿ, ಸೂತವಂಶವಾಗಿ ವಿಭಾಗ ಹೊಂದುತ್ತದೆ. ಆ ಅನುರಾಜನ ಮಗನೇ ಸಭಾನರ. ಆ ಸಭಾನರಿಗೆ ಕಾಲನರನು, ಅವನಿಗೆ ಸಂಜಯನು ಹುಟ್ಟುತ್ತಾನೆ. ಇದೇ ವಂಶದಲ್ಲಿ ಹೋಮ ಎಂಬುವನು ಬರುತ್ತಾನೆ. ಅವನ ವಂಶದಲ್ಲೇ ಸುತಪ ಸಹ ಬರುತ್ತಾನೆ. ಅವನ ಮಗನೇ ಬಲಿಯಾಗಿದ್ದಾನೆ. ಆ ಬಲಿಗೆ ಅಂಗ, ವಂಗ, ಕಳಿಂಗ ಇತ್ಯಾದಿ ಮಕ್ಕಳು ಹುಟ್ಟುತ್ತಾರೆ. ಇವರಿಗೆ ಸಂಬಂಧಪಟ್ಟ ದೇಶಗಳೇ ಆಯಾ ಹೆಸರುಗಳಿಂದ ಪ್ರಸಿದ್ಧವಾಗುತ್ತವೆ. ಅಂಗನಿಗೆ ಘನಪಾನ ಎಂಬ ಮಗನು ಹುಟ್ಟುತ್ತಾನೆ. ದಿವಿರಥ, ಧರ್ಮರಥ, ಮಿತ್ರರಥ, ಸದ್ಧರ್ಮ ಇವರೆಲ್ಲರೂ ಇದೇ ವಂಶದಲ್ಲಿ ಬಂದವರು. ಈ ಸದ್ಧರ್ಮನ ಮಗನೇ ಅಧಿರಥನು. ಈ ಅಧಿರಥನ ಸಾಕುಮಗನೇ ಕರ್ಣನಾಗಿದ್ದಾನೆ. ಭಾಗವತ ಪುರಾಣದ ಒಂಬತ್ತನೆಯ ಸ್ಕಂಧದ ಇಪ್ಪತ್ತನೆಯ ಅಧ್ಯಾಯದಲ್ಲಿ ಈ ವಂಶದ ವಿಸ್ತಾರವು ಪ್ರಾಪ್ತವಾಗಿದೆ. ಆದರೆ ಆ ವಂಶದ ಹೆಸರಿನಲ್ಲಿ ಸ್ವಲ್ಪ ವ್ಯತ್ಯಾಸವು ಕಾಣಿಸುತ್ತದೆ.

ಈ ಚಂದ್ರವಂಶವು ಕ್ಷತ್ರಿಯರ ವಂಶವಾಗಿದೆ. ಇದೇ ವಂಶದಲ್ಲಿ ಬಂದಿರುವ ಅಧಿರಥನು ಹೇಗೆ ಸೂತನಾದನು? ಎಂಬುದೇ ಇಲ್ಲಿ ಮೂಡುವ ಪ್ರಶ್ನೆ. ಉತ್ತರವನ್ನು ಹೀಗೆ ತಿಳಿಯಬೇಕು - ಯಯಾತಿಯ ಶಾಪದಂತೆ ಸದ್ಧರ್ಮ ಅಥವಾ ಅವನ ಪೂರ್ವಿಕರಲ್ಲಿ ಯಾರೋ ಒಬ್ಬರು ಸೂತಜಾತಿಯ ಹೆಂಡತಿಯನ್ನು ವಿವಾಹವಾಗಿದ್ದರು. ಅವಳಲ್ಲಿ ಹುಟ್ಟಿದ ವಂಶದಲ್ಲಿಯೇ ಅಧಿರಥನು ಬಂದಿದ್ದಾನೆ. ಆದ್ದರಿಂದ ಸೂತಪತ್ನಿಯಲ್ಲಿ ಹುಟ್ಟಿದ ಕಾರಣ ಅಧಿರಥನು ಸೂತಜಾತಿಯವನಾಗಿದ್ದಾನೆ. ಹಾಗಾಗಿ ಅವನ ಸಾಕುಮಗನಾದ ಕರ್ಣನೂ ಕೂಡ ಸೂತನೆಂದೇ ಪ್ರಸಿದ್ಧನಾದನು.

ಈ ಅಧಿರಥನಿಗೆ ತನ್ನ ವಂಶದ ಪೂರ್ವಿಕನಾದ ಅಂಗನಿಗೆ ಸಂಬಂಧಪಟ್ಟ ಒಂದು ದೇಶದ ಆಧಿಪತ್ಯವು ದೊರಕಿರುತ್ತದೆ. ಆದರೆ ಜರಾಸಂಧನು ದಿಗ್ವಿಜಯ ಮಾಡುವ ಸಂದರ್ಭದಲ್ಲಿ ಈ ಅಂಗರಾಜ್ಯವನ್ನು ಅಧಿರಥನಿಂದ ವಶಪಡಿಸಿಕೊಂಡಿದ್ದನು. ಪಾಂಡವರು ದ್ರೋಣಾಚಾರ್ಯರ ಬಳಿ ಶಸ್ತ್ರಾಭ್ಯಾಸ ಮಾಡುವ ಮೊದಲು ಭೀಮನು ಒಮ್ಮೆ ದಿಗ್ವಿಜಯ ಮಾಡಿದ್ದನು. ಆ ಸಂದರ್ಭದಲ್ಲಿ ಆ ಜರಾಸಂಧನಿಂದ ಆ ಅಂಗರಾಜ್ಯದ ಒಂದು ಭಾಗವನ್ನು ಗೆದ್ದು, ಧೃತರಾಷ್ಟ್ರನಿಗೆ ಭೀಮಸೇನನು ಅದನ್ನು ನೀಡಿದ್ದನು. ಅನಂತರ ಶಸ್ತ್ರಾಭ್ಯಾಸ ಪ್ರದರ್ಶನವನ್ನು ಮಾಡಿದಾಗ ಕರ್ಣನು ಅರ್ಜುನನ ಜೊತೆ ಸೋಲುತ್ತಾನೆ. ಆಗ ದುರ್ಯೋಧನನು ಕರ್ಣನಿಗೆ ಸಾಂತ್ವನದ ಮಾತುಗಳನ್ನು ಹೇಳಿ ಈ ಅಂಗರಾಜ್ಯವನ್ನು ಕೊಡುತ್ತಾನೆ. ಭೀಮಸೇನನು ಧೃತರಾಷ್ಟ್ರನಿಗೆ ಜರಾಸಂಧನಿಂದ ಗೆದ್ದು ತಂದ ಯಾವ ಅಂಗರಾಜ್ಯವಿದೆಯೋ, ಅದನ್ನು ದುರ್ಯೋಧನನು ಈ ಸಂದರ್ಭದಲ್ಲಿ ಕರ್ಣನಿಗೆ ನೀಡುತ್ತಾನೆ. ಆದರೆ ಹಿಂದೊಮ್ಮೆ ದುರ್ಯೋಧನನ ಮೂಲಕ ಕರ್ಣನಿಗೆ ಅಂಗರಾಜ್ಯದ ಏಕದೇಶವು ಪ್ರಾಪ್ತವಾಗಿತ್ತು. ಈಗ ಜರಾಸಂಧನ ಜೊತೆ ಗೆದ್ದ ಬಳಿಕ ಉಳಿದ ಭಾಗವೂ ಕೂಡ ದೊರಕುತ್ತದೆ. ಹಾಗಾಗಿ ಸಂಪೂರ್ಣ ಅಂಗರಾಜ್ಯದ ಒಡೆತನವನ್ನು ಕರ್ಣನು ಸಂಪಾದನೆ ಮಾಡಿಕೊಳ್ಳುತ್ತಾನೆ.

ಆದ್ದರಿಂದ ತಾತ್ಪರ್ಯನಿರ್ಣಯದ ಪ್ರಕಾರ ಚಂಪಾ ಎಂಬ ದೇಶವನ್ನು ದುರ್ಯೋಧನನು ಕೊಟ್ಟಿದ್ದನು ಎಂದು ಹೇಳುವುದು ವಿರುದ್ಧವಾಗುತ್ತದೆ. ಹಿಂದೆ ಅಂಗರಾಜ್ಯದ ಏಕದೇಶವನ್ನು ದುರ್ಯೋಧನನಿಂದ ಪಡೆದುಕೊಂಡಿದ್ದನು. ಈಗ ಜರಾಸಂಧನನ್ನು ಗೆದ್ದು ಉಳಿದ ಅರ್ಧಭಾಗವನ್ನೂ ಕೂಡ ಪಡೆದುಕೊಂಡನು.

ಆದ್ದರಿಂದ ಕರ್ಣನು 'ಅಂಗರಾಜ್ಯಾಧಿಪತಿ' ಎಂಬುದಾಗಿ ಪ್ರಸಿದ್ಧಿಯನ್ನು ಹೊಂದಿದನು ಎಂದು ತಿಳಿಯಬೇಕು.

ಏವಂ ಶಸ್ತ್ರಪ್ರತಾಪೇನ ಪ್ರಥಿತಃ ಸೋಽಭವತ್ ಕ್ಷಿತೌ ।
ತದ್ದಿತಾರ್ಥಂ ಸುರೇಂದ್ರೇಣ ಭಿಕ್ಷಿತೋ ವರ್ಮಕುಂಡಲೇ ॥೮॥

ಹೀಗೆ ಕರ್ಣನು ತನ್ನಲ್ಲಿರುವ ಶಸ್ತ್ರಾಸ್ತ್ರಗಳ ಚಾತುರ್ಯದಿಂದ ಲೋಕದಲ್ಲಿ ವಿಖ್ಯಾತನಾದನು. ಇದನ್ನು ಕಂಡು ದೇವೇಂದ್ರನು ನಿಮ್ಮೆಲ್ಲರ ಹಿತಕ್ಕಾಗಿ ಅವನ ಬಳಿ ತೆರಳಿ ಜನ್ಮತಃ ಆಗತವಾದ ಕರ್ಣನ ಕವಚಕುಂಡಲಗಳೆರಡನ್ನು ಯಾಚನೆ ಮಾಡಿದನು.

ಸ ದಿವ್ಯೇ ಸಹಜೇ ಪ್ರಾದಾತ್ ಕುಂಡಲೇ ಪರಮಾರ್ಚಿತೇ ।
ಸಹಜಂ ಕವಚಂ ಚೈವ ಮೋಹಿತೋ ದೇವಮಾಯಯಾ ॥೯॥

ವಿಮುಕ್ತಃ ಕುಂಡಲಾಭ್ಯಾಂ ಚ ಸಹಜೇನ ಚ ವರ್ಮಣಾ ।
ನಿಹತೋ ವಿಜಯೇನಾಜೌ ವಾಸುದೇವಸ್ಯ ಪಶ್ಯತಃ ॥೧೦॥

ಅತ್ಯಂತ ಉದಾರಿಯಾದ ಆ ಕರ್ಣನು, ಆ ಕವಚ ಮತ್ತು ಕುಂಡಲಗಳೆರಡನ್ನೂ ತನ್ನ ದೇಹದಿಂದ ಛೇದನೆ ಮಾಡಿ, ದಾನ ಮಾಡಿಬಿಟ್ಟನು. ದೇವತೆಗಳ ಮಾಯೆಗೆ ಮರುಳಾಗಿ ತನ್ನ ಸಹಜವಾದ ಅಂಗದಂತಿದ್ದ. ಆ ಕವಚ ಕುಂಡಲಗಳೆರಡನ್ನೂ ಕಿತ್ತು ದಾನ ಮಾಡಿದ್ದರಿಂದಲೇ ಶ್ರೀಕೃಷ್ಣನ ಎದುರಿನಲ್ಲಿ ಅರ್ಜುನನಿಂದ ಮೃತನಾದನು.

ಬ್ರಾಹ್ಮಣಸ್ಯಾಭಿಶಾಪೇನ ರಾಮಸ್ಯ ಚ ಮಹಾತ್ಮನಃ ।
ಕುಂತ್ಯಾಶ್ಚ ವರದಾನೇನ ಮಾಯಯಾ ಚ ಶತಕ್ರತೋಃ ॥೧೧॥

ಭೀಷ್ಮಾವಮಾನಾತ್ ಸಂಖ್ಯಾಯಾಂ ರಥಾನಾಮರ್ಧಕೀರ್ತನಾತ್ ।
ಶಲ್ಯಾತ್ ತೇಜೋವಧಾಚ್ಚಾಪಿ ವಾಸುದೇವನಯೇನ ಚ ॥೧೨॥

ಧರ್ಮರಾಜನೇ! ಆ ಕರ್ಣನ ಮರಣಕ್ಕೆ ಅನೇಕ ಕಾರಣಗಳಿವೆ. ಬ್ರಾಹ್ಮಣನ ಶಾಪ, ಮಹಾತ್ಮನಾದ ಪರಶುರಾಮನ ಶಾಪ, ಕುಂತಿಗೆ ವರದಾನ ಮಾಡಿದ್ದು,

ಇಂದ್ರನಿಗೆ ಕವಚ-ಕುಂಡಲಗಳನ್ನು ದಾನಮಾಡಿದ್ದು, ರಥಿಕರು, ಅತಿರಥರು ಎಷ್ಟು ಮಂದಿ ಇದ್ದಾರೆಂದು ಗಣನೆಯನ್ನು ಮಾಡುವ ಸಂದರ್ಭದಲ್ಲಿ ಕರ್ಣನನ್ನು ಅರ್ಧರಥನೆಂದು ಹೇಳಿ ಭೀಷ್ಮಾಚಾರ್ಯರು ಕರ್ಣನನ್ನು ಅವಮಾನಗೊಳಿಸಿದ್ದು, ಅತ್ಯಂತ ಉತ್ಸಾಹದಲ್ಲಿ ಯುದ್ಧವನ್ನು ಮಾಡಲು ಹೊರಟಾಗ ಶಲ್ಯನು ತೇಜೋವಧೆ ಮಾಡಿದ್ದು ಇವೆಲ್ಲವೂ ಅವನ ಮರಣಕ್ಕೆ ಕಾರಣವಾಗಿವೆ. ಜೊತೆಯಲ್ಲಿ ಶ್ರೀಕೃಷ್ಣ-ಪರಮಾತ್ಮನ ಯುದ್ಧನೀತಿಯು ಕರ್ಣನ ಅವಸಾನಕ್ಕೆ ಮುಖ್ಯಕಾರಣವಾಯಿತು.

ರುದ್ರಸ್ಯ ದೇವರಾಜಸ್ಯ ಯಮಸ್ಯ ವರುಣಸ್ಯ ಚ।
ಕುಬೇರದ್ರೋಣಯೋಶ್ಚೈವ ಕೃಪಸ್ಯ ಚ ಮಹಾತ್ಮನಃ ॥೧೩॥
ಅಸ್ತ್ರಾಣಿ ದಿವ್ಯಾನ್ಯಾದಾಯ ಯುಧಿ ಗಾಂಡೀವಧನ್ವನಾ।
ಹತೋ ವೈಕರ್ತನಃ ಕರ್ಣೌ ದಿವಾಕರಸಮದ್ಯುತಿಃ ॥೧೪॥

ಅಷ್ಟೇ ಅಲ್ಲದೇ ಅರ್ಜುನನು ಆ ಯುದ್ಧದಲ್ಲಿಯೂ ಕೂಡ ಇಂದ್ರ, ರುದ್ರ, ಯಮ, ವರುಣ, ಕುಬೇರ, ಕೃಪ, ದ್ರೋಣ ಇವರಿಂದೆಲ್ಲಾ ಪಡೆದುಕೊಂಡ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿದನು. ಗಾಂಡೀವವೆಂಬ ದಿವ್ಯವಾದ ಧನುಸ್ಸಿನ ಸಹಾಯದಿಂದಲೇ ಸೂರ್ಯಸಮಾನವರ್ಚಸ್ವಿಯಾದ ವೈಕರ್ತನಾದ ಕರ್ಣನನ್ನು ಸಂಹಾರ ಮಾಡಿದನು.

ಏವಂ ಶಪ್ತಸ್ತವ ಭ್ರಾತಾ ಬಹುಭಿಶ್ಚಾಪಿ ವಂಚಿತಃ।
ನ ಶೋಚ್ಯಃ ಸ ನರವ್ಯಾಘ್ರೋ ಯುದ್ಧೇ ಹಿ ನಿಧನಂ ಗತಃ ॥೧೫॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ಪಂಚಮೋऽಧ್ಯಾಯಃ ॥೫॥

ಓ ಧರ್ಮರಾಜನೇ! ನಿನ್ನ ಅಣ್ಣನಾದ ಆ ಕರ್ಣನು ಹೀಗೆ ಅನೇಕರ ಶಾಪಕ್ಕೆ ಭಾಗಿಯಾಗಿದ್ದನು. ತಾನು ಅನೇಕರಿಗೆ ಮಾಡಿದ ವಂಚನೆಯಿಂದಲೂ ಯುದ್ಧದಲ್ಲಿ ಮೃತನಾದನು. ಆದ್ದರಿಂದ ನೀನು ಅವನ ಮರಣದ ವಿಷಯದಲ್ಲಿ ದುಃಖವನ್ನು ಪಡುವುದು ಯುಕ್ತವಾಗುವುದಿಲ್ಲ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೫ನೆಯ ಅಧ್ಯಾಯವು ಮುಗಿಯಿತು.

೬. ಆರನೆಯ ಅಧ್ಯಾಯ

ಕರ್ಣವಧೆಯಿಂದ ದುಃಖಿತನಾದ ಯುಧಿಷ್ಠಿರನಿಗೆ ಕುಂತಿಯಿಂದ ಸಮಾಧಾನ. ಸ್ತ್ರೀಯರಲ್ಲಿ ರಹಸ್ಯವು ನಿಲ್ಲಬಾರದೆಂದು ಯುಧಿಷ್ಠಿರನಿಂದ ಶಾಪಪ್ರದಾನ.

ವೈಶಂಪಾಯನಃ

ಏತಾವದುಕ್ತ್ವಾ ದೇವರ್ಷಿರ್ವಿರರಾಮ ಸ ನಾರದಃ।
ಯುಧಿಷ್ಠಿರಸ್ತು ರಾಜರ್ಷಿರ್ದಧ್ಯೌ ಶೋಕಪರಿಪ್ಲುತಃ ॥೧॥

ವೈಶಂಪಾಯನ – ಮಹಾರಾಜನೇ ! ದೇವರ್ಷಿಗಳಾದ ನಾರದರು ಯುಧಿಷ್ಠಿರನಿಗೆ ಕರ್ಣನ ವೃತ್ತಾಂತವನ್ನು ಇಷ್ಟು ತಿಳಿಸಿ ಸುಮ್ಮನಾದರು. ಆಗ ರಾಜರ್ಷಿಯಾದ ಯುಧಿಷ್ಠಿರನು ದುಃಖದಿಂದ ವ್ಯಾಕುಲಗೊಂಡವನಾಗಿ ಕರ್ಣನನ್ನು ಕೊಂದುದರ ಬಗ್ಗೆ ಯೋಚಿಸುತ್ತಿದ್ದನು.

ತಂ ದೀನಮನಸಂ ವೀರಮಧೋವದನಮಾತುರಮ್।
ನಿಃಶ್ವಸಂತಂ ಯಥಾ ನಾಗಂ ಪರ್ಯಶ್ರುನಯನಂ ತಥಾ ॥೨॥

ಕುಂತೀ ಶೋಕಪರಿತಾಂಗೀ ದುಃಖೋಪಹತಚೇತನಾ।
ಅಬ್ರವೀನ್ಮಧುರಾಭಾಷಾ ಕಾಲೇ ವಚನಮರ್ಥವತ್ ॥೩॥

ಚಿಂತಿಸುತ್ತಿರುವ ಆ ಸಂದರ್ಭದಲ್ಲಿ ಯುಧಿಷ್ಠಿರನು ದೈನ್ಯಾವಸ್ಥಿತಿಯನ್ನು ಹೊಂದಿದ್ದನು. ಮತ್ತು ದುಃಖದಿಂದ ಪರಿತಪಿಸುತ್ತಿದ್ದನು. ಹಾವಿನಂತೆ ಪುನಃ ಪುನಃ ನಿಟ್ಟುಸಿರನ್ನು ಬಿಡುತ್ತಿದ್ದನು. ಕಣ್ಣುಗಳಿಂದ ಅಶ್ರುಬಿಂದುಗಳು ಬೀಳುತ್ತಿದ್ದವು. ಇಂಥ ಸ್ಥಿತಿಯಲ್ಲಿರುವ ಧರ್ಮರಾಜನನ್ನು ನೋಡಿ, ಕುಂತಿಗೆ ಬಹಳ ದುಃಖವಾಯಿತು. ಆಗ ಸಮಯೋಚಿತವಾದ ಮೃದುವಾದ ಮಾತುಗಳಿಂದ ಆ ಯುಧಿಷ್ಠಿರನಿಗೆ ಹೀಗೆ ಅರ್ಥಪೂರ್ಣವಾದ ಮಾತುಗಳಿಂದ ಸಾಂತ್ವನವನ್ನು ಹೇಳಿದಳು.

ಯುಧಿಷ್ಠಿರ ಮಹಾಬಾಹೋ ನೈನಂ ಶೋಚಿತುಮರ್ಹಸಿ।
ಜಹಿ ಶೋಕಂ ಮಹಾಪ್ರಾಜ್ಞ ಶೃಣು ಚೇದಂ ವಚೋ ಮಮ ॥೪॥

ಯುಧಿಷ್ಠಿರನೇ! ಮಹಾಬಾಹುವೇ! ಅತ್ಯಂತ ಮೇಧಾವಿ ಕರ್ಣನ ವಿಷಯದಲ್ಲಿ ಇಷ್ಟೊಂದು ದುಃಖಿಸುವ ಅವಶ್ಯಕತೆಯಿಲ್ಲ. ದುಃಖವನ್ನು ಪರಿತ್ಯಾಗ ಮಾಡು. ನನ್ನ ಮಾತನ್ನು ಶ್ರದ್ಧೆಯಿಂದ ಕೇಳು.

ಯತಿತಃ ಸ ಮಯಾ ಪೂರ್ವಂ ಭ್ರಾತ್ರ್ಯಂ ಜ್ಞಾಪಯಿತುಂ ತವ।
ಭಾಸ್ಕರೇಣ ಚ ದೇವೇನ ಪಿತ್ರಾ ಧರ್ಮಭೃತಾಂ ವರ ॥೫॥

ಓ ಧರ್ಮಮೂರ್ತಿಗಳಲ್ಲಿ ಶ್ರೇಷ್ಠನಾದವನೇ! ಹಿಂದೆಯೇ ನಾನು ನಿನ್ನ ಸಹೋದರನಾದ ಕರ್ಣನಿಗೆ ಈ ಎಲ್ಲಾ ವಿಷಯವನ್ನು ಹೇಳಿದ್ದೆ. ನಿಮ್ಮಲ್ಲಿ ಸಹೋದರ ಭಾವವನ್ನು ಹೊಂದಿ, ಬದುಕಲು ಉಪದೇಶಿಸಿದ್ದೆ. ನಾನಷ್ಟೇ ಅಲ್ಲದೇ ಅವನ ತಂದೆಯಾದ ಸೂರ್ಯದೇವನೂ ಕೂಡ ನಿಮ್ಮ ಜೊತೆ ಸಹೋದರಭಾವದಿಂದ ಬದುಕಬೇಕೆಂದು ಬುದ್ಧಿ ಹೇಳಿದ್ದನು.

ಯದ್ವಾಚ್ಯಂ ಹಿತಕಾಮೇನ ಸುಹೃದಾ ಭೂತಿಮಿಚ್ಛತಾ।
ತಥಾ ದಿವಾಕರೇಣೋಕ್ತಃ ಸ್ವಪ್ನಾಂತೇ ಮಮ ಚಾಗ್ರತಃ ॥೬॥

ಹಿತವನ್ನು ಅಪೇಕ್ಷಿಸುವ ಆಪ್ತಮಿತ್ರನು ತನ್ನ ನೆಚ್ಚಿನ ಸ್ನೇಹಿತರಿಗೆ ಹೇಗೆ ಹಿತವನ್ನೇ ಹೇಳುತ್ತಾನೋ, ಅದರಂತೆ ತಂದೆಯಾದ ಸೂರ್ಯನೂ ಕೂಡ ನನ್ನ ಮುಂದೆಯೇ ಅವನಿಗೆ ಹಿತನುಡಿಗಳನ್ನು ಹೇಳಿದ್ದನು. ಅಷ್ಟೇ ಅಲ್ಲದೇ ಸ್ವಪ್ನದಲ್ಲಿಯೂ ಕೂಡ ಬಂದು ಅವನಿಗೆ ಬುದ್ಧಿ ಹೇಳಿದ್ದನು.

ನಚೈನಮಶಕದ್ ಭಾನುರಹಂ ವಾ ಸ್ನೇಹಕಾರಣೈಃ।
ಪುರಾ ಪ್ರತ್ಯನುನೇತುಂ ವಾ ನೇತುಂ ವಾಪ್ಯೇಕತಾಂ ತ್ವಯಾ ॥೭॥

ಆದರೆ ಕರ್ಣನು ಮಾತ್ರ ನನ್ನ ಮಾತನ್ನು, ಅಥವಾ ಸೂರ್ಯದೇವನ ಮಾತನ್ನು ಕೇಳಲಿಲ್ಲ. ದುರ್ಯೋಧನನ ಮೇಲೆ ಅವನಿಗೆ ಗಾಢವಾದ ಸ್ನೇಹವಿತ್ತು. ಆದ್ದರಿಂದ ಆ ಕರ್ಣನನ್ನು ನಿಮ್ಮ ಜೊತೆ ಸೇರಿಸಲು ನನ್ನಿಂದ ಸಾಧ್ಯವಾಗಲಿಲ್ಲ. ಸೂರ್ಯನಿಂದಲೂ ಕೂಡ ಸಾಧ್ಯವಾಗಲಿಲ್ಲ.

ತತಃ ಕಾಲಪರೀತಃ ಸ ವೈರಸ್ಯೋದ್ಧರಣೇ ರತಃ।
ಪ್ರತೀಪಕಾರೀ ಯುಷ್ಮಾಕಮಿತಿ ಚೋಪೇಕ್ಷಿತೋ ಮಯಾ ॥೮॥

ಅನಂತರ ಕಾಲಪ್ರೇರಿತನಾದ ಕರ್ಣನು ನಿಮ್ಮ ಜೊತೆ ಸ್ನೇಹ ಮಾಡುವುದಿರಲಿ, ವೈರವನ್ನೇ ಹೆಚ್ಚು ಹೆಚ್ಚು ಬೆಳೆಸಿದನು. ಅದರಲ್ಲೇ ಆಸಕ್ತನಾದನು. ನಿಮಗೆ ಪ್ರತೀಕಾರ ಮಾಡುವುದರಲ್ಲೇ ಆಸಕ್ತನಾದನು. ಆದ್ದರಿಂದ ಅವನ ಈ ದುಷ್ಟಗುಣಗಳನ್ನು ಕಂಡು ನಾನು ಅವನನ್ನು ಉಪೇಕ್ಷೆ ಮಾಡಿದನು.

ಇತ್ಯುಕ್ತೋ ಧರ್ಮರಾಜಸ್ತು ಮಾತ್ರಾ ಬಾಷ್ಪಾಕುಲೇಕ್ಷಣಃ।
ಉವಾಚ ವಾಕ್ಯಂ ಧರ್ಮಾತ್ಮಾ ಶೋಕವ್ಯಾಕುಲಚೇತನಃ।
ಭವತ್ಯಾ ಗೂಢಮಂತ್ರತ್ವಾತ್ ಪೀಡಿತೋಽಸ್ಮೀತ್ಯುವಾಚ ತಾಮ್ ॥೯॥

ತಾಯಿಯಾದ ಕುಂತಿಯು ಇಷ್ಟು ಹೇಳಿದರೂ ಕೂಡ ಧರ್ಮರಾಜನಿಗೆ ಸಮಾಧಾನವಾಗಲಿಲ್ಲ. ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು ಬಹಳ ದುಃಖದಿಂದ ಆ ತಾಯಿಯನ್ನು ಕುರಿತು ಹೀಗೆ ಹೇಳುತ್ತಾನೆ - ಅಮ್ಮಾ! ನೀನು ಈ ರಹಸ್ಯವನ್ನು ಮುಚ್ಚಿಟ್ಟು ನನಗೆ ಬಹಳ ಸಂಕಟವನ್ನು ಉಂಟುಮಾಡಿರುವಿ.

ಶಶಾಪ ಚ ಮಹಾತೇಜಾಃ ಸರ್ವಲೋಕೇಷು ಚ ಸ್ತ್ರಿಯಃ।
ನ ಗುಹ್ಯಂ ಧಾರಯಿಷ್ಯಂತೀತ್ಯತಿದುಃಖಸಮನ್ವಿತಃ ॥೧೦॥

ಇಷ್ಟು ಹೇಳಿದ ಮಹಾತೇಜಸ್ವಿಯಾದ ಧರ್ಮರಾಜನು ತನ್ನ ದುಃಖವನ್ನು ತಡೆದುಕೊಳ್ಳಲಾಗದೇ, ಸಮಸ್ತ ಸ್ತ್ರೀಕುಲಕ್ಕೆ ಶಾಪವನ್ನು ನೀಡಿದನು. "ಇನ್ನು ಮುಂದೆ ಪ್ರಪಂಚದಲ್ಲಿ ಯಾವ ಸ್ತ್ರೀಯರೂ ಕೂಡ ರಹಸ್ಯ ವಿಚಾರಗಳನ್ನು ಗುಟ್ಟಾಗಿ ಇಟ್ಟುಕೊಳ್ಳುವುದಿಲ್ಲ.

ಸ ರಾಜಾ ಪುತ್ರಪೌತ್ರಾಣಾಂ ಸಂಬಂಧಿಸುಹೃದಾಂ ತಥಾ।
ಸ್ಮರನ್ನುದ್ವಿಗ್ನಹೃದಯೋ ಬಭೂವಾಸ್ವಸ್ಥಚೇತನಃ ॥೧೧॥

ಹೀಗೆ ಆ ಧರ್ಮರಾಜನು ಯುದ್ಧದಲ್ಲಿ ಮರಣವನ್ನು ಹೊಂದಿದ ತನ್ನ ಪುತ್ರ

ಪೌತ್ರಾದಿಗಳನ್ನು ಮತ್ತೆ ಮತ್ತೆ ನೆನೆಸಿಕೊಂಡನು. ಉದ್ವಿಗ್ನವಾದ ಹೃದಯವುಳ್ಳವನಾಗಿ ಬಂಧುವರ್ಗದ ವಿಯೋಗದಿಂದ ಅತ್ಯಂತ ಅಸ್ವಸ್ಥನಾದನು.

ತತಃ ಶೋಕಪರೀತಾತ್ಮಾ ಸಧೂಮ ಇವ ಪಾವಕಃ।
ನಿರ್ವೇದಮಕರೋದ್ಧೀಮಾನ್ ರಾಜಾ ಸಂತಾಪಪೀಡಿತಃ ॥೧೨॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ಷಷ್ಠೋಽಧ್ಯಾಯಃ ॥

ಹೊಗೆಯಾಡುವ ಬೆಂಕಿಯಂತೆ ಮನಸ್ಸಿನ ಒಳಗೆ ಸಂಕಟದಿಂದ ಕುದಿಯುತ್ತಾ ರಾಜ್ಯದ ವಿಷಯದಲ್ಲಿ ಮತ್ತು ತನ್ನ ಜೀವನದ ಬಗ್ಗೆ ಜಿಹಾಸೆಯನ್ನು ಹೊಂದಿದನು.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೬ನೆಯ ಅಧ್ಯಾಯವು ಮುಗಿಯಿತು.

* * * * *

೭. ಏಳನೆಯ ಅಧ್ಯಾಯ

ಯುಧಿಷ್ಠಿರನು ಕರ್ಣನ ವಧೆಯಿಂದ ಅತ್ಯಂತ ಖಿನ್ನನಾದನು. ತನ್ನ ಆತಂಕವನ್ನು ಅರ್ಜುನನ ಜೊತೆ ಪ್ರಕಟ ಪಡಿಸಿದನು. ರಾಜ್ಯವನ್ನು ಪರಿತ್ಯಾಗ ಮಾಡಿ, ಕಾಡಿಗೆ ಹೋಗುತ್ತೇನೆಂದು ತಿಳಿಸಿದನು.

ವೈಶಂಪಾಯನಃ

ಯುಧಿಷ್ಠಿರಸ್ತು ಧರ್ಮಾತ್ಮಾ ಶೋಕವ್ಯಾಕುಲಚೇತನಃ।
ಶುಶೋಚ ದುಃಖಸಂತಪ್ತಃ ಸ್ಮೃತ್ವಾ ಕರ್ಣಂ ಮಹಾರಥಮ್ ॥೧॥

ವೈಶಂಪಾಯನರು – ಜನಮೇಜಯರಾಜನೇ ! ಧರ್ಮಸ್ವರೂಪನಾದ ಆ ಯುಧಿಷ್ಠಿರನಿಗೆ ತನ್ನ ತಾಯಿಯು ಅಷ್ಟು ಬಗೆಯಲ್ಲಿ ಸಮಾಧಾನ ಮಾಡಿದರೂ ಕೂಡ ಸಮಾಧಾನವಾಗಲಿಲ್ಲ. ಮತ್ತಷ್ಟು ದುಃಖದಿಂದ ಕೊರಗುತ್ತಲೇ ಇದ್ದನು. ಮೃತನಾದ ಆ ಕರ್ಣನನ್ನು ಮತ್ತೆ ಮತ್ತೆ ನೆನೆಸಿಕೊಂಡು ದುಃಖದಿಂದ ಪರಿತಪಿಸಿದನು.

ಆವಿಷ್ಟೋ ದುಃಖಶೋಕಾಭ್ಯಾಂ ನಿಃಶ್ವಸಂಶ್ಚ ಪುನಃಪುನಃ।
ದೃಷ್ಟ್ವಾರ್ಜುನಮುವಾಚೇದಂ ವಚನಂ ಶೋಕಕರ್ಶಿತಃ ॥೨॥

ಬಹಳವಾದ ದುಃಖದಿಂದ ಹಾಗೂ ಶೋಕದಿಂದ ಪುನಃ ಪುನಃ ನಿಟ್ಟುಸಿರು ಬಿಡುತ್ತಾ ಪಕ್ಕದಲ್ಲಿ ಕುಳಿತ ಅರ್ಜುನನ್ನು ಕಂಡು, ದುಃಖದ ಮಾತುಗಳನ್ನು ಹೀಗೆ ಹೇಳಿದನು -

ಯದ್ ಭೈಕ್ಷಮಾಚಾರಿಷ್ಯಾಮ ವೃಷ್ಣ್ಯಂಧಕಪುರೇ ವಯಮ್।
ಜ್ಞಾತೀನ್ ನಿಷ್ಪುರುಷಾನ್ ಕೃತ್ವಾನೇಮಾಂ ಪ್ರಾಪ್ಸ್ಯಾಮ ದುರ್ಗತಿಮ್ ॥೩॥

ಅರ್ಜುನನೇ! ಒಂದು ವೇಳೆ ನಾವು ಸರಿಯಾಗಿ ಯೋಚನೆಯನ್ನು ಮಾಡಿ, ವೃಷ್ಣ್ಯಂಧಕನಗರಗಳಲ್ಲಿ ಭಿಕ್ಷಾಟನೆಯನ್ನೇ ಮಾಡುತ್ತಿದ್ದರೆ ನಮ್ಮ ಜ್ಞಾತಿಬಂಧುಗಳನ್ನು ಹೀಗೆ ಕೊಲ್ಲುವ ಪರಿಸ್ಥಿತಿ ಬರುತ್ತಿರಲಿಲ್ಲ. ಅವರನ್ನೆಲ್ಲಾ ಕೊಂದು ನಾವು ಇಂಥ ಕೆಟ್ಟ ದುಸ್ಥಿತಿಗೆ ಈಡಾಗುತ್ತಿರಲಿಲ್ಲ.

ಅಮಿತ್ರಾ ನಃ ಸಮೃದ್ಧಾರ್ಥಾ ವೃತ್ತಾರ್ಥಾಃ ಕುರವಃ ಕಿಲ।
ಆತ್ಮಾನಮಾತ್ಮನಾ ಹತ್ವಾ ಕಿಂ ಧರ್ಮಫಲಮಾಪ್ನುಮಃ ॥೪॥

ನಮ್ಮ ಶತ್ರುಗಳೆಲ್ಲರೂ ಕೃತಕೃತ್ಯರಾದರು. ಕ್ಷತ್ರಿಯ ಧರ್ಮವನ್ನು ಪರಿಪಾಲನೆ ಮಾಡಿ, ಪುಣ್ಯವನ್ನು ಗಳಿಸಿ ಉತ್ತಮಗತಿಯನ್ನು ಹೊಂದಿದರು. ಆದರೆ ನಾವು ಅದಕ್ಕೆ ವಿರುದ್ಧವಾಗಿ ನಮ್ಮನ್ನು ನಾವೇ ಕೊಂದು ಕೊಂಡೆವು. ಹೀಗಿರುವಾಗ ನಮ್ಮ ಧರ್ಮದ ಫಲವನ್ನು ಹೊಂದಲು ನಾವು ಹೇಗೆ ಸಾಧ್ಯ ?

ಟಿಪ್ಪಣಿ- ಅಮಿತ್ರಾ ನ ಸಮೃದ್ಧಾರ್ಥಾ ವೃತ್ತಾರ್ಥಾಃ ಕುರವಃ ಕಿಲ ಇತ್ಯತ್ರ ವೃತ್ತಾರ್ಥಾಃ ಪ್ರವೃತ್ತಸರ್ವಾರ್ಥಾಃ ಕುರವಃ ಅಮಿತ್ರಾಃ ಕಿಲ ಅಸ್ಮಾಭಿರ್ನಾಶಿತತ್ವಾತ್ ಸಮೃದ್ಧಾ ನ ಕಿಲ। ಏವಂಚ ಆತ್ಮನಾ ಆತ್ಮಾನಂ ಸ್ವಶರೀರಸಮಾನಂ ಕುರುವಂಶಂ ಹತ್ವಾ ಕಿಂ ಧರ್ಮಫಲಮಾಪ್ನುಮ ಇತಿ ಯೋಜನಾ ॥

ಧಿಗಸ್ತು ಕ್ಷಾತ್ರಮಾಚಾರಂ ಧಿಗಸ್ತು ಬಲಮೌರಸಮ್।
ಧಿಗಸ್ತ್ವಮರ್ಷಂ ಯೇನೇಮಾಮಾಪದಂ ಗಮಿತಾ ವಯಮ್ ॥೫॥

ಕ್ಷತ್ರಧರ್ಮಕ್ಕೆ ಧಿಕ್ಕಾರ! ಕ್ಷತ್ರಿಯರ ಸೇನಾಬಲಕ್ಕೆ ಧಿಕ್ಕಾರ! ಕ್ಷತ್ರಿಯರ ಪೌರುಷಕ್ಕೆ ಧಿಕ್ಕಾರ! ಆ ಸೇಡು ಸಿಟ್ಟುಗಳಿಗೂ ಧಿಕ್ಕಾರ! ಯಾವುದನ್ನು ಹೊಂದಿ ನಾವಿಂದು ಇಂಥ ಆಪತ್ತಿಗೆ ಗುರಿಯಾಗಿದ್ದೇವೆ.

ಸಾಧು ಕ್ಷಮಾ ದಮಃ ಶೌಚಮವೈರೋದ್ಯಮಮತ್ಸರಃ।
ಅಹಿಂಸಾ ಸತ್ಯವಚನಂ ನಿತ್ಯಾನಿ ವನಚಾರಿಣಾಮ್ ॥೬॥

ನಿಜವಾಗಿಯೂ ವನವಾಸದಲ್ಲಿರುವವರ ಕ್ಷಮೆಯೇ ಜಯಿಸುತ್ತದೆ. ಜಿತೇಂದ್ರಿಯತ್ವ, ಶುಚಿತ್ವ ಬೇರೆಯವರಲ್ಲಿ ದ್ವೇಷಮಾತ್ಸರ್ಯಗಳಿಲ್ಲದಿರುವಿಕೆ, ಅಹಿಂಸೆ, ಸತ್ಯ ಇವುಗಳೇ ಶ್ರೇಷ್ಠವಾಗಿವೆ. ಮತ್ತು ನಿತ್ಯಧರ್ಮಗಳಾಗಿವೆ.

ವಯಂ ತು ಲೋಭಾನ್ಮೋಹಾಚ್ಚ ದಂಭಂ ಮಾನಂ ಚ ಸಂಶ್ರಿತಾಃ।
ಇಮಾಮವಸ್ಥಾಮಾಪನ್ನಾ ರಾಜ್ಯಲೇಶಬುಭುಕ್ಷಯಾ ॥೭॥

ಆದರೆ ನಾವು ಲೋಭ, ಮೋಹ ಇವುಗಳಿಗೆ ತುತ್ತಾಗಿ ಡಂಭದಿಂದ ಮತ್ತು ದುರಭಿಮಾನದಿಂದ ಇಂಥ ದುರವಸ್ಥೆಯನ್ನು ಹೊಂದಿದ್ದೇವೆ.

ತ್ರೈಲೋಕ್ಯಸ್ಯಾಪಿ ರಾಜ್ಯೇನ ನಾಸ್ಮಾನ್ ಕಶ್ಚಿತ್ ಪ್ರಹರ್ಷಯೇತ್।
ಬಾಂಧವಾನ್ನಿಹತಾನ್ ದೃಷ್ಟ್ವಾ ಪೃಥಿವ್ಯಾಮಾಮಿಷೈಷಿಣಃ ॥೮॥

ಅರ್ಜುನನೇ! ಭೂಮಿಯ ಆಪೇಕ್ಷೆಯಿಂದ ನಮ್ಮ ಬಂಧುಗಳನ್ನು ನಾವು ನಮ್ಮ ಕೈಯ್ಯಾರೆ ಕೊಂದಿದ್ದೇವೆ. ಇಂಥ ನಮಗೆ ಮೂರು ಲೋಕಗಳ ಆಧಿಪತ್ಯವನ್ನೇ ಕೊಟ್ಟರೂ ನಮ್ಮನ್ನು ಸಂತೋಷ ಪಡಿಸಲು ಯಾರಿಗೂ ಸಾಧ್ಯವಿಲ್ಲ.

ತೇ ವಯಂ ಪೃಥಿವೀಹೇತೋರವಧ್ಯಾನ್ ಪೃಥಿವೀಸಮಾನ್।
ಸಂಪರಿತ್ಯಜ್ಯ ಜೀವಾಮೋ ಹೀನಾರ್ಥಾ ಹತಬಾಂಧವಾಃ ॥೯॥

ಭೂಮಿಯ ಆಸೆಯಿಂದ ಅನೇಕ ರಾಜರುಗಳನ್ನು ನಾವು ಕೊಂದಿದ್ದಾಯಿತು. ಯಾರನ್ನು ಕೊಲ್ಲಬಾರದೋ ಅವರನ್ನೆಲ್ಲಾ ಕೊಂದು, ಹಣವನ್ನು, ಸಂಪತ್ತನ್ನು, ಬಂಧುಗಳನ್ನು ಕಳೆದುಕೊಂಡು ನಾವಿಂದು ಬದುಕಬೇಕಾಗಿದೆ.

ಆಮಿಷೇ ಗೃಧ್ಯಮಾನಾನಾಮಶುಭಂ ವೈ ಶುನಾಮಿವ।
ಆಮಿಷಂ ಚೈವ ನೋ ನಷ್ಟಮಾಮಿಷಸ್ಯ ಚ ಭೋಜಿನಾಮ್ ॥೧೦॥

ಒಂದು ಮಾಂಸದ ತುಂಡಿಗೆ ಆಸೆಪಟ್ಟು ಕಚ್ಚಾಡುವ ನಾಯಿಗಳಂತೆ ನಾವು ರಾಜ್ಯಕ್ಕಾಗಿ ಹೊಡೆದಾಡಿದ್ದೇವೆ. ಇಂಥ ಅಮಂಗಲಸ್ಥಿತಿಯನ್ನು ತಂದುಕೊಂಡಿದ್ದೇವೆ. ಆ ನಾಯಿಗಳು ತಮ್ಮೊಳಗೆ ಜಗಳವಾಡಿ ಗೆದ್ದಮೇಲೆ ಆಹಾರವನ್ನು ತಿಂದು ಸುಖಪಡುತ್ತವೆ. ಆದರೆ ನಾವಿಂದು ಎಲ್ಲಾ ಬಂಧುಗಳನ್ನು ಕಳೆದುಕೊಂಡು ರಾಜ್ಯಭೋಗವೂ ಕೂಡ ಇಷ್ಟವಿಲ್ಲದಂತಾಗಿದೆ. ಇದನ್ನು ಭೋಗಿಸಲು ನಮ್ಮಿಂದ ಸಾಧ್ಯವೇ ಇಲ್ಲ.

ಆಮಿಷಂ ಚೈವ ನೋ ನಷ್ಟಮಾಮಿಷಸ್ಯ ಚ ಭೋಜಿನಾಮ್ ಇತ್ಯತ್ರ **ಆಮಿಷಸ್ಯ** ಆಮಿಷಪ್ರಾಯಸ್ಯ ರಾಜ್ಯಸ್ಯ ಭೋಜಿನಾಂ ನಃ **ಆಮಿಷಂ** ಆಮಿಷಸ್ಥಾನೀಯಂ ರಾಜ್ಯಂ **ನಷ್ಟಂ** ಹತಬಂಧುಜನತ್ವಾತ್ ನಷ್ಟಪ್ರಾಯಮ್॥

ನ ಪೃಥಿವ್ಯಾ ಸಕಲಯಾ ನ ಸುವರ್ಣಸ್ಯ ರಾಶಿಭಿಃ।
ನ ಗವಾಶ್ವೇನ ಸರ್ವೇಣ ತೇ ತ್ಯಾಜ್ಯಾ ಯ ಇಮೇ ಹತಾಃ ॥೧೧॥

ಈ ಸಮಗ್ರಭೂಮಿಯನ್ನು ಸುವರ್ಣದ ರಾಶಿಗಳನ್ನು ಗಜ, ತುರಗ ಇವುಗಳ ಸಮೂಹವನ್ನು ಪ್ರತಿಫಲವಾಗಿ ಪಡೆಯಬಹುದು. ಆದರೂ ಯಾರನ್ನು ಬಿಡಬಾರದೋ ಅಂಥವರೆಲ್ಲಾ ನಮ್ಮಿಂದ ಇಂದು ಹತರಾಗಿದ್ದಾರೆ.

ಸಂಯುಕ್ತಾಃ ಕಾಮಮನ್ಯುಭ್ಯಾಂ ಕ್ರೋಧಾಮರ್ಷಸಮನ್ವಿತಾಃ।
ಮೃತ್ಯುಯಾನಂ ಸಮಾರುಹ್ಯ ಗತಾ ವೈವಸ್ವತಕ್ಷಯಮ್ ॥೧೨॥

ಆದರೆ ಅವರೆಲ್ಲರೂ ಕಾಮ ಮತ್ತು ಕ್ರೋಧಗಳಿಗೆ ವಶರಾಗಿದ್ದರು. ಹರ್ಷ ಮತ್ತು ಕ್ರೋಧಗಳಿಂದ ಕೂಡಿದ್ದರು. ಆದ್ದರಿಂದ ಅವರೆಲ್ಲರೂ ಮೃತ್ಯುವೆಂಬ ವಾಹನವನ್ನು ಹತ್ತಿಕೊಂಡು ಯಮನ ಪಟ್ಟಣಕ್ಕೆ ಹೊರಟು ಹೋದರು.

ಬಹುಕಲ್ಯಾಣಮಿಚ್ಛಂತ ಈಹಂತೇ ಪಿತರಃ ಸುತಾನ್।
ತಪಸಾ ಬ್ರಹ್ಮಚರ್ಯೇಣ ಸತ್ಯೇನ ಚ ತಿತಿಕ್ಷಯಾ ॥೧೩॥

ಪಿತೃಗಳು ತಮ್ಮ ತಪಸ್ಸಿನಿಂದ, ಬ್ರಹ್ಮಚರ್ಯದಿಂದ, ಸತ್ಯನಿಷ್ಠೆಯಿಂದ, ಕ್ಷಮೆಯಿಂದ ಕೂಡಿದವರಿಗೆ ಅನೇಕ ವಿಧವಾದ ಕ್ಷೇಮಗಳನ್ನು ಮತ್ತು ಅಭ್ಯುದಯವನ್ನು ಉದ್ದೇಶಿಸಿ ಮಕ್ಕಳನ್ನು ಅಪೇಕ್ಷೆ ಪಡುತ್ತಾರೆ.

ಉಪವಾಸೈಸ್ತಥೇಜ್ಯಾಭಿರ್ವ್ರತಕೌತುಕಮಂಗಲೈಃ।
ಲಭಂತೇ ಮಾತರೋ ಗರ್ಭಾನ್ ಮಾಸಾನ್ ದಶ ಚ ಬಿಭ್ರತಿ ॥೧೪॥

ಸ್ತ್ರೀಯರೂ ಕೂಡ ಉಪವಾಸ, ಯಾಗ, ಅನೇಕ ಬಗೆಯ ವ್ರತಗಳು, ವಿವಿಧ ಬಗೆಯ ಹರಕೆಗಳು, ನಾನಾವಿಧ ಮಂಗಳಕಾರ್ಯಗಳು ಇವುಗಳನ್ನೆಲ್ಲಾ ಆಚರಿಸಿ, ಸತ್ಪುತ್ರನು ಹುಟ್ಟಬೇಕೆಂಬ ಇಚ್ಛೆಯಿಂದ ಗರ್ಭವನ್ನು ಧರಿಸುತ್ತಾರೆ. ಹತ್ತು ತಿಂಗಳ ತನಕ ಆ ಗರ್ಭವನ್ನು ಜಾಗರೂಕತೆಯಿಂದ ರಕ್ಷಿಸುತ್ತಾರೆ.

ಯದಿ ಸ್ವಸ್ತಿ ಪ್ರಜಾಯಂತೇ ಜಾತಾ ಜೀವಂತಿ ವಾ ಯದಿ।
ಸಂಭಾವಿತಾ ಚಾಬಲಾಸ್ತೇ ದದ್ಯುರ್ಯದಿ ನಃ ಸುಖಮ್।
ಇಹ ಚಾಮುತ್ರ ಚೈವೇತಿ ಕೃಪಣಾಃ ಫಲಹೇತುಕಾಃ ॥೧೫॥

ಸಂತಾನವನ್ನು ಹೊಂದಬೇಕಾದರೆ ಇಚ್ಛೆ ಹೀಗಿರುತ್ತದೆ - ಕ್ಷೇಮದಿಂದ ಪ್ರಸವವಾಗಬೇಕು. ಹುಟ್ಟಿದ ಮೇಲೆ ಆ ಮಗು ಆರೋಗ್ಯವಾಗಿ ಬದುಕಬೇಕು. ಚಿರಂಜೀವಿಯಾಗಿ ಬೆಳೆದು ಬಲಾಢ್ಯನಾಗಬೇಕು, ಲೋಕದಲ್ಲಿ ಗೌರವವನ್ನು ಪಡೆಯಬೇಕು. ಆಗಷ್ಟೇ ನಾವು ಇಹಲೋಕದಲ್ಲಿ, ಪರಲೋಕದಲ್ಲಿ ಸ್ವಲ್ಪವಾದರೂ ಸುಖವನ್ನು ಅನುಭವಿಸಲು ಸಾಧ್ಯ . ಹೀಗೆ ಬಹಳ ದೈನ್ಯದಿಂದ ತಂದೆ-ತಾಯಂದಿರು ಮಕ್ಕಳ ವಿಷಯದಲ್ಲಿ ಆಸೆಯನ್ನು ಹೊಂದಿರುತ್ತಾರೆ.

ಟಿಪ್ಪಣಿ - ಬಹುಕಲ್ಯಾಣಮಿಚ್ಛಂತ ಎಂಬ ಶ್ಲೋಕದಲ್ಲಿ ಮಕ್ಕಳನ್ನು ಪಡೆಯುವುದಕ್ಕೆ ತಂದೆಯಾದವನ ಶ್ರಮವನ್ನು ವರ್ಣಿಸಿ, 'ಉಪವಾಸೈಃ' ಎಂಬ ಶ್ಲೋಕದಿಂದ ತಾಯಿಯ ಆಸೆ ಆಕಾಂಕ್ಷೆಗಳನ್ನು ವರ್ಣಿಸಿದ್ದಾರೆ. 'ಯದಿ ಸ್ವಸ್ತಿ' ಎಂಬ ಶ್ಲೋಕದಿಂದ ಇಬ್ಬರ ಸಮಾನವಾದ ಆಕಾಂಕ್ಷೆಯನ್ನು ಹೇಳಿದ್ದಾರೆ.

ತಾಸಾಮಯಂ ಸಮಾರಂಭೋ ನಿವೃತ್ತಃ ಕೇವಲೋಽಫಲಃ।
ಯದಾಸಾಂ ನಿಹತಾಃ ಪುತ್ರಾ ಯುವಾನೋ ಮೃಷ್ಟಕುಂಡಲಾಃ ॥೧೬॥

ಅಭುಕ್ತ್ವಾ ಪಾರ್ಥಿವಾನ್ ಭೋಗಾನ್ಋಣಾನ್ಯನವದಾಯ ಚ।
ಪಿತೃಭ್ಯೋ ದೇವತಾಭ್ಯಶ್ಚ ಗತಾ ವೈವಸ್ವತಕ್ಷಯಮ್ ॥೧೭॥

ಆದರೆ ಈಗ ನಮ್ಮ ಕುರುಕುಲದ ಸ್ತ್ರೀಯರಿಗೆ ಎಲ್ಲಾ ಆಸೆಗಳು ನಿಷ್ಫಲವಾಗಿವೆ. ತಮ್ಮ ಮಕ್ಕಳು ಒಳ್ಳೆಯ ಯೌವನವಂತರಾಗಿ, ಕುಂಡಲಾದ್ಯಭರಣಗಳನ್ನು ಧರಿಸಿ ತಮ್ಮ ಪರಾಕ್ರಮದಿಂದ ಯುದ್ಧವನ್ನು ಮಾಡಿ, ಅದೇ ಯುದ್ಧದಲ್ಲಿ ಮೃತರಾಗಿದ್ದಾರೆ. ಆ ರಾಜಕುಮಾರರು ತಮ್ಮ ತಂದೆ-ತಾಯಿಯಂದಿರ ಆಸೆಯನ್ನು ಪೂರೈಸದೇ ಮೃತರಾಗಿದ್ದಾರೆ. ಈ ರಾಜಕುಮಾರರು ಹುಟ್ಟಿ ರಾಜಭೋಗಗಳನ್ನು ಅನುಭವಿಸಲಿಲ್ಲ. ಪಿತೃಗಳಿಗೂ ದೇವತೆಗಳಿಗೂ ತಾವು ಸಲ್ಲಿಸಬೇಕಾದ ಋಣವನ್ನು ತೀರಿಸಲಿಲ್ಲ. ತಾವು ಲೋಕದಲ್ಲಿ ಹುಟ್ಟಿದ್ದಕ್ಕೆ ಸಾರ್ಥಕ್ಯವೇ ಇಲ್ಲದಂತೆ ಯಮನ ಪುರಿಗೆ ಹೊರಟು ಬಿಟ್ಟರು.

ಟಿಪ್ಪಣಿ - ಪಿತೃಭ್ಯೋ ದೇವತಾಭ್ಯಾಶ್ಚ ಗತಾ ವೈವಸ್ವತಕ್ಷಯಮ್ ಇತ್ಯತ್ರ ಪಿತೃಭ್ಯೋ ದೇವತಾಭ್ಯಾಶ್ಚ ಋಣಾನಿ ಮನುಷ್ಯೇಭ್ಯಃ ಅನ್ನಂ ಚ ವಿಹಾಯ ವೈವಸ್ವತಕ್ಷಯಂ ಗತಾ ಇತಿ ಯೋಜನಾ ॥

ಪಿತೃಭ್ಯೋ ದೇವತಾಭ್ಯಾಶ್ಚ ಗತಾ ವೈವಸ್ವತಕ್ಷಯಮ್ ಎಂಬಲ್ಲಿ ಪಿತೃಗಳಿಗೆ, ದೇವತೆಗಳಿಗೆ ಋಣವನ್ನು ಪರಿಹರಿಸದೇ, ಮನುಷ್ಯರಿಗೆ ಅನ್ನವನ್ನು ನೀಡದೇ ಯಮಪಟ್ಟಣವನ್ನು ಕುರಿತು ಹೊರಟು ಬಿಟ್ಟರು ಎಂಬುದಾಗಿ ಯೋಜನೆಯನ್ನು ಮಾಡಿಕೊಳ್ಳಬೇಕು.

ವಿಶೇಷವಿಚಾರ - ನಮ್ಮ ಶತ್ರುಗಳು ಈ ಲೋಕಕ್ಕೆ ಬಂದು, ಪಿತೃಋಣ, ದೇವಋಣ, ಭೂತಋಣವನ್ನು ತೀರಿಸದೆ ಯಮನಪಟ್ಟಣಕ್ಕೆ ಹೋಗಿಬಿಟ್ಟರು ಎಂಬುದು ಈ ಶ್ಲೋಕದ ಭಾವ.

'ಋಣಾನಿ ಅನವಧಾಯ' ಎಂಬುದು ಒಂದು ಪಾಠ. 'ಅನ್ನಂ ವಿಹಾಯ ಚ' ಎಂಬುದು ಮತ್ತೊಂದು ಪಾಠ. ಲಕ್ಷ್ಮಲಂಕಾರದಲ್ಲಿ 'ಅನ್ನಂ ವಿಹಾಯ ಚ' ಎಂಬ ಪಾಠವನ್ನೇ ವಿವಕ್ಷಿಸಿದ್ದಾರೆ.

'ಪಿತೃಭ್ಯಃ ದೇವತಾಭ್ಯಃ' ಎಂಬಲ್ಲಿ ಚತುರ್ಥೀವಿಭಕ್ತಿಯು ಷಷ್ಠ್ಯರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ ಎಂಬುದಾಗಿ ಕುಂಭಕೋಣಪ್ರತಿಯಲ್ಲಿ ವ್ಯಾಖ್ಯಾನವನ್ನು ಮಾಡಿದ್ದಾರೆ. ಆಗ ಅನವಧಾಯ ಎಂಬ ಪದಕ್ಕೆ 'ತೀರಿಸದೆ' ಎಂಬರ್ಥವನ್ನು ಹೇಳಿದಂತಾಗುತ್ತದೆ. ಆದರೆ ಲಕ್ಷ್ಮಲಂಕಾರದಲ್ಲಿ ಚತುರ್ಥೀವಿಭಕ್ತಿಗೆ ಷಷ್ಠ್ಯರ್ಥವನ್ನು ವಿವಕ್ಷಿಸುವ ಅವಶ್ಯಕತೆಯಿರುವುದಿಲ್ಲ. ವಿಹಾಯ ಎಂಬ ಅವ್ಯಯವನ್ನು ಸೇರಿಸಿದ್ದರಿಂದ 'ಪಿತೃಭ್ಯಃ ದೇವತಾಭ್ಯಃ' ಎಂಬಲ್ಲಿರುವ ಚತುರ್ಥೀವಿಭಕ್ತ್ಯರ್ಥ್ಯವನ್ನೇ ವಿವಕ್ಷಿಸಿದ್ದಾರೆ. ಆದರೆ 'ಅನವಧಾಯ' ಎಂಬ ಪದವನ್ನು ವಿವಕ್ಷಿಸದೇ 'ಅನ್ನಂ ವಿಹಾಯ' ಎಂಬ ಪಾಠವನ್ನು ವಿವಕ್ಷಿಸಿದಾಗ ಮಾತ್ರ ಹೀಗೆ ವ್ಯಾಖ್ಯಾನ ಮಾಡಲು ಸಾಧ್ಯ . ಚತುರ್ಥ್ಯಾದ್ಯವಿಭಕ್ತಿಗಳ ಅರ್ಥದಲ್ಲಿ ಷಷ್ಠೀವಿಭಕ್ತಿಯನ್ನು ಪ್ರಯೋಗಿಸುವುದು ಕಾಣಿಸುತ್ತದೆ. ಆದರೆ ಷಷ್ಠ್ಯರ್ಥದಲ್ಲಿ ಚತುರ್ಥ್ಯಾದಿವಿಭಕ್ತಿಗಳನ್ನು ಪ್ರಯೋಗಿಸುವುದು ಶಾಸ್ತ್ರಗಳಲ್ಲಿ ಹೆಚ್ಚಾಗಿ ಕಾಣಿಸುವುದಿಲ್ಲ. ಆದ್ದರಿಂದ ಲಕ್ಷ್ಮಲಂಕಾರದ ಪಾಠದ ಪ್ರಕಾರ ವ್ಯಾಖ್ಯಾನ ಮಾಡುವುದು ಇಲ್ಲಿ ಸೂಕ್ತವಾಗಿ ಕಾಣಿಸುತ್ತದೆ.

ಯದೈಷಾಮಂಗ ಪಿತರೌ ಜಾತೌ ಕಾಮಮಯಾವಿವ।
ಸಂಜಾತಧನರತ್ನೇಷು ತದೈವ ನಿಹತಾ ನೃಪಾಃ ॥೧೮॥

ಆ ರಾಜಕುಮಾರರ ತಂದೆ, ತಾಯಿಯರು ತಮ್ಮ ಮಕ್ಕಳು ಸಂಪಾದನೆ ಮಾಡುವ ಧನಗಳನ್ನು , ರತ್ನಗಳನ್ನು ಉಪಭೋಗಿಸಬೇಕೆಂಬ ಆಸೆಯನ್ನು ಹೊಂದಿದ್ದರು. ಆದರೆ ಆಸೆಯನ್ನು ಈಡೇರಿಸುವಷ್ಟರಲ್ಲಿಯೇ ಯುದ್ಧದಲ್ಲಿ ಮೃತರಾಗಿಬಿಟ್ಟರು.

ಪಾಠಾಂತರದ ಬಗ್ಗೆ - ದಾಕ್ಷಿಣಾತ್ಯಪಾಠದ ಕೆಲವು ಪುಸ್ತಕಗಳಲ್ಲಿ ಹೀಗೆ ಪಾಠವಿದೆ-

ಯದೇವಾಂಶಾ ಚ ಪಿತರೌ ಜಾತಕರ್ಮಕರಾವಿವ।
ಸಂಜಾತಬಾಲರೂಪೇಷು ತದೇವ ನಿಹತಾ ನೃಪಾಃ ॥

ತಂದೆ, ತಾಯಿಗಳು ಬಾಲ್ಯದಲ್ಲಿ ಜಾತಕರ್ಮವನ್ನು ಮಕ್ಕಳಿಗೆ ಮಾಡಿದರು. ಆದರೆ ಅಷ್ಟರಲ್ಲಿಯೇ ತಾವೇ ಮೃತರಾಗಿಬಿಟ್ಟರು.

ಹಿಂದಿನ ಶ್ಲೋಕಗಳಲ್ಲಿ ತಂದೆ, ತಾಯಿಗಳು ಶಿಶುಗರ್ಭದಲ್ಲಿದ್ದಾಗ ಯಾವ ಭಾವನೆಯನ್ನು ಹೊಂದಿರುತ್ತಾರೆಂದು ತಿಳಿಸಲಾಯಿತು. ಈ ಶ್ಲೋಕದಲ್ಲಿ ಹುಟ್ಟಿದ ಮಕ್ಕಳಿಗೆ ಜಾತಕರ್ಮವನ್ನು ಮಾಡಿ, ಹತಾಶರಾದರು ಎಂದು ತಿಳಿಸಲಾಗಿದೆ. ಆದ್ದರಿಂದ ಈ ಪಾಠದಲ್ಲಿ ಹಿಂದಿನ ಶ್ಲೋಕಗಳಲ್ಲಿ ಹೆಚ್ಚಿನ ಸ್ವಾರಸ್ಯವು ಕಾಣಿಸುತ್ತದೆ.

ಸಂಯುಕ್ತಾಃ ಕಾಮಮನ್ಯುಭ್ಯಾಂ ಕ್ರೋಧಹರ್ಷಾನಮಂಜಸಾಃ।
ನ ತೇ ಜನ್ಮಫಲಂ ಕಿಂಚಿದ್ ಭೋಕ್ತಾರೋ ಜಾತು ಕರ್ಹಿಚಿತ್ ॥೨೨॥

ಕಾಮ ಮತ್ತು ಕ್ರೋಧಗಳಿಗೆ ತುತ್ತಾಗಿ ಕ್ರೋಧ ಮತ್ತು ಹರ್ಷಗಳ ಸಮತೋಲನವನ್ನು ಯಾರು ಕಳೆದುಕೊಂಡರೋ, ಅಂಥವರು ವಿಜಯದ ಆಸೆಯನ್ನು ಹೊಂದಲು ಯಾವಾಗಲೂ ಸಾಧ್ಯವಿಲ್ಲ ಎಂದೂ ಸಹ ಜಯಫಲವನ್ನು ಅವರು ಅನುಭವಿಸುವುದಿಲ್ಲ.

ವಿವರಣೆ - ಅರ್ಥದ ಅಭಿಲಾಷೆಯನ್ನು ಕಾಮವೆಂದು, ಅರ್ಥವು ದೊರೆಯದಿದ್ದಾಗ ಉಂಟಾಗುವ ದೈನ್ಯವನ್ನು ಮನ್ಯುವೆಂದು, ಕಾಮದ ತಡೆಯುವಿಕೆಯಿಂದ ಉಂಟಾಗುವ ತಾಪವನ್ನೇ ಕ್ರೋಧವೆಂದು, ಅರ್ಥದ ಅಭಿಲಾಷೆಯು ಪೂರ್ಣವಾದಾಗ ಉಂಟಾಗುವ ಉಲ್ಲಾಸವನ್ನೇ ಹರ್ಷವೆಂದು ಇಲ್ಲಿ ವ್ಯಾಖ್ಯಾನದಲ್ಲಿ ಪರಿಗಣಿಸಲಾಗಿದೆ. ಇವುಗಳಿಂದ ಯಾರ ಮನಸ್ಸು ಸಮತೋಲನವನ್ನು ಕಳೆದುಕೊಂಡು ವಿಕಾರಕ್ಕೆ ಈಡಾಗುತ್ತದೋ, ಅಂಥ ಮನುಷ್ಯನಿಗೆ ವಿಜಯದ ಫಲ ದೊರೆಯಲು ಸಾಧ್ಯವಿಲ್ಲ ಎಂಬುದು ಶ್ಲೋಕದ ಅಭಿಪ್ರಾಯ.

ಪಾಂಚಾಲಾನಾಂ ಕುರೂಣಾಂ ಚ ಹತಾ ಏವ ಹಿ ಯೇऽಹತಾಃ।
ತೇ ವಯಂ ತ್ವಧಮಾಂಲ್ಲೋಕಾನ್ ಪ್ರಪದ್ಯೇಮ ಸ್ವಕರ್ಮಭಿಃ।
(ನ ಸಕಾಮಾ ವಯಂ ತೇ ನಚಾಸ್ಮಾಭಿರ್ನ ತೈರ್ಜಿತಮ್) ॥೨೩॥

ಪಾಂಚಾಲರಲ್ಲಿ ಮತ್ತು ಕುರುಗಳಲ್ಲಿ ಯಾರು ಮರಣವನ್ನು ಹೊಂದಿದರೋ, ಅವರು ನಿಜವಾಗಿಯೂ ಕೂಡ ಹತರಾಗಲಿಲ್ಲ. ಸ್ವರ್ಗವನ್ನು ಮತ್ತು ಸತ್ಕೀರ್ತಿಯನ್ನು ಪಡೆದು ಅಮರರಾದರು. ಆದರೆ ಅವರನ್ನು ಸಂಹಾರ ಮಾಡಿದ ನಾವು

ಮಾತ್ರ ಈ ಬಂಧುಜನ ವಧೆ ಎಂಬ ಕೆಟ್ಟಕರ್ಮದ ಫಲವಾಗಿ ಅಧಮಲೋಕಗಳನ್ನು ಹೊಂದುವವರಿದ್ದೇವೆ.

ಪಾಠಾಂತರದ ಬಗ್ಗೆ - ಕೆಲವು ಪುಸ್ತಕಗಳಲ್ಲಿ 'ಹತಾ ಏವ ಹಿ ಯೇ ಹತಾಃ' ಎಂಬ ಪಾಠವಿದೆ. ಈ ಪಾಠದ ಪ್ರಕಾರ ತಾತ್ಪರ್ಯವನ್ನು ಹೀಗೆ ತಿಳಿಯಬೇಕು. ಯಾವ ಕೌರವರು ಹಾಗೂ ಪಾಂಚಾಲರು ಹತರಾದರೋ, ಅವರು ಸಂಪೂರ್ಣವಾಗಿ ನಾಶವನ್ನೇ ಹೊಂದಿದರು. ಒಂದುವೇಳೆ ಅವರು ಯುದ್ಧದಲ್ಲಿ ಹತರಾಗದಿದ್ದರೆ, ತಮ್ಮ ಜೀವನದಲ್ಲಿ ಮುಂದೆ ಉಚ್ಛ್ರಾಯಸ್ಥಿತಿಯಲ್ಲಿ ಇರುತ್ತಿದ್ದರು.

ಈ ಪಾಠದ ಪ್ರಕಾರ ಉತ್ತರಾರ್ಧದಲ್ಲಿ 'ನ ಚೇತ್ ಸರ್ವಾನಯಂ ಲೋಕಃ ಪಶ್ಯೇತ್ ಸ್ವೇನೈವ ಕರ್ಮಣಾ' ಎಂದಿರುತ್ತದೆ. ಹಿಂದಿನ ಅರ್ಥದ ಜೊತೆ ಈ ಅರ್ಥವು ಹೊಂದಾಣಿಕೆಯಾಗುವುದರಿಂದ ಈ ಪಾಠದಲ್ಲಿ ಹೆಚ್ಚಿನ ಸ್ವಾರಸ್ಯವಿದೆ ಎಂದು ಭಾಸವಾಗುತ್ತದೆ.

ಪಾಂಚಾಲಾನಾಂ ಕುರೂಣಾಂ ಚ ಇತ್ಯತ್ರ ಪಾಂಚಾಲಾನಾಂ ಕುರೂಣಾಂ ಚ ಮಧ್ಯೇ ಯೇ ಹತಾಃ ತೇ ಹತಾ ಏವ, ಐಹಿಕಫಲಸ್ಯ ಈಷದಪ್ಯನನುಭವಾತ್ । ನ ಸಕಾಮಾ ವಯಂ ತೇ ಚ ಇತ್ಯತ್ರ ವಯಮಪಿ ಸಕಾಮಾ ನ ಭವಾಮಃ, ಪುತ್ರಪೌತ್ರಾದೀನಾಂ ನಷ್ಟತ್ವಾತ್ । ತೇ ಕುರುಪಾಂಚಾಲಾಸ್ತು ಮೃತತ್ವಾದೇವ ಸಕಾಮಾ ನ । ತೈರಪಿ ನ ಜಿತಮ್ । ಅಸ್ಮಾಭಿರಪಿ ಬಂಧೂನಾಮೇವ ವಧಾತ್ ನ ಜಿತಮ್ । ಶತ್ರುಜಯೋ ಹಿ ಜಯಃ ಬಂಧುಜಯಸ್ತು ನೈವ ಜಯ ಇತಿ ಭಾವಃ ॥

'ಪಾಂಚಾಲಾನಾಂ ಕುರೂಣಾಂ ಚ' ಎಂಬಲ್ಲಿ ಪಾಂಚಾಲರಲ್ಲಿ ಹಾಗೂ ಕುರುವಂಶದವರ ಮಧ್ಯದಲ್ಲಿ ಯಾರು ಹತರಾದರೋ, ಅವರು ಸಂಪೂರ್ಣವಾಗಿಯೇ ಹತವಾದರು. ಐಹಿಕಫಲವನ್ನು ಸ್ವಲ್ಪವೂ ಸಹ ಅನುಭವಿಸಲಿಲ್ಲ. ಸ್ವಲ್ಪವೂ ಸಹ ತಮ್ಮ ಅಭಿಲಾಷೆಗಳನ್ನು ಈಡೇರಿಸಿಕೊಳ್ಳಲಿಲ್ಲ. ನಾವೂ ಸಹ ನಮ್ಮ ಅಭಿಲಾಷೆಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗಲಿಲ್ಲ. ಏಕೆಂದರೆ ನಾವು ಗೆದ್ದರೂ ಕೂಡ ನಮ್ಮ ಮಕ್ಕಳು ಹಾಗೂ ಮೊಮ್ಮಕ್ಕಳು ಮೃತರಾಗಿದ್ದಾರೆ. ಆ ಕುರುಪಾಂಚಾಲರು ಮರಣವನ್ನು ಹೊಂದಿರುವುದರಿಂದಲೇ ತಮ್ಮ ಅಭಿಲಾಷೆಗಳನ್ನು ಈಡೇರಿಸಿಕೊಳ್ಳಲು ಅಸಮರ್ಥರಾಗಿದ್ದಾರೆ. ಆದ್ದರಿಂದ ಅವರೂ ಕೂಡ ಗೆದ್ದಿಲ್ಲ. ನಾವೂ ಸಹ ಗೆಲ್ಲಲಿಲ್ಲ. ಶತ್ರುಗಳ ಜಯವೇ ನಿಜವಾದ ಜಯ. ಬಂಧುಜಯವನ್ನು ಯಾರೂ ಸಹ ಜಯವೆಂದು ಹೇಳುವುದಿಲ್ಲ ಎಂಬುದು ಶ್ಲೋಕದ ಅಭಿಪ್ರಾಯ.

ಲಕ್ಷಾಲಂಕಾರದ ಪ್ರಕಾರ 'ಹತಾ ಏವ ಹಿ ಯೇ ಹತಾಃ' ಎಂಬ ಪಾಠವನ್ನು ವಿವಕ್ಷಿಸಬೇಕು. 'ಹತಾ ಏವ ಹಿ ಯೇ ಅಹತಾ' ಎಂಬ ಪಾಠಕ್ಕಿಂತ ಈ ಪಾಠದಲ್ಲಿರುವ ಹೆಚ್ಚಿನ ಸ್ವಾರಸ್ಯವನ್ನೂ ಕೂಡ ಗಮನಿಸಬೇಕು.

ವಯಮೇವಾಸ್ಯ ಲೋಕಸ್ಯ ವಿನಾಶೇ ಕಾರಣಂ ಸ್ಮೃತಾಃ।
ಧೃತರಾಷ್ಟ್ರಸ್ಯ ಪುತ್ರೇಣ ನಿಕೃತಿಪ್ರೀತಿಸಂಯುತಃ (ನಿಕೃತ್ಯಾಪ್ರತ್ಯಪತ್ಸ್ಮಹಿ) ॥೨೪॥

ಅರ್ಜುನನೇ! ಇವರೆಲ್ಲರ ನಾಶಕ್ಕೆ ನಾವೇ ಕಾರಣರೆಂಬ ಭಾವನೆ ನನಗಿರುವುದು ನಿಜ. ಆದರೆ ವಿಚಾರ ಮಾಡಿದಾಗ ಈ ಇವರೆಲ್ಲರ ನಾಶಕ್ಕೆ ಧೃತರಾಷ್ಟ್ರನ ಮಗನಾದ ದುರ್ಯೋಧನನ ಕಪಟವೇ ಕಾರಣವೆಂದು ನಾನು ತಿಳಿದಿದ್ದೇನೆ.

ವಿವರಣೆ - ವಿನಾಶದ ಕಾರಣಕ್ಕೆ ಆ ಧೃತರಾಷ್ಟ್ರನ ಮಗನಾದ ದುರ್ಯೋಧನನ ಕಪಟವೇ ಕಾರಣವೆಂದು ನನಗೆ ತಿಳಿದಿದೆ. ಅವನೇ ನಿಜವಾದ ಮುಖ್ಯಕಾರಣ. ನಾವು ಅಮುಖ್ಯಕಾರಣರಾಗಿದ್ದೇವೆ ಎಂಬುದು ಶ್ಲೋಕದ ಭಾವ.

ಧೃತರಾಷ್ಟ್ರಸ್ಯ ಪುತ್ರೇಣ ಇತ್ಯತ್ರ ಧೃತರಾಷ್ಟ್ರಸ್ಯ ಪುತ್ರೇಣ ಕಾರಣೇನ ವಯಮೇವಾಸ್ಯ ಲೋಕಸ್ಯ ವಿನಾಶೇ ಕಾರಣಂ ಸ್ಮೃತಾ ಇತಿ ಯೋಜನಾ । ತಸ್ಯ ಧೃತರಾಷ್ಟ್ರಪುತ್ರಸ್ಯ ದುರ್ಗುಣಾನಾಹ - ನಿಕೃತಿಪ್ರೀತಿಸಂಯುತ ಇತ್ಯಾದಿನಾ ॥ 'ಧೃತರಾಷ್ಟ್ರಸ್ಯ ಪುತ್ರೇಷು' ಇತಿ ಪಾಠೇ ಧೃತರಾಷ್ಟ್ರಪುತ್ರಾಣಾಂ ಮಧ್ಯೇ ಜ್ಯೇಷ್ಠೋ ದುರ್ಯೋಧನಃ ನಿಕೃತ್ಯಾಂ ಕಪಟೇ ಪ್ರೀತಿಸಂಯುತ ಇತ್ಯಾದಿಯೋಜನಾ ॥

ಧೃತರಾಷ್ಟ್ರನ ಮಗನಾದ ದುರ್ಯೋಧನನಿಂದಾಗಿ ನಾವೇ ಈ ಲೋಕನಾಶಕ್ಕೆ ಕಾರಣರಾಗಿದ್ದೇವೆಂದು ತಿಳಿಯುತ್ತದೆ. ಧೃತರಾಷ್ಟ್ರನ ಮಗನಲ್ಲಿರುವ ದುರ್ಗುಣವನ್ನು 'ನಿಕೃತಿಪ್ರೀತಿಸಂಯುತ' ಎಂಬುದರಿಂದ ಹೇಳಿದ್ದಾರೆ. ಕೆಲವು ಪುಸ್ತಕಗಳ ಪ್ರಕಾರ 'ಧೃತರಾಷ್ಟ್ರಸ್ಯ ಪುತ್ರೇಷು' ಎಂಬ ಪಾಠವಿದೆ. ಧೃತರಾಷ್ಟ್ರನ ಮಕ್ಕಳಲ್ಲಿ ದುರ್ಯೋಧನನು ಜ್ಯೇಷ್ಠನಾಗಿದ್ದಾನೆ. ಕಪಟದಲ್ಲಿ ಪ್ರೀತಿಯನ್ನು ಇವನು ಹೊಂದಿದ್ದಾನೆಂಬುದು ಇದರ ಅಭಿಪ್ರಾಯ.

ವಿವರಣೆ - 'ನಿಕೃತ್ಯಾ ಪ್ರತ್ಯಪತ್ಸ್ಮಹಿ' ಎಂಬ ಪಾಠವನ್ನು ಮೂಲದಲ್ಲಿ ಕಾಣುತ್ತೇವೆ. ದುರ್ಯೋಧನನ ಕಪಟವೇ ಕಾರಣವೆಂದು ತಿಳಿಯುತ್ತೇನೆಂಬುದು

ಇದರ ಅಭಿಪ್ರಾಯ. ಆದರೆ 'ನಿಕೃತಿ ಪ್ರೀತಿಸಂಯುತ' ಎಂಬುದು ಟಿಪ್ಪಣಿಯ ಪಾಠ. ದುರ್ಯೋಧನನು ಮೇಲ್ನೋಟಕ್ಕೆ ಪ್ರೀತಿ ಮಾಡುತ್ತಿದ್ದ. ಆದರೆ ಅವನ ಪ್ರೀತಿಯಲ್ಲಿ ಕಪಟವೇ ತುಂಬಿತ್ತು ಎಂಬುದು ಇದರ ಅಭಿಪ್ರಾಯ. ಈ ಪಾಠದಲ್ಲಿ ಹೆಚ್ಚು ಸ್ವಾರಸ್ಯ ಕಾಣಿಸುತ್ತದೆ.

ಸದೈವ ನಿಕೃತಿಪ್ರಜ್ಞೋ ದ್ವೇಷ್ಟಾ ಮಾಯೋಪಜೀವಿನಃ।
ಮಿಥ್ಯಾವೃತ್ತಃ ಸ ಸತತಮಸ್ಮಾಸ್ವನಪಕಾರಿಷು ॥೨೫॥

ಆ ದುರ್ಯೋಧನನು ನಿರಂತರವಾಗಿ ನಮ್ಮ ವಿಷಯದಲ್ಲಿ ಕಪಟ ಬುದ್ಧಿಯನ್ನೇ ಮಾಡುತ್ತಿದ್ದನು. ದ್ವೇಷವನ್ನು ಸಾಧಿಸುತ್ತಿದ್ದನು. ವಂಚನೆಯ ಬುದ್ಧಿಯನ್ನು ಹೊಂದಿದ್ದನು. ಮಿಥ್ಯಾಚಾರಿಯಾಗಿದ್ದನು. ನಮ್ಮ ವಿಷಯದಲ್ಲಿ ಅಪಕಾರವನ್ನೇ ಮಾಡುತ್ತಿದ್ದನು.

ನ ಸಕಾಮಾ ವಯಂ ತೇ ಚ ನಚಾಸ್ಮಾಭಿರ್ನ ತೈರ್ಜಿತಮ್।
ನ ತೈರ್ಭುಕ್ತೇಯಮವನಿರ್ನ ನಾರ್ಯೋ ಗೀತವಾದಿತಮ್ ॥೨೯॥

ನಮ್ಮ ಕಾಮನೆಯು ಪೂರ್ಣವಾಗಲಿಲ್ಲ. ನಮ್ಮ ಶತ್ರುಗಳ ಕಾಮನೆಯೂ ಕೂಡ ಪೂರ್ಣವಾಗಲಿಲ್ಲ. ನಾವು ಜಯವನ್ನು ಗಳಿಸಲಿಲ್ಲ. ಅವರೂ ಸಹ ಜಯವನ್ನು ಗಳಿಸಲಿಲ್ಲ. ಈ ಭೂಮಂಡಲವನ್ನು ಅವರೂ ಕೂಡ ಭೋಗಿಸಲಿಲ್ಲ. ಸ್ತ್ರೀಯರನ್ನು ನಿರಾತಂಕವಾಗಿ ಉಪಭೋಗ ಮಾಡಲಿಲ್ಲ. ಆನಂದದಾಯಕವಾದ ಗೀತೆಗಳನ್ನು, ವಾದ್ಯಗಳನ್ನು ಕೇಳಲು ಸಾಧ್ಯವಾಗಲಿಲ್ಲ.

ಪಾಠಾಂತರದ ಬಗ್ಗೆ - ಕೆಲವು ಪುಸ್ತಕಗಳಲ್ಲಿ ಈ ಶ್ಲೋಕ ಹಾಗೂ ಮುಂದಿನ ಶ್ಲೋಕವು 'ಯದೇಶಾಮಂಗಪಿತರೌ' ಎಂಬ ಶ್ಲೋಕದ ಅನಂತರ ಇರುತ್ತದೆ. ಆದರೆ ಪ್ರಕೃತದಲ್ಲೇ ಇದು ಹೆಚ್ಚು ಪ್ರಸಕ್ತವಾಗುತ್ತದೆ.

ನಾಮಾತ್ಯಸೃಹೃದಾಂ ವಾಕ್ಯಂ ನಚ ಶ್ರುತವತಾಂ ಶ್ರುತಮ್।
ನ ರತ್ನಾನಿ ಪರಾಫ್ಯಾನಿ ನ ಭೂರ್ನ ದ್ರವಿಣಾಗಮಃ ॥೨೦॥

ನಾಮಾತ್ಯಯಸಮಿತೌ ಕಥ್ಯಂ ನಚ ಶ್ರುತವತಾಂ ಶ್ರುತಮ್ ।
ನ ರತ್ನಾನಿ ಪರಾರ್ಘ್ಯಾನಿ ನ ಭೂರ್ನ ದ್ರವಿಣಾಗಮಃ ॥೨೭॥

ಅವರು ನಿರಂತರವಾಗಿ ಅಮಾತ್ಯರ ಮತ್ತು ಸ್ನೇಹಿತಜನರ ಹಿತವಾಕ್ಯಗಳನ್ನು ಕೇಳಲಿಲ್ಲ. ಶಾಸ್ತ್ರಜ್ಞರ ಉಪದೇಶಗಳನ್ನೂ ಕೂಡ ಕೇಳಿಸಿಕೊಳ್ಳಲಿಲ್ಲ. ಉತ್ತಮ ರತ್ನ-ಗಳನ್ನು, ದ್ರವ್ಯಗಳನ್ನು ಅನುಭವಿಸಲಿಲ್ಲ. ಅವರಿಗೆ ಬರುತ್ತಿದ್ದ ಅಪಾರವಾದ ಕಪ್ಪಕಾಣಿಕೆಗಳೂ ಕೂಡ ಆನಂದವನ್ನು ಉಂಟುಮಾಡಲಿಲ್ಲ.

'ನಾಮಾತ್ಯಸಮಿತೌ' ಇತ್ಯತ್ರ ಅಮಾತ್ಯಸಮಿತೌ ವಾಕ್ಯಂ ನೀತಿವಾಕ್ಯಂ ನಚ ಶ್ರುತಮ್ । ಶ್ರುತವತಾಂ ವಾಕ್ಯಮ್ ಅಧ್ಯಾತ್ಮವಾಕ್ಯಂ ಚ ನ ಶ್ರುತಮಿತಿ ಯೋಜನಾ ॥

'ನಾಮಾತ್ಯಸಮಿತೌ' ಎಂಬಲ್ಲಿ ಅಮಾತ್ಯರ ಮತ್ತು ಸುಹೃಜ್ಜನರ ವಾಕ್ಯವನ್ನು, ಮತ್ತು ನೀತಿವಾಕ್ಯವನ್ನು ಅವರು ಕೇಳಲಿಲ್ಲ ಎಂದರ್ಥ. ಶ್ರುತವತಾಂ = ಶಾಸ್ತ್ರಜ್ಞರ ವಾಕ್ಯವೆಂದರೆ ಅಧ್ಯಾತ್ಮವಾಕ್ಯವನ್ನು ಅವರು ಕೇಳಲಿಲ್ಲ ಎಂಬುದಾಗಿ ಯೋಜನೆಯನ್ನು ಮಾಡಿಕೊಳ್ಳ-ಬೇಕು.

ಋದ್ಧಿಮಸ್ಮಾಸು ತಾಂ ದೃಷ್ಟ್ವಾ ವಿವರ್ಣೋ ಹರಿಣಃ ಕೃಶಃ ।
ಧೃತರಾಷ್ಟ್ರಸ್ಯ ನೃಪತೇಃ ಸೌಬಲನೇ ನಿವೇದಿತಃ ॥೨೮॥

ಆ ದುರ್ಯೋಧನನಿಗೆ ನಮ್ಮ ಮೇಲೆ ಅಪಾರವಾದ ದ್ವೇಷವಿತ್ತು. ಆ ದ್ವೇಷದಿಂದ ಪರಿತಾಪವನ್ನು ಹೊಂದಿ, ತಾನು ಸುಖವನ್ನೇ ಅನುಭವಿಸಲಿಲ್ಲ. ನಮ್ಮಲ್ಲಿದ್ದ ಸಮೃದ್ಧಿಯನ್ನು ಕಂಡು ಹೊಟ್ಟೆಕಿಚ್ಚು ಹೊಂದಿ ಬಿಳುಚಿಕೊಂಡನು. ಕೃಶನಾಗಿಬಿಟ್ಟನು. ದುರ್ಯೋಧನನ ಇಂಥ ಸ್ಥಿತಿಯನ್ನು ಶಕುನಿಯು ಧೃತರಾಷ್ಟ್ರನಿಗೆ ವಿವರಿಸಿ ಹೇಳಿದನು.

ಪಾಠಾಂತರದ ಬಗ್ಗೆ - 'ಅಸ್ಮದ್ದ್ವೇಷೇಣ ತಾದೃಂಷ್ಟ್ವಾ ವಿವರ್ಣೋ ಹರಿಣಃ ಕೃಶಃ' ಎಂಬ ಪಾಠಾಂತರವನ್ನು ಇಲ್ಲಿ ಕಾಣಬಹುದು. 'ಸಂಯುಕ್ತಾಃ ಕಾಮಮನ್ಯು-ಭ್ಯಾಂ' ಎಂಬ ಹಿಂದೆ ಇರುವ ಶ್ಲೋಕಕ್ಕಿಂತ ಮೊದಲು ಈ ಶ್ಲೋಕಗಳು ಕೆಲವು ಪುಸ್ತಕಗಳಲ್ಲಿ ಕಾಣಿಸುತ್ತದೆ. ಇನ್ನೂ ಕೆಲವು ಕಡೆ ಎರಡೂ ಕಡೆಯು ಕಾಣಿಸುತ್ತದೆ.

ಒಂದೇ ಶ್ಲೋಕ ಎರಡು ಕಡೆ ಅಪ್ರಸ್ತುತವಾದ್ದರಿಂದ ಇಲ್ಲಿ ಮಾತ್ರ ಸೇರಿಸಿ, ಅನುವಾದ ಮಾಡಲಾಗಿದೆ.

ತಂ ಪಿತಾ ಪುತ್ರಗೃದ್ಧಿತ್ವಾದನುಮೇನೇऽನಯೇ ಸ್ಥಿತಮ್ ।
ಅನವೇಕ್ಷ್ಯೈವ ಪಿತರಂ ಗಾಂಗೇಯಂ ವಿದುರಂ ತಥಾ।
ಅಸಂಶಯಂ ಧೃತರಾಷ್ಟ್ರೋ ಯಥೈವಾಹಂ ತಥಾ ಗತಃ ॥೨೯॥

ಪುತ್ರನ ಮೇಲಿನ ವಾತ್ಸಲ್ಯದಿಂದ ಧೃತರಾಷ್ಟ್ರನು ಅನ್ಯಾಯ ಮಾರ್ಗವನ್ನೇ ಅವಲಂಬಿಸಿದನು. ಮಗನ ದುಷ್ಟವಾದ ಆಲೋಚನೆಗಳಿಗೆ ತಾನು ಅನುಮತಿಯನ್ನು ನೀಡಿದನು. ಭೀಷ್ಮಾಚಾರ್ಯರ ಮತ್ತು ವಿದುರನ ಅಭಿಪ್ರಾಯವನ್ನು ಆ ಧೃತರಾಷ್ಟ್ರನು ಉಪೇಕ್ಷೆ ಮಾಡಿಬಿಟ್ಟನು. ಈ ಕಾರಣದಿಂದಲೇ ಇಂದು ನಾನು ಎಲ್ಲರನ್ನು ಹೇಗೆ ಕಳೆದುಕೊಂಡಿದ್ದೇನೋ, ಹಾಗೆ ಧೃತರಾಷ್ಟ್ರನೂ ಕೂಡ ಕಳೆದುಕೊಂಡಿದ್ದಾನೆ. ಇದರಲ್ಲಿ ಸ್ವಲ್ಪವೂ ಕೂಡ ಸಂಶಯವಿಲ್ಲ.

ಟಿಪ್ಪಣಿ – 'ಅನಪೇಕ್ಷ್ಯೈವ ಪಿತರಂ ಗಾಂಗೇಯಮ್' ಇತ್ಯತ್ರ 'ಪಿತರಂ ಗಾಂಗೇಯಂ ವಿದುರಂ ಚಾನಪೇಕ್ಷ್ಯ' ರಾಜಾ ಧೃತರಾಷ್ಟ್ರಃ ಯಂ ದುರ್ಯೋಧನಮ್ ಅಸಂಶಯಮ್ 'ಅನುಮೇನೇ' । ಅಶುಚಿಂ ಲುಬ್ಧಂ ಕಾಮವಶಾನುಗಾಂ ಪುತ್ರಮ್ ಅನಿಯಮ್ಯ , ಯಥಾ ಅಯಂ ದುರ್ಯೋಧನೋ ಗಚ್ಛತಿ ತಥಾ ಸ್ವಯಂ ಚ ಗತ ಇತಿ ಯೋಜನಾ॥

'ಅನಪೇಕ್ಷ್ಯೈವ ಪಿತರಂ ಗಾಂಗೇಯಮ್' ಎಂಬುದರ ಅಭಿಪ್ರಾಯ ಹೀಗಿದೆ - ತಂದೆ ಸಮಾನನಾದ ಭೀಷ್ಮನನ್ನು , ಚಿಕಪ್ಪನನ್ನು ವಿದುರನನ್ನು ಉಪೇಕ್ಷೆಮಾಡಿ, ರಾಜನಾದ ಧೃತರಾಷ್ಟ್ರನು ದುರ್ಯೋಧನನಿಗೆ ಸಂಶಯ ಪಡದೇ ಅನುಮತಿ ನೀಡಿದನು. ಆ ದುರ್ಯೋಧನನು ಶುದ್ಧವಾದ ಮನೋಭಾವನೆಯನ್ನು ಹೊಂದಿರಲಿಲ್ಲ. ಕಾಮಪರವಶನಾಗಿದ್ದನು. ಇಂಥ ಮಗನನ್ನು ಆ ಧೃತರಾಷ್ಟ್ರನು ನಿಯಂತ್ರಣ ಮಾಡಲಿಲ್ಲ. ಆದ್ದರಿಂದ ದುರ್ಯೋಧನನು ಯಾವ ಹಾದಿಯಲ್ಲಿ ತೆರಳಿದನೋ, ಅದೇ ಹಾದಿಯಲ್ಲೇ ತಂದೆಯಾದ ಧೃತರಾಷ್ಟ್ರನೂ ಕೂಡ ತೆರಳಿದನು ಎಂಬುದಾಗಿ ಯೋಜನೆಯನ್ನು ತಿಳಿಯಬೇಕು.

ಅನಿಯಮ್ಯಾಶುಚಿಂ ಲುಬ್ಧಂ ಪುತ್ರಂ ಕಾಮವಶಾನುಗಮ್ ।
ಪತಿತೋ ಯಶಸೋ ದೀಪ್ತಾದ್ ಘಾತಯಿತ್ವಾ ಸಹೋದರಾನ್॥೩೦॥

ದುರ್ಯೋಧನನು ಅಪವಿತ್ರವಾದ ಆಚಾರವಿಚಾರಗಳಿಂದ ಕೂಡಿದ್ದಾನೆ. ಲೋಭಿಯಾಗಿದ್ದಾನೆ, ಕಾಮಪರವಶನಾಗಿದ್ದಾನೆ. ಇಂಥ ಮಗನನ್ನು ಧೃತರಾಷ್ಟ್ರನು ನಿಯಂತ್ರ ಮಾಡಬೇಕಿತ್ತು. ದುರ್ಯೋಧನನ ಸಂಹಾರಕ್ಕೆ ಆ ಧೃತರಾಷ್ಟ್ರನೇ ಕಾರಣನಾದನು ಮತ್ತು ಆ ದುರ್ಯೋಧನನ ಸಹೋದರರ ಸಂಹಾರಕ್ಕೂ ಕೂಡ ಕಾರಣನಾದನು. ಉಜ್ವಲವಾದ ಯಶಸ್ಸನ್ನು ಪಡೆಯದೇ ಭ್ರಷ್ಟನಾದನು.

ಇಮೌ ವೃದ್ಧೌ ಚ ಶೋಕಾಗ್ನೌ ಪ್ರಕ್ಷಿಪ್ಯ ಚ ಸುಯೋಧನಃ।
ಅಸ್ಮತ್ಪದ್ವೇಷಸಂಯುಕ್ತಃ ಪಾಪಬುದ್ಧಿಃ ಸದೈವ ಹಿ ॥೩೧॥

ಧೃತರಾಷ್ಟ್ರ ಮತ್ತು ಗಾಂಧಾರಿಯರು ವೃದ್ಧರಾಗಿದ್ದಾರೆ. ಇವರನ್ನು ಸಂತೈಸದೇ ಆ ದುಷ್ಟನಾದ ದುರ್ಯೋಧನನು ಪುತ್ರಶೋಕವೆಂಬ ಪ್ರಜ್ವಲಿಸುವ ಅಗ್ನಿಯಲ್ಲಿ ಆ ವೃದ್ಧರನ್ನು ಹಾಕಿಬಿಟ್ಟನು. ಈ ದುರ್ಯೋಧನನು ನಿರಂತರ ನಮ್ಮ ಬಗ್ಗೆ ಅತಿಯಾದ ದ್ವೇಷದಿಂದಲೇ ಸಂತಪ್ತನಾಗಿದ್ದನು.

ಕೋ ಹಿ ಬಂಧುಃ ಕುಲೀನಃ ಸಂಸ್ತಥಾ ಬ್ರೂಯಾತ್ ಸುಹೃಜ್ಜನೇ।
ಯಥಾಸಾವುಕ್ತವಾನ್ ಕ್ಷುದ್ರೋ ಯುಯುತ್ಸುರ್ವೃಷ್ಣಿಸನ್ನಿಧೌ ॥೩೨॥

ಹಿಂದೆ ಶ್ರೀಕೃಷ್ಣನು ಸಂಧಾನಕ್ಕಾಗಿ ಹಸ್ತಿನಾಪಟ್ಟಣಕ್ಕೆ ತೆರಳಿದ್ದನು. ಆಗ ದುರ್ಯೋಧನನು ಸಂಧಾನವನ್ನು ಮಾಡಿಕೊಳ್ಳದೇ ಯುದ್ಧ ಮಾಡುತ್ತೇನೆಂದು ಹೇಳಿದನು. ತನ್ನ ಬಂಧುಗಳ ಬಗ್ಗೆ ಯುದ್ಧ ಮಾಡುತ್ತೇನೆಂದು ಕುಲೀನನಾದ ಯಾರು ತಾನೇ ತನ್ನ ಸ್ನೇಹಿತರಲ್ಲಿ ಹೀಗೆ ಹೇಳುತ್ತಾರೆ ?

ಆತ್ಮನೋ ಹಿ ವಯಂ ದೋಷಾದ್ ವಿನಷ್ಟಾಃ ಶಾಶ್ವತೀಃ ಸಮಾಃ।
ಪ್ರದಹಂತೋ ದಿಶಃ ಸರ್ವಾಸ್ತೇಜಸಾ ಭಾಸ್ಕರಾ ಇವ ॥೩೩॥

ಸೂರ್ಯನು ತನ್ನ ತೇಜಸ್ಸಿನಿಂದ ಎಲ್ಲ ದಿಕ್ಕುಗಳನ್ನು ಹೇಗೆ ಸುಡುತ್ತಾನೋ? ಅದರಂತೆ ಈ ದುರ್ಯೋಧನನು ತನ್ನಲ್ಲಿರುವ ದೋಷದಿಂದಲೇ ಎಲ್ಲರನ್ನೂ ಕೂಡ ಸುಟ್ಟನು.

ಟಿಪ್ಪಣಿ - ಆತ್ಮನೋ ಹಿ ವಯಂ ದೋಷಾತ್ ಇತ್ಯತ್ರ **ಆತ್ಮನಃ** ದುರ್ಯೋಧನಸ್ಯ ದೋಷಾತ್ ॥

'ಆತ್ಮನೋ ಹಿ ವಯಂ ದೋಷಾತ್' ಎಂಬಲ್ಲಿ 'ಆತ್ಮನಃ' ಎಂಬ ಪದಕ್ಕೆ ದುರ್ಯೋಧನನ ಎಂದರ್ಥ. ಇದಕ್ಕೆ 'ದೋಷಾತ್' ಎಂಬಲ್ಲಿ ಅನ್ವಯ.

ವಿವರಣೆ - ಪ್ರಳಯಕಾಲದ ಸೂರ್ಯನು ಎಲ್ಲಾ ದಿಕ್ಕುಗಳಲ್ಲಿರುವ ಪದಾರ್ಥಗಳನ್ನು ಸುಡುವಂತೆ ದುರ್ಯೋಧನನು ಸಹೋದರರನ್ನು, ಪುತ್ರರನ್ನು, ಪೌತ್ರರನ್ನೂ, ಪಿತೃಗಳನ್ನು ಸಂಹಾರ ಮಾಡಿದನು. ನಾವೂ ಸಹ ಅವನಿಂದಲೇ ಹತರಾದೆವು. ಆ ದುರ್ಯೋಧನನೂ ಕೂಡ ಸ್ವತಃ ಹತನಾದನು ಎಂಬುದು ಶ್ಲೋಕದ ಭಾವ.

ಸೋಽಸ್ಮಾಕಂ ವೈರಪುರುಷೋ ದುರ್ಮಂತ್ರಿಪ್ರಗ್ರಹಂ ಗತಃ।
ದುರ್ಯೋಧನಕೃತೇ ಹ್ಯೇತತ್ ಕುಲಂ ನೋ ವಿನಿಪಾತಿತಮ್।
ಅವಧ್ಯಾನಾಂ ವಧಂ ಕೃತ್ವಾ ಲೋಕೇ ಪ್ರಾಪ್ತಾಃ ಸ್ಮ ವಾಚ್ಯತಾಮ್ ॥೩೪॥

ನಮ್ಮನ್ನು ವೈರ ಮಾಡುವ ಪುರುಷನಾದ ದುರ್ಯೋಧನನು ಕೆಟ್ಟ ಮಂತ್ರಿಜನರ ಬಂಧನಕ್ಕೆ ಸಿಕ್ಕಿದ್ದನು. ಅಂಥ ದುರ್ಯೋಧನನ ನಿಮಿತ್ತದಿಂದ ನಮ್ಮ ಭರತಕುಲವೇ ಇಂದು ನಾಶವಾಗಿ ಹೋಯಿತು. ಅವಧ್ಯರಾದವರನ್ನೂ ಕೂಡ ವಧೆ ಮಾಡಿ ಇಂದು ನಾವು ಲೋಕನಿಂದನೆಗೆ ಆಸ್ಪದರಾಗಿದ್ದೇವೆ.

ಕುಲಸ್ಯಾಸ್ಯಾಂತಕರಣಂ ದುರ್ಮತಿಂ ಪಾಪಕಾರಿಣಮ್।
ರಾಜಾ ರಾಷ್ಟ್ರೇಶ್ವರಂ ಕೃತ್ವಾ ಧೃತರಾಷ್ಟ್ರೋಽದ್ಯ ಶೋಚತಿ ॥೩೫॥

ನಮ್ಮ ಕುಲದ ಸಂಪೂರ್ಣ ವಿನಾಶಕ್ಕೆ ಕಾರಣನಾದ, ದುರ್ಮತಿಯಾದ, ಪಾಪ-ಭಾಜನನಾದ ಆ ದುರ್ಯೋಧನನ್ನು ನಾನೇಕೆ ರಾಷ್ಟ್ರಪುರುಷನನ್ನಾಗಿ ಮಾಡಿದೆನು? ಎಂಬುದಾಗಿ ಧೃತರಾಷ್ಟ್ರನು ಈಗ ಪಶ್ಚಾತ್ತಾಪ ಪಡುತ್ತಿದ್ದಾನೆ.

ಹತಾಃ ಶೂರಾಃ ಕೃತಂ ಪಾಪಂ ವಿಷಯಃ ಸ್ವೋ ವಿನಾಶಿತಃ।
ಹತ್ವಾ ನೋ ವಿಗತೋ ಮನ್ಯುಃ ಶೋಕೋ ಮಾಂ ರಂಧಯತ್ಯಯಮ್॥೩೬॥

ಈ ಯುದ್ಧದಲ್ಲಿ ಅನೇಕ ಶೂರರು ಮರಣವನ್ನು ಹೊಂದಿದರು. ನಾವು ಯಾರನ್ನು ಕೊಲ್ಲಬಾರದೋ, ಅವರನ್ನೆಲ್ಲಾ ಕೊಂದಿದ್ದಾಯಿತು. ಅದರಿಂದ ಪಾಪವನ್ನು ಕಟ್ಟಿಕೊಂಡೆವು. ನಮ್ಮ ದೇಶವು ನಾಶವಾಯಿತು. ಈ ಯುದ್ಧದಿಂದ ಶತ್ರುಗಳ ಮೇಲಿದ್ದ ಕೋಪವು ನಾಶವಾಯಿತು. ಆದರೆ ಬಂಧುಗಳ ವಿಯೋಗದಿಂದ ಉಂಟಾಗಿರುವ ಶೋಕವು ನಮ್ಮನ್ನು ಇಂದು ಸುಡುತ್ತಿದೆ.

'ಶೋಕೋ ಮಾಂ ರಂಧಯತ್ಯಯಮ್' ಇತ್ಯತ್ರ ರಂಧಯತಿ ದಹತಿ ॥

'ಶೋಕೋ ಮಾಂ ರಂಧಯತ್ಯಯಮ್' ಎಂಬಲ್ಲಿ 'ರಂಧಯತಿ' ಎಂಬ ಪದಕ್ಕೆ 'ದಹತಿ' ಸುಡುತ್ತದೆ ಎಂದರ್ಥ.

ಧನಂಜಯಕೃತಂ ಪಾಪಂ ಕಲ್ಯಾಣೇನೋಪಹನ್ಯತೇ ।
ಖ್ಯಾಪನೇನಾನುತಾಪೇನ ದಾನೇನ ತಪಸಾಪಿ ವಾ ।
ನಿವೃತ್ತ್ಯಾತೀರ್ಥಗಮನಾಚ್ಛ್ರುತಿಸ್ಮೃತಿಜಪೇನ ಚ ॥೩೭॥

ಓ ಅರ್ಜುನನೇ ! ನಾವು ಮಾಡಿದ ಪಾಪವು ಶುಭವಾದ ಕರ್ಮಗಳನ್ನು ಆಚರಣೆ ಮಾಡುವುದರಿಂದ ಪರಿಹಾರವಾಗುತ್ತದೆ. ಅಥವಾ ಮತ್ತೊಬ್ಬರಲ್ಲಿ ಅದನ್ನು ಹೇಳಿಕೊಳ್ಳುವುದರಿಂದಲೂ ಪರಿಹಾರವಾಗುತ್ತದೆ. ಅಥವಾ ಪಶ್ಚಾತ್ತಾಪ ಪಡುವುದರಿಂದ ದಾನ ಮತ್ತು ತಪಸ್ಸುಗಳಿಂದ ಆ ಪಾಪವು ಪರಿಹಾರವಾಗುತ್ತದೆ. ಅಥವಾ ವಿಷಯ ಪದಾರ್ಥಗಳ ನಿವೃತ್ತಿಯಿಂದ (ಎಲ್ಲವನ್ನೂ ಪರಿತ್ಯಾಗ ಮಾಡುವುದರಿಂದ) ತೀರ್ಥಕ್ಷೇತ್ರಯಾತ್ರೆ ಮಾಡುವುದರಿಂದ ಶ್ರುತಿ-ಸ್ಮೃತಿಗಳನ್ನು ಜಪ ಮಾಡುವುದರಿಂದಲೂ ಪಾಪವು ಪರಿಹಾರವಾಗುತ್ತದೆ.

ಟಿಪ್ಪಣಿ - ಧನಂಜಯಕೃತಂ ಪಾಪಂ ಕಲ್ಯಾಣೇನೋಪಹನ್ಯತೇ ಇತ್ಯತ್ರ ಧನಸ್ಯ ಶತ್ರುಧನಸ್ಯ ಜಯಃ ಧನಂಜಯಃ, ತೇನ ಕೃತಂ ಪಾಪಂ, ಧನಂಜಯೇನ ಅರ್ಜುನೇನ ಕೃತಂ ಪಾಪಂ ಸ್ವಜ್ಯೇಷ್ಠಕರ್ಣವಧಾಖ್ಯಪಾಪಂ ವಾ । **ಕಲ್ಯಾಣೇನ** ಪುಣ್ಯಕರ್ಮಕರಣೇನ। ನಿವೃತ್ತ್ಯಾ ವಿಷಯೇಭ್ಯೋ ನಿವೃತ್ತ್ಯಾ, ವೈರಾಗ್ಯೇಣೇತ್ಯರ್ಥಃ ॥

ಧನಂಜಯಕೃತಂ ಪಾಪಂ ಕಲ್ಯಾಣೇನೋಪಹನ್ಯತೇ ಎಂಬಲ್ಲಿ ಶತ್ರುಧನವನ್ನು

ಗೆದ್ದಿರುವ ಕಾರಣ, ಅರ್ಜುನನು 'ಧನಂಜಯ' ಎಂದು ಕರೆಸಿಕೊಳ್ಳುತ್ತಾನೆ. ಅಂಥ ಧನಂಜಯನಿಂದ ತನಗಿಂತಲೂ ಜ್ಯೇಷ್ಠನಾದ ಕರ್ಣನ ವಧೆಯೆಂಬ ಯಾವ ಪಾಪವು ಬಂದಿದೆಯೋ, ಅದು ಎಂದರ್ಥ. ಕಲ್ಯಾಣೇನ ಎಂಬುದಕ್ಕೆ ಪುಣ್ಯಕರ್ಮವನ್ನು ಆಚರಣೆ ಮಾಡುವುದರಿಂದ ಪರಿಹಾರವಾಗುತ್ತದೆ ಎಂದರ್ಥ.

'ನಿವೃತ್ತ್ಯಾ' ಎಂಬುದಕ್ಕೆ ವಿಷಯಪದಾರ್ಥಗಳ ನಿವೃತ್ತಿಯಿಂದ ಎಂದರ್ಥ. ಅರ್ಥಾತ್ ವೈರಾಗ್ಯದಿಂದ ಎಂದರ್ಥ.

ವಿವರಣೆ - ಜೀವನದಲ್ಲಿ ಅನೇಕ ದೊಡ್ಡ ತಪ್ಪುಗಳನ್ನು ತಿಳಿದೋ, ಅಥವಾ ತಿಳಿಯದೇ ಆಚರಿಸುತ್ತೇವೆ. ಅಂಥ ಸಂದರ್ಭದಲ್ಲಿ ಅದರಿಂದ ಬರುವ ಪಾಪವನ್ನು ಹೇಗೆ ಪರಿಹಾರ ಮಾಡಿಕೊಳ್ಳಬೇಕೆಂದು ಮಹಾಭಾರತದ ಈ ಶ್ಲೋಕವು ನಮ್ಮನ್ನು ಎಚ್ಚರಿಸುತ್ತಿದೆ. ೧. ಅನೇಕ ಪುಣ್ಯಕರ್ಮಗಳನ್ನು ಮಾಡುವುದು, ೨. ಅನೇಕ ಶಿಷ್ಟ-ಜನರ ಬಳಿ ನಾವು ಮಾಡಿದ ಪಾಪವನ್ನು ಹೇಳಿಕೊಳ್ಳುವುದು, ೩. ಪಶ್ಚಾತ್ತಾಪಪಟ್ಟು ಮುಂದೆಂದೂ ಅದೇ ತಪ್ಪನ್ನು ಮಾಡದೇ ಇರುವುದು. ೪. ಮಾಡಿದ ತಪ್ಪಿನ ಪರಿಮಾರ್ಜನೆಗಾಗಿ ಅನೇಕ ಬಗೆಯ ದಾನಗಳನ್ನು ಮಾಡುವುದು, ೫. ತಪಸ್ಸನ್ನು ಆಚರಿಸುವುದು, ೬. ಎಲ್ಲವನ್ನೂ ಪರಿತ್ಯಾಗ ಮಾಡುವುದು, ೭. ತೀರ್ಥಕ್ಷೇತ್ರ-ಯಾತ್ರೆ ಮಾಡುವುದು, ಶ್ರುತಿ-ಸ್ಮೃತಿಗಳಲ್ಲಿ ಹೇಳಿರುವ ಮಹಾಮಂತ್ರಗಳ ಜಪವನ್ನು ಮಾಡುವುದು, ಇಷ್ಟು ಕಾರಣಗಳಿಂದ ಪಾಪವು ಪರಿಹಾರವಾಗುತ್ತದೆ.

ಪ್ರಕೃತ ಯುಧಿಷ್ಠಿರನಿಗೆ ಎಲ್ಲವನ್ನೂ ಪರಿತ್ಯಾಗ ಮಾಡಬೇಕೆಂಬ ಪ್ರಾಯಶ್ಚಿತ್ತ-ವನ್ನು ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಹೀಗೆ ಹೇಳುತ್ತಿದ್ದಾನೆ -

ತ್ಯಾಗವಾಂಶ್ಚ ಪುನಃ ಪಾಪಂ ನಾಲಂಕರ್ತೃಮಿತಿ ಶ್ರುತಿಃ।
ತ್ಯಾಗವಾನ್ ಜನ್ಮಮರಣೇ ನಾಪ್ನೋತೀತಿ ಶ್ರುತಿರ್ಯದಾ।

ಇಷ್ಟು ಬಗೆಯ ಪರಿಹಾರಗಳಲ್ಲಿ ಯಾರು ತ್ಯಾಗವನ್ನೇ ಮಾಡುತ್ತಾನೋ, ಅವನು ಮತ್ತೆ ಪಾಪಕರ್ಮದಲ್ಲಿ ತೊಡಗಲು ಸಾಧ್ಯವಿಲ್ಲ. ಈ ವಿಷಯವನ್ನು ಶ್ರುತಿಯೇ ಸ್ಪಷ್ಟಪಡಿಸುತ್ತಿದೆ. ಯಾರು ತ್ಯಾಗವನ್ನು ಮಾಡುತ್ತಾನೋ, ಅವನು ಜನನ ಮತ್ತು ಮರಣಗಳನ್ನು ಪುನಃ ಹೊಂದಲಾರ ಎಂದು.

ವಿವರಣೆ - 'ತ್ಯಾಗೇನೈಕೇ ಅಮೃತತ್ವಮಾನಶುಃ' ಎಂಬ ಶ್ರುತಿಯನ್ನೇ ಅರ್ಥತಃ ಈ ಶ್ಲೋಕದಲ್ಲಿ ವ್ಯಾಖ್ಯಾನ ಮಾಡಲಾಗಿದೆ.

ಪ್ರಾಪ್ತವರ್ತ್ಮಾ ಕೃತಮತಿರ್ಬ್ರಹ್ಮ ಸಂಪದ್ಯತೇ ತದಾ ॥೩೮॥
ಸ ಧನಂಜಯನಿರ್ದ್ವಂದ್ವೋ ಮುನಿರ್ಜ್ಞಾನಸಮನ್ವಿತಃ।
ವನಮಾಮಂತ್ರ್ಯ ವಃ ಸರ್ವಾನ್ ಗಮಿಷ್ಯಾಮಿ ಪರಂತಪ ॥೩೯॥

ಅರ್ಜುನನೇ! ಯಾರು ಎಲ್ಲಾ ವಿಷಯಪದಾರ್ಥಗಳನ್ನು ಪರಿತ್ಯಾಗ ಮಾಡುತ್ತಾನೋ, ಅವನಿಗೆ ಮೋಕ್ಷಮಾರ್ಗವು ಸುಲಭವಾಗಿ ದೊರಕುತ್ತದೆ. ಜ್ಞಾನದಿಂದ ಕೂಡಿರುವ ಸ್ಥಿರವಾದ ಬುದ್ಧಿಯನ್ನು ಹೊಂದಿರುವ, ದ್ವಂದ್ವಗಳನ್ನು ದಾಟಿದವನಾಗಿ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳುತ್ತಾನೆ. ಆದ್ದರಿಂದ ಪರಂತಪನೇ! ನಿಮ್ಮೆಲ್ಲರ ಅನುಮತಿಯನ್ನು ಪಡೆದುಕೊಂಡು ನಾನು ಅರಣ್ಯಕ್ಕೆ ಹೊರಡುತ್ತೇನೆ.

ಟಿಪ್ಪಣಿ- ತ್ಯಾಗವಾನ್ ಜನ್ಮಮರಣೇ ಇತ್ಯತ್ರ ಜನ್ಮಕ್ಷಯನಿಮಿತ್ತಂ ಕೈವಲ್ಯಂ ಚ ಯತ್ನೇ ಕೃತೇ ಸತಿ ಪ್ರಾಪ್ತುಂ ಶಕ್ಯಮಿತಿ ಶ್ರುತಿರಾಹ। ಅತಃ ಪಾಪಮಾತ್ರಪರಿಹಾರಃ ಕಿಂ ವಕ್ತವ್ಯ ಇತಿ ಭಾವಃ ॥ – **'ತ್ಯಾಗವಾನ್ ಜನ್ಮಮರಣೇ'** ಎಂಬುದರ ಅಭಿಪ್ರಾಯ ಹೀಗಿದೆ - ಜನನ ಮತ್ತು ಮರಣಗಳನ್ನು ದಾಟಲು ಮೋಕ್ಷವನ್ನು ಅಪೇಕ್ಷಿಸಬೇಕೆಂದು ಶ್ರುತಿ ಹೇಳುತ್ತದೆ. ಯಾರು ಎಲ್ಲ ವಿಷಯಪದಾರ್ಥಗಳನ್ನು ಪರಿತ್ಯಾಗ ಮಾಡುತ್ತಾರೋ, ಅವರಿಗೆ ಮೋಕ್ಷವು ದೊರಕುತ್ತದೆ ಎಂದು ಶ್ರುತಿಯು ಹೇಳುತ್ತಿರುವಾಗ ಕೇವಲ ಪಾಪವು ಪರಿಹಾರವಾಗುತ್ತದೆಂಬುದಾಗಿ ಪ್ರತ್ಯೇಕವಾಗಿ ಹೇಳಬೇಕೆನು ? ಎಂಬುದು ಶ್ಲೋಕದ ಭಾವ.

ನಹಿ ಕೃತ್ಸ್ನತಮೋ ಧರ್ಮಃ ಶಕ್ಯಃ ಪ್ರಾಪ್ತುಮಿತಿ ಶ್ರುತಿಃ।
ಪರಿಗ್ರಾಹವತಾ ತನ್ಮೇ ಪ್ರತ್ಯಕ್ಷಮರಿಸೂದನ ॥೪೦॥

ಯಾವ ವ್ಯಕ್ತಿಯು ಮತ್ತೊಬ್ಬರ ಬಳಿ ದಾನವನ್ನು ತೆಗೆದುಕೊಳ್ಳುತ್ತಾನೋ, ತೆಗೆದುಕೊಂಡದ್ದನ್ನು ಸಂಗ್ರಹ ಮಾಡುತ್ತಾನೋ, ಅಂಥವನಿಗೆ ಸಂಪೂರ್ಣವಾದ ಧರ್ಮವನ್ನು ಆಚರಣೆ ಮಾಡಲು ಸಾಧ್ಯವಾಗುವುದಿಲ್ಲ ಎಂಬುದಾಗಿ ಶ್ರುತಿಯೇ ಹೇಳುತ್ತಿದೆ. ಮತ್ತು ಇದು ನನ್ನ ಪ್ರತ್ಯಕ್ಷಾನುಭವವೂ ಕೂಡ ಆಗಿದೆ.

ವಿವರಣೆ - ತ್ಯಾಗಿಯಾದವನಷ್ಟೇ ಸಂಪೂರ್ಣವಾದ ಧರ್ಮವನ್ನು ಆಚರಿಸಲು ಸಾಧ್ಯ . 'ಇಜ್ಯಾಚಾರ ಧರ್ಮೋ ಽಹಿಂಸಾದಾನಸ್ವಾಧ್ಯಾಯಕರ್ಮಣಾಂ । ಅಯಂ ತು ಪರಮೋ ಧರ್ಮೋ ಯದ್ಯೋಗೇ ಆತ್ಮದರ್ಶನಂ ॥' ಎಂಬ ಯಾಜ್ಞವಲ್ಕ್ಯರ ಮಾತಿನಂತೆ ಸಂಪೂರ್ಣವಾದ ತ್ಯಾಗವನ್ನು ಮಾಡಿದರೆ ಮಾತ್ರ , ಸಂಪೂರ್ಣವಾದ ಧರ್ಮವನ್ನು ಆಚರಿಸಲು ಸಾಧ್ಯ ಎಂದು ತಿಳಿಯುತ್ತದೆ.

ಮಯಾ ನಿಸೃಷ್ಟಂ ಪಾಪಂ ಹಿ ಪರಿಗ್ರಹಸಮೀಪ್ಸತಾ ।
ಜನ್ಮಕ್ಷಯನಿಮಿತ್ತಂ ಚ ಶಕ್ಯಂ ಪ್ರಾಪ್ತುಮಿತಿ ಶ್ರುತಿಃ ॥೪೧॥

ಆದರೆ ನಾನಿಂದು ರಾಜ್ಯವೆಂಬ ಪರಿಗ್ರಹವನ್ನು ಅಪೇಕ್ಷಿಸುತ್ತಿದ್ದೇನೆ. ಆದ್ದರಿಂದ ಪಾಪದ ರಾಶಿಯೇ ನನ್ನನ್ನು ಆವರಿಸಿದೆ. ಇದು ಜನ್ಮ ಮತ್ತು ಮರಣಗಳಿಗೆ ನಿಮಿತ್ತವಾಗಿದೆ. ಯಾರು ಪರಿಗ್ರಹವನ್ನು ಮಾಡುತ್ತಾರೋ, ಅವರಿಗೆ ಮುಕ್ತಿಯು ದೊರಕುವುದಿಲ್ಲವೆಂದು ಶ್ರುತಿಯೇ ಹೇಳುತ್ತಿದೆ.

ಸ ಪರಿಗ್ರಹಮುತ್ಸೃಜ್ಯ ಕೃತ್ಸ್ನಂ ರಾಜ್ಯಂ ತಥೈವ ಚ ।
ಗಮಿಷ್ಯಾಮಿ ವಿನಿರ್ಮುಕ್ತೋ ವಿಶೋಕೋ ವಿಜ್ವರಸ್ತಥಾ ॥೪೨॥

ಆದ್ದರಿಂದ ನಾನು ರಾಜ್ಯಪರಿಗ್ರಹವನ್ನು ಪರಿತ್ಯಾಗ ಮಾಡುತ್ತೇನೆ. ಮತ್ತು ಆ ಎಲ್ಲಾ ಸಾಂಸಾರಿಕ ಬಂಧನಗಳಿಂದಲೂ ಮುಕ್ತನಾಗುತ್ತೇನೆ. ಶೋಕರಹಿತನಾಗಿ ಯಾವುದೇ ಮಮತೆಯನ್ನಿಟ್ಟುಕೊಳ್ಳದೇ ನಾನು ಅರಣ್ಯಕ್ಕೆ ತೆರಳುತ್ತೇನೆ.

ಪ್ರಶಾಸಧ್ವಮಿಮಾಮುರ್ವೀಂ ಕ್ಷೇಮಾಂ ನಿಹತಕಂಟಕಾಮ್ ।
ನ ಮಮಾರ್ಥೋ ಽಸ್ತಿ ರಾಜ್ಯೇನ ಭೋಗೈರ್ವಾ ಕುರುನಂದನ ॥೪೩॥

ಓ ಅರ್ಜುನನೇ! ಆದ್ದರಿಂದ ಯಾವುದೇ ಶತ್ರುಗಳ ಉಪದ್ರವವಿಲ್ಲದ ಈ ಭೂಮಂಡಲವನ್ನು ನೀವುಗಳು ಪಾಲನೆ ಮಾಡಿರಿ. ನನಗೆ ಈ ರಾಜ್ಯದಿಂದ ಆಗ-ಬೇಕಾದದ್ದು ಏನೂ ಇಲ್ಲ. ಈ ಭೋಗಗಳಿಂದಲೂ ನನಗೇನೂ ಪ್ರಯೋಜನವಿಲ್ಲ.

ಪಾಠಾಂತರದ ಬಗ್ಗೆ - ಕೆಲವು ಪುಸ್ತಕಗಳಲ್ಲಿ ಪ್ರಶಾಧಿ ತ್ವಂ ಎಂಬ ಪಾಠವಿದೆ. ಈ ಪಾಠದ ಪ್ರಕಾರ - ಓ ಅರ್ಜುನನೇ! ಈ ಭೂಮಿಯನ್ನು ನೀನು ಪರಿಪಾಲನೆ

ಮಾಡು ಎಂದು ಹೇಳಿದಂತಾಗುತ್ತದೆ. ಈ ಪಾಠಕ್ಕಿಂತಲೂ 'ಪ್ರಶಾಸಧ್ವಂ' ಎಂಬ ಪಾಠವೇ ಉಚಿತವೆಂದು ಕಾಣಿಸುತ್ತದೆ. ಏಕೆಂದರೆ ಅರ್ಜುನನಿಗಿಂತಲೂ ಹಿರಿಯನಾದ ಭೀಮಸೇನನು ಇರುವಾಗ ಅರ್ಜುನನಿಗೆ ಅಧಿಕಾರ ವಹಿಸಲು ಸಾಧ್ಯವಿಲ್ಲ. ಆದ್ದರಿಂದ ನೀವೆಲ್ಲರೂ ಭೂಪಾಲನೆಯನ್ನು ಮಾಡಿರಿ ಎಂಬುದಾಗಿ ಯುಧಿಷ್ಠಿರನು ಹೇಳಿದನೆಂದು ತಿಳಿಯಬೇಕು.

ಏತಾವದುಕ್ತ್ವಾ ವಚನಂ ಧರ್ಮರಾಜೋ ಯುಧಿಷ್ಠಿರಃ।
ವ್ಯಾಪಾರಮತ್ ತತಃ ಪಾರ್ಥಃ ಕನೀಯಾನ್ ಪ್ರತ್ಯಭಾಷತ ॥೪೪॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ಸಪ್ತಮೋಽಧ್ಯಾಯಃ ॥೭॥

ಧರ್ಮರಾಜನಾದ ಯುಧಿಷ್ಠಿರನು ಅರ್ಜುನನ ಬಳಿ ಇಷ್ಟು ಮಾತುಗಳನ್ನು ಹೇಳಿ ವಿರಮಿಸಿದನು. ಅನಂತರ ಕುಂತಿಯಲ್ಲಿ ಕೊನೆಯ ಮಗನಾಗಿ ಹುಟ್ಟಿದ ಅರ್ಜುನನು ತನ್ನ ಅಭಿಪ್ರಾಯವನ್ನು ತಿಳಿಸಲು ಪ್ರಾರಂಭ ಮಾಡಿದನು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೭ನೆಯ ಅಧ್ಯಾಯವು ಮುಗಿಯಿತು.

* * * * *

೮. ಎಂಟನೆಯ ಅಧ್ಯಾಯ

ಯುಧಿಷ್ಠಿರನ ಅಭಿಪ್ರಾಯವನ್ನು ಅರ್ಜುನನು ನಿರಾಕರಣೆ ಮಾಡಿದನು. ಸಂಪತ್ತನ್ನು ಗಳಿಸುವುದು ಕ್ಷತ್ರಿಯರ ಮುಖ್ಯಧರ್ಮವಾಗಿದೆ. ಗಳಿಸಿದ ಸಂಪತ್ತಿನಿಂದ ಯುಧಿಷ್ಠಿರನಿಗೆ ಯಜ್ಞ ಮಾಡುವಂತೆ ಅರ್ಜುನನು ಪ್ರೇರಿಸಿದುದು.

ವೈಶಂಪಾಯನಃ

ಅಥಾರ್ಜುನ ಉವಾಚೇದಮ್ ಅಧಿಕ್ಷಿಪ್ತ ಇವಾಕ್ಷಮೀ।
ಅಭಿನೀತಿತರಂ ವಾಕ್ಯಂ ದೃಢವಾದಪರಾಕ್ರಮಃ ॥೧॥

ದರ್ಶಯನ್ನೈಂದ್ರಿರಾತ್ಮಾನಮುಗ್ರಮುಗ್ರಪರಾಕ್ರಮಃ।
ಸ್ಮಯಮಾನೋ ಮಹಾತೇಜಾಃ ಸೃಕ್ಕಿಣೀ ಪರಿಸಂಲಿಹನ್ ॥೨॥

ವೈಶಂಪಾಯನರು – ಜನಮೇಜಯನೇ! ಯುಧಿಷ್ಠಿರನ ಮಾತನ್ನು ಕೇಳಿ ಅರ್ಜುನನಿಗೆ ಅಣ್ಣನು ತನ್ನ ಕಾರ್ಯಕ್ಕಾಗಿ ತನ್ನನ್ನು ನಿಂದಿಸಿದಂತೆ ತೋರಿತು. ಆ ಮಾತುಗಳು ಅವನಿಗೆ ದುಸ್ಸಹವಾಗಿ ಕಂಡುಬಂದವು. ಮಾತಿನಲ್ಲಿಯೂ, ಪರಾಕ್ರಮದಲ್ಲಿಯೂ ಮತ್ತೊಬ್ಬರಿಂದ ಹಿಂಜರಿಯದ ಉಗ್ರವಾದ ಪರಾಕ್ರಮವುಳ್ಳ ಮಹಾತೇಜಸ್ವಿಯಾದ ಅರ್ಜುನನು ಆವೇಶದಿಂದ ಕೂಡಿದ ಮಾತುಗಳಿಂದ ಕೋಪಗೊಂಡವನಂತೆ ಕಂಡನು. ಹುಸಿನಗೆಯಿಂದ ಹೀಗೆಂದನು –

ಅಹೋ ದುಃಖಮಹೋ ಕೃಚ್ಛ್ರಮಹೋ ವೈಕ್ಲವ್ಯಮುತ್ತಮಮ್ ।
ಯತ್ಕೃತ್ವಾ ಮಾನುಷಂ ಕರ್ಮ ತ್ಯಜೇಥಾಃ ಶ್ರಿಯಮುತ್ತಮಾಮ್॥೩॥

ನೀನು ಮನುಷ್ಯರಿಗೆ ಸಾಧ್ಯವಲ್ಲದ ವೀರಕಾರ್ಯವನ್ನು ಮಾಡಿರುವಿ. ಗಳಿಸಿದ ಮಹತ್ತಾದ ಈ ಸಂಪತ್ತನ್ನೆಲ್ಲಾ ಬಿಟ್ಟು ಹೋಗಬೇಕೆನ್ನುತ್ತಿರುವಿ? ಆಹಾ! ನಿನ್ನ ದುಃಖವೇನು? ನಿನ್ನ ಪ್ರಯಾಸವೇನು? ನಿನ್ನ ಭಯವೇನು? ಇವೆಲ್ಲ ನನಗೆ ಆಶ್ಚರ್ಯವನ್ನುಂಟುಮಾಡುತ್ತಿವೆ.

ಶತ್ರೂನ್ ಹತ್ವಾ ಮಹೀಂ ಲಬ್ಧ್ವಾ ಸ್ವಧರ್ಮೇಣೋಪಪಾದಿತಾಮ್ ।
ಹತಾಮಿತ್ರಃ ಕಥಂ ಸರ್ವಂ ತ್ಯಜೇಥಾ ಬುದ್ಧಿಲಾಘವಾತ್ ॥೪॥

ನೀನು ನಿನ್ನ ಸ್ವಧರ್ಮದಿಂದಲೇ ಶತ್ರುಗಳನ್ನು ಸಂಹರಿಸಿ ಭೂಮಿಯನ್ನು ಸಂಪಾದಿಸಿರುವಿ. ಶತ್ರುಗಳನ್ನು ನಿರ್ಮೂಲ ಮಾಡಿದ ಮೇಲೆಯೂ ಸ್ಥಿರಬುದ್ಧಿಯಿಲ್ಲದೆ ನಿಷ್ಕಂಟಕವಾದ ಈ ರಾಜ್ಯವನ್ನು ಹೇಗೆ ತಾನೇ ತ್ಯಜಿಸುವಿ?

ಕ್ಲೀಬಸ್ಯ ಹಿ ಕುತೋ ರಾಜ್ಯಂ ದೀರ್ಘಸೂತ್ರಸ್ಯ ವಾ ಪುನಃ ।
ಕಿಮರ್ಥಂ ಚ ಮಹೀಪಾಲಾನವಧೀಃ ಕ್ರೋಧಮೂರ್ಚ್ಛಿತಃ ॥೫॥

ಪೌರುಷವಿಲ್ಲದ ಹೇಡಿಗಳಿಗೆ, ಸೋಮಾರಿಗಳಿಗೆ ರಾಜ್ಯವು ಹೇಗೆ ಲಭಿಸುವುದು? ಏತಕ್ಕೋಸ್ಕರ ಕೋಪಾವಿಷ್ಟನಾಗಿ ಅನೇಕ ರಾಜರನ್ನು ಸಂಹರಿಸಿದೆ ?

ಯೋ ಹ್ಯಾಜಿಜೀವಿಷೇದ್ ಭೈಕ್ಷ್ಯಂ ಕರ್ಮಣಾ ನೈವ ಕೇನಚಿತ್ ।
ಸ ಆರಂಭಾನ್ ಬುಭೂಷೇತ ಹತಸ್ವಸ್ತಿರಕಿಂಚನಃ ॥೬॥

ಲೋಕದಲ್ಲಿ ಯಾರು ನಿರ್ಗತಿಕನಾಗಿ, ಅಪ್ರಸಿದ್ಧನಾಗಿ, ಸಂತಾನ ಸಮೃದ್ಧಿ, ಪಶುಸಮೃದ್ಧಿ ಯಾವುದೂ ಇಲ್ಲದವನಾಗಿ, ಅನಾಮಧೇಯನೆನಿಸುವನೋ ಅಂತಹವನು ಭಿಕ್ಷಾಟನದಿಂದ ಜೀವಿಸಬೇಕೆಂದು ಬಯಸುವನು. ಅಂತಹವನು ಸ್ವಪ್ರಯತ್ನದಿಂದ ಯಾವ ರಾಜ್ಯವನ್ನು ಪಡೆಯಲು ಬಯಸುವನು.

ಟಿಪ್ಪಣಿ - ಕರ್ಮಣಾ ನೈವ ಕೇನಚಿದ್ ಇತ್ಯತ್ರ ಕರ್ಮಣಾ ಸ್ವಯೋಗ್ಯಕರ್ಮಣಾ । ಹತಸ್ವಸ್ತಿಃ ಅಕಿಂಚನಃ ಸ ನಿರ್ಭಾಗ್ಯಃ ಆರಂಭಾದ್ಯುದ್ಧಾದ್ಯಾರಂಭಾತ್ ಮಾ ಬುಭೂಷೇತ ॥ 'ಕರ್ಮಣ' ಎಂದರೆ ಸ್ವಯೋಗ್ಯವಾದ ಕರ್ಮದಿಂದ ಎಂದರ್ಥ. 'ಹತಸ್ವಸ್ತಿಃ ಅತಿಕಿಂಚನಃ' - ಯಾರ ಜೀವನದಲ್ಲಿ ಮಂಗಳಕಾರ್ಯಗಳು ನಡೆಯುತ್ತಿಲ್ಲವೋ, ನಿರ್ಧನಿಕನಾಗಿರುತ್ತಾನೋ, ಅವನು ನಷ್ಟಭಾಗ್ಯನಾಗಿರುತ್ತಾನೆ. ಅಂಥವನು ಯುದ್ಧವನ್ನು ಮಾಡಲು ಅಪೇಕ್ಷಿಸುವುದೇ ಇಲ್ಲ.

ಕಾಪಾಲೀಂ ನೃಪ ಪಾಪಿಷ್ಠಾಂ ವೃತ್ತಿಮಾಸ್ಥಾಯ ಜೀವತಃ ।
ಸಂತ್ಯಜ್ಯ ರಾಜ್ಯಮೃದ್ಧಂ ತ್ವಾಂ ಲೋಕೋಽಯಂ ಪ್ರವಿಷ್ಯತಿ ॥೭॥

ಸರ್ವಲೋಕೇಷು ವಿಖ್ಯಾತೋ ನ ಪುತ್ರಪಶುಸಂಹಿತಃ ।

ಮಹಾರಾಜನೇ! ಲೋಕದಲ್ಲಿ ಪ್ರಸಿದ್ಧಿಯನ್ನು ಹೊಂದಿ, ಪಶು, ಪುತ್ರ ಸಮೃದ್ಧಿಯುಳ್ಳವನಾಗಿರುವವನು ಎಂದಿಗೂ ಪಾಪಿಷ್ಠವಾದ ಇಂಥ ಭಿಕ್ಷಾವೃತ್ತಿಯನ್ನು ಅವಲಂಬಿಸಲಾರನು. ಈಗ ನೀನು ಕೈಗೆ ಬಂದ ರಾಜ್ಯವನ್ನೆಲ್ಲಾ ಬಿಟ್ಟು ಕೇವಲ ಹೀನವಾದ ಕಾಪಾಲವೃತ್ತಿಯನ್ನು ಅವಲಂಬಿಸಿ ಜೀವಿಸಿದರೆ ಲೋಕವು ನಿನ್ನನ್ನು ದೂಷಿಸುತ್ತದೆ.

ಟಿಪ್ಪಣಿ - ಸಂತ್ಯಜ್ಯ ರಾಜ್ಯಮೃದ್ಧಂ ತ್ವಾಮ್ ಇತ್ಯತ್ರ ಋದ್ಧಂ ರಾಜ್ಯಂ ಸಂತ್ಯಜ್ಯ ಗತಂ ತ್ವಾಂ ಅಯಂ ಲೋಕಃ ಪ್ರವಿದಿಷ್ಯತಿ ಇತಿ ಯೋಜನಾ ॥

ಸಮೃದ್ಧವಾದ ರಾಜ್ಯವನ್ನು ಪರಿತ್ಯಾಗ ಮಾಡಿದ ನಿನ್ನನ್ನು ಈ ಲೋಕವು ನಿಂದಿಸುತ್ತದೆಂದು ಯೋಜನೆ ಮಾಡಿಕೊಳ್ಳಬೇಕು.

ಸರ್ವಾರಂಭಾನ್ ಸಮುತ್ಸೃಜ್ಯ ಹತಸ್ವಸ್ತಿರಕಿಂಚನಃ ।
ಕಸ್ಮಾದಾಶಂಸಸೇ ಭೈಕ್ಷ್ಯಂ ಕರ್ತುಂ ಪ್ರಾಕೃತವತ್ ಪ್ರಭೋ ॥೮॥

ಪ್ರಭುವೇ! ನೀನೀಗ ಸಮಸ್ತಪ್ರಯತ್ನಗಳನ್ನು ಬಿಟ್ಟು ಮುಂದಿನ ಅಭ್ಯುದಯ-ಗಳನ್ನೆಲ್ಲಾ ತೊರೆದು ದರಿದ್ರನಾಗಿ, ಅವಿವೇಕಿಯಂತೆ ಭಿಕ್ಷುವಾಗಬೇಕೆಂದು ಏಕೆ ಆಸೆ ಪಡುತ್ತಿರುವಿ ?

ಅಸ್ಮಿನ್ ರಾಜಕುಲೇ ಜಾತೋ ಜಿತ್ವಾ ಕೃತ್ಸ್ನಾಂ ವಸುಂಧರಾಮ್ ।
ಧರ್ಮಾರ್ಥಾವಖಿಲೌ ಹಿತ್ವಾ ವನಂ ಮೌಢ್ಯಾತ್ ಪ್ರತಿಪದ್ಯಸೇ ॥೯॥

ಈ ಸರ್ವಶ್ರೇಷ್ಠವಾದ ಕುರುಕುಲದಲ್ಲಿ ಹುಟ್ಟಿ, ಭೂಮಿಯನ್ನೆಲ್ಲಾ ಜಯಿಸಿದ ನೀನು ಈಗ ಮೂರ್ಖತನದಿಂದ ಧರ್ಮಾರ್ಥಗಳನ್ನೆಲ್ಲಾ ತ್ಯಜಿಸಿ ಏತಕ್ಕಾಗಿ ಕಾಡಿಗೆ ಹೊರಟುನಿಂತಿರುವೆ ?

ಯದೀಮಾನಿ ಹವೀಂಷೀಹ ವಿಮಥಿಷ್ಯಂತ್ಯಸಾಧವಃ ।
ಭವತಾ ವಿಪ್ರಹೀಣಾನಿ ಪ್ರಾಪ್ತಂ ತ್ವಾಮೇವ ಕಿಲ್ಬಿಷಮ್ ॥೧೦॥

ಅಣ್ಣಾ! ನೀನು ಬಿಟ್ಟುಹೋದ ಮೇಲೆ ಅನಾಥವಾದ ಈ ರಾಜ್ಯವೆಂಬ ಹವಿಸ್ಸನ್ನು ಅಲ್ಪಜನಗಳು ಬಂದು ಆಕ್ರಮಿಸಿ ಉಪಭೋಗಿಸಿ ಕೆಡಿಸುವುದಾದರೆ ಆ ಪಾಪಕ್ಕೆ ನೀನೇ ಭಾಗಿಯಾಗುವೆಯಲ್ಲವೇ?

ವಿವರಣೆ - ರಾಜ್ಯವನ್ನು ಧರ್ಮಕ್ಕೋಸ್ಕರ ಗೆದ್ದಿರುವಿ. ಇದನ್ನು ಪರಿಪಾಲನೆ ಮಾಡಿರುವುದೂ ಕೂಡ ನಿನ್ನ ಕರ್ತವ್ಯವಾಗಿದೆ. ರಾಜ್ಯವನ್ನು ಗೆದ್ದಮೇಲೆ ಯಜ್ಞಕ್ಕಾಗಿ ಸಂಗ್ರಹಿಸಲ್ಪಟ್ಟ ಸಾಮಗ್ರಿಗಳನ್ನು ವಿನಿಯೋಗ ಮಾಡುವುದು ನಿನ್ನ ಕರ್ತವ್ಯವಾಗಿದೆ. ಒಂದು ವೇಳೆ ನೀನು ರಾಜ್ಯವನ್ನು ಪರಿಪಾಲನೆ ಮಾಡದಿದ್ದರೆ. ಯಜ್ಞಯಾಗಾದಿಗಳನ್ನು ಆಚರಿಸದಿದ್ದರೆ, ಆಗ ನೀನು ಅನರ್ಥಕ್ಕೆ ಭಾಗಿಯಾಗುವಿ. ಎಲ್ಲವನ್ನು ಪರಿತ್ಯಾಗ ಮಾಡಿ, ಅರಣ್ಯಕ್ಕೆ ಹೋದರೆ ನಿನ್ನನ್ನೇ ಎಲ್ಲರೂ ಅನುಸರಣೆ ಮಾಡುತ್ತಾರೆ. ದೇಶದಲ್ಲಿ ಧರ್ಮಕಾರ್ಯವೇ ನಡೆಯುವುದಿಲ್ಲ. ಯಜ್ಞಗಳೂ ಕೂಡ ನಡೆಯುವುದಿಲ್ಲ. ಭಗವಂತನಿಗೆ ಸಮರ್ಪಿಸಬೇಕಾದ ವಸ್ತುಗಳನ್ನು ಭೋಗಿಜನರು ತಮ್ಮ ಭೋಗಕ್ಕಾಗಿ ಉಪಯೋಗಿಸಿಕೊಳ್ಳುತ್ತಾರೆ. ಆ ಎಲ್ಲಾ ಪಾಪವು ನಿನ್ನನ್ನೇ ಸುತ್ತುವರೆಯುತ್ತದೆ. ಧರ್ಮಲೋಪದ ಪಾಪವೂ ಕೂಡ ನಿನಗೆ ಬರುತ್ತದೆ. ಆದ್ದರಿಂದ ನೀನು ಅನಾಥವಾದ ಈ ರಾಜ್ಯವನ್ನು ಪರಿತ್ಯಜಿಸಿ ಅರಣ್ಯಕ್ಕೆ ಹೋಗುವುದು ಸರ್ವಥಾ ಯುಕ್ತವಲ್ಲ.

ಆಕಿಂಚನ್ಯಂ ಮುನೀನಾಂ ಚ ಇತಿ ವೈ ನಹುಷೋಽಬ್ರವೀತ್ ।
ಕೃತ್ವಾ ನೃಶಂಸಂ ಹ್ಯಧನೇ ಧಿಗಸ್ತ್ವಧನತಾಮಿಹ ॥೧೧॥

ಧನಹೀನನಾಗಿರುವುದು ಮುನಿಗಳ ಧರ್ಮವು, ರಾಜರ ಧರ್ಮವಲ್ಲವೆಂದು ನಹುಷನು ದಾರಿದ್ರ್ಯವನ್ನು ನಿಂದಿಸಿರುವನು. ಧನವಿಲ್ಲದ ಕಾಲದಲ್ಲಿ ಮನುಷ್ಯನು ಕ್ರೂರ ಕೆಲಸಗಳನ್ನು ನಡೆಸುವನು. ಆದ್ದರಿಂದ ಧನಹೀನತ್ವಕ್ಕೆ ಧಿಕ್ಕಾರ ಎಂದು ಹೇಳಿರುವನು.

ಟಿಪ್ಪಣಿ - ಆಕಿಂಚನ್ಯಂ ಮುನೀನಾಮ್ ಇತ್ಯತ್ರ ಅಕಿಂಚನಸ್ಯ ಭಾವಃ ಆಕಿಂಚನ್ಯಂ ವೈರಾಗ್ಯಮ್ । ಕೃತ್ವಾ ನೃಶಂಸಂ ನಿಧನೇ ಇತ್ಯತ್ರ ನಿಧನೇ ಯುದ್ಧೇ ನೃಶಂಸಂ ಕೃತ್ವಾ ಪುನಃ ಅಧನತಾಂ ಧನಾಶಾರಾಹಿತ್ಯಂ ವೈರಾಗ್ಯಮಿತ್ಯರ್ಥಃ, ಧಿಗಸ್ತು 'ಅಕಿಂಚನಸ್ಯ ಭಾವಃ ಆಕಿಂಚನ್ಯಂ' ಎಂಬ ವ್ಯುತ್ಪತ್ತಿಯಿಂದ ವೈರಾಗ್ಯ.

ಅಶ್ವಸ್ತನಮೃಷೀಣಾಂ ಹಿ ವಿದ್ಯತೇ ವೇದ ತದ್ ಭವಾನ್ ।
ಯೇ ತ್ವಿಮಂ ಧರ್ಮಮಿತ್ಯಾಹುರ್ಧನಾದೇಷ ಪ್ರವರ್ತತೇ ॥೧೨॥

ಮರುದಿನದ ಆಹಾರಕ್ಕಾಗಿ ಏನೂ ಇಲ್ಲದ ಸ್ಥಿತಿಯು ಋಷಿಗಳಿಗೆ ಮಾತ್ರವೇ ವಿಧಿಸಲ್ಪಟ್ಟಿದೆ ಎಂಬುದನ್ನು ನೀನೂ ತಿಳಿದಿರುವೆ. ಮತ್ತು ಜಗತ್ತಿನಲ್ಲಿ ಕ್ಷತ್ರಿಯಧರ್ಮ-ವನ್ನು ಜೀವನದ ರೀತಿಯನ್ನಾಗಿ ಹೇಗೆ ನಿರೂಪಿಸಿರುತ್ತಾರೋ, ಆ ಧರ್ಮವು ಧನಮೂಲಕವೇ ಆಗಿರುತ್ತದೆ.

ಟಿಪ್ಪಣಿ - ಅಶ್ವಸ್ತನಮೃಷೀಣಾಂ ಹಿ ಇತ್ಯತ್ರ ಶ್ವಸ್ತನಧನಧಾನ್ಯಾದ್ಯಭಾವಃ ಅಶ್ವಸ್ತನಮ್ ॥

ನಾಳೆಗಾಗಿ ಧನ-ಧಾನ್ಯಗಳನ್ನು ಸಂಗ್ರಹ ಮಾಡದೇ ಇರುವುದನ್ನು ಅಶ್ವಸ್ತನ ಎಂದು ಕರೆಯುತ್ತಾರೆ.

ವಿವರಣೆ - 'ಅಸಂತುಷ್ಟೋ ದ್ವಿಜೋ ನಷ್ಟಃ ಸಂತುಷ್ಟಶ್ಚ ಮಹೀಪತಿಃ' ತೃಪ್ತನಾಗದ ಬ್ರಾಹ್ಮಣನು ಅವನತಿಯನ್ನು ಹೊಂದುತ್ತಾನೆ. ಧನಕನಕಾದಿಗಳಿಂದ ತೃಪ್ತನಾದ ರಾಜನು ಅವನತಿಯನ್ನು ಹೊಂದುತ್ತಾನೆ ಎಂಬ ಮಾತಿನಂತೆ ಬ್ರಾಹ್ಮಣ-

ನಿಗೆ ಎಂದೂ ಸಹ ಅತೃಪ್ತಿಯು ಇರಬಾರದು. ರಾಜನಾದವನಿಗೆ ಎಷ್ಟೇ ಧನ-ಕನಕಾದಿಗಳು ಬಂದರೂ ಕೂಡ ತೃಪ್ತಿಯು ಇರಬಾರದು. ಮತ್ತಷ್ಟು ಹಣ-ಸಂಪಾದನೆ ಮಾಡಬೇಕೆಂಬ ಕಾತುರ ಇರಬೇಕು. ಹಣವನ್ನು ಯಥೇಚ್ಛವಾಗಿ ಸಂಪಾದನೆ ಮಾಡಿ, ರಾಜ್ಯಕೋಶಾದಿಗಳನ್ನು ವೃದ್ಧಿಗೊಳಿಸುತ್ತಲೇ ಇರಬೇಕು. ಇದುವೇ ನಿಜವಾದ ರಾಜಧರ್ಮವಾಗಿದೆ. ಇದನ್ನೆಲ್ಲಾ ಪರಿತ್ಯಾಗ ಮಾಡಿ, ಜೀವನಕ್ಕೆ ಬೇಕಾಗುವಷ್ಟು ಮಾತ್ರ ಭಿಕ್ಷಾಟನೆಯನ್ನು ಮಾಡಿಕೊಂಡು, ಸಂಚರಿ-ಸುವುದು ಕ್ಷತ್ರಿಯರ ಧರ್ಮವಲ್ಲ. ಇದು ಬ್ರಾಹ್ಮಣರ ಧರ್ಮವಾಗಿದೆ. ಬ್ರಾಹ್ಮಣರ ಧರ್ಮವನ್ನು ಕ್ಷತ್ರಿಯರು ಅನುಸರಿಸುವುದು ಅಧರ್ಮವಾಗುತ್ತದೆ. ಕ್ಷತ್ರಿಯರ ಧರ್ಮವನ್ನು ಬ್ರಾಹ್ಮಣರು ಅನುಸರಿಸುವುದೂ ಕೂಡ ಅಧರ್ಮವಾಗುತ್ತದೆ. ಆದ್ದರಿಂದ ನಿನ್ನ ವರ್ತನೆಯು ಧರ್ಮವಿಪರ್ಯಾಸವನ್ನು ಉಂಟುಮಾಡುತ್ತಿದೆ.

ಧರ್ಮಂ ಸಂಹರತೇ ತಸ್ಯ ಧನಂ ಹರತಿ ಯಸ್ಯ ಯಃ।
ಹ್ರಿಯಮಾಣೇ ಧನೇ ರಾಜನ್ ವಯಂ ಕಸ್ಯ ಕ್ಷಮೇಮಹಿ ॥೧೩॥

ಒಬ್ಬನ ಧನವನ್ನು ಮತ್ತೊಬ್ಬನು ಅಪಹರಿಸಿದರೆ, ಅವನ ಧರ್ಮವನ್ನೇ ಅಪಹರಿಸಿದಂತಾಗುವುದು. ನಮ್ಮ ಸ್ಥಿತಿಯು ಈಗ ಹಾಗೆಯೇ ಆಗಿದೆ. ನಮ್ಮ ಧನ-ವನ್ನು ಇನ್ನೊಬ್ಬರು ಅಪಹರಿಸಿಕೊಂಡಾಗ ಹೇಗೆ ತಾನೇ ನಾವು ಕ್ಷಮಿಸಿ ಸುಮ್ಮನಿರ-ಬಹುದು?

ವಿವರಣೆ - ಜೀವನದಲ್ಲಿ ಸಂಪತ್ತು ಮತ್ತು ಧರ್ಮ ಎರಡೂ ಕೂಡ ಇರಬೇಕು. ಒಂದಕ್ಕೊಂದು ಇವು ಪೂರಕಗಳಾಗಿವೆ. ಒಬ್ಬನ ಹಣವನ್ನು ಅಪಹಾರ ಮಾಡಿದರೆ ಅವನ ಧರ್ಮವನ್ನೂ ಕೂಡ ಅಪಹಾರ ಮಾಡಿದಂತಾಗುತ್ತದೆ. ಪ್ರಕೃತ ಶತ್ರುಗಳಾದ ದುರ್ಯೋಧನಾದಿಗಳು ನಮ್ಮ ಸಂಪತ್ತನ್ನು ಅಪಹಾರ ಮಾಡುವ ಮೂಲಕ ನಮ್ಮ ಧರ್ಮವನ್ನೂ ಕೂಡ ಅಪಹಾರ ಮಾಡಿದರು. ಹದಿಮೂರು ವರ್ಷಗಳ ಕಾಲ ನಾವು ಕ್ಷತ್ರಿಯಧರ್ಮವನ್ನು ಅನುಷ್ಠಾನ ಮಾಡಲಾಗದೇ ಧರ್ಮಚ್ಯುತರಾದೆವು. ಹೀಗೆ ಯಾರು ಸಂಪತ್ತನ್ನು ಅಪಹಾರ ಮಾಡುತ್ತಾರೋ, ಅವರ ವಿಷಯದಲ್ಲಿ ನಾವು ಕ್ಷಮೆಯಿಂದಿರಲು ಸಾಧ್ಯವೇ ಇಲ್ಲ. ನಮ್ಮ ಧರ್ಮ-ವನ್ನು ಪರಿಪಾಲನೆ ಮಾಡಿಕೊಳ್ಳುವುದಕ್ಕಾಗಿ ಶತ್ರುಗಳಿಂದ ಅಪಹರಿಸಲ್ಪಟ್ಟ

ರಾಜ್ಯವನ್ನು ಕ್ಷತ್ರಿಯೋಚಿತವಾದ, ಯುದ್ಧದಲ್ಲಿ ಜಯಗಳಿಸಿದ್ದೇವೆ. ಇದು ನಮಗೆ ಧರ್ಮವೇ ಆಗಿದೆ.

ಅಭಿಶಸ್ತಂ ಪ್ರಪಶ್ಯಂತಿ ದರಿದ್ರಂ ಪಾರ್ಶ್ವತಃ ಸ್ಥಿತಮ್ ।
ದಾರಿದ್ರ್ಯಂ ಪಾತಕಂ ಲೋಕೇ ಕಸ್ತಚ್ಛಂಸಿತುಮರ್ಹತಿ ॥೧೪॥

ಜಗತ್ತಿನಲ್ಲಿ ಜನರು ತಮ್ಮ ಪಕ್ಕದಲ್ಲಿ ನಿಂತಿರುವ ದರಿದ್ರನನ್ನು ನೋಡಿ, ಇವನು ಶಾಪದಿಂದ ಹುಟ್ಟಿದ್ದಾನೆ ಎಂದು ತಿಳಿಯುತ್ತಾನೆ. ಈ ಲೋಕದಲ್ಲಿ ದಾರಿದ್ರ್ಯವು ಪಾತಕವೆಂದೇ ಭಾವಿಸಲ್ಪಟ್ಟಿದೆ. ಅಂಥ ದಾರಿದ್ರ್ಯವನ್ನು ನಿನ್ನ ಹೊರತು ಬೇರೆ ಯಾರು ತಾನೇ ಪ್ರಶಂಸಿಸುವರು.

ಟಿಪ್ಪಣಿ - ಅಭಿಶಸ್ತಂ ಪ್ರಪಶ್ಯಂತಿ ಇತ್ಯತ್ರ ಪಾರ್ಶ್ವತಃ ಸ್ಥಿತಂ ದರಿದ್ರಮ್ ಅಭಿಶಸ್ತಮ್ ಅಭಿತಃ ಶಾಸನಂ ಶಿಕ್ಷಾಂ ಪ್ರಾಪ್ತಮ್, ಸರ್ವೈರ್ಧಿಕೃತಮಿತ್ಯರ್ಥಃ, ಪ್ರಪಶ್ಯಂತಿ । ಶಂಸಿತುಂ ಸ್ತೋತುಮ್ ।

ಪಕ್ಕದಲ್ಲಿರುವ ದರಿದ್ರನನ್ನು ಕಂಡು ಜನರು ಇವನು ಧಿಕ್ಕಾರಕ್ಕೆ ಒಳಗಾದವನೆಂದು ಕಾಣುತ್ತಾರೆ. 'ಶಂಸಿತುಂ' ಎಂದರೆ ಸ್ತುತಿಸಲು ಎಂದರ್ಥ.

ಪತಿತಃ ಶೋಚ್ಯತೇ ರಾಜನ್ ನಿರ್ಧನಶ್ಚಾಪಿ ಶೋಚ್ಯತೇ ।
ವಿಶೇಷಂ ನಾಧಿಗಚ್ಛಾಮಿ ಪತಿತಸ್ಯಾಧನಸ್ಯ ಚ ॥೧೫॥

ಪತಿತನು ಹೇಗೋ ನಿರ್ಧನನೂ ಹಾಗೆಯೇ ವ್ಯಸಕ್ಕೀಡು ಮಾಡಲ್ಪಡುವನು. ಆದ್ದರಿಂದ ಪತಿತನಿಗೂ, ದರಿದ್ರನಿಗೂ ನಾನು ಯಾವ ವಿಧವಾದ ಅಂತರವನ್ನು ಕಾಣಲಾರೆ. (ಧರ್ಮಭ್ರಷ್ಟನನ್ನು ಪತಿತನೆನ್ನುತ್ತಾರೆ).

ಅರ್ಥೇಭ್ಯೋ ಹಿ ವಿವೃದ್ಧೇಭ್ಯಃ ಸಂಭೃತೇಭ್ಯಸ್ತತಸ್ತತಃ ।
ಕ್ರಿಯಾಃ ಸರ್ವಾಃ ಪ್ರವರ್ತಂತೇ ಪರ್ವತೇಭ್ಯ ಇವಾಪಗಾಃ ॥೧೬॥

ಪರ್ವತಗಳಿಂದ ಅನೇಕ ನದಿಗಳು ಬಂದು ಒಟ್ಟಾಗಿ ಸೇರಿ ಪ್ರವಾಹವಾಗುವಂತೆ ಹಣವು ನಾನಾಕಡೆಯಿಂದ ಕಪ್ಪ-ಕಾಣಿಕೆಗಳ ರೂಪದಲ್ಲಿ ಹರಿದು ಬಂದು

ಬೊಕ್ಕಸವನ್ನು ತುಂಬುತ್ತದೆ. ಅದರಿಂದ ಎಲ್ಲ ವಿಧವಾದ ಶುಭಕರ್ಮಗಳಿಗೂ ಹಣವೇ ಮೂಲವಾಗಿರುತ್ತದೆ.

ಅರ್ಥಾದ್ ಧರ್ಮಶ್ಚ ಕಾಮಶ್ಚ ಸ್ವರ್ಗಶ್ಚೈವ ನರಾಧಿಪ।
ಪ್ರಾಣಯಾತ್ರಾ ಹಿ ಲೋಕಸ್ಯ ವಿನಾರ್ಥಂ ನ ಪ್ರಸಿದ್ಧ್ಯತಿ ॥೧೭॥

ನರೇಶ್ವರನೇ! ಧನದಿಂದಲೇ ಧರ್ಮಾಚರಣೆ, ಧನದಿಂದಲೇ ಕಾಮೋಪಭೋಗಗಳನ್ನು ಅನುಭವಿಸಲು ಸಾಧ್ಯ. ಅಷ್ಟೇ ಏಕೆ ಹಣವಿಲ್ಲದ ಮನುಷ್ಯನಿಗೆ ಜೀವನ ಯಾತ್ರೆಯೂ ನಡೆಯುವುದಿಲ್ಲ.

ಅರ್ಥೇನ ಹಿ ವಿಹೀನಸ್ಯ ಪುರುಷಸ್ಯಾಲ್ಪಮೇಧಸಃ।
ವ್ಯುಚ್ಛಿದ್ಯಂತೇ ಕ್ರಿಯಾಃ ಸರ್ವಾ ಗ್ರೀಷ್ಮೇ ಕುಸರಿತೋ ಯಥಾ ॥೧೮॥

ಗ್ರೀಷ್ಮಋತುವಿನಲ್ಲಿ ಚಿಕ್ಕ-ಚಿಕ್ಕ ನದಿಗಳು ಬತ್ತಿಹೋಗುವಂತೆ ಅಲ್ಪಬುದ್ಧಿಯುಳ್ಳ ಧನಹೀನನಾದ ಪುರುಷನ ಕಾರ್ಯಗಳೆಲ್ಲವೂ ನಡುವೆ ಮುರಿದು ಹೋಗುತ್ತವೆ.

ಯಸ್ಯಾರ್ಥಾಸ್ತಸ್ಯ ಮಿತ್ರಾಣಿ ಯಸ್ಯಾರ್ಥಾಸ್ತಸ್ಯ ಬಾಂಧವಾಃ।
ಯಸ್ಯಾರ್ಥಾಃ ಸ ಪುಮಾಂಲ್ಲೋಕೇ ಯಸ್ಯಾರ್ಥಾಃ ಸ ಚ ಪಂಡಿತಃ ॥೧೯॥

ಹಣವು ಯಾರ ಬಳಿ ಇರುತ್ತದೋ, ಅವನ ಬಳಿಗೆ ಮಿತ್ರರು ಬರುತ್ತಾರೆ. ಐಶ್ವರ್ಯ ಇರುವವನ ಬಳಿಗೆ ಬಂಧುಗಳು ಹುಡುಕಿಕೊಂಡು ಬರುತ್ತಾರೆ. ಹಣವಿದ್ದವನೇ ಲೋಕದಲ್ಲಿ ಪುರುಷನು. ಧನಸಂಪತ್ತನ್ನು ಹೊಂದಿದವನೇ ಪಂಡಿತನು.

ವಿವರಣೆ - ಶ್ರೀಮಂತರಾಗಿದ್ದಾಗ ಹುಡುಕಿಕೊಂಡು, ಸಾವಿರಾರು ಜನರು ಬರುತ್ತಾರೆ. ಸಂಬಂಧವಿಲ್ಲದವರೆಲ್ಲರೂ ನಾವು ನಿಮ್ಮ ಸಂಬಂಧಿಗಳೆನ್ನುತ್ತಾರೆ. ನಾವು ನಿಮ್ಮ ಮಿತ್ರರೆನ್ನುತ್ತಾರೆ. ದೂರದ ಬಂಧುಗಳು ಹತ್ತಿರವಾಗುತ್ತಾರೆ. ಐಶ್ವರ್ಯವಿರುವ ನನಗೆ ಸಮಸ್ತ ಜಗತ್ತೇ ಗೌರವ ನೀಡುತ್ತದೆ. ಐಶ್ವರ್ಯವಿದ್ದವನೇ ಪಂಡಿತನು. ಅವನೇ ವಿದ್ಯಾವಂತ. ಇದು ಜಗತ್ತಿನ ನೀತಿಯೇ ಆಗಿದೆ. ಆದ್ದರಿಂದ ಹಣವಿದ್ದವನೇ ಸುಖವಾಗಿ ಬದುಕಲು ಸಾಧ್ಯವೆಂದು ಅರ್ಜುನನು ಇಲ್ಲಿ ಪ್ರತಿಪಾದನೆ ಮಾಡುತ್ತಿದ್ದಾನೆ.

ಅಧನೇನಾರ್ಥಕಾಮೇನ ನಾರ್ಥಃ ಶಕ್ಯೋ ವಿವಿತ್ಸತಾ ।
ಅರ್ಥೈರರ್ಥಾ ನಿಬದ್ಧ್ಯಂತೇ ಗಜೈರಿವ ಮಹಾಗಜಾಃ ॥೨೦॥

ದರಿದ್ರನಾದವನು ಅರ್ಥವನ್ನು ಅಪೇಕ್ಷಿಸಿದರೂ ಅವನಿಂದ ಅಪಾರ ಧನವನ್ನು ಸಂಗ್ರಹಿಸಲು ಸಾಧ್ಯವಾಗುವುದಿಲ್ಲ. ಮೊದಲೇ ಸ್ವಲ್ಪ ಧನವನ್ನು ಸಂಗ್ರಹಿಸಿ ಆ ಧನದಿಂದ ಅಪಾರ ಧನವನ್ನು ಸಂಗ್ರಹಿಸಬೇಕು. ಆನೆಗಳಿಂದ ಆನೆಯನ್ನು ಹಿಡಿಯುವ ಹಾಗೆ ಹಣದಿಂದಲೇ ಹಣವನ್ನು ಸಂಪಾದಿಸಿ ವೃದ್ಧಿಗೊಳಿಸಬೇಕು.

ವಿವರಣೆ - ಶ್ರೀಮಂತ ಯಾರಲ್ಲಿ ಹಣವಿರುತ್ತದೋ, ಅವರಿಗಷ್ಟೇ ಜನರು ಹಣವನ್ನು ನೀಡುತ್ತಾರೆ. ಬಡವನಿಗೆ ಜನರು ಹಣವನ್ನು ನೀಡುವುದಿಲ್ಲ. ನಿರ್ಧನನು ಊಟ ಬಟ್ಟೆಗಳನ್ನಷ್ಟೇ ಸಂಪಾದನೆ ಮಾಡಬಹುದು. ಆಸ್ತಿಪಾಸ್ತಿ-ಹಣವನ್ನು ಸಂಗ್ರಹಣೆ ಮಾಡಲು ಅವನಿಂದ ಸಾಧ್ಯವಾಗುವುದಿಲ್ಲ. ರಾಜ್ಯ-ಕೋಶಾದಿಗಳನ್ನು ಪಡೆದುಕೊಂಡು, ಐಶ್ವರ್ಯವಂತನಾದ ನೀನು ಪುನಃ ದಾರಿದ್ರ್ಯವನ್ನು ಬಯಸುವುದು ಸೂಕ್ತವಲ್ಲ.

ಟಿಪ್ಪಣಿ - ಅಧನೇನಾರ್ಥಕಾಮೇನ ಇತ್ಯತ್ರ ಅರ್ಥಕಾಮೇನ ಪ್ರಯೋಜನ-ಕಾಮೇನ ॥ 'ಕಾಮೇನ' ಎಂಬುದಕ್ಕೆ ಪ್ರಯೋಜನವನ್ನು ಅಪೇಕ್ಷಿಸುವವನಿಂದ ಎಂದರ್ಥ.

ಧರ್ಮಃ ಕಾಮಶ್ಚ ಸ್ವರ್ಗಶ್ಚ ಹರ್ಷಃ ಕ್ರೋಧಃ ಶ್ರುತಂ ದಮಃ ।
ಅರ್ಥಾದೇತಾನಿ ಸರ್ವಾಣಿ ಪ್ರವರ್ತಂತೇ ನರಾಧಿಪ ॥೨೧॥

ಪ್ರಜಾಪಾಲಕನೇ ! ಧರ್ಮ, ಕಾಮ, ಸ್ವರ್ಗ, ಸಂತೋಷ, ಕ್ರೋಧ, ಶಾಸ್ತ್ರಜ್ಞಾನ, ಇಂದ್ರಿಯನಿಗ್ರಹ, ಇವೆಲ್ಲವೂ ಧನದಿಂದಲೇ ಸಿದ್ಧವಾಗುತ್ತವೆ. ಧನದಿಂದಲೇ ಶೋಭಿಸುತ್ತವೆ.

ವಿವರಣೆ - ವಿದ್ವಾಂಸರು ಶ್ರೀಮಂತರ ಮನೆಗಳಿಗೆ ಹೋಗಿ ಪಾಠವನ್ನು ಹೇಳುವ ಮೂಲಕ ಸಂಭಾವನೆಯನ್ನು ಪಡೆದುಕೊಳ್ಳುತ್ತಾರೆ. ಹಣವಿದ್ದರೆ, ಶಾಸ್ತ್ರ-ಗಳ ಅಧ್ಯಯನವು ಸುಲಭವಾಗುತ್ತದೆಂಬುದು ಇದರ ಅಭಿಪ್ರಾಯ.

ಧನಾತ್ ಕುಲಂ ಪ್ರಭವತಿ ಧನಾದ್ ಧರ್ಮಃ ಪ್ರವರ್ಧತೇ ।
ನಾಧನಸ್ಯಾಸ್ತ್ಯಯಂ ಲೋಕೋ ನ ಪರಃ ಪುರುಷೋತ್ತಮ ॥೨೨॥

ಧನದಿಂದಲೇ ಕುಲಗಳು ಶೋಭಿಸುವವು. ಧನದಿಂದಲೇ ಧರ್ಮವು ಪ್ರವರ್ಧಮಾನವಾಗುವುದು. ಧನವಿಲ್ಲದವನಿಗೆ ಇಹಪರಗಳೆರಡೂ ಇರುವುದಿಲ್ಲ.

ನಾಧನೋ ಧರ್ಮಕೃತ್ಯಾನಿ ಯಥಾವದನುತಿಷ್ಠತಿ।
ಧನಾದ್ಧಿ ಧರ್ಮಃ ಸ್ರವತಿ ಶೈಲಾದ್ ಗಿರಿನದೀ ಯಥಾ ॥೨೩॥

ಧನವಿಲ್ಲದವನು ಯಾವ ಧರ್ಮಕಾರ್ಯಗಳನ್ನು ಸರಿಯಾಗಿ ನಡೆಸಲಾರನು. ಪರ್ವತ ಬೆಟ್ಟಗಳಿಂದ ನದಿಯು ಹೇಗೆ ತಡೆಯಿಲ್ಲದೆ ಹರಿಯುವುದೋ, ಹಾಗೇ ಧನದಿಂದಲೇ ಧರ್ಮವು ನಿರಂಕುಶವಾಗಿ ಮುಂದುವರಿಯುವುದು.

ಟಿಪ್ಪಣಿ - ಶೈಲಾದ್ ಗಿರಿನದೀ ಯಥಾ ಇತ್ಯತ್ರ ಗಿರಿನದೀ ಗಿರಿಮೂಲಾ ನದೀ ಶೈಲಾದಿವ। 'ಗಿರಿನದೀ' ಎಂದರೆ ಗಿರಿಮೂಲಕವಾದ ನದಿಯು ಪರ್ವತದಿಂದ ಧುಮುಕುವಂತೆ ಎಂದರ್ಥ.

ಯಃ ಕೃಶಾರ್ಥಃ ಕೃಶಗವಃ ಕೃಶಭೃತ್ಯಃ ಕೃಶಾತಿಥಿಃ।
ಸ ವೈ ರಾಜನ್ ಕೃಶೋ ನಾಮ ನ ಶರೀರಕೃಶಃ ಕೃಶಃ ॥೨೪॥

ರಾಜನೇ! ಯಾರಲ್ಲಿ ಧನ, ಗೋವು, ಭೃತ್ಯರು, ಅತಿಥಿಗಳು ಸಮೃದ್ಧವಾಗಿಲ್ಲದುದರಿಂದ ಈ ಎಲ್ಲ ಸಂಪತ್ತಿನಿಂದ ಕೃಶನೆನಿಸುವನೋ, ಅವನೇ ನಿಜವಾದ ಕೃಶನೆಂದು ಹೇಳಬೇಕು. ಶರೀರದಿಂದ ಕೃಶನಾದವನನ್ನು ಕೃಶನೆನ್ನಬಾರದು.

ವಿವರಣೆ - ಯಾರು ಶರೀರದಿಂದ ಕೃಶವಾಗಿದ್ದಾನೋ, ಅವನನ್ನು ಕೃಶನೆಂದು ಜಗತ್ತು ಹೇಳುವುದಿಲ್ಲ. ಯಾರ ಬಳಿ, ಹಣವು ಇರುವುದಿಲ್ಲವೋ, ಗೋಸಂಪತ್ತು, ಮೃತ್ಯುಸಂಪತ್ತು, ಶಿಷ್ಯಸಂಪತ್ತು ಇರುವುದಿಲ್ಲವೋ, ಅಂಥವನನ್ನೇ ಕೃಶನೆಂದು ಜಗತ್ತು ತಿಳಿಯುತ್ತದೆ.

ಅವೇಕ್ಷಸ್ವ ಯಥಾನ್ಯಾಯಂ ಪಶ್ಯ ದೇವಾಸುರಂ ಯಥಾ।
ರಾಜನ್ ಕಿಮನ್ಯಜ್-ಜ್ಞಾತೀನಾಂ ವಧಾದ್ ಋದ್ಧ್ಯಂತಿ ದೇವತಾಃ ॥೨೫॥

ಮಹಾರಾಜನೇ! ನ್ಯಾಯಸಮ್ಮತವಾಗಿ ವಿಚಾರ ಮಾಡು. ದೇವಾಸುರರ ವಿಚಾರ

-ವೇನು ಎಂಬುದನ್ನು ನೀನು ಚೆನ್ನಾಗಿ ವಿಮರ್ಶಿಸು. ದೇವತೆಗಳು ತಮ್ಮ ಜ್ಞಾತಿ-ಬಾಂಧವರಾದ ಅಸುರರ ವಧೆಯಾಗುವುದನ್ನು ನಿರಂತರ ಅಪೇಕ್ಷಿಸುತ್ತಾರೆ.

ಟಿಪ್ಪಣಿ - ಅವೇಕ್ಷಸ್ವ ಯಥಾನ್ಯಾಯಂ ಪಶ್ಯ ದೈವಾಸುರಂ ಯಥಾ ಇತ್ಯತ್ರ ದೈವಾಸುರಂ ದೇವಾಸುರಸಂಬಂಧಿಕರ್ಮ, ಸ್ವಜ್ಯೇಷ್ಠದಾಯಾದಾನ್ ಅಸುರಾನ್ ಹತ್ವಾ ಕನಿಷ್ಠದಾಯಾದಾಃ ಸುರಾಃ ರಾಜ್ಯಮನುಭವಂತಿ ತದ್ ಯಥಾ ಯಥಾವತ್ ಪಶ್ಯ । ಯಥಾನ್ಯಾಯಂ ತನ್ನ್ಯಾಯಮನತಿಕ್ರಮ್ಯ ಅವೇಕ್ಷಸ್ವ ಸ್ವಜ್ಞಾತಿವಧೇಽಪಿ ದೃಷ್ಟಿಂ ದಿಶೇತಿ ಯೋಜನಾ ॥ ದೇವತೆಗಳು ತಮ್ಮ ಹಿರಿಯದಾಯಾದಿಗಳೆನಿಸಿದ ಅಸುರನನ್ನು ಕೊಂದು ಸ್ವರ್ಗರಾಜ್ಯವನ್ನು ಅನುಭವಿಸುತ್ತಿದ್ದಾರೆ. ಅದೇ ನ್ಯಾಯ-ವನ್ನು ನೀನೂ ಸಹ ಅನುಸರಿಸಿ ನಿನ್ನ ಜ್ಞಾತಿವಧೆಯ ಬಗ್ಗೆ ಆಲೋಚಿಸು. ನಿನಗಿಂತ ಶ್ರೇಷ್ಠರಾದ ದೇವತೆಗಳಂತೆ ನಡೆದುಕೋ

ನಚೇದ್ ಹರ್ತವ್ಯಮನ್ಯಸ್ಯ ಕಥಂ ತದ್ ಧರ್ಮಮಾರಭೇತ್ ।
ಏತಾವಾನೇವ ವೇದೇಷು ನಿಶ್ಚಯಃ ಕವಿಭಿಃ ಕೃತಃ ॥೨೬॥
ಅಧ್ಯೇತವ್ಯಾ ತ್ರಯೀ ನಿತ್ಯಂ ಭವಿತವ್ಯಂ ವಿಪಶ್ಚಿತಾ ।
ಸರ್ವಥಾ ಧನಮಾಹಾರ್ಯಂ ಯಷ್ಟವ್ಯಂ ಚಾಪಿ ಯತ್ನತಃ ॥೨೭॥

ರಾಜನಾದವನು ಮತ್ತೊಬ್ಬರ ಧನವನ್ನು ತೆಗೆದುಕೊಳ್ಳದಿದ್ದರೆ, ಅವನು ಧರ್ಮವನ್ನು ನಡೆಸುವುದಕ್ಕೆ ಬೇರೆ ದಾರಿ ಏನು? ವೇದಶಾಸ್ತ್ರಗಳನ್ನು ತಿಳಿದ ವಿದ್ವಾಂಸರು ಇದನ್ನೇ ವೇದಗಳಿಂದ ನಿರೂಪಿಸಿ ಹೇಳಿರುವರು. ವೇದಗಳನ್ನು ನಿತ್ಯವೂ ಓದಬೇಕು. ಒಳ್ಳೆಯ ಜ್ಞಾನವಂತನಾಗಬೇಕು, ಸರ್ವವಿಧದಿಂದಲೂ ಧನವನ್ನು ಸಂಪಾದಿಸಿ ಪ್ರಯತ್ನಪೂರ್ವಕವಾಗಿ ಆ ಧನದಿಂದ ಯಜ್ಞ ಯಾಗಾದಿಗಳನ್ನು ನಡೆಸಬೇಕು.

ಟಿಪ್ಪಣಿ - ನಚೇದ್ ಹರ್ತವ್ಯಮನ್ಯಸ್ಯ ಇತ್ಯತ್ರ ನ ಚೇದ್ ದುಷ್ಟಜ್ಞಾತಿವಧಂ ಕೃತ್ವಾ ತದ್ ದ್ರವ್ಯಾಹರಣಂ ಧರ್ಮೋ ನ ಚೇದ್, ಅನ್ಯಸ್ಯ ದೈತ್ಯವರ್ಗಸ್ಯ ಹರ್ತವ್ಯಂ ಹರ್ತುಂ ಯೋಗ್ಯಂ ದ್ರವ್ಯಮಾಹೃತ್ಯ ದೇವತಾಸಮೂಹಃ ಕಥಂ ಧರ್ಮಮಾಚರೇತ್ ॥ ದುಷ್ಟರಾದ ಜ್ಞಾತಿಗಳ ವಧೆಯನ್ನು ಮಾಡಿ ಸಂಪತ್ತನ್ನು

ತೆಗೆದುಕೊಳ್ಳುವುದು ಧರ್ಮವಾಗದಿದ್ದರೆ ದೈತ್ಯರ ಸಂಪತ್ತನ್ನು ತೆಗೆದುಕೊಂಡು ದೇವತೆಗಳು ಆಡಳಿತವನ್ನು ನಡೆಸಿದ್ದು ಹೇಗೆ ತಾನೇ ಧರ್ಮವಾಗುತ್ತಿತ್ತು?

ದ್ರೋಹಾದ್ ದೇವೈರವಾಪ್ತಾನಿ ದಿವಿ ಸ್ಥಾನಾನಿ ಸರ್ವಶಃ।
ದ್ರೋಹಾತ್ ಕಿಮನ್ಯಜ್-ಜ್ಞಾತೀನಾಂ ಗೃಧ್ಯಂತೇ ಯೇನ ದೇವತಾಃ ॥೨೮

ದೇವತೆಗಳೂ ಕೂಡ ಅಸುರರ ದ್ರೋಹದಿಂದಲೇ ಸ್ವರ್ಗದ ಸ್ಥಾನವನ್ನು ಸಂಪಾದಿಸಿದರು. ದೇವತೆಗಳು ತಮ್ಮ ಜ್ಞಾತಿಗಳಿಂದ ರಾಜ್ಯವನ್ನು ಸ್ವಾಧೀನ ಮಾಡಿಕೊಂಡರು. ಹೀಗೆ ಮಾಡುವುದು ತಮ್ಮ ಜ್ಞಾತಿಗಳ ದ್ರೋಹವಲ್ಲದೆ ಮತ್ತೇನು!

ಇತಿ ದೇವಾ ವ್ಯವಸಿತಾ ವೇದವಾದಾಶ್ಚ ಶಾಶ್ವತಾಃ।
ಅಧೀಯಂತೇऽಧ್ಯಾಪಯಂತೇ ಯಜಂತೇ ಯಾಜಯಂತಿ ಚ ॥೨೯॥
ಕೃತ್ಸ್ನಂ ತದೇವ ಚ ಶ್ರೇಯೋ ಯದಪ್ಯಾದದತೇऽನ್ಯತಃ।
ನ ಪಶ್ಯಾಮೋऽನಪಹೃತಂ ಧನಂ ಕಿಂಚಿತ್ ಕ್ವಚಿದ್ ವಯಮ್ ॥೩೦॥

ದೇವತೆಗಳೂ ಹ ಸಂಪತ್ತಿನ ಮಾರ್ಗದಲ್ಲಿ ಹೋಗಿರುವರು. ಶಾಶ್ವತಗಳೆನಿಸಿದ, ವೇದವಾಕ್ಯಗಳೂ ಅದನ್ನೇ ಹೇಳುವವು. ಅಧ್ಯಯನ, ಅಧ್ಯಾಪನ, ಯಜನ, ಯಾಜನಗಳೆಂಬ ಈ ಕರ್ಮಗಳು ನಡೆಯುವುದಕ್ಕೆ ಧನವೇ ಮೂಲ ಆಧಾರ. ಜಗತ್ತಿನಲ್ಲಿರುವ ಸಮಸ್ತ ವಸ್ತುಗಳು ಇದರ ಮೂಲವೇ ಆಗಿವೆ. ಶ್ರೇಯಸ್ಸಿಗೂ ಈ ಧನವೇ ಕಾರಣವಾಗಿದೆ. ಬೇರೆಯವರಿಗೆ ಅಪಕಾರವಿಲ್ಲದೆ ಯಾವ ವಿಧದಿಂದಾದರೂ ಎಲ್ಲಿಯಾದರೂ ಅಲ್ಪವೂ ಸಹ ಧನ ಬಂದದ್ದನ್ನು ನಾವು ಕಾಣುತ್ತಿಲ್ಲ. ದುಷ್ಪರ ಹಣವನ್ನು ಸಂಗ್ರಹಿಸಲೇ ಬೇಕಾಗುತ್ತದೆ. ರಾಜರೆಲ್ಲರೂ ಈ ವಿಧವಾಗಿಯೇ ಭೂಮಿಯನ್ನು ವಶಮಾಡಿಕೊಂಡು ಆಳುತ್ತಿದ್ದಾರೆ.

ಏವಮೇವ ಹಿ ರಾಜಾನೋ ಜಯಂತಿ ಪೃಥಿವೀಮಿಮಾಮ್।
ಜಿತ್ವಾ ಮಮೇಯಂ ಬ್ರುವತೇ ಪುತ್ರಾ ಇವ ಪಿತುರ್ಧನಮ್ ॥೩೧॥

ರಾಜರು ಮತ್ತೊಬ್ಬರ ಭೂಮಿಯನ್ನು ಬಲತ್ಕಾರದಿಂದ ಜಯಿಸುತ್ತಾರೆ. ಮಕ್ಕಳು

ತಂದೆಯ ಆಸ್ತಿಯನ್ನು ತಮ್ಮದೆಂದು ಹೇಳಿಕೊಳ್ಳುವಂತೆ, ಶತ್ರುಗಳಿಂದ ಜಯಿಸಿದ ಭೂಮಿಯನ್ನು ತಮ್ಮದೆಂದೇ ರಾಜರು ಹೇಳಿಕೊಳ್ಳುತ್ತಾರೆ.

ರಾಜರ್ಷಯೋ ಜಿತಸ್ವರ್ಗಾ ಧರ್ಮೋ ಹ್ಯೇಷಾಂ ನಿಗದ್ಯತೇ।
ಯಥೈವ ಪೂರ್ಣಾದುದಧೇಃ ಸ್ಯಂದಂತ್ಯಾಪೋ ದಿಶೋ ದಶ।
ಏವಂ ರಾಜಕುಲಾದ್ ವಿತ್ತಂ ಪೃಥಿವೀಂ ಪ್ರತಿತಿಷ್ಠತಿ ॥೩೨॥

ಹಿಂದೆ ಇದೇ ರೀತಿಯಲ್ಲಿ ರಾಜ್ಯವಾಳುತ್ತಿದ್ದ ರಾಜರು ರಾಜರ್ಷಿಗಳೆನಿಸಿ ಸ್ವರ್ಗಕ್ಕೆ ತೆರಳಿದ್ದಾರೆ. ರಾಜರ್ಷಿಗಳಿಗೆ ಅದೇ ಉತ್ತಮ ಧರ್ಮವೆಂದು ಪ್ರಶಂಸಿಸಲ್ಪಟ್ಟಿದೆ. ಸಮುದ್ರದ ನೀರು ಮೇಘಗಳ ರೂಪದಲ್ಲಿ ಭೂಮಿಯಲ್ಲಿ ಎಲ್ಲೆಡೆಯೂ ಸುರಿಯುವಂತೆ; ರಾಜರು ಸಂಪಾದಿಸಿದ ಧನವು ನಾನಾರೂಪದಲ್ಲಿ ಭೂಮಿಯಲ್ಲಿ ಎಲ್ಲೆಡೆಯೂ ಹರಡುವುದು.

ಆಸೀದಿಯಂ ದಿಲೀಪಸ್ಯ ನೃಗಸ್ಯ ನಹುಷಸ್ಯ ಚ।
ಅಂಬರೀಷಸ್ಯ ಮಾಂಧಾತುಃ ಪೃಥಿವೀ ಸಾ ತ್ವಯಿ ಸ್ಥಿತಾ।
ಸ ತ್ವಾಂ ದ್ರವ್ಯಮಯೋ ಯಜ್ಞಃ ಸಂಪ್ರಾಪ್ತಃ ಸರ್ವದಕ್ಷಿಣಃ ॥೩೩॥

ಹಿಂದೆ ಈ ಭೂಮಂಡಲವನ್ನು ದೀಲಿಪನು ಆಳುತ್ತಿದ್ದನು. ನೃಗ, ನಹುಷ, ಅಂಬರೀಷ, ಮಾಂಧಾತಾ ಇವರೆಲ್ಲರೂ ಈ ಭೂಮಿಯನ್ನು ಆಳಿದರು. ಈಗ ನಿನ್ನ ರಕ್ಷಣೆಗೆ ಒಳಪಟ್ಟಿದೆ. ಸರ್ವರಕ್ಷಣೆಗಳುಳ್ಳ ದ್ರವ್ಯರೂಪವಾದ ಆ ಯಜ್ಞದ ನಿರ್ವಹಣೆಯ ಭಾರವು ನಿನ್ನಲ್ಲಿ ಬಂದು ಸೇರಿದೆ.

ತಂ ಚೇನ್ನ ಯಜಸೇ ರಾಜನ್ ಪ್ರಾಪ್ತಸ್ತ್ವಂ ದೇವಕಿಲ್ಬಿಷಮ್।
ಯೇಷಾಂ ರಾಜಾಶ್ವಮೇಧೇನ ಯಜತೇ ದಕ್ಷಿಣಾವತಾ।
ಉಪೇತ್ಯ ತಸ್ಯಾವಭೃಥಂ ಪೂತಾಃ ಸರ್ವೇ ಭವಂತಿ ತೇ ॥೩೪॥

ನೀನೇನಾದರೂ ಬಹು ದಕ್ಷಿಣೆಗಳುಳ್ಳ ಅಶ್ವಮೇಧಯಾಗವನ್ನು ಮಾಡದಿದ್ದರೆ ರಾಜ್ಯದಲ್ಲಿ ನಡೆಯುವ ಎಲ್ಲಾ ಪಾಪಗಳಿಗೆ ಭಾಗಿಯಾಗುವಿ. ಯಾವ ಪ್ರಜಾ-

ರಕ್ಷಕನಾದ ಅರಸನು ಭೂರಿದಕ್ಷಿಣೆಗಳುಳ್ಳ ಅಶ್ವಮೇಧಯಾಗವನ್ನು ನಡೆಸುವನೋ, ಅಂಥ ರಾಜನ ಅವಭೃಥಕಾಲದಲ್ಲಿ ಸಮಸ್ತ ಪ್ರಜೆಗಳು ಆಗಮಿಸಿ ಪವಿತ್ರರಾಗುವರು.

ವಿಶ್ವರೂಪೋ ಮಹಾದೇವಃ ಸರ್ವಮೇಧೇ ಮಹಾಮಖೇ।
ಜುಹಾವ ಸರ್ವಭೂತಾನಿ ತಥೈವಾತ್ಮಾನಮಾತ್ಮನಾ ॥೩೫॥

ಹಿಂದೆ ವಿಶ್ವರೂಪಿಯಾದ ಮಹಾದೇವನಾದ ವಿಷ್ಣುವು ಕೂಡ ಸರ್ವಮೇಧವೆಂಬ ಮಹಾಯಾಗವನ್ನು ಆಚರಿಸಿದ್ದನು. ಎಲ್ಲಾ ಭೂತಗಳನ್ನು ಅದರಲ್ಲಿ ಹೋಮ ಮಾಡಿದನು. ಮತ್ತು ತನ್ನನ್ನೂ ಸಹ ಹೋಮ ಮಾಡಿಕೊಂಡನು. ಮಹಾವಿಷ್ಣು ಜಗತ್ತನ್ನೇ ಹೋಮಿಸುತ್ತಾನೆ. ಯಾಗ ಮಾಡುವವನು, ಅಗ್ನಿ, ದ್ರವ್ಯ ಎಲ್ಲದರಲ್ಲಿಯೂ ವಿಷ್ಣುವೇ ನಿಂತು ಹೋಮವನ್ನು ಮಾಡಿದನು.

ಶಾಶ್ವತೋऽಯಂ ಭೂತಿಪಥೋ ನಾಸ್ಯಾಂತಮನುಶುಶ್ರುಮ।
ಮಹಾನ್ ದಾಶರಥಃ ಪಂಥಾ ಮಾ ರಾಜನ್ ಕುಪಥಂ ಗಮಃ ॥೩೬॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ
ರಾಜಧರ್ಮೇ ಅಷ್ಟಮೋऽಧ್ಯಾಯಃ ॥೮॥

ಮಹಾರಾಜನೇ ! ಇದೇ ಶಾಶ್ವತವಾದ ಕ್ಷೇಮಮಾರ್ಗವು. ಇದಕ್ಕೆ ಎಂದಿಗೂ ನಾಶವಿಲ್ಲವೆಂದು ಕೇಳಿರುವೆನು. ಇದು ದಾಶರಥವೆಂಬ ಮಹಾಮಾರ್ಗವಾಗಿದೆ. ನಮ್ಮ ಹಿರಿಯರು ಹೋದ ಈ ದಾರಿಯನ್ನು ಅನುಸರಿಸಿ ನಡೆ. ಇದನ್ನು ಬಿಟ್ಟು ಬೇರೆ ಮಾರ್ಗವನ್ನು ಹಿಡಿಯಬೇಡ.

ದಶರಥಾಶ್ಚ ಪ್ರಚರಂತಿ ಯಸ್ಮಿನ್ ಸಃ ದಶರಥಃ ಸ ಏವ ದಾಶರಥಃ ಯಜ್ಞಕ್ಕೆ ಹತ್ತು ರಥಗಳಿರುತ್ತದೆ. ಪಶು, ಪತ್ನೀ, ಯಜಮಾನ, ಋತ್ವಿಕ್, ಮೂರುವೇದಗಳು ನಾಲ್ವರು ಋತ್ವಿಜರು.

ರಾಜಧರ್ಮಪರ್ವ ಕನ್ನಡಾನುವಾದಲ್ಲಿ ೮ನೆಯ ಅಧ್ಯಾಯವು ಮುಗಿಯಿತು.

* * * * *

೯. ಒಂಬತ್ತನೆಯ ಅಧ್ಯಾಯ

ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ಸನ್ಯಾಸಧರ್ಮವನ್ನು ಪಾಲಿಸುತ್ತೇನೆಂದು ಯುಧಿಷ್ಠಿರನು ಅರ್ಜುನನಿಗೆ ಪ್ರತ್ಯುತ್ತರವನ್ನು ಹೇಳಿದುದು.

ಯುಧಿಷ್ಠಿರಃ

ಮುಹೂರ್ತಂ ತಾವದೇಕಾಗ್ರೋ ಮನಃಶ್ರೋತ್ರೇಽಂತರಾತ್ಮನಿ।
ಧಾರಯಿತ್ವಾಪಿ ತತ್ ಶ್ರುತ್ವಾ ರೋಚೇತಂ ವಚನಂ ಮಮ ॥೧॥

ಅರ್ಜುನನೇ! ಒಂದು ಮುಹೂರ್ತಕಾಲದವರೆಗೆ ನಿನ್ನ ಮನಸ್ಸನ್ನು ಮತ್ತು ಕಿವಿಗಳನ್ನು ಪರಮಾತ್ಮನಲ್ಲಿ ನೆಲೆಗೊಳಿಸು. ಏಕಾಗ್ರಚಿತ್ತನಾಗಿ ಧ್ಯಾನಮಾಡು. ಆಗ ನನ್ನ ಮಾತು ನಿನಗೆ ಒಪ್ಪುವುದು.

ಸಾರ್ಥಾಗಮ್ಯಮಹಂ ಮಾರ್ಗಂ ನ ಜಾತು ತ್ವತ್ಕೃತೇ ಪುನಃ।
ಗಚ್ಛೇಯಂ ತದ್ ಗಮಿಷ್ಯಾಮಿ ಹಿತ್ವಾ ಗ್ರಾಮ್ಯಸುಖಾನ್ಯುತ ॥೨॥

ಋಷಿಮುನಿಗಳು ಯಾವ ದಾರಿಯನ್ನು ಹಿಡಿದಿರುವರೋ ಅದೇ ದಾರಿಯನ್ನು ಹಿಡಿಯುವೆನು. ನಿನಗಾಗಿ ನಾನು ಎಂದಿಗೂ ವಿಷಯಾಸಕ್ತಿಯನ್ನು ಹೊಂದುವುದಿಲ್ಲ. ಈ ಗ್ರಾಮ್ಯಸುಖಗಳನ್ನೆಲ್ಲಾ ಬಿಡುವೆನು.

ಟಿಪ್ಪಣಿ- ಸಾರ್ಥಾಗಮ್ಯಮಹಂ ಮಾರ್ಗಮ್ ಇತ್ಯತ್ರ ಸಾರ್ಥೇನ ಸತಾಂ ಸಮೂಹೇನ ಅಗಮ್ಯಂ ಮಾರ್ಗಂ ತ್ವತ್ಕೃತೇ ಜಾತು ನ ಗಚ್ಛೇಯಮಿತಿ ಯೋಜನಾ ॥ ಸಜ್ಜನರು ಹೋಗದೇ ಇರುವ ಮಾರ್ಗದಲ್ಲಿ ನಿನಗೋಸ್ಕರ ನಾನು ಎಂದೂ ಹೋಗುವುದಿಲ್ಲ.

ಕ್ಷೇಮ್ಯಶ್ಚೈಕಾಕಿನಾ ಗಮ್ಯಃ ಪಂಥಾಃ ಕೋಽಸ್ತೀತಿ ಪೃಚ್ಛ ಮಾಮ್।
ಅಥವಾ ನೇಚ್ಛಸಿ ಪ್ರಷ್ಟುಮಪೃಚ್ಛನ್ನಪಿ ಮೇ ಶೃಣು ॥೩॥

ಅರ್ಜುನ! ಮತ್ತೊಬ್ಬರ ಸಹಾಯವಿಲ್ಲದೆ ತಾನೇ ಒಂಟಿಯಾಗಿ ತೆರಳಲು ಸಾಧ್ಯವಾದ ಕ್ಷೇಮಕರವಾದದು ದಾರಿ ಯಾವುದೆಂದು ನನ್ನನ್ನು ಕೇಳು. ನಾನು ನಿನಗೆ

ಹೇಳುವೆನು. ಒಂದುವೇಳೆ ನಿನಗೆ ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟವಿಲ್ಲದಿದ್ದರೂ, ನಾನು ಹೋಗುವ ದಾರಿ ಯಾವುದು ಎಂದು ಹೇಳುವೆನು. ಕೇಳು.

ಹಿತ್ವಾ ಗ್ರಾಮ್ಯಸುಖಾಚಾರಂ ತಪ್ಯಮಾನೋ ಮಹತ್ ತಪಃ।
ಅರಣ್ಯೇ ಫಲಮೂಲಾಶೀ ಚರಿಷ್ಯಾಮಿ ಮೃಗೈಃ ಸಹ ॥೪॥

ಇನ್ನು ಮುಂದೆ ನಾನು ಗ್ರಾಮ್ಯಸುಖಗಳನ್ನು ತೊರೆದು ಅರಣ್ಯದಲ್ಲಿ ಕಂದ-ಮೂಲಫಲಗಳನ್ನು ತಿನ್ನುತ್ತಾ ಕಠಿಣವಾದ ತಪಸ್ಸನ್ನು ಮಾಡುವೆನು. ಅರಣ್ಯದಲ್ಲಿ ಮೃಗಗಳೊಡನೆ ಸಂಚರಿಸುವೆನು.

ಜುಹ್ವಾನೋऽಗ್ನಿಂ ಯಥಾಕಾಲಮುಭೌ ಕಾಲಾವುಪಸ್ಪೃಶನ್।
ಕೃಶಃ ಪರಿಮಿತಾಹಾರಶ್ಚರ್ಮಚೀರಜಟಾಧರಃ ॥೫॥

ಪ್ರಾತಃಕಾಲದಲ್ಲಿ ಮತ್ತು ಸಾಯಂಕಾಲದಲ್ಲಿ ಸ್ನಾನ ಮಾಡುತ್ತಾ ಕಾಲಕಾಲಕ್ಕೆ ಅಗ್ನಿಕಾರ್ಯಗಳನ್ನು ಮಾಡುವೆನು. ಜೀವಧಾರಣೆಗೆ ಎಷ್ಟು ಬೇಕೋ ಅಷ್ಟೇ ಆಹಾರ-ವನ್ನು ಸ್ವೀಕರಿಸಿ ದೇಹವನ್ನು ಕೃಶಗೊಳಿಸುವೆನು. ಕೃಷ್ಣಾಜಿನ ಮತ್ತು ವಲ್ಕಲಗಳನ್ನೇ ಬಟ್ಟೆಯನ್ನಾಗಿ ಧರಿಸಿ, ಜಟಾಧಾರಿಯಾಗಿರುವೆನು.

ಶೀತವಾತಾತಪಸಹಃ ಕ್ಷುತ್ತಿಪಾಸಾಶ್ರಮಕ್ಷಮಃ।
ತಪಸಾ ವಿಧಿದೃಷ್ಟೇನ ಶರೀರಮುಪಶೋಷಯನ್ ॥೬॥

ಚಳಿ-ಗಾಳಿ-ಬಿಸಿಲುಗಳನ್ನು ಸಹಿಸಿಕೊಳ್ಳುತ್ತೇನೆ. ಹಸಿವು ಬಾಯಾರಿಕೆ ಮತ್ತು ಪರಿಶ್ರಮಗಳನ್ನು ಸಹಿಸಿಕೊಳ್ಳಲು ಅಭ್ಯಾಸ ಮಾಡುತ್ತೇನೆ. ಶಾಸ್ತ್ರದಲ್ಲಿ ಹೇಳಿದ ತಪೋಮಾರ್ಗದಿಂದ ಶರೀರವನ್ನು ಶೋಷಿಸುವೆನು.

ಮನಃಕರ್ಣಸುಖಾ ನಿತ್ಯಂ ಶೃಣ್ವನ್ನುಚ್ಚಾವಚಾ ಗಿರಃ।
ಮುದಿತಾನಾಮರಣ್ಯೇಷು ವಸತಾಂ ಮೃಗಪಕ್ಷಿಣಾಮ್ ॥೭॥

ಅರಣ್ಯದಲ್ಲಿ ಸಂತೋಷದಿಂದ ವಾಸಿಸುವ ಮೃಗಪಕ್ಷಿಗಳ ವಿವಿಧ ಕಲರವಗಳು

ಮನಸ್ಸಿಗೆ, ಕಿವಿಗಳಿಗೆ ಆನಂದ ನೀಡುತ್ತವೆ. ಅದನ್ನು ಕೇಳುತ್ತಾ ಸಂತೋಷದಿಂದ ಮೃಗಪಕ್ಷಿಗಳೊಂದಿಗೆ ಕಾಡಿನಲ್ಲಿ ವಾಸಿಸುವೆನು.

ಆಜಿಘ್ರನ್ ಪೇಶಲಾನ್ ಗಂಧಾನ್ ಫುಲ್ಲಾನಾಂ ವೃಕ್ಷವಿರುಧಾಮ್ ।
ನಾನಾರೂಪಾನ್ ವನೇ ಪಶ್ಯನ್ ರಮಣೀಯಾನ್ ವನೌಕಸಃ ॥೮॥

ಅರಳಿರುವ ಮರ-ಗಿಡ-ಬಳ್ಳಿಗಳಿಂದ ಮನೋಹರವಾದ ಹೂವುಗಳ ಸುಗಂಧವನ್ನು ಆಘ್ರಾಣಿಸುತ್ತೇನೆ. ನಾನಾರೂಪಗಳಿಂದ ಮನೋಹರವಾದ ವನವಾಸಿಗಳನ್ನು ನೋಡುತ್ತಾ ಕಾಲಕಳೆಯುತ್ತೇನೆ.

ವಾನಪ್ರಸ್ಥಜನಸ್ಯಾಪಿ ದರ್ಶನಂ ಕುಲವಾಸಿನಾಮ್ ।
ನಾಪ್ರಿಯಾಣ್ಯಾಚರಿಷ್ಯಾಮಿ ಕಿಂ ಪುನರ್ಗ್ರಾಮವಾಸಿನಾಮ್ ॥೯॥

ಅರಣ್ಯದಲ್ಲಿ ವಾನಪ್ರಸ್ಥಾಶ್ರಮದಲ್ಲಿರುವವರನ್ನು ಗುರುಕುಲವಾಸಿಗಳಾದ ಬ್ರಹ್ಮಚಾರಿಗಳನ್ನು ಆಗಾಗ ಸಂದರ್ಶಿಸುತ್ತೇನೆ. ಕಾಡಿನಲ್ಲಿರುವ ಯಾವುದೇ ಪ್ರಾಣಿಗಳಿಗೂ ನಾನು ಅಪ್ರಿಯವನ್ನು ಎಣಿಸುವುದಿಲ್ಲ. ಇನ್ನು ಗ್ರಾಮಗಳಲ್ಲಿ ವಾಸಿಸುವ ಜನರಿಗೆ ಅಪ್ರಿಯವಾದ ಕೆಲಸವನ್ನು ಹೇಗೆ ತಾನೇ ಮಾಡುವೆನು?

ಏಕಾಂತಶೀಲೀ ವಿಮೃಶನ್ ಪಕ್ವಾಪಕ್ವೇನ ವರ್ತಯನ್ ।
ಪಿತೄನ್ ದೇವಾಂಶ್ಚ ವನ್ಯೇನ ವಾಗ್ಭಿರದ್ಭಿಶ್ಚ ತರ್ಪಯನ್ ॥೧೦॥

ನಿರ್ಜನವಾದ ಸ್ಥಳದಲ್ಲಿ ಧ್ಯಾನನಿರತನಾಗುತ್ತೇನೆ. ಪಕ್ವವಾದ ಆಹಾರವೇ ಆಗಿರಲಿ ಅಪಕ್ವವಾದ ಆಹಾರವೇ ಆಗಿರಲಿ ಅದರಿಂದಲೇ ದೇಹಧಾರಣೆಯನ್ನು ಮಾಡುವೆನು. ಪಿತೃಗಳನ್ನು ಮತ್ತು ದೇವತೆಗಳನ್ನು ಕಾಡಿನಲ್ಲಿ ಸಿಗುವ ವಸ್ತುವಿನಿಂದಲೂ ಮತ್ತು ಮಧುರವಾದ ಮಾತಿನಿಂದಲೂ ತೃಪ್ತಿಪಡಿಸುತ್ತೇನೆ.

ಏವಮಾರಣ್ಯಶಾಸ್ತ್ರಾಣಾಮುಗ್ರಮುಗ್ರತರಂ ವಿಧಿಮ್ ।
ಸೇವಮಾನಃ ಪ್ರತೀಕ್ಷಿಷ್ಯೇ ದೇಹಸ್ಯಾಸ್ಯ ಸಮಾಪನಮ್ ॥೧೧॥

ಹೀಗೆ ಅರಣ್ಯಕಶಾಸ್ತ್ರವಿಧಿಗೆ ಅನುಗುಣವಾಗಿ ಕಠಿಣವಾದ ವಿಧಿಯನ್ನು ಆಚರಿಸುವೆನು. ಉಗ್ರವಾದ ನಿಯಮಗಳನ್ನು ಹಿಡಿದು ಈ ದೇಹದ ಅವಸಾನ-ಕಾಲವನ್ನು ನಿರೀಕ್ಷಿಸುವೆನು.

ಅಥವೈಕೋऽಹಮೇಕಾಹಮೇಕೈಕಸ್ಮಿನ್ ವನಸ್ಪತೌ।
ಚರನ್ ಭೈಕ್ಷ್ಯಂ ಮುನಿರ್ಮುಂಡಃ ಕ್ಷಪಯಿಷ್ಯೇ ಕಲೇವರಮ್ ॥೧೨॥

ನಾನು ಮೌನವನ್ನು ಆಚರಿಸುತ್ತಾ ತಲೆಯನ್ನು ಮುಂಡನ ಮಾಡಿಕೊಂಡು ಸನ್ಯಾಸಿಯಾಗಿ ಪ್ರತಿದಿನ ಕೇವಲ ಒಂದೊಂದೇ ವೃಕ್ಷದಿಂದ ಹಣ್ಣನ್ನು ತೆಗೆದು-ಕೊಳ್ಳುತ್ತಾ ಈ ಶರೀರವನ್ನು ಕ್ಷಯಿಸುತ್ತೇನೆ.

ಪಾಂಸುಭಿಃ ಸಮವಚ್ಛನ್ನಃ ಶೂನ್ಯಾಗಾರಪ್ರತಿಶ್ರಯಃ।
ವೃಕ್ಷಮೂಲನಿಕೇತೋ ವಾ ತ್ಯಕ್ತಸರ್ವಪ್ರಿಯಾಪ್ರಿಯಃ ॥೧೩॥

ಯಾರೂ ಇಲ್ಲದ ಕಾಡಿನಲ್ಲಿ ಧೂಳಿನಿಂದ ಬರಿದಾದ ಮನೆಯಲ್ಲಿ ಇಲ್ಲವೇ ವೃಕ್ಷದ ಬುಡದಲ್ಲಿ ವಾಸ ಮಾಡುವೆನು. ಪ್ರಿಯವಾದ ಮತ್ತು ಅಪ್ರಿಯವಾದವು-ಗಳೆರಡನ್ನು ಪರಿತ್ಯಾಗ ಮಾಡುವೆನು.

ನ ಶೋಚನ್ನ ಪ್ರಹೃಷ್ಯಂಶ್ಚ ತುಲ್ಯನಿಂದಾತ್ಮಸಂಸ್ತುತಿಃ।
ನಿರಾಶೀರ್ನಿರ್ಮಮೋ ಭೂತ್ವಾ ನಿರ್ದ್ವಂದ್ವೋ ನಿಷ್ಪರಿಗ್ರಹಃ ॥೧೪॥

ಸಂತೋಷ ದುಃಖ ಎರಡನ್ನು ತೊರೆಯುವೆನು. ನಿಂದೆ ಮತ್ತು ಸ್ತುತಿಯನ್ನು ಸಮಾನವಾಗಿ ಕಾಣುವೆನು. ಆಸೆ-ಮಮಕಾರಗಳನ್ನು ತೊರೆಯುತ್ತೇನೆ. ಸುಖ-ದುಃಖಾದಿ ದ್ವಂದ್ವಗಳಿಂದ ದೂರಸರಿದು, ಯಾವುದೇ ವಸ್ತುಗಳನ್ನು ಪರಿಗ್ರಹಿಸು-ವುದಿಲ್ಲ.

ಆತ್ಮಾರಾಮಃ ಪ್ರಸನ್ನಾತ್ಮಾ ಜಡಾಂಧಬಧಿರಾಕೃತಿಃ।
ಅಕುರ್ವಾಣಃ ಪರೈಃ ಕಾಂಚಿತ್ ಸಂವಿದಂ ಜಾತು ಕೇನಚಿತ್ ॥೧೫॥

ಯೋಗಬಲದಿಂದ ಪ್ರಸನ್ನ ಮನಸ್ಕನಾಗುತ್ತೇನೆ. ಮಂದಬುದ್ಧಿಯವನೂ, ಕುರುಡನು, ಕಿವುಡನು ಇದ್ದ ಹಾಗೆ ಬೇರೆ ಯಾರನ್ನು ಗಮನಿಸದೆ ನನ್ನಲ್ಲಿ ನಾನು ಆನಂದಿಸುವೆನು. ಬೇರೆಯವರಿಂದ ಯಾವುದೇ ಕಾರ್ಯವನ್ನು ಮಾಡಿಸಿಕೊಳ್ಳುವುದಿಲ್ಲ, ಯಾರೊಡನೆಯೂ ಮಾತನಾಡುವುದಿಲ್ಲ.

ಜಂಗಮಾಜಂಗಮಾನ್ ಸರ್ವಾನವಿಹಿಂಸಶ್ಚತುರ್ವಿಧಾನ್ ।
ಪ್ರಜಾಃ ಸರ್ವಾಃ ಸ್ವಧರ್ಮಸ್ಥಾಃ ಸಮಃ ಪ್ರಾಣಭೃತಃ ಪ್ರತಿ ॥೧೬॥

ಜರಾಯುಜ, ಸ್ವೇದಜ, ಅಂಡಜ, ಉದ್ಭಿಜಗಳೆಂಬ ಜಂಗಮ-ಅಜಂಗಮ ಜೀವಿಗಳಲ್ಲಿ ಒಂದನ್ನೂ ನಾನು ಹಿಂಸಿಸುವವನಲ್ಲ. ಸ್ವಧರ್ಮದಲ್ಲಿರುವ ಅಥವಾ ಇಂದ್ರಿಯಪೋಷಕರಾದ ಪ್ರಜೆಗಳೆಲ್ಲರನ್ನು ಸಮಬುದ್ಧಿಯಿಂದ ನೋಡುವೆನು.

ನಚಾಪ್ಯವಹಸನ್ ಕಂಚಿನ್ನ ಕುರ್ವನ್ ಭ್ರಕೃಟೀಃ ಕ್ವಚಿತ್ ।
ಪ್ರಸನ್ನವದನೋ ನಿತ್ಯಂ ಸರ್ವೇಂದ್ರಿಯಸುಸಂಯತಃ ॥೧೭॥

ಯಾರನ್ನು ನೋಡಿ ಹಾಸ್ಯ ಮಾಡುವುದಿಲ್ಲ. ಯಾರ ಮುಂದೆಯೂ ಹುಬ್ಬುಗಂಟಿಕ್ಕುವುದಿಲ್ಲ. ಎಲ್ಲ ಇಂದ್ರಿಯಗಳನ್ನು ನಿಯಮಬದ್ಧವಾಗಿರಿಸಿ ಯಾವಾಗಲೂ ಪ್ರಸನ್ನಮುಖದಿಂದಲೇ ಇರುತ್ತೇನೆ.

ಅಪೃಚ್ಛನ್ ಕಸ್ಯಚಿನ್ಮಾರ್ಗಂ ವ್ರಜನ್ ಯೇನೈವ ಕೇನಚಿತ್ ।
ನ ದೇಶಂ ನ ದಿಶಂ ಕಾಂಚಿದ್ ಗಂತುಮಿಚ್ಛನ್ ವಿಶೇಷತಃ ॥೧೮॥

ಅರಣ್ಯದಲ್ಲಿ ಸಂಚರಿಸುವಾಗ ಯಾವ ಹಾದಿ ಎಲ್ಲಿಗೆ ಹೋಗುತ್ತದೆಂದು ಯಾರನ್ನೂ ಕೇಳುವುದಿಲ್ಲ. ನಾನು ಇದೇ ದೇಶಕ್ಕೆ ಹೋಗಬೇಕೆಂದು ಈ ದಿಕ್ಕಿಗೆ ಹೋಗಬೇಕೆಂದು ಇಚ್ಛಿಸುವುದಿಲ್ಲ. ಸಿಕ್ಕಿದ ಮಾರ್ಗದಲ್ಲಿ ಪ್ರಯಾಣ ಬೆಳೆಸುತ್ತೇನೆ.

ಗಮನೇ ನಿರಪೇಕ್ಷಶ್ಚ ಪಶ್ಚಾದನವಲೋಕಯನ್ ।
ಋಜುಃ ಪ್ರಣಿಹಿತೋ ಗಚ್ಛನ್ ತ್ರಸಂಸ್ಥಾವರವರ್ಜಕಃ ॥೧೯॥

ಇಂಥ ಸ್ಥಳದಲ್ಲೇ ವಿಶ್ರಾಂತಿ ಪಡೆಯಬೇಕೆಂದೂ ಸಹ ಅಪೇಕ್ಷಿಸುವುದಿಲ್ಲ. ಮುಂದೆ ಹೋಗುವಾಗ ಹಿಂದಕ್ಕೆ ನೋಡಲಾರೆನು. ನೇರವಾಗಿ ಹೋಗುತ್ತಲೇ ಇರುತ್ತೇನೆ. ಅಂತರ್ಮುಖಿಯಾಗಿರುತ್ತೇನೆ. ಸ್ಥಾವರ-ಜಂಗಮಗಳಿಗೆ ಯಾವುದೇ ರೀತಿಯಲ್ಲಿಯೂ ತೊಂದರೆಯನ್ನು ನೀಡುವುದಿಲ್ಲ.

ಟಿಪ್ಪಣಿ - ತ್ರಸಂಸ್ಥಾವರವರ್ಜಕ ಇತ್ಯತ್ರ ತ್ರಸನ್ ಪಾಪಾತ್ ತ್ರಸನ್ । ಸ್ಥಾವರವರ್ಜಕಃ ಸ್ಥಾವರಾಣಾಂ ಛೇದಾದಿವರ್ಜಕಃ । ಮಧ್ಯಮಪದಲೋಪೀ ಸಮಾಸಃ ॥ ಪಾಪಕಾರ್ಯಗಳಿಂದ ರಹಿತನಾಗಿರುತ್ತೇನೆ. ಸ್ಥಾವರಪದಾರ್ಥಗಳಿಗೆ ಛೇದನಾದಿಗಳನ್ನು ಮಾಡಲಾರೆನು ಎಂದಭಿಪ್ರಾಯ.

ಸ್ವಭಾವಸ್ತು ಪ್ರಯಾತ್ಯಗ್ರೇ ಪ್ರಭವಂತ್ಯಶನಾನ್ಯಪಿ ।
ದ್ವಂದ್ವಾನಿ ಚ ವಿರುದ್ಧಾನಿ ತಾನಿ ಸರ್ವಾಣ್ಯಚಿಂತಯನ್ ॥೨೦॥

ಹುಟ್ಟಿನಿಂದ ಬಂದಿರುವ ಸ್ವಭಾವಕ್ಕೆ ಅನುಗುಣವಾಗಿ ಮುಂದೆ ಸಾಗುತ್ತಿರುತ್ತೇನೆ. ಹಾದಿಯಲ್ಲಿ ಸಿಕ್ಕ ಹಣ್ಣು, ಗೆಡ್ಡೆ-ಗೆಣಸುಗಳನ್ನು ತಿನ್ನುತ್ತಾ ಮುಂದೆ ಸಾಗುತ್ತೇನೆ. ಆ ಸಮಯದಲ್ಲಿ ವಿರುದ್ಧಧರ್ಮಗಳಿರುವ ದ್ವಂದ್ವಗಳನ್ನು ಚಿಂತಿಸುವುದಿಲ್ಲ. ಆಯಾ ಕಾಲಕ್ಕೆ ಸಿಕ್ಕ ಆಹಾರವು ಅಲ್ಪವೇ ಆಗಿರಲಿ, ರುಚಿಯಾಗಿರಲಿ, ಉಣ್ಣುವುದಕ್ಕೆ ಸಾಧ್ಯವಿಲ್ಲದಂತಿರಲಿ. ಅದರಿಂದಲೇ ಕಾಲವನ್ನು ಕಳೆಯುವೆನು. ಯಾವುದಕ್ಕೂ ಚಿಂತೆ ಮಾಡುವುದಿಲ್ಲ.

ಅಲ್ಪಂ ವಾ ಸ್ವಾದು ವಾ ಭೋಜ್ಯಂ ಪೂರ್ವಾಲಾಭೇನ ಜಾತುಚಿತ್ ।
ಅನ್ಯೇಷ್ವಪಿ ಚರಂಲ್ಲಾಭಮಲಾಭೇ ಸಪ್ತ ಪೂರಯನ್ ॥೨೧॥

ಭಿಕ್ಷೆಯು ಸ್ವಲ್ಪವೇ ಸಿಕ್ಕಲಿ, ರುಚಿಕರವಿಲ್ಲದ್ದೇ ಇರಲಿ, ಅದನ್ನೇ ಅಮೃತವೆಂದು ಭಾವಿಸಿ ಉಣ್ಣುತ್ತೇನೆ. ಒಂದುವೇಳೆ ಮೊದಲೇ ಮನೆಯಲ್ಲಿ ಭಿಕ್ಷೆ ದೊರಕದಿದ್ದರೆ ಎರಡು, ಮೂರು, ಹೀಗೆ ಏಳು ಮನೆಗಳಿಗೆ ಹೋಗುತ್ತೇನೆ. ಏಳನೆಯ ಮನೆಯಲ್ಲಿಯೂ ಭಿಕ್ಷೆಯು ಸಿಗದಿದ್ದರೆ ಎಂಟನೆಯ ಮನೆಗೆ ಹೋಗುವುದಿಲ್ಲ.

ವಿಧೂಮೇ ನ್ಯಸ್ತಮುಸಲೇ ವ್ಯಂಗಾರೇ ಭುಕ್ತವಜ್ಜನೇ।
ಅತಿತಪಾತ್ರಸಂಚಾರೇ ಕಾಲೇ ವಿಗತಭಿಕ್ಷುಕೇ ॥೨೨॥

ಏಕಕಾಲಂ ಚರನ್ ಭೈಕ್ಷ್ಯಂ ತ್ರೀನಥ ದ್ವೇ ಚ ಪಂಚ ವಾ।
ಸ್ನೇಹಪಾಶಂ ವಿಮುಚ್ಯಾಹಂ ಚರಿಷ್ಯಾಮಿ ಮಹೀಮಿಮಾಮ್ ॥೨೩॥

ಮನೆಯಲ್ಲಿ ಹೊಗೆಯಾಡದೆ ಇರುವಾಗ, ಒನಕೆಯ ಶಬ್ದವು ನಿಂತಾಗ, ಒಲೆಯಲ್ಲಿ ಬೆಂಕಿ ಆರಿದ ನಂತರ, ಮನೆಯವರೆಲ್ಲರೂ ಭೋಜನ ಮಾಡಿದ ನಂತರ, ಅಡುಗೆಯ ಪಾತ್ರೆಯನ್ನು ಊಟಕ್ಕಾಗಿ ತೆಗೆದುಕೊಂಡು ಮತ್ತೊಂದು ಕಡೆ ಹೋಗುತ್ತಿರುವಾಗ, ಭಿಕ್ಷುಕರೆಲ್ಲರೂ ಭಿಕ್ಷೆಯನ್ನು ತೆಗೆದುಕೊಂಡು ಹೋದ ನಂತರ, ಎರಡು, ಮೂರು ಅಥವಾ ಐದು ಮನೆಗಳಿಗೆ ಹೋಗಿ ದಿನಕ್ಕೆ ಒಂದೇ ಬಾರಿ ಭಿಕ್ಷೆ ಬೇಡುತ್ತೇನೆ. ಸ್ನೇಹವೆಂಬ ಪಾಶವನ್ನು ಸಂಪೂರ್ಣವಾಗಿ ಕಡಿದು ಮುಕ್ತನಂತೆ ಈ ಭೂಮಿಯಲ್ಲಿ ಸಂಚರಿಸುವೆನು.

ಅಲಾಭೇ ಸತಿ ವಾ ಲಾಭೇ ಸಮದರ್ಶೀ ಮಹಾತಪಾಃ।
ನ ಜಿಜೀವಿಷುವತ್ ಕಿಂಚಿನ್ನ ಮುಮೂರ್ಷುವದಾಚರನ್ ॥೨೪॥

ಲಾಭನಷ್ಟಗಳೆರಡನ್ನು ಒಂದೇ ವಿಧವಾಗಿ ಭಾವಿಸುತ್ತ, ಮಹಾತಪಸ್ಸಿನಲ್ಲಿ ನೆಲೆಗೊಳ್ಳುತ್ತೇನೆ. ಜೀವಿಸಲು ಬಯಸುವವನು ಧನಾದಿಗಳನ್ನು ಸಂಗ್ರಹಿಸುವಂತೆ ನಾನು ಸಂಗ್ರಹಿಸುವುದಿಲ್ಲ. ಸಾಯಲು ಬಯಸುವವನಂತೆ ಅನ್ನಾದಿಗಳನ್ನು ತ್ಯಾಗ ಮಾಡುವುದೂ ಇಲ್ಲ.

ಜೀವಿತಂ ಮರಣಂ ಚೈವ ನಾಭಿನಂದನ್ನ ಚ ದ್ವಿಷನ್।
ವಾಸ್ಯೈಕಂ ತಕ್ಷತೋ ಬಾಹುಂ ಚಂದನೇನೈಕಮುಕ್ಷತಃ।
ನಾಕಲ್ಯಾಣಂ ನ ಕಲ್ಯಾಣಂ ಚಿಂತಯನ್ನುಭಯೋಸ್ತಯೋಃ ॥೨೫॥

ಬದುಕಿರಬೇಕೆಂದಾಗಲಿ, ಸಾಯಬೇಕೆಂದಾಗಲಿ ಉದ್ದೇಶವಿರುವ ಮನುಷ್ಯನಂತಲ್ಲ. ಜೀವನಕ್ಕೂ-ಮರಣಕ್ಕೂ ನಾನು ಯಾವ ವ್ಯತ್ಯಾಸವನ್ನು ಕಾಣುವುದಿಲ್ಲ.

ನನ್ನ ತೋಳನ್ನು ಕತ್ತಿಯಿಂದ ಕಡಿಯತಕ್ಕವನೂ, ನನ್ನ ತೋಳಿಗೆ ಚಂದನವನ್ನು ಲೇಪಮಾಡತಕ್ಕವನೂ, ಇಬ್ಬರಲ್ಲಿಯೂ ಸಮಾನಭಾವದಿಂದ ಕಾಣುವೆನು. ಇವರಿಬ್ಬರೂ ನನ್ನ ದೃಷ್ಟಿಯಲ್ಲಿ ಸಮಾನರೇ ಆಗುತ್ತಾರೆ. ನನಗೆ ಸ್ನೇಹಿತರೂ ಇಲ್ಲ. ದ್ವೇಷಿಯೂ ಇಲ್ಲ.

ಯಾಃ ಕಾಶ್ಚಿಜ್ಜೀವತಾ ಶಕ್ಯಾಃ ಕರ್ತುಮಭ್ಯುದಯಕ್ರಿಯಾಃ।
ಸರ್ವಾಸ್ತಾಃ ಸಮಭಿತ್ಯಜ್ಯ ನಿಮೇಷಾದಿವ್ಯವಸ್ಥಿತಃ ॥೨೬॥

ಬದುಕಿರುವವನು ತನ್ನ ಕ್ಷೇಮಕ್ಕಾಗಿ ಮಾಡಬಹುದಾದ ಕಾರ್ಯಗಳು ಯಾವುದು ಇವೆಯೋ ಅದೆಲ್ಲವನ್ನು ತೊರೆದು ಈ ಶರೀರದಲ್ಲಿ ಆತ್ಮನಿರುವವರೆಗೂ ಅನಿವಾರ್ಯವಾಗಿ ಮಾಡಲೇಬೇಕಾಗುವ ರೆಪ್ಪೆಹೊಡೆಯುವುದು ಸಿಕ್ಕುವ ಭಿಕ್ಷೆಯನ್ನು ಭುಂಜಿಸಲು ಕೈ ಬಾಯಿಗಳನ್ನು ಅಲುಗಾಡಿಸುವುದು, ಇಂಥ ಕಾರ್ಯಗಳನ್ನು ಮಾತ್ರವೇ ಮಾಡುತ್ತೇನೆ.

ಟಿಪ್ಪಣಿ - ನಿಮೇಷಾದಿವ್ಯವಸ್ಥಿತಃ ಇತ್ಯತ್ರ ನಿಮೇಷಾದಿಷು ಚಕ್ಷುಷೋ ರ್ನಿಮೇಷಣೇ ಆದಿಪದೇನ ಉನ್ಮೇಷಣೇ ಚ ಸ್ಥಿತಃ ॥ ಕಣ್ಣು ತೆರೆಯುವುದು ಮುಚ್ಚುವುದು ಮೊದಲಾದವುಗಳನ್ನಷ್ಟೇ ಮಾಡುತ್ತೇನೆಂದಭಿಪ್ರಾಯ.

ತೇಷು ನಿತ್ಯಮಸಕ್ತಶ್ಚ ತ್ಯಕ್ತಸರ್ವೇಂದ್ರಿಯಕ್ರಿಯಃ।
ಸುಪರೀತ್ಯಕ್ತಸಂಕಲ್ಪಃ ಸುನಿರ್ಮುಕ್ತಾತ್ಮಕಲ್ಮಷಃ ॥೨೭॥

ಈ ಶರೀರವ್ಯಾಪಾರಗಳಲ್ಲಿ ಸಂಬಂಧವನ್ನಿಟ್ಟುಕೊಳ್ಳದೆ, ಎಲ್ಲ ಇಂದ್ರಿಯ ವ್ಯಾಪಾರಗಳನ್ನು ತೊರೆದು, ಸಮಸ್ತ ಸಂಕಲ್ಪವನ್ನು ಬಿಟ್ಟು, ಮನಸ್ಸಿನ ಕಲ್ಮಷವನ್ನು ಸಂಪೂರ್ಣ ತೊರೆದು ಶುದ್ಧನಾಗುವೆನು.

ವಿಮುಕ್ತಃ ಸರ್ವಸಂಗೇಭ್ಯೋ ವ್ಯತೀತಃ ಸರ್ವವಾಗುರಾಃ।
ನ ವಶೇ ಕಸ್ಯಚಿತ್ ತಿಷ್ಠನ್ ಸಧರ್ಮಾ ಮಾತರಿಶ್ವನಃ ॥೨೮॥

ಎಲ್ಲ ವಿಧವಾದ ಸಹವಾಸಗಳನ್ನು ತೊರೆದು, ಸಂಸಾರಪಾಶಗಳನ್ನು ಹರಿದು, ಯಾವನೊಬ್ಬನ ಅಧೀನನೂ ಆಗದೇ ಗಾಳಿಯಂತೆ ಸ್ವೇಚ್ಛೆಯಾಗಿ ಸಂಚರಿಸುವೆನು.

ಟಿಪ್ಪಣಿ - ವ್ಯತೀತಃ ಸರ್ವವಾಗುರಾ ಇತ್ಯತ್ರ ಸರ್ವವಾಗುರಾಃ ಸಮಸ್ತ-ಸಂಸಾರಬಂಧನಾನಿ । 'ವಾಗುರಾ ಮೃಗಂಧನೀ' ಇತ್ಯಮರಃ ॥ ಸರ್ವವಾಗುರಾ ಎಂದರೆ ಎಲ್ಲಾ ಬಗೆಯ ಸಂಸಾರಬಂಧನಗಳು ಎಂದಭಿಪ್ರಾಯ.

ವೀತರಾಗಶ್ಚರನ್ನೇವಂ ತುಷ್ಟಿಂ ಪ್ರಾಪ್ಸ್ಯಾಮಿ ಶಾಶ್ವತೀಮ್ ।
ತೃಷ್ಣಯಾ ಹಿ ಮಹತ್ ಪಾಪಮಜ್ಞಾನಾದಸ್ಮಿ ಕಾರಿತಃ ॥೨೯॥

ಹೀಗೆ ವಿರಕ್ತಿಯಿಂದ ಸಂಚರಿಸುತ್ತಾ ನಿಜವಾದ ಮನಃಶಾಂತಿಯನ್ನು ಹೊಂದುವೆನು. ಅಜ್ಞಾನದಿಂದ ಉಂಟಾದ ರಾಜ್ಯದ ಆಸೆಯು ನನ್ನಿಂದ ಬಹಳ ದೊಡ್ಡ ಪಾಪವನ್ನು ಮಾಡಿಸಿಬಿಟ್ಟಿತು.

ಕುಶಲಾಕುಶಲಾನ್ಯೇಕೇ ಕೃತ್ವಾ ಕರ್ಮಾಣಿ ಮಾನವಾಃ ।
ಕಾರ್ಯಕಾರಣಸಂಶ್ಲಿಷ್ಟಂ ಸ್ವಜನಂ ನಾಮ ಬಿಭ್ರತಿ ॥೩೦॥

ಕೆಲವರು ಶುಭಕರ್ಮಗಳನ್ನು ಮಾಡುತ್ತಾರೆ. ಜೊತೆಯಲ್ಲಿ ಅಶುಭಕರ್ಮಗಳನ್ನು ಮಾಡುತ್ತಾರೆ. ತಮ್ಮ ಸುಖಕ್ಕಾಗಿ ಹೆಂಡತಿ-ಮಕ್ಕಳ ಪೋಷಣೆಯಲ್ಲಿ ರತರಾಗುತ್ತಾರೆ.

ವಿವರಣೆ - ನ ವಾ ಅರೇ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತಿ । ಆತ್ಮನಸ್ತು ಕಾಮಾಯ ಪತಿಃ ಪ್ರಿಯೋ ಭವತಿ ॥ ಗಂಡನಿಗೆ ಸಂತೋಷವಾಗಬೇಕೆಂಬ ದೃಷ್ಟಿಯಿಂದ ಹೆಂಡತಿಯು ಗಂಡನನ್ನು ಪ್ರೀತಿಸುವುದಿಲ್ಲ. ತನ್ನ ಆಸೆಯನ್ನು ನೆರವೇರಿಸಿಕೊಳ್ಳುವುದಕ್ಕಾಗಿ ಗಂಡನನ್ನು ಪ್ರೀತಿಸುತ್ತಾಳೆ ಎಂಬ ಉಪನಿಷತ್ತಿನ ಮಾತಿನಂತೆ ಪ್ರತಿಯೊಬ್ಬರೂ ಕೂಡ ಜಗತ್ತಿನಲ್ಲಿ ಸ್ವಾರ್ಥಿಗಳೇ ಆಗಿರುತ್ತಾರೆ. ಮಕ್ಕಳನ್ನೂ ಕೂಡ ತಮ್ಮ ಹಿತಕ್ಕಾಗಿಯೇ, ತಮ್ಮ ಸಂತೋಷಕ್ಕಾಗಿಯೇ ಪ್ರೀತಿ ಮಾಡುತ್ತಾರೆ. ಮಕ್ಕಳಿಗೆ ಪ್ರೀತಿ ಪಡಿಸಬೇಕೆಂಬ ಉದ್ದೇಶವೂ ಕೂಡ ಯಾರಿಗೂ ಇರುವುದಿಲ್ಲ. ಗಂಡನೂ ಕೂಡ ತನ್ನ ಸುಖಕ್ಕಾಗಿಯೇ ಹೆಂಡತಿಯನ್ನು ಪ್ರೀತಿಸುತ್ತಾನೆ. ಹೀಗೆ ಸಮಸ್ತಜಗತ್ತು ಸ್ವಾರ್ಥಪರವಾಗಿದೆ.

ಆಯುಷೋऽಂತೇ ಪ್ರಹಾಯೇದಂ ಕ್ಷೀಣಪ್ರಾಣಂ ಕಲೇವರಮ್ ।
ಪ್ರತಿಗೃಹ್ಣಾತಿ ತತ್ ಪಾಪಂ ಕರ್ತುಃ ಕರ್ಮಫಲಂ ಹಿ ತತ್ ॥೩೧॥

ಒಬ್ಬನು ತನ್ನ ಆಯುಷ್ಯದ ಕೊನೆಯಲ್ಲಿ ಆತ್ಮನು ಶರೀರವನ್ನು ಬಿಟ್ಟು ತಾನು ಮಾಡಿದ ಪಾಪದ ಫಲವನ್ನು ಅನುಭವಿಸುವುದಕ್ಕಾಗಿ ಇಂಥ ಶರೀರಗಳನ್ನು ಪಡೆಯುವನು. ಏಕೆಂದರೆ ಮಾಡಿದ ಕರ್ಮಕ್ಕೆ ಫಲವನ್ನು ಅನುಭವಿಸಿಯೇ ತೀರ-ಬೇಕು.

ಏವಂ ಸಂಸಾರಚಕ್ರೇऽಸ್ಮಿನ್ ವ್ಯಾವಿದ್ಧೇ ರಥಚಕ್ರವತ್ ।
ಸಮೇತಿ ಭೂತಗ್ರಾಮೋऽಯಂ ಭೂತಗ್ರಾಮೇಣ ಕಾರ್ಯವಾನ್ ॥೩೨॥

ರಥದ ಚಕ್ರದಂತೆ ನಿರಂತರವಾಗಿ ಸಾಗುವ ಈ ಸಂಸಾರರಥದಲ್ಲಿ ಭೂತ-ಗ್ರಾಮವು (ಪ್ರಾಣಿಸಮೂಹವು) ಪಂಚಭೂತಗಳ ಕಾರ್ಯವಶದಿಂದ ಮತ್ತೊಂದು ಪ್ರಾಣಿಗಳ ಸಮುದಾಯದೊಡನೆ ಬೆರೆಯುತ್ತಾರೆ. (ಬಂಧು-ಮಿತ್ರರ ರೂಪದಿಂದ)

ಟಿಪ್ಪಣಿ - ಸಮೇತಿ ಭೂತಗ್ರಾಮೋऽಯಂ ಭೂತಗ್ರಾಮೇಣ ಕಾರ್ಯವಾನ್ ಇತ್ಯತ್ರ ಭೂತಗ್ರಾಮೇಣ ಪಂಚಮಹಾಭೂತಸಮೂಹೇನ ಕಾರ್ಯೋ ಯೋ ದೇಹಸ್ತದ್ವಾನ್ ಅಯಂ ಭೂತಗ್ರಾಮಃ ಪ್ರಾಣಿಸಮೂಹಃ ಸಮೇತಿ ಇತಿ ಯೋಜನಾ ॥ ಪಂಚಮಹಾಭೂತಗಳ ಸಮೂಹದಿಂದ ರಚಿತವಾದ ಈ ದೇಹ ಎಂದರ್ಥ.

ಜನ್ಮಮೃತ್ಯುಜರಾವ್ಯಾಧಿವೇದನಾಭಿರುಪದ್ರುತಮ್ ।
ಅಪಾರಮಿಮಮಚಾಸ್ವಸ್ಥಂ ಸಂಸಾರಂ ತ್ಯಜತಃ ಸುಖಮ್ ॥೩೩॥

ಹುಟ್ಟು, ಸಾವು, ಮುಪ್ಪು ರೋಗ, ವೇದನೆ ಮುಂತಾದ ಕಷ್ಟಗಳಿಂದ ತುಂಬಿದ ಪಾರವೇ ಇಲ್ಲದೆ ಸಮುದ್ರದಂತಿರುವ ಈ ಸಂಸಾರವನ್ನು ಬಿಟ್ಟವನೇ ನಿಜವಾದ ಸುಖಿಯಾದವನು.

ದಿವಃ ಪತತ್ಸು ದೇವೇಷು ಸ್ಥಾನೇಭ್ಯಶ್ಚ ಮಹರ್ಷಿಷು ।
ಕೋ ಹಿ ನಾಮ ಭವೇನಾರ್ಥೀ ಭವೇತ್ ಕಾರಣತತ್ತ್ವವಿತ್॥೩೪॥

ಸ್ವರ್ಗದಲ್ಲಿರುವ ದೇವತೆಗಳು ತಮ್ಮ ಪುಣ್ಯಾವಸಾನದಲ್ಲಿ ಕೆಳಕ್ಕೆ ಬೀಳುತ್ತಾರೆ.

ಮಹರ್ಷಿಗಳು ತಮ್ಮ ಪದವಿಯನ್ನು ಕಳೆದುಕೊಳ್ಳುತ್ತಾರೆ. ಇದನ್ನು ತಿಳಿದ ಯಾವ ಜ್ಞಾನಿಯು ಜನ್ಮ-ಮೃತ್ಯುರೂಪವಾದ ಈ ಸಂಸಾರದಲ್ಲಿ ಆಸೆಯುಳ್ಳವನಾಗಲು ಸಾಧ್ಯ!

ವಿವರಣೆ - ಸ್ವರ್ಗವು ಶಾಶ್ವತವಲ್ಲ. ಅವರವರ ಸ್ಥಾನಗಳೂ ಕೂಡ ಶಾಶ್ವತವಲ್ಲ. ಮೋಕ್ಷವು ಮಾತ್ರ ಶಾಶ್ವತವಾಗಿದೆ. ಆದ್ದರಿಂದ ಸ್ವರ್ಗಕ್ಕೋಸ್ಕರ ಯಾವುದೇ ಸಾಧನೆಗಳನ್ನು ಮಾಡುವುದು ತನ್ನ ಸ್ಥಾನಮಾನಗಳ ಉಳಿಯುವಿಕೆಗಾಗಿ ಸಾಧನೆಗಳನ್ನು ಮಾಡುವುದು ಸಂಪೂರ್ಣ ವ್ಯರ್ಥವಾದ ಕಾರ್ಯವಾಗಿದೆ. ಭಗವಂತನ ಪ್ರೀತಿಯನ್ನು ಅಪೇಕ್ಷಿಸಿ, ಮೋಕ್ಷಕ್ಕೋಸ್ಕರ ಸಾಧನೆ ಮಾಡುವುದಷ್ಟೇ ಅತ್ಯಂತ ಸಾರ್ಥಕವಾದ ಕಾರ್ಯವಾಗಿದೆ.

ಕೃತ್ವಾಹಿ ವಿವಿಧಂ ಕರ್ಮ ತತ್ತದ್ ವಿವಿಧಲಕ್ಷಣಮ್।
ಪಾರ್ಥಿವೈರ್ನೃಪತಿಃ ಸ್ವಲ್ಪೈಃ ಕಾರಣೈರೇವ ಬದ್ಧ್ಯತೇ ॥೩೫॥

ಅಲ್ಪಸುಖದ ಅಪೇಕ್ಷೆಯಿಂದಲೇ ರಾಜರು ಬೇರೆ ಬೇರೆ ಲಕ್ಷಣಗಳುಳ್ಳ ವಿವಿಧ ಕಾರ್ಯದಲ್ಲಿ ಪ್ರವರ್ತಿಸಿ ಒಬ್ಬರಿಗೊಬ್ಬರು ಸ್ವಲ್ಪ ಕಾರಣಕ್ಕಾಗಿ ಹೊಡೆದಾಡಿ ಸಾಯುವರು.

ತಸ್ಮಾತ್ ಪ್ರಜ್ಞಾಮೃತಮಿದಂ ಚಿರಾನ್ಮಾಂ ಪ್ರತ್ಯುಪಸ್ಥಿತಮ್।
ತತ್ ಪ್ರಾಪ್ಯ ಪ್ರಾರ್ಥಯೇ ಸ್ಥಾನಮವ್ಯಯಂ ಶಾಶ್ವತಂ ಧ್ರುವಮ್ ॥೩೫॥

ಅರ್ಜುನ! ಆದ್ದರಿಂದ ಈ ಜ್ಞಾನವೆಂಬ ಅಮೃತವು ಬಹುಕಾಲದಿಂದ ನನ್ನ ಮನಸ್ಸನ್ನು ಸೆಳೆಯುತ್ತಿದೆ. ನಾನು ಶಾಶ್ವತವೂ ನಿಷ್ಕಲ್ಮಶವೂ ಆದ ಸ್ಥಾನವನ್ನು ಪಡೆಯಲು ಬಯಸುವೆನು.

ಏತಯಾ ಸತತಂ ಧೃತ್ಯಾ ಚರನ್ನೇವಂಪ್ರಕಾರಯಾ।
ದೇಹಂ ಸಂಸ್ಥಾಪಯಿಷ್ಯಾಮಿ ನಿರ್ಭಯಂ ಮಾರ್ಗಮಾಸ್ಥಿತಃ ॥೩೬॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ನವಮೋಽಧ್ಯಾಯಃ ॥೯॥

ನಾನು ನನ್ನ ಬುದ್ಧಿಯು ಮೂಲಕವಾಗಿ ಈ ಹಿಂದೆ ಹೇಳಿದ ರೀತಿಯಲ್ಲಿ ಕಾಡಿನಲ್ಲಿ ಆಲೆದಾಡುತ್ತಾ, ಜನ್ಮ-ಮೃತ್ಯು-ಜರಾ-ವ್ಯಾಧಿ-ವೇದನೆಗಳಿಂದ ಆಕ್ರಾಂತವಾದ ಈ ದೇಹವನ್ನು ಭಯವಿಲ್ಲದ ದಾರಿಯನ್ನು ಅರೆಸಿ ಮುಕ್ತಿಗೊಳಿಸುತ್ತೇನೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿನೆಯ ಅಧ್ಯಾಯವು ಮುಗಿಯಿತು.

*****

೧೦. ಹತ್ತನೆಯ ಅಧ್ಯಾಯ

ಯುಧಿಷ್ಠಿರನಿಗೆ ಭೀಮಸೇನದೇವರ ಸಲಹೆ.

ಭೀಮಃ

ಶ್ರೋತ್ರಿಯಸ್ಯೇವ ತೇ ರಾಜನ್ ಮಂದಕಸ್ಯಾವಿಪಶ್ಚಿತಃ।
ಅನುವಾಕಹತಾ ಬುದ್ಧಿರ್ನೈಷಾ ತತ್ತ್ವಾರ್ಥದರ್ಶಿನೀ ॥೧॥

ರಾಜನೇ ! ಈಗ ನೀನು ಹೇಳುವ ಮಾತುಗಳನ್ನು ಕೇಳಿದರೆ, ಕೇವಲ ವೇದವನ್ನು ಕಂಠಪಾಠ ಮಾಡಿ, ವೇದಾರ್ಥವನ್ನು ತಿಳಿಯದ ಮೂರ್ಖನಾದ, ವಿವೇಚನಾಶಕ್ತಿ ಇಲ್ಲದ ಮಂದಬುದ್ಧಿಯುಳ್ಳ ಶ್ರೋತ್ರಿಯನ ಬಾಯಿಯಿಂದ ಹೊರಡುವ ಮಾತುಗಳಂತಿರುವ ಈ ನಿನ್ನ ಬುದ್ಧಿಯು ತತ್ತ್ವಾರ್ಥಗಳನ್ನೇನೂ ವಿಮರ್ಶಿಸಿದ ಹಾಗೇ ತೋರುವುದಿಲ್ಲ.

ಟಿಪ್ಪಣಿ - ಅನುವಾಹಕತಾ ಬುದ್ಧಿಃ ಇತ್ಯತ್ರ ಅನುವಾಕಃ ಆಪಾತರಮಣೀಯವೇದವಾಕ್ಯಮ್, ತೇನ ಹತಾ ಬುದ್ಧಿಃ॥ ಅನುವಾಕ ಎಂದರೆ ಆಪಾತರಮಣೀಯವಾದ ವೇದವಾಕ್ಯದಿಂದ.

ಆಲಸ್ಯೇ ಕೃತಚಿತ್ತಸ್ಯ ರಾಜಧರ್ಮಾನಸೂಯತಃ।
ವಿನಾಶೇ ಧಾರ್ತರಾಷ್ಟ್ರಾಣಾಂ ಕಿಂ ಫಲಂ ಭರತರ್ಷಭ ॥೨॥

ಭರತಶ್ರೇಷ್ಠನೇ! ಸೋಮಾರಿತನದಲ್ಲಿಯೇ ಬುದ್ಧಿಯನ್ನು ಸ್ಥಿರಗೊಳಿಸಿ, ರಾಜಧರ್ಮವನ್ನು ನಿಂದಿಸುತ್ತಿರುವ ನೀನು ಆ ಧೃತರಾಷ್ಟ್ರನ ಮಕ್ಕಳನ್ನು ಕೊಲ್ಲಿಸಿ ಯಾವ ಫಲವನ್ನು ಪಡೆದಂತಾಯಿತು?

ಕ್ಷಮಾನುಕಂಪಾ ಕಾರುಣ್ಯಮಾನೃಶಂಸ್ಯಂ ನ ವಿದ್ಯತೇ।
ಕಾಪ್ತ್ರಮಾಚರತೋ ಮಾರ್ಗಮಪಿ ಬಂಧೌ ಸ್ತ್ವದಂತರಾ ॥೩॥

ಕ್ಷತ್ರಿಯರಿಗೆ ವಿಹಿತವಾದ ಧರ್ಮಮಾರ್ಗದಲ್ಲಿ ನಡೆಯುವವನಿಗೆ ತನ್ನ ಬಂಧುಗಳ ವಿಷಯದಲ್ಲಿಯೂ ಕ್ಷಮೆ, ಅನುಕಂಪ, ಕಾರುಣ್ಯ, ಕಾಠಿಣ್ಯ ಇಲ್ಲದಿರುವಿಕೆ ಇತ್ಯಾದಿಗುಣಗಳು ಇರುವುದಿಲ್ಲ. ಹೀಗಿರುವಾಗ ನೀನು ಕ್ಷತ್ರಿಯಕುಲದಲ್ಲಿ ಹುಟ್ಟಿದ್ದರಿಂದ ನಿನ್ನ ಹೃದಯದಲ್ಲಿ ಈ ಗುಣಗಳು ಬರಲು ಹೇಗೆ ಸಾಧ್ಯ?

ಟಿಪ್ಪಣಿ - ಮಾರ್ಗಮಪಿ ಬಂಧೌ ತ್ವದಂತರಾ ಇತ್ಯತ್ರ ತ್ವದಂತರಾ ತ್ವಾಂ ವಿನಾ ॥ 'ತ್ವದಂತರಾ' ಎಂದರೆ ನಿನ್ನನ್ನು ಬಿಟ್ಟು ಎಂದರ್ಥ.

ಯದೀಮಾಂ ಭವತೋ ಬುದ್ಧಿಂ ವಿದ್ಯಾಮ ವಯಮೀದೃಶೀಮ್।
ಶಸ್ತ್ರಂ ನೈವ ಗ್ರಹೀಷ್ಯಾಮೋ ನ ವಧಿಷ್ಯಾಮ ಕಂಚನ ॥೪॥

ನಿನಗೆ ಇಂಥ ಬುದ್ಧಿಯು ಹುಟ್ಟುವುದೆಂದು ನಮಗೆ ಮೊದಲೇ ತಿಳಿದಿದ್ದರೆ, ನಾವು ಶಸ್ತ್ರಗಳನ್ನೇ ಹಿಡಿಯುತ್ತಿರಲಿಲ್ಲ. ಯಾರೊಬ್ಬರನ್ನೂ ಕೊಲ್ಲುತ್ತಿರಲಿಲ್ಲ.

ಭೈಕ್ಷ್ಯಮೇವಾಚರಿಷ್ಯಾಮ ಶರೀರಸ್ಯಾವಿಮೋಕ್ಷಣಾತ್।
ನಚೇದಂ ದಾರುಣಂ ಯುದ್ಧಮಭವಿಷ್ಯನ್ಮಹೀಕ್ಷಿತಾಮ್ ॥೫॥

ನಾವು ಈ ಶರೀರದ ಅಂತ್ಯವಾಗುವವರೆಗೂ ಭಿಕ್ಷೆಯನ್ನೇ ಮಾಡಿಕೊಂಡು ಜೀವನ ನಿರ್ವಹಣೆಯನ್ನು ಮಾಡುತ್ತಿದ್ದೆವು. ಆಗ ರಾಜರಲ್ಲಿ ಇಂಥ ಭಯಂಕರವಾದ ಯುದ್ಧವೇ ನಡೆಯುತ್ತಿರಲಿಲ್ಲ.

ಪ್ರಾಣಸ್ಯಾನ್ನಮಿದಂ ಸರ್ವಮಿತಿ ವೈ ಕವಯೋ ವಿದುಃ।
ಸ್ಥಾವರಂ ಜಂಗಮಂ ಚೈವ ಸರ್ವಂ ಪ್ರಾಣಸ್ಯ ಭೋಜನಮ್ ॥೬॥

ಪ್ರಾಜ್ಞರು ಈ ಪ್ರಪಂಚವೆಲ್ಲವೂ ಬಲಿಷ್ಠರಿಗೆ ಅನ್ನವೆಂದು ಹೇಳುತ್ತಾರೆ. ಸ್ಥಾವರ ಜಂಗಮಗಳೆಲ್ಲವೂ ಬಲಿಷ್ಠನಾದವನ ಪಾಲನೆಗೆ ಸೇರಿದುದು.

ಆದದಾನಸ್ಯ ಚೇದ್ ರಾಜ್ಯಂ ಯೇ ಕೇಚಿತ್ ಪರಿಪಂಥಿನಃ।
ಹಂತವ್ಯಾಸ್ತ ಇತಿ ಪ್ರಾಜ್ಞಾಃ ಕ್ಷತ್ರಧರ್ಮವಿದೋ ವಿದುಃ ॥೭॥

ಕ್ಷತ್ರಿಯಧರ್ಮವನ್ನು ತಿಳಿದ ಪ್ರಾಜ್ಞರು ಹೀಗೆ ಹೇಳುತ್ತಾರೆ - ರಾಜರು ರಾಜ್ಯ-ವನ್ನು ಸಂಪಾದಿಸಲು ಹೊರಟಾಗ ಯಾರಾದರೂ ಅದನ್ನು ವಿರೋಧಿಸಿದರೆ ಅವರನ್ನು ವಿರೋಧಿಸಿದರೆ ಅವರನ್ನು ಸಂಹರಿಸಬೇಕೆಂದು ಹೇಳುತ್ತಾರೆ.

ತೇ ಸದೋಷಾ ಹತಾಸ್ಮಾಭಿಃ ರಾಜ್ಯಸ್ಯ ಪರಿಪಂಥಿನಃ।
ತಾನ್ ಹತ್ವಾ ಭುಂಕ್ಷ್ವ ಧರ್ಮೇಣ ಯುಧಿಷ್ಠಿರ ಮಹೀಮಿಮಾಮ್ ॥೮॥

ಅಣ್ಣನಾದ ಯುಧಿಷ್ಠಿರನೇ ! ಹೀಗೆ ನಮ್ಮ ರಾಜ್ಯವನ್ನು ನಾವು ಮತ್ತೆ ಪಡೆಯಲು ಯಾರು ನಮಗೆ ಅಡ್ಡಿಯನ್ನುಂಟು ಮಾಡಿದರೋ, ಆ ಅಪರಾಧಿಗಳು ಅಥವಾ ಶತ್ರುಗಳು ನಮ್ಮಿಂದ ಸಂಹೃತರಾಗಿದ್ದಾರೆ. ಧರ್ಮದಿಂದ ಪ್ರಾಪ್ತವಾಗಿರುವ ಈ ಭೂಮಿಯನ್ನು ಅನುಭವಿಸಲೇಬೇಕು.

ಯಥಾ ಹಿ ಪುರುಷಃ ಖಾತ್ವಾ ಕೂಪಮಪ್ರಾಪ್ಯ ಚೋದಕಮ್।
ಪಂಕದಿಗ್ಧೋ ನಿವರ್ತೇತ ಕರ್ಮೇದಂ ನಸ್ತಥೋಪಮಮ್ ॥೯॥

ಒಬ್ಬ ಮನುಷ್ಯನು ನೀರಿಗಾಗಿ ಪ್ರಯತ್ನಪಟ್ಟು ಬಾವಿಯನ್ನು ತೋಡುತ್ತಾನೆ. ಕೊನೆಗೆ ಅದರಿಂದ ನೀರನ್ನು ಪಡೆಯದೆ ಅದರೊಳಗಿನ ಕೆಸರನ್ನು ಮೈಗೆ ಹಚ್ಚಿಕೊಂಡು ಮೇಲೆದ್ದು ಬರುತ್ತಾನೆ. ನಮ್ಮ ಈಗಿನ ಸ್ಥಿತಿ ಹೀಗಿದೆ.

ಯಥಾರುಹ್ಯ ಮಹಾವೃಕ್ಷಮಪಹೃತ್ಯ ತತೋ ಮಧು।
ಅಪ್ರಾಶ್ಯ ನಿಧನಂ ಗಚ್ಛೇತ್ ಕರ್ಮೇದಂ ನಸ್ತಥೋಪಪಮ್ ॥೧೦॥

ಒಬ್ಬನು ಶ್ರಮಪಟ್ಟು ದೊಡ್ಡ ಮರವನ್ನೇರುತ್ತಾನೆ. ಅಲ್ಲಿದ್ದ ಜೇನನ್ನು ಸಂಗ್ರಹಿಸಿ -ಕೊಂಡು ಅದನ್ನು ರುಚಿ ನೋಡುವ ಮೊದಲೇ ಮರಣಕ್ಕೀಡಾಗುತ್ತಾನೆ. ಇದರಂತೆ ಈಗಿನ ನಮ್ಮ ಪ್ರಯತ್ನವು ಹಾಸ್ಯಾಸ್ಪದವಾಗಿದೆ.

ಯಥಾ ಮಹಾಂತಮಧ್ವಾನಮಾಶಯಾ ಪುರುಷಃ ಪತನ್ ।
ಸ ನಿರಾಶೋ ನಿವರ್ತೇತ ಕರ್ಮೇದಂ ನಸ್ತಥೋಪಮಮ್ ॥೧೧॥

ದೊಡ್ಡ ನಿಧಿಯು ಸಿಗುವುದೆಂಬ ಆಸೆಯಿಂದ ಸಾವಿರಾರು ಯೋಜನೆಗಳಷ್ಟು ದೂರ ಹೋಗಿ ಅಲ್ಲಿ ಏನೂ ಇಲ್ಲವೆಂದು ತಿಳಿದೊಡನೆಯೇ ನಿರಾಸೆಯಿಂದ ಹಿಂತಿರುಗವವನಂತೆ ನಮ್ಮ ಈಗಿನ ಸ್ಥಿತಿಯಾಗಿದೆ.

ಯಥಾ ಶತ್ರೂನ್ ಘಾತಯಿತ್ವಾ ಪುರುಷಃ ಕುರುಸತ್ತಮ ।
ಆತ್ಮಾನಂ ಘಾತಯೇತ್ ಪಶ್ಚಾತ್ ಕರ್ಮೇದಂ ನಸ್ತಥೋಪಮಮ್॥೧೨॥

ಕುರುನಂದನನೇ! ಒಬ್ಬನು ಮಹಾಪ್ರಯತ್ನದಿಂದ ಶತ್ರುಗಳನ್ನೆಲ್ಲ ಕೊಂದು, ಕೊನೆಗೆ ತನ್ನನ್ನು ತಾನೇ ಕೊಲೆ ಮಾಡಿಕೊಳ್ಳುವುದಕ್ಕೆ ನಮ್ಮ ಕಾರ್ಯವನ್ನು ಹೋಲಿಸಬಹುದು.

ಯಥಾನ್ನಂ ಕ್ಷುಧಿತೋ ಲಬ್ಧ್ವಾ ನ ಭುಂಜೀತ ಯದೃಚ್ಛಯಾ ।
ಕಾಮೀ ಚ ಕಾಮಿನೀಂ ಲಬ್ಧ್ವಾ ಕರ್ಮೇದಂ ನಸ್ತತೋಪಮಮ್ ॥೧೩॥

ಹಸಿದವನು ಅನ್ನವನ್ನು ಕೈಯಲ್ಲಿಟ್ಟುಕೊಂಡು ಉಣ್ಣದಂತೆ, ಕಾಮವುಳ್ಳವನು ಕಾಮಿನಿಯನ್ನು ಪಡೆದು ಅವಳನ್ನು ಅನುಭವಿಸಲಾರದೆ ಇರುವಂತೆ, ನಮ್ಮ ಸ್ಥಿತಿಯಾಗಿದೆ.

ವಯಮೇವಾತ್ರ ಗಾರ್ಹ್ಯಾ ಹಿ ಯದ್ವಯಂ ಮಂದಚೇತಸಃ ।
ತ್ವಾಂ ರಾಜನ್ನನುಗಚ್ಛಾಮೋ ಜ್ಯೇಷ್ಠೋಽಯಮಿತಿ ಭಾರತ ॥೧೪॥

ಧರ್ಮರಾಜನೇ! ನಿಜವಾಗಿ ಹೇಳುವುದಾದರೆ ನಾವೇ ಮಂದಬುದ್ಧಿಯುಳ್ಳವರು. ನಮ್ಮದೇ ದೋಷ ಹೊರತು ನಿನ್ನ ತಪ್ಪಲ್ಲ. ಮಂದಬುದ್ಧಿಯುಳ್ಳ ನಿನ್ನನ್ನು ಅಣ್ಣನೆಂದು ಗೌರವಿಸಿ ಅನುಸರಿಸಿ ನಡೆಯುತ್ತಿದ್ದುದೇ ನಮ್ಮ ತಪ್ಪಾಯಿತು.

ವಯಂ ಹಿ ಬಾಹುಬಲಿನಃ ಕೃತವಿದ್ಯಾ ಮನಸ್ವಿನಃ ।
ಕ್ಲೀಬಸ್ಯ ವಾಕ್ಯೇ ತಿಷ್ಠಾಮೋ ಯಥೈವಾಶಕ್ತಯಸ್ತಥಾ ॥೧೫॥

ನಾವು ಅಸಮಾನವಾದ ತೋಳ್ಬಲವುಳ್ಳವರಾಗಿದ್ದೇವೆ. ಶಸ್ತ್ರ-ಶಾಸ್ತ್ರವಿದ್ಯೆಗಳಲ್ಲಿ ಪಾರಂಗತರಾಗಿದ್ದೇವೆ. ಇಂದ್ರಿನಿಗ್ರಹವುಳ್ಳವರಾಗಿದ್ದೇವೆ. ಹೀಗಿದ್ದರೂ ಬಲಹೀನರಾದ ಮನುಷ್ಯರಂತೆ ನಪುಂಸಕನೊಬ್ಬನ ಮಾತಿನಂತೆ ನಡೆದುಕೊಳ್ಳುತ್ತಿದ್ದೇವೆ.

ಅಗತೀನ್ ಕಾಗತೀನಸ್ಮಾನ್ನಷ್ಟಾರ್ಥಾನರ್ಥಸಿದ್ಧಯೇ।
ಕಥಂ ವೈ ನಾನುಪಶ್ಯೇಯುರ್ಜನಾಃ ಪಶ್ಯಂತ ಯಾದೃಶಮ್ ॥೧೬॥

ನಿರ್ಗತಿಕರನ್ನು ಕಾಪಾಡತಕ್ಕ ನಾವು ಗತಿಯಿಲ್ಲದವರಂತೆ ಕೈಗೆ ಬಂದ ಹಣವನ್ನೆಲ್ಲ ಕಳೆದುಕೊಂಡ ನಿರ್ಗತಿಕರಾದ ಮಾತ್ರಕ್ಕೆ ಪ್ರಜೆಗಳು ಸ್ವಾರ್ಥಸಿದ್ಧಿಗಾಗಿ ಹೇಗೆ ತಾನೇ ನಮ್ಮನ್ನು ಎದುರು ನೋಡದಿರುವರು ?

ಟಿಪ್ಪಣಿ - ಕಥಂ ವೈ ನಾನುಪಶ್ಯೇಯುರ್ಜನಾಃ ಪಶ್ಯತ ಯಾದೃಶಮ್ ಇತ್ಯತ್ರ ಹೇ ಜನಾಃ, ಭವಂತಃ ಅರ್ಥಸಿದ್ಧಯೇ ನಷ್ಟಾರ್ಥಾನಸ್ಮಾನ್ ಕಥಂ ನಾನುಪಶ್ಯೇಯುಃ । ಯಾದೃಶಮರ್ಥಂ ಯೂಯಂ ಪಶ್ಯತ, ತಸ್ಯೈ ಅರ್ಥಸಿದ್ಧಯೇ ಕಥಂ ನಾನುಪಶ್ಯೇಯುರಿತಿ ಪೂರ್ವೇಣಾನ್ವಯಃ ॥ ಜನರು ಅರ್ಥಕ್ಕಾಗಿ ನಮ್ಮನ್ನು ಆಶ್ರಯಿಸುತ್ತಾರೆ. ಒಂದು ವೇಳೆ ನಾವೇ ಅರ್ಥಹೀನರಾದರೆ ಜನರು ನಮ್ಮ ಬಗ್ಗೆ ಏನೆಂದು ಕೊಂಡಾರು? ನಮ್ಮ ದೌರ್ಬಲ್ಯವನ್ನು ಕಂಡು ಅಸಮಾಧಾನವನ್ನು ಹೊಂದುವರು.

ಆಪತ್ಕಾಲೇ ಹಿ ಸನ್ನ್ಯಾಸಃ ಕರ್ತವ್ಯ ಇತಿ ಶಿಷ್ಯತೇ।
ಜರಯಾಭಿಪರೀತೇನ ಶತ್ರುಭಿರ್ವ್ಯಂಸಿತೇನ ವಾ ॥೧೭॥

ಆಪತ್ಕಾಲದಲ್ಲಿ ಮಾತ್ರವೇ ಸನ್ನ್ಯಾಸವನ್ನು ತೆಗೆದುಕೊಳ್ಳಬೇಕು. ಮುಪ್ಪು ಆವರಿಸಿ-ದಾಗ ಸನ್ನ್ಯಾಸವನ್ನು ತೆಗೆದುಕೊಳ್ಳಬಹುದು. ಶತ್ರುಗಳಿಂದ ರಾಜ್ಯ-ಧನ-ಸಂಪತ್ತು-ಗಳನ್ನು ಕಳೆದುಕೊಂಡು ವಂಚಿತನಾದಾಗಲೂ ಸನ್ನ್ಯಾಸವನ್ನು ತೆಗೆದುಕೊಳ್ಳಬಹುದು.

ತಸ್ಮಾದಿಹ ಕೃತಪ್ರಜ್ಞಾಸ್ತ್ಯಾಗಂ ನ ಪರಿಚಕ್ಷತೇ।
ಧರ್ಮವ್ಯತಿಕ್ರಮಂ ಚೈವ ಮನ್ಯಂತೇ ಸೂಕ್ಷ್ಮದರ್ಶಿನಃ ॥೧೮॥

ನಮ್ಮ ಈಗಿನ ಸ್ಥಿತಿಯಲ್ಲಿ ಸನ್ಯಾಸ ಸ್ವೀಕಾರವನ್ನು ಪ್ರಾಜ್ಞರು ಒಪ್ಪುವುದಿಲ್ಲ. ಅಷ್ಟು ಮಾತ್ರವಲ್ಲ. ಧರ್ಮಸೂಕ್ಷ್ಮವನ್ನು ತಿಳಿದವರು ಹೀಗೆ ಮಾಡುವುದು ಧರ್ಮಾತಿಕ್ರಮವೆಂದೂ ತಿಳಿಯುವರು.

ಕಥಂ ತಸ್ಮಾತ್ ಸಮುತ್ಪನ್ನಸ್ತನ್ನಿಷ್ಠಸ್ತದುಪಾಶ್ರಯಃ।
ತದೇವ ನಿಂದನ್ನಾಸೀತ ಶ್ರದ್ಧಾವಾನ್ಯತ್ರ ಗೃಹ್ಯತೇ ॥೧೯॥

ಕ್ಷತ್ರಿಯಧರ್ಮದಲ್ಲಿ ಹುಟ್ಟಿದ ಯಾರು ಕ್ಷತ್ರಿಯಧರ್ಮದಲ್ಲಿಯೇ ನಿರತರಾಗಿರುವರೋ, ಯಾರು ಕ್ಷತ್ರಿಯಧರ್ಮವನ್ನೇ ಆಶ್ರಯಿಸಿ ಜೀವನವನ್ನು ನಿರ್ವಹಿಸುತ್ತಿರುವರೋ ಅವರೇ ಕ್ಷಾತ್ರಧರ್ಮವನ್ನು ಹೇಗೆ ನಿಂದಿಸುವರು? ಇದರಿಂದ ಕ್ಷತ್ರಿಯರು ಯುದ್ಧಧರ್ಮವನ್ನು ವಿಧಿಸಿದ ವಿಧಾತೃವನ್ನೇ ನಿಂದನೆ ಮಾಡಿದಂತಾಗುವುದಲ್ಲವೇ?

ಶ್ರಿಯಾ ವಿಹೀನೈರಧನೈರ್ನಾಸ್ತಿಕೈಃ ಸಂಪ್ರವರ್ತಿತಮ್।
ವೇದಾವಾದಸ್ಯ ವಿಜ್ಞಾನಂ ಸತ್ಯಾಭಾಸಮಿವಾನೃತಮ್ ॥೨೦॥

ನಿರ್ಧನರು ಮತ್ತು ನಾಸ್ತಿಕರು - ವೇದಗಳ ಅರ್ಥವಾದ ವಾಕ್ಯಗಳಿಂದ ಪ್ರತಿಪಾದಿತವಾದ ವಿಜ್ಞಾನದ ಆಶ್ರಯವನ್ನು ಪಡೆದವರಾಗಿ ಸತ್ಯದಂತೆ ಕಾಣುವ ಮಿಥ್ಯಾಮತವನ್ನು ಪ್ರಚಾರ ಮಾಡುತ್ತಾರೆ. ಅಂಥ ಅರ್ಥವಾದವನ್ನು ಆಧಾರವನ್ನಾಗಿ ಇಟ್ಟುಕೊಂಡು ಕ್ಷತ್ರಿಯನಾದವನು ಸನ್ಯಾಸವನ್ನು ಸ್ವೀಕರಿಸುವುದು ಖಂಡಿತವಾಗಿಯೂ ಯೋಗ್ಯವಲ್ಲ.

ಶಕ್ಯಂ ತು ಮೌನಮಾಸ್ಥಾಯ ಬಿಭ್ರಾತಾತ್ಮಾನಮಾತ್ಮನಾ।
ಧರ್ಮಚ್ಛದ್ಮ ಸಮಾಸ್ಥಾಯ ಚ್ಯವಿತುಂ ನ ತು ಜೀವಿತುಮ್ ॥೨೧॥

ಸತ್ಯದಂತೆ ತಿಳಿದದ್ದು ಸುಳ್ಳೇ ಹೊರತು ಸತ್ಯವಲ್ಲ. ಸನ್ಯಾಸವನ್ನು ಹಿಡಿದು ತನ್ನನ್ನು ಮಾತ್ರ ತಾನು ರಕ್ಷಣೆ ಮಾಡಿಕೊಳ್ಳುವ ಮನುಷ್ಯನು ಧರ್ಮವೆಂಬ ನೆಪದಿಂದ ಅಧರ್ಮವನ್ನು ಹಿಡಿದು ತನ್ನನ್ನು ತಾನೇ ಕೊಲ್ಲುವವನೇ ಹೊರತು ಜೀವನದ ಸಾರ್ಥಕ್ಯವನ್ನು ಹೊಂದಲು ಸಾಧ್ಯವಾಗುವುದಿಲ್ಲ.

ಶಕ್ಯಂ ಪುನರರಣ್ಯೇಷು ಸುಖಮೇಕೇನ ಜೀವಿತುಮ್ ।
ಅಬಿಭ್ರತಾ ಪುತ್ರಪೌತ್ರಾನ್ ದೇವರ್ಷೀನತಿಥೀನ್ ಪಿತೄನ್ ॥೨೨॥

ಮಕ್ಕಳು - ಮೊಮ್ಮಕ್ಕಳನ್ನು ಪೋಷಿಸಲಾರದೆ, ದೇವರ್ಷಿ ಪಿತೃಗಳನ್ನು, ಅತಿಥಿಗಳನ್ನು ತೃಪ್ತಿಗೊಳಿಸದೆ ಕಾಡಿನಲ್ಲಿ ಒಂಟಿಯಾಗಿದ್ದು ಅರಣ್ಯದಿಂದಲೇ ಸದ್ಗತಿಯನ್ನು ಪಡೆಯುವುದು ಸಾಧ್ಯವೇ ?

ನೇಮೇ ಮೃಗಾಃ ಸ್ವರ್ಗಜಿತೋ ನ ವರಾಹಾ ನ ಪಕ್ಷಿಣಃ ।
ಅಥಾನ್ಯೇನ ಪ್ರಕಾರೇಣ ಪುಣ್ಯಮಾಹುರ್ನ ತಾಂಜನಾಃ ॥೨೩॥

ವನವಾಸದಿಂದ ಸ್ವರ್ಗ ದೊರೆಯುವುದಾದರೆ ಕಾಡಿನಲ್ಲಿರುವ ಮೃಗಗಳು, ಪಕ್ಷಿಗಳು, ಹಂದಿಗಳು, ಸ್ವರ್ಗವನ್ನು ಇನ್ನೂ ಏಕೆ ಹೊಂದಿಲ್ಲ? ಅರಣ್ಯವಾಸದಿಂದ ಸ್ವರ್ಗದೊರೆಯುವ ಪಕ್ಷದಲ್ಲಿ ಜನರು ಬೇರೆ ವಿಧದಿಂದ ತಮಗೆ ಪುಣ್ಯಪ್ರಾಪ್ತಿಯುಂಟೆಂದೇ ಹೇಳುತ್ತಿರಲಿಲ್ಲ.

ಯದಿ ಸನ್ನ್ಯಾಸತಃ ಸಿದ್ಧಿಂ ರಾಜನ್ ಕಶ್ಚಿದವಾಪ್ನುಯಾತ್ ।
ಪರ್ವತಾಶ್ಚ ದ್ರುಮಾಶ್ಚೈವ ಕ್ಷಿಪ್ರಂ ಸಿದ್ಧಿಮವಾಪ್ನುಯುಃ ॥೨೪॥

ರಾಜನಾದವನು ಸನ್ನ್ಯಾಸದಿಂದ ಸಿದ್ಧಿ ಹೊಂದುವ ಪಕ್ಷದಲ್ಲಿ ಕಾಡಿನಲ್ಲಿರುವ ವೃಕ್ಷಗಳೂ, ಪರ್ವತಗಳೂ ಕೂಡಲೇ ಸಿದ್ಧಿಯನ್ನು ಹೊಂದಬೇಕಲ್ಲವೇ?

ಏತೇ ಹಿ ನಿತ್ಯಸನ್ನ್ಯಾಸಾ ದೃಶ್ಯಂತೇ ನಿರುಪದ್ರವಾಃ ।
ಅಪರಿಗ್ರಹವಂತಶ್ಚ ಸತತಂ ಬ್ರಹ್ಮಚಾರಿಣಃ ॥೨೫॥

ಪರ್ವತಗಳಿಗೆ ವೃಕ್ಷಗಳಿಗೆ ಸ್ತ್ರೀಸಂಗವಿಲ್ಲ. ದೇಹಯಾತ್ರೆಗೆ ಬೇಕಾದ ವಸ್ತುವೊಂದನ್ನೂ ಅವು ಸಂಗ್ರಹಿಸಿಡತಕ್ಕವುಗಳಲ್ಲ. ಮತ್ತೊಬ್ಬರಿಗೆ ಉಪದ್ರವ ಕೊಡುವವು ಅಲ್ಲ. ಅವು ನಿತ್ಯಸನ್ನ್ಯಾಸಿಗಳಂತೆ ಕಾಣುತ್ತಿದೆಯಲ್ಲವೇ?

ಅಥ ಚೇದಾತ್ಮಭಾಗ್ಯೇಷು ನಾನ್ಯೇಷಾಂ ಸಿದ್ಧಿಮಶ್ನುತೇ।
ತಸ್ಮಾತ್ ಕರ್ಮೈವ ಕರ್ತವ್ಯಂ ನಾಸ್ತಿ ಸಿದ್ಧಿರಕರ್ಮಣಃ ॥೨೬॥

ಮತ್ತೊಬ್ಬರ ಸಿದ್ಧಿಯಿಂದ ನಮಗೇನೂ ಫಲವಿಲ್ಲವೆಂಬುದಾದರೆ ಪ್ರತಿಯೊಬ್ಬರೂ ತಮ್ಮ ತಮ್ಮ ಕರ್ಮಗಳಿಂದಲೇ ಸಿದ್ಧಿಯನ್ನು ಪಡೆಯಬೇಕು. ಅದಕ್ಕಾದರೂ ಕರ್ಮವನ್ನು ಮಾಡಿಯೇ ತೀರಬೇಕು. ಕರ್ಮವಿಲ್ಲದೆ ಸಿದ್ಧಿಯಿಲ್ಲ.

ಔದಕಾಃ ಸೃಷ್ಟಯಶ್ಚೈವ ಜಂತವಃ ಸಿದ್ಧಿಮಾಪ್ನುಯುಃ।
ತೇಷಾಮಾತ್ಮೈವ ಭರ್ತವ್ಯೋ ನಾನ್ಯಃ ಕಶ್ಚನ ವಿದ್ಯತೇ ॥೨೭॥

ಕರ್ಮವಿಲ್ಲದೆ ಕೇವಲ ಆತ್ಮವನ್ನು ರಕ್ಷಿಸುವವನಿಗೆ ಸಿದ್ಧಿ ಆಗುತ್ತದೆ ಎಂದು ಹೇಳಿದ ಪಕ್ಷದಲ್ಲಿ, ಜಲದಲ್ಲಿರುವ ಮೀನು ಮೊದಲಾದ ಜಂತುಗಳೂ, ಸ್ಥಾವರಗಳೂ ಸಿದ್ಧಿಯನ್ನು ಹೊಂದಬೇಕಾಗುತ್ತದೆ. ಅವುಗಳಿಗೂ ರಕ್ಷಿಸಬೇಕಾದುದು ತಮ್ಮ ಆತ್ಮವೊಂದೇ ಹೊರತು ಬೇರೆ ಅಲ್ಲ.

ಅವೇಕ್ಷಸ್ವ ಯಥಾ ಸ್ಫೈಲಃ ಸ್ಫೈಲಃ ಕರ್ಮಭಿರ್ವ್ಯಾಪೃತಂ ಜಗತ್।
ತಸ್ಮಾತ್ ಕರ್ಮೈವ ಕರ್ತವ್ಯಂ ನಾಸ್ತಿ ಸಿದ್ಧಿರಕರ್ಮಣಃ ॥೨೮॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ದಶಮೋऽಧ್ಯಾಯಃ ॥

ಪ್ರಾಣಿಗಳೆಲ್ಲವೂ ತಮ್ಮ ತಮ್ಮ ಕರ್ಮಗಳಲ್ಲಿ ನಿರತವಾಗಿರುವುವು. ಆದ್ದರಿಂದ ಸ್ವಕರ್ಮವು ಎಲ್ಲರಿಗೂ ಕರ್ತವ್ಯವೇ ಆಗಿದೆ. ಕರ್ಮವನ್ನು ಬಿಟ್ಟವನಿಗೆ ಎಂದಿಗೂ ಸಿದ್ಧಿಯಿಲ್ಲ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೦ನೆಯ ಅಧ್ಯಾಯವು ಮುಗಿಯಿತು.

* * * * *

೧೧. ಹನ್ನೊಂದನೆಯ ಅಧ್ಯಾಯ

ಪಕ್ಷಿರೂಪಿಯಾದ ಇಂದ್ರನಿಗೆ ಮತ್ತು ಪಕ್ಷಿರೂಪಿಯಾದ ಇಂದ್ರನಿಗೂ ಋಷಿಕುಮಾರರಿಗೂ ನಡೆದ ಸಂಭಾಷಣೆಯನ್ನು ಉದಾಹರಿಸಿ ಅರ್ಜುನನು ಯುಧಿಷ್ಠಿರನನ್ನು ಕುರಿತು ಗೃಹಸ್ಥ ಧರ್ಮವೇ ಶ್ರೇಷ್ಠವೆಂದು ನಿರೂಪಿಸಿದುದು.

ಅರ್ಜುನಃ

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಮ್ ।
ತಾಪಸೈಃ ಸಹ ಸಂವಾದಂ ಶಕ್ರಸ್ಯ ಭರತರ್ಷಭ ॥೧॥

ಅರ್ಜುನನು – ಭರತರ್ಷಭನೇ ! ಕರ್ಮವು ಮೇಲೋ, ಸನ್ಯಾಸವು ಮೇಲೋ ಎಂಬ ವಿಚಾರದಲ್ಲಿ ಇಂದ್ರನಿಗೂ ಋಷಿಗಳಿಗೂ ನಡೆದ ಸಂವಾದ ರೂಪವಾದ ಪುರಾತನಕಥೆಯೊಂದನ್ನು ಉದಾಹರಿಸಿದರು. ಅದನ್ನು ಹೇಳುವೆನು ಕೇಳು.

ಕೇಚಿದ್ ಗೃಹಾನ್ ಪರಿತ್ಯಜ್ಯ ವನಮಭ್ಯಾಗಮನ್ ದ್ವಿಜಾಃ ।
ಅಜಾತಶ್ಮಶ್ರವೋ ಮಂದಾಃ ಕುಲೇ ಜಾತಾಃ ಪ್ರವವ್ರಜುಃ ॥೨॥

ಸತ್ಕುಲದಲ್ಲಿ ಹುಟ್ಟಿ, ಭಾಗ್ಯವಂತರಾಗಿ, ಧರ್ಮವನ್ನು ನಡೆಸುವ ಶಕ್ತಿಯುಳ್ಳ ಕೆಲವು ಬ್ರಾಹ್ಮಣಬಾಲಕರು, ಮನೆಯನ್ನು ತೊರೆದು ಕಾಡಿಗೆ ಹೊರಟರು. ವಿವೇಚನೆ ಸಾಲದ ಅವರು ಮೀಸೆಮೊಳೆಯುವ ಪ್ರಾಯಕ್ಕೆ ಮೊದಲೇ ಸನ್ಯಾಸಿಗಳಾಗ-ಬೇಕೆಂದು ನಿರ್ಧರಿಸಿದರು.

ಧರ್ಮೋಽಯಮಿತಿ ಮನ್ವಾನಾ ಬ್ರಹ್ಮಚರ್ಯೇ ವ್ಯವಸ್ಥಿತಾಃ ।
ತ್ಯಕ್ತ್ವಾ ಭ್ರಾತೄನ್ ಪಿತೄಂಶ್ಚೈವ ತಾನಿಂದ್ರೋಽನ್ವಕೃಪಾಯತ ॥೩॥

ಸನ್ಯಾಸವೇ ಉತ್ತಮ ಧರ್ಮವೆಂದು ಕಾಡಿನಲ್ಲಿ ನಿಶ್ಚಿಂತವಾಗಿರಬಹುದೆಂದು ಆ ಬ್ರಹ್ಮಚಾರಿಗಳು, ತಂದೆತಾಯಂದಿರನ್ನು ಸಹೋದರರನ್ನು ತೊರೆದು ಅರಣ್ಯಕ್ಕೆ ಹೋದರು.

ತಾನಾಬಭಾಷೇ ಭಗವಾನ್ ಪಕ್ಷೀ ಭೂತ್ವಾ ಹಿರಣ್ಮಯಃ।
ಸುದುಷ್ಕರಂ ಮನುಷ್ಯೈಶ್ಚ ಯತ್ ಕೃತಂ ವಿಘಸಾಶಿಭಿಃ ॥೪॥

ಪುಣ್ಯಂ ಚ ಬತ ಕರ್ಮೈಷಾಂ ಪ್ರಶಸ್ತಂ ಚೈವ ಜೀವಿತಮ್।
ಸಂಸಿದ್ಧಾಸ್ತೇ ಗತಿಂ ಮುಖ್ಯಾಂ ಪ್ರಾಪ್ತಾ ಧರ್ಮಪರಾಯಣಾಃ ॥೫॥

ಇವರಲ್ಲಿ ಇಂದ್ರನಿಗೆ ಕನಿಕರವು ಹುಟ್ಟಿತು. ಅವನು ಸುವರ್ಣಮಯವಾದ ಒಂದು ಹಕ್ಕಿಯ ರೂಪವನ್ನು ಧರಿಸಿ ಬ್ರಾಹ್ಮಣವಟುಗಳ ಸಮೀಪದಲ್ಲಿ ಬಂದು ಹೀಗೆಂದನು.

ಯಜ್ಞದ ಶೇಷವನ್ನು ಭುಂಜಿಸುವವರ ಪುಣ್ಯಕ್ಕೆ ಸಮಾನವಾದ ಪುಣ್ಯವನ್ನು ಬೇರೆ ಯಾರೂ ಯಾವ ವಿಧದಿಂದಲೂ ಸಂಪಾದಿಸಲಾರರು. ಅವರ ಕರ್ಮವು ಜೀವನಕ್ರಮವು ಅತ್ಯಂತ ಪ್ರಶಸ್ತವೂ ಆಗಿದೆ. ಅವರು ಬಯಸಿದ ಸಿದ್ಧಿಯನ್ನು ಪಡೆಯುವವರು. ಧರ್ಮವನ್ನು ಪ್ರಧಾನವಾಗಿ ನಂಬಿದವರೇ ಉತ್ತಮ ಗತಿಯನ್ನು ಹೊಂದುವರು ಎಂದನು.

ಋಷಯಃ

ಅಹೋ ಬತಾಯಂ ಶಕುನಿರ್ವಿಘಸಾಶಾನ್ ಪ್ರಶಂಸತಿ।
ಅಸ್ಮಾನ್ನೂನಮಯಂ ಶಾಸ್ತಿ ವಯಂ ಚ ವಿಘಸಾಶಿನಃ ॥೬॥

ಹಕ್ಕಿಯ ಈ ಮಾತಿನ ನಿಜ ಅರ್ಥವನ್ನು ತಿಳಿಯದ ಆ ಬ್ರಹ್ಮಚಾರಿಗಳು ಹಕ್ಕಿಯು ತಮ್ಮನ್ನೇ ಪ್ರಶಂಸೆ ಮಾಡುತ್ತಿದೆ ಎಂದು ಸಂತೋಷಗೊಂಡರು. (ವಿಘಸವೆಂದರೆ ಹುಲ್ಲು, ಗೆಡ್ಡೆ, ಎಲೆ, ಹಣ್ಣು, ಮುಂತಾದ ವನ ಪದಾರ್ಥಗಳು) ತಮ್ಮನ್ನು ತಾವೇ ಅಹಾ ಸಂತೋಷವು! ವಿಘಸಭೋಜಿಗಳಾದ ನಮ್ಮನ್ನು ಈ ಪಕ್ಷಿಯು ಹೊಗಳುತ್ತಿದೆ. ಕಾಡಿನಲ್ಲಿ ಅಲೆಯುವ ನಮ್ಮನ್ನು ಕುರಿತೇ ಹೇಳುತ್ತಿದೆ. ನಾವು ಇನ್ನು ಮುಂದೆ ವಿಘಸವನ್ನು ಭುಂಜಿಸಬೇಕೆಂದು ಅನುಶಾಸನ ಮಾಡುತ್ತಿದೆ ಎಂದು ಸಂತೋಷದಿಂದ ಮಾತಾಡಿಕೊಳ್ಳುತ್ತಿದ್ದರು.

ಶಕುನಿಃ

ನಾಹಂ ಯುಷ್ಮಾನ್ ಪ್ರಶಂಸಾಮಿ ಪಂಕದಿಗ್ಧಾನ್ ರಜಸ್ವಲಾನ್ ।
ಉಚ್ಛಿಷ್ಟಭೋಜಿನೋ ಮಂದಾನನ್ಯೇ ವೈ ವಿಘಸಾಶಿನಃ ॥೭॥

ಆಗ ಪಕ್ಷಿಯು ಅವರನ್ನು ಕುರಿತು ಹೀಗೆಂದಿತು. ಕಾಡಿನಲ್ಲಿ ತಿರುಗಿ ಕಾಡಿನ ಧೂಳನ್ನು ಮೈಗೆ ಅಂಟಿಸಿಕೊಂಡು ಒಳಗೂ ಹೊರಗೂ ಕಶ್ಮಲಯುಕ್ತರಾಗಿ ಎಂಜಲನ್ನು ತಿನ್ನುತ್ತಿರುವ ಬುದ್ಧಿಹೀನರಾದ ನಿಮ್ಮಂತಹವರನ್ನು ನಾನು ಹೊಗಳಿಲ್ಲ. ವಿಘಸವನ್ನು ಭುಂಜಿಸುವವರೆಂದರೆ ಅವರೇ ಬೇರೆ. ನೀವಲ್ಲ ಎಂದಿತು.

ಋಷಯಃ

ಇದಂ ಶ್ರೇಯಃ ಪರಮಿತಿ ವಯಮೇವಾಭ್ಯುಪಾಸ್ಮಹೇ ।
ಶಕುನೇ ಬ್ರೂಹಿ ಯಚ್ಛ್ರೇಯೋ ಭೃಶಂ ತೇ ಶ್ರದ್ದಧಾಮಹೇ ॥೮॥

ಋಷಿಗಳು – ಪಕ್ಷಿರಾಜ ! ನಾವು ವನವಾಸವನ್ನೇ ಉತ್ತಮ ಮಾರ್ಗವೆಂದು ತಿಳಿದಿದ್ದೇವೆ. ನಮ್ಮ ಶ್ರೇಯಸ್ಸಿಗೆ ಉತ್ತಮ ದಾರಿಯನ್ನು ತಿಳಿಸು. ನಿನ್ನನ್ನು ನಂಬಿ ನಿನ್ನ ಮಾತಿನಂತೆ ನಡೆಯುವೆವು.

ಶಕುನಿಃ

ಯದಿ ಮಾಂ ನಾಭಿಶಂಕಧ್ವಂ ವಿಭಜ್ಯಾತ್ಮಾನಮಾತ್ಮನಾ ।
ತತೋಽಹಂ ವಃ ಪ್ರವಕ್ಷ್ಯಾಮಿ ಯಾಥಾತಥ್ಯಂ ಹಿತಂ ವಚಃ ॥೯॥

ಪಕ್ಷಿ – ಬ್ರಹ್ಮಚಾರಿಗಳೇ ! ನೀವು ಮನಸ್ಸಿನಲ್ಲಿ ನನ್ನ ಬಗ್ಗೆ, ಸಂದೇಹವನ್ನು ತೊರೆದರೆ ನಿಮ್ಮ ಶ್ರೇಯಸ್ಸು ಯಾವುದರಿಂದ ಲಭ್ಯವಾಗುತ್ತದೆಂಬುದನ್ನು ಹೇಳುತ್ತೇನೆ. ಈ ಎಲ್ಲ ವಿಷಯಗಳನ್ನು ಮನಸ್ಸಿನಲ್ಲಿಯೂ ತರ್ಕಿಸಿ ವಿಭಜಿಸಿ ನಿಮಗೆ ಹಿತವಾದ ಮಾತನ್ನು ಹೇಳುವೆನು.

ಋಷಯಃ

ಶೃಣುಮಸ್ತೇ ವಚಸ್ತಾತ ಪಂಥಾನೋ ವಿದಿತಾಸ್ತವ ।
ನಿಯೋಗೇ ಚೈವ ಧರ್ಮಾತ್ಮನ್ ಸ್ಥಾತುಮಿಚ್ಛಾಮ ಶಾಧಿ ನಃ ॥೧೦॥

ಋಷಿಗಳು – ಧರ್ಮಾತ್ಮನೇ! ನಿನ್ನ ಮಾತನ್ನು ನಾವು ನಂಬುವೆವು. ನೀನು ಹೇಳಿದಂತೆ ನಡೆಯುವೆವು. ಶ್ರೇಯಸ್ಸಿನ ಮಾರ್ಗಗಳು ಅನೇಕ ಇವೆ. ಅವುಗಳನ್ನೆಲ್ಲ ಚೆನ್ನಾಗಿ ತಿಳಿದ ನೀನು ನಮ್ಮನ್ನು ಕುರಿತು ಉಪದೇಶಿಸು.

ಶಕುನಿಃ

ಚತುಷ್ಪದಾಂ ಗೌಃ ಪ್ರವರಾ ಲೋಹಾನಾಂ ಕಾಂಚನಂ ವರಮ್ ।
ಶಬ್ದಾನಾಂ ಪ್ರವರೋ ಮಂತ್ರೋ ಬ್ರಾಹ್ಮಣೋ ದ್ವಿಪದಾಂ ವರಃ ॥೧೧॥

ಪಕ್ಷಿ – ನಾಕು ಕಾಲುಗಳಿರುವ ಪ್ರಾಣಿಗಳಲ್ಲಿ ಹಸುವು ಶ್ರೇಷ್ಠವಾದದ್ದು. ಲೋಹಗಳಲ್ಲಿ ಬಂಗಾರವು ಉತ್ತಮವಾದದ್ದು. ಶಬ್ದಗಳಲ್ಲಿ ವೇದಮಂತ್ರವು, ದ್ವಿಪಾದಗಳಲ್ಲಿ ಬ್ರಾಹ್ಮಣನು ಶ್ರೇಷ್ಠನು.

ಮಂತ್ರೋಽಯಂ ಜಾತಕರ್ಮಾದಿ ಬ್ರಾಹ್ಮಣಸ್ಯ ವಿಧೀಯತೇ ।
ಜೀವತೋಽಪಿ ಯಥಾಕಾಲಂ ಶ್ಮಶಾನನಿಧನಾದಿಭಿಃ ॥೧೨॥

ಬ್ರಾಹ್ಮಣನಿಗೆ ಮಂತ್ರಪೂರ್ವಕವಾದ ಜಾತಕರ್ಮಾದಿ ಸಂಸ್ಕಾರಗಳು ವಿಹಿತವಾಗಿವೆ. ಅವನು ಎಲ್ಲಿಯವರೆಗೆ ಜೀವಿಸಿರುವನೋ ಅಲ್ಲಿಯವರೆಗೂ ಆಯಾ ಸಮಯದಲ್ಲಿ ಉಪನಯನ, ವಿವಾಹಾದಿ ಸಂಸ್ಕಾರಗಳು ಮತ್ತು ಮರಣಾನಂತರವೂ ಸ್ಮಶಾನದಲ್ಲಿ ಅಂತ್ಯಸಂಸ್ಕಾರಗಳು ವಿಹಿತವಾಗಿವೆ.

ಕರ್ಮಾಣಿ ವೈದಿಕಾನ್ಯಸ್ಯ ಸ್ವರ್ಗ್ಯಃ ಪಂಥಾಸ್ತ್ವನುತ್ತಮಃ ।
ಅಥ ಸರ್ವಾಣಿ ಕರ್ಮಾಣಿ ಮಂತ್ರಸಿದ್ಧಾನಿ ಚಕ್ಷತೇ ॥೧೩॥

ಆಮ್ನಾಯದೃಢವಾದೀನಿ ತಥಾ ಸಿದ್ಧಿರಿಹೇಷ್ಯತೇ ।
ಮಾಸಾರ್ಧಮಾಸಾ ಋತವ ಆದಿತ್ಯಶಶಿತಾರಕಮ್ ॥೧೪॥

ಈಹಂತೇ ಸರ್ವಭೂತಾನಿ ತದಿದಂ ಕಮರಸಂಜ್ಞಿತಮ್ ।
ಸಿದ್ಧಿಕ್ಷೇತ್ರಮಿದಂ ಪುಣ್ಯಮಯಮೇವಾಶ್ರಮೋ ಮಹಾನ್ ॥೧೫॥

ಬ್ರಾಹ್ಮಣನಿಗೆ ವೇದೋಕ್ತಕರ್ಮಗಳೇ ಸ್ವರ್ಗಾದಿಗಳನ್ನು ಪಡೆಯಲು ಅನುಕೂಲವಾದ ಮಾರ್ಗಗಳು. ಕರ್ಮಮಾರ್ಗವೇ ಅವನಿಗೆ ಉತ್ತಮ ಮಾರ್ಗವು. ಕರ್ಮಗಳಿಂದಲೇ ಮಂತ್ರಗಳ ಸಿದ್ಧಿಯೆಂದು ವೇದವಾಕ್ಯಗಳು ಸ್ಪಷ್ಟಪಡಿಸುತ್ತವೆ. ಈ ಕರ್ಮಮಾರ್ಗದಲ್ಲಿ ಪಕ್ಷ, ಮಾಸ, ಋತು ಮೊದಲಾದ ಅಭಿಮಾನಿ ದೇವತೆಗಳನ್ನು ಪುರಸ್ಕರಿಸಿಕೊಂಡು ಚಂದ್ರಮಂಡಲದ ಮೂಲಕ ಪಿತೃಲೋಕಪದವಿಯನ್ನು, ಸೂರ್ಯಮಂಡಲದ ಮೂಲಕ ದೇವಲೋಕಪದವಿಯನ್ನು ಹೊಂದುತ್ತಾರೆ. ಸಂಸಾರಬಂಧದಿಂದ ಬಿಡುಗಡೆಗೊಂಡು ಪರಮಾತ್ಮನ ಸನಿಹಕ್ಕೆ ತೆರಳಲು ಸಾಧನಮಾರ್ಗಗಳಾಗಿವೆ. ಈ ಮೂರು ಬಗೆಯ ಸಿದ್ಧಿಗಳು ಕರ್ಮದಿಂದಲೇ ಉಂಟಾಗುವವು. ಪ್ರಾಣಿಗಳೂ ಕೂಡ ಕರ್ಮದ ಫಲವನ್ನೇ ಉಣ್ಣುವವು. ಕರ್ಮಸಿದ್ಧಾಂತವನ್ನು ಒಪ್ಪಿದವನಿಗೆ ಕರ್ಮವೇ ಸಮಸ್ತಸಿದ್ಧಿಗಳಿಗೂ ಸಾಧನ. ಪುಣ್ಯಕ್ಷೇತ್ರವೆನಿಸುವುದು. ಕರ್ಮಮಾರ್ಗವನ್ನು ಅನುಸರಿಸುವ ಆಶ್ರಯವೇ ದೊಡ್ಡ ಆಶ್ರಮವು

ಅಥ ಯೇ ಕರ್ಮ ನಿಂದಂತೋ ಮನುಷ್ಯಾಃ ಕಾಪಥಂ ಗತಾಃ।
ಮೂಢಾನಾಮರ್ಥಹೀನಾನಾಂ ತೇಷಾಮೇನಸ್ತು ವಿದ್ಯತೇ ॥೧೬॥

ಈ ಕರ್ಮಮಾರ್ಗವನ್ನು ನಿಂದಿಸಿ ಬೇರೆ ಮಾರ್ಗಕ್ಕೆ ಹೋಗುವ ಮೂಢರು ಪುರುಷಾರ್ಥಗಳಿಂದ ಹೀನರಾಗಿ ಪಾಪಿಗಳಾಗುತ್ತಾರೆ.

ದೇವವಂಶಾನ್ ಪಿತೃವಂಶಾನ್ ಬ್ರಹ್ಮವಂಶಾಂಶ್ಚ ಶಾಶ್ವತಾನ್।
ಸಂತ್ಯಜ್ಯ ಮೂಢಾ ವರ್ತಂತೇ ತತೋ ಯಾಂತ್ಯಶ್ರುತೀಪಥಮ್ ॥೧೭॥

ವೇದದಲ್ಲಿ ತಿಳಿಸಿದ ಕರ್ಮಗಳ ಮೂಲಕ ಬ್ರಾಹ್ಮಣರು ದೇವರ್ಷಿ ಪಿತೃಗಳನ್ನು ಆರಾಧಿಸಬೇಕು. ಆದರೆ ಮೂಢರಾದವರು ಯಜ್ಞ-ಯಾಗಗಳಿಂದ ದೇವತೆಗಳನ್ನು, ಶ್ರಾದ್ಧ-ತರ್ಪಣಾದಿಗಳಿಂದ ಪಿತೃಗಳನ್ನು, ಸ್ವಾಧ್ಯಾಯ-ಬ್ರಹ್ಮಯಜ್ಞಗಳಿಂದ ಋಷಿಗಳನ್ನು ಆರಾಧಿಸುವುದನ್ನು ಬಿಟ್ಟು ವೇದವಿರುದ್ಧವಾದ ಮಾರ್ಗವನ್ನು ಆಶ್ರಯಿಸುತ್ತಾರೆ.

ಏತದ್ ವೋಽಸ್ತು ತಪೋ ಯುಕ್ತಂ ದದಾಮೀತ್ಯೃಷಿಚೋದಿತಮ್ ।
ತಸ್ಮಾತ್ ತತ್ತದ್-ವ್ಯವಸ್ಥಾನಂ ತಪಸ್ವಿ ತಪ ಉಚ್ಯತೇ ॥೧೮॥

ವೇದಗಳಲ್ಲಿ ಹೇಳಲ್ಪಟ್ಟ ಕರ್ಮಗಳೇ ತಪಸ್ಸು ಎಂಬುದಾಗಿ ಕರೆಯಿಸಿಕೊಳ್ಳುತ್ತವೆ. ಆದ್ದರಿಂದ ನಿಷ್ಠೆಯಿಂದ ಮಾಡಲ್ಪಡುವ ಕರ್ಮಗಳೇ ತಪಸ್ವಿಗಳ ತಪಸ್ಸು ಎಂದು ಹೇಳಲ್ಪಟ್ಟಿದೆ.

ವಿವರಣೆ - ಕಾಡಿಗೆ ಹೋಗಿ ಧ್ಯಾನ ಮಾಡುವುದಷ್ಟೇ ತಪಸ್ಸಲ್ಲ. ಮನೆಯಲ್ಲಿ ಕುಳಿತು ಶ್ರದ್ಧೆಯಿಂದ ವೇದೋಕ್ತಕರ್ಮಗಳನ್ನು ಆಚರಣೆ ಮಾಡಿದರೂ ಕೂಡ ತಪಸ್ಸು ಎಂಬುದಾಗಿ ಕರೆಸಿಕೊಳ್ಳುತ್ತದೆ ಎಂಬುದು ಭಾವ.

ದೇವವಂಶಾನ್ ಪಿತೃವಂಶಾನ್ ಬ್ರಹ್ಮವಂಶಾಂಶ್ಚ ಶಾಶ್ವತಾನ್ ।
ಸಂವಿಭಜ್ಯ ಗುರೋಶ್ಚರ್ಯಾಂ ತದ್ ವೈ ದುಷ್ಕರಮುಚ್ಯತೇ ॥೧೯॥

ಆ ದಿನದ ಯಾವ ಸಮಯದಲ್ಲಿ ಏನನ್ನು ಅನುಷ್ಠಾನ ಮಾಡಬೇಕೆಂಬುದನ್ನು ವಿಚಾರ ಮಾಡಿ ಇಟ್ಟುಕೊಳ್ಳಬೇಕು. ಯಜ್ಞಗಳ ಮೂಲಕ ದೇವತೆಗಳನ್ನು ಆರಾಧನೆ ಮಾಡಬೇಕು. ಸ್ವಾಧ್ಯಾಯದ ಮೂಲಕ ಋಷಿಗಳನ್ನು ಆರಾಧನೆ ಮಾಡಬೇಕು. ಶ್ರಾದ್ಧ ತರ್ಪಣಾದಿಗಳ ಮೂಲಕ ಪಿತೃ ದೇವತೆಗಳನ್ನು ಆರಾಧನೆ ಮಾಡಬೇಕು. ಮತ್ತು ದುಷ್ಕರವಾದ ಗುರುಶುಶ್ರೂಷೆಯನ್ನು ಮಾಡಬೇಕು. ಇದರಿಂದ ಮಹಾ-ಫಲವು ದೊರಕುತ್ತದೆ.

ದೇವಾ ವೈ ದುಷ್ಕರಂ ಕೃತ್ವಾ ವಿಭೂತಿಂ ಪರಮಾಂ ಗತಾಃ ।
ತಸ್ಮಾದ್ ಗಾರ್ಹಸ್ಥ್ಯಮುದ್ವೋಢುಂ ದುಷ್ಕರಂ ಪ್ರಬ್ರವೀಮಿ ವಃ॥೨೦॥

ದೇವತೆಗಳು ಅತ್ಯಂತ ದಕ್ಷಿಣಸಾಧ್ಯವಾದ ವ್ರತಗಳನ್ನು ಅನುಷ್ಠಾನವನ್ನು ಮಾಡಿ-ರುವರು ಅದರ ಫಲವಾಗಿಯೇ ಶ್ರೇಷ್ಠವಾದ ಸ್ಥಾನಮಾನಗಳನ್ನು ಪಡೆದುಕೊಂಡಿ-ರುವರು. ಆ ದೇವತೆಗಳೆಲ್ಲರೂ ಗಾರ್ಹಸ್ಥ್ಯಧರ್ಮವನ್ನು ಕಟ್ಟುನಿಟ್ಟಾಗಿ ಪಾಲಿಸಿರು-ವರು. ಆದ್ದರಿಂದ ಅಂತ ಶ್ರೇಷ್ಠವಾದ ಗೃಹಸ್ಥಧರ್ಮವನ್ನು ತಮಗೆ ತಿಳಿಸುತ್ತಿದ್ದೇನೆ.

ತಪಃ ಶ್ರೇಷ್ಠಂ ಪ್ರಜಾನಾಂ ಹಿ ಮೂಲಮೇತನ್ನ ಸಂಶಯಃ।
ಕುಟುಂಬವಿಧಿನಾನೇನ ಯಸ್ಮಿನ್ ಸರ್ವಂ ಪ್ರತಿಷ್ಠಿತಮ್ ॥೨೧॥

ವೇದದಲ್ಲಿ ಹೇಳಲ್ಪಟ್ಟ ಈ ಗೃಹಸ್ಥ ಧರ್ಮದ ಆಚರಣೆಯೇ ಶ್ರೇಷ್ಠ ತಪಸ್ಸಾಗಿದೆ. ಈ ಧರ್ಮವು ಹಿತಸಾಧನೆಗೆ ಮೂಲ ಕಾರಣವಾಗಿದೆ. ಈ ವಿಷಯದಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಕುಟುಂಬವನ್ನು ರಕ್ಷಣೆ ಮಾಡಬೇಕು. ಈ ಗೃಹಸ್ಥಾಶ್ರಮದಲ್ಲಿ ಈ ಗೃಹಸ್ಥಾಶ್ರಮವನ್ನು ಆಶ್ರಯಿಸಿಕೊಂಡು ಉಳಿದ ಮೂರು ಆಶ್ರಮಗಳು ಇರುತ್ತವೆ.

ಏತದ್ ವಿದುಸ್ತಪೋ ವಿಪ್ರಾ ದ್ವಂದ್ವಾತೀತಾ ವಿಮತ್ಸರಾಃ।
ತಸ್ಮಾದ್ ವ್ರತಂ ಮಧ್ಯಮಂ ಚ ಲೋಕೇಷು ತಪ ಉಚ್ಯತೇ ॥೨೨॥

ಯಾವ ವಿಪ್ರರು ಸುಖದುಃಖಗಳೆಂಬ ದ್ವಂದ್ವಗಳಿಂದ ಅತೀತರಾಗಿದ್ದಾರೆ. ಅಸೂಯೆಗಳಿಂದ ಸ್ನೇಹಿತರಾಗಿದ್ದಾರೊ, ಅವರು ಗೃಹಸ್ಥಾಶ್ರಮವೇ ಶ್ರೇಷ್ಠವೆಂದು ಹೇಳುತ್ತಾರೆ. ಆದ್ದರಿಂದ ಈ ಗೃಹಸ್ಥಾಶ್ರಮವ್ರತವು ಲೋಕದಲ್ಲಿ ತಪಸ್ಸೆಂದು ಪ್ರಸಿದ್ಧವಾಗಿದೆ.

ದುರಾಧರ್ಷಂ ಪದಂ ಚೈವ ಗಚ್ಛಂತಿ ವಿಘಸಾಶಿನಃ।
ಸಾಯಂಪ್ರಾತರ್ವಿಭಜ್ಯಾನ್ನಂ ಸ್ವಕುಟುಂಬೇ ಯಥಾವಿಧಿ ॥೨೩॥

ದತ್ತ್ವಾತಿಥಿಭ್ಯೋ ದೇವೇಭ್ಯಃ ಪಿತೃಭ್ಯಃ ಸ್ವಜನಸ್ಯ ಚ।
ಅವಶಿಷ್ಟಾನಿ ಯೇಽಶ್ನಂತಿ ತಾನಾಹುರ್ವಿಘಸಾಶಿನಃ ॥೨೪॥

ಯಜ್ಞಶೇಷದ ಭೋಜನವನ್ನು ಉಣ್ಣುವವರು ಸಾಮಾನ್ಯರಿಂದ ಜಯಿಸಲು ಅಸಾಧ್ಯವಾದ ಪುಣ್ಯಲೋಕಗಳಿಗೆ ಹೋಗುತ್ತಾರೆ. ಯಾರು ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ತಮ್ಮ ತಮ್ಮ ಸಂಸಾರದಲ್ಲಿ ಯಥಾವಿಧಿಯಾಗಿ ಅನ್ನವನ್ನು ವಿಭಾಗಿಸಿ ದೇವತೆಗಳಿಗೆ-ಪಿತೃಗಳಿಗೆ ನಿವೇದನೆ ಮಾಡಿ, ಅತಿಥಿಗಳಿಗೂ ಮತ್ತು ಬಂಧುವರ್ಗದವರಿಗೂ ಭೋಜನ ಮಾಡಿಸಿ ಅನ್ನಶೇಷವನ್ನು ತಿನ್ನುತ್ತಾರೋ, ಅವರು ವಿಘಸಾಶಿಗಳೆಂದು ಕರೆಯಲ್ಪಡುತ್ತಾರೆ.

ತಸ್ಮಾತ್ ಸ್ವಧರ್ಮಮಾಸ್ಥಾಯ ಸುವ್ರತಾಃ ಸತ್ಯವಾದಿನಃ।
ಲೋಕಸ್ಯ ಗುರವೋ ಭೂತ್ವಾ ತೇ ಭವಂತ್ಯನುಪಸ್ಕೃತಾಃ ॥೨೫॥

ಆದ್ದರಿಂದ ವಿಘಸಾಶಿಗಳು ಸ್ವಧರ್ಮದಲ್ಲಿಯೇ ಆಸಕ್ತರಾಗಿದ್ದು ವರ್ಣಾಶ್ರಮೋಚಿತವಾದ ವ್ರತಾನುಷ್ಠಾನಗಳನ್ನು ಶ್ರದ್ಧೆಯಿಂದ ಮಾಡುತ್ತಾ ಸತ್ಯನಿಷ್ಠರಾಗಿ ಯಾವ ವಿಧವಾದ ಸಂಶಯವೂ ಇಲ್ಲದವರಾಗಿ ಲೋಕದಲ್ಲಿ ಗುರುಗಳಾಗಿ ವಿರಾಜಿಸುತ್ತಾರೆ.

ತ್ರಿದಿವಂ ಪ್ರಾಪ್ಯ ಶಕ್ರಸ್ಯ ಸ್ವರ್ಗಲೋಕೇ ವಿಮತ್ಸರಾಃ।
ವಸಂತಿ ಶಾಶ್ವತೀರ್ವರ್ಷಾ ಜನಾ ದುಷ್ಕರಕಾರಿಣಃ ॥೨೬॥

ಕಷ್ಟಸಾಧ್ಯವಾದ ವೇದದಲ್ಲಿ ಹೇಳಿದ ಗೃಹಸ್ಥಕರ್ಮಗಳಲ್ಲಿ ಆಸಕ್ತರಾಗಿ, ಅನಸೂಯರಾದ ಪುಣ್ಯಾತ್ಮರು ಇಂದ್ರಲೋಕವನ್ನು ಹೊಂದಿ ಸ್ವರ್ಗದಲ್ಲಿ ನಿಷ್ಕಲ್ಮಷಚಿತ್ತರಾಗಿ ಬಹುಕಾಲದವರೆಗೆ ವಾಸಿಸುವರು.

ತತಸ್ತೇ ತದ್ ವಚಃ ಶ್ರುತ್ವಾ ತಸ್ಯ ಧರ್ಮಾರ್ಥಸಂಹಿತಮ್।
ಉತ್ಸೃಜ್ಯ ನಾಸ್ತೀತಿ ಗತಾ ರ್ಗಾಹಸ್ಥ್ಯಂ ಧರ್ಮಮಾಶ್ರಿತಾಃ ॥೨೭॥

ಅರ್ಜುನ – ಪಕ್ಷಿಯು ಹೇಳಿದ ಧರ್ಮಾರ್ಥದಿಂದ ಕೂಡಿದ ಉಪದೇಶವನ್ನು ಕೇಳಿದ ಕೂಡಲೇ ಆ ಬ್ರಹ್ಮಚಾರಿಗಳು ತಮಗೆ ಅನಿಸಿದ ತಪ್ಪನ್ನು ಬಿಟ್ಟು ಗೃಹಸ್ಥಧರ್ಮವನ್ನು ಕೈಗೊಂಡರು.

ತಸ್ಮಾತ್ ತ್ವಮಪಿ ದುರ್ಧರ್ಷಂ ಧೈರ್ಯಮಾಲಂಬ್ಯ ಶಾಶ್ವತಮ್।
ಪ್ರಶಾಧಿ ಪೃಥಿವೀಂ ಕೃತ್ಸ್ನಾಂ ಹತಾಮಿತ್ರಾಂ ನರೋತ್ತಮ ॥೨೮॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ಏಕಾದಶೋಽಧ್ಯಾಯಃ ॥೧೧॥

ನರೋತ್ತಮನೇ! ನಿನಗೆ ತಿಳಿಯದ ವಿಷಯವಿಲ್ಲ. ಪುರುಷಶ್ರೇಷ್ಠನೆನಿಸಿದ ನೀನು

ಧೈರ್ಯವನ್ನು ಆಶ್ರಯಿಸಿ ಶತ್ರುಗಳಿಂದ ದೂರವಾದ ಈ ಅಖಂಡಭೂಮಂಡಲವನ್ನು ರಕ್ಷಣೆ ಮಾಡು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೧ನೆಯ ಅಧ್ಯಾಯವು ಮುಗಿಯಿತು.

* * * * *

೧೨. ಹನ್ನೆರಡನೆಯ ಅಧ್ಯಾಯ

ಯುಧಿಷ್ಠಿರನಿಗೆ ನಕುಲನು ಗೃಹಸ್ಥಧರ್ಮವನ್ನು ಪ್ರಶಂಸೆ ಮಾಡುತ್ತಾ, ಸಮಾಧಾನದ ಮಾತುಗಳನ್ನು ಹೇಳಿದುದು.

ವೈಶಂಪಾಯನಃ

ಅರ್ಜುನಸ್ಯ ವಚಃ ಶ್ರುತ್ವಾ ನಕುಲೋ ವಾಕ್ಯಮಬ್ರವೀತ್ ।
ರಾಜಾನಮಭಿಸಂಪ್ರೇಕ್ಷ್ಯ ಸರ್ವಧರ್ಮಭೃತಾಂ ವರಮ್ ॥೧॥

ಅನುರುದ್ಧ್ಯ ಮಹಾಪ್ರಾಜ್ಞೋ ಭ್ರಾತುಶ್ಚಿತ್ತಮರಿಂದಮಃ ।
ವ್ಯೂಢೋರಸ್ಕೋ ಮಹಾಬಾಹುಸ್ತಾಮ್ರಾಸ್ಯೋ ಮಿತಭಾಷಿತಾ ॥೨॥

ವೈಶಂಪಾಯನರು– ಅರಿಂದಮನೇ! ಅರ್ಜುನನು ಹೇಳಿದ ಮಾತನ್ನು ಮಹಾಪ್ರಾಜ್ಞನಾದ ವಿಶಾಲವಕ್ಷನಾದ, ಮಹಾನುಬಾಹುವಾದ, ಎಣ್ಣೆಗೆಂಪಾದ ಮುಖವನ್ನು ಹೊಂದಿರುವ, ಮಿತಭಾಷಿಯಾದ ನಕುಲನು ಕೇಳಿದನು. ರಾಜ್ಯವನ್ನು ಪರಿತ್ಯಜಿಸಿ ಅರಣ್ಯಕ್ಕೆ ಹೋಗಬೇಕೆನ್ನುವ ಯುಧಿಷ್ಠಿರನ ಮನಃಸ್ಥಿತಿಯನ್ನು ರಾಜ್ಯಾಡಳಿತದ ಕುರಿತು ಒಲವನ್ನು ಬೆಳೆಸಲು ಧರ್ಮರಾಜನನ್ನು ನೋಡುತ್ತಾ ಹೀಗೆಂದನು.

ನಕುಲ

ವಿಶಾಖಯೂಪೇ ದೇವಾನಾಂ ಸರ್ವೇಷಾಮಗ್ನಯಶ್ಚಿತಾಃ ।
ತಸ್ಮಾದ್ ವಿದ್ಧಿ ಮಹಾರಾಜ ದೇವಾಃ ಕರ್ಮಫಲೇ ಸ್ಥಿತಾಃ ॥೩॥

ನಕುಲ – ವಿಶಾಖಯೂಪವೆಂಬ ಕ್ಷೇತ್ರದಲ್ಲಿ ದೇವತೆಗಳು ಅಗ್ನಿಕಾರ್ಯಕ್ಕಾಗಿ ಮಾಡಿದ ಸ್ಥಂಡಿಲದ ಗುರುತನ್ನು ತೋರಿಸತಕ್ಕ ಭಾಗಗಳು ಇನ್ನೂ ಇಲ್ಲಿ ಕಾಣುತ್ತಿವೆ.

ಆದುದರಿಂದ ದೇವತೆಗಳೂ ಕೂಡ ಇಲ್ಲಿ ಕರ್ಮಗಳನ್ನು ನಡೆಸಿ ಅದರ ಫಲವನ್ನೇ ಈಗ ಅನುಭವಿಸುತ್ತಿರುವರು.

ಅನಾಸ್ತಿಕಾನಾಂ ಭೂತಾನಾಂ ಪ್ರಾಣದಾಃ ಪಿತರಶ್ಚ ಯೇ।
ತೇऽಪಿ ಕರ್ಮೈವ ಕುರ್ವಂತಿ ವಿಧಿಂ ಪಶ್ಯಸ್ವ ಪಾರ್ಥಿವ ॥೪॥

ಆಸ್ತೀಕರಲ್ಲದ ಪ್ರಾಣಿಗಳಿಗೂ ವೃಷ್ಟಿಯ ಮೂಲಕವಾಗಿ ಅನ್ನದಾನ ಮಾಡುವುದರಿಂದ ಲೋಕಪಿತೃಗಳೆನಿಸಿಕೊಂಡ ದೇವತೆಗಳೂ ಕೂಡ ಕರ್ಮಗಳನ್ನು ಮಾಡಿಯೇ ಆ ಪದವಿಯಲ್ಲಿರುವರು.

ವೇದವಾದಾಪವಿದ್ಧಾಂಸ್ತು ತಾನ್ ವಿದ್ಧಿ ಭೃಶನಾಸ್ತಿಕಾನ್।
ನಹಿ ವೇದೋಕ್ತಮುತ್ಸೃಜ್ಯ ವಿಪ್ರಃ ಸರ್ವೇಷು ಕರ್ಮಸು।
ದೇವಯಾನೇನ ನಾಕಸ್ಯ ಪೃಷ್ಠಮಾಪ್ನೋತಿ ಭಾರತ ॥೫॥

ಅರ್ಜುನನು ಈಗ ಪ್ರಸ್ತಾಪಿಸಿದ ಆ ಬ್ರಾಹ್ಮಣರು ವೇದಗಳನ್ನು ಬಿಟ್ಟು ನಾಸ್ತಿಕರೆಂದೇ ತಿಳಿ. ಬ್ರಾಹ್ಮಣನಾದವನು ವೇದೋಕ್ತಮಾರ್ಗವನ್ನು ಬಿಟ್ಟು ಬೇರೆ ಎಂಥ ಕರ್ಮಗಳಿಂದಾದರೂ ದೇವಯಾನಮಾರ್ಗದಿಂದ ಸ್ವರ್ಗಕ್ಕೆ ತೆರಳಿ ಬ್ರಹ್ಮಲೋಕವನ್ನು ಸೇರಲಾರನು.

ಅತ್ಯಾಶ್ರಮಾನಯಂ ಸರ್ವಾನಿತ್ಯಾಹುರ್ವೇದ ನಿಶ್ಚಯಾಃ।
ಬ್ರಾಹ್ಮಣಾಃ ಶ್ರುತಿಸಂಪನ್ನಾಸ್ತಾನ್ ನಿಬೋಧ ಜನಾಧಿಪ ॥೬॥

ವೇದಗಳಲ್ಲಿ ನಿಶ್ಚಯಜ್ಞಾನವನ್ನು ಪಡೆದು ಶಾಸ್ತ್ರಗಳನ್ನು ತಿಳಿದ ಬ್ರಾಹ್ಮಣರು ಎಲ್ಲಾ ಆಶ್ರಮಗಳಿಗಿಂತಲೂ ಗೃಹಸ್ಥಾಶ್ರಮವೇ ಮೇಲೆಂದು ಹೇಳುವರು. ಅವರು ಹೇಳಿದ ಮಾತನ್ನಾದರೂ ಕೇಳು.

ವಿತ್ತಾನಿ ಧರ್ಮಲಬ್ಧಾನಿ ಕ್ರತುಮುಖ್ಯೇಷ್ವವಾಸೃಜನ್।
ಕೃತಾತ್ಮಾ ಸ ಮಹಾರಾಜ ಸ ವೈ ತ್ಯಾಗೀ ಸ್ಮೃತೋ ನರಃ ॥೭॥

ಮಹಾರಾಜನೇ ! ಧರ್ಮದಿಂದ ಸಂಪಾದಿಸಿದ ಧನವನ್ನು ಸಂಗ್ರಹಿಸಿ, ಅದರಿಂದ ಉತ್ತಮಯಾಗವನ್ನು ನಡೆಸಿ, ಆ ಯಾಗದ ಮೂಲಕವಾಗಿ ದಾನ ಮಾಡುವವನೇ ನಿಜವಾದ ಜಿತೇಂದ್ರಿಯನು. ಅವನೇ ಸರ್ವವಿಧದಿಂದಲೂ ತ್ಯಾಗಿಯೆನಿಸುವನು.

ಅನವೇಕ್ಷ್ಯ ಸುಖಾದಾನಂ ತಥೈವೋರ್ಧ್ವಂ ಪ್ರತಿಷ್ಠಿತಃ।
ಆತ್ಮತ್ಯಾಗೀ ಮಹಾರಾಜ ಸ ತ್ಯಾಗೀ ತಾಮಸಃ ಮತಃ ॥೮॥

ಮಹಾರಾಜನೇ! ಯಾರು ಗೃಹಸ್ಥಧರ್ಮದ ಸುಖಭೋಗಗಳನ್ನು ತೊರೆದು ಕಾಡಿನಲ್ಲಿ ನಿಷ್ಠೆಯಿಂದ ಶರೀರತ್ಯಾಗ ಮಾಡುವವನು ತಾಮಸತ್ಯಾಗಿ ಎನಿಸುವನು.

ಅನಿಕೇತಃ ಪರಿಪತನ್ ವೃಕ್ಷಮೂಲಾಶ್ರಯೋ ಮುನಿಃ।
ಅಪಾಚಕಃ ಸದಾ ಯೋಗೀ ಸ ತ್ಯಾಗೀ ಪಾರ್ಥ ಭಿಕ್ಷುಕಃ ॥೯॥

ಮನೆಯನ್ನು ಬಿಟ್ಟು ಭಿಕ್ಷೆಗಾಗಿ ಅಲೆದಾಡುತ್ತಾ ಮರದ ನೆರಳನ್ನೇ ಆಶ್ರಯ-ಮಾಡಿಕೊಂಡು, ಬೇರೆಯವರಲ್ಲಿ ಕೈ ಒಡ್ಡದೆ, ಪಾಕವನ್ನು ಮಾಡಿಕೊಳ್ಳದ ಮುನಿ-ವ್ರತದಲ್ಲಿರುವ ಭಿಕ್ಷುಕನು ಸನ್ಯಾಸಿ ಎನಿಸುತ್ತಾನೆ.

ಕ್ರೋಧಹರ್ಷಾವನಾದೃತ್ಯ ಪೈಶುನ್ಯಂ ಚ ವಿಶೇಷತಃ।
ವಿಪ್ರೋ ವೇದಾನಧೀತೇ ಯಃ ಸ ತ್ಯಾಗೀ ಪಾರ್ಥ ಉಚ್ಯತೇ ॥೧೦॥

ಸಂತೋಷ-ಸಿಟ್ಟುಗಳನ್ನು ಬಿಟ್ಟು, ಪರನಿಂದೆಯಲ್ಲಿ ಆಸಕ್ತನಾಗದೇ, ಸದಾ ವೇದಾಧ್ಯಯನದಲ್ಲಿ ಆಸಕ್ತನಾಗಿ, ಗುರುಪೂಜೆಯನ್ನು ಮಾಡುವವನು ತ್ಯಾಗಿ ಎನಿಸುತ್ತಾನೆ.

ವಿವರಣೆ - ತನಗಿಷ್ಟವಾಗದ ವಿಷಯದಲ್ಲಿ ಸಿಟ್ಟು ಮಾಡಿಕೊಳ್ಳುವುದು. ಇಷ್ಟವಾದ ವಿಷಯದಲ್ಲಿ ಸಂತೋಷವನ್ನು ಹೊಂದುವುದು. ಮತ್ತೊಬ್ಬರ ದೋಷಗಳ ಬಗ್ಗೆ ವಿಚಾರ ಮಾಡುವುದು. ಇವುಗಳೆಲ್ಲವನ್ನೂ ಸಂಪೂರ್ಣವಾಗಿ ತ್ಯಾಗ ಮಾಡಬೇಕು. ಇದನ್ನು ಪರಿತ್ಯಾಗ ಮಾಡುವುದು ಸುಲಭವಲ್ಲ. ಸುಖದಲ್ಲಿ ಹಿಗ್ಗದೇ, ದುಃಖದಲ್ಲಿ ಕುಗ್ಗದೇ, ಮತ್ತೊಬ್ಬರನ್ನು ನಿಂದಿಸದೇ, ಚಾಡಿ ಹೇಳದೇ,

ಜಿತೇಂದ್ರಿಯನಾಗಲು ಪ್ರಯತ್ನವನ್ನು ಪಡಬೇಕು. ಇಂಥವನೇ ನಿಜವಾದ ತ್ಯಾಗಿ ಎಂಬುದಾಗಿ ಕರೆಯಸಿಕೊಳ್ಳುತ್ತಾನೆ.

ಆಶ್ರಮಾಂಸ್ತುಲಯಾ ಸರ್ವಾನ್ ಧೃತಾನಾಹುರ್ಮನೀಷಿಣಃ।
ಏಕತಸ್ತೇ ತ್ರಯೋ ರಾಜನ್ ಗೃಹಸ್ಥಾಶ್ರಮ ಏಕತಃ ॥೧೧॥

ರಾಜನೇ! ವಿದ್ವಾಂಸರು ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸನ್ಯಾಸ-ಗಳೆಂಬ ಆಶ್ರಮಗಳ ವೈಶಿಷ್ಟ್ಯವೇನೆಂಬುದನ್ನು ತಕ್ಕಡಿಯಲ್ಲಿ ಇಟ್ಟು ತೂಗಿದಾಗ ಗೃಹಸ್ಥಾಶ್ರಮವೊಂದೇ ಬೇರೆ ಮೂರು ಆಶ್ರಮಗಳಿಗೆ ಸಮತೂಕದಲ್ಲಿ ಇತ್ತೆಂದು ಹೇಳುವರು.

ಸಮೀಕ್ಷತೇ ತು ಯೋಽರ್ಥಂ ವೈ ಕಾಮಂ ಸ್ವರ್ಗಂ ಚ ಭಾರತ।
ಅಯಂ ಪಂಥಾ ಮಹರ್ಷೀಣಾಮಿಯಂ ಲೋಕವಿದಾಂ ಗತಿಃ ॥೧೨॥

ವಿವೇಕವೆಂಬ ತಕ್ಕಡಿಯ ತಟ್ಟೆಗಳಲ್ಲಿ ಇಟ್ಟು ತೂಗಿದಾಗ ಗೃಹಸ್ಥಾಶ್ರಮವೇ ಶ್ರೇಷ್ಠವೆಂದು ಸಿದ್ಧವಾಯಿತು. ಗೃಹಸ್ಥಾಶ್ರಮದಲ್ಲಿ ಕಾಮಸ್ವರ್ಗಗಳೆರಡೂ ಸಮಾನ-ವಾಗಿರುವುದರಿಂದ, ಮಹರ್ಷಿಗಳಿಗೆ ಇದೇ ಸರಿಯಾದ ಮಾರ್ಗವೆಂದು ತಿಳಿಯಿತು.

ಇತಿ ಯಃ ಕುರುತೇ ಭಾವಂ ಸ ತ್ಯಾಗೀ ಭರತರ್ಷಭ।
ನ ಯಃ ಪರಿತ್ಯಜ್ಯ ಗೃಹಾನ್ ವನಮೇತಿ ವಿಮೂಢವತ್ ॥೧೩॥

ಭರತರ್ಷಭನೇ ! ಗೃಹಸ್ಥಾಶ್ರಮದಲ್ಲಿ ಇದ್ದು, ವೇದದಲ್ಲಿ ಹೇಳಿದ ಕರ್ಮ-ಗಳನ್ನು ಮಾಡುವುದೇ ಯೋಗ್ಯವೆಂದು ತಿಳಿದು ಯಾರು ಮಾಡುವನೋ ಅವನೇ ತ್ಯಾಗಿಯೆನಿಸುವನು. ಯಾವ ಮನುಷ್ಯನು, ಸರ್ವಕರ್ಮಗಳನ್ನು ತ್ಯಾಗಮಾಡಿ ಮನೆ-ಮಠಗಳನ್ನು ತೊರೆದು ಕಾಡಿಗೆ ಹೋಗುತ್ತಾನೋ, ಅವನು ಮೂಢನು.

ಯದಾ ಕಾಮಾನ್ ಸಮೀಕ್ಷೇತ ಧರ್ಮವೈತಂಸಿಕೋ ನರಃ।
ಅಥೈನಂ ಮೃತ್ಯುಪಾಶೇನ ಕಂಠೇ ಬಧ್ನಾತಿ ಮೃತ್ಯುರಾಟ್ ॥೧೪॥

ಅರಣ್ಯಕ್ಕೆ ತೆರಳಿದ ಅಂಥ ಮನುಷ್ಯನಿಗೆ ಏನಾದರೂ ಕಾಮಭೋಗಗಳ ಸ್ಮರಣೆ ಬಂದರೆ, ಅವನು ಧರ್ಮವೇಷವನ್ನು ಧರಿಸಿದ ಡಾಂಭಿಕ ಎನಿಸುವನು. ಅಂಥವನನ್ನು ಮೃತ್ಯುದೇವನು ಕಂಠದಲ್ಲಿ ಬಿಗಿದು ಸೆಳೆಯುವನು.

ಅಭಿಮಾನಕೃತಂ ಕರ್ಮ ನೈತತ್ ಫಲವದುಚ್ಯತೇ।
ತ್ಯಾಗಯುಕ್ತಂ ಮಹಾರಾಜ ಸರ್ವಮೇವ ಮಹಾಫಲಮ್ ॥೧೫॥

ಮಹಾರಾಜನೇ! ಯಾವುದೇ ಕರ್ಮವಾಗಲಿ ದುರಭಿಮಾನಪೂರ್ವಕವಾಗಿ ಮಾಡಿದರೆ ಅದು ಫಲಕಾರಿಯಾಗುವುದಿಲ್ಲ. ಯಾವುದೇ ಫಲದ ಅಪೇಕ್ಷೆಯಿಲ್ಲದೆ ಮಾಡಿದ ಕರ್ಮವು ಉತ್ತಮ ಫಲವನ್ನು ಕೊಡುವುದು.

ಶಮೋ ದಮಸ್ತಪೋ ದಾನಂ ಸತ್ಯಂ ಶೌಚಮಥಾರ್ಜವಮ್।
ಯಜ್ಞೋ ಧೃತಿಶ್ಚ ಧರ್ಮಶ್ಚ ನಿತ್ಯಮಾರ್ಷೋ ವಿಧಿಃ ಸ್ಮೃತಃ ॥೧೬॥

ಶಮ, ದಮ, ಧೈರ್ಯ, ಸತ್ಯ, ಶೌಚ, ಸರಳತೆ, ಯಜ್ಞ, ಧೃತಿ, ಧರ್ಮ ಇವುಗಳು ಋಷಿಗಳಿಗೆ ಹಿತವನ್ನುಂಟು ಮಾಡುವಂಥ ನಿತ್ಯವಾದ ವಿಧಿಗಳು.

ಪಿತೃದೇವಾತಿಥಿಕೃತೇ ಸಮಾರಂಭೋಽತ್ರ ಶಸ್ಯತೇ।
ಅತ್ರೈವ ಹಿ ಮಹಾರಾಜ ತ್ರಿವರ್ಗಃ ಕೇವಲಂ ಫಲಮ್ ॥೧೭॥

ಮಹಾರಾಜನೇ! ಗೃಹಸ್ಥಾಶ್ರಮದಲ್ಲಿ ಪಿತೃಗಳು, ದೇವತೆಗಳು, ಅತಿಥಿಗಳು ಇವರನ್ನು ಕುರಿತು ಮಾಡುವ ಕರ್ಮಗಳೆಲ್ಲವು ಪ್ರಶಂಸೆಗೆ ಪಾತ್ರವಾಗಿವೆ. ಗೃಹಸ್ಥ-ಧರ್ಮದಲ್ಲಿಯೇ ಧರ್ಮಾರ್ಥಕಾಮಗಳೆಂಬ ಮೂರು ವರ್ಗಗಳ ಫಲವು ದೊರೆಯುವುದು.

ಏತಸ್ಮಿನ್ ವರ್ತಮಾನಸ್ಯ ವಿಧೌ ವಿಪ್ರನಿಷೇವಿತೇ।
ತ್ಯಾಗಿನಃ ಪ್ರಸೃತಸ್ಯೇಹ ನೋಚ್ಚಿತ್ತಿರ್ವಿದ್ಯತೇ ಕ್ವಚಿತ್ ॥೧೮॥

ಹೀಗೆ ಅಭಿಮಾನವನ್ನು ಬಿಟ್ಟು, ವೇದವಿಹಿತವಾದ ಕರ್ಮಗಳನ್ನು ನಿಷ್ಠೆಯಿಂದ ನಡೆಸುವವನಿಗೆ ಎಲ್ಲಿಯೂ, ಯಾವ ವಿಧದಿಂದಲೂ ಹಾನಿಯಿರುವುದಿಲ್ಲ.

ಅಸೃಜದ್ಧಿ ಪ್ರಜಾ ರಾಜನ್ ಪ್ರಜಾಪತಿರಕಲ್ಮಷಃ।
ಮಾಂ ಯಕ್ಷ್ಯಂತೀತಿ ಶಾಂತಾತ್ಮಾ ಯಜ್ಞೈರ್ವಿವಿಧದಕ್ಷಿಣೈಃ ॥೧೯॥

ಶಾಂತಾತ್ಮನಾದ ಪಾಪರಹಿತನಾದ ಪ್ರಜಾಪತಿಯು ವಿವಿಧ ದಕ್ಷಿಣೆಗಳಿಂದ ಕೂಡಿರುವ ಯಜ್ಞಗಳ ಮೂಲಕವಾಗಿ ನನ್ನನ್ನು ಆರಾಧಿಸಬೇಕು ಎಂಬ ಉದ್ದೇಶದಿಂದ ಪ್ರಜೆಗಳನ್ನು ಸೃಷ್ಟಿಸಿದನು.

ವೀರುಧಶ್ಚೈವ ವೃಕ್ಷಾಂಶ್ಚ ಯಜ್ಞಾರ್ಥಂ ವೈ ತಥೌಷಧೀಃ।
ಪಶೂಂಶ್ಚೈವ ತಥಾ ಮೇಧ್ಯಾನ್ ಯಜ್ಞಾರ್ಥಾನಿ ಹವೀಂಷಿ ಚ ॥೨೦॥

ಆ ಕಾರಣದಿಂದಲೇ ಯಜ್ಞಕ್ಕೋಸ್ಕರ ಗಿಡಬಳ್ಳಿಗಳನ್ನು, ಔಷಧಿಗಳನ್ನು, ಪವಿತ್ರವಾದ ಪಶುಗಳನ್ನು, ಯಜ್ಞಕ್ಕೆ ಸಂಬಂಧಿಸಿದ ಹವಿಸ್ಸನ್ನು ಲೋಕದಲ್ಲಿ ಸೃಷ್ಟಿಸಿದನು.

ಗೃಹಸ್ಥಾಶ್ರಮಿಣಸ್ತಚ್ಚ ಯಜ್ಞಕರ್ಮ ವಿರೋಧಕಮ್।
ತಸ್ಮಾದ್ ಗಾರ್ಹಸ್ಥ್ಯಮೇವೇಹ ದುಷ್ಕರಂ ದುರ್ಲಭಂ ತಥಾ ॥೨೧॥

ಇಂಥಹ ಯಜ್ಞಗಳನ್ನು ಸರಿಯಾಗಿ ನಡೆಸುವುದಕ್ಕೆ ಗೃಹಸ್ಥಾಶ್ರಮವೇ ಯೋಗ್ಯವು. ಈ ಕಾರಣದಿಂದ ಗೃಹಸ್ಥಾಶ್ರಮವು ದುಷ್ಕರವೂ; ದುರ್ಲಭವೂ ಆಗಿರುತ್ತದೆ.

ತತ್ ಸಂಪ್ರಾಪ್ಯ ಗೃಹಸ್ಥಾಯೇ ಪಶುಧಾನ್ಯಸಮನ್ವಿತಾಃ।
ನ ಯಜಂತೇ ಮಹಾರಾಜ ಶಾಶ್ವತಂ ತೇಷು ಕಿಲ್ಬಿಷಮ್ ॥೨೨॥

ಇಂಥ ದುರ್ಲಭವಾದ ಗೃಹಸ್ಥಾಶ್ರಮವನ್ನು ಪಡೆದು ಧನ-ಧಾನ್ಯ-ಪಶುಸಮೃದ್ಧಿಯನ್ನು ಹೊಂದಿ ವಿಧಿಪೂರ್ವಕವಾಗಿ ಯಜ್ಞಯಾಗವನ್ನು ಯಾರು ನಡೆಸುವುದಿಲ್ಲವೋ, ಅವರಲ್ಲಿ ಪಾಪವು ಶಾಶ್ವತವಾಗಿ ಉಳಿಯುವುದು.

ಸ್ವಾಧ್ಯಾಯಯಜ್ಞಾ ಋಷಯೋ ಜ್ಞಾನಯಜ್ಞಾಸ್ತಥಾಪರೇ।
ಅಥಾಪರೇ ಮಹಾಯಜ್ಞಾನ್ ಮನಸ್ಯೇವ ವಿತನ್ವತೇ ॥೨೩॥

ಋಷಿಗಳಲ್ಲಿ ಕೆಲವರು ಸ್ವಾಧ್ಯಾಯವನ್ನೇ ಯಜ್ಞವು, ಕೆಲವರು ಜ್ಞಾನವನ್ನು ಯಜ್ಞವೆನ್ನುತ್ತಾರೆ. ಇನ್ನೂ ಕೆಲವರು ಧ್ಯಾನಯೋಗವೆಂಬ ಮಹಾಯಜ್ಞವನ್ನು ಮನಸ್ಸಿನಲ್ಲಿಯೇ ನಡೆಸುತ್ತಾರೆ.

ಇದಮನ್ಯನ್ಮಹಾರಾಜ ವಿದ್ವದ್ಭಿಃ ಕಥಿತಂ ಮಮ।
ಭೂಮಿರಗ್ನಿಶ್ಚ ವಾಯುಶ್ಚ ನಭಶ್ಚ ನ ದಿವಾಕರಃ ॥೨೪॥

ನಕ್ಷತ್ರಾಣಿ ನ ಚಂದ್ರಶ್ಚ ನ ದಿಶಃ ಕಾಲ ಏವ ಚ।
ಶಬ್ದಃ ಸ್ಪರ್ಶಶ್ಚ ರೂಪಂ ಚ ನ ಗಂಧೋ ನ ರಸಃ ಕ್ವಚಿತ್ ॥೨೫॥

ಮಹಾರಾಜನೇ! ಇಷ್ಟೇ ಅಲ್ಲದೆ ವಿದ್ವಾಂಸರಿಂದ ನಾನು ಮತ್ತೊಂದನ್ನು ಕೇಳಿರುವೆನು. ಈ ಜಗತ್ತು ನಿರ್ಮಾಣವಾಗುವ ಮೊದಲು. ಭೂಮಿಯೇ ಮೊದಲಾದ ಪಂಚಭೂತಗಳು, ಸೂರ್ಯಚಂದ್ರ, ನಕ್ಷತ್ರಗಳು, ದಿಕ್ಕುಗಳು, ಕಾಲ, ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವುಗಳಲ್ಲಿ ಯಾವುದೊಂದೂ ಇರಲಿಲ್ಲ.

ನಚ ಸಂತಿ ಪ್ರಮಾಣಾನಿ ಯೈಃ ಪ್ರಮೇಯಂ ಪ್ರಸಾದ್ಧ್ಯತೇ।
ಪ್ರತ್ಯಕ್ಷಮನುಮಾನಂ ಚ ನೋಪಮಾನಮಥಾಗಮಃ ॥೨೬॥

ಪ್ರಮಾಣಗಳೆನಿಸಿದ ಪ್ರತ್ಯಕ್ಷ, ಅನುಮಾನ, ಉಪಮಾನ, ಆಗಮ, ಉಪಮಾನ ಇವುಗಳಲ್ಲಿ ಯಾವುದೂ ಇರಲಿಲ್ಲ.

ನಾರ್ಥಾಪತ್ತಿರ್ನ ಚೈತಿಹ್ಯಂ ನ ದೃಷ್ಟಾಂತೋ ನ ಸಂಶಯಃ।
ನ ಕ್ವಚಿನ್ನಿರ್ಣಯೋ ರಾಜನ್ನ ಧರ್ಮಾಧರ್ಮ ಏವ ಚ ॥೨೭॥

ರಾಜನೇ! ಅರ್ಥಾಪತ್ತಿ, ಐತಿಹ್ಯಗಳೆಂಬ ಪ್ರಮಾಣಗಳೂ ಇರಲಿಲ್ಲ. ದೃಷ್ಟಾಂತವಿರಲಿಲ್ಲ. ಸಂಶಯ, ನಿಶ್ಚಯಗಳು ಇರಲಿಲ್ಲ. ಧರ್ಮಾಧರ್ಮಗಳೂ ಇರಲಿಲ್ಲ.

ತಿರ್ಯಕ್ ಸ್ಥಾವರಂ ಚೈವ ನ ದೇವಾ ನಚ ಮಾನುಷಾಃ।
ವರ್ಣಾಶ್ರಮವಿಭಾಗಾಶ್ಚ ನಚ ಕರ್ತಾ ನ ಕಾಮಕೃತ್।
ನಚಾರ್ಥಶ್ಚ ವಿಭೂತಿಶ್ಚ ನಾಚಾರ್ಥಸ್ಯ ವಿಚೇಷ್ಟಿತಮ್ ॥೨೮॥

ವಿವಿಧವಾದ ತಿರ್ಯಕ್, ಸ್ಥಾವರ, ಜಂಗಮಾದಿಗಳು ಇರಲಿಲ್ಲ. ವರ್ಣಾಶ್ರಮ-ವಿಭಾಗಗಳಿರಲಿಲ್ಲ. ಕರ್ತನು, ಕೊಡುವವನೂ ಇರಲಿಲ್ಲ, ಧನ, ಐಶ್ವರ್ಯ, ಅದರ ಫಲಾನುಭವ ಇವುಗಳಲ್ಲಿ ಯಾವುದೊಂದೂ ಇರಲಿಲ್ಲ.

ತಮೋಭೂತಮಿದಂ ಸರ್ವಮನಾಲೋಕಂ ಜಗನ್ನೃಪ।
ನಚಾತ್ಮಾ ವಿದ್ಯಮಾನೋಽಪಿ ಮನಸಾ ಯೋಗಮಿಚ್ಛತಿ ॥೨೯॥

ರಾಜನೇ! ಜಗತ್ತೆಲ್ಲವೂ ತಮೋಮಯವಾಗಿ ಪ್ರಕಾಶಹೀನವಾಗಿತ್ತು. ಆತ್ಮ-ವಿದ್ದರೂ ಮನಸ್ಸಿನ ಸಂಬಂಧವನ್ನು ಹೊಂದಿರಲಿಲ್ಲ.

ಅಚೇತನಂ ಮನಸ್ತ್ವಾಸೀದಾತ್ಮಾ ಏವ ಸಚೇತನಃ।
ಈಶ್ವರಶ್ಚೇತನಸ್ತ್ವೇಕಸ್ತೇನೇದಂ ಗಹನೀಕೃತಮ್।
ಮಂತ್ರಾಶ್ಚ ಚೇತನಾ ರಾಜನ್ನ ಚ ದೇಹೇನ ಯೋಜಿತಾಃ ॥೩೦॥

ರಾಜನೇ! ಆತ್ಮಮಾತ್ರ ಜ್ಞಾನವಿಶಿಷ್ಟನಾಗಿದ್ದನು. ಮನಸ್ಸು ಸಹಅಚೇತನವಾಗಿತ್ತು. ಈ ಪ್ರಪಂಚವನ್ನೆಲ್ಲ ವ್ಯಾಪಿಸಿರುವ ಈಶ್ವರನೊಬ್ಬನೇ ಚೇತನನೆನಿಸಿದ್ದನು. ಅಂಥ ಈಶ್ವರನಿಂದಲೇ ಜಗತ್ತು ತುಂಬಿಹೋಗಿತ್ತು. ಮಂತ್ರಗಳು ಚೈತನ್ಯಪೂರಿತವಾಗಿ-ದ್ದವು. ಆದರೆ ಆ ಮಂತ್ರಗಳಿಗೆ ದೇಹದ ಜೊತಡೆ ಸಂಪರ್ಕವೇ ಇರಲಿಲ್ಲ.

ತೇನ ವಿಶ್ವಸೃಜೋ ನಾಮ ಋಷಯೋ ಮಂತ್ರದೇವತಾಃ।
ಚೈತನ್ಯಮೀಶ್ವರಾತ್ ಪ್ರಾಪ್ಯ ಬ್ರಹ್ಮಾಂಡಂ ತೈರ್ವಿನಿರ್ಮಿತ್ತಮ್ ॥೩೧॥

ಅಂಥ ಸ್ಥಿತಿಯಲ್ಲಿ ಮಂತ್ರದೇವತೆಗಳೆನಿಸಿಕೊಂಡ ಸೃಷ್ಟಿಕರ್ತರೆಂಬ ಋಷಿಗಳು ಮೊದಲು ಈಶ್ವರನಿಂದ ಹುಟ್ಟಿದರು. ಇವರು ಈಶ್ವರನಿಂದ ತಕ್ಕ ಜ್ಞಾನವನ್ನು ಹೊಂದಿ ಈ ಬ್ರಹ್ಮಾಂಡವನ್ನು ಸೃಷ್ಟಿಸಿದರು.

ಇಷ್ಟಾವಿಶ್ವಸೃಜಂ ಯಜ್ಞಂ ನಿರ್ಮಿತಂ ಪ್ರಪಿತಾಮಹಃ।
ಸೃಷ್ಟಿಸ್ತೇನ ಸಮಾರಬ್ಧಾ ಪ್ರಸಾದಾದೀಶ್ವರಸ್ಯ ಚ ॥೩೨॥

ವಿಶ್ವಸೃಜವೆಂಬ ಯಾಗವನ್ನು ನಡೆಸಿ ಪಿತಾಮಹನೆಂಬುವನನ್ನು ಸೃಷ್ಟಿಸಿದರು. ಆ ಪಿತಾಮಹನು ಭಗವಂತನ ಅನುಗ್ರಹದಿಂದ ಲೋಕಗಳನ್ನು ಸೃಷ್ಟಿಸಿದನು.

ಚೈತನ್ಯಮೀಶ್ವರಸ್ಯೇದಂ ಸಚೇತನಮಿದಂ ಜಗತ್ ।
ಯೋಗೇನ ಚ ಸಮಾವಿಷ್ಟಂ ಜಗತ್ ಕೃತ್ಸ್ನಂ ಚ ಶಂಭುನಾ ॥೩೩॥

ಚೇತನವಿಶಿಷ್ಟವಾದ ಈ ಜಗತ್ತೆಲ್ಲವೂ ಈಶ್ವರನ ಜ್ಞಾನರೂಪವಾದುದು. ಆ ಈಶ್ವರನೇ ತನ್ನ ಶಕ್ತಿಯಿಂದ ಜಗತ್ತನ್ನು ವ್ಯಾಪಿಸಿದನು.

ಧರ್ಮಶ್ಚಾರ್ಥಶ್ಚ ಕಾಮಶ್ಚ ಉಕ್ತೋ ಮೋಕ್ಷಶ್ಚ ಸಂಕ್ಷಯೇ ।
ಬ್ರಹ್ಮಣಃ ಪರಮೇಶಸ್ಯ ಈಶ್ವರೇಣ ಯದೃಚ್ಛಯಾ ॥೩೪॥

ಭಗವಂತನು ಮೊದಲು ಬ್ರಹ್ಮನಿಗೆ ಧರ್ಮ, ಅರ್ಥ, ಕಾಮ, ಮೋಕ್ಷವನ್ನು ಉಪದೇಶಿಸಿದನು.

ಅಜ್ಞೋ ಜಂತುರನೀಶಶ್ಚ ಭಾಜನಂ ಸುಖದುಃಖಯೋಃ ।
ಈಶ್ವರಪ್ರೇರಿತೋ ಗಚ್ಛೇತ್ ಸ್ವರ್ಗಂ ವಾ ಶ್ವಭ್ರಮೇವ ವಾ ॥೩೫॥

ಜ್ಞಾನಶಕ್ತಿಗಳಿಲ್ಲದೆ, ಸುಖದುಃಖಗಳಿಗೆ ಪಾತ್ರವಾದುದರಿಂದ ಪ್ರಾಣಿಗಳು ಈ ಭಗವಂತನಿಂದ ಪ್ರೇರಿತಗಳಾಗಿಯೇ ಸ್ವರ್ಗನರಕಾದಿಗಳನ್ನು ಹೊಂದುವುವು.

ಪ್ರಧಾನಂ ಪುರುಷಂ ಚೈವ ಆತ್ಮಾನಂ ಸರ್ವದೇಹಿನಾಮ್ ।
ಮನಸಾ ವಿಷಯೈಶ್ಚೈವ ಚೇತನೇನ ಪ್ರಚೋದಿತಾಃ ।
ಸುಖದುಃಖೇನ ಯುಜ್ಯಂತೇ ಕರ್ಮಭಿಶ್ಚ ಪ್ರಚೋದಿತಾಃ ॥೩೬॥

ಪ್ರಾಣಿಗಳು ಈಶ್ವರನಿಂದಲೂ, ಮನಸ್ಸಿನಿಂದಲೂ, ವಿಷಯಗಳಿಂದಲೂ ತಮ್ಮ ಕರ್ಮಗಳಿಂದಲೂ ಪ್ರೇರಿತಗಳಾಗಿ ಪ್ರಕೃತಿಪುರುಷಸಂಬಂಧಗಳಿಂದ ಸುಖದುಃಖಗಳನ್ನು ಹೊಂದುತ್ತಿವೆ.

ವರ್ಣಾಶ್ರಮವಿಭಾಗಾಶ್ಚ ಈಶ್ವರೇಣ ಪ್ರವರ್ತಿತಾಃ ।
ಸದೇವಾಸುರಗಂಧರ್ವಂ ಯೇನೇದಂ ನಿರ್ಮಿತಂ ಜಗತ್ ॥೩೭॥

ದೇವತೆಗಳನ್ನು, ಅಸುರರನ್ನು, ಗಂಧರ್ವರನ್ನು ಸೃಷ್ಟಿಸಿದ ಆ ಈಶ್ವರನೇ ವರ್ಣಾಶ್ರಮಗಳನ್ನು, ಅವುಗಳಲ್ಲಿ ಹಲವು ಅಂತರ್ಭೇದವನ್ನು ಏರ್ಪಡಿಸಿರುವನು. ಅವನ ಆಜ್ಞೆಯಂತೆ ಸಕಲಲೋಕಗಳು ಸ್ವಕರ್ಮದಲ್ಲಿ ಪ್ರವರ್ತಿಸುತ್ತಿದೆ.

ತ್ವಂ ಚಾನ್ಯೇ ಚ ಮಹಾರಾಜ ಈಶ್ವರಸ್ಯ ವಶೇ ಸ್ಥಿತಾಃ।
ಜೀವಂತೇ ಚ ಮ್ರಿಯಂತೇ ಚ ನ ಸ್ವತಂತ್ರಾಃ ಕಥಂಚನ ॥೩೮॥

ಮಹಾರಾಜನೇ! ನೀನು, ನಾನು, ಇತರರು, ಎಲ್ಲರೂ ಆ ಈಶ್ವರನ ಅಧೀನದಲ್ಲಿಯೇ ನಡೆಯುವವರೇ ಹೊರತು ಯಾರೂ ಸ್ವತಂತ್ರರಲ್ಲ? ಪ್ರಾಣಿಗಳ ಜನನ-ಮರಣಗಳು ಭಗವಂತನ ಅಧೀನವೇ ಆಗಿವೆ.

ಹಿತ್ವಾಹಿತ್ವಾ ಚ ಭೂತಾನಿ ಹತ್ವಾ ಸರ್ವಮಿದಂ ಜಗತ್।
ಯಜಂತೇ ಕರ್ಮಣಾ ದೇವಾ ನ ಸ ಪಾಪೇನ ಲಿಪ್ಯತೇ ॥೩೯॥

ಪ್ರಾಣಿಗಳಿಗೆ ಯಾವುದರಲ್ಲಿಯೂ ಸ್ವಾತಂತ್ರ್ಯವಿಲ್ಲ. ದೇವತೆಗಳು ಪ್ರಾಣಿಗಳನ್ನು ಕೊಂದು ಜಗತ್ತನ್ನು ನಾಶಪಡಿಸಿಯೇ ಕರ್ಮರೂಪವಾದ ಯಾಗಗಳನ್ನು ಮಾಡುವರು. ಅದರಿಂದ ಅವರಿಗೆ ಯಾವ ಪಾಪವೂ ಇರುವುದಿಲ್ಲ.

ಹಿಂಸಾತ್ಮಕಾನಿ ಕರ್ಮಾಣಿ ಸರ್ವೇಷಾಂ ಗೃಹಮೇಧಿನಾಮ್।
ದೇವತಾನಾಮೃಷೀಣಾಂ ಚ ತೇ ಚ ಯಾಂತಿ ಪರಾಂ ಗತಿಮ್ ॥೪೦॥

ದೇವತೆಗಳಾಗಲಿ, ಋಷಿಗಳಾಗಲಿ, ಗೃಹಸ್ಥರಾಗಲಿ ಇವರೆಲ್ಲರ ಕರ್ಮಗಳಲ್ಲಿ ಹಿಂಸೆಯು ಇರುವುದು. ಅಂಥ ಕರ್ಮವನ್ನು ಮಾಡುವ ಗೃಹಸ್ಥರು ಉತ್ತಮ ಗತಿಯನ್ನು ಹೊಂದುವರು.

ಪಾತಿತಾಃ ಶತ್ರವಃ ಪೂರ್ವಂ ಸರ್ವತ್ರ ವಸುಧಾಧಿಪೈಃ।
ಪ್ರಜಾನಾಂ ಹಿತಕಾಮೈಶ್ಚ ಆತ್ಮನಶ್ಚ ಹಿತೈಷಿಭಿಃ ॥೪೧॥

ಮಹಾತ್ಮರೆನಿಸಿದ ನಮ್ಮ ಹಿಂದಿನ ಮಹಾರಾಜರು ಪ್ರಜೆಗಳಿಗೂ ತಮಗೂ ಹಿತವನ್ನು ಬಯಸಿ ಹಲವು ಶತ್ರುಗಳನ್ನು ಸಂಹರಿಸಿರುವರು.

ಯದಿ ತತ್ರ ಭವೇತ್ ಪಾಪಂ ಕಥಂ ತೇ ಸ್ವರ್ಗಮಾಸ್ಥಿತಾಃ।
ನ ಪ್ರಾಪ್ತಾ ನರಕಂ ರಾಜನ್ ವೇಷ್ಟಿತಾಃ ಪಾಪಕರ್ಮಭಿಃ ॥೪೨॥

ರಾಜನೇ! ಅದು ಪಾಪವಾಗಿದ್ದರೆ ಅವರು ಸ್ವರ್ಗವನ್ನು ಹೇಗೆ ಹೊಂದುತ್ತಿದ್ದರು. ಅದೇ ಅವರನ್ನು ನರಕದಲ್ಲಿ ಹಾಕಿರುತ್ತಿತ್ತಲ್ಲವೇ?

ಏವಂ ದಾನಸಮಾಧಾನಂ ಮಾರ್ಗಮಾತಿಷ್ಠತೋ ನೃಪ।
ದ್ವಿಜಾತೇರ್ಬ್ರಹ್ಮಭೂತಸ್ಯ ಸ್ಪೃಹಯಂತಿ ದಿವೌಕಸಃ ॥೪೩॥

ರಾಜನೇ! ಹಿಂದೆ ಹೇಳಿದ್ದನ್ನು ಮನಸ್ಸಿಗೆ ತಂದುಕೊಂಡು ಮನಸ್ಸನ್ನು ಸಮಾಧಾನದಿಂದ ಕರ್ಮಮಾರ್ಗದಲ್ಲಿ ತೊಡಗಿಸು. ಭಗವಂತನನ್ನು ಜಪಿಸುವ ಬ್ರಹ್ಮಾದಿಗಳನ್ನು ನೋಡಿ ದೇವತೆಗಳೂ ಅವರ ಸ್ಥಿತಿಗೆ ಆಸೆಪಡುವರು.

ಸ ರತ್ನಾನಿ ವಿಚಿತ್ರಾಣಿ ಸಂಭೃತಾನಿ ತತಸ್ತತಃ।
ಮಖೇಷ್ವನಿಭಿಸಂತ್ಯಜ್ಯ ನಾಸ್ತಿಕ್ಯಮಭಿಜಲ್ಪಸಿ ॥೪೪॥

ಈ ಮಹಾಯಜ್ಞದ ವಿಜಯದಿಂದ ನಾವು ವಿಚಿತ್ರವಾದ ರತ್ನಗಳನ್ನು ನಾನಾದೇಶಗಳಿಂದ ಸಂಗ್ರಹಿಸಿರುತ್ತೇವೆ. ಹೀಗೆ ಸಂಗ್ರಹಿಸಿದ ರತ್ನಗಳನ್ನು ನಾವು ಯಜ್ಞಗಳ ಮೂಲಕವಾಗಿ ವಿತರಣೆ ಮಾಡಬೇಕಾಗಿದೆ. ನೀನು ಹಾಗೇ ಮಾಡಲಿಚ್ಛಿಸದೇ ನಾಸ್ತಿಕತ್ವಕ್ಕೆ ಸಂಬಂಧಿಸಿದ ಮಾತುಗಳನ್ನು ಆಡುತ್ತಿರುವೆ.

ಕುಟುಂಬಮಾಸ್ಥಿತೇ ತ್ಯಾಗಂ ನ ಪಶ್ಯಾಮಿ ನರಾಧಿಪ।
ರಾಜಸೂಯಾಶ್ವಮೇಧೇಷು ಸರ್ವಮೇಧೇಷು ವಾ ಪುನಃ ॥೪೫॥

ನರಾಧಿಪನೇ! ಕುಟುಂಬದಲ್ಲಿ ಆಸಕ್ತನಾದವನಿಗೆ ತ್ಯಾಗವೆಂಬುದು ಅಸಾಧ್ಯವಾದ ಕಾರ್ಯ. ನೀನೀಗ ಈ ಗೃಹಸ್ಥಾಶ್ರಮಧರ್ಮವನ್ನೇ ಹಿಡಿದು ಬ್ರಾಹ್ಮಣರಿಂದ (ಮೂಲಕ) ಆಚರಿಸಲ್ಪಡತಕ್ಕ ಅಶ್ವಮೇಧ, ರಾಜಸೂಯ, ಸರ್ವಮೇಧಗಳೇ ಮೊದಲಾದ ಹಲವು ಯಜ್ಞಗಳನ್ನು ನಡೆಸು.

ಯೇ ಚಾನ್ಯೇ ಕ್ರತವಸ್ತಾತ ಬ್ರಾಹ್ಮಣೈರಭಿಪೂಜಿತಾಃ।
ತೈರ್ಯಜಸ್ವ ಮಹಾರಾಜ ಶಕ್ರೋ ದೇವಪತಿರ್ಯಥಾ ॥೪೬॥

ಮಹಾರಾಜನೇ! ಈ ಯಜ್ಞಯಾಗಗಳ ಅನುಷ್ಠಾನದಿಂದ, ಬ್ರಾಹ್ಮಣರ ಪ್ರಶಂಸೆಗೆ ಪಾತ್ರನಾಗು. ದೇವಪತಿಯಾದ ಇಂದ್ರನಂತೆ ಆ ಮಹಾಯಜ್ಞಗಳ ಮೂಲಕವಾಗಿ ದೇವತೆಗಳನ್ನು ಆರಾಧಿಸು.

ರಾಜ್ಞಃ ಪ್ರಮಾದದೋಷೇಣ ದಸ್ಯುಭಿಃ ಪರಿಮುಷ್ಯತಾಮ್।
ಅಶರಣ್ಯಃ ಪ್ರಜಾನಾಂ ಯಃ ಸ ರಾಜಾ ಕಲಿರುಚ್ಯತೇ ॥೪೭॥

ಯಾವ ರಾಜನು ತನ್ನ ಪ್ರಮಾದದೋಷದಿಂದಾಗಿ ಕಳ್ಳರು ಸ್ವತ್ತನ್ನು ಅಪಹರಿಸಿದಾಗ ಪ್ರಜೆಗಳಿಗೆ ರಕ್ಷಣಾಗುವುದಿಲ್ಲವೋ, ಅಂಥ ರಾಜನು ಕಲಿ ಎಂಬ ಹೆಸರಿನಿಂದ ಕರೆಯಲ್ಪಡುತ್ತಾನೆ.

ಅಶ್ವಾನ್ ಗಾಶ್ಚೈವ ದಾಸೀಶ್ಚ ಕರೇಣೂಶ್ಚ ಸ್ವಲಂಕೃತಾಃ।
ಗ್ರಾಮಾನ್ ಜನಪದಾಂಶ್ಚೈವ ಕ್ಷೇತ್ರಾಣಿ ಚ ಗೃಹಾಣಿ ಚ ॥೪೮॥

ಅಪ್ರದಾಯ ದ್ವಿಜಾತಿಭ್ಯೋ ಮಾತ್ಸರ್ಯಾವಿಷ್ಟಚೇತಸಃ।
ವಯಂ ತೇ ರಾಜಕಲಯೋ ಭವಿಷ್ಯಾಮೋ ವಿಶಾಂ ಪತೇ ॥೪೯॥

ಮಹಾರಾಜನೇ! ನಾವು ದಾಯಾದಿಗಳ ದ್ವೇಷದಿಂದ ಇಷ್ಟು ಕಾರ್ಯಗಳನ್ನು ನಡೆಸಿದೆವು. ಅವರನ್ನು ಕೊಂದು ಐಶ್ವರ್ಯವನ್ನು ಸಾಧಿಸಿದೆವು. ಹೀಗಿರುವಾಗ ಅದಕ್ಕಾಗಿ ಅಲಂಕೃತವಾದ ಹೂವುಗಳು, ಆನೆಗಳು, ಕುದುರೆಗಳನ್ನು, ದಾಸಿಯರನ್ನು, ಗ್ರಾಮಗಳನ್ನು, ಕ್ಷೇತ್ರಗಳನ್ನು, ಗೃಹಗಳನ್ನು ಬ್ರಾಹ್ಮಣರಿಗೆ ದಾನಮಾಡಿ ಧನವನ್ನು ಸಾರ್ಥಕಗೊಳಿಸದೆ ಹೋದಲ್ಲಿ ನಾವು ರಾಜರೆಂದು ಕರೆಯಲ್ಪಡದೆ ಕಲಿಪುರುಷರೇ ಆಗುವೆವು.

ಅದಾತಾರೋಽಶರಣ್ಯಾಶ್ಚ ರಾಜಕಿಲ್ಬಿಷನಾಗಿನಃ।
ದೋಷಣಾಮೇವ ಭೋಕ್ತಾರೋ ನ ಸುಖಾನಾಂ ಕದಾಚನ ॥೫೦॥

ಮತ್ತೊಬ್ಬರಿಗೆ ದಾನಮಾಡದೆ, ಶರಣಾಗತರನ್ನು ರಕ್ಷಿಸದೆ ಇರುವಂತಹ ರಾಜರು ಮಹಾಪಾಪಕ್ಕೆ ಗುರಿಯಾಗುವರು. ಅವರಿಗೆ ಎಂದಿಗೂ ಸುಖವಿರುವುದಿಲ್ಲ.

ಅನಿಷ್ಟ್ವಾ ಚ ಮಹಾಯಜ್ಞೈರಕೃತ್ವಾ ಚ ಪಿತೃಸತ್ಕ್ರಿಯಾಮ್ ।
ತೀರ್ಥೇಷ್ವನಭಿಸಂತ್ಯಜ್ಯ ಪ್ರವ್ರಜಿಷ್ಯಸಿ ಚೇದಥ ॥೫೧॥

ಛಿನ್ನಾಭ್ರಮಿವ ಗಂತಾಸಿ ವಿಲಯಂ ಮಾರುತೇರಿತಮ್ ।
ಲೋಕಯೋರುಭಯೋರ್ನಷ್ಟೋ ಹ್ಯಂತರಾಲೇ ವ್ಯವಸ್ಥಿತಃ ॥೫೨॥

ಪ್ರಭುವೇ! ಮಹಾಯಜ್ಞಗಳಿಂದ ದೇವತೆಗಳನ್ನು ಆರಾಧಿಸದೆ ಪಿತೃಶ್ರಾದ್ಧಗಳನ್ನು ನಡೆಸದೆ ಪುಣ್ಯತೀರ್ಥಗಳ ಸ್ನಾನವನ್ನು ಮಾಡದೆ ನೀನು ರಾಜ್ಯವನ್ನು ತೊರೆದು ಸನ್ಯಾಸಿಯಾಗಿ ಹೋದ ಪಕ್ಷದಲ್ಲಿ ಇಹದಲ್ಲಿಯೂ, ಪರದಲ್ಲಿಯೂ ಎಲ್ಲವನ್ನು ಕಳೆದುಕೊಂಡು ಪಿಶಾಚಜನ್ಮದಿಂದ ಬಿರುಗಾಳಿಗೆ ಎದುರಾದ ಮೋಡದಂತೆ ನಾಶ-ಹೊಂದುವಿ.

ಅಂತರ್ಬಹಿಶ್ಚ ಯತ್ಕಿಂಚಿನ್ಮನೋವ್ಯಾಸಂಗಕಾರಕಮ್ ।
ಪರಿತ್ಯಜ್ಯ ಭವೇತ್ ತ್ಯಾಗೀ ನ ಯೋ ಹಿತ್ವಾ ಪ್ರತಿಷ್ಠತೇ ॥೫೩॥

ಅಂತರಂಗದಲ್ಲಿ ಬಹಿರಂಗದಲ್ಲಿ ಮನಸ್ಸಿಗೆ ಚಿಂತೆಯನ್ನುಂಟುಮಾಡುವ ವಸ್ತುವನ್ನು ತೊರೆದವನು ತ್ಯಾಗಿಯೆನಿಸುವನೇ ಹೊರತು; ಮನೆಯನ್ನು ಬಿಟ್ಟು ಹೋದ ಮಾತ್ರಕ್ಕೆ ಸನ್ಯಾಸಿಯಾಗುವುದಿಲ್ಲ.

ಏತಸ್ಮಿನ್ ವರ್ತಮಾನಸ್ಯ ವಿಧೌ ವಿಪ್ರನಿಷೇವಿತೇ ।
ಬ್ರಾಹ್ಮಣಸ್ಯ ಮಹಾರಾಜ ನೋಚ್ಛಿತ್ತಿರ್ವಿದ್ಯತೇ ಕ್ವಚಿತ್ ॥೫೪॥

ಇಂಥ ಪರಮಶ್ರೇಷ್ಠವಾದ ಗೃಹಸ್ಥಾಶ್ರಮದಲ್ಲಿಯೇ ಇದ್ದುಕೊಂಡು ಧರ್ಮಕ್ಕೆ ಅವಿರುದ್ಧವಾದ, ವೇದವಿಹಿತವಾದ ಕರ್ಮಮಾರ್ಗದಲ್ಲಿ ವರ್ತಿಸತಕ್ಕವನಿಗೆ ಎಂದಿಗೂ ಎಲ್ಲಿಯೂ ಹಾನಿಯಿರುವುದಿಲ್ಲ.

ನಿಹತ್ಯ ಶತ್ರೂಂಸ್ತರಸಾ ಸಮೃದ್ಧಾನ್
ಶಕ್ರೋ ಯಥಾ ದೈತ್ಯಬಲಾನಿ ಸಂಖ್ಯೇ ।

ಕಃ ಪಾರ್ಥ ಶೋಚೇನ್ನಿರತಃ ಸ್ವಧರ್ಮೇ
ಪೂರ್ವೈಃ ಸ್ಮೃತೇ ಪಾರ್ಥಿವ ಶಿಷ್ಟಜುಷ್ಟೇ ॥೫೫॥

ಕುಂತಿಪುತ್ರನೇ! ಇಂದ್ರನು ಯುದ್ಧದಲ್ಲಿ ದೈತ್ಯರನ್ನು ಕೊಂದನು. ಪೂರ್ವಜರಿಂದ ವಿಧಿಸಲ್ಪಟ್ಟ, ಶಿಷ್ಟರಾದ ರಾಜರಿಂದ ಆಚರಿಸಲ್ಪಡುತ್ತಿರುವ ಸ್ವಧರ್ಮದಲ್ಲಿ ನೆಲೆಗೊಂಡನು. ಯಾರು ತಾನೇ ಇಂಥ ದುಃಖಕ್ಕೆ ಅವಕಾಶ ಕೊಡುವನು !

ಕ್ಷಾತ್ರೇಣ ಧರ್ಮೇಣ ಪರಾಕ್ರಮೇಣ
ಜಿತ್ವಾಮಹೀಂ ಮಂತ್ರಿವಿದ್ಭ್ಯಃ ಪ್ರದಾಯ।
ನಾಕಸ್ಯ ಪೃಷ್ಠೇऽಸಿ ನರೇಂದ್ರ ಗಂತಾ
ನ ಶೋಚಿತವ್ಯಂ ಭವತಾದ್ಯ ಪಾರ್ಥ ॥೫೬॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ದ್ವಾದಶೋऽಧ್ಯಾಯಃ ॥೧೨॥

ಕ್ಷತ್ರಿಯ ಧರ್ಮದಿಂದ ನಿನ್ನ ಪರಾಕ್ರಮವನ್ನು ತೋರಿಸು. ಈ ಭೂಮಿಯನ್ನು ಸಾಧಿಸಿದ ನೀನು ವೇದವನ್ನು ಬಲ್ಲ ಬ್ರಾಹ್ಮಣನಿಗೆ ಧನವನ್ನು ದಾನಮಾಡಿ ಪುಣ್ಯಫಲದಿಂದ ಸ್ವರ್ಗವನ್ನು ಹೊಂದಬಹುದು. ಈ ಸ್ಥಿತಿಯಲ್ಲಿ ನೀನು ಶೋಕಿಸುವುದು ಯುಕ್ತವೇ ಅಲ್ಲ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ಹನ್ನೆರಡನೆಯ ಅಧ್ಯಾಯವು ಮುಗಿಯಿತು.

* * * * *

೧೩. ಹದಿಮೂರನೆಯ ಅಧ್ಯಾಯ

ಯುಧಿಷ್ಠಿರನನ್ನು ಕುರಿತು ಸಹದೇವನ ಮಾತು.

ಸಹದೇವಃ

ನ ಬಾಹ್ಯಂ ದ್ರವ್ಯಮುತ್ಸೃಜ್ಯ ಸಿದ್ಧಿರ್ಭವತಿ ಭಾರತ।
ಶಾರೀರಂ ದ್ರವ್ಯಮುತ್ಸೃಜ್ಯ ಸಿದ್ಧಿರ್ಭವತಿ ವಾ ನ ವಾ ॥೧॥

ಸಹದೇವ – ಭಾರತನೇ! ಬಾಹ್ಯವಾದ ಸಂಪತ್ತುಗಳನ್ನು ತ್ಯಾಗ ಮಾಡುವುದರಿಂದ ಸಿದ್ಧಿಯುಂಟಾಗುವುದಿಲ್ಲ. ಆದರೆ ಶರೀರಕ್ಕೆ ಸಂಬಂಧಿಸಿದ ಅಹಂಕಾರ ಮಮಕಾರಗಳನ್ನು ಬಿಡುವುದುರಿಂದ ಸಿದ್ಧಿಯಾಗಬಹುದು.

ಬಾಹ್ಯದ್ರವ್ಯವಿಮುಕ್ತಸ್ಯ ಶಾರೀರೇಷು ಚ ಗೃದ್ಧ್ಯತಃ।
ಯೋ ಧರ್ಮೋ ಯತ್ ಸುಖಂ ವಾ ಸ್ಯಾದ್ ದುರ್ಹೃದಾಂ
ತತ್ ತಥಾಸ್ತು ನಃ ॥೨॥

ಹೊರಗಿನ ವಸ್ತುಗಳನ್ನು ಬಿಟ್ಟು ಶರೀರದ ಒಳಗಿನ ಸುಖವನ್ನು ಯಾರು ಬಯಸುತ್ತಾನೋ, ಅವನ ಧರ್ಮ, ಸುಖಗಳೆಲ್ಲವೂ ಶತ್ರುಗಳಿಗೆ ಮಾತ್ರವೇ ಲಭಿಸಲಿ.

ಶಾರೀರಂ ದ್ರವ್ಯಮುತ್ಸೃಜ್ಯ ಪೃಥಿವೀಮನುಶಾಸತಃ।
ಯೋ ಧರ್ಮೋ ಯತ್ ಸುಖಂ ವಾ ಸ್ಯಾತ್ ಸುಹೃದಾಂ
ತತ್ ತಥಾಸ್ತು ನಃ ॥೩॥

ಶರೀರ ಸಂಬಂಧವಾದ ಅಹಂಕಾರ-ಮಮಕಾರಗಳನ್ನು ತ್ಯಜಿಸಿ ಪೃಥಿವಿಯನ್ನು ಪಾಲನೆ ಮಾಡುವವನಿಗೆ ಯಾವ ಧರ್ಮವಿರುವುದೋ ಮತ್ತು ಯಾವ ಸುಖವಿರುವುದೋ, ಅಂಥ ಸುಖವು ಮತ್ತು ಧರ್ಮವು ನಮ್ಮ ಸುಹೃದರಿಗೆ ಇರಲಿ.

ದ್ವ್ಯಕ್ಷರಸ್ತು ಭವೇನ್ಮೃತ್ಯುಸ್ತ್ರ್ಯಕ್ಷರಂ ಬ್ರಹ್ಮ ಶಾಶ್ವತಮ್।
ಮಮೇತಿ ಚ ಭವೇನ್ಮೃತ್ಯುರ್ನ ಮಮೇತಿ ಚ ಶಾಶ್ವತಮ್ ॥೪॥

ಮೃತ್ಯುವಿನ ಮಾರ್ಗವು ಎರಡೇ ಅಕ್ಷರಗಳಲ್ಲಿರುವುದು. ಶಾಶ್ವತವಾದ ಬ್ರಹ್ಮ-ಮಾರ್ಗವು ಮೂರು ಅಕ್ಷರಗಳಲ್ಲಿ ಅಡಗಿರುವುದು. ಮಮ ಎಂಬ ಎರಡಕ್ಷರಗಳೇ ಮೃತ್ಯುವಿಗೆ ಮಾರ್ಗವು 'ನಮಮ' ಎಂಬ ಮೂರಕ್ಷರಗಳು ಶಾಶ್ವತ ಪರಬ್ರಹ್ಮಕ್ಕೆ ಕಾರಣವು.

ಬ್ರಹ್ಮಮೃತ್ಯೂ ಚ ತೌ ರಾಜನ್ನಾತ್ಮನ್ಯೇವ ಸಮಾಶ್ರಿತೌ ।
ಅದೃಶ್ಯಮಾನೌ ಭೂತಾನಿ ಯೋಧಯೇತಾಮಸಂಶಯಮ್ ॥೫॥

ರಾಜನೇ! ಬ್ರಹ್ಮ ಮತ್ತು ಮೃತ್ಯುಗಳು ಅವರವರ ಬುದ್ಧಿಯಲ್ಲಿಯೇ ಕಾಣದಂತೆ ಸೇರಿಕೊಂಡಿವೆ. ಪ್ರಾಣಿಗಳನ್ನು ತಮ್ಮ ವಶಮಾಡಿಕೊಳ್ಳುವವು. ಇದರಲ್ಲಿ ಸಂದೇಹವಿಲ್ಲ.

ಅವಿನಾಶೋಽಸ್ಯ ಸತ್ವಸ್ಯ ನಿಯತೋ ಯದಿ ಭಾರತ ।
ಛಿತ್ತ್ವಾ ಶರೀರಂ ಭೂತಾನಾಂ ನ ಹಿಂಸಾ ಪ್ರತಿಪತ್ಸ್ಯತೇ ॥೬॥

ಭಾರತನೇ! ನೀನು ತಿಳಿದುಕೊಂಡಿರುವಂತೆ ಈ ಜೀವಕ್ಕೆ ವಿನಾಶವೆಂಬುದೇ ಇಲ್ಲವಾದಲ್ಲಿ ಪ್ರಾಣಿಗಳ ಶರೀರವನ್ನು ಕತ್ತರಿಸಿ ಹಾಕಿದರೂ ಆ ಶರೀರದಲ್ಲಿ ಇರುವ ಜೀವಕ್ಕೆ ಯಾವ ಹಿಂಸೆಯೂ ಆಗುವುದಿಲ್ಲ.

ಅಥಾಪಿ ಚ ಸಹೋತ್ಪತ್ತಿಃ ಸತ್ತ್ವಸ್ಯ ಪ್ರಲಯಸ್ತಥಾ ।
ನಷ್ಟೇ ಶರೀರೇ ನಷ್ಟಂ ಸ್ಯಾದ್ ವೃಥಾ ಚ ಸ್ಯಾತ್ ಕ್ರಿಯಾಪಥಃ ॥೭॥

ಒಂದು ವೇಳೆ ಈ ಶರೀರದೊಡನೆ ಜೀವವೂ ವಿನಾಶವಾದ ಪಕ್ಷದಲ್ಲಿ, ಶರೀರದೊಡನೆ ಜೀವವೂ ಹೋಗಿಬಿಡುವುದು. ಆಗ ಕರ್ಮಮಾರ್ಗವು ವ್ಯರ್ಥವೇ ಆಗುವುದು.

ತಸ್ಮಾದೇಕಾಂತಮುತ್ಸೃಜ್ಯ ಪೂರ್ವೈಃ ಪೂರ್ವತರೈಶ್ಚ ಯಃ ।
ಪಂಥಾ ನಿಷೇವಿತಃ ಸದ್ಭಿಃ ಸ ನಿಷೇವ್ಯೋ ವಿಜಾನತಾ ॥೮॥

ಈ ಕಾರಣದಿಂದ ತಿಳಿವಳಿಕೆಯುಳ್ಳವನು ತನ್ನ ಬುದ್ಧಿಯನ್ನು ಪ್ರಮಾಣವಾಗಿಟ್ಟುಕೊಳ್ಳದೇ ನಮ್ಮ ಹಿರಿಯರು ಹಾಗೂ ಪೂರ್ವಜರು, ಸತ್ಪುರುಷರು ಅನುಸರಿಸಿಕೊಂಡು ಬಂದ ಹಾದಿಯನ್ನೇ ಆಶ್ರಯಿಸಬೇಕು.

ಲಬ್ಧ್ವಾಪಿ ಪೃಥಿವೀಂ ಕೃತ್ಸ್ನಾಂ ಸಹಸ್ಥಾವರಜಂಗಮಾಮ್ ।
ನ ಭುಂಕ್ತೇ ಯೋ ನೃಪಃ ಸಮ್ಯಗ್ ನಿಷ್ಫಲಂ ತಸ್ಯ ಜೀವಿತಮ್ ॥೯॥

ಸ್ಥಾವರ-ಜಂಗಮಗಳಿಂದ ಯುಕ್ತವಾದ ಈ ಸಕಲ ಭೂಮಿಯನ್ನು ಪಡೆದು ಯಾವ ರಾಜನೂ ಅದನ್ನು ಚೆನ್ನಾಗಿ ಪಾಲನೆ ಮಾಡುವುದಿಲ್ಲವೋ ಅಂಥವನ ಜೀವನವು ವ್ಯರ್ಥವೇ ಸರಿ.

ಅಥವಾ ವಸತೋ ರಾಜನ್ ವನೇ ವನ್ಯೇನ ಜೀವತಃ।
ದ್ರವ್ಯೇಷು ಯಸ್ಯ ಮಮತಾ ಮೃತ್ಯೋರಾಸ್ಯೇ ಸ ವರ್ತತೇ ॥೧೦॥

ಒಂದುವೇಳೆ ಎಲ್ಲವನ್ನೂ ತ್ಯಾಗ ಮಾಡಿ ಕಾಡಿಗೆ ಹೋದರೂ, ಅಲ್ಲಿರುವ ವಸ್ತುಗಳಿಂದ ಬದುಕತಕ್ಕವನಿಗೆ ಆ ದ್ರವ್ಯಗಳಲ್ಲಿ ಮಮತೆ ಹುಟ್ಟಿದರೆ, ಅವನು ಮೃತ್ಯುವಿಗೆ ಬಾಯಿಗೆ ಸಿಲುಕಿದಂತೆಯೇ ಸರಿ.

ಬಾಹ್ಯಾಭ್ಯಂತರಭೂತಾನಾಂ ಸ್ವಭಾವಂ ಪಶ್ಯ ಭಾರತ।
ಯೇ ತು ಪಶ್ಯಂತಿ ತದ್ಭಾವಂ ಶುಷ್ಯಂತೇ ಸ್ತೋಕಕಾ ಇವ ॥೧೧॥

ಭಾರತನೇ! ಬಾಹ್ಯದಲ್ಲಿ ಅಂತರಂಗದಲ್ಲಿ ಇರುವ ವಸ್ತುಗಳ ಸ್ವಭಾವ ಭೇದಗಳನ್ನು ಚೆನ್ನಾಗಿ ವಿಮರ್ಶಿಸು. ಇವೆರಡನ್ನು ಯಥಾವತ್ತಾಗಿ ತಿಳಿದವನು ಮಹಾ-ಭಯದಿಂದ ಮುಕ್ತನಾಗುತ್ತಾನೆ.

ಭವಾನ್ ಪಿತಾ ಭವಾನ್ ಮಾತಾ ಭವಾನ್ ಭ್ರಾತಾ ಭವಾನ್ ಗುರುಃ।
ದುಃಖಪ್ರಲಾಪಾನಾರ್ತಸ್ಯ ತಸ್ಮಾನ್ಮೇ ಕ್ಷಂತುಮರ್ಹಸಿ ॥೧೨॥

ನೀನು ಮಹಾಪ್ರಾಜ್ಞನು, ನನಗೆ ತಂದೆ, ತಾಯಿ, ಗುರು, ಒಡಹುಟ್ಟಿದವನು ಎಲ್ಲವೂ ನೀನೇ ಆಗಿರುವಿ. ದುಃಖದಿಂದ ನಿನ್ನ ಮುಂದೆ ಪ್ರಲಾಪಿಸಿದ ನನ್ನ ಮಾತು-ಗಳನ್ನು ನೀನು ಮನ್ನಿಸಬೇಕು.

ತಥ್ಯಂ ವಾ ಯದಿ ವಾಽತಥ್ಯಂ ಯನ್ಮಯೈತತ್ ಪ್ರಭಾಷಿತಮ್।
ತದ್ ವಿದ್ಧಿ ಪೃಥಿವೀಪಾಲ ಭಕ್ತ್ಯಾ ಭರತಸತ್ತಮ ॥೧೩॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ
ರಾಜಧರ್ಮೇ ತ್ರಯೋದಶೋಽಧ್ಯಾಯಃ ॥೧೩॥

ಭರತಸತ್ತಮನೇ ! ನಾನು ಹೇಳಿದುದು ಸತ್ಯವಾಗಿರಲಿ, ಅಸತ್ಯವಾಗಿರಲಿ, ನಿನ್ನಲ್ಲಿ ಭಕ್ತಿಯಿಂದ ಹೇಳಿದ್ದೆಂದೇ ಗ್ರಹಿಸಬೇಕು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೩ನೆಯ ಅಧ್ಯಾಯವು ಮುಗಿಯಿತು.

*****

೧೪. ಹದಿನಾಕನೆಯ ಅಧ್ಯಾಯ

ದ್ರೌಪದೀದೇವಿಯು ಯುಧಿಷ್ಠಿರನನ್ನು ಕುರಿತು ರಾಜ್ಯಭಾರವನ್ನು ಮಾಡು ಎಂಬುದಾಗಿ ವಿವರವಾಗಿ ತಿಳಿಸುತ್ತಾಳೆ. ಕ್ಷತ್ರಿಯರು ಬ್ರಾಹ್ಮಣಧರ್ಮವನ್ನು ಆಶ್ರಯಿಸಬಾರದು. ಕ್ಷತ್ರಿಯರ ಧರ್ಮ ಹಾಗೂ ಬ್ರಾಹ್ಮಣ ಧರ್ಮದ ಬಗ್ಗೆ ವಿವೇಚನೆ. ದಂಡನೀತಿಯ ಅನುಸರಣೆಯಿಂದ ಆಗುವ ಲಾಭಗಳು. ಅಳವಡಿಸಿಕೊಂಡ ಕ್ಷತ್ರಿಯನ ವೈಭವ. ಬ್ರಾಹ್ಮಣರೂ ಕೂಡ ಕೆಲವೊಮ್ಮೆ ಯುದ್ಧಮಾಡಬೇಕು ಎಂಬ ಬೋಧನೆ. ಅವೈಷ್ಣವನಿಗೆ ಮತ್ತು ಪಾತಕಿಗಳಿಗೆ ಕಟ್ಟಿಚ್ಚರ. ದುರ್ಯೋಧನಾದಿಗಳು ಮಹಾಪಾತಕಿಗಳು ಎಂಬುದರ ಬೋಧನೆ. ಯುಧಿಷ್ಠಿರನಿಗೆ ಕರ್ತವ್ಯತ್ವದ ಬೋಧನೆ.

ವೈಶಂಪಾಯನಃ

ಅವ್ಯಾಹರತಿ ಕೌಂತೇಯೇ ಧರ್ಮರಾಜೇ ಯುಧಿಷ್ಠಿರೇ।
ಭ್ರಾತೄಣಾಂ ಬ್ರುವತಾಂ ತಾಂಸ್ತಾನ್ ವಿವಿಧಾನ್ ವೇದನಿಶ್ಚಯಾನ್ ॥೧॥

ವೈಶಂಪಾಯನರು– ಜನಮೇಜಯರಾಜನೇ! ಹೀಗೆ ತನ್ನ ನಾಲ್ವರು ಸಹೋದರರು ಹೇಳಿದ ವಿವಿಧ ಸಿದ್ಧಾಂತಗಳನ್ನು ಕೇಳಿಯೂ ಧರ್ಮರಾಜನು ಏನನ್ನೂ ಮಾತನಾಡದೇ ಸುಮ್ಮನಿದ್ದನು.

ಮಹಾಭಿಜನಸಂಪನ್ನಾ ಶ್ರೀಮತ್ಯಾಯತಲೋಚನಾ।
ಅಭ್ಯಭಾಷತ ರಾಜೇಂದ್ರಂ ದ್ರೌಪದೀ ಯೋಷಿತಾಂ ವರಾ ॥೨॥

ಆ ಸಂದರ್ಭದಲ್ಲಿ ಸತ್ಕುಲಪ್ರಸೂತೆಯಾದ, ಕಾಂತಿಯುಕ್ತಳಾದ, ವಿಶಾಲನೇತ್ರೆಯಾದ, ದ್ರೌಪದಿಯು ರಾಜೇಂದ್ರನಾದ ಯುಧಿಷ್ಠಿರನನ್ನು ನೋಡಿದಳು.

ಆಸೀನಮೃಷಭಂ ರಾಜ್ಞಾಂ ಭ್ರಾತೃಭಿಃ ಪರಿವಾರಿತಮ್।
ಸಿಂಹಶಾರ್ದೂಲ ಸದೃಶೈರ್ವಾರಣೈರಿವ ಯೂಥಪಮ್ ॥೩॥

ಸಿಂಹ ಶಾರ್ದೂಲಗಳಂತಿರುವ ತನ್ನ ತಮ್ಮಂದಿರೆಲ್ಲ ಸುತ್ತಲೂ ಕುಳಿತಿರಲು ಮದಭರಿತವಾದ ಆನೆಗಳಿಂದ ಆವೃತವಾದ ಯೂಥಪತಿಯಂತೆ ಆ ನಾಲ್ವರ ನಡುವೆ ಮೌನದಿಂದ ಕುಳಿತಿದ್ದನು.

ಅಭಿಮಾನವತೀ ನಿತ್ಯಂ ವಿಶೇಷೇಣ ಯುಧಿಷ್ಠಿರೇ।
ಲಾಲಿತಾ ಸತತಂ ರಾಜ್ಞಾ ಧರ್ಮಜ್ಞಾ ಧರ್ಮದರ್ಶಿನೀ ॥೪॥

ದ್ರೌಪದಿಗೆ ಎಲ್ಲರಿಗಿಂತಲೂ ಧರ್ಮರಾಜನಲ್ಲಿ ಭಕ್ತಿಗೌರವಗಳು ಹೆಚ್ಚು. ಧರ್ಮರಾಜನು ಅವಳನ್ನು ವಿಶೇಷವಾಗಿ ಆದರಿಸುತ್ತಿದ್ದನು.

ಆಮಂತ್ರ್ಯ ವಿಪುಲಶ್ರೋಣೀ ನಾಮ್ನಾ ಪರಮವಲ್ಗುನಾ।
ಭರ್ತಾರಮಭಿಸಂಪ್ರೇಕ್ಷ್ಯ ತತೋ ವಚನಬ್ರವೀತ್ ॥೫॥

ಧರ್ಮಾಧರ್ಮಗಳನ್ನು ನಿರೂಪಿಸುವುದರಲ್ಲಿ ಸಮರ್ಥಳೆನಿಸಿದ ಆ ದ್ರೌಪದಿ-ದೇವಿಯು ತನ್ನ ಪತಿಯನ್ನು ನೋಡಿ ಅತ್ಯಂತ ಮೃದುವಾಕ್ಯದಿಂದ ಹೇಳಿದಳು.

ದ್ರೌಪದೀ

ಇಮೇ ತೇ ಭ್ರಾತರಃ ಪಾರ್ಥ ಶುಷ್ಯಂತಸ್ತೋಕಕಾ ಇವ।
ವಾವಾಶ್ಯಮಾನಾಸ್ತಿಷ್ಠಂತಿ ನಚ್ಚೈನಾನಭಿನಂದಸೇ ॥೬॥

ದ್ರೌಪದೀ – ಪಾರ್ಥನೇ! ನಿನ್ನ ತಮ್ಮಂದಿರು ನೀನು ಅರಣ್ಯಕ್ಕೆ ಹೋಗಬಾರ-ದೆಂದು ಎಷ್ಟು ಕಳವಳಿಸುತ್ತಿರುವರು ನೋಡು. ಚಾತಕಪಕ್ಷಿಗಳಂತೆ ಬಾರಿಬಾರಿಗೂ ಅಂಗಾಲಾಚಿ ಬೇಡಿಕೊಳ್ಳುತ್ತಿದ್ದಾರೆ. ದುಃಖಿತರಾದ ಅವರನ್ನು ಯುಕ್ತಿಯುಕ್ತವಾದ ಮಾತುಗಳಿಂದ ಸಂತೋಷಗೊಳಿಸು.

ನಂದಯೈತಾನ್ ಮಹಾರಾಜ ಮತ್ತಾನಿವ ಮಹಾದ್ವಿಪಾನ್।
ಉಪಪನ್ನೇನ ವಾಕ್ಯೇನ ಸತತಂ ದುಃಖಭಾಗಿನಃ ॥೭॥

ಮಹಾರಾಜನೇ! ಮದಿಸಿದ ಆನೆಗಳಂತೆಯೇ ಇರುವ ಈ ನಿನ್ನ ಸಹೋದರರನ್ನು

ಯುಕ್ತಿಯುಕ್ತವಾದ ಮಾತುಗಳಿಂದ ಸಂತೋಷಗೊಳಿಸು. ನಿಶ್ಚಯವಾಗಿಯೂ ಇವರು ಇದುವರೆಗೂ ನಿರಂತರವಾಗಿ ದುಃಖದಲ್ಲಿಯೇ ಕಾಲ ಕಳೆದಿರುತ್ತಾರೆ.

ಕಥಂ ದ್ವೈತವನೇ ರಾಜನ್ ಪೂರ್ವಮುಕ್ತ್ವಾ ತಥಾ ವಚಃ।
ಭ್ರಾತೄನೇತಾನ್ ಸ್ಮ ಸಹಿತಾನ್ ಶೀತವಾತಾತಪಾರ್ದಿತಾನ್ ॥೮॥

ರಾಜ್ಯದ ವಿಷಯವಾಗಿ ಹಿಂದೆ ನೀನು ಹೇಳಿದ ಮಾತನ್ನು ಸ್ಮರಣೆಗೆ ತರುತ್ತೇನೆ. ನಾವೆಲ್ಲರೂ ದ್ವೈತವನದಲ್ಲಿದ್ದೆವು. ಆ ಸಂದರ್ಭದಲ್ಲಿ ನಿನ್ನ ಸಹೋದರರು ಚಳಿ, ಗಾಳಿ, ಬಿಸಿಲುಗಳಿಂದ ಪೀಡಿಸಲ್ಪಡುತ್ತಿದ್ದರು. ಆಗ ನೀನು ನಿನ್ನ ಸಹೋದರರನ್ನು ಸಂತೈಸುವುದಕ್ಕಾಗಿ ಈ ಮಾತನ್ನಾಡಿದೆ -

ವಯಂ ದುರ್ಯೋಧನಂ ಹತ್ವಾ ಮೃಧೇ ಭೋಕ್ಷ್ಯಾಮ ಮೇದಿನೀಮ್।
ಸಂಪೂರ್ಣಾಂ ಸರ್ವಕಾಮಾನಾಮಾಹವೇ ವಿಜಯೈಷಿಣಃ ॥೯॥
ವಿರಥಾಂಶ್ಚ ರಥಾನ್ ಕೃತ್ವಾ ನಿಹತ್ಯ ಚ ಮಹಾಗಜಾನ್।
ಸಂಸ್ತೀರ್ಯ ಚ ರಥೈರ್ಭೂಮಿಂ ಸಸಾದಿಭಿರರಿಂದಮಾಃ ॥೧೦॥
ಯಜತಾಂ ವಿವಿಧೈರ್ಯಜ್ಞೈಃ ಸಮೃದ್ಧೈರಾಪ್ತದಕ್ಷಿಣೈಃ।
ವನವಾಸಕೃತಂ ದುಃಖಂ ಭವಿಷ್ಯತಿ ಸುಖಾಯ ನಃ ॥೧೧॥

ಅರಿಂದಮರೇ ! ನಾವು ಯುದ್ಧದಲ್ಲಿ ದುರ್ಯೋಧನನನ್ನು ಕೊಂದು ಸಮಸ್ತ ಕಾಮಭೋಗಗಳಿಂದ ತುಂಬಿದ ಈ ಭೂಮಿಯನ್ನು ಶೀಘ್ರದಲ್ಲಿ ಅನುಭವಿಸುತ್ತೇವೆ. ನಾವು ಯುದ್ಧದಲ್ಲಿ ಅನೇಕ ಶತ್ರುವೀರರನ್ನು, ರಥ, ತುರಗಗಳನ್ನು ಕೊಂದು ರಥಿಕರ ದೇಹಗಳಿಂದ ಮತ್ತು ರಥಗಳಿಂದ ರಣಭೂಮಿಯನ್ನೆಲ್ಲ ಹರಡಿ ಜಯಶೀಲರಾಗುತ್ತೇವೆ. ಸಮೃದ್ಧವಾದ ದಾನ-ದಕ್ಷಿಣೆಗಳಿಂದ ವಿವಿಧ ಯಜ್ಞಗಳಿಂದ ದೇವತೆಗಳನ್ನು ಪೂಜಿಸುತ್ತೇವೆ. ಈಗ ನಾವು ಅನುಭವಿಸುವ ವನವಾಸದುಃಖವೆಲ್ಲವೂ ಮುಂದಿನ ನಮ್ಮ ಅಪಾರ ಸುಖಕ್ಕೆ ಕಾರಣ ಎಂದು ಹೇಳಿದೆಯಲ್ಲವೇ?

ಇತ್ಯೇತಾನೇವಮುಕ್ತ್ವಾ ತ್ವಂ ಸ್ವಯಂ ಧರ್ಮಭೃತಾಂ ವರ।
ಕಥಮದ್ಯ ಪುನರ್ವೀರ ವಿನಿಹಂಸಿ ಮನಾಂಸ್ಯುತ ॥೧೨॥

ಧರ್ಮಶ್ರೇಷ್ಠನೇ! ಇದೇ ಸಾಂತ್ವನದ ಮಾತುಗಳನ್ನು, ನೀನೇ ಈ ಹಿಂದೆ ಹೇಳಿ ಈಗ ಪುನಃ ಅನುಚಿತವಾದ ಮಾತುಗಳಿಂದ ನಮ್ಮ ಮನಸ್ಸನ್ನೇಕೆ ನೋಯಿಸುತ್ತಿರುವಿ?

ನ ಕ್ಲೀಬೋ ವಸುಧಾಂ ಭುಂಕ್ತೇ ನ ಕ್ಲೀಬೋ ಧನಮಶ್ನುತೇ।
ನ ಕ್ಲೀಬಸ್ಯ ಗೃಹೇ ಪುತ್ರಾ ಮತ್ಸ್ಯಾಃ ಪಂಕ ಇವಾಸತೇ ॥೧೩॥

ಹೇಡಿಯಾದವನು ಭೂಮಿಯನ್ನು ಅನುಭವಿಸಲಾರನು. ಧನವನ್ನು ಅನುಭವಿಸಲಾರನು. ಹೇಡಿಯ ಮನೆಯಲ್ಲಿ ಹುಟ್ಟಿದ ಮಕ್ಕಳೂ ಕೆಸರಿನಲ್ಲಿ ಬಿದ್ದ ಮೀನಿನಂತಿರುವರು ಸುಖವನ್ನೇ ಅವರು ಕಾಣಲಾರರು.

ನಾದಂಡಃ ಕ್ಷತ್ರಿಯೋ ಭಾತಿ ನಾದಂಡೋ ಭೂತಿಮಶ್ನುತೇ।
ನಾದಂಡಸ್ಯ ಪ್ರಜಾ ರಾಜ್ಞಃ ಸುಖಮೇಧಂತಿ ಭಾರತ ॥೧೪॥

ಭಾರತನೇ! ದಂಡವನ್ನು ಹಿಡಿಯದಿರುವ ಕ್ಷತ್ರಿಯನು ಶೋಭಿಸುವುದಿಲ್ಲ. ಅಂಥವನು ಭೂಮಿಯನ್ನು ಅನುಭವಿಸಲಾರನು. ಅವನ ಪ್ರಜೆಗಳೂ ಸುಖದಿಂದ ಇರಲಾರರು.

ಸದೇವಾಸುರಗಂಧರ್ವೈರಪ್ಸರೋಭಿರ್ವಿಭೂಷಿತಮ್।
ರಕ್ಷೋಭಿರ್ಗುಹ್ಯಕೈರ್ನಾಗೈರ್ಮನುಷ್ಯೈಶ್ಚ ವಿಭೂಷಿತಮ್ ॥೧೫॥

ದೇವತೆಗಳು, ಅಸುರರು, ಗಂಧರ್ವರು, ಅಪ್ಸರರು, ಗುಹ್ಯಕರು, ರಾಕ್ಷಸರು, ನಾಗರು, ಮನುಷ್ಯರು ಇದರಿಂದ ತುಂಬಿದ ಧರ್ಮಾರ್ಥ-ಕಾಮಗಳಿಂದ ಪೂರ್ಣವಾದ ಈ ಜಗತ್ತೆಲ್ಲವೂ ರಾಜದಂಡದಿಂದ ನಿಯಂತ್ರಿಸಲ್ಪಟ್ಟಾಗಲೇ ಅನುಭವಯೋಗ್ಯವಾಗುವುದು.

ತ್ರಿವರ್ಗೇಣ ಚ ಸಂಪೂರ್ಣಂ ತ್ರಿವರ್ಗಸ್ಯಾಗಮೇನ ಚ।
ದಂಡೇನಾಭ್ಯಾಹೃತಂ ಸರ್ವಂ ಜಗದ್ಭೋಗಾಯ ಕಲ್ಪತೇ ॥೧೬॥

ಸಂಪೂರ್ಣವಾದ ಆಗಮದ ಅಧಿಕಾರವನ್ನು ಹೊಂದಿದ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ತ್ರಿವರ್ಗದಿಂದ ಕೂಡಿದ ಈ ಜಗತ್ತು ಅನುಭವಕ್ಕೆ ಯೋಗ್ಯವಾಗುತ್ತದೆ.

ಸ್ವಾಯಂಭುವಂ ಮಹೀಪಾಲ ಆಗಮಂ ಶೃಣು ಶಾಶ್ವತಮ್ ।
ವಿಪ್ರಾಣಾಂ ವಿದಿತಶ್ಚಾಯಂ ತವ ಚೈವ ವಿಶಾಂಪತೇ ॥೧೭॥

ಸ್ವಾಯಂಭುವಮನುವಿನ ನೀತಿಶಾಸ್ತ್ರವು ಈ ಭೂಲೋಕದಲ್ಲಿ ಎಂದೆಂದೂ ಶಾಶ್ವತವಾಗಿದೆ. ಇದನ್ನು ಶ್ರದ್ಧೆಯಿಂದ ನೀನು ಕೇಳು. ಪ್ರತಿಯೊಬ್ಬ ಬ್ರಾಹ್ಮಣರಿಗೂ ಇದರ ಬಗ್ಗೆ ತಿಳಿದಿದೆ. ನೀನೂ ಸಹ ಈ ಆಗಮದ ಬಗ್ಗೆ ತಿಳಿದುಕೊಂಡಿರುವಿ.

ಅರಾಜಕೇ ಹಿ ಲೋಕೇಽಸ್ಮಿನ್ ಸರ್ವತೋ ವಿದ್ರುತೇ ಭಯಾತ್ ।
ರಕ್ಷಾರ್ಥಮಸ್ಯ ಲೋಕಸ್ಯ ರಾಜಾನಮಸೃಜತ್ ಪ್ರಭುಃ।
ಮಹಾಕಾಯಂ ಮಹಾವೀರ್ಯಂ ಪಾಲೇನ ಜಗತಃ ಕ್ಷಮಮ್ ॥೧೮॥

ಒಮ್ಮೆ ಈ ಜಗತ್ತು ರಾಜನಿಲ್ಲದೇ ಎಲ್ಲೆಡೆಯು ಭಯದಿಂದ ಚದುರಿ ಹೋಗಿತ್ತು. ಆಗ ಜಗತ್ತನ್ನು ರಕ್ಷಣೆ ಮಾಡುವುದಕ್ಕಾಗಿ ಆ ಸರ್ವೇಶ್ವರನಾದ ಪರಮಾತ್ಮನು ರಾಜನನ್ನು ಸೃಷ್ಟಿ ಮಾಡಿದನು. ಅಂಥ ರಾಜನು ದೃಢವಾದ ಶರೀರವುಳ್ಳವನೂ ಅತ್ಯಂತ ಪರಾಕ್ರಮಶಾಲಿಯೂ ಜಗತ್ತಿನ ರಕ್ಷಣೆಯಲ್ಲಿ ಸಂಪೂರ್ಣವಾಗಿ ಸಮರ್ಥನೂ ಆಗಿದ್ದನು.

ಅನಿಲಾಗ್ನಿಯಮಾಕ್ರಾಣಾಮಿಂದ್ರಸ್ಯ ವರುಣಸ್ಯ ಚ।
ಚಂದ್ರವಿತ್ತೇಶಯೋಶ್ಚೈವ ಮಾತ್ರಾ ನಿರ್ಹೃತ್ಯ ಶಾಶ್ವತೀಃ ॥೧೯॥

ಇಂದ್ರ , ಅಗ್ನಿ , ಯಮ, ವರುಣ, ವಾಯು, ಕುಬೇರ ಮೊದಲಾದ ಲೋಕಪಾಲಕರು ಮತ್ತು ಸೂರ್ಯಚಂದ್ರರು ಇವರುಗಳಲ್ಲಿರುವ ಶಾಶ್ವತವಾದ ಅಂಶಗಳನ್ನು ತೆಗೆದುಕೊಂಡು ಸಮರ್ಥರಾದ ರಾಜರುಗಳನ್ನು ಆ ಪರಮಾತ್ಮನು ಸೃಷ್ಟಿ ಮಾಡಿದನು.

ಟಿಪ್ಪಣಿ - ಮಾತ್ರಾ ನಿರ್ಹೃತ್ಯ ಶಾಶ್ವತೀಃ ಇತ್ಯತ್ರ ಯಸ್ಮಾದೇಷಾಂ ಸುರೇಂದ್ರಾ-

ಣಾಂ ಶಾಶ್ವತೀಃ ಮಾತ್ರಾಃ ಅಂಶಾನ್ ನಿರ್ಹೃತ್ಯ ಆದಾಯ ಈಶ್ವರಾಃ ಸಮರ್ಥಾಃ ನೃಪಾಃ ಸಂಭವಂತಿ। ಏಷಃ ರಾಜಾ।

'ಮಾತ್ರಾ ನಿರ್ಹೃತ್ಯ ಶಾಶ್ವತೀಃ' - ಎಂಬಲ್ಲಿ 'ಯಸ್ಮಾದೇಷಾಂ ಸುರೇಂದ್ರಾಣಾಂ ಶಾಶ್ವತೀಃ ಮಾತ್ರಾಃ' = ಯಾವ ದೇವಶ್ರೇಷ್ಠರ ಶಾಶ್ವತವಾದ ಅಂಶಗಳಿವೆಯೋ, ಅವುಗಳನ್ನು 'ನಿರ್ಹೃತ್ಯ' = ತೆಗೆದುಕೊಂಡು, 'ಈಶ್ವರಾಃ' =ಸಮರ್ಥರಾದ ರಾಜರುಗಳು ಸೃಷ್ಟರಾದರು.'ಏಷಃ' = ರಾಜನು.

ಯಸ್ಮಾದೇಷಾಂ ಸುರೇಂದ್ರಾಣಾಂ ಸಂಭವತ್ಯಂಶತೋ ನೃಪಃ।
ತಸ್ಮಾದಭಿಭವತ್ಯೇಷ ಸರ್ವಭೂತಾನಿ ತೇಜಸಾ ॥೨೦॥

ಯಾವ ಕಾರಣದಿಂದ ರಾಜನು ದೇವಶ್ರೇಷ್ಠರ ಅಂಶದಿಂದ ಭೂಲೋಕದಲ್ಲಿ ಅವತರಿಸುವನೋ, ಆ ಕಾರಣದಿಂದ ಸಮಸ್ತ ಭೂತಗಳನ್ನು ಅಡಗಿಸುವ ಶಕ್ತಿ ಅವನಿಗಿರುತ್ತದೆ.

ತಪತ್ಯಾದಿತ್ಯವಚ್ಚೈವ ಚಕ್ಷೂಂಷಿ ಚ ಮನಾಂಸಿ ಚ।
ನಚೈನಂ ಭುವಿ ಶಕ್ನೋತಿ ಕಶ್ಚಿದಪ್ಯಭಿವೀಕ್ಷಿತುಮ್ ॥೨೧॥

ಇಂಥ ಶ್ರೇಷ್ಠನಾದ ರಾಜನು ಸೂರ್ಯನಂತೆ ಜ್ವಲಿಸುತ್ತಾನೆ. ನೇರವಾಗಿ ಕಣ್ಣೆಟ್ಟು ಈ ರಾಜನನ್ನು ನೋಡುವ ಸಾಮರ್ಥ್ಯ ಯಾರಿಗೂ ಇರುವುದಿಲ್ಲ. ಮನಸ್ಸಿನಿಂದಲೂ ಅವನ ಬಗ್ಗೆ ತಿಳಿಯಲು ಸಾಧ್ಯವಾಗುವುದಿಲ್ಲ. ಒಬ್ಬಿಬ್ಬರಿಗೆ ಅಷ್ಟೇ ಅಲ್ಲ. ಸಮಸ್ತಲೋಕದಲ್ಲಿ ಯಾರೊಬ್ಬರಿಗೂ ಕೂಡ ಈ ರಾಜನನ್ನು ತಿಳಿಯಲು ಸಾಧ್ಯವಾಗುವುದಿಲ್ಲ.

ಸೋऽಗ್ನಿರ್ಭವತಿ ವಾಯುಶ್ಚ ಸೋऽರ್ಕಃ ಸೋಮಶ್ಚ ಧರ್ಮರಾಟ್।
ಸ ಕುಬೇರಃ ಸ ವರುಣಃ ಸ ಮಹೇಂದ್ರಃ ಪ್ರತಾಪವಾನ್ ॥೨೨॥

ರಾಜನು ಭೂಲೋಕದಲ್ಲಿ ಅಗ್ನಿಯಂತೆ ಬೆಳಗುತ್ತಾನೆ. ವಾಯುವಂತೆ ಸಂಚರಿಸುತ್ತಾನೆ. ಸೂರ್ಯನಂತೆ ಪ್ರಖರನಾಗಿರುತ್ತಾನೆ. ಚಂದ್ರನಂತೆ ಶಾಂತನಾಗಿರುತ್ತಾನೆ.

ಕುಬೇರನಂತೆ ಧನವಂತನಾಗಿರುತ್ತಾನೆ. ವರುಣನಂತೆ ಸುವೃಷ್ಟಿಪ್ರದನಾಗಿರುತ್ತಾನೆ. ಮಹೇಂದ್ರನಂತೆ ಪ್ರತಾಪಶಾಲಿಯಾಗಿರುತ್ತಾನೆ.

ಪಿತಾಮಹಸ್ಯ ದೇವಸ್ಯ ವಿಷ್ಣೋಃ ಶರ್ವಸ್ಯ ಚೈವ ಹಿ।
ಋಷೀಣಾಂ ಚೈವ ಸರ್ವೇಷಾಂ ತಸ್ಮಿಂಸ್ತೇಜಃ ಪ್ರತಿಷ್ಠಿತಮ್ ॥೨೩॥

ಜಗದೀಶ್ವರನಾದ ಕ್ರೀಡಾದಿಗುಣವಿಶಿಷ್ಟನಾದ ಮಹಾವಿಷ್ಣುವಿನಲ್ಲಿರುವ ಜಗತ್ ಪಾಲಕತ್ವಶಕ್ತಿಯು ಇವನಲ್ಲಿರುತ್ತದೆ. ಚತುರ್ಮುಖಬ್ರಹ್ಮನಲ್ಲಿರುವ ಸರ್ಜನ-ಶಕ್ತಿಯು ಇವನಲ್ಲಿರುತ್ತದೆ. ಮಹಾರುದ್ರದೇವನ ಸಂಹಾರಶಕ್ತಿಯೂ ಕೂಡ ಈ ರಾಜನಲ್ಲಿರುತ್ತದೆ. ಸಮಸ್ತಋಷಿಗಳ ಬ್ರಹ್ಮತೇಜಸ್ಸು ಇವನಲ್ಲಿ ನೆಲೆಗೊಂಡಿರುತ್ತದೆ.

ಬಾಲೋಽಪಿ ನಾವಮಂತವ್ಯೋ ಮನುಷ್ಯ ಇತಿ ಭೂಮಿಪಃ।
ಮಹತೀ ದೇವತಾ ಹ್ಯೇಷಾ ನರರೂಪೇಣ ತಿಷ್ಠತಿ ॥೨೪॥

ರಾಜನು ಬಾಲಕನಾಗಿದ್ದರೂ ಕೂಡ ಸಾಮಾನ್ಯ ಮನುಷ್ಯನೆಂದು ಅವನನ್ನು ಉಪೇಕ್ಷೆ ಮಾಡಬಾರದು. ಮನುಷ್ಯರೂಪದಲ್ಲಿರುವ ಬಹುದೊಡ್ಡ ದೇವತೆಯೆಂದೇ ಅವನನ್ನು ಗೌರವಿಸಬೇಕು.

ಏಕಮೇವ ದಹತ್ಯಗ್ನಿರ್ನರಂ ದುರುಪಸರ್ಪಿಣಮ್।
ಕುಲಂ ದಹತಿ ರಾಜಾಗ್ನಿಃ ಸಪಶುದ್ರವ್ಯಸಂಚಯಮ್ ॥೨೫॥

ಒಂದೇ ಅಗ್ನಿಯು ಎಚ್ಚರ ತಪ್ಪಿ ಸಮೀಪಿಸಿದವನನ್ನು ಸುಟ್ಟುಬಿಡುತ್ತದೆ. ರಾಜನೆಂಬ ಅಗ್ನಿಯೂ ಕೂಡ ಪಶು, ದ್ರವ್ಯಗಳಿಂದ ಸಹಿತವಾದ ಸಮಸ್ತಕುಲವನ್ನೇ ಭಸ್ಮಮಾಡುತ್ತದೆ.

ವಿವರಣೆ - ಅಗ್ನಿಯನ್ನು ಎಚ್ಚರಿಕೆಯಿಂದ ಸರಿಯಾಗಿ ಉಪಯೋಗಿಸಿಕೊಂಡಾಗ ನಮಗೆ ಅಪೇಕ್ಷಿತವಾದ ಎಲ್ಲಾ ಭಕ್ಷ್ಯಭೋಜ್ಯಗಳನ್ನು ನೀಡುತ್ತದೆ. ಜೀವನವನ್ನೇ ಹಸನ್ಮುಖಿಯನ್ನಾಗಿ ಮಾಡುತ್ತದೆ. ಆದರೆ ಉಪೇಕ್ಷೆಯಿಂದ ಉದಾಸೀನದಿಂದ ಎಚ್ಚರ ತಪ್ಪಿ ಅಗ್ನಿಯ ಬಳಿ ಹೋದರೆ ನಮ್ಮನ್ನೇ ಸುಟ್ಟುಬಿಡುತ್ತದೆ. ಅದರಂತೆ ರಾಜನೂ ಕೂಡ ಸರಿಯಾದ ಭಾವನೆಯಿಂದ ಭಯಭಕ್ತಿಗಳಿಂದ

ಸಹಿತನಾಗಿ ರಾಜನನ್ನು ಆಶ್ರಯಿಸಿದರೆ ನಮಗೆ ಜೀವನಪ್ರದನಾಗುತ್ತಾನೆ. ಉಪೇ-ಕ್ಷಿಸಿದರೆ ಸಂಪೂರ್ಣವಾಗಿ ನಾಶಮಾಡುತ್ತಾನೆ. ಅಗ್ನಿಯು ಕೇವಲ ನಮ್ಮನ್ನು ಸುಡುತ್ತದೆ. ಆದರೆ ಈ ರಾಜಾಜ್ಞೆಯು ನಮ್ಮನ್ನಷ್ಟೇ ಅಲ್ಲದೇ ನಮ್ಮಲ್ಲಿರುವ ಸಂಪತ್ತು ಪಶುಗಳು ಎಲ್ಲವನ್ನೂ ನಾಶಮಾಡಿ, ಸಮಸ್ತಕುಲವನ್ನೂ ಕೂಡ ನಾಶ ಮಾಡಿಬಿಡುತ್ತದೆ. ಆದ್ದರಿಂದ ಅತ್ಯಂತ ಎಚ್ಚರಿಕೆಯಿಂದ ರಾಜಾಜ್ಞೆಯ ಜೊತೆ ವ್ಯವ -ಹರಿಸಬೇಕು.

ಧೃತರಾಷ್ಟ್ರಕುಲಂ ದಗ್ಧಂ ಕ್ರೋಧೋದ್ಭೂತೇನ ವಹ್ನಿನಾ ।
ಪ್ರತ್ಯಕ್ಷಮೇತಲ್ಲೋಕಸ್ಯ ಸಂಶಯೋ ಹಿ ನ ವಿದ್ಯತೇ ॥೨೬॥

ಯುಧಿಷ್ಠಿರನೇ! ನಿನ್ನ ಕ್ರೋಧದಿಂದ ಹುಟ್ಟಿದ ಅಗ್ನಿಯಿಂದಲೇ ಆ ಧೃತರಾಷ್ಟ್ರನ ಕುಲವು ಸಂಪೂರ್ಣವಾಗಿ ಭಸ್ಮವಾಯಿತು. ಇದನ್ನು ಸಮಸ್ತ ಜಗತ್ತೇ ಕಣ್ಣಾರೆ ಕಂಡಿದೆ. ಇದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಕುಲಜೋ ವೃತ್ತಸಂಪನ್ನೋ ಧಾರ್ಮಿಕಶ್ಚ ಮಹೀಪತಿಃ ।
ಪ್ರಜಾನಾಂ ಪಾಲನೇನ ಯುಕ್ತಃ ಪೂಜ್ಯತೇ ದೈವತೈರಪಿ ॥೨೭॥

ಉತ್ತಮ ಕುಲದಲ್ಲಿ ಹುಟ್ಟಿ, ಗೌರವದಿಂದ ಎಲ್ಲಾ ಧರ್ಮಗಳನ್ನು ಪಾಲನೆ ಮಾಡುತ್ತಾ, ಪ್ರಜೆಗಳನ್ನು ಹಿತದೃಷ್ಟಿಯಿಂದ ಯಾವ ರಾಜನು ರಕ್ಷಣೆ ಮಾಡು-ತ್ತಾನೋ, ಅಂಥವನನ್ನು ದೇವತೆಗಳೂ ಕೂಡ ಪ್ರಶಂಸೆ ಮಾಡುತ್ತಾರೆ. ಮತ್ತು ಪೂಜಿಸುತ್ತಾರೆ.

ವಿವರಣೆ - ರಾಜನಾದವನು ಉತ್ತಮಕುಲದಲ್ಲಿ ಹುಟ್ಟಿರಬೇಕು. ಎಲ್ಲಾ ಧರ್ಮಗಳನ್ನು ಪಾಲನೆ ಮಾಡಬೇಕು. ಪ್ರಜೆಗಳನ್ನು ನಿಷ್ಕಾಮವಾಗಿ ರಕ್ಷಣೆ ಮಾಡ-ಬೇಕು. ಇಂಥವನನ್ನು ಮಾತ್ರ ದೇವತೆಗಳು ಪೂಜಿಸುತ್ತಾರೆ. ರಾಜನಲ್ಲಿ ಈ ಎಲ್ಲಾ ಧರ್ಮಗಳು ಅವಶ್ಯವಾಗಿ ಇರಬೇಕು ಎಂಬುದು ಅಭಿಪ್ರಾಯ.

ಕಾರ್ಯಂ ಯೋಽವೇಕ್ಷ್ಯ ಶಕ್ತಿಂ ಚ ದೇಶಕಾಲೌ ಚ ತತ್ತ್ವತಃ ।
ಕುರುತೇ ಧರ್ಮಸಿದ್ಧ್ಯರ್ಥಂ ವೈಶ್ವರೂಪಂ ಪುನಃಪುನಃ ॥೨೮॥

ತಸ್ಯ ಪ್ರಸಾದೇ ಪದ್ಮಾತ್ಮಾ ವಿಜಯಶ್ಚ ಪರಾಕ್ರಮೇ।
ಮೃತ್ಯುಶ್ಚ ವಸತಿ ಕ್ರೋಧೇ ಸರ್ವತೇಜೋಮಯೋ ಹಿ ಸಃ ॥೨೯॥

ರಾಜನು ತನ್ನಲ್ಲಿರುವ ಶಕ್ತಿ, ಮಾಡಬೇಕಾದ ಕರ್ತವ್ಯ ಹಾಗೂ ದೇಶಕಾಲಗಳು ಇವುಗಳನ್ನೆಲ್ಲಾ ಸರಿಯಾಗಿ ತಿಳಿದುಕೊಂಡಿರಬೇಕು. ಧರ್ಮಸಾಧನೆಗಳನ್ನು ಅನೇಕ ಮುಖಗಳಿಂದ ಮಾಡುತ್ತಿರಬೇಕು. ಒಮ್ಮೆಮಾತ್ರವಲ್ಲದೇ ಪುನಃ ಪುನಃ ಧರ್ಮವನ್ನು ಸಾಧಿಸಬೇಕು. ಅಂಥ ರಾಜನ ವಿಷಯದಲ್ಲಿ ಲಕ್ಷ್ಮಿಯು ಸಂಪೂರ್ಣವಾಗಿ ಒಲಿದು-ಬರುವಳು. ಅವನ ಪರಾಕ್ರಮಕ್ಕೆ ವಿಶೇಷವಾದ ಜಯವು ಒದಗಿ ಬರುವುದು. ಅವನ ಕೋಪದಲ್ಲಿ ಮೃತ್ಯುದೇವತೆಯು ನೆಲೆಗೊಳ್ಳುವುದು. ಹೀಗೆ ಅವನು ಸಕಲ ತೇಜೋಮಯನಾಗಿ ಕಂಗೊಳಿಸುವನು.

ಟಿಪ್ಪಣಿ - ವೈಶ್ವರೂಪಂ ನಾನಾರೂಪಂ ಕರ್ಮ, ಸಿದ್ಧ್ಯರ್ಥಂ ಕಾರ್ಯ-ಸಿದ್ಧ್ಯರ್ಥಂ ಕುರುತೇ। **ತಸ್ಯ ಪ್ರಸಾದೇ ಸತಿ** ಆಶ್ರಿತೋ ಜನಃ **ಪದ್ಮಾತ್ಮಾ** ಪದ್ಮಾ ಸಂಪದ್ ಆತ್ಮನಿ ಯಸ್ಯಾಸೌ ಪದ್ಮಾತ್ಮಾ ಭವತಿ। 'ಲಕ್ಷ್ಮೀಃ ಪದ್ಮಾಲಯಾ ಪದ್ಮಾ' ಇತ್ಯಮರಃ। ಪರಾಕ್ರಮೇ ಸತಿ ಶತ್ರವಃ ಶ್ರಿಯಂ ಸ್ವಸಂಪದಂ ವೇದಯಂತೀತಿ **ಶ್ರೀವಿದೋ** ಭವಂತಿ।

'ವೈಶ್ವರೂಪಂ' - ಅನೇಕ ವಿಧವಾದ ಕಾರ್ಯಗಳ ಸಿದ್ಧಿಗಾಗಿ ಅನೇಕ ಮುಖ-ಗಳಿಂದ ಸಾಧನೆಗೈಯ್ಯುತ್ತಾನೆ. 'ತಸ್ಯ ಪ್ರಸಾದೇ ಸತಿ' - ಆ ರಾಜನಷ್ಟೇ ಲಕ್ಷ್ಮಿಯ ಅನುಗ್ರಹವನ್ನು ಹೊಂದುವುದಲ್ಲ. ಅವನನ್ನು ಆಶ್ರಯಿಸಿದ ವ್ಯಕ್ತಿಯೂ ಕೂಡ ಲಕ್ಷ್ಮಿಯ ಅನುಗ್ರಹವನ್ನು ಹೊಂದುತ್ತಾನೆ. 'ಪದ್ಮಾತ್ಮಾ' ಎಂಬಲ್ಲಿರುವ 'ಪದ್ಮಾ' ಎಂಬ ಶಬ್ದಕ್ಕೆ ಸಂಪತ್ತು ಎಂದರ್ಥ. ಪದ್ಮಾತ್ಮನಾಗುತ್ತಾನೆ ಎಂದರೆ ಲಕ್ಷ್ಮಿಯ ಅನು-ಗ್ರಹವಿಶೇಷವನ್ನು ಹೊಂದುತ್ತಾನೆ ಎಂದರ್ಥ. ಪದ್ಮಾ ಎಂಬ ಶಬ್ದಕ್ಕೆ ಲಕ್ಷ್ಮೀ ಎಂಬರ್ಥವನ್ನು 'ಲಕ್ಷ್ಮೀಃ ಪದ್ಮಾಲಯಾ ಪದ್ಮಾ' ಎಂಬ ಅಮರಕೋಶವು ಹೇಳುತ್ತದೆ. ರಾಜನಲ್ಲಿ ಉತ್ತಮವಾದ ಪರಾಕ್ರಮವಿದ್ದಾಗ ಶತ್ರುಗಳು ತಮ್ಮ ಸಂಪತ್ತನ್ನು ತಿಳಿಯುತ್ತಾರೆ. ಶ್ರೀವಿದರಾಗುತ್ತಾರೆ.

ತಂ ಯಸ್ತು ದ್ವೇಷ್ಟಿ ಸಮ್ಮೋಹಾತ್ ಸ ವಿನಶ್ಯತಿ ಮಾನವಃ।
ತಸ್ಯ ಹ್ಯಾಶುವಿನಾಶಾಯ ರಾಜಾಽಪಿ ಕುರುತೇ ಮನಃ ॥೩೦॥

ಶ್ರೇಷ್ಠನಾದ ಈ ರಾಜನನ್ನು ಯಾರು ಭ್ರಾಂತಿಯಿಂದ ದ್ವೇಷ ಮಾಡುತ್ತಾನೋ, ಅಂಥ ಮಾನವನು ಸಂಪೂರ್ಣವಾಗಿ ನಾಶ ಹೊಂದುತ್ತಾನೆ. ಅಂಥ ಮಾನವನು ತನ್ನ ರಾಜ್ಯದಲ್ಲಿ ಕ್ಷಣಕಾಲವೂ ಬದುಕುವುದು ಬೇಡವೆಂದು ರಾಜನು ಅಂದುಕೊಳ್ಳುತ್ತಾನೆ.

ವಿವರಣೆ - ಅತ್ಯಂತ ಧಾರ್ಮಿಕನಾದ ತಪಃಶಕ್ತಿಯುಳ್ಳ ಅತೀಂದ್ರಿಯ ಸಾಮರ್ಥ್ಯ ಹೊಂದಿದ ರಾಜನಿಗೆ ದುಷ್ಟನಾದ ಮಾನವನು ತನ್ನ ರಾಜ್ಯದಲ್ಲಿ ಇರುವುದು ಬೇಡವೆಂದು ಅನಿಸಿದರೂ ಸಾಕು. ಅಂಥ ಮಾನವನು ಸಂಪೂರ್ಣವಾಗಿ ನಷ್ಟನಾಗುತ್ತಾನೆ. ಆದ್ದರಿಂದ ಗುಣವಂತನಾದ ರಾಜನನ್ನು ಮೋಹದಿಂದ ಅಥವಾ ಬೇರೆ ಯಾವುದೇ ಕಾರಣದಿಂದ ಸರ್ವಥಾ ದ್ವೇಷ ಮಾಡಬಾರದು.

ತಸ್ಮಾದ್ ಧರ್ಮಂ ಯದಿಷ್ಟೇಷು ಸ ವ್ಯವಸ್ಯತಿ ಪಾರ್ಥಿವಃ।
ಅನಿಷ್ಟಂ ಚಾಪ್ಯನಿಷ್ಟೇಷು ತದ್ಧರ್ಮಂ ನ ವಿಚಾಲಯೇತ್ ॥೩೧॥

ಆದ್ದರಿಂದ ರಾಜನು ಯಾರು ತನ್ನನ್ನು ಇಷ್ಟ ಪಡುತ್ತಾರೋ, ಅಂಥವರಲ್ಲಿ ಸದ್ಗುಣವಂತನಾಗಿರುತ್ತಾನೆ. ಅವರಿಗೆ ಒಳ್ಳೆಯದನ್ನೇ ಮಾಡುತ್ತಾನೆ. ಯಾರು ತನ್ನನ್ನು ಇಷ್ಟಪಡುವುದಿಲ್ಲವೋ, ಅಂಥವರಿಗೆ ಒಳ್ಳೆಯದನ್ನು ಸರ್ವಥಾ ಮಾಡಲಾರ. ಅನಿಷ್ಟವನ್ನೇ ಅವರಿಗೆ ಮಾಡುತ್ತಾನೆ. ಇದುವೇ ಆ ರಾಜನ ಧರ್ಮವಾಗಿದೆ. ಈ ಧರ್ಮವನ್ನು ಅವನು ತಪ್ಪುವುದು ಧರ್ಮಸಮ್ಮತವಲ್ಲ.

ತಸ್ಯಾರ್ಥೇ ಸರ್ವಭೂತಾನಾಂ ಗೋಪ್ತಾರಂ ಧರ್ಮಮಾತ್ಮಜಮ್।
ಬ್ರಹ್ಮತೇಜೋಮಯಂ ದಂಡಮಸೃಜತ್ ಪೂರ್ವಮೀಶ್ವರಃ ॥೩೨॥

ಸಮಸ್ತ ಜಗತ್ತನ್ನು ರಕ್ಷಣೆ ಮಾಡುವುದಕ್ಕಾಗಿ ಬ್ರಹ್ಮನ ತೇಜೋಮಯರೂಪವಾದ ದಂಡನೀತಿಯನ್ನು ರಾಜನಿಗೋಸ್ಕರವೇ ಆ ಭಗವಂತನು ಸೃಷ್ಟಿಮಾಡಿರುವನು. ಆ ದಂಡನೀತಿಯನ್ನು ಹೊಂದಿದ ರಾಜನು ಸಕಲಭೂತಗಳನ್ನು ನಿರಾತಂಕವಾಗಿ ರಕ್ಷಣೆ ಮಾಡಲು ಸಮರ್ಥನಾಗುವನು.

ತಸ್ಯ ಸರ್ವಾಣಿ ಭೂತಾನಿ ಸ್ಥಾವರಾಣಿ ಚರಾಣಿ ಚ।
ಭಯಾದ್ ಭೋಗಾಯ ಕಲ್ಪಂತೇ ಧರ್ಮಾನ್ನ ವಿಚಲಂತಿ ಚ ॥೩೩॥

ಈ ದಂಡನೀತಿಯನ್ನು ತಿಳಿದ ಸ್ಥಾವರ ಜಂಗಮ ಪ್ರಾಣಿಗಳು ಭಯಪಡುತ್ತವೆ. ಆ ಭಯದಿಂದಲೇ ವಿಹಿತವಾದದ್ದನ್ನಷ್ಟೇ ಭೋಗ ಮಾಡುತ್ತವೆ. ಎಂದೆಂದೂ ಧರ್ಮವನ್ನು ಬಿಟ್ಟಿರಲು ಮನಸ್ಸನ್ನು ಮಾಡುವುದಿಲ್ಲ.

ದೇಶಕಾಲೌ ಚ ಶಕ್ತಿಂ ಚ ಕಾರ್ಯಂ ಚಾವೇಕ್ಷ್ಯ ತತ್ತ್ವತಃ।
ಯಥಾರ್ಹತಃ ಸಂಪ್ರಣಯೇನ್ನರೇಷ್ವನ್ಯಾಯವರ್ತಿಷು ॥೩೪॥

ನ್ಯಾಯಮಾರ್ಗದಲ್ಲಿ ಇರುವ ಎಲ್ಲಾ ಪ್ರಜೆಗಳನ್ನು ದೇಶಕಾಲಗಳಿಗೆ ತಕ್ಕಂತೆ ತನ್ನ ಶಕ್ತಿಗೆ ಅನುಗುಣವಾಗಿ ಪ್ರಾಮಾಣಿಕವಾಗಿ ರಾಜನು ರಕ್ಷಣೆ ಮಾಡಬೇಕು. ಅನ್ಯಾಯ ಮಾರ್ಗದಲ್ಲಿ ಸಾಗುವವನಿಗೆ ಯಥಾಯೋಗ್ಯವಾಗಿ ಶಿಕ್ಷೆಯನ್ನೂ ಕೂಡ ನೀಡಬೇಕು.

ಸ ರಾಜಾ ಪುರುಷೋ ದಂಡಃ ಸ ನೇತಾ ಶಾಸಿತಾ ಚ ಸಃ।
ವರ್ಣಾನಾಮಾಶ್ರಮಾಣಾಂ ಚ ಧರ್ಮಪ್ರಭುರಥಾವ್ಯಯಃ ॥೩೫॥

ಸಮಸ್ತ ಲೋಕಕ್ಕೆ ದಂಡನೀತಿಯೇ ರಾಜನ ಸ್ಥಾನದಲ್ಲಿದೆ. ಅದರಿಂದಲೇ ಎಲ್ಲಾ ಪ್ರಜೆಗಳು ತಮ್ಮ ಕರ್ತವ್ಯಗಳ ಬಗ್ಗೆ ಎಚ್ಚರ ವಹಿಸುತ್ತಾರೆ. ಆದ್ದರಿಂದ ದಂಡನೀತಿಯನ್ನು ಅಳವಡಿಸಿಕೊಂಡ ರಾಜನಷ್ಟೇ ಭೂಲೋಕವನ್ನು ರಕ್ಷಣೆ ಮಾಡಲು ಸಮರ್ಥನಾಗುತ್ತಾನೆ. ಸಕಲ ವರ್ಣಗಳ, ಸಕಲ ಆಶ್ರಮಗಳ ಧರ್ಮಗಳಿಗೆ ಸ್ವಾಮಿಯಾದ ಎಂದೆಂದೂ ನಾಶವಾಗದ ಈ ದಂಡನೀತಿಯು ಅತ್ಯಂತ ಶ್ರೇಷ್ಠವಾಗಿದೆ.

ದಂಡಃ ಶಾಸ್ತಿ ಪ್ರಜಾಃ ಸರ್ವಾ ದಂಡ ಏವಾಭಿರಕ್ಷತಿ।
ದಂಡಃ ಸುಪ್ತೇಷು ಜಾಗರ್ತಿ ದಂಡಂ ಧರ್ಮಂ ವಿದುರ್ಬುಧಾಃ ॥೩೬॥

ದಂಡವೇ ಪ್ರಜೆಗಳನ್ನು ಶಾಸನೆ ಮಾಡುತ್ತದೆ. ರಕ್ಷಣೆ ಮಾಡುತ್ತದೆ. ಸಮಸ್ತ ಜಗತ್ತು ಮಲಗಿದಾಗಲೂ ಈ ದಂಡನೀತಿಯು ಎಚ್ಚರದಿಂದಿರುತ್ತದೆ. ಆದ್ದರಿಂದ ಈ ದಂಡನೀತಿಯನ್ನು ಧರ್ಮಸ್ವರೂಪವೆಂದು ವಿದ್ವಾಂಸರು ತಿಳಿಯುತ್ತಾರೆ.

ಸುಸಮೀಕ್ಷ್ಯ ಧೃತೋ ದಂಡಃ ಸರ್ವಾ ರಂಜಯತಿ ಪ್ರಜಾಃ।
ಅಸಮೀಕ್ಷ್ಯ ಪ್ರಣೀತಸ್ತು ವಿನಾಶಯತಿ ಸರ್ವಶಃ ॥೩೭॥

ಚೆನ್ನಾಗಿ ವಿಚಾರ ಮಾಡಿ, ಅಳವಡಿಸಿದ ದಂಡವು ಪ್ರಜೆಗಳ ಸಂತೋಷಕ್ಕೆ ಕಾರಣವಾಗುತ್ತದೆ. ವಿಚಾರ ಮಾಡದೇ ಪ್ರಯೋಗಿಸಿದ ದಂಡನೀತಿಯು ಎಲ್ಲರನ್ನು ನಾಶಗೊಳಿಸುತ್ತದೆ. ಆದ್ದರಿಂದ ರಾಜನಾದವನು ವಿಚಾರ ಮಾಡಿ, ದಂಡವನ್ನು ಪ್ರಯೋಗ ಮಾಡಬೇಕು.

ಯದಿ ನ ಪ್ರಣಯೇದ್ ರಾಜಾ ದಂಡಂ ದಂಡ್ಯೇಷ್ವತಂದ್ರಿತಃ।
ಜಲೇ ಮತ್ಸ್ಯಾನಿವಾಭಕ್ಷ್ಯಾನ್ ದುರ್ಬಲಾನ್ ಬಲವತ್ತರಾಃ ॥೩೮॥

ಇಂದ್ರಿಯಗಳ ಹತೋಟಿಯನ್ನು ಕಳೆದುಕೊಂಡು, ದಂಡನೀತಿಯನ್ನು ಪ್ರಜೆಗಳ ವಿಷಯದಲ್ಲಿ ಎಚ್ಚರಿಕೆಯಿಂದ ಪ್ರಯೋಗ ಮಾಡದಿದ್ದರೆ ಆಗ ನೀರಿನಲ್ಲಿರುವ ಬಲಿಷ್ಠ -ವಾದ ಮೀನುಗಳು ಸಣ್ಣಮೀನುಗಳನ್ನು ಭಕ್ಷಿಸುವಂತೆ ಲೋಕದಲ್ಲಿ ಬಲಾಢ್ಯರು ದುರ್ಬಲರನ್ನು ಭಕ್ಷಿಸುತ್ತಾರೆ.

ವಿವರಣೆ - ರಾಜನಾದವನು ಆಯಾ ಪ್ರಜೆಗಳಿಗೆ ಅನುಗುಣವಾಗಿ ದಂಡ-ನೀತಿಶಾಸ್ತ್ರವು ಹೇಳುವಂತೆ ದಂಡನೀತಿಯನ್ನು ಅಳವಡಿಸಬೇಕು. ಗಮನಿಸಿ ಪ್ರತಿಯೊಬ್ಬರಿಗೂ ಶಿಕ್ಷೆಯನ್ನು ಕೊಡಬೇಕು. ಇಲ್ಲದಿದ್ದರೆ ದುರ್ಬಲರು ಅತ್ಯಂತ ಪ್ರಾಮಾಣಿಕರಾಗಿದ್ದರೂ ಕೂಡ ಬಲಿಷ್ಠರಿಂದ ಸೋಲುತ್ತಾರೆ. ದುರ್ಬಲರಲ್ಲಿರುವ ಧರ್ಮ, ಪ್ರಾಮಾಣಿಕತನ ಇವುಗಳಿಗೆ ಜಗತ್ತಿನಲ್ಲಿ ಬೆಲೆಯೇ ಇಲ್ಲದಂತಾಗುತ್ತದೆ. ಆದ್ದರಿಂದ ಧರ್ಮ, ಪ್ರಾಮಾಣಿಕತನ ಇವುಗಳಿಗೆ ಮಾನ್ಯತೆಯನ್ನು ನೀಡುವುದ-ಕ್ಕಾಗಿ ದಂಡನೀತಿಯನ್ನು ಪ್ರತಿಯೊಬ್ಬರಲ್ಲಿಯೂ ಕೂಡ ಅಳವಡಿಸಬೇಕು.

ಕಾಕೋಽದ್ಯಾಚ್ಚ ಪುರೋಡಾಶಂ ಶ್ವಾ ಚೈವಾಬಲಿಹೇದ್ಧವಿಃ।
ಸ್ವಾಮಿತ್ವಂ ನ ಕ್ವಚಿಚ್ಚ ಸ್ಯಾತ್ ಪ್ರಪದ್ಯೇತಾಧರೋತ್ತರಮ್ ॥೩೯॥

ರಾಜನಾದವನು ದಂಡನೀತಿಯನ್ನು ಪ್ರಯೋಗ ಮಾಡದಿದ್ದರೆ ಲೋಕದಲ್ಲಿ ಅನೇಕ ಅನರ್ಥಗಳೇ ಉಂಟಾಗುತ್ತವೆ. ಕಾಗೆಯು ಪವಿತ್ರವಾದ ಪುರೋಡಾಶವನ್ನು

ಭಕ್ಷಿಸುತ್ತದೆ. ನಾಯಿಯು ಯಜ್ಞದ ಹವಿಸ್ಸನ್ನು ತಿನ್ನುತ್ತದೆ. ಜಗತ್ತಿನಲ್ಲಿ ಯಾರೊಬ್ಬ ಪ್ರಭುವೇ ಇಲ್ಲದಂತಾಗಿ ಅಧಮರು ಉತ್ತಮರಾಗುತ್ತಾರೆ. ಉತ್ತಮರು ಅಧಮರಾಗುವ ದುಃಸ್ಥಿತಿವುಂಟಾಗುತ್ತದೆ.

ಸರ್ವೋ ದಂಡಜಿತೋ ಲೋಕೋ ದುರ್ಬಲಸ್ತು ಶುಚಿರ್ನರಃ।
ದಂಡಸ್ಯ ಹಿ ಭಯಾತ್ ಸರ್ವಂ ಜಗದ್ಭೋಗಾಯ ಕಲ್ಪತೇ ॥೪೦॥

ಲೋಕದಲ್ಲಿ ದಂಡನೀತಿಯನ್ನು ಅಳವಡಿಸದಿದ್ದರೆ ಬಾಹ್ಯವಾಗಿ, ಆಂತರಿಕವಾಗಿ ಶುಚಿರ್ಭೂತನಾದ ಒಬ್ಬ ಮನುಷ್ಯನೇ ದೊರೆಯಲು ಸಾಧ್ಯವಾಗುವುದಿಲ್ಲ. ಯಾವಾಗ ದಂಡನೀತಿಯನ್ನು ರಾಜನಾದವನು ಅಳವಡಿಸುತ್ತಾನೋ, ಆಗ ಅದರ ಭಯದಿಂದ ಸಮಸ್ತಲೋಕವು ಶುಚಿಯಾಗಿರುತ್ತದೆ. ಅಂಥ ಜಗತ್ತು ಸುಖದ ಅನುಭವವನ್ನು ಹೊಂದಲು ಸಾಧ್ಯ .

ದೇವದಾನವಗಂಧರ್ವಾ ರಕ್ಷಾಂಸಿ ಪತಗೋರಗಾಃ।
ತೇऽಪಿ ಭೋಗಾಯ ಕಲ್ಪಂತೇ ದಂಡೇನೈವಾಭಿಪೀಡಿತಾಃ ॥೪೧॥

ದೇವತೆಗಳು, ಅಸುರರು, ಗಂಧರ್ವರು, ರಕ್ಷಸರು, ಪತಗರು, ಉರಗಗಳು ದಂಡಕ್ಕೆ ಹೆದರಿಯೇ ತಮ್ಮ ತಮ್ಮ ಕರ್ತವ್ಯಗಳಲ್ಲಿ ನಿರತರಾಗಿದ್ದಾರೆ. ಹಾಗೂ ಭೋಗಗಳಿಗೆ ಪಾತ್ರರಾಗಿರುತ್ತಾರೆ.

ದೂಷ್ಯೇಯುಃ ಸರ್ವವರ್ಣಾಶ್ಚ ಭಿದ್ಯೇರನ್ ಸರ್ವಸೇತವಃ।
ಸರ್ವಲೋಕಪ್ರಕೋಪಶ್ಚ ಭವೇದ್ ದಂಡಸ್ಯ ವಿಭ್ರಮಾತ್ ॥೪೨॥

ದಂಡನೀತಿಯನ್ನು ಅಳವಡಿಸದಿದ್ದರೆ ವರ್ಣಾಶ್ರಮ ವ್ಯವಸ್ಥೆಯೇ ಹಾಳಾಗುತ್ತದೆ. ಎಲ್ಲಾ ಕಟ್ಟುಪಾಡುಗಳು ಛಿದ್ರಗೊಳ್ಳುತ್ತವೆ. ಸಮಸ್ತ ಲೋಕವು ಪ್ರಕ್ಷೋಭವಾಗುತ್ತದೆ.

ಯತ್ರ ಶ್ಯಾಮೋ ಲೋಹಿತಾಕ್ಷೋ ದಂಡಶ್ಚರತಿ ಪಾಪಹಾ।
ಪ್ರಜಾಸ್ತತ್ರ ನ ಮುಹ್ಯಂತಿ ನೇತಾ ಚೇತ್ ಸಾಧು ಪಶ್ಯತಿ ॥೪೩॥

ದಂಡಪುರುಷನು ಕಪ್ಪಾದ ದೇಹದಿಂದ ಕೂಡಿ, ಕೆಂಪಾದ ಕಣ್ಣುಗಳಿಂದ ಎಲ್ಲೆಡೆಯೂ ನೋಡುತ್ತಾ ಪಾಪಿಗಳನ್ನು ಶಿಕ್ಷಿಸುತ್ತಿರುತ್ತಾನೆ. ಇವನ ಸಂಚಾರ ಎಲ್ಲಿರುತ್ತದೋ, ಅಲ್ಲಿರುವ ಪ್ರಜೆಗಳು ತಮ್ಮ ನಿಯಮದಂತೆ ಸರಿಯಾಗಿ ನಡೆದುಕೊಂಡು, ಸನ್ಮಾರ್ಗಾನುಯಾಯಿಗಳಾಗುತ್ತಾರೆ. ಎಂದೆಂದೂ ಅಜ್ಞಾನಕ್ಕೆ ತುತ್ತಾಗುವುದಿಲ್ಲ.

ಟಿಪ್ಪಣಿ - ಯತ್ರ ಶ್ಯಾಮೋ ಲೋಹಿತಾಕ್ಷೋ ದಂಡಶ್ಚರತಿ ಇತ್ಯತ್ರ ಕೋಪಾತ್ ಶ್ಯಾಮಃ ಶ್ಯಾಮವದನಃ ಲೋಹಿತಾಕ್ಷಶ್ಚ ದಂಡಃ ದಂಡಕೋ ರಾಜಾ।

'ಯತ್ರ ಶ್ಯಾಮೋ ಲೋಹಿತಾಕ್ಷೋ ದಂಡಶ್ಚರತಿ' - ಎಂಬಲ್ಲಿ ಕೋಪದಿಂದ ಕಪ್ಪುಬಣ್ಣವನ್ನು ಹೊಂದಿದ್ದಾನೆ. ಶ್ಯಾಮವರ್ಣದ ವದನವನ್ನು ಹೊಂದಿದ್ದಾನೆ. ಕೆಂಪಾದ ಕಣ್ಣುಗಳನ್ನು ಹೊಂದಿದ್ದಾನೆ. ಇಂಥ ದಂಡಪುರುಷನೇ ಲೋಕದ ರಾಜನಾಗಿದ್ದಾನೆ ಎಂದಭಿಪ್ರಾಯ.

ಆಹುಸ್ತಸ್ಯ ಪ್ರಣೇತಾರಂ ರಾಜಾನಂ ಸತ್ಯವಾದಿನಮ್ ।
ಸಮೀಕ್ಷ್ಯಕಾರಿಣಂ ಪ್ರಾಜ್ಞಂ ಧರ್ಮಕಾಮಾರ್ಥಕೋವಿದಮ್ ॥೪೪॥

ತಂ ರಾಜಾ ಪ್ರಣಯನ್ ಸಮ್ಯಕ್ ಸ್ವರ್ಗಾಯಾಭಿಪ್ರವರ್ತತೇ ।
ಕಾಮಾತ್ಮವಿಷಯೀ ಕ್ಷುದ್ರೋ ದಂಡೇನೈವ ನಿಹನ್ಯತೇ ॥೪೫॥

ಸಮಸ್ತ ಪ್ರಜೆಗಳು ತಮ್ಮ ನಿಯಮದಲ್ಲಿ ತೊಡಗಲು ಕಾರಣನಾದ ಈ ದಂಡಪುರುಷನೇ ರಾಜನ ಸ್ಥಾನದಲ್ಲಿ ನಿಂತಿದ್ದಾನೆ. ಎಲ್ಲಾ ಜ್ಞಾನಿಗಳು ಇವನನ್ನು ಸತ್ಯವಾದಿ ಎನ್ನುತ್ತಾರೆ. ಜಗತ್ತಿಗೆ ಪ್ರಣೇತೃವಾಗಿದ್ದಾನೆ. ಎಲ್ಲವನ್ನು ನೋಡುತ್ತಾ ಆಯಾ ಕೆಲಸಗಳನ್ನು ಮಾಡಿಸುತ್ತಾನೆ. ಅತ್ಯಂತ ಪ್ರಾಜ್ಞನಾಗಿದ್ದಾನೆ. ಧರ್ಮ, ಅರ್ಥ, ಕಾಮಗಳನ್ನು ಅರಿತಿದ್ದಾನೆ. ಇಂಥ ದಂಡಪುರುಷನನ್ನು ಸರಿಯಾಗಿ ಆಲೋಚನೆ ಮಾಡಿ, ಪ್ರಜೆಗಳ ವಿಷಯದಲ್ಲಿ ರಾಜನಾದವನು ಪ್ರಯೋಗಿಸಬೇಕು. ಅಂಥ ರಾಜನು ಸ್ವರ್ಗವನ್ನೇ ಪಡೆಯುತ್ತಾನೆ. ಇದನ್ನು ಪಾಲಿಸದೇ ತನ್ನ ಕಾಮನೆಯಲ್ಲೇ ಮನಸ್ಸನ್ನಿಟ್ಟ ನೀಚನಾದ ರಾಜನು ಅದೇ ದಂಡಪುರುಷನಿಂದ ಹತನಾಗುತ್ತಾನೆ.

ವಿವರಣೆ - ರಾಜನಾದವನು , ಸ್ವತಂತ್ರವಾಗಿ ಏನನ್ನೂ ಮಾಡುವಂತಿಲ್ಲ. ಕಾನೂನಿಗೆ ಅನುಗುಣವಾಗಿಯೇ ವರ್ತಿಸಬೇಕು. ದಂಡನೀತಿಯು ಆಯಾ ಕಾಲಗಳಲ್ಲಿ ಪ್ರತಿಯೊಬ್ಬನು ಮಾಡಬೇಕಾದ ಕರ್ತವ್ಯಗಳನ್ನು ಬೋಧನೆ ಮಾಡುತ್ತದೆ. ಅದಕ್ಕನುಗುಣವಾಗಿ ಯಾರು ವರ್ತನೆ ಮಾಡುವುದಿಲ್ಲವೋ, ಅವರನ್ನು ಶಿಕ್ಷಿಸುವುದು ರಾಜನ ಕರ್ತವ್ಯವಾಗಿರುತ್ತದೆ. ಆದ್ದರಿಂದ ರಾಜನಿಗೂ ಕೂಡ ಮಾನ್ಯವಾದದ್ದು ದಂಡನೀತಿ. ಆದ್ದರಿಂದಲೇ ಪ್ರಕೃತ ಈ ಶ್ಲೋಕಗಳಲ್ಲಿ ದಂಡನೀತಿಯನ್ನೇ ರಾಜನ ಸ್ಥಾನದಲ್ಲಿ ವರ್ಣಿಸುತ್ತಿದ್ದಾರೆ. ರಾಜನಿಗೂ, ರಾಜನಂತಿರುವ ಈ ದಂಡನೀತಿಯು ಪ್ರತಿಯೊಬ್ಬರಿಗೂ ಕೂಡ ಅನ್ವಯಿಸುವಂತೆ ರಾಜನಿಗೂ ಕೂಡ ಅನ್ವಯಿಸುತ್ತದೆ. ಆ ದಂಡನೀತಿಗೆ ವಿರುದ್ಧವಾಗಿ ರಾಜನು ವರ್ತನೆ ಮಾಡಿದಲ್ಲಿ ಸ್ವತಃ ದಂಡಪುರುಷನೇ ಆ ರಾಜನನ್ನು ಸಂಹಾರ ಮಾಡುತ್ತಾನೆ.

ದಂಡೋ ಹಿ ಸುಮಹಾತೇಜಾ ದುರ್ಧರಶ್ಚಾಕೃತಾತ್ಮಭಿಃ।
ಧರ್ಮಾದ್ ವಿಚಲಿತಂ ಹಂತಿ ನೃಪಮೇವ ಸಬಾಂಧವಮ್ ॥೪೬॥

ಆ ದಂಡನೀತಿಯು ಅತ್ಯಂತ ತೇಜಸ್ಸುಳ್ಳದ್ದು. ಪ್ರಾಜ್ಞರಿಗಲ್ಲದೇ ಅಜ್ಞಾನಿಗಳಿಗೆ ಇದನ್ನು ಅರ್ಥಮಾಡಿಕೊಳ್ಳಲು ಮತ್ತು ಅನುಸರಿಸಲು ಸಾಧ್ಯವೇ ಆಗುವುದಿಲ್ಲ. ಜಗತ್ತಿನಲ್ಲಿ ಯಾರು ಧರ್ಮದಿಂದ ವಿಚಲಿತನಾಗಿರುತ್ತಾನೋ, ಅಂಥವನು ರಾಜನಾಗಿದ್ದರೂ ಸರಿ, ಬಂಧುಬಾಂಧವರ ಜೊತೆ ಆ ದಂಡಪುರುಷನು ನಾಶಮಾಡುತ್ತಾನೆ. ರಾಜನನ್ನೇ ಸಂಹಾರ ಮಾಡುತ್ತಾನೆ.

ತತೋ ದುರ್ಗಂ ರಾಷ್ಟ್ರಂ ಚ ಲೋಕಂ ಚ ಸಚರಾಚರಮ್।
ಅಂತರಿಕ್ಷಗತಾಂಶ್ಚೈವ ಮುನೀನ್ ದೇವಾಂಶ್ಚ ಹಿಂಸತಿ ॥೪೭॥

ಧರ್ಮಭ್ರಷ್ಟನಾದ ರಾಜನನ್ನಷ್ಟೇ ದಂಡಪುರುಷನು ನಾಶಮಾಡುವುದಲ್ಲ. ಅವನ ದುರ್ಗವನ್ನು, ರಾಷ್ಟ್ರವನ್ನು ಚರಾಚರಾತ್ಮಕವಾದ ಸಮಸ್ತಲೋಕವನ್ನೇ ನಾಶಮಾಡುತ್ತಾನೆ. ಮತ್ತು ಆಕಾಶದಲ್ಲಿರುವ ಪ್ರಾಣಿಗಳನ್ನು, ಮುನಿಗಳನ್ನು, ದೇವತೆಗಳನ್ನೂ ಕೂಡ ನಿಗ್ರಹಿಸುತ್ತಾನೆ.

ವಿವರಣೆ - ರಾಜನಾದವನು ಅತ್ಯಂತ ಧರ್ಮಿಷ್ಠನಾಗಿರಬೇಕು. ಇಲ್ಲದಿದ್ದರೆ

ತಾನಷ್ಟೇ ದಂಡನೀತಿಯಿಂದ ನಷ್ಟನಾಗುವುದಲ್ಲ, ಅವನಿಂದ ಸಮಸ್ತ ಜಗತ್ತೇ ನಾಶವಾಗುವ ಭೀಕರ ಪರಿಸ್ಥಿತಿ ಎದುರಾಗುತ್ತದೆ. ಇದರಿಂದ ಋಷಿಮುನಿಗಳಿಗೆ ಸಾಕ್ಷಾತ್ಕಾರಕ್ಕಾಗಿ ತಪಸ್ಸನ್ನು ಮಾಡಲೂ ಕೂಡ ಸಾಧ್ಯವಾಗುವುದಿಲ್ಲ. ರಾಜನಾದವನು ಅಧರ್ಮಮಾರ್ಗದಲ್ಲಿದ್ದಾಗ ದೇವತೆಗಳಿಗೂ ಕೂಡ ಸುಖ-ಶಾಂತಿಗಳು ದೊರಕುವುದಿಲ್ಲ. ಆದ್ದರಿಂದ ರಾಜನು ಅತ್ಯಂತ ಎಚ್ಚರಿಕೆಯಿಂದ ದಂಡನೀತಿಯನ್ನು ಅಳವಡಿಸಿಕೊಳ್ಳಬೇಕು.

ಸೋಽಸಹಾಯೇನ ಮೂಢೇನ ಲುಬ್ಧೇನಾಕೃತಬುದ್ಧಿನಾ ।
ಅಶಕ್ಯೋ ನ್ಯಾಯತೋ ನೇತುಂ ವಿಷಯಾಂಶ್ಚೈವ ಸೇವತಾ ॥೪೮॥

ಯಾರು ಅಸಹಾಯಕನೋ, ಮೂರ್ಖನೋ, ಲೋಭಿಯೋ, ವಿಚಾರ ಮಾಡದ ಬುದ್ಧಿಯುಳ್ಳವನೋ, ಅಂಥವನಿಗೆ ನ್ಯಾಯರೀತಿಯಿಂದ ಈ ದಂಡನೀತಿಯನ್ನು ಅಳವಡಿಸಿಕೊಳ್ಳಲು ಸಾಧ್ಯವೇ ಆಗುವುದಿಲ್ಲ. ಆದ್ದರಿಂದ ಇಂದ್ರಿಯನಿಗ್ರಹವನ್ನು ಹೊಂದಲೇಬೇಕು.

ಶುಚಿನಾ ಸತ್ಯಸಂಧೇನ ನೀತಿಶಾಸ್ತ್ರಾನುಸಾರಿಣಾ ।
ದಂಡಃ ಪ್ರಣೇತುಂ ಶಕ್ಯೋ ಹಿ ಸುಸಹಾಯೇನ ಧೀಮತಾ ॥೪೯॥

ಶುಚಿಯಾದವನು, ಸತ್ಯಸಂಧನಾದವನು, ನೀತಿಶಾಸ್ತ್ರವನ್ನು ಅನುಸರಿಸುವವನು, ಸಹಾಯಸಂಪತ್ತುಳ್ಳವನು, ಬುದ್ಧಿವಂತನು ಆದ ರಾಜನಷ್ಟೇ ಆ ದಂಡವನ್ನು ಪ್ರಯೋಗಿಸಲು ಸಮರ್ಥನಾಗುತ್ತಾನೆ.

ಸ್ವರಾಷ್ಟ್ರೇ ನ್ಯಾಯವರ್ತೀ ಸ್ಯಾದ್ ಭೃಶದಂಡಶ್ಚ ಶತ್ರುಷು ।
ಸುಹೃತ್ಸ್ವವಿಜಿಹ್ಮಃ ಸ್ನಿಗ್ಧೇಷು ಬ್ರಾಹ್ಮಣೇಷು ಕ್ಷಮಾನ್ವಿತಃ ॥೫೦॥

ತನ್ನ ರಾಷ್ಟ್ರದಲ್ಲಿ ನ್ಯಾಯದಿಂದ ವರ್ತಿಸುತ್ತಿರುವ ಶತ್ರುಗಳನ್ನು ಅತ್ಯಂತ ಕಠಿಣವಾಗಿಯೇ ದಂಡಿಸಬೇಕಾಗುತ್ತದೆ. ಸ್ನೇಹಿತರಲ್ಲಿ ಎಂದೂ ಸಹ ವಕ್ರಬುದ್ಧಿಯನ್ನು ಹೊಂದಬಾರದು. ಬ್ರಾಹ್ಮಣರಲ್ಲಿ ಕ್ಷಮಾಶೀಲನಾಗಿರಬೇಕು. ಇಂಥ ರಾಜನು ದಂಡನೀತಿಗೆ ಅರ್ಹನಾಗುತ್ತಾನೆ.

ದಂಡನೀತಿ ಎಂದರೇನು ?

ವಿವರಣೆ - ರಾಜನೀತಿಯನ್ನೇ ದಂಡನೀತಿ ಎನ್ನುತ್ತಾರೆ. ಅರ್ಥಶಾಸ್ತ್ರವನ್ನೂ ಕೂಡ ದಂಡನೀತಿ ಎನ್ನುತ್ತಾರೆ. 'ದಂಡೇನ ನೀಯತೇ ದಂಡನೀತಿಃ' ಎಂದು ಇದರ ವ್ಯುತ್ಪತ್ತಿ. ಅಥವಾ 'ದಂಡಃ ನೀಯತೇ ಅನಯಾ ಇತಿ ದಂಡನೀತಿಃ' ಎಂಬುದಾಗಿಯೂ ವ್ಯುತ್ಪತ್ತಿಯನ್ನು ತಿಳಿಯಬಹುದು. ಸಾಮ, ದಾನ, ಭೇದ, ದಂಡ ಈ ನಾಕು ಉಪಾಯಗಳಲ್ಲಿ ದಂಡವು ಪ್ರಧಾನವಾಗಿದೆ.

ಧರ್ಮದಿಂದ ಪ್ರಜೆಗಳನ್ನು ಪರಿಪಾಲನೆ ಮಾಡುವುದಕ್ಕಾಗಿ ಪರಮಾತ್ಮನು ಈ ದಂಡನೀತಿಯನ್ನು ಸೃಷ್ಟಿ ಮಾಡಿದ್ದಾನೆ. ಇದನ್ನು ರಾಜನಾದವನು ಅನುಷ್ಠಾನಗೊಳಿಸಬೇಕು. ಹಾಗೇ ಅನುಷ್ಠಾನಗೊಳಿಸಿದ ರಾಜನಿಗೂ ದಂಡವೆಂದೇ ಕರೆಯುತ್ತಾರೆ. ಅನೇಕ ಕಾರಣಗಳ ಪೂರ್ವಕವಾಗಿ ಅರ್ಥತತ್ವಗಳ ಪರೀಕ್ಷಾರೂಪವಾದ ಆನ್ವೀಕ್ಷಿಕೀ ಮೊದಲಾದ ಯೋಗಕ್ಷೇಮಸಾಧನವಾದ ದಂಡವನ್ನು ತನ್ನ ರಾಜ್ಯದಲ್ಲಿ ಅನುಷ್ಠಾನ ಮಾಡುವುದರಿಂದ ಇದಕ್ಕೆ ದಂಡನೀತಿ ಎಂಬುದಾಗಿ ಕರೆಯುತ್ತಾರೆ.

'ದಮೋ ದಂಡ ಇತಿ ಖ್ಯಾತಃ ತಾತ್ಪ್ರ್ಯಾತ್ ದಂಡೋ ಮಹೀಪತಿಃ।
ತಸ್ಯ ನೀತಿಃ ದಂಡನೀತಿಃ ನಯನಾತ್ ನೀತಿರುಚ್ಯತೇ ॥

ಮನುಷ್ಯನ ವ್ಯವಹಾರಕ್ಕೆ ಬೇಕಾದ ಭೂಮಿ, ಧನ ಇವುಗಳ ಲಾಭ ಮತ್ತು ಇವುಗಳ ರಕ್ಷಣೆಗೆ ಉಪಾಯಗಳನ್ನು ಹೇಳುವ ಶಾಸ್ತ್ರವು ಅರ್ಥಶಾಸ್ತ್ರ ಎಂಬುದಾಗಿ ಕರೆಸಿಕೊಳ್ಳುತ್ತದೆ. ಕೃಷಿ, ವಾಣಿಜ್ಯ, ಪಶುಪಾಲನೆಗಳ ಮತ್ತು ಭೂಮಿ, ಧನ-ಕನಕಾದಿಗಳ ಯೋಗಕ್ಷೇಮವು ರಾಜನಿಗೆ ಸೇರಿರುವುದರಿಂದ ಇದಕ್ಕೆ ರಾಜನೀತಿ ಎಂದೂ ಕೂಡ ಕರೆಯುತ್ತಾರೆ.

ಆನ್ವೀಕ್ಷಿಕೀ ತ್ರಯೀವಾರ್ತಾನಾಂ ಯೋಗಕ್ಷೇಮಸಾಧನೋ ದಂಡಃ ತಸ್ಯನೀತಿಃ ದಂಡನೀತಿಃ।

ಸುವ್ಯವಸ್ಥಿತವಾದ ರಾಜ್ಯಪದ್ಧತಿಯನ್ನು ಅಥವಾ ನ್ಯಾಯವಾದ ರಾಜ್ಯದ ಆಡಳಿತವನ್ನು ದಂಡನೀತಿ ಎಂಬುದಾಗಿಯೂ ವ್ಯವಹರಿಸುತ್ತಾರೆ.

ರಾಜನನ್ನು ದಂಡನೇತೃ ಎಂಬುದಾಗಿ ಕರೆಯುತ್ತಾರೆ. ಆನ್ವೀಕ್ಷೀಕೀ ಮೊದಲಾದವುಗಳಿಗೆ ಯೋಗಕ್ಷೇಮಸಾಧನವನ್ನು ರಾಜ್ಯದಲ್ಲಿ ನಯನ ಮಾಡಿ, ಅನುಷ್ಠಾನಕ್ಕೆ

ತರುವುದರಿಂದ ರಾಜನನ್ನು ದಂಡನೇತೃ ಎಂಬುದಾಗಿ ಕರೆಯುತ್ತಾರೆ. ಇಂಥ ದಂಡ -ನೀತಿಯ ಬಗ್ಗೆ ಸಂಪೂರ್ಣವಾಗಿ ಅರಿತಿರಬೇಕು ಎಂಬುದಾಗಿ ಮನುಸ್ಮೃತಿಯು ಹೇಳುತ್ತದೆ.

ಸೈನಾಪತ್ಯಂ ಚ ರಾಜ್ಯಂ ಚ ದಂಡನೇತೃತ್ವಮೇವ ಚ।
ಸರ್ವಲೋಕಾಧಿಪತ್ಯಂ ಚ ವೇದಶಾಸ್ತ್ರವಿದರ್ಹತಿ ॥

ಏವಂವೃತ್ತಸ್ಯ ರಾಜ್ಞಸ್ತು ಶಿಲೋಂಛೇನಾಪಿ ಜೀವತಃ।
ವಿಸ್ತೀರ್ಯೇತ ಯಶೋ ಲೋಕೇ ತೈಲಬಿಂದುರಿವಾಂಭಸಿ ॥೫೧॥

ಹೀಗೆ ದಂಡನೀತಿಯನ್ನು ಅಳವಡಿಸಿಕೊಂಡ ರಾಜನು ಕಾಡಿನಲ್ಲಿ ಎಲ್ಲರೂ ಆರಿಸಿಕೊಂಡು ಉಳಿದ ಧಾನ್ಯದ ಕಾಳುಗಳನ್ನು ಆಯ್ದುಕೊಂಡು ತಿಂದು ಜೀವಿಸುವ ಶೀಲೋಂಛವೃತ್ತಿಯಲ್ಲಿದ್ದರೂ ಕೂಡ ಕೀರ್ತಿಶಾಲಿಯಾಗುತ್ತಾನೆ. ನೀರಿನ ಮೇಲೆ ಬಿಟ್ಟ ಎಣ್ಣೆಯು ಎಲ್ಲೆಡೆಯೂ ಪಸರಿಸುತ್ತದೆಯೋ, ಅದರಂತೆ ಇವನ ಕೀರ್ತಿಯು ಲೋಕದಲ್ಲಿ ಎಲ್ಲೆಡೆಯೂ ಕೂಡ ವಿಸ್ತಾರವಾಗಿ ಹರಡುತ್ತದೆ.

ವಿವರಣೆ - ಶಿಲೋಂಛವೃತ್ತಿ - ಇದೊಂದು ವ್ರತ. ಕೃಷಿಕನು ತಾನು ಬೆಳೆದ ಧಾನ್ಯಗಳನ್ನೆಲ್ಲಾ ಆರಿಸಿಕೊಂಡು ತೆರಳಿದ ನಂತರ ಪಶು, ಪಕ್ಷಿಗಳೂ ಕೂಡ ಉಳಿದ ಆ ಧಾನ್ಯಗಳನ್ನು ತಿಂದುಳಿದ ಅನಂತರ ಸಿಗುವ ಧಾನ್ಯಗಳನ್ನು ಆರಿಸಿಕೊಂಡು ತಂದು ತಿನ್ನುವುದಕ್ಕೆ ಶಿಲೋಂಛವೃತ್ತಿ ಎಂದು ಕರೆಯುತ್ತಾರೆ. ವಾನಪ್ರಸ್ಥಾಶ್ರಮಿ-ಗಳು ಈ ವ್ರತವನ್ನು ಆಚರಿಸುತ್ತಾರೆ. ಜಗತ್ತಿನಲ್ಲಿ ಎಂದೂ ಕೂಡ ಇವರು ಬೆಳಕಿಗೆ ಬರುವುದೇ ಇಲ್ಲ. ತಮ್ಮಷ್ಟಕ್ಕೆ ತಾವು ಸಾಧನೆಗೈಯ್ಯುತ್ತಿರುತ್ತಾರೆ. ದಂಡನೀತಿಯನ್ನು ಅಳವಡಿಸಿಕೊಂಡ ರಾಜನು, ಇಂಥ ಸ್ಥಿತಿಯಲ್ಲಿದ್ದರೂ ಕೂಡ ಅವನ ಕೀರ್ತಿಯು ಲೋಕದಲ್ಲಿ ಎಲ್ಲೆಡೆಯೂ ಕೂಡ ಹರಡುತ್ತದೆ ಎಂಬುದು ಈ ಶ್ಲೋಕದ ಧ್ವನಿ.

ಅತಸ್ತು ವಿಪರೀತಸ್ಯ ನೃಪತೇರಕೃತಾತ್ಮನಃ।
ಸಂಕ್ಷಿಪ್ಯೇತ ಯಶೋ ಲೋಕೇ ಘೃತಬಿಂದುರಿವಾಂಭಸಿ ॥೫೨॥

ಒಂದು ವೇಳೆ ದಂಡನೀತಿಯನ್ನು ಅಳವಡಿಸದ ವಿಪರೀತವಾಗಿ ರಾಜನು ವರ್ತನೆ ಮಾಡಿದರೆ, ಅಥವಾ ನಡೆದುಕೊಂಡರೆ ಅವನ ಕೆಲಸಗಳೆಲ್ಲವೂ ವ್ಯರ್ಥವಾಗುತ್ತವೆ.

ನೀರಿನಲ್ಲಿ ಬಿಟ್ಟ ತುಪ್ಪದ ಬಿಂದುವಿನಂತೆ ಇದ್ದಲ್ಲಿಯೇ ಅವನ ಕೀರ್ತಿ ಉಳಿಯುತ್ತದೆ. ಸ್ವಲ್ಪವೂ ಕೂಡ ಅವನ ಕೀರ್ತಿ ಹೆಚ್ಚುವುದಿಲ್ಲ.

ದೇವದೇವೇನ ರುದ್ರೇಣ ಬ್ರಹ್ಮಣಾ ಚ ಮಹೀಪತೇ।
ವಿಷ್ಣುನಾ ಚೈವ ದೇವೇನ ಶಕ್ರೇಣ ಚ ಮಹಾತ್ಮನಾ ॥೫೩॥

ಲೋಕಪಾಲೈಶ್ಚ ಭೂತೈಶ್ಚ ಪಾರ್ಥಿವೈಶ್ಚ ಕೃತಾತ್ಮಭಿಃ।
ಧರ್ಮಾದ್ ವಿಚಲಿತಾ ರಾಜನ್ ಧಾರ್ತರಾಷ್ಟ್ರಾ ನಿಪಾತಿತಾಃ ॥೫೪॥
ಅಧಾರ್ಮಿಕಾ ದುರಾಚಾರಾಃ ಸಸೈನ್ಯಾ ವಿನಿಪಾತಿತಾಃ।

ಓ ಮಹೀಪತಿಯೇ! ನಿನ್ನ ಶತ್ರುಗಳಾದ ಕೌರವರು ದಂಡನೀತಿಯನ್ನು ಅನುಸರಿಸಲಿಲ್ಲ. ಧರ್ಮಪರಿಪಾಲನೆಯನ್ನು ಮಾಡಲಿಲ್ಲ. ಆ ಕಾರಣದಿಂದಲೇ ಅವರಿಂದು ಸಂಪೂರ್ಣವಾಗಿ ನಾಶವನ್ನು ಹೊಂದಿದ್ದಾರೆ. ಅವರ ನಾಶಕ್ಕಾಗಿ ನಿನಗೆ ಎಲ್ಲ ದೇವತೆಗಳು ಬೆಂಬಲವನ್ನು ನೀಡಿದ್ದಾರೆ. ಸಕಲ ದೇವತೆಗಳಿಗೆ ದೇವನಾದ ಮಹಾವಿಷ್ಣು, ಜೀವೋತ್ತಮನಾದ ಚತುರ್ಮುಖಬ್ರಹ್ಮ , ವೈಷ್ಣವೋತ್ತಮನಾದ ಮಹಾರುದ್ರದೇವ, ದೇವತೆಗಳ ಅಧಿಪತಿಯಾದ ದೇವೇಂದ್ರ, ಸಕಲ ದಿಕ್‌ಪಾಲಕರು, ಪಂಚಭೂತಗಳು ಮಹಾತ್ಮನಾದ ಪಾಂಡವರು ಇವರೇ ಮೊದಲಾದವರು ಅವರ ನಾಶವನ್ನು ಮಾಡಿರುವರು. ಧೃತರಾಷ್ಟ್ರನ ಮಕ್ಕಳೆಲ್ಲರೂ ಧರ್ಮಮಾರ್ಗವನ್ನು ಪರಿತ್ಯಾಗ ಮಾಡಿದ್ದರಿಂದ ಅಧಾರ್ಮಿಕರಾದ್ದರಿಂದ, ದುರಾಚಾರಿಗಳಾದ್ದರಿಂದ ಸಮಸ್ತಸೈನ್ಯಗಳೊಡನೆ ಸಂಪೂರ್ಣವಾಗಿ ಹತರಾದರು.

ಟಿಪ್ಪಣಿ - ಪಾರ್ಥಿವೈಶ್ಚ ಕೃತಾತ್ಮಭಿಃ ಇತ್ಯತ್ರ ಆಚಾರಿತಾದಿತಿ ಯೋಗಪದಾಧ್ಯಾಹಾರಃ। 'ಪಾರ್ಥಿವೈಶ್ಚ ಕೃತಾತ್ಮಭಿಃ' - ಆಚರಿತಾತ್ ಎಂಬ ಪದವನ್ನು ಅಧ್ಯಾಹಾರ ಮಾಡಬೇಕು. ಕೃತಾತ್ಮರಾದ ಪಾಂಡವರಿಂದ ಆಚರಿಸಲ್ಪಟ್ಟ ಎಂದಭಿಪ್ರಾಯ.

ತಾನ್ ನಿಹತ್ಯ ನ ದೋಷಸ್ತೇ ಸ್ವಲ್ಪೋಽಪಿ ಜಗತೀಪತೇ।
ಬಲಾದ್ ಧರ್ಮಪಥಾ ವಾ ತಾನ್ ಕ್ಷತ್ರಧರ್ಮೇಣ ವಾ ನೃಪ ॥೫೫॥

ಓ ರಾಜಾಧಿರಾಜನೇ ! ಅಧಾರ್ಮಿಕರಾದ ಆ ಕೌರವರನ್ನು ಕೊಂದಿದ್ದರಿಂದ ನಿನಗೆ ಸ್ವಲ್ಪವೂ ಕೂಡ ದೋಷವು ಬರುವುದಿಲ್ಲ. ಬಲದಿಂದ ಧರ್ಮದ ಮಾರ್ಗ-ದಿಂದ ಅಥವಾ ಕ್ಷತ್ರಿಯ ಧರ್ಮದಿಂದ ಅವರನ್ನು ನೀನು ವಧೆ ಮಾಡಿರುವಿ. ಪ್ರಜಾಪಾಲಕನೇ! ನಿನಗೆಂತು ದೋಷ ಬರಲು ಸಾಧ್ಯ ?

ಟಿಪ್ಪಣಿ - ಬಲಾದ್ ಧರ್ಮಪಥಾ ವಾ ತಾನ್ ಕ್ಷತ್ರಧರ್ಮೇಣ ವಾ ನೃಪ ಇತ್ಯತ್ರ ಬಲಾದ್ ಧರ್ಮಪಥಾ ವಾ ಕ್ಷತ್ರಧರ್ಮೇಣ ವಾ ತಾನ್ ನಿಹತ್ಯ ನ ದೋಷ ಇತಿ ಪೂರ್ವೇಣಾನ್ವಯಃ।

'ಬಲಾದ್ ಧರ್ಮಪಥಾ ವಾ ತಾನ್ ಕ್ಷತ್ರಧರ್ಮೇಣ' - ಎಂಬಲ್ಲಿ ಬಲಾದ್ ಧರ್ಮಪಥಾ ವಾ ಕ್ಷತ್ರಧರ್ಮೇಣ ವಾ ತಾನ್ ನಿಹತ್ಯ ನ ದೋಷಃ' ಎಂಬುದಾಗಿ ಹಿಂದಿನ ಶ್ಲೋಕಾರ್ಧದ ಜೊತೆ ಅನ್ವಯವನ್ನು ತಿಳಿದುಕೊಳ್ಳಬೇಕು. ಭುಜಬಲದಿಂದ, ಧರ್ಮಮಾರ್ಗದಿಂದ, ಕ್ಷತ್ರಿಯಧರ್ಮದಿಂದ, ಆ ಕೌರವರನ್ನು ಕೊಂದಿರುವ ಕಾರಣ ನಿನಗೆ ಯಾವುದೇ ದೋಷವು ಬರುವುದಿಲ್ಲ ಎಂದಭಿಪ್ರಾಯ.

ಮಿತ್ರತಾ ಸರ್ವಭೂತೇಷು ದಾನಮಧ್ಯಯನಂ ತಪಃ।
ಬ್ರಾಹ್ಮಣಸ್ಯೈಷ ಧರ್ಮಃ ಸ್ಯಾನ್ನ ರಾಜ್ಞೋ ರಾಜಸತ್ತಮ ॥೫೬॥

ರಾಜಶ್ರೇಷ್ಠನೇ! ಸಕಲ ಪ್ರಾಣಿಗಳಲ್ಲಿ ಸ್ನೇಹ, ದಾನಮಾಡುವಿಕೆ, ಅಧ್ಯಯನ ಮಾಡುವಿಕೆ, ತಪಸ್ಸಿನ ಆಚರಣೆ, ಇವುಗಳೆಲ್ಲವೂ ಬ್ರಾಹ್ಮಣನಿಗೆ ನಿತ್ಯಧರ್ಮವಾಗಿವೆ. ಇವುಗಳು ಕ್ಷತ್ರಿಯರ ಧರ್ಮಗಳಲ್ಲ.

ಅಸತಾಂ ಪ್ರತಿಷೇಧಶ್ಚ ಸತಾಂ ಚ ಪರಿಪಾಲನಮ್ ।
ಏಷ ರಾಜ್ಞಾಂ ಪರೋ ಧರ್ಮಃ ಸಮರೇ ಚಾಪಲಾಯನಮ್ ॥೫೭॥

ದುಷ್ಟರನ್ನು ನಿಗ್ರಹ ಮಾಡುವಿಕೆ. ಸಜ್ಜನರನ್ನು ರಕ್ಷಣೆ ಮಾಡುವಿಕೆ. ಯುದ್ಧದಿಂದ ಹಿಂತಿರುಗಿ ಓಡದಿರುವಿಕೆ. ಇವುಗಳು ಕ್ಷತ್ರಿಯರ ಮುಖ್ಯಧರ್ಮಗಳಾಗಿವೆ.

ಯಸ್ಮಿನ್ ಕ್ಷಮಾ ಚ ಕ್ರೋಧಶ್ಚ ದಾನಾದಾನೇ ಭಯಾಭಯೇ।
ನಿಗ್ರಾಹಾನುಗ್ರಹೌ ಚೋಭೌ ಸ ವೈ ಧರ್ಮವಿದುಚ್ಯತೇ ॥೫೮॥

ಕ್ಷಮೆ, ಸಿಟ್ಟು, ದಾನ, ಪ್ರತಿಗ್ರಹ, ನಿಗ್ರಹ, ಅನುಗ್ರಹ ಇವುಗಳು ಯಾರಲ್ಲಿ ಸಮಾನವಾಗಿರುತ್ತವೋ, ಅವನನ್ನೇ ಧರ್ಮಜ್ಞ ಎಂದು ಕರೆಯುತ್ತಾರೆ.

ನ ಶ್ರುತೇನ ನ ದಾನೇನ ನ ಸಾಂತ್ವೇನ ನಚೇಜ್ಯಯಾ।
ತ್ವಯೇಯಂ ಪೃಥಿವೀ ಲಬ್ಧಾ ನೋತ್ಕೋಚೇನ ತಥಾಪ್ಯುತ ॥೫೯॥

ಓ ರಾಜನೇ! ಈ ಭೂಮಿಯು ನಿನಗೆ ಶಾಸ್ತ್ರಶ್ರವಣದಿಂದ ಪ್ರಾಪ್ತವಾಗಿರುವುದಲ್ಲ. ಅಥವಾ ನೀನು ಮಾಡಿದ ದಾನದ ಪ್ರತಿಫಲವಾಗಿಯೂ ದೊರೆತದ್ದಲ್ಲ. ನಿನ್ನಲ್ಲಿರುವ ಮೃದುವಾದ ವಾಕ್ಯಗಳಿಂದಲೂ ಕೂಡ ಪ್ರಾಪ್ತವಾಗಿಲ್ಲ. ಯಾಗಬಲದಿಂದ ಯಾಚನೆಯಿಂದಲೂ ಕೂಡ ಈ ರಾಜ್ಯವು ನಿನಗೆ ಬಂದಿರುವುದಿಲ್ಲ.

ವಿವರಣೆ - ಬ್ರಾಹ್ಮಣನಲ್ಲಿರಬೇಕಾದ ಗುಣಗಳು ನಿನ್ನಲ್ಲಿವೆ. ಇದು ನಿನಗೆ ವಿಹಿತವಲ್ಲ. ಕ್ಷತ್ರಿಯಲ್ಲಿರಬೇಕಾದ ಅಸಾಧಾರಣಗುಣಗಳು ನಿನ್ನಲ್ಲಿರಬೇಕು. ಬ್ರಾಹ್ಮಣನಲ್ಲಿರುವ ಧರ್ಮಗಳನ್ನು ನೀನು ಅಳವಡಿಸಿಕೊಂಡಿರುವಿ. ನಿರಂತರ ಶಾಸ್ತ್ರಶ್ರವಣ ದಾನ, ಯಜ್ಞಯಾಗ ಮೊದಲಾದವುಗಳನ್ನು ಆಚರಿಸುತ್ತಿರುವಿ. ಅದರಿಂದ ನಿನಗೆ ಈ ಭೂಮಂಡಲವು ದೊರೆತಿದೆ ಎಂಬುದಾಗಿ ಸರ್ವಥಾ ತಿಳಿಯಬೇಡ. ಆದ್ದರಿಂದ ಕ್ಷತ್ರಧರ್ಮದಲ್ಲಿ ಆಸಕ್ತನಾಗು ಎಂಬುದು ಈ ಶ್ಲೋಕದ ಅಭಿಪ್ರಾಯ.

ಯತ್ತದ್ ಬಲಮಮಿತ್ರಾಣಾಂ ತಥಾ ವಿರಸಮುದ್ಯತಮ್।
ಹಸ್ತ್ಯಶ್ವರಥಸಂಪನ್ನಂ ತ್ರಿಭಿರಗ್ರೈರ್ಮಹತ್ತರಮ್ ॥೬೦॥

ರಕ್ಷಿತಂ ದ್ರೋಣಕರ್ಣಾಭ್ಯಾಮಶ್ವತ್ಥಾಮ್ನಾ ಕೃಪೇಣ ಚ।
ತತ್ತ್ವಯಾ ನಿಹತಂ ವೀರ ತಸ್ಮಾದ್ ಭುಂಕ್ಷ್ವ ವಸುಂಧರಾಮ್ ॥೬೧॥

ಓ ಪರಾಕ್ರಮಿಯೇ! ವೀರ್ಯಪರಾಕ್ರಮಗಳಲ್ಲಿ ಹೆಸರುವಾಸಿಗಳಾದ ಆನೆ, ಕುದುರೆ ಮತ್ತು ರಥಗಳೆಂಬ ಮೂರು ಶ್ರೇಷ್ಠವಾದ ಸೇನಾಂಗಗಳಿಂದ ಮಹಾಸೈನ್ಯವು ಕೂಡಿತ್ತು. ಮಹಾವೀರರಾದ ದ್ರೋಣ, ಕರ್ಣ, ಕೃಪ, ಅಶ್ವತ್ಥಾಮರಿಂದ

ರಕ್ಷಿತವಾಗಿತ್ತು. ಇಂಥ ಬಲಸಂಪನ್ನವಾದ ಶತ್ರುಗಳ ಮಹಾಸೈನ್ಯವನ್ನು ನೀನು ಧ್ವಂಸ ಮಾಡಿರುವಿ. ಆದ್ದರಿಂದಲೇ ಈ ವಸುಂಧರೆಯನ್ನು ನೀನು ಪಡೆದುಕೊಂಡಿರುವಿ. ವೀರ್ಯಶುಲ್ಕದಿಂದ ಪ್ರಾಪ್ತವಾದ ಈ ಭೂಮಂಡಲವನ್ನು ಈಗ ಉಪಭೋಗಿಸು.

ಜಂಬೂದ್ವೀಪೋ ಮಹಾರಾಜ ನಾನಾಜನಪದಾಯುತಃ।
ತ್ವಯಾ ಪುರುಷಶಾರ್ದೂಲ ದಂಡೇನ ಮೃದಿತಃ ಪ್ರಭೋ ॥೬೨॥

ಓ ಪುರುಷಸಿಂಹನಾದ ಮಹಾರಾಜನೇ! ಅನೇಕ ದೇಶಗಳಿಂದ ಕೂಡಿರುವ, ಈ ಜಂಬೂದ್ವೀಪವನ್ನು ನೀನು ದಂಡದಿಂದ ಶತ್ರುಗಳನ್ನು ನಿಗ್ರಹ ಮಾಡಿ, ನಿನ್ನ ಅಧೀನವನ್ನಾಗಿ ಪಡೆದುಕೊಂಡಿರುವಿ. (ಬ್ರಾಹ್ಮಣಧರ್ಮದ ಪರಿಪಾಲನೆಯಿಂದಲ್ಲ).

ಜಂಬೂದ್ವೀಪೇನ ಸದೃಶಃ ಕ್ರೌಂಚದ್ವೀಪೋ ನರಾಧಿಪ।
ಅಪರೇಣ ಮಹಾಮೇರೋರ್ದಂಡೇನ ಮೃದಿತಸ್ತ್ವಯಾ ॥೬೩॥

ಕ್ರೌಂಚದ್ವೀಪವು ಜಂಬೂದ್ವೀಪಕ್ಕೆ ಸದೃಶವಾಗಿದೆ. ಓ ನರಾಧಿಪನೇ! ನಿನ್ನ ಭುಜಬಲದಿಂದಲೇ ಈ ಕ್ರೌಂಚದ್ವೀಪವನ್ನು ವಶಮಾಡಿಕೊಂಡಿರುವಿ. ಈ ಕ್ರೌಂಚದ್ವೀಪವು ಮಹಾಮೇರುಪರ್ವತದ ಪೂರ್ವಭಾಗದಲ್ಲಿದೆ.

ಕ್ರೌಂಚದ್ವೀಪೇನ ಸದೃಶಃ ಶಾಕದ್ವೀಪೋ ನರಾಧಿಪ।
ಪೂರ್ವೇಣ ತು ಮಹಾಮೇರೋರ್ದಂಡೇನ ಮೃದಿತಸ್ತ್ವಯಾ ॥೬೪॥

ಶಾಕದ್ವೀಪವು ಕ್ರೌಂಚದ್ವೀಪಕ್ಕೆ ಸಮಾನವಾಗಿದೆ. ಮಹಾಮೇರುಪರ್ವತದ ಉತ್ತರಭಾಗದಲ್ಲಿ ಈ ಶಾಕದ್ವೀಪವಿದೆ. ನರಾಧೀಪನೇ! ಈ ಶಾಕದ್ವೀಪವನ್ನೂ ಕೂಡ ನೀನು ದಂಡನೀತಿಯಿಂದಲೇ ವಶಮಾಡಿಕೊಂಡಿರುವಿ.

ಉತ್ತರೇಣ ಮಹಾಮೇರೋಃ ಶಾಕದ್ವೀಪೇನ ಸಮ್ಮಿತಃ।
ಭದ್ರಾಶ್ವಃ ಪುರುಷವ್ಯಾಘ್ರ ದಂಡೇನ ಮೃದಿತಸ್ತ್ವಯಾ ॥೬೫॥

ಮಹಾಮೇರುಪರ್ವತದ ಉತ್ತರದಿಕ್ಕಿನಲ್ಲಿ ಶಾಕದ್ವೀಪವಿದೆ. ಇದಕ್ಕೆ ಸಮಾನವಾಗಿ ಭದ್ರಾಶ್ವವರ್ಷವಿದೆ. ಈ ಭದ್ರಾಶ್ವವರ್ಷವನ್ನೂ ಕೂಡ ನಿನ್ನ ದಂಡಶಕ್ತಿಯಿಂದಲೇ ಅಧೀನವನ್ನಾಗಿ ಮಾಡಿಕೊಂಡಿರುವಿ.

ದ್ವೀಪಾಶ್ಚ ಸಾಂತರದ್ವೀಪಾ ನಾನಾಜನಪದಾಲಯಾಃ।
ವಿಗಾಹ್ಯ ಸಾಗರಂ ವೀರ ದಂಡೇನ ಮೃದಿತಾಸ್ತ್ವಯಾ ॥೬೬॥

ಎಲ್ಲಾ ದ್ವೀಪಗಳು, ವರ್ಷಗಳು ಅಷ್ಟೇ ಅಲ್ಲದೇ ಅನೇಕ ದೇಶಗಳಿಗೆ ಆಶ್ರಯವಾದ ದ್ವೀಪಗಳು, ದ್ವೀಪಾಂತರಗಳು, ಸಮುದ್ರವನ್ನು ದಾಟಿದ ಆ ಎಲ್ಲಾ ಪ್ರದೇಶವನ್ನು ನಿನ್ನ ದಂಡಶಕ್ತಿಯಿಂದಲೇ ಅಧೀನವನ್ನಾಗಿ ಮಾಡಿಕೊಂಡಿರುವಿ.

ವಿವರಣೆ - ಒಟ್ಟು ಏಳು ದ್ವೀಪಗಳಿವೆ. ೧. ಜಂಬೂದ್ವೀಪ, ೨. ಪ್ಲಕ್ಷದ್ವೀಪ, ೩. ಶಾಲ್ಮಲಿದ್ವೀಪ, ೪. ಕುಶದ್ವೀಪ, ೫. ಕ್ರೌಂಚದ್ವೀಪ, ೬. ಶಾಕದ್ವೀಪ, ೭. ಪುಷ್ಕರದ್ವೀಪ. ಇವೆಲ್ಲವನ್ನೂ ಹಾಗೂ ಎಲ್ಲಾ ವರ್ಷಗಳನ್ನು ತನ್ನ ಅಧೀನವನ್ನಾಗಿ ಮಾಡಿಕೊಂಡಿದ್ದನು ಎಂದಭಿಪ್ರಾಯ.

ಏತಾನ್ಯಪ್ರತಿಮಾನಿ ತ್ವಂ ಕೃತ್ವಾ ಕರ್ಮಾಣಿ ಭಾರತ।
ನ ಪ್ರೀಯಸೇ ಮಹಾರಾಜ ಪೂಜ್ಯಮಾನೋ ದ್ವಿಜಾತಿಭಿಃ ॥೬೭॥

ಇಂಥ ಅಪ್ರತಿಮವಾದ, ಅನುಪಮವಾದ ಕಾರ್ಯಗಳನ್ನು ನೀನು ಮಾಡಿರುವಿ. ಆದ್ದರಿಂದಲೇ ಬ್ರಾಹ್ಮಣಶ್ರೇಷ್ಠರಿಂದ ಪುರಸ್ಕೃತನಾಗಿರುವಿ. ಆದರೂ ಕೂಡ ನಿನಗೆ ತೃಪ್ತಿಯೇ ಆಗುತ್ತಿಲ್ಲ.

ಸ ತ್ವಂ ಭ್ರಾತೄನಿಮಾನ್ ದೃಷ್ಟ್ವಾ ಪ್ರತಿನಂದಸ್ವ ಭಾರತ।
ಋಷಭಾನಿವ ಸಮ್ಮತ್ತಾನ್ ಗಜೇಂದ್ರಾನೂರ್ಜಿತಾನಿವ ॥೬೮॥

ನಿನ್ನ ಈ ವಿಜಯಯಾತ್ರೆಯಲ್ಲಿ ನಿನ್ನ ಸಹೋದರರು ಪೂರ್ಣವಾಗಿ ಬೆಂಬಲಿಗರಾಗಿದ್ದಾರೆ. ಮದಿಸಿರುವ ಎತ್ತುಗಳಂತಿದ್ದಾರೆ. ಬಲಿಷ್ಠವಾದ ಆನೆಗಳಂತಿದ್ದಾರೆ. ಇಂಥ ನಿನ್ನ ಈ ತಮ್ಮಂದಿರನ್ನು ಒಮ್ಮೆ ಕೃಪಾದೃಷ್ಟಿಯಿಂದ ನೋಡಿ, ಅವರನ್ನು ಸಂತೋಷಪಡಿಸು.

ಅಮರಪ್ರತಿಮಾಃ ಸರ್ವೇ ಶತ್ರುಸಾಹಾಃ ಪರಂತಪಾಃ।
ಏಕೋಽಪಿ ಹಿ ಸುಖಾಯೈಷಾಂ ಕ್ಷಮಃ ಸ್ಯಾದಿತಿ ಮೇ ಮತಿಃ ॥೬೯॥

ನಿನ್ನ ಈ ತಮ್ಮಂದಿರು ಸಾಮಾನ್ಯರಲ್ಲ. ದೇವಶ್ರೇಷ್ಠರಂತಿದ್ದಾರೆ. ಪ್ರತಿಯೊಬ್ಬರೂ ಕೂಡ ಶತ್ರುಗಳನ್ನು ಸಂಪೂರ್ಣವಾಗಿ ನಿಗ್ರಹ ಮಾಡುತ್ತಾರೆ. ಶತ್ರುಗಳಿಗೆ ಪರಿತಾಪವನ್ನು ಉಂಟುಮಾಡುವವರಾಗಿದ್ದಾರೆ. ಇವರಲ್ಲಿ ಯಾರೊಬ್ಬನೂ ಕೂಡ ನನ್ನನ್ನು ಸುಖವಾಗಿಟ್ಟರಲು ಸಂಪೂರ್ಣವಾಗಿ ಸಮರ್ಥರಾಗಿದ್ದಾರೆ.

ಕಿಂ ಪುನಃ ಪುರುಷವ್ಯಾಘ್ರಾಃ ಪತಯೋ ಮೇ ನರರ್ಷಭಾಃ।
ಸಮಸ್ತಾನೀಂದ್ರಿಯಾಣೀವ ಶರೀರಸ್ಯ ವಿಚೇಷ್ಟನೇ ॥೭೦॥

ಐದು ಇಂದ್ರಿಯಗಳು ಶರೀರವನ್ನು ಏಕಭಾವದಿಂದ ನಡೆಸಿಕೊಂಡು ಹೋಗುವಂತೆ ಈ ಐದುಮಂದಿ ಪುರುಷೋತ್ತಮರೂ ಆದ ನನ್ನ ಗಂಡಂದಿರು ನನ್ನ ರಕ್ಷಣೆಯಲ್ಲಿ ಬದ್ಧಕಂಕಣರಾಗಿದ್ದಾರೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕೇನು?

ಅನೃತಂ ಮಾ ಬ್ರವೀಚ್ಚ್ಛೂರಃ ಸರ್ವಜ್ಞಾ ಸರ್ವದರ್ಶಿನೀ।

ನನ್ನ ಅತ್ತೆಯಾದ ಕುಂತಿಯು ಎಂದೂ ಸಹ ಸುಳ್ಳನ್ನು ಹೇಳಿದವಳಲ್ಲ. ಅದೆಷ್ಟೋ ವಿಷಯಗಳನ್ನು ಕಣ್ಣಾರೆ ಕಂಡ ಅವಳು ಎಲ್ಲವನ್ನು ಬಲ್ಲವಳಾಗಿದ್ದಾಳೆ.

ಯುಧಿಷ್ಠಿರಸ್ತ್ವಾಂ ಪಾಂಚಾಲಿ ಸುಖೇ ಧಾಸ್ಯತ್ಯನುತ್ತಮೇ ॥೭೧॥
ಹತ್ವಾ ರಾಜಸಹಸ್ರಾಣಿ ಬಹೂನ್ಯಾಶು ಪರಾಕ್ರಮಃ।
ತದ್ ವ್ಯರ್ಥಂ ಸಂಪ್ರಪಶ್ಯಾಮಿ ಮೋಹಾತ್ತವ ಜನಾಧಿಪ ॥೭೨॥

ಅತ್ತೆಯಾದ ಕುಂತಿಯು ನನಗೆ ಹೀಗೆ ಹೇಳಿದ್ದಳು - ''ಓ ಪಾಂಚಾಲಿಯೇ ! ದುಃಖಿಸಬೇಡ. ನನ್ನ ಹಿರಿಯ ಮಗನಾದ ಮಹಾಪರಾಕ್ರಮಿಯಾದ ಯುಧಿಷ್ಠಿರನು ಸಾವಿರಗಟ್ಟಲೆ ಇರುವ ಶತ್ರುಗಳನ್ನು ಸಂಹಾರ ಮಾಡಿ, ನಿನ್ನನ್ನು ಶ್ರೇಷ್ಠವಾದ ಸುಖಸಿಂಹಾಸನದಲ್ಲಿ ಕುಳ್ಳಿರಿಸುತ್ತಾನೆ''. ನಮ್ಮ ಅತ್ತೆಯ ಈ ಮಾತನ್ನು ಇಂದು ನೀನು ವ್ಯರ್ಥಮಾಡುತ್ತಿರುವಿ. ನಿನ್ನಲ್ಲಿರುವ ಮೋಹದಿಂದ ನನಗೆ ಸುಖವನ್ನು ನೀಡದೇ, ಪುನಃ ಕಷ್ಟವನ್ನೇ ನೀಡುತ್ತಿರುವಿ.

ಯೇಷಾಮುನ್ಮತ್ತಕೋ ಜ್ಯೇಷ್ಠಃ ಸರ್ವೇ ತಸ್ಯೋಪಚಾರಿಣಃ।
ತವೋನ್ಮಾದೇನ ರಾಜೇಂದ್ರ ಸೋನ್ಮಾದಾಃ ಸರ್ವಪಾಂಡವಾಃ ॥೭೩॥

ಜ್ಯೇಷ್ಠಪುತ್ರನು ಮೋಹವನ್ನು ಹೊಂದಿದರೆ ಅವನ ತಮ್ಮಂದಿರೂ ಕೂಡ ಅವನನ್ನೇ ಅನುಸರಿಸುತ್ತಾರೆ. ಮಹಾರಾಜನೇ ! ನೀನು ಮೋಹವನ್ನು ಹೊಂದಿ, ಅಧರ್ಮದ ಮಾರ್ಗದಲ್ಲಿ ನಡೆದರೆ ಉಳಿದ ಪಾಂಡವರೂ ಕೂಡ ನಿನ್ನಂತೆಯೇ ನಡೆದುಕೊಳ್ಳುತ್ತಾರೆ.

ವಿವರಣೆ - 'ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ' ಎಂಬ ನಾಣ್ನುಡಿಯಂತೆ, ಹಿರಿಯರು ವರ್ತಿಸಿದಂತೆ ಕಿರಿಯರು ಅನುಸರಿಸುತ್ತಾರೆ. ಹಿರಿಯಣ್ಣನು ಜೀವನದಲ್ಲಿ ತಪ್ಪು ತೀರ್ಮಾನಗಳನ್ನು ತೆಗೆದುಕೊಂಡಾಗ, ಸಣ್ಣವರೂ ಕೂಡ ಅದನ್ನೇ ಧರ್ಮವೆನ್ನುತ್ತಾರೆ. ಆದ್ದರಿಂದ ಹಿರಿಯವನು ಜವಾಬ್ದಾರಿಯಿಂದ ಸನ್ಮಾರ್ಗದಲ್ಲಿಯೇ ನಡೆಯಬೇಕು. ಅದರ ಬಗ್ಗೆಯೇ ಹೆಚ್ಚು ವಿವೇಕವನ್ನು ಹೊಂದಬೇಕು.

ಯದಿ ಹಿ ಸ್ಯುರನುನ್ಮತ್ತಾ ಭ್ರಾತರಸ್ತೇ ಜನಾಧಿಪ।
ಬದ್ಧಾ ತ್ವಾ ನಾಸ್ತಿಕೈಃ ಸಾರ್ಧಂ ಪ್ರಶಾಸೇಯುರ್ವಸುಂಧರಾಮ್॥೭೪॥

ಒಂದು ವೇಳೆ ನಿನ್ನಂತೆ ನಿನ್ನ ಸಹೋದರರು ಮೋಹವನ್ನು ಹೊಂದದೇ ಇದ್ದರೆ, ಆಗ ಸತ್ಯಮಾರ್ಗದಲ್ಲಿ ನಾಸ್ತಿಕರೊಡನೆ ನಿನ್ನನ್ನೂ ಕೂಡ ಬಂಧಿಸಿ, ಭೂಮಂಡಲವನ್ನು ತಾವೇ ಆಳುತ್ತಿದ್ದರು.

ವಿವರಣೆ - ನಿನ್ನ ತಮ್ಮಂದಿರು ನೀನು ಹಾಕಿಕೊಟ್ಟ ಮಾರ್ಗದಲ್ಲೇ ನಡೆಯುತ್ತಾರೆ. ಎಂದೂ ಕೂಡ ಅದಕ್ಕೆ ವಿರುದ್ಧವಾಗಿ ನಡೆಯುವವರಲ್ಲ. ಹಿರಿಯಣ್ಣನಿಗೆ ವಿರುದ್ಧವಾಗಿ ನಡೆಯಬಾರದೆಂಬುದೇ ಅವರ ಧೋರಣೆಯಾಗಿದೆ. ಹಾಗಿಲ್ಲದಿದ್ದರೆ ಅವರು ಸ್ವತಃ ತಾವೇ ಭೂಮಂಡಲವನ್ನು ಆಳುತ್ತಿದ್ದರು. ಮತ್ತು ಈ ಜಗತ್ತಿನಲ್ಲಿರುವ ಅನೇಕ ನಾಸ್ತಿಕರ ಜೊತೆ ನಿನ್ನನ್ನೂ ಕೂಡ ಸೇರಿಸಿ ಬಂಧಿಸುತ್ತಿದ್ದರು. ಸ್ವಧರ್ಮದಲ್ಲಿ ನಿಷ್ಠೆಯಿಲ್ಲದವನು ಪರಧರ್ಮವನ್ನು ಅನುಸರಿಸುವವನು ನಾಸ್ತಿಕನಿಗೆ ಸಮಾನನಾಗಿದ್ದಾನೆ ಎಂಬುದು ದ್ರೌಪದಿಯ ಅಭಿಪ್ರಾಯ.

ಕುರುತೇ ಮೂಢಮೇವಂ ಹಿ ಯಃ ಶ್ರೇಯೋ ನಾಧಿಗಚ್ಛತಿ।
ಧೂಪೈರಂಜನಯೋಗೈಶ್ಚ ನಸ್ಯಕರ್ಮಭಿರೇವ ಚ ।
ಭೇಷಜೈಃ ಸ ಚಿಕಿತ್ಸ್ಯಃ ಸ್ಯಾದ್ ಯ ಉನ್ಮಾರ್ಗೇಣ ಗಚ್ಛತಿ ॥೭೫॥

ಯಾವ ಮೂಢನು ತನ್ನ ಪರಾಕ್ರಮದಿಂದ ಶತ್ರುಗಳನ್ನು ನಿಗ್ರಹ ಮಾಡಿ, ರಾಜ್ಯವನ್ನು ಅನುಭವಿಸದೇ ಕಾಡಿಗೆ ಹೋಗುತ್ತೇನೆನ್ನುತ್ತಾನೋ, ಅವನು ಎಂದೂ ಸಹ ಶ್ರೇಯಸ್ಸನ್ನು ಹೊಂದುವುದಿಲ್ಲ. ಯಾರು ಅಪಮಾರ್ಗದಲ್ಲಿ ಹೀಗೆ ಹೋಗುತ್ತಾನೋ, ಅವನಿಗೆ ಚಿಕಿತ್ಸೆಯನ್ನು ನೀಡಬೇಕು. ಧೂಪಗಳಿಂದ, ಕಣ್ಣಿಗೆ ಅಂಜನವನ್ನು ಹಚ್ಚುವುದರಿಂದ, ಮೂಗಿಗೆ ಔಷಧಿಯನ್ನು ಹಾಕುವುದರಿಂದ ಇನ್ನೂ ಅನೇಕ ಬಗೆಯ ಔಷಧಿಗಳಿಂದ ಅವನ ಹುಚ್ಚನ್ನು ಬಿಡಿಸಬೇಕು.

ವಿವರಣೆ - ತನ್ನ ಭುಜಪರಾಕ್ರಮದಿಂದ ಶತ್ರುಗಳನ್ನು ಜಯಿಸಿ, ಬಂದ ಅಪಾರ ಸಂಪತ್ತನ್ನು ಅನುಭವಿಸದಿದ್ದರೆ, ಅವನ ಬುದ್ಧಿ ಹಾಳಾಗಿದೆ ಎಂದರ್ಥ. ಬುದ್ಧಿ ಹಾಳಾದವನನ್ನು ಮೂರ್ಖ, ಹುಚ್ಚ ಇತ್ಯಾದಿಯಾಗಿ ಕರೆಯುತ್ತಾರೆ. ಅಂಥವನಿಗೆ ಆಯುರ್ವೇದದಲ್ಲಿ ಅನೇಕ ಚಿಕಿತ್ಸೆಗಳಿವೆ. ಹಾಗೇ ಚಿಕಿತ್ಸೆ ನೀಡುವುದರಿಂದ, ಅವನ ಬುದ್ಧಿಯು ಸರಿಯಾಗಿ ಕೆಲಸವನ್ನು ಮಾಡುತ್ತದೆ. ಮೂಗಿಗೆ ಔಷಧಿಯುಕ್ತವಾದ ತೈಲವನ್ನು ಹಾಕುವುದನ್ನೇ 'ನಸ್ಯಕರ್ಮ' ಎನ್ನುತ್ತಾರೆ. ನಸ್ಯವಿಧಿಯನ್ನು ವಾಗ್ಭಟನು **ಅಷ್ಟಾಂಗಹೃದಯದ ಇಪ್ಪತ್ತನೆಯ ಅಧ್ಯಾಯದಲ್ಲಿ** ಹೀಗೆ ಹೇಳಿರುತ್ತಾನೆ -

ಊರ್ಧ್ವಜತ್ರುವಿಕಾರೇಷು ವಿಶೇಷಾನ್ನಸ್ಯಮಿಷ್ಯತೇ।
ನಾಸಾ ಹಿ ಶಿರಸೋ ದ್ವಾರಂ ತೇನ ತದ್ವ್ಯಾಪ್ಯ ಹಂತಿ ತಾನ್ ॥

ಭುಜದ ಮೇಲಿನ ಅಂಗದ ವಿಕಾರಗಳಿಗೆ ನಸ್ಯಪ್ರಯೋಗವನ್ನು ಮಾಡುತ್ತಾರೆ. ಮೂಗು ತಲೆಯ ದ್ವಾರವಾಗಿದೆ. ಆ ದ್ವಾರದಿಂದ ನೀಡುವ ಚಿಕಿತ್ಸೆಯು ಶಿರಸ್ಸಿನಲ್ಲಿ ಎಲ್ಲೆಡೆಯೂ ವ್ಯಾಪಿಸಿ, ಅದರಲ್ಲಿರುವ ವಿಕಾರಗಳನ್ನು ಪರಿಹರಿಸುತ್ತವೆ. ಅನೇಕ ಗಿಡಮೂಲಿಕೆಗಳಿಂದ ಕೂಡಿದ ತೈಲವನ್ನು ಮೂಗಿನ ರಂಧ್ರದಲ್ಲಿ ಹಾಕುತ್ತಾರೆ. ಮತ್ತು ಆರು ಅಂಗುಲ ಉದ್ದವಿರುವ ಪ್ರಣಾಳಿಕೆಯಿಂದ ಚೂರ್ಣವನ್ನು ಕೂಡ ಮೂಗಿನ ರಂಧ್ರಕ್ಕೆ ಹಾಕುತ್ತಾರೆ. ಇದರಿಂದ ಶಿರೋಭಾಗದಲ್ಲಿರುವ ಎಲ್ಲಾ ವಿಕಾರಗಳು ಪರಿಹಾರವಾಗುತ್ತವೆ. ಹುಚ್ಚು ಮೊದಲಾದವುಗಳು ಸಂಪೂರ್ಣವಾಗಿ

ನಾಶವಾಗುತ್ತವೆ. ಇದನ್ನು ಚೂರ್ಣಚಿಕಿತ್ಸೆಯೆಂದು 'ಧ್ಮಾನಂ ವಿರೇಚಶ್ಚೂರ್ಣೋ' ಎಂಬಂತೆ ಧ್ಮಾನ ಎಂದೂ ಕರೆಯುತ್ತಾರೆ. ಪಂಚಕರ್ಮಚಿಕಿತ್ಸೆಯಲ್ಲಿ ನಸ್ಯಕರ್ಮ-ವೂ ಕೂಡ ಪ್ರಧಾನವಾಗಿದೆ. ಅಭ್ಯಂಗದ ಅನಂತರ ಇಂದೂ ಕೂಡ ಇದನ್ನು ಆಚರಿಸುತ್ತಾರೆ.

ಧೂಮಪಾನವಿಧಿ

ವಾಗ್ಭಟನು ಅಷ್ಟಾಂಗಹೃದಯದ ಇಪ್ಪತ್ತೊಂದನೆಯ ಅಧ್ಯಾಯದಲ್ಲಿ ಧೂಮ-ಪಾನದ ವಿಧಿಯನ್ನು ತಿಳಿಸಿರುತ್ತಾನೆ -

ಜತ್ರೂರ್ಧ್ವಕಫವಾತ್ರೋತ್ಥವಿಕಾರಾಣಾಂ ಅಜನ್ಮನೇ ।
ಉಚ್ಛೇದಾಯ ಚ ಜಾತಾನ್ ಪಿಬೇದ್ ಧೂಮಂ ಸದಾತ್ಮವಾನ್ ॥

ಭುಜದ ಮೇಲಿನ ಎಲ್ಲಾ ದೋಷಗಳಿಗೆ ಕಫ ಮತ್ತು ವಾತಗಳಿಂದ ಹುಟ್ಟಿದ ವಿಕಾರಗಳ ಪರಿಹಾರಕ್ಕೆ ಮತ್ತು ಯಾವುದೇ ವಿಕಾರವು ಹುಟ್ಟದಿರುವುದಕ್ಕೆ ಧೂಮ-ಪಾನವನ್ನು ವಿಧಿಸುತ್ತಾರೆ. ಧೂಮಪಾನದಲ್ಲಿ ಉಪಯೋಗಿಸುವ ದ್ರವ್ಯಗಳು ಹೀಗಿವೆ - ಅಗುರು, ಗುಗ್ಗುಲು, ಮುಸ್ತಾ, ಸೌಣೇಯ, ಶೈಲೇಯ, ನಲದ, ಉಶೀರ, ವಾಲಕ, ವಾರಂಗ, ಕೌಂತೀ, ಮಧುಕಾ, ಬಿಲ್ವಮಜ್ಜ, ಏಲವಾಲುಕ, ಶ್ರೀವೇಷ್ಟಕ, ಸರ್ಜರಸ, ಧ್ಯಾಮಕ, ಮದನ, ಪ್ಲವ, ಶಲ್ಲಕೀ, ಕುಂಕುಮ, ಮಾಷ, ಯವ, ಕಂದುರುಕ, ತಿಲಾ. ಶಲ್ಲಕೀ, ಲಾಕ್ಷಾ, ಪೃಥ್ವೀಕಾ, ಕಮಲ, ಉಲ್ಪಲಾ, ನ್ಯಗ್ರೋಧ, ಉದುಂಬರ, ಅಶ್ವತ್ಥ, ಪ್ಲಕ್ಷಾ, ಲೋದ್ರತ್ವಚ, ಸಿತಾ, ಯಷ್ಟೀಮಧು, ಸುವರ್ಣತ್ವಕ್, ಪದ್ಮಕಾ, ರಕ್ತಯಷ್ಟಿಕಾ, ಗಂಧ, ಅಕುಷ್ಟತಗರ. ಜ್ಯೋತಿಷ್ಮತೀ, ನಿಶಾ, ದಶಮೂಲ, ಮನೋಹ್ವಾ, ಅಲ, ಲಾಕ್ಷಾ, ಶ್ವೇತಾ. ಹೀಗೆ ಅನೇಕ ಔಷಧಿ ಪದಾರ್ಥಗಳಿಂದ ಕೂಡಿರುವ ಧೂಮಪಾನವನ್ನು ಮಾಡಿದರೆ ಉನ್ಮಾದವು ಪರಿಹಾರವಾಗುತ್ತದೆ.

ಅಂಜನಾವಿಧಿ

ವಾಗ್ಭಟನು ಇಪ್ಪತ್ಮೂರನೆಯ ಅಧ್ಯಾಯದಲ್ಲಿ ಅಂಜನಾವಿಧಿಯನ್ನು ತಿಳಿಸಿ-ದ್ದಾನೆ. ಎಲ್ಲಾ ಬಗೆಯ ಅಕ್ಷಿರೋಗಗಳಿಗೆ ಅಂಜನಾವಿಧಿಯನ್ನು ಮಾಡಬೇಕೆಂದು ತಿಳಿಸಿದ್ದಾನೆ. ಮತ್ತು ಶಿರಸ್ಸಿನ ಎಲ್ಲ ದೋಷಗಳೂ ಪರಿಹಾರವಾಗುತ್ತವೆ ಎಂದೂ ಕೂಡ ತಿಳಿಸಿರುತ್ತಾನೆ.

ಲೇಖನಂ ರೋಪಣಂ ದೃಷ್ಟಿಪ್ರಸಾದನಮಿತಿ ತ್ರಿಧಾ।
ಅಂಜನಂ, ಲೇಖನಂ ತತ್ರ ಕಷಾಯಾಮ್ಲಪಟೂಷಣೈಃ॥
ರೋಪಣಂ ತಿಕ್ತಕೈರ್ದ್ರವ್ಯೈಃ, ಸ್ವಾದುಶೀತೈಃ ಪ್ರಸಾದನಮ್॥

ಸಾಹಂ ಸರ್ವಾಧಮಾ ಲೋಕೇ ಸ್ತ್ರೀಣಾಂ ಭರತಸತ್ತಮ।
ತಥಾ ವಿನಿಕೃತಾऽಮಿತ್ರೈರ್ಯಾಹಮಿಚ್ಛಾಮಿ ಜೀವಿತುಮ್ ॥೭೬॥

ಭರತಕುಲೋತ್ತಂಸನೇ! ಲೋಕದಲ್ಲಿರುವ ಸರ್ವಸ್ತ್ರೀಯರಲ್ಲಿ ನಾನೇ ಅತ್ಯಂತ ನೀಚಳು. ಏಕೆಂದರೆ ಶತ್ರುಗಳಾದ ಧೃತರಾಷ್ಟ್ರಪುತ್ರರಿಂದ ಇಷ್ಟೊಂದು ಅವಮಾನಿತಳಾದರೂ ಕೂಡ ಲಜ್ಜೆಯಿಲ್ಲದೇ ಜೀವಿಸಬೇಕೆಂದು ಬಯಸುತ್ತಿದ್ದೇನಲ್ಲವೇ?

ಧೃತರಾಷ್ಟ್ರಸುತಾ ರಾಜನ್ ನಿತ್ಯಮುತ್ಪಥಗಾಮಿನಃ।
ತಾದೃಶಾನಾಂ ವಧೇ ದೋಷಂ ನಾಹಂ ಪಶ್ಯಾಮಿ ಕರ್ಹಿಚಿತ್ ॥೭೭॥
ನಿರ್ದೋಷಂ ವಧಮೇತೇಷಾಂ ಷಣ್ಣಾಮಪ್ಯಾತತಾಯಿನಾಮ್।

ರಾಜನೇ! ಆ ಧೃತರಾಷ್ಟ್ರನ ಮಕ್ಕಳು ಎಂದೆಂದೂ ದುರ್ಮಾರ್ಗದಲ್ಲಿಯೇ ನಡೆಯುತ್ತಾರೆ. ಅವರನ್ನು ನಾಶ ಮಾಡಿದ್ದಕ್ಕೆ ನಿನಗೆ ಲವಲೇಶವೂ ಕೂಡ ಪಾಪ ಬಂದದ್ದನ್ನು ನಾನು ಕಾಣಲಾರೆನು.

ಇಮಾಂಶ್ಚೋಶನಸಾ ಗೀತಾನ್ ಶ್ಲೋಕಾನ್ ಶೃಣು ನರಾಧಿಪ।
ಆತ್ಮಹಂತಾऽರ್ಥಹಂತಾ ಚ ಬಂಧುಹಂತಾ ವಿಷಪ್ರದಃ।
ಆಥರ್ವವೇದೀನ ಹಂತಾ ಚ ಯಶ್ಚ ಭಾರ್ಯಾಂ ಪರಾಮೃಶೇತ್ ॥೭೮॥

ನರಾಧಿಪನೇ! ಶುಕ್ರಾಚಾರ್ಯರು ಹೇಳಿದ ಅರ್ಥಪೂರ್ಣವಾದ ಈ ಶ್ಲೋಕವನ್ನು ಕೇಳು - ಆತ್ಮಹತ್ಯೆ, ಸಂಪತ್ತಿನ ಅಪಹರಣ, ಬಂಧುಗಳ ನಾಶ, ವಿಷವನ್ನು ನೀಡುವುದು, ಅಥರ್ವವೇದದಲ್ಲಿ ಹೇಳಿದ ಮಾಟ, ಮಂತ್ರಗಳೆಂಬ ಕೃತ್ಯಪ್ರಯೋಗದಿಂದ ಮತ್ತೊಬ್ಬನನ್ನು ಕೊಲ್ಲುವವನು. ಮತ್ತೊಬ್ಬರ ಹೆಂಡತಿಯನ್ನು ಸ್ಪರ್ಶ ಮಾಡುವುದು. ಈ ಆರು ವಿಧ ಜನರನ್ನು ಆತತಾಯೀ ಎಂಬುದಾಗಿ ಕರೆಯುತ್ತಾರೆ.

ಟಿಪ್ಪಣಿ - ಆಥರ್ವಣೇನ ಹಂತಾ ಚ ಇತ್ಯತ್ರ ಆಥರ್ವಣೇನ ಅಥರ್ವವೇದೋಕ್ತ-ಕೃತ್ಯಾ ಪ್ರಯೋಗಮಂತ್ರೇಣ।

ಆಥರ್ವಣೇನ ಎಂಬುದಕ್ಕೆ ಅಥರ್ವ ವೇದದಲ್ಲಿ ಹೇಳಿದ ಕೃತ್ಯಪ್ರಯೋಗಮಂತ್ರ-ದಿಂದ ಮತ್ತೊಬ್ಬನನ್ನು ಹಿಂಸಿಸಬಾರದು ಎಂದಭಿಪ್ರಾಯ.

ಬ್ರಹ್ಮಾ ನಿರ್ದೋಷಂ ವಧಮೇತೇಷಾಂ ಷಣ್ಣಾಮಪ್ಯಾತತಾಯಿನಾಮ್ ।
ಪ್ರೋವಾಚ ಭಗವಾನ್ ಭಾರ್ಗವಾಯ ಮಹಾತ್ಮನೇ ॥೭೯॥

ಇವರನ್ನು ಕೊಲ್ಲುವುದರಿಂದ ಸ್ವಲ್ಪವೂ ಕೂಡ ದೋಷವು ಬರುವುದಿಲ್ಲ. ಹಿಂದೊಮ್ಮೆ ಭಾರ್ಗವನಿಗೆ ಬ್ರಹ್ಮನೂ ಕೂಡ ಈ ನೀತಿವಾಕ್ಯಗಳನ್ನು ಹೇಳಿದ್ದನು.

ಬ್ರಹ್ಮಕ್ಷತ್ರವಿಶಾಂ ರಾಜನ್ ಸತ್ಪಥೇ ವರ್ತಿನಾಮಪಿ ।
ಪ್ರಸಹ್ಯಾಗಾರಮಾಗಮ್ಯ ಹಂತಾರಂ ಗರದಂ ತಥಾ ॥೮೦॥

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ , ಶೂದ್ರರೆಂಬ ನಾಲ್ಕು ವರ್ಣದವರು ಸನ್ಮಾರ್ಗದಲ್ಲಿ ನಡೆಯುತ್ತಿರುವಾಗ ಅವರ ಮನೆಗೆ ನುಗ್ಗಿ, ಅವರನ್ನು ಕೊಲ್ಲುವುದು, ಅವರಿಗೆ ವಿಷವುಣಿಸುವಿಕೆ ಮೊದಲಾದವುಗಳನ್ನು ಮಾಡುವವನನ್ನು ಕೊಲ್ಲಬೇಕು.

ಅಭಕ್ಷ್ಯಾಪೇಯದಾತಾರಮಗ್ನಿದಂ ಚ ನಿಶಾತಯೇತ್ ।
ಮಾರ್ಗ ಏಷ ಮಹೀಪಾನಾಂ ಗೋಬ್ರಾಹ್ಮಣವಧೇಷು ಚ ॥೮೧॥

ತಿನ್ನಬಾರದ ವಸ್ತುಗಳನ್ನು ಯಾರು ತಿನ್ನುತ್ತಾನೋ, ಕುಡಿಯಬಾರದ್ದನ್ನು ಯಾರು ಕುಡಿಯುತ್ತಾನೋ, ಯಾರು ಮನೆಗೆ ಬೆಂಕಿ ಹಚ್ಚುತ್ತಾನೋ, ಗೋ-ಬ್ರಾಹ್ಮಣರ ವಧೆಯಲ್ಲಿ ಆಸಕ್ತನಾಗಿರುತ್ತಾನೋ, ಅವನನ್ನು ಎದುರಿಸಲೇ ಬೇಕು.

ಕೇಶಗ್ರಹೇ ಚ ನಾರೀಣಾಮಪಿ ಯುದ್ಧ್ಯೇತ್ ಪಿತಾಮಹಮ್ ।
ಬ್ರಹ್ಮಾಣಂ ದೇವದೇವೇಶಂ ಕಿಂ ಪುನಃ ಪಾಪಕಾರಿಣಮ್ ॥೮೨॥

ಹೆಣ್ಣಕ್ಕಳ ತಲೆಕೂದಲಿಗೆ ಕೈಹಾಕುವವನನ್ನೂ ಕೂಡ ಯುದ್ಧಮಾಡಿ ಕೊಲ್ಲ-

ಬೇಕು. ಹೀಗಿರುವಾಗ ಎಲ್ಲಾ ಬಗೆಯ ಪಾಪಗಳನ್ನು ಮಾಡಿದ ಧೃತರಾಷ್ಟ್ರರ ಮಕ್ಕಳ ಬಗ್ಗೆ ಪ್ರತ್ಯೇಕವಾಗಿ ಹೇಳುವುದೇನು ?

ಗೋಬ್ರಾಹ್ಮಣಾರ್ಥೇ ವ್ಯಸನೇ ಚ ರಾಜ್ಞಾಂ
ರಾಷ್ಟ್ರೋಪಮರ್ದೇ ಸ್ವಶರೀರಹೇತೋಃ।
ಸ್ತ್ರೀಣಾಂ ಚ ವಿಕ್ರುಷ್ಟರುತಾನಿ ಶ್ರುತ್ವಾ
ವಿಪ್ರೋಽಪಿ ಯುದ್ಧ್ಯೇತ ಮಹಾಪ್ರಭಾವಃ ॥೮೩॥

ಗೋಬ್ರಾಹ್ಮಣರಿಗೆ ಸಂಕಟಸ್ಥಿತಿ ಪ್ರಾಪ್ತವಾದಾಗ ರಾಜರುಗಳು ರಾಷ್ಟ್ರಕ್ಕೆ ದ್ರೋಹವೆಸಗುವಾಗ ತನ್ನ ಶರೀರವನ್ನು ಕಾಪಾಡಿಕೊಳ್ಳುವ ಸಂದರ್ಭ ಒದಗಿದಾಗ, ಸ್ತ್ರೀಯರ ಆಕ್ರಂದನವನ್ನು ಕೇಳಿದಾಗ ಬ್ರಾಹ್ಮಣನೂ ಕೂಡ ಯುದ್ಧಕ್ಕೆ ಸಿದ್ಧನಾಗಬೇಕು.

ವಿವರಣೆ - ಕ್ಷತ್ರಿಯರು ಇಲ್ಲದಿದ್ದಾಗ ಬೇರೆ ಯಾರೂ ಸಹ ಹೋರಾಟ ಮಾಡದೇ ಇದ್ದಾಗ, ಬ್ರಾಹ್ಮಣನು ಧರ್ಮದ ಉದ್ಧಾರಕ್ಕಾಗಿ ಯುದ್ಧ ಮಾಡಲು ಸಿದ್ಧನಾಗಬೇಕಾಗುತ್ತದೆ. ಬ್ರಾಹ್ಮಣನಿಗೆ ಹಿಂಸೆ ಮಾಡುವುದು ಅಧರ್ಮವಾದರೂ ಕೂಡ ಧರ್ಮದ ಉನ್ನತಿಗಾಗಿ ಯುದ್ಧ ಮಾಡುವುದು ಅನಿವಾರ್ಯವೆಂದು ಇಲ್ಲಿ ತಿಳಿಸುತ್ತಿದ್ದಾರೆ. ಬ್ರಾಹ್ಮಣನಿಗೆ ಸಾಮರ್ಥ್ಯವು ಇದ್ದಾಗ ಅಧರ್ಮದ ವಿರುದ್ಧ ಯುದ್ಧಮಾಡಲೇ ಬೇಕು. ಸಾಮರ್ಥ್ಯವು ಇಲ್ಲದಿದ್ದಾಗ ಮಾತಿನಿಂದಲಾದರೂ ಪ್ರತಿಭಟನೆಯನ್ನು ಮಾಡಬೇಕು. ಇದಕ್ಕೂ ಸಾಮರ್ಥ್ಯವಿಲ್ಲದಿದ್ದಾಗ ಆ ಪರಿಸರವನ್ನೇ ಬಿಟ್ಟು, ಮತ್ತೊಂದು ಕಡೆ ತೆರಳಬೇಕು. ಈ ಮೂರನ್ನು ಬಿಟ್ಟು, ಅಧರ್ಮ ನಡೆಯುತ್ತಿದ್ದರೂ ಸುಮ್ಮನೆ ಕುಳಿತುಕೊಳ್ಳಬಾರದು. ಅದು ಮಹಾಪರಾಧವಾಗುತ್ತದೆ. ಈ ಶ್ಲೋಕವು ಜೀವನದ ಪಾಠವನ್ನು ತಿಳಿಸುವ ಉತ್ತಮ ಸುಭಾಷಿತವಾಗಿದೆ.

ಧರ್ಮಾದ್ ವಿಚಲಿತಂ ವಿಪ್ರಂ ನಿಹನ್ಯಾದಾತತಾಯಿನಮ್ ।
ತಸ್ಯಾನ್ಯತ್ರ ವಧಂ ವಿದ್ವಾನ್ ಮನಸಾಽಪಿ ನ ಚಿಂತಯೇತ್ ॥೮೪॥

ಯಾವ ಬ್ರಾಹ್ಮಣನು ಧರ್ಮವನ್ನು ಬಿಟ್ಟು, ಆತತಾಯಿ ಎಂದು ಕರೆಸಿಕೊಳ್ಳು-

ತ್ತಾನೋ, ಅವನನ್ನು ಕ್ಷತ್ರಿಯನಾದವನು ಕೊಲ್ಲಬೇಕು. ಆದರೆ ಯಾವುದೇ ಪಾಪವನ್ನು ಮಾಡದ, ಬ್ರಾಹ್ಮಣನ ವಧೆಯ ವಿಷಯದಲ್ಲಿ ಮನಸ್ಸನ್ನೂ ಕೂಡ ಮಾಡಬಾರದು. ಮನಸ್ಸಿನಿಂದಲೂ ಕೂಡ ಬ್ರಾಹ್ಮಣವಧೆಯನ್ನು ಚಿಂತಿಸಬಾರದು.

ಗೋಬ್ರಾಹ್ಮಣವಧೇ ವೃತ್ತಂ ಮಂತ್ರತ್ರಾಣಾರ್ಥಮೇವ ಚ।
ನಿಹನ್ಯಾತ್ ಕ್ಷತ್ರಿಯೋ ವಿಪ್ರಂ ಸ್ವಕುಟುಂಬಸ್ಯ ಚಾಪ್ತಯೇ ॥೮೫॥

ಯಾರು ಗೋಬ್ರಾಹ್ಮಣರ ವಧೆಯನ್ನು ಮಾಡಲು ಹೊರಟಿರುತ್ತಾರೋ, ಅಂಥವನನ್ನು ರಾಜನು ಕೊಲ್ಲಬೇಕು. ಬ್ರಾಹ್ಮಣನಾದರೂ ಕೂಡ ಅವನನ್ನು ಬಿಡಬಾರದು. ಆದರೆ ತನ್ನ ಕುಟುಂಬವನ್ನು ರಕ್ಷಣೆ ಮಾಡಿಕೊಳ್ಳುವುದಕ್ಕಾಗಿ ಕ್ಷತ್ರಿಯನು ದುಷ್ಟಬ್ರಾಹ್ಮಣನನ್ನು ಕೊಲ್ಲಬಹುದು.

ತಸ್ಕರೇಣ ನೃಶಂಸೇನ ಧರ್ಮಾತ್ ಪ್ರಚಲಿತೇನ ಚ।
ಕ್ಷತ್ರಬಂಧುಃ ಪರಂ ಶಕ್ತ್ಯಾ ಯುದ್ಧ್ಯೇದ್ ವಿಪ್ರೇಣ ಸಂಯುಗೇ ॥೮೬॥

ಬ್ರಾಹ್ಮಣನು ಧರ್ಮಚ್ಯುತನಾದಾಗ, ಚೋರನಾದಾಗ, ಕ್ರೂರನಾದಾಗ ಕ್ಷತ್ರಿಯನು ತನ್ನಲ್ಲಿರುವ ಭುಜಪರಾಕ್ರಮದಿಂದ ಆ ಬ್ರಾಹ್ಮಣನನ್ನು ಯುದ್ಧದಲ್ಲಿ ಕೊಲ್ಲಬಹುದು.

ಆತತಾಯಿನಮಾಯಾಂತಮಪಿ ವೇದಾಂತಪಾರಗಮ್।
ಜಿಘಾಂಸಂತಂ ಜಿಘಾಂಸೀಯಾನ್ನ ತೇನ ಭ್ರೂಣಹಾ ಭವೇತ್ ॥೮೭॥

ಬ್ರಾಹ್ಮಣನಾಗಿದ್ದರೂ ಆತತಾಯಿ ಆಗಿದ್ದರೆ ತನ್ನ ಮೇಲೆ ಯುದ್ಧ ಮಾಡಲು ಬಂದಾಗ ಅವನನ್ನು ನಿಸ್ಸಂಶಯವಾಗಿ ಕೊಲ್ಲಬಹುದು. ವೇದಜ್ಞಾನಿಯಾದ ಬ್ರಾಹ್ಮಣನನ್ನು ಕೊಂದಾಗ ಉಂಟಾಗುವ ಭ್ರೂಣಹತ್ಯಾ ದೋಷವು ಬರುವುದಿಲ್ಲ.

ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಃ ಶೂದ್ರೋ ವಾऽಪ್ಯಂತ್ಯಜೋऽಪಿ ವಾ।
ನ ಹನ್ಯಾದ್ ಬ್ರಾಹ್ಮಣಂ ಶಾಂತಂ ತೃಣೇನಾಪಿ ಕದಾಚನ ॥೮೮॥

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ , ಶೂದ್ರ ಅಥವಾ ಚಂಡಾಲ ಇವರಲ್ಲಿ ಯಾರೊಬ್ಬನೂ ಕೂಡ ಎಂದೂ ಕೂಡ ಒಂದು ಹುಲ್ಲುಕಡ್ಡಿಯಿಂದಲೂ ಶಾಂತನಾದ ಬ್ರಾಹ್ಮಣನನ್ನು ಹಿಂಸಿಸಬಾರದು.

ಬ್ರಾಹ್ಮಣಾಯಾವಗುರ್ಯಾದ್ಯಃ ಸ್ಪೃಷ್ಟ್ವಾವಗುರುತರಂ ಮಹತ್ ।
ವರ್ಷಾಣಾಂ ತ್ರಿಶತಂ ಪಾಪಃ ಪ್ರತಿಷ್ಠಾಂ ನಾಧಿಗಚ್ಛತಿ ॥೮೯॥

ಸಾಧುಸ್ವಭಾವದ ಬ್ರಾಹ್ಮಣನಿಗೆ ದೊಡ್ಡದಾದ ದೊಣ್ಣೆಯಿಂದ ಹೊಡೆಯಲು ಕೈಎತ್ತಿದರೂ ಸಾಕು. ಆ ಪಾಪದಿಂದ ಮನುಷ್ಯನು ಮುನ್ನೂರು ವರ್ಷಗಳ ಕಾಲ ನೆಲೆ ಇಲ್ಲದೆ ಎಲ್ಲೆಡೆಯೂ ಅಲೆಯುವಂತಾಗುತ್ತದೆ.

ಸಹಸ್ರಾಣಿ ಚ ವರ್ಷಾಣಿ ನಿಹತ್ಯ ನರಕೇ ಪತೇತ್ ।
ತಸ್ಮಾನ್ನೈವಾವಗುರ್ಯಾದ್ಧಿ ನೈವ ಶಸ್ತ್ರಂ ನಿಪಾತಯೇತ್ ॥೯೦॥

ಯಾರು ಬ್ರಾಹ್ಮಣನನ್ನು ಹೊಡದೇ ಬಿಡುತ್ತಾನೋ, ಅವನು ಸಾವಿರ ವರ್ಷಗಳ ತನಕ ನರಕದಲ್ಲಿ ಬೀಳುತ್ತಾನೆ. ಆದ್ದರಿಂದ ಬ್ರಾಹ್ಮಣನ ಮೇಲೆ ಕೈ ಎತ್ತುವುದನ್ನು, ಆಯುಧದಿಂದ ಹೊಡೆಯುವುದನ್ನು ಎಂದೂ ಸಹ ಮಾಡಬಾರದು. ಇವೆರಡೂ ಕೂಡ ಮಹಾಪಾತಕಗಳೇ ಆಗಿವೆ.

ಶೋಣಿತಂ ಯಾವತಃ ಪಾಂಸೂನ್ ಗೃಹ್ಣಾತೀತಿ ಹಿ ಧಾರಣಾಮ್ ।
ತಾವತೀಃ ಸ ಸಮಾಃ ಪಾಪೋ ನರಕೇ ಪರಿವರ್ತತೇ ॥೯೧॥

ಒಂದು ವೇಳೆ ಬ್ರಾಹ್ಮಣನ ದೇಹಕ್ಕೆ ಶಸ್ತ್ರಾಘಾತ ಮಾಡಿದರೆ ಅದರಿಂದ ರಕ್ತಕಣಗಳು ಭೂಮಿಯಲ್ಲಿ ಬಿದ್ದಾಗ ಎಷ್ಟು ಧೂಳಿನ ಕಣಗಳಿಗೆ, ಆ ರಕ್ತವು ಅಂಟಿಕೊಳ್ಳುತ್ತದೋ, ಅಷ್ಟು ವರ್ಷಗಳ ಕಾಲ ಆ ಪಾಪಿಯು ಎಲ್ಲಾ ನರಕಗಳಲ್ಲಿ ಸುತ್ತಾಡುತ್ತಾನೆ.

ಟಿಪ್ಪಣಿ – ಗೃಹ್ಣಾತೀಹ ಹಿ ಧಾರಣಾನ್ ಇತ್ಯತ್ರ ಅವಗುರೇತ್ ನಿಂದಾ ಕುರ್ಯಾತ್।
'ಗುರೀ ಉದ್ಯಮನೇ' ಇತಿ ಧಾತುಃ । ಧಾರಣಾನ್ ಧರಣ್ಯಾಂ ವಿದ್ಯಮಾನಾನ್ । –
'ಗೃಹ್ಣಾತೀಹ ಹಿ ಧಾರಣಾನ್' ನಿಂದೆಯನ್ನು ಮಾಡಿದರೂ ಸಾಕು ಎಂದಭಿಪ್ರಾಯವನ್ನು ತಿಳಿಯಬೇಕು. 'ಧಾರಣಾನ್' ಎಂದರೆ ಭೂಮಿಯಲ್ಲಿ ಬಿದ್ದಿರುವ ಎಂದರ್ಥ.

ತ್ವಗಸ್ಥಿಭೇದಂ ವಿಪ್ರಸ್ಯ ಯಃ ಕುರ್ಯಾತ್ ಕಾರಯೇವ ವಾ ।
ಬ್ರಹ್ಮಹಾ ಸ ತು ವಿಜ್ಞೇಯಃ ಪ್ರಾಯಶ್ಚಿತ್ತೀ ನರಾಧಮಃ ॥೯೨॥

ಬ್ರಾಹ್ಮಣನ ಚರ್ಮವನ್ನು, ಮೂಳೆಯನ್ನು ಯಾರು ಗಾಯ ಪಡಿಸುತ್ತಾನೋ, ಅಥವಾ ಹಿಂಸೆ ನೀಡಲು ಪ್ರಚೋದನೆ ಮಾಡುತ್ತಾನೋ, ಅಂಥವನು ಬ್ರಹ್ಮಹತ್ಯೆಗೆ ಗುರಿಯಾಗುತ್ತಾನೆ. ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾದ ನರಾಧಮ ಎಂದು ಕರೆಸಿಕೊಳ್ಳುತ್ತಾನೆ.

ಶ್ರೋತ್ರಿಯಂ ಬ್ರಾಹ್ಮಣಂ ಹತ್ವಾ ತಥಾऽऽತ್ರೇಯೀಂ ಚ ಬ್ರಾಹ್ಮಣೀಮ್ ।
ಚತುರ್ವಿಂಶತಿವರ್ಷಾಣಿ ಚರೇದ್ ಬ್ರಹ್ಮಹಣೋ ವ್ರತಮ್ ॥೯೩॥

ದ್ವಿಗುಣಾ ಬ್ರಹ್ಮಹತ್ಯೇಯಂ ಸರ್ವೈಃ ಪ್ರೋಕ್ತಾ ಮಹರ್ಷಿಭಿಃ ।
ಪ್ರಾಯಶ್ಚಿತ್ತಮಕುರ್ವಾಣಂ ಕೃತಾಂಕಂ ವಿಪ್ರವಾಸಯೇತ್ ॥೯೪॥

ಯಾರು ಶ್ರೋತ್ರಿಯ ಬ್ರಾಹ್ಮಣನನ್ನು ಕೊಲ್ಲುತ್ತಾನೋ, ಮತ್ತು ಉತ್ತಮ ಬ್ರಾಹ್ಮಣಸ್ತ್ರೀಯನ್ನು ಕೊಲ್ಲುತ್ತಾನೋ, ಅಂಥವನಿಗೆ ಎರಡು ಪಟ್ಟು ಬ್ರಹ್ಮಹತ್ಯಾ ಪಾತಕವು ಬರುತ್ತದೆ. ಇಪ್ಪತ್ತ್ನಾಕು ವರ್ಷಗಳ ಕಾಲ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳ-ಬೇಕೆಂಬ ವ್ರತವನ್ನು ಋಷಿಗಳು ತಿಳಿಸಿದ್ದಾರೆ. ಪಾಪ ಮಾಡಿಯೂ ಕೂಡ ಯಾರು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವುದಿಲ್ಲವೋ, ಅಂಥವನ ದೇಹದಲ್ಲಿ ಏನಾದರೂ ಒಂದು ಗುರುತನ್ನು ಮಾಡಿ, ಅವನ ಸಂಪರ್ಕವನ್ನು ಯಾರೂ ಮಾಡದಂತೆ ಎಲ್ಲರಿಗೂ ತಿಳಿಸಿ, ದೇಶವನ್ನು ಬಿಟ್ಟು, ಅವನನ್ನು ಕಳುಹಿಸಬೇಕು. ಅವನ ಸಂಪರ್ಕ-ವನ್ನು ಯಾರೂ ಕೂಡ ಮಾಡಬಾರದು.

ಟಿಪ್ಪಣಿ - ಕೃತಾಂಕಂ ವಿಪ್ರವಾಸಯೇದ್ ಇತ್ಯತ್ರ ಕೃತಾಂಕಂ ಕೃತಶ್ವಾನಮುದ್ರಾ-ದ್ಯಂಕಮ್ । 'ಕೃತಾಂಕಂ ವಿಪ್ರವಾಸಯೇದ್' ಎಂಬಲ್ಲಿ 'ಕೃತಾಂಕಂ' ಎಂದರೆ ನಾಯಿಯ ಚಿಹ್ನೆಯನ್ನು ಬರೆಯಬೇಕು ಎಂದಭಿಪ್ರಾಯ.

ಬ್ರಾಹ್ಮಣಂ ಕ್ಷತ್ರಿಯಂ ವೈಶ್ಯಂ ಶೂದ್ರಂ ವಾ ಘಾತಯೇನ್ನೃಪಃ ।
ಬ್ರಹ್ಮಘ್ನಂ ತಸ್ಕರಂ ಚೈವ ಮಾಭೂದೇವಂ ಚರಿಷ್ಯತಿ ॥೯೫॥

ಬ್ರಾಹ್ಮಣನನ್ನು ಕೊಂದ ವ್ಯಕ್ತಿಯು ಬ್ರಾಹ್ಮಣನೇ ಆಗಿರಲಿ, ಕ್ಷತ್ರಿಯನೇ ಆಗಿರಲಿ, ವೈಶ್ಯನೇ ಆಗಿರಲಿ, ಶೂದ್ರನೇ ಆಗಿರಲಿ ರಾಜನಾದವನು ಅವನನ್ನು ದಂಡಿಸಲೇ ಬೇಕು. ಮುಂದೆ ಎಂದೂ ಕೂಡ ಇಂಥ ಅಪರಾಧವನ್ನು ಮಾಡಬಾರದು. ಇದನ್ನು ನೋಡಿ, ಮತ್ತೊಬ್ಬರೂ ಕೂಡ ಇಂಥ ಅಪರಾಧವನ್ನು ಮಾಡಬಾರದೆಂಬ ಎಚ್ಚರಿಕೆಯನ್ನು ನೀಡಬೇಕು.

ಛಿತ್ತ್ವಾ ಹಸ್ತೌ ಚ ಪಾದೌ ಚ ನಾಸಿಕೋಷ್ಠೌ ಚ ಭೂಪತಿಃ।
ಬ್ರಹ್ಮಘ್ನಂ ಚೋತ್ತಮಂ ಪಾಪಂ ನೇತ್ಯೋದ್ಧಾರೇಣ ಯೋಜಯೇತ್ ॥೯೬

ಬ್ರಾಹ್ಮಣಘಾತುಕನ ಕೈಗಳನ್ನು ಕತ್ತರಿಸಬೇಕು. ಅಥವಾ ಕಾಲುಗಳನ್ನು ಕತ್ತರಿಸಬೇಕು. ತುಟಿ, ಮೂಗು ಇವುಗಳನ್ನಾದರೂ ತುಂಡರಿಸಬೇಕು. ಇಷ್ಟು ಮಾಡಿದರೂ ಪುನಃ ಬ್ರಹ್ಮಹತ್ಯೆಯನ್ನು ಯಾರು ಮಾಡುತ್ತಾನೋ, ಅಂಥವನ ಕಣ್ಣುಗಳನ್ನೇ ಕಿತ್ತುಹಾಕಬೇಕು.

ಶೂದ್ರಸ್ಯೈಷ ಸ್ಮೃತೋ ದಂಡಸ್ತದ್ವದ್ ರಾಜನ್ಯವೈಶ್ಯಯೋಃ।
ಪ್ರಾಯಶ್ಚಿತ್ತಮಕುರ್ವಾಣಂ ಬ್ರಾಹ್ಮಣಂ ತು ಪ್ರವಾಸಯೇತ್ ॥೯೭॥

ಶೂದ್ರನು ಬ್ರಾಹ್ಮಣಘಾತುಕನಾಗಿದ್ದರೆ ಈ ಬಗೆಯ ಶಿಕ್ಷೆಯನ್ನು ನೀಡಬೇಕು. ವೈಶ್ಯ ಹಾಗೂ ಕ್ಷತ್ರಿಯರಿಗೂ ಕೂಡ ಶೂದ್ರನ ಸಮಾನವಾದ ಶಿಕ್ಷೆಯನ್ನೇ ನೀಡಬೇಕು. ಆದರೆ ಬ್ರಾಹ್ಮಣನೇ ಬ್ರಾಹ್ಮಣಘಾತುಕನಾಗಿದ್ದರೆ ಅವನಿಂದ ಪ್ರಾಯಶ್ಚಿತ್ತವನ್ನು ಮಾಡಿಸಬೇಕು. ಅವನು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದಿದ್ದರೆ ಊರನ್ನು ಬಿಟ್ಟು ಕಳುಹಿಸಬೇಕು.

ಕ್ಷತ್ರಿಯಂ ವೈಶ್ಯಶೂದ್ರೌ ಚ ಶಸ್ತ್ರೇಣೈವ ಚ ಘಾತಯೇತ್।
ಬ್ರಹ್ಮಘ್ನಾನ್ ಬ್ರಾಹ್ಮಣಾನ್ ರಾಜಾ ಕೃತಾಂಕಾನ್ ವಿಪ್ರವಾಸಯೇತ್ ॥೯೮

ಬ್ರಾಹ್ಮಣನನ್ನು ಕೊಲ್ಲುವ ಕ್ಷತ್ರಿಯ, ವೈಶ್ಯ ಹಾಗೂ ಶೂದ್ರರನ್ನು ಶಸ್ತ್ರಗಳಿಂದಲೇ ಕೊಲ್ಲಿಸಬೇಕು. ಬ್ರಹ್ಮಹತ್ಯಾ ಮಾಡಿದ ಬ್ರಾಹ್ಮಣನಿಗೆ ರಾಜನಾದವನು ಯಾವುದಾದರೂ ಒಂದು ಚಿಹ್ನೆಯನ್ನು ದೇಹದಲ್ಲಿ ಮಾಡಿ ಹೊರಗಟ್ಟಬೇಕು.

ವಿಕಲೇಂದ್ರಿಯಾಂಸ್ತ್ರಿವರ್ಣಾಂಶ್ಚ ಚಂಡಾಲೈಃ ಸಹ ವಾಸಯೇತ್ ।
ತೈಶ್ಚ ಯಃ ಸಂಪಿಬೇತ್ ಕಶ್ಚಿತ್ ಸ ಪಿಬನ್ ಬ್ರಹ್ಮಹಾ ಭವೇತ್ ॥೯೯॥

ಯಾವ ತ್ರಿವರ್ಣದವರು ಹೀಗೆ ಬ್ರಹ್ಮಹತ್ಯೆಯ ಪಾಪದಿಂದ ವಿಕಲೇಂದ್ರಿಯರಾಗಿರುತ್ತಾರೋ, ಅಂಥವರನ್ನು ಪುನಃ ತಮ್ಮ ಸಂಪರ್ಕದಲ್ಲಿಟ್ಟುಕೊಳ್ಳಬಾರದು. ಚಂಡಾಲರ ಗುಂಪಿನಲ್ಲಿ ಸೇರಿಸಬೇಕು. ಅಂಥವನ ಜೊತೆ ಯಾರು ಸಹಭೋಜನವನ್ನು, ಅಥವಾ ಸಹಪಾನವನ್ನು ಮಾಡುತ್ತಾನೋ, ಅಂಥವನೂ ಕೂಡ ಬ್ರಹ್ಮಹತ್ಯಾಪಾಪವನ್ನು ಹೊಂದುತ್ತಾನೆ.

ಪ್ರೇತಾನಾಂ ನಚ ದೇಯಾನಿ ಪಿಂಡದಾನಾನಿ ಕೇನಚಿತ್ ॥೧೦೦॥

ಅಂಥ ಬ್ರಹ್ಮಹತ್ಯೆ ಮಾಡಿದವನು ಮರಣವನ್ನು ಹೊಂದಿದ ಮೇಲೆ ಅವನಿಗೆ ಪಿಂಡದಾನವನ್ನು ಮಾಡಬಾರದು. ಅವನಿಗೋಸ್ಕರ ಯಾವುದೇ ದಾನ ಮೊದಲಾದವುಗಳನ್ನೂ ಕೂಡ ಮಾಡಬಾರದು.

ವಿವರಣೆ - ಮಹಾಪಾತಕಗಳನ್ನು ಮಾಡಿ ಯಾರು ಮೃತನಾಗಿರುತ್ತಾನೋ, ಅವನಿಗೆ ಪಿಂಡದಾನಾದಿಗಳನ್ನೂ ಕೂಡ ಮಾಡಬಾರದು ಎಂಬುದಾಗಿ ಶಾಂತಿಪರ್ವದ ಈ ಶ್ಲೋಕವು ಅತ್ಯಂತಸ್ಪಷ್ಟವಾಗಿ ಹೇಳುತ್ತಿದೆ. ಇದರಿಂದ ಜೀವನದಲ್ಲಿ ಬ್ರಹ್ಮಹತ್ಯೆ ಮೊದಲಾದ ಮಹಾಪಾತಕಗಳನ್ನು ಸರ್ವಥಾ ಮಾಡಬಾರದೆಂದು ಎಚ್ಚೆತ್ತುಕೊಳ್ಳಬೇಕು.

ಒಂದು ವಿಮರ್ಶೆ -

ಅವೈಷ್ಣವರಿಗೆ ಮತ್ತು ಪಾತಕಿಗಳಿಗೆ ಶ್ರಾದ್ಧಾದಿಗಳನ್ನು ಮಾಡಬಹುದೇ ?

ಮಗನಾದವನು ತಂದೆಯ ಶ್ರಾದ್ಧವನ್ನು ಮಾಡಲೇಬೇಕು. ಕರ್ತವ್ಯವಾಗಿರುವುದರಿಂದ ಶ್ರಾದ್ಧವನ್ನು ಬಿಡುವಂತಿಲ್ಲ. ತಂದೆಯಾದವನು ಒಂದು ವೇಳೆ ಮಹಾಪಾತಕಿಯಾಗಿದ್ದರೆ ಬ್ರಹ್ಮಹತ್ಯಾ ಮೊದಲಾದ ಪಾಪಗಳನ್ನು ಮಾಡಿದ್ದಲ್ಲಿಯೂ ಕೂಡ ಮಗನಾದವನು ಶ್ರಾದ್ಧವನ್ನು ಬಿಡುವಂತಿಲ್ಲ. ಪಿತೃದೇವತೆಗಳಿಗೆ ಆ ಪಿಂಡವನ್ನು ಸಮರ್ಪಣೆ ಮಾಡಿ, ನಮ್ಮ ತಂದೆಯು ಮಾಡಿದ ಅಪರಾಧವನ್ನು ಮನ್ನಿಸಿ, ಅವರಿಗೆ ಸದ್ಗತಿಯನ್ನು ನೀಡು ಎಂಬುದಾಗಿ, ಉತ್ತಮಜನ್ಮವು

ಪ್ರಾಪ್ತವಾಗಲೀ ಎಂಬುದಾಗಿ ಪ್ರಾರ್ಥಿಸಲೇ ಬೇಕು. ಬ್ರಹ್ಮರಾಕ್ಷಸ ಮೊದಲಾದ ದೇಹಗಳು ಬಂದಿದ್ದಲ್ಲಿ ಅದರ ಪರಿಹಾರಕ್ಕೂ ಕೂಡ ಪ್ರಯತ್ನವನ್ನು ಪಡಲೇ ಬೇಕು. ಮಗನಾಗಿ ಈ ಕರ್ತವ್ಯವನ್ನು ಆಚರಿಸದೇ ಇರುವಂತಿಲ್ಲ. ಹಾಗೇನಾದರೂ ನಮ್ಮ ತಂದೆಯು ಬ್ರಹ್ಮಹತ್ಯೆಯನ್ನು ಮಾಡಿದ್ದಾನೆಂದು ಶ್ರಾದ್ಧಾದಿಗಳನ್ನು ಮಾಡದೇ ಇದ್ದರೆ ಅವನ ಸದ್ಗತಿಗೆ ಪ್ರಯತ್ನವನ್ನು ಪಡದೇ ಇದ್ದರೆ, ಕರ್ತವ್ಯಭ್ರಷ್ಟನಾಗುತ್ತಾನೆ. ಧರ್ಮಶಾಸ್ತ್ರಗಳ ಆಧಾರದಿಂದ ಈ ಎಲ್ಲಾ ವಿಚಾರಗಳು ಸ್ಪಷ್ಟವಾಗುತ್ತವೆ.

ಹಾಗಾದರೆ ಮಹಾಭಾರತದ ಈ ಶ್ಲೋಕದಲ್ಲಿ ಬ್ರಹ್ಮಹತ್ಯೆ ಮಾಡಿದ ಬ್ರಾಹ್ಮಣಾದಿಗಳಿಗೆ ಶ್ರಾದ್ಧಾದಿಗಳನ್ನು ಕೂಡ ಮಾಡಬಾರದು ಎಂದು ಹೇಳಿದ್ದಾರಲ್ಲವೇ? ಎಂಬ ಪ್ರಶ್ನೆಯು ಬರುತ್ತದೆ. ಕರ್ತೃ ಬಿಟ್ಟು ಉಳಿದ ಸಂಬಂಧಿಕರು ಅಥವಾ ಅಭಿಮಾನದಿಂದ ಮಿತ್ರರೇ ಮೊದಲಾದವರು ಬ್ರಹ್ಮಹತ್ಯೆಯನ್ನು ಮಾಡಿದವನಿಗೆ ಪಿಂಡದಾನಾದಿಗಳನ್ನು ಮಾಡಬಾರದು ಎಂದಭಿಪ್ರಾಯ. ಮಗನು ಪಿಂಡದಾನಾದಿಗಳನ್ನು ಮಾಡಲೇ ಬೇಕು. ಆದರೆ ಉಳಿದವರು ಮಾಡಬಾರದು ಎಂಬುದಾಗಿ ತಿಳಿದುಕೊಳ್ಳಬೇಕು. ರಾವಣನು ಸತ್ತ ಮೇಲೆ ವಿಭೀಷಣನು ಪಿಂಡದಾನಾದಿಗಳಲ್ಲಿ ಪ್ರವೃತ್ತಿಯನ್ನು ಮಾಡದೇ ಇದ್ದಾಗ ಶ್ರೀರಾಮಚಂದ್ರನೇ ಸ್ವತಃ ನಿಂತು ಎಲ್ಲಾ ಕಾರ್ಯಗಳನ್ನು ಮಾಡಿಸುತ್ತಾನೆ. 'ಮರಣಾಂತಾನಿ ವೈರಾಣಿ' ಎಂಬುದಾಗಿ ಬೋಧಿಸುತ್ತಾನೆ. ಅಲ್ಲಿ ರಾವಣನ ಮಕ್ಕಳು ಯಾರೂ ಇಲ್ಲದೇ ಇರುವುದರಿಂದ ತಮ್ಮನೇ ಆ ಸ್ಥಾನದಲ್ಲಿ ನಿಂತು ಅಂತ್ಯಸಂಸ್ಕಾರವನ್ನು ಮಾಡುವ ಪ್ರಸಂಗವು ಪ್ರಾಪ್ತವಾಗಿತ್ತು. ಧೃತರಾಷ್ಟ್ರನು ದುರ್ಯೋಧನಾದಿಗಳಿಗೆ ಪಿಂಡದಾನಾ-ದಿಗಳನ್ನು ಮಾಡುತ್ತೇನೆ ಎಂಬುದಾಗಿ ಹೇಳಿದಾಗ ಭೀಮಸೇನದೇವರು ಅವೈಷ್ಣವರಿಗೆ ಶ್ರಾದ್ಧಾದಿಗಳನ್ನು ಮಾಡುವ ಅವಶ್ಯಕತೆಯಿಲ್ಲ ಎಂಬುದಾಗಿ ಹೇಳಿ ಯಾವುದೇ ಸಹಕಾರವನ್ನು ನೀಡುವುದಿಲ್ಲ. ಭೀಮಸೇನದೇವರ ಅಭಿಪ್ರಾಯ-ವೇನೆಂದರೆ ತಂದೆಯಾದ ನೀನು ಅವೈಷ್ಣವರಿಗೆ ಪಿಂಡದಾನಾದಿಗಳನ್ನು ಮಾಡುವ ಅವಶ್ಯಕತೆಯು ಇರುವುದಿಲ್ಲ. ಶ್ರಾದ್ಧಾದಿಗಳನ್ನು ಮಾಡಲು ನೀನು ಕರ್ತೃವೂ ಅಲ್ಲ. ಅದನ್ನು ಮಾಡುವ ಕರ್ತವ್ಯ ಇರುವವರೇ ಬೇರೆ ಇದ್ದಾರೆ ಎಂದು. ಆದ್ದರಿಂದ ತಂದೆಯು ಅವೈಷ್ಣವನಾಗಿದ್ದರೂ ಕೂಡ ಮಗನಾದವನು ಅವನ ಔನ್ನತ್ಯಕ್ಕೆ ಪ್ರಯತ್ನವನ್ನು ಪಡಲೇ ಬೇಕು. ಪ್ರಹ್ಲಾದರಾಜರು ಈ ವಿಷಯದಲ್ಲಿ ನಮಗೆಲ್ಲರಿಗೂ ಆದರ್ಶರಾಗಿದ್ದಾರೆ.

ಕೃಷ್ಣರೂಪಾ ಸುರೂಪಾ ಚ ನರ್ಮಘ್ನಾ ಲಬ್ಧಮೂರ್ಧಜಾ।
ದುನೋತ್ಯದುಷ್ಕರ್ತಾರಂ ಬ್ರಹ್ಮಹತ್ಯೇತಿ ತಾಂ ವಿದುಃ ॥೧೦೧॥

ಬ್ರಹ್ಮಹತ್ಯೆಯು ಕಪ್ಪುವರ್ಣದಿಂದ ಕೂಡಿದ್ದು, ತಲೆಯನ್ನು ಕೆದರಿಕೊಂಡು ವಿಕಾರರೂಪವುಳ್ಳದ್ದಾಗಿ ಕಣ್ಣಿಗೆ ಕಾಣದಂತೆ ಪಾಪ ಮಾಡಿದವನನ್ನು ಹಿಂಬಾಲಿಸುತ್ತಲೇ ಇರುತ್ತದೆ. ನಿರಂತರ ಅವನನ್ನು ಪೀಡಿಸುತ್ತದೆ. ಅವನು ಮಾಡುವ ಪುಣ್ಯಕರ್ಮಗಳೆಲ್ಲವನ್ನೂ ಸಂಪೂರ್ಣ ನಾಶಮಾಡುತ್ತದೆ.

ಟಿಪ್ಪಣಿ - ಅಸುರೂಪಾ ನರ್ಮಘ್ನಾ ಇತ್ಯತ್ರ ಕೃಷ್ಣವರ್ಣಾ ಅಸುರೂಪಾ ಕ್ರೂರರೂಪಾ ನರ್ಮಘ್ನಾ ಲಂಬಮೂರ್ಧಜಾ ಬ್ರಹ್ಮಹತ್ಯಾ ಅದುಷ್ಕರ್ತಾರಂ ಪುಣ್ಯಕರ್ತಾರಂ ದುನೋತಿ ಪೀಡಯತಿ।

'ಅಸುರೂಪಾ ನರ್ಮಘ್ನಾ' ಎಂಬಲ್ಲಿ 'ಕೃಷ್ಣವರ್ಣಾ ಅಸುರೂಪಾ' ಎಂಬುದಕ್ಕೆ ಕ್ರೂರರೂಪವಾಗಿದೆ ಎಂದರ್ಥ. 'ಅದುಷ್ಕರ್ತಾರಂ' ಎಂಬುದಕ್ಕೆ ಪುಣ್ಯಕೆಲಸವನ್ನು ಮಾಡದವನನ್ನು ಎಂದರ್ಥ. 'ದುನೋತಿ' ಎಂದರೆ ಪೀಡಿಸುತ್ತದೆ ಎಂದರ್ಥ.

ಪಾಪ ಮಾಡಿದವನ ಪಾಪದ ಸ್ವರೂಪ ಹೀಗಿದೆ - ಅವನ ತಲೆ ಬ್ರಹ್ಮಹತ್ಯೆಯ ಸ್ವರೂಪವಾಗಿದ್ದು, ಕೆದರಿಕೊಂಡು ವಿಕಾರ ರೂಪವನ್ನು ಹೊಂದಿರುತ್ತದೆ. ಅವನ ಎರಡು ಭುಜಗಳು ನಿರಂತರ ಕದಿಯುವುದರಲ್ಲಿ ಆಸಕ್ತವಾಗಿದೆ. ಅವನ ಮನಸ್ಸು ಹೆಂಡಕುಡಿಯುವುದರಲ್ಲೇ ಅನುರಕ್ತವಾಗಿದೆ. ಎರಡು ಕಟಿಗಳು ಉತ್ತಮಸ್ತ್ರೀಯರ ಭೋಗದಲ್ಲಿ ನಿರತವಾಗಿರುತ್ತದೆ. ಪಾತಕಗಳು ಅವನ ಕಾಲಿನ ರೂಪದಲ್ಲಿವೆ. ಅವನ ದೇಹದಲ್ಲಿರುವ ರೋಮಗಳೆಲ್ಲವೂ ಉಪಪಾತಕರೂಪವಾಗಿವೆ. ಕೆಂಪುಮೀಸೆಗಳಿಂದ ಕೂಡಿದ್ದು, ಕ್ರೂರವಾದ ಕಣ್ಣುಗಳಿಂದ ಕೂಡಿವೆ. ಕೆಳಮುಖವಾಗಿ ಕಪ್ಪು ಬಣ್ಣದಲ್ಲಿರುವ ಹೆಬ್ಬೆರಳಿನ ಗಾತ್ರದಲ್ಲಿದೆ. ಖಡ್ಗ, ಚರ್ಮಗಳನ್ನು ಧರಿಸಿ ಹೊಟ್ಟೆಯ ಎಡಭಾಗದಲ್ಲಿ ಈ ಪಾಪಪುರುಷನು ಕುಳಿತಿರುತ್ತಾನೆ.

ಬ್ರಹ್ಮಘ್ನೇನ ಪಿಬಂತಶ್ಚ ವಿಪ್ರಾ ದೇಶಾಃ ಪುರಾಣಿ ಚ।
ಅಚಿರಾದೇವ ಪೀಡ್ಯಂತೇ ದುರ್ಭಿಕ್ಷವ್ಯಾಧಿತಸ್ಕರೈಃ ॥೧೦೨॥

ಯಾರು ಬ್ರಹ್ಮಹತ್ಯೆಯನ್ನು ಮಾಡಿರುತ್ತಾನೋ, ಅವನ ಜೊತೆ ಸೇರಿ ಪಾನ

ಭೋಜನಗಳನ್ನು ಬ್ರಾಹ್ಮಣರು ಮಾಡಬಾರದು. ಹಾಗೇನಾದರೂ ಮಾಡಿದರೆ ಅವರು ವಾಸಿಸುವ ದೇಶಗಳು, ಪಟ್ಟಣಗಳು ಬರಗಾಲದಿಂದ ಪೀಡಿತವಾಗುತ್ತವೆ. ಕಳ್ಳಕಾಕರಿಂದ ಹೆಚ್ಚುತ್ತವೆ. ರೋಗ-ರುಜಿನಗಳು ಉಲ್ಬಣಗೊಳ್ಳುತ್ತವೆ.

ಟಿಪ್ಪಣಿ - ಬ್ರಹ್ಮಘ್ನೇನ ಪಿಬಂತಶ್ಚ ಇತ್ಯತ್ರ ಬ್ರಹ್ಮಘ್ನೇನ ಸಹ ಪಿಬಂತಃ ಮದ್ಯಾದಿಕಂ ಪಿಬಂತಃ। ಬ್ರಹ್ಮಹತ್ಯೆಯನ್ನು ಮಾಡಿದವನ ಜೊತೆ ಸುರಾಪಾನಾದಿಗಳನ್ನು ಮಾಡುವವನು ಎಂದರ್ಥ.

ಬ್ರಾಹ್ಮಣಂ ಪಾಪಕರ್ಮಾಣಂ ವಿಪ್ರಾಣಾಮಾತತಾಯಿನಮ್ ।
ಕ್ಷತ್ರಿಯಂ ವೈಶ್ಯಶೂದ್ರೌ ಚ ನೇತ್ರೋದ್ಧಾರೇಣ ಯೋಜಯೇತ್॥೧೦೩॥

ಬ್ರಹ್ಮಹತ್ಯೆಯನ್ನು ಮಾಡಿದ ವಿಪ್ರರು ಆತತಾಯಿಗಳು ಎಂದು ಕರೆಸಿಕೊಳ್ಳುತ್ತಾರೆ. ಇವರು ನರಕಕ್ಕೆ ತೆರಳುತ್ತಾರೆ. ಬ್ರಹ್ಮಹತ್ಯೆಯನ್ನು ಆಚರಿಸಿದ ಕ್ಷತ್ರಿಯರು, ವೈಶ್ಯರು ಹಾಗೂ ಶೂದ್ರರು ಇವರಲ್ಲಿ ಯಾರೇ ಆಗಿದ್ದರೂ ರಾಜನಾದವನು ಅವರ ಕಣ್ಣುಗಳನ್ನು ಕೀಳಿಸಬೇಕು.

ಟಿಪ್ಪಣಿ - ಬ್ರಾಹ್ಮಣಂ ಪಾಪಕರ್ಮಾಣಮ್ ಇತ್ಯತ್ರ ವಿಪ್ರಾಣಾಂ ಮಧ್ಯೇ ಆತತಾಯಿನಂ ಪಾಪಕರ್ಮಾಣಂ ಬ್ರಾಹ್ಮಣಂ ನರಕೇ ಪಾಯಯೇತ್, ನತು ರಾಜಾ ತೇಷಾಂ ನೇತ್ರೋತ್ಪಾಟನಾದಿಕಂ ಕುರ್ಯಾದಿತಿ ಭಾವಃ।

ವಿಪ್ರರ ಮಧ್ಯದಲ್ಲಿ ಪಾಪಕರ್ಮವನ್ನು ಆಚರಿಸಿದ ಬ್ರಾಹ್ಮಣನಿಗೆ ನರಕವೇ ಗತಿಯಾಗುತ್ತದೆ. ಅಂಥವರಿಗೆ ರಾಜನಾದವನು ಕಣ್ಣುಕೀಳಿಸುವಿಕೆ ಮೊದಲಾದ ಶಿಕ್ಷೆಗಳನ್ನು ನೀಡಬಾರದು.

ದುರ್ಬಲಾನಾಂ ಬಲಂ ರಾಜಾ ಬಲಿನೋ ಯೇ ಚ ಸಾಧವಃ ।
ಬಲಿನಾಂ ದುರ್ಬಲಾನಾಂ ಚ ಪಾಪಾನಾಂ ಮೃತ್ಯುರಿಷ್ಯತೇ ॥೧೦೪॥

ಸಾಧುಗಳು ದುರ್ಬಲರೇ ಆಗಿರಲಿ, ಬಲಿಷ್ಠರೇ ಆಗಿರಲಿ ಅವರಿಗೆ ರಾಜನೇ ಬಲ ಎನಿಸುತ್ತಾನೆ. ಪಾಪಿಗಳು ದುರ್ಬಲರೇ ಆಗಿರಲಿ, ಬಲಿಷ್ಠರೇ ಆಗಿರಲಿ ಅಂಥವರಿಗೆ ರಾಜನಾದವನು ಮೃತ್ಯು ಎನಿಸುತ್ತಾನೆ.

ಸದೋಷಮಪಿ ಯೋ ಹನ್ಯಾದಶ್ರಾವ್ಯ ಜಗತೀಪತೇ।
ದುರ್ಬಲಂ ಬಲವಂತಂ ವಾ ಸ ಪರಾಜಯಮರ್ಹತಿ ॥೧೦೫॥

ಬ್ರಾಹ್ಮಣನಾದವನು ದುಷ್ಟನಾದಾಗ ರಾಜನ ಅನುಮತಿಯನ್ನು ಪಡೆಯದೇ ಶಿಕ್ಷೆಯನ್ನು ನೀಡಿದರೆ ಅವನು ದುರ್ಬಲನೇ ಆಗಿರಲಿ, ಬಲಿಷ್ಠನೇ ಆಗಿರಲಿ, ಅವನು ಶಿಕ್ಷೆಗೆ ಅರ್ಹನಾಗುತ್ತಾನೆ.

ಟಿಪ್ಪಣಿ – ಸದೋಷಮಪಿ ಯೋ ಹನ್ಯಾದ್ ಇತ್ಯತ್ರ ಬ್ರಾಹ್ಮಣಮಿತ್ಯನುವರ್ತತೇ।

'ಸದೋಷಮಪಿ ಯೋ ಹ್ಯನಾತ್' ಎಂಬಲ್ಲಿ 'ಬ್ರಾಹ್ಮಣಂ' ಎಂಬುದನ್ನು ಅನುವೃತ್ತಿ ಮಾಡಿಕೊಳ್ಳಬೇಕು.

ರಾಜಾಜ್ಞಾಂ ಪ್ರಾಡ್‌ವಿವಾಕಂ ಚ ನೇಚ್ಛೇದ್ ಯಚ್ಚಾಪಿ ನಿಷ್ಪತೇತ್।
ಸಾಕ್ಷಿಣಂ ಸಾಧುವಾಕ್ಯಂ ಚ ಜಿತಂ ತಮಪಿ ನಿರ್ದಿಶೇತ್ ॥೧೦೬॥

ಯಾರು ರಾಜನ ಅಥವಾ ರಾಜನಿಂದ ನಿಯಮಿಸಲ್ಪಟ್ಟ ಅಧಿಕಾರಿಯ ಆಜ್ಞೆಯನ್ನು ಮೀರುತ್ತಾನೋ, ಸಾಕ್ಷಿಗಳನ್ನು ನಿರಾಕರಿಸುತ್ತಾನೋ, ಸಜ್ಜನರ ಮಾತುಗಳನ್ನು ಉಪೇಕ್ಷಿಸುತ್ತಾನೋ, ಅವನೂ ಕೂಡ ಅಪರಾಧಿಯೆಂದೇ ಕರೆಸಿಕೊಳ್ಳುತ್ತಾನೆ.

ಟಿಪ್ಪಣಿ – ಜಿತಂ ತಮಪಿ ನಿರ್ದಿಶೇಷದ್ ಇತ್ಯತ್ರ ಜಿತಂ ಜಯವಂತಮ್।

'ಜಿತಂ ತಮಪಿ ನಿರ್ದಿಶೇಷದ್' ಎಂಬಲ್ಲಿ 'ಜಿತಂ' ಎಂಬುದಕ್ಕೆ ಜಯವುಳ್ಳವನು ಎಂದರ್ಥ. ಜಯವುಳ್ಳವನನ್ನು ಉಪೇಕ್ಷಿಸಬಾರದು ಎಂದಭಿಪ್ರಾಯ.

ಬಂಧನಾನ್ನಿಷ್ಪತೇದ್ ಯಚ್ಚ ಪ್ರತಿಭೂರ್ನ ದದಾತಿ ಚ।
ಕುಲಜಶ್ಚ ಧನಾಢ್ಯಶ್ಚ ಸ ಪರಾಜಯಮರ್ಹತಿ ॥೧೦೭॥

ಯಾರು ಸೆರೆಯಿಂದ ತಪ್ಪಿಸಿಕೊಂಡು ಹೋಗಿರುತ್ತಾನೋ, ಅಪರಾಧಿಯನ್ನು ಒಪ್ಪಿಸಿಕೊಡದ ಹೊಣೆಗಾರವನ್ನು ಹೊಂದಿರುತ್ತಾನೋ, ಅಂಥವನು ಸತ್ಕುಲ ಪ್ರಸೂತನಾಗಿದ್ದರೂ ಧನಾಢ್ಯನಾಗಿದ್ದರೂ ಕೂಡ ಅಪರಾಧಿಯೆಂದೇ ಕರೆಸಿಕೊಳ್ಳುತ್ತಾನೆ. ಶಿಕ್ಷೆಗೆ ಒಳಪಡುತ್ತಾನೆ.

ಟಿಪ್ಪಣಿ - ಪ್ರತಿಭೂರ್ನ ದದಾತಿ ಚ ಇತ್ಯತ್ರ ಪ್ರತಿಭವತೀತಿ ಪ್ರತಿಭೂಃ ವಿಪರೀತ ಇತ್ಯರ್ಥಃ । 'ಪ್ರತಿಭೂಃ' ಎಂಬುದಕ್ಕೆ ಪ್ರತಿಭವತೀತಿ ಪ್ರತಿಭೂಃ ಎಂಬ ನಿಷ್ಪತ್ತಿಯನ್ನು ವಿವಕ್ಷಿಸಬೇಕು. ಅಪರಾಧಿಯನ್ನು ಒಪ್ಪಿಸದಿದ್ದರೆ ಎಂದರ್ಥ.

ರಾಜಾಜ್ಞಯಾ ಸಮಾಹೂತೋ ಯೋ ನ ಗಚ್ಛೇತ್ ಸಭಾಂ ನರಃ ।
ಬಲವಂತಮುಪಾಶ್ರಿತ್ಯ ಸಾಯುಧಃ ಸ ಪರಾಜಿತಃ ॥೧೦೮॥

ರಾಜನು ಅಪ್ಪಣೆಯನ್ನು ಮಾಡಿದಾಗ ಯಾರು ರಾಜನ ಆಸ್ಥಾನಕ್ಕೆ ತೆರಳುವುದಿಲ್ಲವೋ, ಮತ್ತೊಬ್ಬ ಬಲಿಷ್ಠನ ಸಹಾಯವನ್ನು ಹೊಂದಿ, ರಾಜದೂತನ ಮೇಲೆ ಆಯುಧಗಳಿಂದ ಕೂಡಿ ನಿಗ್ರಹಿಸಲು ಬರುತ್ತಾನೋ, ಅವನೂ ಸಹ ಅಪರಾಧಿಯೇ ಆಗುತ್ತಾನೆ.

ತಂ ದಂಡೇನ ವಿನಿರ್ಜಿತ್ಯ ಮಹಾಸಾಹಸಿಕಂ ನರಮ್ ।
ವಿಯುಕ್ತದೇಹಸರ್ವಸ್ವಂ ಪರಲೋಕಂ ವಿಸರ್ಜಯೇತ್ ॥೧೦೯॥

ಇಂಥ ಅಪರಾಧಿಗಳಿಗೆ ಮತ್ತು ಮಹಾಪರಾಧಿಗಳಿಗೆ ರಾಜನಾದವನು ಶಿಕ್ಷೆಯನ್ನು ನೀಡಲೇಬೇಕು. ಅವರಲ್ಲಿರುವ ಎಲ್ಲ ಸಂಪತ್ತುಗಳನ್ನು ಕಸಿದುಕೊಂಡು ಮತ್ತೊಂದು ದೇಶಕ್ಕೆ ಅಟ್ಟಬೇಕು.

ಟಿಪ್ಪಣಿ - ಪರಲೋಕಂ ವಿಸರ್ಜಯೇದ್ ಇತ್ಯತ್ರ ಪರಲೋಕಂ ಪ್ರತಿ ವಿಸರ್ಜಯೇತ್ ।

ಮೃತಸ್ಯಾಪಿ ನ ದೇಯಾನಿ ಪಿಂಡದಾನಾನಿ ಕೇನಚಿತ್ ।
ದತ್ತ್ವಾ ದಂಡಂ ಪ್ರಯಚ್ಛೇತ ಮಧ್ಯಮಂ ಪೂರ್ವಸಾಹಸಮ್ ॥೧೧೦॥

ಹೀಗೆ ಮಹಾಪರಾಧಗಳನ್ನು ಮಾಡಿದ ವ್ಯಕ್ತಿಯು ಮೃತನಾದ ಮೇಲೆ ಅವನಿಗೆ ಪಿಂಡಪ್ರದಾನಾದಿಗಳನ್ನು ಮಾಡಬಾರದು. ರಾಜಾಜ್ಞೆಯನ್ನು ಮೀರಿ ಯಾರಾದರೂ ಪಿಂಡಪ್ರದಾನವನ್ನು ಮಾಡಿದರೆ ಅವನೂ ಸಹ ಎರಡನೇ ಅಪರಾಧಿಯಾಗುತ್ತಾನೆ. ಅಂಥವನಿಗೂ ಕೂಡ ಶಿಕ್ಷೆಯನ್ನು ನೀಡಬೇಕು.

ಟಿಪ್ಪಣಿ- ದತ್ತ್ವಾ ದಂಡಮ್ ಇತ್ಯತ್ರ ದತ್ತ್ವಾ ಬಲಾತ್ ಪಿಂಡಾದಿಕಂ ದಾಪಯಿತ್ವಾ, ಮಧ್ಯಮಂ ದಂಡಂ ಪ್ರಯಚ್ಛೇತ। ಪೂರ್ವಂ ಸಾಹಸಂ ನ ಕರೋಮೀತಿ ಸತ್ತ್ವಂ ಯಸ್ಯ ತಸ್ಮಾತ್ ಪೂರ್ವಸಾಹಸಾತ್।

'ದತ್ತ್ವಾ ದಂಡಮ್' ಎಂಬಲ್ಲಿ ಬಲಾತ್ಕಾರವಾಗಿ ಪಿಂಡಪ್ರದಾನಾದಿಗಳನ್ನು ಯಾರು ಮಾಡುತ್ತಾನೋ, ಅಂಥವನು ಎರಡನೆಯ ಅಪರಾಧಿಯೆಂದು ಕರೆಸಿಕೊಳ್ಳುತ್ತಾನೆ ಎಂದಭಿಪ್ರಾಯ. 'ಪೂರ್ವಸಾಹಸಂ' ಎಂದರೆ ಹಿಂದೆ ಮಾಡಿದವನ ಅಪರಾಧವನ್ನು ನಾನು ಮಾಡಲಾರೆ ಎಂದು ಹೇಳುವವನು ಎಂದರ್ಥ.

ಕುಲಸ್ತ್ರೀವ್ಯಭಿಚಾರಂ ಚ ರಾಷ್ಟ್ರಸ್ಯ ಚ ವಿಮರ್ದನಮ್।
ಬ್ರಹ್ಮಹತ್ಯಾಂ ಚ ಚೌರ್ಯಂ ಚ ರಾಜದ್ರೋಹಂ ಚ ಪಂಚಮಮ್ ॥೧೧೧॥

ಯಾರು ಉತ್ತಮಕುಲದಲ್ಲಿ ಹುಟ್ಟಿದ ಸ್ತ್ರೀಯನ್ನು ಬಲಾತ್ಕಾರ ಮಾಡುವಿಕೆ, ರಾಷ್ಟ್ರಕ್ಕೆ ಕೆಡಕನ್ನು ಬಯಸುವಿಕೆ, ಬ್ರಹ್ಮಹತ್ಯೆ, ಕಳ್ಳತನ, ರಾಜದ್ರೋಹ ಇವುಗಳು ಮಹಾಪಾತಕಗಳು.

ಯುದ್ಧಾದನ್ಯತ್ರ ಹಿಂಸಾಯಾಂ ಸುರಾಪಸ್ಯ ಚ ಕೀರ್ತನೇ।
ಮಹಾಂತಂ ಗುರುತಲ್ಪೇ ಚ ಮಿತ್ರದ್ರೋಹೇ ಚ ಪಾತಕಮ್ ॥೧೧೨॥

ಯುದ್ಧವಿಲ್ಲದ ಕಾಲದಲ್ಲಿ ಹಿಂಸೆ ನೀಡುವುದು. ಸುರಾಪಾನ ಮಾಡುವುದು, ಗುರುದಾರ ಪರಿಗ್ರಹವನ್ನು ಮಾಡುವುದು, ಮಿತ್ರದ್ರೋಹವನ್ನು ಮಾಡುವುದು ಇವುಗಳು ಮಹಾಪಾತಕಗಳು.

ನ ಕಥಂಚಿದುಪೇಕ್ಷೇತ ಮಹಾಸಾಹಸಿಕಂ ನರಮ್।
ಸರ್ವಸ್ವಮಪಹೃತ್ಯಾಶು ತತಃ ಪ್ರಾಣೈರ್ವಿಯೋಜಯೇತ್ ॥೧೧೩॥

ಇಂಥ ಮಹಾಪಾತಕಗಳನ್ನು ಮಾಡುವವರು, ಮಹಾಪರಾಧಿಗಳು ಎಂದು ಕರೆಸಿಕೊಳ್ಳುತ್ತಾರೆ. ಇಂಥವರನ್ನು ಉಪೇಕ್ಷೆ ಮಾಡದೇ ಅವರ ಎಲ್ಲಾ ಸಂಪತ್ತನ್ನು ಕಸಿದುಕೊಂಡು ಅವರಿಗೆ ಗಲ್ಲುಶಿಕ್ಷೆಯನ್ನೇ ನೀಡಬೇಕು.

ತ್ರಿಷು ವರ್ಣೇಷು ಯೋ ದಂಡಃ ಪ್ರಣೀತೋ ಬ್ರಹ್ಮಣಾ ಪುರಾ ।
ಮಹಾಸಾಹಸಿಕಂ ವಿಪ್ರಂ ಕೃತಾಂಕಂ ವಿಪ್ರವಾಸಯೇತ್ ॥೧೧೪॥

ನಾಕುವರ್ಣಗಳಲ್ಲಿ ಮೂರುವರ್ಣದವರಿಗೆ ಮಾತ್ರ ಶಿಕ್ಷೆಯನ್ನು ನೀಡಬೇಕು. ಬ್ರಾಹ್ಮಣನು ಇಂಥ ಮಹಾಪರಾಧವನ್ನು ಮಾಡಿದ ಪಕ್ಷದಲ್ಲಿ ಅವನ ದೇಹದಲ್ಲಿ ಒಂದು ಚಿಹ್ನೆಯನ್ನು ಮಾಡಿ, ಅವನನ್ನು ಯಾರೂ ಸಂಪರ್ಕ ಮಾಡದಂತೆ ದೇಶ ಬಿಟ್ಟು ಹೊರಗೆ ಕಳುಹಿಸಬೇಕು.

ಸಾಹಸ್ರೋ ವಾ ಭವೇದ್ ದಂಡಃ ಕಾಂಚನೋ ದೇಹನಿಷ್ಕ್ರಿಯಾ ।
ಚತುರ್ಣಾಮಪಿ ವರ್ಣಾನಾಮೇವಮಾಹೋಶನಾ ಕವಿಃ ॥೧೧೫॥

ನಾಕು ವರ್ಣದವರು ಮಹಾಪರಾಧವನ್ನು ಮಾಡಿದಾಗ ಅವರಿಗೆ ಶಿಕ್ಷೆಯನ್ನು ನೀಡಬೇಕು. ಸಾವಿರ ವರಹಗಳ ದಂಡವನ್ನು ವಿಧಿಸಬೇಕು ಎಂಬುದಾಗಿ ಶುಕ್ರನೀತಿ-ಯಲ್ಲಿ ಶುಕ್ರಾಚಾರ್ಯರು ಹೇಳಿರುವರು.

ನಾರೀಣಾಂ ಬಾಲವೃದ್ಧಾನಾಂ ಗೋಪತೇಶ್ಚ ಮಹಾಮತಿಃ ।
ಪಾಪಾನಾಂ ದುರ್ವಿನೀತಾನಾಂ ಪ್ರಾಣಾಂತಂ ಚ ಬೃಹಸ್ಪತಿಃ ॥೧೧೬॥

ಸ್ತ್ರೀಯರು, ಬಾಲರು, ವೃದ್ಧರು, ಗೊಲ್ಲರು ಇವರುಗಳು ಅಪರಾಧವನ್ನು ಆಚರಿಸಿದಾಗ ದುರ್ವಿನೀತರಾದಾಗ ಮರಣದಂಡನೆಯನ್ನೇ ನೀಡಬೇಕು. ಹೀಗೆ ಎಲ್ಲಾ ಅಪರಾಧಿಗಳಿಗೂ ಸಮಾನ ಶಿಕ್ಷೆ ಎಂಬುದಾಗಿ ಬೃಹಸ್ಪತ್ಯಾಚಾರ್ಯರು ತಮ್ಮ ನೀತಿ ಶಾಸ್ತ್ರದಲ್ಲಿ ಹೇಳಿರುವರು.

ದಂಡಮಾಹ ಮಹಾಭಾಗ ಸರ್ವೇಷಾಮಾತತಾಯಿನಾಮ್ ।

ಸರ್ವೇಷಾಂ ಪಾಪಬುದ್ಧೀನಾಂ ಪಾಪಕರ್ಮೈವ ಕುರ್ವತಾಮ್ ।
ಧೃತರಾಷ್ಟ್ರಸ್ಯ ಪುತ್ರಾಣಾಂ ದಂಡೋ ನಿರ್ದೋಷ ಇಷ್ಯತೇ ।
ಸೌಬಲಸ್ಯ ಚ ದುರ್ಬುದ್ಧೇಃ ಕರ್ಣಸ್ಯ ಚ ದುರಾತ್ಮನಃ ॥೧೧೭॥

ಓ ರಾಜನೇ! ಧೃತರಾಷ್ಟ್ರನ ಮಕ್ಕಳು ಈ ಎಲ್ಲಾ ಅಪರಾಧಗಳನ್ನು ಮಾಡಿರುತ್ತಾರೆ. ನಿರಂತರ ಪಾಪದಲ್ಲಿಯೇ ಆಸಕ್ತರಾಗಿದ್ದು, ಪಾಪಕರ್ಮಿಗಳಾಗಿದ್ದಾರೆ. ರಾಜನಾದ ನಿನ್ನಿಂದ ಮರಣದಂಡನೆಗೆ ಭಾಗಿಗಳಾಗಿದ್ದಾರೆ. ಆದ್ದರಿಂದ ನಿನಗೆ ಯಾವ ದೋಷಗಳೂ ಕೂಡ ಇದರಿಂದ ಬರುವುದಿಲ್ಲ. ದುರಾತ್ಮನಾದ ಕರ್ಣನ ದುರ್ಬುದ್ಧಿಯಿಂದ, ಸೌಬಲನ ಪಾಪಬುದ್ಧಿಯಿಂದ ಅವರು ಇಂದು ಮರಣಶಿಕ್ಷೆಯನ್ನು ಅನುಭವಿಸಿದ್ದಾರೆ.

ಪಶ್ಯತಾಂ ಚೈವ ಶೂರಾಣಾಂ ಯಾऽಹಂ ದ್ಯೂತೇ ಸಭಾಂ ತದಾ।
ರಜಸ್ವಲಾ ಸಮಾನೀತಾ ಭವತಾಂ ಪಶ್ಯತಾಂ ನೃಪ।
ವಾಸಸೈಕೇನ ಸಂವೀತಾ ತವ ದೋಷೇಣ ಭೂಪತೇ ॥೧೧೮॥

ಅವರೆಲ್ಲರೂ ಪಾಪಬುದ್ಧಿಯಾಗಿದ್ದರು ಎಂಬುದನ್ನು ನೀನೂ ಕೂಡ ಈ ಹಿಂದೆ ನೋಡಿರುವಿ. ಆ ಧೃತರಾಷ್ಟ್ರನ ಮಕ್ಕಳು ಜೂಜಾಟದಲ್ಲಿ ನಿನ್ನನ್ನು ಸೋಲಿಸಿದರು. ಸಭೆಯಲ್ಲಿ ಅನೇಕ ಶೂರರ ಮತ್ತು ನಿನ್ನ ಎದುರು ಏಕವಸ್ತ್ರಳಾದ ನನ್ನನ್ನು ರಾಜಸಭೆಯಲ್ಲಿ ಸೆಳೆದು ತಂದರು. ರಜಸ್ವಲಳಾದ ನನಗೆ ಹೀಗೆ ಅವಮಾನ ಮಾಡಿದ ಅಂಥವರು ಬ್ರಹ್ಮಹತ್ಯಾ, ಸ್ತ್ರೀಹತ್ಯಾ ಮೊದಲಾದ ದೋಷಗಳಿಂದ ಪೂರಿತರಾಗಿದ್ದಾರೆ.

ಮಾಭೂದ್ ಧರ್ಮವಿಲೋಪಸ್ತೇ ಧೃತರಾಷ್ಟ್ರಕುಲಕ್ಷಯಾತ್।
ಕ್ರೋಧಾಗ್ನಿನಾ ತು ದಗ್ಧಂ ಚ ಸಪಶುದ್ರವ್ಯಸಂಚಯಮ್ ॥೧೧೯॥

ನಿನ್ನ ಕೋಪಾಗ್ನಿಯಿಂದಲೇ ಸಮಸ್ತ ಪಶುದ್ರವ್ಯಗಳ ಜೊತೆ ಆ ಧೃತರಾಷ್ಟ್ರಕುಲವು ಈ ಹಿಂದೆಯೇ ನಷ್ಟವಾಗಿದೆ. ಅದನ್ನೇ ಈಗ ಯುದ್ಧದಲ್ಲಿ ನಾಶ ಮಾಡಿರುವಿ. ನಿನಗೆ ಈ ವಿಷಯದಲ್ಲಿ ಧರ್ಮಲೋಪದ ಭಯವು ಸರ್ವಥಾ ಬೇಡ.

ಸಾऽಹಮೇವಂವಿಧಂ ದುಃಖಂ ಸಂಪ್ರಾಪ್ತಾ ತವ ಹೇತುನಾ।
ಆದಿತ್ಯಸ್ಯ ಪ್ರಸಾದೇನ ನಚ ಪ್ರಾಣೈರ್ವಿಯೋಜಿತಾ ॥೧೨೦॥

ನಿನ್ನಲ್ಲಿರುವ ಅತಿಯಾದ ಕಾರುಣ್ಯದಿಂದಲೇ ನಾನು ಇಂಥ ಮಹಾದುಃಖಗಳನ್ನು ಅನುಭವಿಸಿದೆನು. ಆದರೆ ಆ ಸೂರ್ಯನಾರಾಯಣನ ಅನುಗ್ರಹದಿಂದ ನಾನು ಪ್ರಾಣಗಳನ್ನು ರಕ್ಷಣೆ ಮಾಡಿಕೊಂಡೆನು.

ರಕ್ಷಿತಾ ದೇವದೇವೇನ ಜಗತಃ ಕಾಲಹೇತುನಾ ।
ದಿವಾಕರೇಣ ದೇವೇನ ವಿವಸ್ತ್ರಾ ನ ಕೃತಾ ತದಾ ॥೧೨೧॥

ಆ ಸೂರ್ಯನ ರಥದಲ್ಲಿ ಕುಳಿತ ನಾರಾಯಣನು ನನಗೆ ಅವಮಾನವಾಗುತ್ತಿರುವ ಪ್ರಸಂಗವನ್ನು ಅರಿತು, ವಸ್ತ್ರಹೀನಳಾಗದಂತೆ ರಕ್ಷಿಸಿದನು.

ಏತೇಷಾಂ ಯತಮಾನಾನಾಮುತ್ಪದ್ಯಂತೇ ತು ಸಂಪದಃ ।
ತ್ವಂ ತು ಸರ್ವಾ ಮಹೀಂ ಲಬ್ಧ್ವಾ ಕುರುಷೇ ಸ್ವಯಮಾಪದಮ್॥೧೨೨॥

ನಿನ್ನ ತಮ್ಮಂದಿರು ನಿನ್ನನ್ನು ಸಮಾಧಾನಗೊಳಿಸಲು ಬಹಳ ಪ್ರಯತ್ನಪಡುತ್ತಿದ್ದಾರೆ. ಸಂಪತ್ತು ಪ್ರಾಪ್ತವಾದಾಗ ಅದನ್ನು ಸ್ವೀಕರಿಸು. ಸಮಸ್ತ ಭೂಮಂಡಲವನ್ನು ಪರಿತ್ಯಾಗ ಮಾಡುವುದಾದರೆ ನೀನೇ ಆಪತ್ತನ್ನು ತಂದುಕೊಂಡಂತಾಗುತ್ತದೆ.

ವಿವರಣೆ - ದ್ರೌಪದೀ ದೇವಿಯು ಯುಧಿಷ್ಠಿರನಿಗೆ ಕ್ಷತ್ರಿಯನ ಕರ್ತವ್ಯವನ್ನು ವಿವರವಾಗಿ ಬೋಧಿಸಿದಳು. ಬ್ರಾಹ್ಮಣರ ಧರ್ಮದ ವ್ಯತ್ಯಾಸವನ್ನು ತಿಳಿಸಿ ಹೇಳಿದಳು. ಕ್ಷತ್ರಿಯನು ಬ್ರಾಹ್ಮಣ ಧರ್ಮವನ್ನು ಸ್ವೀಕರಿಸಬಾರದು. ದಂಡನೀತಿಯನ್ನು ಅಳವಡಿಸಿಕೊಂಡು ರಾಜ್ಯವನ್ನು ಪರಿಪಾಲನೆ ಮಾಡಬೇಕೆಂಬುದನ್ನು ಶುಕ್ರನೀತಿಯ ಉಲ್ಲೇಖ ಮಾಡುವ ಮೂಲಕ ಮಾರ್ಮಿಕವಾಗಿ ಉಪದೇಶಿಸಿದಳು. ಹೀಗೆ ಉಪದೇಶಿಸಿ ನಿನ್ನ ತಮ್ಮಂದಿರು ನಿನಗೆ ಹೇಳಿದ ಮಾತುಗಳೆಲ್ಲವೂ ಸತ್ಯವೇ ಆಗಿವೆ. ಅವರ ಮಾತುಗಳಲ್ಲಿ ವಿಶ್ವಾಸವನ್ನು ನೀನು ಇಡಲೇ ಬೇಕು. ಸರ್ವಥಾ ಉಪೇಕ್ಷೆ ಮಾಡಬಾರದು. ಅದರಂತೆ ನಾನು ಹೇಳುತ್ತಿರುವ ಮಾತುಗಳೂ ಕೂಡ ಸತ್ಯವೇ ಆಗಿವೆ. ಅಖಂಡ ಭೂಮಂಡಲವನ್ನು ನಿನ್ನ ಭುಜಪರಾಕ್ರಮದಿಂದ ಪಡೆದಿರುವಿ. ಇನ್ನೇನು ಅನುಭವಿಸುವ ಸಂದರ್ಭ ಒದಗಿದಾಗ ನೀನು ಕಾಡಿಗೆ ತೆರಳಿದರೆ ನಿನ್ನನ್ನು ಮೂರ್ಖನೆಂದೇ ಜಗತ್ತು ತಿಳಿಯುತ್ತದೆ. ಮತ್ತು ಎಲ್ಲಾ ಆಪತ್ತುಗಳನ್ನು ನೀನೇ ತಂದುಕೊಂಡಂತಾಗುತ್ತದೆ. ಆದ್ದರಿಂದ ರಾಜ್ಯಭಾರವನ್ನು

ಸ್ವೀಕರಿಸಿ, ಉತ್ತಮ ರೀತಿಯಲ್ಲಿ ಪ್ರಜೆಗಳ ರಕ್ಷಣೆಗಳನ್ನು ಮಾಡಿ, ಧರ್ಮಶೀಲನಾಗು ಎಂದು ಉಪದೇಶಿಸುತ್ತಿದ್ದಾಳೆ.

ಯಥಾಸ್ತಾಂ ಸಮ್ಮತೌ ರಾಜ್ಞಾಂ ಪೃಥಿವ್ಯಾಂ ರಾಜಸತ್ತಮೌ ।
ಮಾಂಧಾತಾ ಚಾಂಬರೀಷಶ್ಚ ತಥಾ ರಾಜನ್ ವಿರಾಜಸೇ ॥೧೨೩॥

ಹಿಂದೆ ಅಂಬರೀಷ ಮತ್ತು ಮಾಂಧಾತಾ ಎಂಬ ಇಬ್ಬರು ರಾಜರಿದ್ದರು. ಇವರನ್ನು ಎಲ್ಲರೂ ಕೂಡ ಒಪ್ಪಿಕೊಂಡಿದ್ದರು. ಧರ್ಮಸಮ್ಮತವಾಗಿ ಅವರ ರಾಜ್ಯಪರಿಪಾಲನೆಯು ಆದರ್ಶಪ್ರಾಯವಾಗಿತ್ತು. ಅದರಂತೆ ನೀನೂ ಸಹ ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡಿದರೆ ಸಮಸ್ತರಿಂದ ಸ್ತುತ್ಯನಾಗುವಿ. ಲೋಕದಲ್ಲಿ ವಿರಾಜಿಸುವಿ.

ಪ್ರಶಾಧಿ ಪೃಥಿವೀಂ ದೇವೀಂ ಪ್ರಜಾ ಧರ್ಮೇಣ ಪಾಲಯನ್ ।
ಸಪರ್ವತವನದ್ವೀಪಾಂ ಮಾ ರಾಜನ್ ವಿಮನಾ ಭವ ॥೧೨೪॥

ಪರ್ವತ, ವನ, ದ್ವೀಪಗಳಿಂದ ಕಂಗೊಳಿಸುತ್ತಿರುವ ಈ ಭೂದೇವಿಯನ್ನು ಧರ್ಮದಿಂದ ಪರಿಪಾಲನೆ ಮಾಡು. ಎಂದೂ ಕೂಡ ರಾಜ್ಯಪರಿಪಾಲನೆಯ ವಿಷಯದಲ್ಲಿ ವಿಮುಖನಾಗಬೇಡ.

ಯಜಸ್ವ ವಿವಿಧೈರ್ಯಜ್ಞೈರ್ಜುಹ್ವನ್ನಗ್ನೀನ್ ಪ್ರಯಚ್ಛ ಚ ।
ಪುರಾಣೆ ಭೋಗಾನ್ ವಾಸಾಂಸಿ ದ್ವಿಜಾತಿಭ್ಯೋ ನೃಪೋತ್ತಮ॥೧೨೫॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ಚತುರ್ದಶೋಽಧ್ಯಾಯಃ ॥೧೪॥

ನೃಪೋತ್ತಮನೇ! ಸಿಂಹಾಸನದಲ್ಲಿ ಪಟ್ಟಾಭಿಷಿಕ್ತನಾಗಿ ಅನೇಕ ಧಾರ್ಮಿಕಕಾರ್ಯಗಳನ್ನು ನೆರವೇರಿಸು. ಬಗೆಬಗೆಯ ಯಜ್ಞಯಾಗಾದಿಗಳನ್ನು ಆಚರಿಸು. ಅಗ್ನಿಯಲ್ಲಿ ಎಲ್ಲ ದೇವತೆಗಳಿಗೆ ಆಹುತಿಯನ್ನು ನೀಡಿ ತೃಪ್ತಿ ಪಡಿಸು. ಭೂಲೋಕದಲ್ಲಿರುವ ಬ್ರಾಹ್ಮಣರನ್ನು ಅನೇಕ ಬಗೆಯ ಸಂಪತ್ತುಗಳನ್ನು, ಭೋಗವಸ್ತುಗಳನ್ನು , ವಸ್ತ್ರಗಳನ್ನು ದಾನಮಾಡುವ ಮೂಲಕ ತೃಪ್ತಿಪಡಿಸು.

ಗಮನಿಸಿ - ಹದಿನಾಕನೆಯ ಈ ಅಧ್ಯಾಯದಲ್ಲಿ ಒಟ್ಟು ನೂರಿಪ್ಪತ್ತೈದು ಶ್ಲೋಕ -ಗಳಿವೆ. ಆದರೆ ಪ್ರಚಲಿತ ಪಾಠದಲ್ಲಿ ಕೇವಲ ಮೂವತ್ತೊಂಬತ್ತು ಶ್ಲೋಕಗಳು ಕಾಣಿಸುತ್ತವೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೪ನೆಯ ಅಧ್ಯಾಯವು ಮುಗಿಯಿತು.

* * * * *

ಹದಿನೈದನೆಯ ಅಧ್ಯಾಯ

ಅರ್ಜುನನು ಯುಧಿಷ್ಠಿರನಿಗೆ ದಂಡಪ್ರಯೋಗದ ಮಹತ್ವವನ್ನು ತಿಳಿಸುತ್ತಿದ್ದಾನೆ. ಲೋಕದಲ್ಲಿ ನಾಕುವರ್ಣದವರು, ನಾಕು ಆಶ್ರಮದವರು ತಮ್ಮತಮ್ಮ ಕರ್ತವ್ಯದಲ್ಲಿ ದಂಡನೀತಿಗೆ ಭಯಪಟ್ಟೇ ಅನುಷ್ಠಾನವನ್ನು ಮಾಡುತ್ತಿದ್ದಾರೆ. ಸಕಲ ಪ್ರಾಣಿಗಳೂ ಕೂಡ ದಂಡಪ್ರಯೋಗಕ್ಕೆ ಹೆದರುತ್ತವೆ. ದುಷ್ಟರ ವಿಷಯದಲ್ಲಿ, ದುಷ್ಟವಿಚಾರಗಳಲ್ಲಿ, ತಪ್ಪು ಮಾಡಿದವರಲ್ಲಿ ಮಾತ್ರ ದಂಡಪ್ರಯೋಗವನ್ನು ಮಾಡಬೇಕು. ಪ್ರಾಮಾಣಿಕತೆ ಮೊದಲಾದವುಗಳಿದ್ದಲ್ಲಿ ಮಾಡಬಾರದು. ಶತ್ರುಗಳ ವಧದಿಂದ ದುಃಖವನ್ನು ಪಡಬಾರದು. ಮೃತ್ಯುವೆಂದರೆ ಹಳೆಯ ದೇಹವನ್ನು ಬಿಡುವುದು ಎಂದರ್ಥ. ಧರ್ಮರಾಜನೇ! ನಿನಗೆ ದುಃಖಿಸಲು ಯಾವ ಕಾರಣಗಳು ಇರುವುದಿಲ್ಲ.

ವೈಶಂಪಾಯನಃ

ಯಜ್ಞಸೇನ್ಯಾ ವಚಃ ಶ್ರುತ್ವಾ ಪುನರೇವಾರ್ಜುನೋಽಬ್ರವೀತ್ ।
ಅನುಮಾನ್ಯ ಮಹಾಬಾಹುಂ ಜ್ಯೇಷ್ಠಂ ಭ್ರಾತರಮೀಶ್ವರಮ್ ॥೧॥

ವೈಶಂಪಾಯನರು – ಯಾಜ್ಞಸೇನಿಯ ಮಾತುಗಳನ್ನು ಕೇಳಿ ಪುನಃ ಅರ್ಜುನನು ಮಾತನಾಡಲು ಪ್ರಾರಂಭಿಸಿದನು. ಮಹಾಬಾಹುವಾದ ಲೋಕಕ್ಕೆ ರಾಜನಾದ ತನ್ನ ಹಿರಿಯಣ್ಣನನ್ನು ಕುರಿತು ಗೌರವಪೂರ್ವಕವಾದ ಮಾತುಗಳಿಂದ ಹೀಗೆ ಹೇಳುತ್ತಾನೆ.

ವಿವರಣೆ - ದ್ರೌಪದೀದೇವಿಯು ಶುಕ್ರನೀತಿ, ಬೃಹಸ್ಪತಿನೀತಿ ಮೊದಲಾದವು-ಗಳನ್ನು ಉಲ್ಲೇಖಮಾಡುವ ಮೂಲಕ ರಾಜನಿಗೆ ಅನೇಕ ವಿಧವಾಗಿ ಬೋಧನೆ-ಯನ್ನು ಮಾಡಿದಳು. ಇಷ್ಟಾದರೂ ಯುಧಿಷ್ಠಿರನಿಗೆ ರಾಜ್ಯಭಾರವನ್ನು ಮಾಡಲೇ-ಬೇಕೆಂಬ ದಾರ್ಢ್ಯವು ಬರುವುದಿಲ್ಲ. ವಿಚಲಿತನಾಗದೇ ತುಮುಲದಲ್ಲಿಯೇ ಕುಳಿತ

ಯುಧಿಷ್ಠಿರನನ್ನು ಕುರಿತು, ಅರ್ಜುನನಿಗೆ ಸಾಂತ್ವನ ಮಾಡಬೇಕೆಂಬ ಬಯಕೆ ಉಂಟಾಗುತ್ತದೆ. ದ್ರೌಪದೀದೇವಿಯ ಮಾತುಗಳನ್ನೇ ಉಪೋದ್ಬಲಿಸುವ ಮೂಲಕ ತಾನೂ ಸಹ ಯುಧಿಷ್ಠಿರನನ್ನು ಕುರಿತು, ಅನೇಕ ವಿಚಾರಗಳನ್ನು ತಿಳಿಸಲು ಪ್ರಾರಂಭ ಮಾಡುತ್ತಾನೆ. ಅವಳು ತಿಳಿಸಿದ ದಂಡನೀತಿಯ ಬಗ್ಗೆ ಮತ್ತಷ್ಟು ಮಹತ್ವವನ್ನು ಸಾರುತ್ತಾನೆ.

ದಂಡಃ ಶಾಸ್ತಿ ಪ್ರಜಾಃ ಸರ್ವಾ ದಂಡ ಏವಾಭಿರಕ್ಷತಿ।
ದಂಡಃ ಸುಪ್ತೇಷು ಜಾಗರ್ತಿ ದಂಡಂ ಧರ್ಮಂ ವಿದುರ್ಬುಧಾಃ ॥೨॥

ಮಹಾರಾಜನೇ! ದಂಡನೀತಿಯನ್ನು ಅವಶ್ಯವಾಗಿ ಅಳವಡಿಸಿಕೊಳ್ಳಬೇಕು. ಈ ದಂಡವೇ ಸಮಸ್ತಪ್ರಜೆಗಳನ್ನು ಪರಿಪಾಲನೆ ಮಾಡುತ್ತದೆ. ಎಲ್ಲರನ್ನೂ ಕೂಡ ಈ ದಂಡವೇ ರಕ್ಷಿಸುತ್ತದೆ. ಸಮಸ್ತ ಜಗತ್ತು ಮಲಗಿದ್ದರೂ ಕೂಡ ಈ ದಂಡವು ಎಚ್ಚರ-ವಾಗಿರುತ್ತದೆ. ವಿದ್ವಾಂಸರು ಈ ದಂಡವನ್ನು ಧರ್ಮವೆಂದು ಸಾರುತ್ತಾರೆ.

ಧರ್ಮಂ ಸಂರಕ್ಷತೇ ದಂಡಸ್ತಥೈವಾರ್ಥಂ ನರಾಧಿಪ।
ಕಾಮಂ ಸಂರಕ್ಷತೇ ದಂಡಸ್ತ್ರಿವರ್ಗೋ ದಂಡ ಉಚ್ಯತೇ ॥೩॥

ನರಾಧಿಪನೇ! ದಂಡವೇ ಧರ್ಮವನ್ನು ರಕ್ಷಿಸುತ್ತದೆ. ಅರ್ಥವನ್ನೂ ಕೂಡ ರಕ್ಷಣೆ ಮಾಡುತ್ತದೆ. ಕಾಮವನ್ನೂ ಕೂಡ ಈ ದಂಡವೇ ಪರಿಪಾಲನೆ ಮಾಡುತ್ತದೆ. ಧರ್ಮ, ಅರ್ಥ, ಕಾಮಗಳೆಂಬ ತ್ರಿವರ್ಗವೂ ಕೂಡ ದಂಡವೆಂದೇ ಕರೆಸಿಕೊಳ್ಳುತ್ತದೆ.

ದಂಡೇನ ರಕ್ಷ್ಯತೇ ಧಾನ್ಯಂ ಧನಂ ದಂಡೇನ ರಕ್ಷ್ಯತೇ।
ಏತದ್ ವಿದ್ವನ್ನುಪಾದತ್ಸ್ವ ಸ್ವಭಾವಂ ಪಶ್ಯ ಲೌಕಿಕಮ್ ॥೪॥

ಧಾನ್ಯಗಳ ರಕ್ಷಣೆಯೂ ಕೂಡ ದಂಡದಿಂದಲೇ ಆಗುತ್ತದೆ. ಧನದ ರಕ್ಷಣೆಯೂ ಕೂಡ ದಂಡದಿಂದಾಗುತ್ತದೆ. ಈ ರೀತಿಯಾಗಿ ತಿಳಿದು ದಂಡದ ಪರಿಣಾಮಗಳೇನು ಎಂಬುದನ್ನು ಅರ್ಥ ಮಾಡಿಕೊಂಡು, ನೀನು ಆ ದಂಡನೀತಿಯನ್ನು ಅಳವಡಿಸು. ಸಮಸ್ತ ಜಗತ್ತಿನ ಸ್ವಭಾವವನ್ನು ಇದರ ಮೂಲಕ ಅವಲೋಕಿಸು.

ರಾಜದಂಡಭಯಾದೇಕೇ ಪಾಪಾಃ ಪಾಪಂ ನ ಕುರ್ವತೇ।
ಯಮದಂಡಭಯಾದೇಕೇ ಪರಲೋಕಭಯಾದಪಿ ॥೫॥

ಕೆಲವರು ರಾಜದಂಡದ ಭಯದಿಂದ ಪಾಪವನ್ನು ಮಾಡುವುದಿಲ್ಲ. ಇನ್ನು ಕೆಲವರು ಯಮದಂಡದ ಭಯದಿಂದ ಪಾಪಕಾರ್ಯಗಳನ್ನು ಮಾಡುವುದಿಲ್ಲ. ಇನ್ನು ಕೆಲವರು ಪರಲೋಕದ ಭಯದಿಂದ ಪಾಪಕಾರ್ಯವನ್ನು ಮಾಡುವುದಿಲ್ಲ. ಹೀಗೆ ದಂಡವೇ ಎಲ್ಲರನ್ನು ಸನ್ಮಾರ್ಗದಲ್ಲಿ ನಡೆಸುತ್ತದೆ.

ವಿವರಣೆ - ಮತ್ತೊಬ್ಬರ ಈ ಲೋಕದಲ್ಲಿ ದಂಡದ ಭಯವು ಇಲ್ಲದಿದ್ದರೆ ಪ್ರತಿಯೊಬ್ಬರೂ ವ್ಯಭಿಚಾರಿಗಳಾಗಿರುತ್ತಿದ್ದರು. ಕಳ್ಳಕಾಕರರಾಗಿರುತ್ತಿದ್ದರು. ಅಧರ್ಮಮಾರ್ಗದಲ್ಲಿ ನಡೆಯುವ ಮೂಲಕ ಪಾತಕಿಗಳಾಗಿರುತ್ತಿದ್ದರು. ಕೆಲವರಿಗೆ ಲೋಕದ ಜನರು ಶಿಕ್ಷಿಸುತ್ತಾರೆಂಬ ಭಯ. ಕೆಲವರಿಗೆ ಸೆರೆಮನೆ ಮೊದಲಾದವುಗಳ ಭಯ. ಕೆಲವರಿಗೆ ರಾಜರುಗಳ ಭಯ. ಕೆಲವರಿಗೆ ಯಮದೇವರ ಭಯ. ಇನ್ನೂ ಕೆಲವರಿಗೆ ನರಕ ಮೊದಲಾದ ಪರಲೋಕಗಳ ಭಯ. ಶಿಕ್ಷೆಗೆ ಹೆದರಿಯೇ ಪ್ರತಿಯೊಬ್ಬರೂ ಕೂಡ ಅಪರಾಧಗಳನ್ನು ಮಾಡದೇ ಸನ್ಮಾರ್ಗದಲ್ಲಿ ನಡೆಯಲು ಪ್ರಯತ್ನಿಸುತ್ತಾರೆ. ದಂಡದ ಭಯವೇ ಇದ್ದಲ್ಲಿ ಹೀಗೆ ಸನ್ಮಾರ್ಗದಲ್ಲಿ ನಡೆಯಲು ಸಾಧ್ಯವಾಗುತ್ತಿರಲಿಲ್ಲ. ಪ್ರಸ್ತುತ ಜೀವನಕ್ಕೆ ಈ ಶ್ಲೋಕವು ಅತ್ಯಂತ ಅರ್ಥಪೂರ್ಣವಾಗಿದೆ.

ಪರಸ್ಪರಭಯಾದೇಕೇ ಪಾಪಾಃ ಪಾಪಂ ನ ಕುರ್ವತೇ।
ಏವಂ ಸಾಂಸಿದ್ಧಿಕೇ ಲೋಕೇ ಸರ್ವಂ ದಂಡೇ ಪ್ರತಿಷ್ಠಿತಮ್ ॥೬॥

ದಂಡಕ್ಕೆ ಹೆದರಿ ಒಬ್ಬರನ್ನೊಬ್ಬರು ಪರಸ್ಪರ ಕಬಳಿಸುವುದಿಲ್ಲ. ಈ ದಂಡವು ಲೋಕವನ್ನು ನಿಯಮಿಸುತ್ತಿದೆ. ಆದ್ದರಿಂದ ಎಲ್ಲವೂ ಕೂಡ ದಂಡದಲ್ಲಿಯೇ ಅಡಗಿದೆ.

ವಿವರಣೆ - ಕೆಲವರಲ್ಲಿ ಪರಸ್ಪರ ಭಯವಿರುತ್ತದೆ. ನಾನು ಅವನ ಸ್ವತ್ತನ್ನು ಅಪಹಾರ ಮಾಡಿದರೆ, ಅವನು ನಾಳೆ ನನ್ನ ಸ್ವತ್ತನ್ನು ಅಪಹರಿಸುತ್ತಾನೆಂಬ ಭಯವಿರುತ್ತದೆ. ನಾನು ಅವನನ್ನು ಕೊಂದರೆ ಅವನ ಕಡೆಯವರು ನನ್ನನ್ನು ಕೊಲ್ಲುತ್ತಾ-

ರೆಂಬ ಭಯವಿರುತ್ತದೆ. ಹೀಗೆ ಲೋಕದಲ್ಲಿ ಪರಸ್ಪರವಾಗಿಯೂ ದಂಡಪ್ರಯೋಗಗಳಿರುವುದರಿಂದ ಅದಕ್ಕೆ ಹೆದರಿಯೇ ಕೆಟ್ಟ ಕೆಲಸಗಳನ್ನು ಪಾಪಿಗಳೂ ಕೂಡ ಮಾಡುವುದಿಲ್ಲ. ಸಾಧುಗಳೂ ಕೂಡ ದಂಡಕ್ಕೆ ಹೆದರುತ್ತಾರೆ. ಪಾಪಿಷ್ಠರೂ ಕೂಡ ದಂಡಕ್ಕೆ ಹೆದರುತ್ತಾರೆ. ಲೋಕಮಾರ್ಯಾದೆಯನ್ನು ಅತಿಕ್ರಮವನ್ನು ಮಾಡದಿರಲು ಎಲ್ಲರೂ ದಂಡವನ್ನೇ ಅಪೇಕ್ಷಿಸುತ್ತಾರೆ. ಪಶುಗಳೂ ಕೂಡ ಯಜಮಾನನಿಗೆ ಹೆದರಿಯೇ ಉಪಕರಿಸುತ್ತವೆ. ಹೀಗೆ ಸಕಲವೂ ಕೂಡ ದಂಡದಲ್ಲಿಯೇ ಪ್ರತಿಷ್ಠಿತವಾಗಿದೆ.

ದಂಡಸ್ಯೈವ ಭಯಾದೇಕೇ ನ ಖಾದಂತಿ ಪರಸ್ಪರಮ್ ।
ಅಂಧೇ ತಮಸಿ ಮಜ್ಜೇಯುರ್ಯದಿ ದಂಡೋ ನ ಪಾಲಯೇತ್॥೭॥

ಶಿಕ್ಷೆಯ ಭಯದಿಂದಲೇ ಒಬ್ಬ ಮತ್ತೊಬ್ಬನನ್ನು ಕಡಿದು ತಿನ್ನುತ್ತಿಲ್ಲ. ಒಂದು ವೇಳೆ ಶಿಕ್ಷೆಯ ಭಯವೇ ಇಲ್ಲದಿದ್ದರೆ ಸಮಸ್ತಲೋಕವೇ ಅಂಧಂತಮಸ್ಸಿನಲ್ಲಿ ಮುಳುಗಿಹೋಗುತ್ತಿತ್ತು.

ವಿವರಣೆ - ಜಗತ್ತಿನಲ್ಲಿ ನರಮಾಂಸ ಭಕ್ಷಕರು ಏಕಿಲ್ಲ ಎಂದರೆ ? ಮತ್ತೊಬ್ಬರು ಶಿಕ್ಷಿಸುತ್ತಾರೆ ಎಂಬ ಭಯದಿಂದ ಅಷ್ಟೇ. ಶಿಕ್ಷೆಯ ಭಯವು ಇಲ್ಲದಿದ್ದರೆ ಪರಸ್ಪರ ಜನಗಳೇ ಕೊಚ್ಚಿ ತಿಂದುಹಾಕುತ್ತಿದ್ದರು. ರಾಜರು ದಂಡನೀತಿಯನ್ನು ಪ್ರಯೋಗ ಮಾಡದಿದ್ದರೆ ಸಮಸ್ತ ಜಗತ್ತು ದುಃಖಸಾಗರದಲ್ಲಿ ಮುಳುಗಿ ಹೋಗುತ್ತಿತ್ತು.

ಇಂದಿನ ಸಮಾಜದಲ್ಲೂ ನಾವು ಕಾನೂನಿನ ಮಹತ್ವವನ್ನು ಅರಿತಿದ್ದೇವೆ. ಎಲ್ಲಾ ಮಂತ್ರಿಗಳೂ ಕೂಡ ಕಾನೂನಿನ ಅಧೀನವಾಗಿಯೇ ಕೆಲಸವನ್ನು ಮಾಡುತ್ತಾರೆ. ನ್ಯಾಯಾಲಯಗಳೂ ಕೂಡ ಕಾನೂನಿನ ಅಧೀನವಾಗಿಯೇ ಕಾರ್ಯಗಳನ್ನು ನಿರ್ವಹಿಸುತ್ತವೆ. ಕಾನೂನಿಗೆ ಎಂಥ ಘಟಾನುಘಟಿಗಳೂ ಕೂಡ ಭಯಪಡುತ್ತಾರೆ. ಅದನ್ನೇ ಇಲ್ಲಿ ದಂಡನೀತಿ ಇತ್ಯಾದಿಯಾಗಿ ಕರೆಯುತ್ತಿದ್ದಾರೆ.

ಯಸ್ಮಾದದಾಂತಾನ್ ದಮಯತ್ಯಶಿಷ್ಟಾನ್ ದಂಡಯತ್ಯಪಿ ।
ದಮನಾದ್ ದಂಡಾನಾಚ್ಚೈವ ತಸ್ಮಾದ್ ದಂಡಂ ವಿದುರ್ಬುಧಾಃ ॥೮॥

ಸ್ವೇಚ್ಛಾಚಾರಿಗಳನ್ನು ನಿಗ್ರಹ ಮಾಡುವುದರಿಂದಲೇ ಇದಕ್ಕೆ ದಂಡ ಎಂದು

ಹೆಸರು. ದುಷ್ಟರನ್ನು ಶಿಕ್ಷೆಗೆ ಒಳಪಡಿಸುವುದರಿಂದಲೂ ಇದಕ್ಕೆ ದಂಡ ಎಂದು ಹೆಸರು. ದಮನ ಮಾಡುವುದರಿಂದ, ದಂಡನೆ ಮಾಡುವುದರಿಂದ ಇದಕ್ಕೆ ದಂಡ ಎಂಬುದಾಗಿ ವಿದ್ವಾಂಸರು ಕರೆಯುತ್ತಾರೆ.

ವಿವರಣೆ - 'ದಂಡಯತೀತಿ ದಂಡಃ' ಅಥವಾ 'ದಮಯತೀತಿ ದಂಡಃ' ಎಂಬ ವ್ಯುತ್ಪತ್ತಿಯನ್ನು ತಿಳಿಯಬೇಕು. ದಂಡಯತಿ ಎಂದರೆ ಹೊಡೆಯುವುದರಿಂದ ಎಂದರ್ಥ. ಛಡಿ ಏಟು ಕೊಡುವುದರಿಂದ, ಅಥವಾ ಗಲ್ಲುಶಿಕ್ಷೆ ಮೊದಲಾದವುಗಳನ್ನು ನೀಡುವುದರಿಂದ ಇದಕ್ಕೆ ದಂಡ ಎಂದು ಕರೆಯುತ್ತಾರೆ. 'ದಮಯತಿ ಇತಿ ದಂಡಃ' ಎಂಬುದಕ್ಕೆ ಅವನಲ್ಲಿರುವ ಎಲ್ಲ ಐಶ್ವರ್ಯವನ್ನು ಕಸಿದುಕೊಳ್ಳುವುದರಿಂದ ಅವನಲ್ಲಿರುವ ಒಳ್ಳೆಯ ಹೆಸರನ್ನು ಕಸಿದುಕೊಳ್ಳುವುದರಿಂದ ತನ್ಮೂಲಕವಾಗಿ ಸಮಾಜದಲ್ಲಿ ಎಂದೆಂದೂ ಮೇಲೆದ್ದು ಬಾರದಂತೆ ಮಾಡುವುದರಿಂದ 'ದಂಡ' ಎಂಬುದಾಗಿ ಕರೆಯುತ್ತಾರೆ. ಆದ್ದರಿಂದ ಯಾರೊಬ್ಬರೂ ಕೂಡ ಸ್ವೇಚ್ಛಾಚಾರಿಗಳಾಗಿ ಬದುಕಲು ಸಾಧ್ಯವಿಲ್ಲ.

ವಾಚಾ ದಂಡೋ ಬ್ರಾಹ್ಮಣಾನಾಂ ಕ್ಷತ್ರಿಯಾಣಾಂ ಭುಜಾರ್ಪಣಮ್।
ದಾನದಂಡಃ ಸ್ಮೃತೋ ವೈಶ್ಯೋ ನಿರ್ದಂಡಃ ಶೂದ್ರ ಉಚ್ಯತೇ ॥೯॥

ಎಲ್ಲರಿಗೂ ಕೂಡ ಸಮಾನವಾಗಿ ಶಿಕ್ಷೆಯನ್ನು ಕೊಡಬಾರದು. ಬ್ರಾಹ್ಮಣರಿಗೆ ಮಾತಿನಿಂದಷ್ಟೇ ಶಿಕ್ಷೆ. ಕ್ಷತ್ರಿಯನಿಗೆ ಯುದ್ಧದಲ್ಲಿ ತೊಡಗಿಸುವಿಕೆಯೇ ಶಿಕ್ಷೆ. ವೈಶ್ಯರಿಗೆ ಸಂಪತ್ತನ್ನು ಕಸಿದುಕೊಳ್ಳುವುದೇ ಶಿಕ್ಷೆ. ಶೂದ್ರರಿಗೆ ಸೇವಾವೃತ್ತಿಯಲ್ಲಿರುವಂತೆ ಮಾಡುವುದೇ ಶಿಕ್ಷೆ.

ವಿವರಣೆ - ಬ್ರಾಹ್ಮಣರಿಗೆ ಗಲ್ಲುಶಿಕ್ಷೆಯನ್ನು ಕ್ಷತ್ರಿಯನು ನೀಡಬಾರದು. ಅಥವಾ ಛಡಿಯೇಟು ಮೊದಲಾದವುಗಳನ್ನೂ ಕೂಡ ಕೊಡಬಾರದು. 'ಉತ್ತಮೇ ವಚಸಾ ಶಿಕ್ಷಾ' ಎಂಬ ಮಾತಿನಂತೆ ಮಾತಿನಿಂದ ನಿಂದಿಸಬೇಕು, ಗದರಿಸಬೇಕು. ಇಷ್ಟು ಮಾತ್ರ ಬ್ರಾಹ್ಮಣನಿಗೆ ನೀಡಬಹುದಾದ ಶಿಕ್ಷೆ. ಕ್ಷತ್ರಿಯರು ಅಪರಾಧವನ್ನು ಮಾಡಿದರೆ ಅವರನ್ನು ಯುದ್ಧದಲ್ಲಿ ತೊಡಗಿಸಬೇಕು. ಸೇನೆಯಲ್ಲಿ ಸೇರಿಸಿ ಯುದ್ಧವನ್ನು ಅವನ ಮೂಲಕ ಮಾಡಿಸಬೇಕು. ವೈಶ್ಯರಿಗೆ ಅವರ ಬಳಿ ಇರುವ ಎಲ್ಲಾ ಸಂಪತ್ತನ್ನು ಕಸಿದುಕೊಳ್ಳಬೇಕು. 'ನಿರ್ದಂಡಃ ಶೂದ್ರ ಉಚ್ಯತೇ' ಎಂಬಂತೆ

ಶೂದ್ರರಿಗೆ ದಂಡವೇ ಇಲ್ಲವೆಂದು ಹೇಳಿದಂತೆ ಕಾಣಿಸುತ್ತದೆ. ಶೂದ್ರನ ಮೂಲಕ ತನ್ನ ಸೇವೆಯನ್ನು ಮಾಡಿಸಿಕೊಳ್ಳುವುದೇ ಅವನಿಗೆ ನೀಡುವ ಶಿಕ್ಷೆ. ಆದರೆ ಇದು ಅವನ ವೃತ್ತಿಯಾಗಿರುವುದರಿಂದ 'ನಿರ್ದಂಡಃ' ಎಂಬುದಾಗಿ ಶ್ಲೋಕದಲ್ಲಿ ಹೇಳಿರುತ್ತಾರೆ.

ಟಿಪ್ಪಣಿ - ಕ್ಷತ್ರಿಯಾಣಾಂ ಭುಜಾರ್ಪಣಮ್ ಇತ್ಯತ್ರ ಭುಜಾರ್ಪಣಮ್ ಅನ್ಯೋನ್ಯಂ ಯುದ್ಧಾಯ ಭುಜಯೋರರ್ಪಣಮ್। 'ಭುಜಾರ್ಪಣ' ಎಂದರೆ ಯುದ್ಧದಲ್ಲಿ ಭುಜಪರಾಕ್ರಮವನ್ನು ಸಮರ್ಪಿಸುವಿಕೆ ಎಂದರ್ಥ.

ಅಸಮ್ಮೋಹಾಯ ಮರ್ತ್ಯಾನಾಮರ್ಥಸಂರಕ್ಷಣಾಯ ಚ।
ಮರ್ಯಾದಾ ಸ್ಥಾಪಿತಾ ಲೋಕೇ ದಂಡಸಂಜ್ಞಾ ವಿಶಾಂಪತೇ ॥೧೦॥

ರಾಜನೇ! ಮನುಷ್ಯರ ಮೋಹವು ದಂಡದಿಂದಲೇ ನಾಶವಾಗಲು ಸಾಧ್ಯ. ಅರ್ಥಸಂರಕ್ಷಣೆಯಾಗಬೇಕೆಂದರೂ ದಂಡನೀತಿಯನ್ನು ಅನುಸರಿಸಬೇಕು. ಲೋಕಮರ್ಯಾದೆಯೇ 'ದಂಡ' ಎಂಬ ಹೆಸರಿನಿಂದ ಕರೆಯಿಸಿಕೊಳ್ಳುತ್ತದೆ.

ಯತ್ರ ಶ್ಯಾಮೋ ಲೋಹಿತಾಕ್ಷೋ ದಂಡಶ್ಚರತಿ ಪೂರ್ವತಃ।
ಪ್ರಜಾಸ್ತತ್ರ ನ ಮುಹ್ಯಂತಿ ನೇತಾ ಚೇತ್ ಸಾಧು ಪಶ್ಯತಿ ॥೧೧॥

ಯಾವ ರಾಜ್ಯದಲ್ಲಿ ಕೆಂಪುಕಣ್ಣುಗಳಿಂದ ಕೂಡಿದ, ಕಪ್ಪುದೇಹದಿಂದ ಕೂಡಿರುವ ದಂಡಪುರುಷನು ದುಷ್ಟರನ್ನು ಶಿಕ್ಷಿಸುತ್ತಾನೋ, ಅಂಥ ದಂಡಪುರುಷನು ದಂಡಪಾಣಿಯಾಗಿ ಸಂಚರಿಸಲು ರಾಜನು ಅನುಕೂಲ ಮಾಡುತ್ತಾನೋ, ಅಂಥ ರಾಜ್ಯದಲ್ಲಿ ಪ್ರಜೆಗಳು ಮೋಹಪರವಾಗಿರುವುದಿಲ್ಲ.

ವಿವರಣೆ - ಯಮನನ್ನೇ ಇಲ್ಲಿ ದಂಡಪುರುಷನೆಂದು ವಿವಕ್ಷಿಸಲಾಗಿದೆ. ತಪ್ಪು ಮಾಡಿದರೆ ಆ ಯಮನು ಬಂದು ಸ್ವತಃ ಶಿಕ್ಷೆಯನ್ನು ನೀಡುತ್ತಾನೆ ಎಂದಭಿಪ್ರಾಯ. ಕಪ್ಪುದೇಹದಿಂದ ಕೂಡಿರುವ ಆ ಯಮನು ಕ್ರೋಧಾತಿಶಯದಿಂದ ಕೆಂಪುಕಣ್ಣುಗಳನ್ನು ಒಮ್ಮೆ ಬಿಟ್ಟರೆ ಸಾಕು, ಎಂಥ ಅಪರಾಧಿಗಳೂ ಕೂಡ ಭಯಪಡುತ್ತಾರೆ. ಅಂಥ ದಂಡಪುರುಷನನ್ನು ನೆನೆಸಿಕೊಂಡೇ ಕೆಟ್ಟದ್ದನ್ನು ಮಾಡುವುದಿಲ್ಲ ಎಂದಷ್ಟೇ ಅಲ್ಲ. ಕೆಟ್ಟದ್ದನ್ನು ಮಾಡಲು ಯೋಚನೆಯನ್ನೂ ಕೂಡ ಪ್ರಜೆಗಳು ಮಾಡು-

ವುದಿಲ್ಲ. ಇಂಥ ದಂಡಪುರುಷನು ಎಲ್ಲೆಡೆಯೂ ಸಂಚರಿಸುತ್ತಾನೆ. ಆದರೆ ರಾಜನು ಅತ್ಯಂತ ಧರ್ಮಯುಕ್ತನಾಗಿರಬೇಕು. ವಿನಯಾದಿ ಗುಣಗಳನ್ನು ಹೊಂದಿರಬೇಕು. ಅಂಥ ರಾಜ್ಯದಲ್ಲಿ ಮಾತ್ರ ದಂಡಪುರುಷನು ಸಂಚರಿಸುತ್ತಾನೆ.

ಬ್ರಹ್ಮಚಾರೀ ಗೃಹಸ್ಥಶ್ಚ ವಾನಪ್ರಸ್ಥೋऽಥ ಭಿಕ್ಷುಕಃ।
ದಂಡಸ್ಯೈವ ಭಯಾದೇತೇ ಮನುಷ್ಯಾ ವರ್ತ್ಮನಿ ಸ್ಥಿತಾಃ ॥೧೨॥

ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿ ಈ ನಾಲ್ಕು ಆಶ್ರಮದವರು ದಂಡಪುರುಷನ ಭಯದಿಂದಲೇ ತಮ್ಮ ತಮ್ಮ ಕರ್ತವ್ಯಗಳಲ್ಲಿ ನಿರತರಾಗಿದ್ದಾರೆ.

ವಿವರಣೆ - ಪ್ರತಿಯೊಬ್ಬರು ಅವರವರ ಆಶ್ರಮಧರ್ಮಗಳನ್ನು ಪರಿಪಾಲನೆ ಮಾಡಲೇ ಬೇಕು. ಇದೂ ಸಹ ದಂಡಪುರುಷನಾದ ಯಮಧರ್ಮನ ಭಯದಿಂದಲೇ ನಡೆಯುತ್ತಿದೆ ಎಂಬುದಾಗಿ ಇಲ್ಲಿ ತಿಳಿಸಿದ್ದಾರೆ.

ನಾಭೀತೋ ಯಜತೇ ರಾಜನ್ನಾಭೀತೋ ದಾತುಮಿಚ್ಛತಿ।
ನಾಭೀತಃ ಪುರುಷಃ ಕಶ್ಚಿತ್ ಸಮಯೇ ಸ್ಥಾತುಮಿಚ್ಛತಿ ॥೧೩॥

ದಂಡಪುರುಷನಿಗೆ ಹೆದರದವನು ಯಜ್ಞವನ್ನು ಆಚರಿಸುವುದಿಲ್ಲ. ಪಾಪದ ಭಯವಿಲ್ಲದವನು ದಾನವನ್ನು ಮಾಡುವುದಿಲ್ಲ. ಪಾಪದ ಭಯವಿಲ್ಲದವನು ತನ್ನ ಮಾತಿನ ಪ್ರಕಾರ ನಡೆಯಲು ಇಚ್ಛಿಸುವುದಿಲ್ಲ.

ವಿವರಣೆ - ಅನೇಕರು ಪಾಪದ ಭಯದಿಂದಲೇ ಯಜ್ಞ-ಯಾಗಾದಿಗಳನ್ನು ಆಚರಿಸುತ್ತಾರೆ. ಆ ಯಜ್ಞಯಾಗಾದಿಗಳ ಆಚರಣೆಯಿಂದ ಪಾಪಗಳು ಪರಿಹಾರವಾಗುತ್ತವೆ. ಮತ್ತು ಪುಣ್ಯಸಂಪಾದನೆ ಆಗುತ್ತದೆಂಬ ಭಾವನೆಯು ಇರುತ್ತದೆ. ಯಾರಿಗೆ ನಮ್ಮ ಪಾಪಕ್ಕೆ ಶಿಕ್ಷೆಯಾಗುತ್ತದೆಂಬ ಭಯವೇ ಇರುವುದಿಲ್ಲವೋ, ಅಂಥವರು ಯಜ್ಞವನ್ನು ಆಚರಿಸುವುದಿಲ್ಲ. ತಾವು ಸಂಪಾದಿಸಿದ ಹಣದ ದಾನವನ್ನೂ ಕೂಡ ಮಾಡುವುದಿಲ್ಲ. ಏಕೆಂದರೆ ತಮ್ಮ ಪಾಪಕ್ಕೆ ಯಾವುದೇ ಶಿಕ್ಷೆಯು ಇರುವುದಿಲ್ಲ. ಮತ್ತು ಹೇಳಿದಂತೆ ನಡೆದುಕೊಳ್ಳುವುದು ತುಂಬಾ ಮುಖ್ಯವಾದ ಧರ್ಮ. ಪ್ರತಿಜ್ಞಾಭಂಗವನ್ನು ಮಾಡಿದವನು ಪಾಪಿಷ್ಠನಾಗುತ್ತಾನೆ. ಒಂದುವೇಳೆ ದಂಡಪುರುಷನ ಭಯವೇ ಇಲ್ಲದಿದ್ದರೆ ಪ್ರತಿಜ್ಞಾಭಂಗಕ್ಕೆ ಯಾರೂ

ಸಹ ಹೆದರುವುದಿಲ್ಲ. ತಾವು ಹೇಳುವುದೇ ಒಂದು, ಮಾಡುವುದೇ ಮತ್ತೊಂದು ಎಂಬುದಾಗಿ ಪ್ರತಿಯೊಬ್ಬರೂ ಅಪ್ರಾಮಾಣಿಕರಾಗುತ್ತಾರೆ.

ನಾಚ್ಛಿತ್ತ್ವಾ ಪರಮರ್ಮಾಣಿ ನಾಕೃತ್ವಾ ಕರ್ಮ ದುಷ್ಕರಮ್ ।
ನಾಹತ್ವಾ ಮತ್ಸ್ಯಘಾತೀವ ಪ್ರಾಪ್ನೋತಿ ಮಹತೀಂ ಶ್ರಿಯಮ್ ॥೧೪॥

ಮರ್ಮಸ್ಥಾನವನ್ನು ಕತ್ತರಿಸದಿದ್ದರೆ, ಅಸಾಧ್ಯವಾದ ಕಾರ್ಯವನ್ನು ಮಾಡದಿದ್ದರೆ, ಮತ್ತೊಬ್ಬನನ್ನು ಕೊಲ್ಲದಿದ್ದರೆ ಬೆಸ್ತನಂತೆ ಐಶ್ವರ್ಯವನ್ನು ಸಂಪಾದನೆ ಮಾಡಲು ಸಾಧ್ಯವಾಗುವುದಿಲ್ಲ.

ವಿವರಣೆ - ಈ ಶ್ಲೋಕವನ್ನು ಆಪಾತತಃ ನೋಡಿದಾಗ ಹಿಂದಿನ ವಚನಗಳಿಗೆ ವಿರುದ್ಧವಾಗಿ ಇರುವಂತೆ ಕಾಣಿಸುತ್ತದೆ. ಮತ್ತೊಬ್ಬರಿಗೆ ದುಃಖ ನೀಡಬೇಕು. ಮತ್ತೊಬ್ಬರನ್ನು ಕೊಲ್ಲಬೇಕು. ತನ್ಮೂಲಕ ಹಣ ಸಂಪಾದನೆ ಮಾಡಬೇಕು ಎಂಬುದು ಈ ಶ್ಲೋಕದಿಂದ ತಿಳಿಯುವ ಅರ್ಥ. ಆದರೆ ಶತ್ರುಜನರನ್ನು ಸಂಹಾರ ಮಾಡಬೇಕೆಂಬುದಷ್ಟೇ ಇದರ ಅಭಿಪ್ರಾಯ. ಎಲ್ಲರನ್ನು ನೋಯಿಸಬೇಕು, ಅಥವಾ ಕೊಲ್ಲಬೇಕು ಎಂಬುದು ಇದರ ಅಭಿಪ್ರಾಯವಲ್ಲ. ದಂಡನೀತಿಯನ್ನು ರಾಜನಾದವನು ಅಳವಡಿಸಲೇ ಬೇಕು. ಆ ದಂಡನೀತಿಯನ್ನು ಅಳವಡಿಸುವ ಕ್ರಮವನ್ನು ಈ ಶ್ಲೋಕದಲ್ಲಿ ನಿರೂಪಣೆ ಮಾಡುತ್ತಿದ್ದಾರೆ. ಯಾರು ಪಾಪವನ್ನು ಮಾಡಿರುತ್ತಾನೋ, ಅಥವಾ ಪಾತಕಿಯಾಗಿರುತ್ತಾನೋ, ಅಥವಾ ಶತ್ರುವಾಗಿರುತ್ತಾನೋ, ಅಂಥವನ ಮರ್ಮಸ್ಥಾನಗಳನ್ನು ಕತ್ತರಿಸಬೇಕು. ಮತ್ತು ಅಂಥ ಶತ್ರುವನ್ನು ಸಂಹಾರ ಮಾಡಬೇಕು. ಅಸಾಧ್ಯವಾದ ಕಾರ್ಯಗಳಲ್ಲಿ ತೊಡಗಿಸಬೇಕು. ಅಂದರಷ್ಟೇ ವಿಪುಲವಾದ ಸಂಪತ್ತನ್ನು ಪಡೆದುಕೊಳ್ಳುತ್ತಾನೆ. ಬೆಸ್ತನು ಗಾಳಕ್ಕೆ ಮೀನನ್ನು ಹಾಕುವಂತೆ ನಯವಿನಯವಾದ ಮಾತುಗಳಿಂದ ಶತ್ರುವನ್ನು ಮೋಹಗೊಳಿಸಬೇಕು. ಸಮಯವನ್ನು ನೋಡಿ, ಶತ್ರುವಿನ ಮರ್ಮವನ್ನು ಭೇದಿಸಬೇಕು. ಅನಂತರ ಅಂಥ ಶತ್ರುವನ್ನು ಕೊಲ್ಲಬೇಕು. ಶತ್ರುವಿನ ಸಂಹಾರದ ವಿಷಯದಲ್ಲಿ, ಅಥವಾ ಪಾತಕಿಗೆ ಶಿಕ್ಷೆ ನೀಡುವ ಸಂದರ್ಭದಲ್ಲಿ ಭಯಂಕರನಾದ ದಂಡಪುರುಷನನ್ನು ತನ್ನಲ್ಲಿ ಆವಾಹನೆ ಮಾಡಿಕೊಳ್ಳಬೇಕು.

ಟಿಪ್ಪಣಿ - ನಾಚ್ಛಿತ್ತ್ವಾ ಪರಮರ್ಮಾಣಿ ಇತ್ಯತ್ರ ಪರಮರ್ಮಾಣಿ ಅಚ್ಛಿತ್ತ್ವಾ

ಮಹತೀಂ ಶ್ರಿಯಂ ನ ಪ್ರಾಪ್ನೋತಿ ಇತಿ ಸರ್ವತ್ರ ಉತ್ತರೇಣಾನ್ವಯಃ॥ ದುಷ್ಟನ ಮರ್ಮ-ಸ್ಥಾನಗಳನ್ನು ಕತ್ತರಿಸದಿದ್ದರೆ ವಿಫುಲವಾದ ಸಂಪತ್ತು ದೊರಕುವುದಿಲ್ಲ. ಹೀಗೆ ಮುಂದಕ್ಕೆ ಅನ್ವಯ ತಿಳಿಯಬೇಕು.

ನಾಘ್ನತಃ ಕೀರ್ತಿರಸ್ತೀಹ ನ ವಿತ್ತಂ ನ ಪುನಃ ಪ್ರಜಾಃ।
ಇಂದ್ರೋ ವೃತ್ರವಧೇನೈವ ಮಹೇಂದ್ರಃ ಸಮಪದ್ಯತ ॥೧೫॥

ಶತ್ರುವನ್ನು ಕೊಲ್ಲದ ರಾಜನಿಗೆ ಈ ಭೂಲೋಕದಲ್ಲಿ ಕೀರ್ತಿಯು ಲಭಿಸು-ವುದಿಲ್ಲ. ಐಶ್ವರ್ಯವು ಪ್ರಾಪ್ತವಾಗುವುದಿಲ್ಲ. ಪ್ರಜೆಗಳ ಅನುರಾಗವು ದೊರಕುವು-ದಿಲ್ಲ. ಇಂದ್ರನು ತನ್ನ ಪರಮಶತ್ರುವಾದ ವೃತ್ರಾಸುರನನ್ನು ಸಂಹಾರಮಾಡಿದ್ದ-ರಿಂದಲೇ ಮಹೇಂದ್ರಸ್ಥಾನವನ್ನು ಅಲಂಕರಿಸಿದನು.

ವಿವರಣೆ - ಪ್ರಜೆಗಳನ್ನು ರಕ್ಷಣೆ ಮಾಡುವುದಕ್ಕಾಗಿ ಕೀರ್ತಿ, ಹಣ, ಪ್ರಜೆಗಳ ಬೆಂಬಲ ಇವುಗಳನ್ನು ರಾಜನಾದವನು ಹೊಂದಲೇ ಬೇಕು. ಅದಕ್ಕಾಗಿ ದಂಡ-ನೀತಿಯನ್ನು ಅಳವಡಿಸಬೇಕು. ತನ್ಮೂಲಕವಾಗಿ ಶತ್ರುವನ್ನು ನಿಷ್ಕಾರುಣ್ಯದಿಂದ ಸಂಹಾರ ಮಾಡಬೇಕು.

ಯ ಏವ ದೇವಾ ಹಂತಾರಸ್ತಾಂಲ್ಲೋಕೋऽರ್ಚಯತೇ ಭೃಶಮ್।
ಹಂತಾ ರುದ್ರಸ್ತಥಾ ಸ್ಕಂದಃ ಶಕ್ರೋऽಗ್ನಿರ್ವರುಣೋ ಯಮಃ ॥೧೬॥

ಹಂತಾ ಕಾಲಸ್ತಥಾ ವಾಯುರ್ಮೃತ್ಯುರ್ವೈಶ್ರವಣೋ ರವಿಃ।
ವಸವೋ ಮರುತಃ ಸಾಧ್ಯಾ ವಿಶ್ವೇದೇವಾಶ್ಚ ಭಾರತ ॥೧೭॥

ಏತಾನ್ ದೇವಾನ್ನಮಸ್ಯಂತಿ ಪ್ರತಾಪಪ್ರಣತಾ ಜನಾಃ।
ನ ಬ್ರಹ್ಮಾಣಂ ನ ಧಾತಾರಂ ನ ಪೂಷಾಣಂ ಕಥಂಚನ ॥೧೮॥

ಯುಧಿಷ್ಠಿರನೇ! ಯಾವ ದೇವತೆಗಳು ದುಷ್ಟರನ್ನು, ಮತ್ತು ಶತ್ರುಗಳನ್ನು ಸಂಹಾರ ಮಾಡಿದ್ದಾರೋ, ಅಂಥ ದೇವತೆಗಳು ಇಂದು ಲೋಕದಲ್ಲಿ ಪೂಜಿತರಾ-ಗಿದ್ದಾರೆ. ಮಹಾರುದ್ರ, ಸ್ಕಂದ, ಇಂದ್ರ, ವರುಣ, ಯಮ, ವಾಯು, ಮೃತ್ಯು,

ಕುಬೇರ, ಸೂರ್ಯ, ಅಷ್ಟವಸುಗಳು ನಲವತ್ತೆಂಟು ಮರುತ್‌ದೇವತೆಗಳು, ಸಾಧ್ಯರು, ವಿಶ್ವೇದೇವತೆಗಳು ಇವರೆಲ್ಲರೂ ಕೂಡ ಶತ್ರುಗಳ ಸಂಹಾರವನ್ನು ಮಾಡಿಯೇ ಉತ್ತಮರಾಗಿದ್ದಾರೆ. ಆದರೆ ಇವರನ್ನು ಎಲ್ಲರೂ ಕೂಡ ಪೂಜ್ಯ-ಭಾವನೆಯಿಂದ ನಮಿಸುತ್ತಾರೆ. ಯಾರೊಬ್ಬರೂ ಕೂಡ ಈ ದೇವತೆಗಳನ್ನು ಕೊಲೆ ಮಾಡಿದವರೆಂದು, ನಿಷ್ಕರುಣಿಗಳೆಂದು ತಿರಸ್ಕಾರ ಮಾಡುವುದಿಲ್ಲ. ಈ ದೇವತೆಗಳ ಪ್ರತಾಪಶಕ್ತಿಯನ್ನು ಗಮನಿಸಿ, ವಿನೀತರಾಗಿ ಎಲ್ಲಾ ಭಕ್ತರು ನಿರಂತರವಾಗಿ ದೇವತೆ-ಗಳನ್ನು ನಮಸ್ಕಾರ ಮಾಡುತ್ತಾರೆ. ಬ್ರಹ್ಮನನ್ನು, ಧಾತೃವನ್ನು, ಪೂಷಣನನ್ನು ಈ ಕಾರಣಬಿಟ್ಟು, ಬೇರೆ ಯಾವುದೇ ಕಾರಣದಿಂದ ಭಕ್ತರು ಪೂಜಿಸುವುದಿಲ್ಲ.

ಮಧ್ಯಸ್ಥಾನ್ ಸರ್ವಭೂತೇಷು ದಾಂತಾನ್ ಶಮಪರಾಯಣಾನ್ ।
ಯಜಂತೇ ಮಾನವಾಃ ಕೇಚಿತ್ ಪ್ರಶಾಂತಾಃ ಸರ್ವಕರ್ಮಸು ॥೧೯॥

ಎಲ್ಲಾ ಭೂತಗಳಲ್ಲಿ ರಾಗದ್ವೇಷಗಳಿಲ್ಲದೇ ಸಮಾನಭಾವನೆಯಿಂದ ಅವರವರ ಯೋಗ್ಯತೆಗೆ ತಕ್ಕಂತೆ ಫಲಗಳನ್ನು ದೇವತೆಗಳು ನೀಡುತ್ತಾರೆ. ಆ ದೇವತೆಗಳು ಶಾಂತಿಪರಾಯಣರು, ಜಿತೇಂದ್ರಿಯರು ಆಗಿರುತ್ತಾರೆ. ಕೆಲವು ಮನುಷ್ಯರು ಅಂಥ ದೇವತೆಗಳ ಪ್ರೀತಿಗಾಗಿ ಅನೇಕ ಯಜ್ಞ-ಯಾಗಾದಿಗಳನ್ನು ಮಾಡುತ್ತಾರೆ. ಪೂಜೆ ಮಾಡುತ್ತಾರೆ. ಪ್ರತಿಯೊಂದು ಕರ್ಮಗಳ ಪ್ರಾರಂಭದಲ್ಲಿ ಅವರನ್ನು ಪ್ರಾರ್ಥಿಸುತ್ತಾರೆ.

ನಹಿ ಪಶ್ಯಾಮಿ ಜೀವಂತಂ ಲೋಕೇ ಕಂಚಿದಹಿಂಸಯಾ ।
ಸತ್ತ್ವೈಃ ಸತ್ತ್ವಾನಿ ಹಿ ಜೀವಂತಿ ದುರ್ಬಲೈರ್ಬಲವತ್ತರಾಃ ॥೨೦॥

ಯುಧಿಷ್ಠಿರನೇ! ಕೇವಲ ಅಹಿಂಸೆಯಿಂದ ಜೀವನ ಮಾಡಲು ಸಾಧ್ಯವೇ ಇಲ್ಲ. ಅಂಥವರನ್ನು ನಾನು ಇದುವರೆಗೂ ಕಂಡೂ ಇಲ್ಲ. ದುರ್ಬಲರಾದ ಪ್ರಾಣಿಗಳನ್ನು ತಿನ್ನುವುದರಿಂದಲೇ ಪ್ರಬಲವಾದ ಪ್ರಾಣಿಗಳು ಇಂದು ಜೀವಿಸುತ್ತಿದ್ದಾರೆ. ಇದುವೇ ಲೋಕದ ಸ್ವಭಾವ.

ನಕುಲೋ ಮೂಷಕಾನತ್ತಿ ಬಿಡಾಲೋ ನಕುಲಂ ತಥಾ ।
ಬಿಡಾಲಮತ್ತಿ ಶ್ವಾ ರಾಜನ್ ಶ್ವಾನಂ ವ್ಯಾಲಮೃಗಸ್ತಥಾ ॥೨೧॥

ಈ ಲೋಕದಲ್ಲಿ ಬಲಿಷ್ಠ ಪ್ರಾಣಿಗಳು ದುರ್ಬಲ ಪ್ರಾಣಿಗಳನ್ನು ತಿಂದು ಬದುಕುತ್ತವೆ. ಮುಂಗುಸಿಯು ಇಲಿಗಳನ್ನು ತಿನ್ನುತ್ತದೆ. ಬೆಕ್ಕು ಮುಂಗುಸಿಯನ್ನು ತಿನ್ನುತ್ತದೆ. ನಾಯಿಯು ಬೆಕ್ಕನ್ನು ತಿನ್ನುತ್ತದೆ. ಚಿರತೆಯು ನಾಯಿಯನ್ನು ತಿನ್ನುತ್ತದೆ.

ತಾನತ್ತಿ ಪುರುಷಃ ಸರ್ವಾನ್ ಪಶ್ಯ ಧರ್ಮೋ ಯಥಾಗತಃ।
ಪ್ರಾಣಸ್ಯಾನ್ನಮಿದಂ ಸರ್ವಂ ಜಂಗಮಂ ಸ್ಥಾವರಂ ಚ ಯತ್ ॥೨೨॥

ಈ ಎಲ್ಲಾ ಪ್ರಾಣಿಗಳನ್ನು ಮನುಷ್ಯನು ಕೊಂದು ತಿನ್ನುತ್ತಾನೆ. ಹೀಗೆ ಕಾಲಚಕ್ರವನ್ನು ನೀನೇ ಗಮನಿಸು. ಈ ಭೂಮಂಡಲದಲ್ಲಿರುವ ಎಲ್ಲಾ ಸ್ಥಾವರ ಜಂಗಮಗಳು ಪ್ರಾಣಧಾರಣೆಗೆ ಅನ್ನರೂಪವಾಗಿಯೇ ನಿಂತಿವೆ.

ವಿಧಾನಂ ದೇವವಿಹಿತಂ ತತ್ರ ವಿದ್ವಾನ್ನ ಮುಹ್ಯತಿ।
ಯಥಾ ಸೃಷ್ಟೋಽಸಿ ರಾಜೇಂದ್ರ ತಥಾ ಭವಿತುಮರ್ಹಸಿ ॥೨೩॥

ಹೀಗೆ ದುರ್ಬಲ ಪ್ರಾಣಿಗಳನ್ನು ತಿಂದು ಬದುಕಬೇಕೆಂಬುದನ್ನು ದೈವವೇ ಸೃಷ್ಟಿ ಮಾಡಿದೆ. ಇದರಲ್ಲಿ ಜ್ಞಾನಿಯಾದವನು ಮೋಹವನ್ನು ಹೊಂದಿರುವುದಿಲ್ಲ. ವಿಧಾತೃವು ಹೇಗೆ ನಿನ್ನನ್ನು ಸೃಷ್ಟಿ ಮಾಡಿರುವನೋ, ಅದಕ್ಕನುಗುಣವಾಗಿ ನಡೆಯುವುದು ನಿನ್ನ ಕರ್ತವ್ಯವಾಗಿದೆ.

ವಿವರಣೆ - ದುರ್ಬಲ ಪ್ರಾಣಿಗಳನ್ನು ತಿಂದು ಬದುಕುವುದು ಅಧರ್ಮವಲ್ಲ. ಇದನ್ನು ದೇವರೇ ಸೃಷ್ಟಿ ಮಾಡಿದ್ದಾನೆ. ಹೀಗಿರುವಾಗ ಶತ್ರುಗಳನ್ನು ಪಾತಕಿಗಳನ್ನು ಸಂಹಾರ ಮಾಡುವುದು ನಿನಗೆ ಅತ್ಯಂತ ಉಚಿತವೇ ಆಗಿದೆ. ಇದು ನಿನ್ನ ಧರ್ಮವೇ ಆಗಿದೆ. ಕ್ಷತ್ರಿಯ ವಂಶದಲ್ಲಿ ಜನಿಸಿದ ನಿನಗೆ ವಿಹಿತವಾದದ್ದು ಶತ್ರುಸಂಹಾರ. ಇದನ್ನು ಬಿಟ್ಟರೆ ವರ್ಣಾಶ್ರಮಧರ್ಮಗಳಿಂದ ನೀನು ಚ್ಯುತನಾಗುವಿ.

ವಿನೀತಕ್ರೋಧಹರ್ಷಾ ಹಿ ಮಂದಾ ವನಮುಪಾಶ್ರಿತಾಃ।
ವಿನಾ ವಧಂ ನ ಕುರ್ವಂತಿ ತಾಪಸಾಃ ಪ್ರಾಣಯಾಪನಮ್ ॥೨೪॥

ಆದರೆ ಮೂಢರಾದ ಕ್ಷತ್ರಿಯರು ಕ್ರೋಧ ಹರ್ಷಗಳೆರಡನ್ನು ಬಿಟ್ಟು, ಕಾಡಿಗೆ

ಹೋಗಿ ತಪಸ್ಸನ್ನು ಮಾಡುತ್ತಾರೆ. ಆದರೆ ಅರಣ್ಯದಲ್ಲಿಯೂ ಕೂಡ ತಮ್ಮ ಆಹಾರಕ್ಕಾಗಿ ಪ್ರಾಣಿಗಳ ವಧೆಯನ್ನು ಮಾಡಲೇಬೇಕು.

ವಿವರಣೆ - ಕ್ಷತ್ರಿಯರಾದವರು ದುಷ್ಟರಲ್ಲಿ ಕ್ರೋಧವನ್ನು, ಶಿಷ್ಟರಲ್ಲಿ ಹರ್ಷವನ್ನು ಹೊಂದಿರಬೇಕು. ದುಷ್ಟರನ್ನು ಶಿಕ್ಷಿಸಿ ರಾಜ್ಯವನ್ನು ಪರಿಪಾಲನೆ ಮಾಡಬೇಕು. ಇದನ್ನೆಲ್ಲಾ ತೊರೆದು ಕಾಡಿಗೆ ಹೋಗುವುದು ಅವರ ಧರ್ಮವಲ್ಲ. ಅಹಿಂಸಾಪಾಲನೆಯ ದೃಷ್ಟಿಯಿಂದ ಕಾಡಿಗೆ ಹೋದರೂ ಕೂಡ ಅವರ ಉದ್ದೇಶವು ಈಡೇರುವುದಿಲ್ಲ. ಕಾಡಿಗೆ ಹೋದರೆ ತಮ್ಮ ಪ್ರಾಣಧಾರಣೆಗೆ ಅಲ್ಲಿಯೂ ಕೂಡ ತಮ್ಮ ಸ್ವಭಾವಕ್ಕೆ ಅನುಗುಣವಾಗಿ ಅವರು ಪ್ರಾಣಿಹಿಂಸೆಯನ್ನು ಮಾಡಬೇಕು. ಗೆಡ್ಡೆ-ಗೆಣಸುಗಳನ್ನು ತಿಂದಾಗಲೂ ಅವುಗಳು ಸಜೀವವಾದ್ದರಿಂದ ಅಲ್ಲಿರುವ ಜೀವಗಳಿಗೂ ಕೂಡ ಹಿಂಸೆ ಮಾಡಿದಂತಾಗುತ್ತದೆ. ಆದ್ದರಿಂದ ಅಹಿಂಸಾವೃತ್ತಿಯು ಕ್ಷತ್ರಿಯರಿಂದ ಪಾಲಿಸಲು ಸಾಧ್ಯವೇ ಆಗುವುದಿಲ್ಲ. ಅದು ಅಧರ್ಮವೂ ಕೂಡ ಆಗಿರುತ್ತದೆ.

ಟಿಪ್ಪಣಿ - ಏನಾ ವಧಮ್ ಇತ್ಯತ್ರ ವಧಂ ಕಂದಮೂಲಾದಿಸ್ಥಾವರವಧಮ್ । ಕಾಡಿನಲ್ಲಿ ಮಾಡುವ ವಧೆಯೆಂದರೆ ಗೆಡ್ಡೆಗೆಣಸು ಮೊದಲಾದ ಸ್ಥಾವರಪದಾರ್ಥಗಳ ವಧೆ ಎಂದೇ.

ಉದಕೇ ಬಹವಃ ಪ್ರಾಣಾಃ ಪೃಥಿವ್ಯಾಂ ಚ ಫಲೇಷು ಚ ।
ನಚ ಕಶ್ಚಿನ್ನ ತಾನ್ ಹಂತಿ ಕಿಮನ್ಯತ್ ಪ್ರಾಣಯಾಪನಾತ್ ॥೨೫॥

ಜಲದಲ್ಲಿ, ಭೂಮಿಯಲ್ಲಿ, ಕಾಡಿನಲ್ಲಿ ಸಿಗುವ ಫಲಗಳಲ್ಲಿ ಎಷ್ಟೋ ಪ್ರಾಣಿಗಳು ಇರುತ್ತವೆ. ಆ ಪ್ರಾಣಿಗಳನ್ನು ಕೊಲ್ಲದೇ ಜೀವಿಸಲು ಯಾರಿಂದಲೂ ಸಾಧ್ಯವಿಲ್ಲ.

ವಿವರಣೆ - ಪ್ರಾಣಿ ಹಿಂಸೆ ಮಾಡಬಾರದೆಂಬ ದೃಷ್ಟಿಯಿಂದ ಮೊಲ, ಜಿಂಕೆ ಮೊದಲಾದವುಗಳನ್ನು ಕೊಲ್ಲದೇ ಇದ್ದರೂ ಕೂಡ ಕಂದಮೂಲಫಲಗಳನ್ನು ತಿನ್ನಬೇಕು. ಆದರೆ ಅವುಗಳಲ್ಲೂ ಕೂಡ ಎಷ್ಟೋ ಪ್ರಾಣಿಗಳಿರುತ್ತವೆ. ಅವುಗಳನ್ನೂ ಕೂಡ ನಾನು ತಿನ್ನುವುದಿಲ್ಲ. ನೀರನ್ನಷ್ಟೇ ಕುಡಿಯುತ್ತೇನೆ ಎಂದು ಪ್ರತಿಜ್ಞೆ ಮಾಡಿದರೂ ಕೂಡ ಆ ನೀರಿನಲ್ಲೂ ಕೂಡ ಅದೆಷ್ಟೋ ಪ್ರಾಣಿಗಳಿರುತ್ತವೆ. ಹೀಗೆ ಸೂಕ್ಷ್ಮಾತಿಸೂಕ್ಷ್ಮವಾದ ಅನೇಕಪ್ರಾಣಿಗಳನ್ನು ಕೊಲ್ಲದೇ ಬದುಕಲು ಯಾರಿಂದಲೂ

ಸಾಧ್ಯವಿಲ್ಲ. ಆದ್ದರಿಂದ ಅಹಿಂಸಾವೃತ್ತಿಯಲ್ಲಿ ಜೀವಿಸುವುದು ಯಾರಿಂದಲೂ ಸಾಧ್ಯವಾಗದ ಮಾತು.

ಟಿಪ್ಪಣಿ– ನಚ ಕಶ್ಚಿನ್ನ ತಾನ್ ಹಂತಿ ಇತ್ಯತ್ರ ಕಶ್ಚಿದಪಿ ತಾನ್ ಹಂತೀತಿ ನ।

'ನಚ ಕಶ್ಚಿನ್ನ ತಾನ್ ಹಂತಿ' ಎಂಬಲ್ಲಿ ಯಾರೊಬ್ಬನೂ ಕೂಡ ಈ ಪ್ರಾಣಿಗಳನ್ನು ಕೊಲ್ಲುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ.

ಸೂಕ್ಷ್ಮಯೋನೀನಿ ಭೂತಾನಿ ತರ್ಕಗಮ್ಯಾನಿ ಕಾನಿಚಿತ್ ।
ಪಕ್ಷ್ಮಣೋऽಪಿ ನಿಪಾತೇನ ಯೇಷಾಂ ಸ್ಯಾತ್ ಸ್ಕಂಧಪರ್ಯಯಃ ॥೨೬॥

ಈ ಜಗತ್ತಿನಲ್ಲಿ ಅತ್ಯಂತ ಸೂಕ್ಷ್ಮದೇಹವನ್ನು ಹೊಂದಿದ ಅನೇಕ ಪ್ರಾಣಿಗಳಿವೆ. ಇನ್ನೂ ಕೆಲವು ಕಣ್ಣಿಗೂ ಕಾಣದ ಊಹೆಯಿಂದಷ್ಟೇ ತಿಳಿಯಬೇಕಾದ ಪ್ರಾಣಿಗಳೂ ಇವೆ. ಆಶ್ಚರ್ಯವೆಂದರೆ ಕಣ್ಣಿನ ರೆಪ್ಪೆ ಆಡಿಸುವುದರಿಂದಲೇ ಹೆಗಲನ್ನೇ ಮುರಿದುಕೊಳ್ಳುವ ಸೂಕ್ಷ್ಮಜೀವಿಗಳು ಎಷ್ಟೋ ಇವೆ.

ಟಿಪ್ಪಣಿ – ಸ್ಕಂಧಪರ್ಯಯ ಇತ್ಯತ್ರ ಸ್ಕಂಧಸ್ಯ ಪರ್ಯಯಃ ವಿಪರ್ಯಯೋ ನಾಶಃ

'ಸ್ಕಂಧಪರ್ಯಯಃ' ಎಂಬಲ್ಲಿ 'ಸ್ಕಂಧಸ್ಯ ಪರ್ಯಯಃ' ಎಂದು ವಿಗ್ರಹ. ಪರ್ಯಯ ಶಬ್ದಕ್ಕೆ ವಿಪರ್ಯಯ ಎಂದರ್ಥ. ನಾಶ ಎಂದಭಿಪ್ರಾಯ. ಹೆಗಲಿನ ನಾಶ ಎಂದು ಇದರ ಅರ್ಥ.

ಗ್ರಾಮಾನ್ನಿಷ್ಕ್ರಮ್ಯ ಮುನಯೋ ವಿಗತಕ್ರೋಧಮತ್ಸರಾಃ ।
ವನೇ ಕುಟುಂಬಧರ್ಮಾಣೋ ದೃಶ್ಯಂತೇ ಪರಿಮೋಹಿತಾಃ ॥೨೭॥

ಕೆಲವು ಮುನಿಗಳು ಕೋಪ, ಅಸೂಯೆ ಮೊದಲಾದವುಗಳನ್ನು ಪರಿತ್ಯಾಗ ಮಾಡಿ, ತಮ್ಮ ಊರನ್ನೇ ಬಿಟ್ಟು ಕಾಡಿಗೆ ಹೋಗುತ್ತಾರೆ. ಆದರೆ ಆ ಕಾಡಿನಲ್ಲಿ ಕುಟುಂಬದ ಪರಿಪಾಲನೆಯಲ್ಲಿ ತೊಡಗುತ್ತಾರೆ. ಪತ್ನಿ-ಪುತ್ರಾದಿಗಳ ಅನುರಾಗದಲ್ಲಿ ಮೋಹಿತರಾಗುತ್ತಾರೆ.

ಭೂಮಿಂ ಭಿತ್ತ್ವೌಷಧೀಶ್ಚಿತ್ತ್ವಾ ವೃಕ್ಷಾದೀನಂಡಜಾನ್ ಪಶೂನ್ ।
ಮನುಷ್ಯಾಸ್ತನ್ವತೇ ಯಜ್ಞಾಂಸ್ತೇ ಸ್ವರ್ಗಂ ಪ್ರಾಪ್ನುವಂತಿ ಚ ॥೨೮॥

ಮನುಷ್ಯರು ಯಾಗವನ್ನು ಮಾಡುವುದಕ್ಕಾಗಿ ಭೂಮಿಯನ್ನು ಅಗೆಯುತ್ತಾರೆ. ಔಷಧಿ ಸಸ್ಯಗಳನ್ನು ಕಡಿಯುತ್ತಾರೆ. ವೃಕ್ಷಗಳನ್ನು ಕತ್ತರಿಸುತ್ತಾರೆ. ಪಶು-ಪಕ್ಷಾದಿಗಳನ್ನು ಕೊಲ್ಲುತ್ತಾರೆ. ಅನಂತರವೇ ಯಾಗವನ್ನು ಮಾಡಲು ಉದ್ಯುಕ್ತರಾಗುತ್ತಾರೆ. ಇಂಥ ಯಾಗವನ್ನು ಮಾಡುವುದರಿಂದ ಸ್ವರ್ಗವನ್ನೂ ಕೂಡ ಪಡೆಯುತ್ತಾರೆ.

ವಿವರಣೆ - ಹಿಂದಿನ ಶ್ಲೋಕದಲ್ಲಿ ಅಹಿಂಸೆಯನ್ನು ಪರಿಪಾಲನೆ ಮಾಡುವುದಕ್ಕಾಗಿ ಕೆಲವರು ಕಾಡಿಗೆ ಹೋಗುತ್ತಾರೆ. ಆದರೆ ಪತ್ನಿ-ಪುತ್ರಾದಿಗಳ ಮೋಹದಿಂದ ಪೀಡಿತರಾಗಿ ಇಹಲೋಕ ಹಾಗೂ ಪರಲೋಕಗಳೆರಡನ್ನೂ ಕಳೆದುಕೊಳ್ಳುತ್ತಾರೆಂದು ಹೇಳಲಾಯಿತು. ಇಲ್ಲಿ ಕ್ರೋಧ ಅಸೂಯೆಗಳನ್ನು ಪರಿತ್ಯಾಗ ಮಾಡಿ, ವಾನಪ್ರಸ್ಥರಾಗಿ ಕಾಡಿಗೆ ಹೋಗಿ, ಕಾಮಕ್ಕೆ ತುತ್ತಾಗಿ ಜೀವನವನ್ನು ವ್ಯರ್ಥ ಮಾಡಿಕೊಳ್ಳುವುದಕ್ಕಿಂತ ಗ್ರಾಮದಲ್ಲಿಯೇ ಇದ್ದು, ಯಜ್ಞ-ಯಾಗಾದಿಗಳ ಆಚರಣೆ ಮಾಡಬೇಕು. ಕರ್ತವ್ಯಕರ್ಮಗಳಲ್ಲಿ ನಿರತರಾಗಿದ್ದು ಮತ್ತೊಬ್ಬರಿಗೆ ಹಿಂಸಾಚಾರದಂತೆ ಕಾಣುತ್ತಿದ್ದರೂ ಕೂಡ ವಿಹಿತವಾದ ಸತ್ಕರ್ಮಗಳನ್ನು ಆಚರಣೆ ಮಾಡಿ, ಯಜ್ಞ-ಯಾಗಾದಿಗಳನ್ನು ಆಚರಿಸಿದಾಗ ಸ್ವರ್ಗವೇ ಅವನಿಗೆ ದೊರಕುತ್ತದೆ. ಕಾಡಿಗೆ ಹೋಗಿ ತಮ್ಮ ಆಶ್ರಮಧರ್ಮವನ್ನು ಪರಿಪಾಲನೆ ಮಾಡದೇ ಇರುವುದಕ್ಕಿಂತ ರಾಜ್ಯದಲ್ಲಿಯೇ ಇದ್ದು, ತಮ್ಮ ಗೃಹಸ್ಥಾಶ್ರಮದ ಕರ್ತವ್ಯಗಳನ್ನು ಮಾಡುವುದು ಅತ್ಯಂತ ಶ್ರೇಯಸ್ಕರ ಎಂಬುದಾಗಿ ಹೇಳುತ್ತಿದ್ದಾರೆ.

ದಂಡನೀತ್ಯಾಂ ಪ್ರಣೀತಾಯಾಂ ಸರ್ವೇ ಸಿದ್ಧ್ಯಂತ್ಯುಪಕ್ರಮಾಃ।
ಕೌಂತೇಯ ಸರ್ವಭೂತಾನಾಂ ತತ್ರ ಮೇ ನಾಸ್ತಿ ಸಂಶಯಃ ॥೨೯॥

ಕೌಂತೇಯನೇ! ದಂಡನೀತಿಯನ್ನು ಸುವ್ಯವಸ್ಥಿತವಾಗಿ ಅನುಷ್ಠಾನಕ್ಕೆ ತಂದಾಗ ಎಲ್ಲಾ ಪ್ರಾಣಿಗಳ ಸಕಲ ಪ್ರಯತ್ನಗಳು ಸಾರ್ಥಕವಾಗುತ್ತವೆ. ಈ ವಿಷಯದಲ್ಲಿ ನನಗೆ ಸ್ವಲ್ಪವೂ ಸಂಶಯವಿಲ್ಲ.

ವಿವರಣೆ - ದಂಡನೀತಿಯನ್ನು ಅಳವಡಿಸಿಕೊಳ್ಳುವುದು ಸ್ವಾರ್ಥಕ್ಕಾಗಿ ಅಲ್ಲ. ಅಥವಾ ಮತ್ತೊಬ್ಬರಿಗೆ ವಿನಾಕಾರಣ ಹಿಂಸೆ ಮಾಡುವುದಕ್ಕೂ ಅಲ್ಲ. ಪ್ರಜೆಗಳಿಗೆ ಹಿತವಾಗುವುದಕ್ಕೋಸ್ಕರ ಅವರ ಶ್ರಮಗಳೆಲ್ಲವೂ ಸಾರ್ಥಕವಾಗುವುದಕ್ಕೋಸ್ಕರ ಈ ದಂಡನೀತಿಯನ್ನು ರಾಜನಾದವನು ಅಳವಡಿಸಬೇಕು. ಆಗಷ್ಟೇ ಎಲ್ಲಾ ಪ್ರಜೆಗಳ ಸಾಧನೆಯು ಪೂರ್ಣವಾಗುತ್ತದೆ.

ದಂಡಶ್ಚೇನ್ನ ಭವೇಲ್ಲೋಕೇ ವಿನಶ್ಯೇಯುರಿಮಾ ಪ್ರಜಾಃ।
ಜಲೇ ಮತ್ಸ್ಯಾನಿವಾಭಕ್ಷ್ಯಾನ್ ದುರ್ಬಲಾನ್ ಬಲವತ್ತರಾಃ ॥೩೦॥

ಒಂದು ವೇಳೆ ದಂಡನೀತಿಯನ್ನು ಅಳವಡಿಸದಿದ್ದರೆ, ಈ ಎಲ್ಲ ಪ್ರಜೆಗಳು ನಾಶವನ್ನು ಹೊಂದುತ್ತಾರೆ. ನೀರಿನಲ್ಲಿರುವ ದೊಡ್ಡ ಮೀನುಗಳು, ಚಿಕ್ಕ ಮೀನುಗಳನ್ನು ತಿಂದು ಬದುಕುವಂತೆ ಬಲಿಷ್ಠರಾದವರು ದುರ್ಬಲರನ್ನು ನಾಶಗೊಳಿಸಿ, ಬದುಕುತ್ತಾರೆ.

ಸತ್ಯಂ ಚೇದಂ ಬ್ರಹ್ಮಣಾ ಪೂರ್ವಮುಕ್ತಂ
ದಂಡಃ ಪ್ರಜಾ ರಕ್ಷತಿ ಸಾಧು ನೀತಃ।
ಪಶ್ಯಾಗ್ನಯಶ್ಚ ಪ್ರತಿಶಾಮ್ಯಂತ್ಯಭೀತಾಃ
ಸಂತರ್ಜಿತಾ ದಂಡಭಯಾಜ್ಜ್ವಲಂತಿ ॥೩೧॥

''ಸುವ್ಯವಸ್ಥಿತವಾಗಿ ಪ್ರಯೋಗಿಸಲ್ಪಟ್ಟ ದಂಡವು ಪ್ರಜೆಗಳನ್ನು ರಕ್ಷಣೆ ಮಾಡುತ್ತದೆ'' ಎಂಬ ಸತ್ಯವಾದ ಮಾತನ್ನು ಬ್ರಹ್ಮನು ಹಿಂದೆಯೇ ಹೇಳಿದ್ದನು. ಯುಧಿಷ್ಠಿರನೇ ನೀನೇ ಪ್ರತ್ಯಕ್ಷವಾಗಿ ನೋಡು. ಶಾಂತವಾದ ಅಗ್ನಿಗಳು ಪೂತ್ಕಾರದ ಭಯದಿಂದಲೇ ಉಜ್ವಲವಾಗಿ ಹೊತ್ತಿಕೊಂಡು ಉರಿಯಲು ತೊಡಗುತ್ತವೆ.

ಟಿಪ್ಪಣಿ- ಬ್ರಾಹ್ಮಣನು ಕರ್ತವ್ಯವಿಮುಖನಾದಾಗ ಮಾತಿನಿಂದಷ್ಟೇ ಅವನಿಗೆ ಶಿಕ್ಷೆಯನ್ನು ವಿಧಿಸಲಾಗಿದೆ. ಅಗ್ನಿಯು ಶಾಂತವಾದಾಗ ಪೂತ್ಕಾರದಿಂದಷ್ಟೇ ಶಿಕ್ಷೆಯು ವಿಹಿತವಾಗಿದೆ. ಪೂತ್ಕಾರ ಮಾಡಿದಾಗ ಆರಿಹೋದ ಅಗ್ನಿಯು ಹೊತ್ತಿಕೊಳ್ಳುತ್ತದೆ. ದುರ್ಗಂಧವಾದ ಮಾಂಸಕ್ಕೆ ಭಯಪಟ್ಟ ಅಗ್ನಿಯು ಶಾಂತವಾಗಿ ಬಿಡುತ್ತದೆ. ಆಗ ಮತ್ತಷ್ಟು ಕಟ್ಟಿಗೆಗಳನ್ನು ಹಾಕಿ, ಪೂತ್ಕಾರವನ್ನು ಮಾಡಿದಾಗ ಭುಗ್ಗೆಂದು ಹೊತ್ತಿಕೊಂಡು ಉರಿಯುತ್ತದೆ. ಅಗ್ನಿಯು ಆ ದುರ್ಗಂಧವಾದ ಮಾಂಸವನ್ನೂ ಕೂಡ ದಂಡಭಯದಿಂದಲೇ ಸುಡುತ್ತದೆ.

ಅಂಧಂ ತಮ ಇವೇದಂ ಸ್ಯಾನ್ನ ಪ್ರಜ್ಞಾಯೇತ ಕಿಂಚನ।
ದಂಡಶ್ಚೇನ್ನ ಭವೇಲ್ಲೋಕೇ ವಿಭಜನ್ ಸಾಧ್ವಸಾಧುನೀ ॥೩೨॥

ಒಂದು ವೇಳೆ ''ಇದು ಒಳ್ಳೆಯದು, ಇದು ಕೆಟ್ಟದ್ದು'' ಎಂಬುದನ್ನು ವಿಭಾಗ ಮಾಡದಿದ್ದರೆ ಸಜ್ಜನರನ್ನು ಪರಿಪಾಲನೆ ಮಾಡಿ, ದುರ್ಜನರನ್ನು ನಿಗ್ರಹ ಮಾಡದಿದ್ದರೆ, ಈ ಲೋಕವೇ ಅಂಧಂತಮಸ್ಸಿನಿಂದ ತುಂಬುತ್ತಿತ್ತು. ಯಾರು ದುಷ್ಟರು, ಯಾರು ಶಿಷ್ಟರು ಎಂಬ ವಿಭಾಗವೇ ಇಲ್ಲದಂತಾಗುತ್ತಿತ್ತು.

ಯೇಽಪಿ ಸಂಭಿನ್ನಮರ್ಯಾದಾ ನಾಸ್ತಿಕಾ ವೇದನಿಂದಕಾಃ।
ತೇಽಪಿ ಭೋಗಾಯ ಕಲ್ಪಂತೇ ದಂಡೇನಾಶು ನಿಪೀಡಿತಾಃ ॥೩೩॥

ಯಾರು ಧರ್ಮದ ಚೌಕಟ್ಟನ್ನು ದಾಟಿ ನಡೆಯುತ್ತಾರೋ, ನಾಸ್ತಿಕರಾಗುತ್ತಾರೋ, ವೇದಗಳನ್ನು ನಿಂದನೆ ಮಾಡುತ್ತಾರೋ, ಅಂಥವರಿಗೆ ರಾಜದಂಡದಿಂದ ಶಿಕ್ಷೆಯನ್ನು ನೀಡಲೇ ಬೇಕು. ಆಗ ಅಂಥ ನಾಸ್ತಿಕರೂ ಕೂಡ ದಂಡಭಯದಿಂದ ಧರ್ಮದ ಚೌಕಟ್ಟಿನೊಳಗೆ ಬದುಕುತ್ತಾರೆ.

ಟಿಪ್ಪಣಿ - ಕೆಲವರು ಸಂಪರ್ಕದಿಂದ ಅಥವಾ ಅಜ್ಞಾನಾದಿಗಳಿಂದ ನಾಸ್ತಿಕರಾಗಿರುತ್ತಾರೆ. ವೇದಗಳನ್ನು ಏಕೆ ನಂಬಬೇಕೆಂದು ಕುವಾದ ಮಾಡುತ್ತಾರೆ. ಹಿತೋಪದೇಶವನ್ನು ಮಾಡಿದಾಗಲೂ ಒಪ್ಪದಿದ್ದರೆ ಅವರಿಗೆ ದಂಡಪ್ರಯೋಗವನ್ನೇ ಮಾಡಬೇಕು. ಆಗ ಭಯಪಟ್ಟು ಧರ್ಮಮಾರ್ಗದಲ್ಲಿ ಬದುಕಲು ಪ್ರಯತ್ನಿಸುತ್ತಾರೆ. ಹೀಗೆ ಧರ್ಮಬಾಹಿರರನ್ನೂ ಕೂಡ, ನಾಸ್ತಿಕರನ್ನೂ ಕೂಡ ಸರಿಯಾದ ಮಾರ್ಗದಲ್ಲಿ ನಡೆಯುವಂತೆ ಮಾಡುವುದೇ ರಾಜದಂಡದ ವೈಶಿಷ್ಟ್ಯವಾಗಿದೆ.

ಸರ್ವೋ ದಂಡಜಿತೋ ಲೋಕೋ ದುರ್ಲಭೋ ಹಿ ಶುಚಿರ್ನರಃ।
ದಂಡಸ್ಯ ಹಿ ಭಯಾದ್ ಭೀತೋ ಭೋಗಾಯೇಹ ಪ್ರಕಲ್ಪತೇ ॥೩೪॥

ಪ್ರತಿಯೊಬ್ಬರೂ ಕೂಡ ದಂಡದಿಂದಲೇ ಜಯಿಸುತ್ತಾರೆ. ಸಹಜವಾಗಿ ಶುಚಿರ್ಭೂತನಾದ ಮನುಷ್ಯನಿರುವುದೇ ದುರ್ಲಭವಾಗಿದೆ. ದಂಡಭಯದಿಂದಲೇ ಪ್ರತಿಯೊಬ್ಬರೂ ಧರ್ಮಪರಿಪಾಲನೆಯಲ್ಲಿ ಪ್ರವೃತ್ತರಾಗುತ್ತಿದ್ದಾರೆ.

ವ್ಯಾಖ್ಯಾನ - ಈ ಲೋಕದಲ್ಲಿ ದಂಡಶಿಕ್ಷೆಯ ಭಯವಿಲ್ಲದಿದ್ದರೆ ಪ್ರತಿಯೊಬ್ಬರೂ ಅಪಮಾರ್ಗದಲ್ಲಿಯೇ ನಡೆಯುತ್ತಿದ್ದರು. ಸಹಜವಾಗಿ ಧರ್ಮವನ್ನು

ಆಚರಿಸಬೇಕೆಂಬ ಬುದ್ಧಿ ಇರುವುದು ಬಹಳ ದುರ್ಲಭ. ಹೀಗೇಕೆ ಹೇಳುತ್ತಿದ್ದಾರೆ. ಕೆಲವರು ತಪ್ಪು ಮಾಡುತ್ತಿರುವಾಗ ಇದು ತಪ್ಪೆಂದು ತಿಳಿದಿರುತ್ತದೆ. ಆದರೆ ನನಗೆ ಇದರಿಂದ ಏನೂ ತೊಂದರೆಯಾಗುವುದಿಲ್ಲ ಎಂಬ ಅಥವಾ ಯಾರೂ ಈ ತಪ್ಪನ್ನು ತಿಳಿಯುವುದಿಲ್ಲ ಎಂಬ ಭಾವನೆಯಿಂದ ಮನುಷ್ಯನು ಎಡವುತ್ತಾನೆ. ಹೀಗೆ ತಪ್ಪುಗಳನ್ನು ಹೆಚ್ಚಿಸಿಕೊಂಡು ತನ್ನ ಜೀವನವನ್ನು ಅಂಧಕಾರಮಯವನ್ನಾಗಿ ಮಾಡಿಕೊಳ್ಳುತ್ತಾನೆ. ಇವನನ್ನು ನೋಡಿದ ಉಳಿದವರೂ ಕೂಡ ತಪ್ಪು ಮಾಡುವುದರಲ್ಲೇ ನಿರತರಾಗುತ್ತಾರೆ. ಹಿಂಸಾಚಾರ, ದುರ್ವ್ಯವಹಾರ, ಭ್ರಷ್ಟಾಚಾರಗಳು ಹೆಚ್ಚುತ್ತವೆ. ಭ್ರಷ್ಟಾಚಾರ ಮಾಡುವವರಿಗೆ ಪ್ರಜೆಗಳೇ ಅನುಮೋದನೆ ಮಾಡುತ್ತಾರೆ. ಇಂಥ ಸಂದರ್ಭದಲ್ಲಿ ಅವಶ್ಯವಾಗಿ ದಂಡನೀತಿಯನ್ನು ಅಳವಡಿಸಬೇಕು. ಯಾವುದೇ ರೀತಿಯಲ್ಲಿ ಅದನ್ನು ಸಡಿಲಗೊಳಿಸಬಾರದು. ಮತ್ತು ಏಕಾಂತದಲ್ಲಿ ಮಾಡುವ ತಪ್ಪುಗಳನ್ನೂ ಕೂಡ ಗಮನಿಸಿ ಅವನಿಗೆ ಶಿಕ್ಷೆಯನ್ನು ನೀಡಬೇಕು. ಭ್ರಷ್ಟಾಚಾರ ಮೊದಲಾದವುಗಳಿಗೆ ಸ್ವಲ್ಪವೂ ಅವಕಾಶ ಕೊಡದೇ ರಾಜ್ಯವನ್ನು ಪರಿಪಾಲನೆ ಮಾಡಬೇಕು. ಹೀಗೆ ಅತ್ಯಂತಪ್ರಾಮಾಣಿಕವಾಗಿ ಪ್ರಜೆಗಳು ಬದುಕುವಂತೆ ರಾಜನಾದವನು ಪ್ರಯತ್ನ ಪಡಬೇಕು.

ಇಂದಿನ ಕಾಲದಲ್ಲಿ ಭ್ರಷ್ಟಾಚಾರ ಮೊದಲಾದವುಗಳನ್ನು ಮಾಡದೇ ಬದುಕಲು ಸಾಧ್ಯವೇ ಆಗುವುದಿಲ್ಲವೆಂಬ ಭಾವನೆ ಎಲ್ಲ ಸಾತ್ವಿಕರಲ್ಲೂ ತುಂಬಿದೆ. ಯಾವುದಾದರೂ ಸಂಕಟ ಪರಿಸ್ಥಿತಿಯು ಎದುರಾದಾಗ ಪರಿಹಾರವಾದರೆ ಸಾಕು ಎಂಬ ಭಾವನೆಯಿಂದ ಭ್ರಷ್ಟಾಚಾರ ಮಾಡುವವರಿಗೆ ಕಾನೂನುಬಾಹಿರವಾಗಿ ಹಣ ಮೊದಲಾದವುಗಳನ್ನು ಕೊಟ್ಟು, ಪಾರಾಗುವ ಮನೋಭಾವನೆ ಪ್ರತಿಯೊಬ್ಬರಲ್ಲೂ ಬೆಳೆಯುತ್ತಿದೆ. ರಾಜರಾದವರೂ ಕೂಡ ಇದನ್ನು ಗಮನಿಸದೇ ಸ್ವತಃ ತಾವೇ ಭ್ರಷ್ಟಾಚಾರ ಮೊದಲಾದವುಗಳನ್ನು ಮಾಡುತ್ತಾ, ರಾಜ್ಯಪರಿಪಾಲನೆಯಲ್ಲಿ ತೊಡಗಿದ್ದಾರೆ. ಇದೆಲ್ಲವೂ ಕೂಡ ಜಗತ್ತಿನ ನಾಶಕ್ಕೆ ಕಾರಣವೆಂದು ಈ ಶ್ಲೋಕಗಳು ನಿರೂಪಣೆ ಮಾಡುತ್ತಿವೆ.

ಚಾತುರ್ವರ್ಣ್ಯಪ್ರಮೋಹಾಯ ಸುನೀತಿನಯನಾಯ ಚ।
ದಂಡೋ ವಿಧಾತ್ರಾ ವಿಹಿತೋ ಧರ್ಮಾರ್ಥಾವಭಿರಕ್ಷಿತುಮ್ ॥೩೫॥

ನಾಕುವರ್ಣದವರು ಸಂತೋಷದಿಂದ ಬದುಕುವುದಕ್ಕಾಗಿ ಪ್ರತಿಯೊಬ್ಬರೂ ನೀತಿವಂತರಾಗಿ ಬಾಳುವುದಕ್ಕಾಗಿ ಧರ್ಮ ಮತ್ತು ಅರ್ಥಗಳನ್ನು ಈ ಭೂಲೋಕ - ದಲ್ಲಿ ಸಂರಕ್ಷಣೆ ಮಾಡುವುದಕ್ಕಾಗಿ ಆ ಬ್ರಹ್ಮನೇ ದಂಡನೀತಿಯನ್ನು ವಿಧಾನ ಮಾಡಿರುತ್ತಾನೆ.

ಯದಿ ದಂಡಾನ್ನ ಬಿಭ್ಯೇಯುರ್ವಯಾಂಸಿ ಶ್ವಾಪದಾನಿ ಚ।
ಅದ್ಯುಃ ಪಶೂನ್ ಮನುಷ್ಯಾಂಶ್ಚ ಯಜ್ಞಾರ್ಥಾನಿ ಹವೀಂಷಿ ಚ ॥೩೬॥

ಹಿಂಸೆ ಮಾಡುವ ಮೃಗಗಳು, ಪಕ್ಷಿಗಳು ದಂಡಕ್ಕೆ ಭಯಪಡದಿದ್ದರೆ ಆ ಮೃಗಗಳು ಹಾಗೂ ಪಕ್ಷಿಗಳು ಸಾಧುವಾದ ಪಶುಗಳನ್ನು, ಮನುಷ್ಯರನ್ನು ಹಾಗೂ ಯಜ್ಞ-ಕ್ಕೋಸ್ಕರ ಉಪಯೋಗಿಸಲು ಇಟ್ಟ ಹವಿಸ್ಸುಗಳನ್ನು ತಿಂದುಬಿಡುತ್ತಿದ್ದವು.

ನ ಬ್ರಹ್ಮಚಾರ್ಯಧೀಯೀತ ಕಲ್ಯಾಣೇ ಗೌರ್ನ ದುಹ್ಯತೇ।
ನ ಕನ್ಯೋದ್ವಹನಂ ಗಚ್ಛೇದ್ ಯದಿ ದಂಡೋ ನ ಪಾಲಯೇತ್॥೩೭॥

ದಂಡನೀತಿಯನ್ನು ಈ ಲೋಕದಲ್ಲಿ ಅಳವಡಿಸಿ, ಲೋಕಮರ್ಯಾದೆಯನ್ನು ಸಂರಕ್ಷಣೆ ಮಾಡದಿದ್ದರೆ, ಬ್ರಹ್ಮಚಾರಿಯೂ ಕೂಡ ವೇದಾಧ್ಯಯನದಲ್ಲಿ ತೊಡಗು-ತ್ತಿರಲಿಲ್ಲ. ಕಲ್ಯಾಣಕರವಾದ ಹಸುವೂ ಕೂಡ ಹಾಲು ನೀಡುತ್ತಿರಲಿಲ್ಲ. ಕನ್ಯೆಯೂ ಕೂಡ ಮದುವೆಯಾಗುತ್ತಿರಲಿಲ್ಲ.

ಟಿಪ್ಪಣಿ - ಬ್ರಹ್ಮಚಾರಿಯಾದವನು ವೇದಾಧ್ಯಯನವನ್ನು ಮಾಡುವುದ-ರಿಂದಲೇ ಈ ಜಗತ್ತಿನಲ್ಲಿ ಜ್ಞಾನವು ಸ್ಥಾಪನೆಯಾಗುತ್ತದೆ. ಪ್ರತಿಯೊಬ್ಬ ತ್ರೈವರ್ಣಿಕರು ತಮ್ಮ ಬ್ರಹ್ಮಚರ್ಯಾಶ್ರಮದಲ್ಲಿ ವೇದಾಧ್ಯಯನವನ್ನು ಮಾಡಲೇ ಬೇಕು. ವೇದದಲ್ಲಿ ಹೇಳಲ್ಪಟ್ಟ ತತ್ವಜ್ಞಾನವನ್ನು ಸಂಪಾದನೆ ಮಾಡಬೇಕು. ರಾಜದಂಡದ ಭಯವು ಇಲ್ಲದಿದ್ದರೆ ಬ್ರಹ್ಮಚಾರಿಯಾದವನು ವೇದಾಧ್ಯಯನವನ್ನೇ ಮಾಡುತ್ತಿರಲಿಲ್ಲ. ಹಸುಗಳು ಹಾಲನ್ನು ಕೊಡುವುದರಿಂದಲೇ ಪ್ರತಿಯೊಬ್ಬರೂ ಆರೋಗ್ಯವಂತರಾಗಿದ್ದಾರೆ. ಆದ್ದರಿಂದಲೇ ಹಸುಗಳನ್ನು ಮಾತೃಸ್ಥಾನದಲ್ಲಿ ಪೂಜೆ ಮಾಡಲಾಗುತ್ತದೆ. ಲೋಕಕ್ಕೆ ಕಲ್ಯಾಣವನ್ನು ಉಂಟುಮಾಡುವ ಕಲ್ಯಾಣಿ ಎಂಬು-ದಾಗಿಯೇ ಗೌರವಿಸಲಾಗುತ್ತದೆ. ದಂಡಭಯವಿಲ್ಲದಿದ್ದರೆ ಹಸುಗಳೂ ಕೂಡ

ಹಾಲನ್ನು ಕೊಡುತ್ತಿರಲಿಲ್ಲ. ಕನ್ಯೆಯರು ಸರಿಯಾದ ಸಮಯದಲ್ಲಿ ವಿವಾಹವಾಗುವುದರಿಂದಲೇ ಗಾರ್ಹಸ್ಥ್ಯಧರ್ಮವು ಶುದ್ಧವಾಗಿರುತ್ತದೆ. ದಂಡಭಯವಿಲ್ಲದಿದ್ದರೆ ಕನ್ಯೆಯರು ವಿವಾಹವಾಗದೇ ಅನೇಕ ಪುರುಷರ ಸಂಪರ್ಕದಲ್ಲಿ ತೊಡಗಿ, ಗಾರ್ಹಸ್ಥ್ಯಧರ್ಮವನ್ನೇ ಹಾಳುಮಾಡುತ್ತಿದ್ದರು. ಹೀಗೆ ಪ್ರತಿಯೊಬ್ಬರ ವರ್ಣಾಶ್ರಮ ಧರ್ಮಪರಿಪಾಲನೆಯು ಉಳಿಸುವುದಕ್ಕಾಗಿ ದಂಡನೀತಿಯನ್ನು ಅಳವಡಿಸಬೇಕು. ಪರಲೋಕವನ್ನೇ ಒಪ್ಪದೇ ವರ್ಣಾಶ್ರಮಧರ್ಮಗಳೇ ಇರಬಾರ -ದೆಂಬ ಕಾನೂನು ಹೊರಡಿಸಿದ ಇಂದಿನ ಕಾಲದಲ್ಲಿ ಬದುಕುತ್ತಿರುವುದೇ ನಮ್ಮ ದೌರ್ಭಾಗ್ಯ ಎಂಬ ಭಾವನೆ ಮೂಡುತ್ತದೆ.

ವಿಶ್ವಗ್‌ಲೋಪಃ ಪ್ರವರ್ತೇತ ಭಿದ್ಯೇರನ್ ಸರ್ವಸೇತವಃ।
ಮಮತ್ವಂ ನ ಪ್ರಜಾನೀಯುರ್ಯದಿ ದಂಡೋ ನ ಪಾಲಯೇತ್॥೩೮॥

ರಾಜದಂಡವು ಲೋಕಮರ್ಯಾದೆಯನ್ನು ಪಾಲನೆ ಮಾಡದೇ ಇದ್ದರೆ ಈ ಭೂಲೋಕದಲ್ಲಿ ಎಲ್ಲ ಧರ್ಮಕರ್ಮಗಳು ನಾಶವಾಗುತ್ತಿದ್ದವು. ಧಾರ್ಮಿಕವಾದ ಕಾರ್ಯಗಳೇ ಸಂಪೂರ್ಣವಾಗಿ ನಾಶವಾಗುತ್ತಿದ್ದವು. ಲೋಕಮರ್ಯಾದೆಯೇ ಇಲ್ಲದಂತಾಗುತ್ತಿತ್ತು. ಇದು ನನ್ನ ಕರ್ತವ್ಯ, ಇದು ನನ್ನ ಕರ್ತವ್ಯವಲ್ಲ ಎಂಬ ವಿವೇಚನೆಯೇ ಯಾರಿಗೂ ಇರುತ್ತಿರಲಿಲ್ಲ.

ನ ಸಂವತ್ಸರಸತ್ರಾಣಿ ತಿಷ್ಠೇಯುರಕುತೋಭಯಾಃ।
ವಿಧಿವದ್ ದಕ್ಷಿಣಾವಂತಿ ಯದಿ ದಂಡೋ ನ ಪಾಲಯೇತ್ ॥೩೯॥

ದಂಡವು ಧರ್ಮಾರ್ಥವನ್ನು ಪರಿಪಾಲನೆ ಮಾಡದೇ ಇದ್ದಿದ್ದರೆ ಒಂದು ಸಂವತ್ಸರದ ಕಾಲ ಆಚರಿಸುವ ಸತ್ರಯಾಗಗಳನ್ನು ಆಚರಿಸಲು ಸಾಧ್ಯವೇ ಆಗುತ್ತಿರಲಿಲ್ಲ. ಅದರಲ್ಲಿ ಭೂರಿದಕ್ಷಿಣೆಯನ್ನೂ ಕೂಡ ನೀಡಲು ಸಾಧ್ಯವೇ ಆಗುತ್ತಿರಲಿಲ್ಲ.

ಚರೇಯುರ್ವಾಶ್ರಮೇ ಧರ್ಮಂ ಯಥೋಕ್ತಂ ವಿಧಿಮಾಶ್ರಿತಾಃ।
ನ ವಿದ್ಯಾಂ ಪ್ರಾಪ್ನುಯಾತ್ ಕಶ್ಚಿದ್ ಯದಿ ದಂಡೋ ನ ಪಾಲಯೇತ್॥೪೦॥

ರಾಜದಂಡವನ್ನು ಲೋಕದಲ್ಲಿ ಅನುಷ್ಠಾನ ಮಾಡದಿದ್ದರೆ, ಪ್ರಜೆಗಳೂ ತಮ್ಮ ತಮ್ಮ ವರ್ಣಾಶ್ರಮಧರ್ಮಗಳನ್ನು ಆಚರಣೆ ಮಾಡುತ್ತಿರಲಿಲ್ಲ. ಶಾಸ್ತ್ರಗಳಲ್ಲಿ ಹೇಳಲ್ಪಟ್ಟ ಯಾವುದೇ ವಿಧಿಗಳನ್ನು ಅನುಷ್ಠಾನಕ್ಕೆ ತರುತ್ತಿರಲಿಲ್ಲ. ಹೀಗೆ ವರ್ಣಾಶ್ರಮಧರ್ಮಗಳೇ ನಾಶವಾದ ಮೇಲೆ ಯಾರೊಬ್ಬರೂ ಕೂಡ ವೇದಾಧ್ಯಯನವನ್ನು ಮಾಡಿ, ತತ್ವಜ್ಞಾನವನ್ನು ಪಡೆಯುತ್ತಿರಲಿಲ್ಲ.

ಟಿಪ್ಪಣಿ - ತತ್ವಜ್ಞಾನದ ಸಂಪಾದನೆಗೆ ವರ್ಣಾಶ್ರಮಧರ್ಮದ ಪರಿಪಾಲನೆ ಅತ್ಯಂತ ಮುಖ್ಯ. ಯಾರು ವರ್ಣಾಶ್ರಮಧರ್ಮವನ್ನು ಪರಿಪಾಲನೆ ಮಾಡುವುದಿಲ್ಲವೋ ಅವರಿಗೆ ಶಿಕ್ಷೆಯನ್ನು ನೀಡಬೇಕು.

ನ ಚೋಷ್ಟ್ರಾ ನ ಬಲೀವರ್ದಾ ನಾಶ್ವಾಶ್ವತರಗರ್ದಭಾಃ।
ಯುಕ್ತಾ ವಹೇಯುರ್ಯಾನಾನಿ ಯದಿ ದಂಡೋ ನ ಪಾಲಯೇತ್॥೪೧॥

ಒಂದು ವೇಳೆ ದಂಡವು ಲೋಕಮರ್ಯಾದೆಯನ್ನು ಪಾಲನೆ ಮಾಡದಿದ್ದರೆ ಒಂಟೆಗಳು, ಎತ್ತುಗಳು, ಕುದುರೆಗಳು, ಹೇಸರುಗತ್ತೆಗಳು, ಕತ್ತೆಗಳು ವಾಹವನ್ನು ಧರಿಸಿದ್ದರೂ ಕೂಡ ಎಳೆದುಕೊಂಡು ಹೋಗುತ್ತಿರಲಿಲ್ಲ.

ಟಿಪ್ಪಣಿ - ಮನುಷ್ಯರಷ್ಟೇ ಅಲ್ಲದೇ ಪ್ರಾಣಿಗಳೂ ಕೂಡ ದಂಡಪ್ರಯೋಗಕ್ಕೆ ಹೆದರುತ್ತವೆ. ಗಾಡಿಗೆ ಎತ್ತುಗಳನ್ನು ಕಟ್ಟಿದಾಗ ಚಾವಟಿ ಏಟಿಗೆ ಹೆದರಿಯೇ ಎಳೆದುಕೊಂಡು ಹೋಗುತ್ತವೆ. ಯಜಮಾನನು ದಂಡಪ್ರಯೋಗವನ್ನು ಮಾಡುವುದಿಲ್ಲವೆಂದು ಅವುಗಳಿಗೆ ತಿಳಿದರೆ ಒಂದು ಹೆಜ್ಜೆಯನ್ನೂ ಕೂಡ ಮುಂದೆ ಇಡುವುದಿಲ್ಲ.

ನ ಪ್ರೇಷ್ಯಾ ವಚನಂ ಕುರ್ಯುರ್ನ ಬಾಲೋ ಜಾತು ಕರ್ಹಿಚಿತ್।
ನ ತಿಷ್ಠೇದ್ಯುವತಿ ಧರ್ಮೇ ಯದಿ ದಂಡೋ ನ ಪಾಲಯೇತ್ ॥೪೨॥

ದಂಡವು ಲೋಕವನ್ನು ರಕ್ಷಣೆ ಮಾಡದೇ ಇದ್ದರೆ ಸೇವಕರು ಯಜಮಾನನ ಮಾತನ್ನು ಕೇಳುತ್ತಿರಲಿಲ್ಲ. ಮಕ್ಕಳು ತಾಯಿಯ ಮಾತುಗಳನ್ನು ಕೇಳುತ್ತಿರಲಿಲ್ಲ. ಯುವತಿಯಾದವಳು ತನ್ನ ಸತಿಯ ಧರ್ಮದಲ್ಲಿ ಸ್ಥಿರವಾಗಿ ನಿಲ್ಲುತ್ತಿರಲಿಲ್ಲ.

ದಂಡೇ ಸ್ಥಿತಾಃ ಪ್ರಜಾಃ ಸರ್ವಾ ಭಯಂ ದಂಡೇ ವಿದುರ್ಬುಧಾಃ।
ದಂಡೇ ಸ್ವರ್ಗೋ ಮನುಷ್ಯಾಣಾಂ ಲೋಕೋಽಯಂ ಸುಪ್ರತಿಷ್ಠಿತಃ ॥೪೩॥

ಪ್ರಜೆಗಳೆಲ್ಲರೂ ದಂಡದಿಂದಲೇ ಸತ್ಯಮಾರ್ಗದಲ್ಲಿ ನಡೆಯುತ್ತಿದ್ದಾರೆ. ವಿದ್ವಾಂಸರೂ ಕೂಡ ಭಯವು ದಂಡದಲ್ಲಿಯೇ ಅಡಗಿದೆ ಎಂದು ತಿಳಿಸುತ್ತಾರೆ. ಮನುಷ್ಯನಿಗೆ ಸ್ವರ್ಗ ಹಾಗೂ ಭೂಲೋಕಗಳು ದಂಡದಿಂದಲೇ ಪ್ರಾಪ್ತವಾಗುತ್ತವೆ.

ನ ತತ್ರ ಕೂಟಂ ಪಾಪಂ ವಾ ವಂಚನಾ ವಾಪಿ ದೃಶ್ಯತೇ।
ಯತ್ರ ದಂಡಃ ಸುವಿಹಿತಶ್ಚರತ್ಯರಿವಿನಾಶನಃ ॥೪೪॥

ನ್ಯಾಯರೀತಿಯಿಂದ ಪ್ರಯೋಗಿಸಲ್ಪಟ್ಟು ವಿರೋಧಿಗಳನ್ನು ನಿಗ್ರಹ ಮಾಡುವ ದಂಡವು ಯಾವ ದೇಶದಲ್ಲಿ ನೆಲೆಗೊಂಡಿದೆಯೋ, ಅಲ್ಲಿ ಕಪಟ, ಮೋಸ, ಪಾಪಗಳು ಎಂದೂ ಸಹ ಬರುವುದಿಲ್ಲ.

ಟಿಪ್ಪಣಿ - ದಂಡಪ್ರಯೋಗವನ್ನು ಸುವ್ಯವಸ್ಥಿತವಾಗಿ ಅನುಷ್ಠಾನಕ್ಕೆ ತರಬೇಕು. ಇಲ್ಲದಿದ್ದರೆ ಅನಾಹುತವೇ ಆಗುತ್ತದೆ. ದಂಡಪ್ರಯೋಗವನ್ನು ಶಿಷ್ಟರ ಮೇಲೆ ಎಂದೂ ಮಾಡಬಾರದು. ಅಥವಾ ಸತ್ಯ, ಪ್ರಾಮಾಣಿಕತೆಗಳು ಇದ್ದಲ್ಲಿ ದಂಡಪ್ರಯೋಗವನ್ನು ಮಾಡಬಾರದು. ಅದಕ್ಕಾಗಿಯೇ ಇಲ್ಲಿ 'ಸುವಿಹಿತಃ' ಎಂಬುದಾಗಿ ಹೇಳಿದ್ದಾರೆ.

ಹವಿಃ ಶ್ವಾ ಪ್ರಲಿಹೇದ್ ದೃಷ್ಟ್ವಾ ದಂಡಶ್ಚೇನ್ನೋದ್ಯತೋ ಭವೇತ್।
ಹರೇತ್ ಕಾಕಃ ಪುರೋಡಾಶಂ ಯದಿ ದಂಡೋ ನ ಪಾಲಯೇತ್ ॥೪೫॥

ದಂಡಪ್ರಯೋಗವನ್ನು ಸುವ್ಯವಸ್ಥಿತವಾಗಿ ಮಾಡದಿದ್ದರೆ ನಾಯಿಯು ಹವಿಸ್ಸನ್ನು ತಿನ್ನಲು ಮುನ್ನುಗ್ಗುತ್ತದೆ. ದಂಡದ ಭಯವು ಇಲ್ಲದಿದ್ದರೆ ಕಾಗೆಯು ಪುರೋಡಾಶವನ್ನು ಎತ್ತಿಕೊಂಡು ಹೋಗುತ್ತದೆ.

ಯದಿದಂ ಧರ್ಮತೋ ರಾಜ್ಯಂ ವಿಹಿತಂ ಯದ್ಯಧರ್ಮತಃ।
ಕಾರ್ಯಸ್ತತ್ರ ನ ಶೋಕೋ ವೈ ಭುಂಕ್ಷ್ವ ಭೋಗಾನ್ ಯಜಸ್ವ ಚ ॥೪೬॥

ಯುಧಿಷ್ಠಿರನೇ! ಈ ರಾಜ್ಯವು ನಮಗೆ ಧರ್ಮದಿಂದ ಪ್ರಾಪ್ತವಾಯಿತೋ ಅಥವಾ ಅಧರ್ಮದಿಂದ ಪ್ರಾಪ್ತವಾಯಿತೋ ? ಎಂಬುದರ ಬಗ್ಗೆ ಈಗ ವಿಚಾರವು ಬೇಡ. ಅದಕ್ಕೋಸ್ಕರ ನೀನು ಚಿಂತೆಯನ್ನೂ ಕೂಡ ಮಾಡಬೇಡ. ಭೋಗಗಳನ್ನು ಅನುಭವಿಸು. ಯಾಗಗಳನ್ನು ಆಚರಿಸು.

ಸುಖೇನ ಧರ್ಮಂ ಶ್ರೀಮಂತಶ್ಚರಂತಿ ಶುಚಿವಾಸಸಃ।
ಸಂವಸಂತಃ ಪ್ರಿಯೈರ್ದಾರೈರ್ಭುಂಜಾನಾಶ್ಚಾನ್ನಮುತ್ತಮಮ್ ॥೪೭॥

ಶ್ರೀಮಂತರು ಶುದ್ಧವಾದ ಬಟ್ಟೆಯನ್ನು ಧರಿಸುತ್ತಾರೆ. ತಮ್ಮ ಪ್ರಿಯರಾದ ಪತ್ನಿಯರ ಜೊತೆ ಸೇರುತ್ತಾರೆ. ಮೃಷ್ಟಾನ್ನಗಳನ್ನು ಭುಂಜಿಸುತ್ತಾರೆ. ಸುಖವಾಗಿಯೇ ಧರ್ಮವನ್ನು ಆಚರಣೆ ಮಾಡುತ್ತಾರೆ.

ಅರ್ಥೇ ಸರ್ವೇ ಸಮಾರಂಭಾಃ ಸಮಾಯತ್ತಾ ನ ಸಂಶಯಃ।
ಸ ಚ ದಂಡೇ ಸಮಾಯತ್ತಃ ಪಶ್ಯ ದಂಡಸ್ಯ ಗೌರವಮ್ ॥೪೮॥

ಎಲ್ಲಾ ವೈಭವಗಳು ಅರ್ಥದ ಅಧೀನವಾಗಿವೆ. ಈ ವಿಷಯದಲ್ಲಿ ಸಂಶಯವೇ ಇರುವುದಿಲ್ಲ. ಆ ಅರ್ಥವು ದಂಡದ ಅಧೀನವಾಗಿದೆ. ದಂಡದ ರಕ್ಷಣೆಯು ಇಲ್ಲದಿದ್ದರೆ ಸಂಪತ್ತು ಉಳಿಯುವುದಿಲ್ಲ. ಆದ್ದರಿಂದ ದಂಡದ ಗೌರವವನ್ನು ಗಮನಿಸು.

ಟಿಪ್ಪಣಿ - ಶ್ರೀಮಂತರು ಹಣದಿಂದ ಸುಲಭವಾಗಿ ಧರ್ಮಾಚರಣೆಯನ್ನು ಮಾಡುವಂತೆ, ನೀನೂ ಸಹ ಅಪಾರವಾದ ಸಂಪತ್ತುಗಳನ್ನು ವಿನಿಯೋಗಿಸಿ, ಧರ್ಮಾಚರಣೆಯಲ್ಲಿ ರತನಾಗು. ಸಮಸ್ತ ಅರ್ಥವು ದಂಡದ ಅಧೀನವಾಗಿದೆ. ನಿರಂತರ ದಂಡದ ರಕ್ಷಣೆಯಲ್ಲಿಯೇ ಸಾಕಷ್ಟು ಧನವು ಉಳಿಯುತ್ತದೆ.

ಲೋಕಯಾತ್ರಾರ್ಥಮೇವೇಹ ಧರ್ಮಪ್ರವಚನಂ ಕೃತಮ್।
ಅಹಿಂಸಾ ಸಾಧುಹಿಂಸೇತಿ ಶ್ರೇಯಾನ್ ಧರ್ಮಪರಿಗ್ರಹಃ ॥೪೯॥

ಲೋಕದಲ್ಲಿ ಸುವ್ಯವಸ್ಥಿತವಾದ ನಡತೆಗೆ ವಿದ್ವಾಂಸರು ಧರ್ಮವನ್ನು ಪ್ರತಿಪಾದನೆ ಮಾಡುತ್ತಾರೆ. ಆ ಸಂದರ್ಭದಲ್ಲಿ ಅಹಿಂಸೆಯೇ ಒಳ್ಳೆಯದು ಎಂಬುದನ್ನು ಪ್ರತಿ-

ಪಾದನೆ ಮಾಡಿದ್ದಾರೆ. ಹಿಂಸೆ ಮಾಡುವುದು ಅಯುಕ್ತ ಎಂಬುದನ್ನು ಪ್ರತಿಪಾದನೆ ಮಾಡಿದ್ದಾರೆ. ಇಂಥ ಸಂದರ್ಭದಲ್ಲಿ ಯಾವುದು ಧರ್ಮ, ಯಾವುದು ಅಧರ್ಮ ಎಂದು ವಿಚಾರ ಮಾಡಿಯೇ ಕಾರ್ಯದಲ್ಲಿ ಪ್ರವೃತ್ತನಾಗಬೇಕು.

ಟಿಪ್ಪಣಿ - 'ಅಹಿಂಸಾ ಸಾಧುಹಿಂಸೇತಿ ಶ್ರೇಯಾನ್ ಧರ್ಮಪರಿಗ್ರಹಃ' ಎಂಬ ಉತ್ತರಾರ್ಧದ ಅಭಿಪ್ರಾಯವನ್ನು ಹೀಗೆ ತಿಳಿಯತಕ್ಕದ್ದು - ಸರ್ವಥಾ ಹಿಂಸೆಯನ್ನೇ ಮಾಡಬಾರದೋ, ಅಥವಾ ದುಷ್ಟರಿಗೆ ಹಿಂಸೆಯನ್ನು ಮಾಡಬೇಕೋ ? ಎಂಬ ಪ್ರಶ್ನೆಯು ಪ್ರಾಪ್ತವಾದಾಗ ಯಾವುದು ಧರ್ಮವೋ, ಅದನ್ನೇ ಮಾಡಬೇಕು ಎಂದಭಿಪ್ರಾಯ. ಒಬ್ಬ ಸಾಧುವಾದ ಋಷಿಯನ್ನು ಕಳ್ಳಕಾಕರು ಹಿಂಸೆ ಮಾಡಲು ಆಗಮಿಸುತ್ತಾರೆ. ನಿಷ್ಕಾರುಣವಾಗಿ ಹಿಂಸೆ ಮಾಡಲು ಹೊರಟ, ಆ ಕಳ್ಳಕಾಕರಿಗೆ ಶಿಕ್ಷೆಯನ್ನು ನೀಡುವುದು ಸಾಧುವೋ? ಅಸಾಧುವೋ? ಎಂಬ ಪ್ರಶ್ನೆಯು ಬಂದರೆ, ವಿವೇಚನೆಯನ್ನು ಮಾಡಿ, ಕಳ್ಳಕಾಕರ ಹಿಂಸೆಯೇ ಸಾಧುವಾಗಿದೆ ಎಂದು ನಿರ್ಣಯ ಮಾಡಬೇಕು. ಇಲ್ಲದಿದ್ದರೆ ನಿಷ್ಕಾರುಣವಾಗಿ ಅವರು ಆ ಸಾಧುವಾದ ಮುನಿಗೆ ಹಿಂಸೆಯನ್ನು ನೀಡಿ, ಧರ್ಮಕ್ಕೆ ಅನ್ಯಾಯವನ್ನು ಮಾಡುತ್ತಾರೆ. ಆದ್ದರಿಂದ ಅಹಿಂಸಾವ್ರತವನ್ನು ಆಚರಿಸುವಾಗ ಸಮಯಾಸಮಯಗಳನ್ನು ನೋಡಿ, ಪ್ರವೃತ್ತಿ-ಯನ್ನು ಮಾಡಬೇಕು. ಹಸುವನ್ನು ತಿನ್ನಲು ಆಗಮಿಸಿದ ಹುಲಿಯನ್ನು ಕೊಲ್ಲುವುದು ಧರ್ಮವೋ? ಅಧರ್ಮವೋ? ಇತ್ಯಾದಿ ವಿಚಾರಗಳನ್ನು ಮಾಡಿ, ಪ್ರವೃತ್ತರಾಗ-ಬೇಕು.

ನಾತ್ಯಂತಗುಣವಾನ್ ಕಶ್ಚಿನ್ನ ಚಾಪ್ಯತ್ಯಂತನಿರ್ಗುಣಃ।
ಉಭಯಂ ಸರ್ವಕಾರ್ಯೇಷು ದೃಶ್ಯತೇ ಸಾಧ್ವಸಾಧು ಚ ॥೫೦॥

ಜಗತ್ತಿನಲ್ಲಿ ಸಂಪೂರ್ಣವಾಗಿ ಕೇವಲ ಗುಣವುಳ್ಳ ಒಂದು ಪದಾರ್ಥವು ಇರುವುದಿಲ್ಲ. ಯಾವುದೇ ಗುಣವೇ ಇಲ್ಲದ ವಸ್ತುವೂ ಕೂಡ ಇರುವುದಿಲ್ಲ. ಪ್ರತಿಯೊಂದು ಕಾರ್ಯಗಳಲ್ಲಿಯೂ ಒಳ್ಳೆಯದು ಹಾಗೂ ಕೆಟ್ಟದ್ದು ಇದ್ದೇ ಇರುತ್ತವೆ.

ಟಿಪ್ಪಣಿ - ಇಂಥವನು ಕೆಟ್ಟವನು, ಇಂಥವನು ದುಷ್ಟನು ಎಂದು ನಿರ್ಣಯ ಮಾಡುವುದೂ ಕೂಡ ಕಠಿಣವಾದದ್ದೇ ಆಗಿದೆ. ಏಕೆಂದರೆ ಪ್ರತಿಯೊಬ್ಬರಲ್ಲಿಯೂ ಒಳ್ಳೆಯ ಗುಣಗಳು ಇರುತ್ತವೆ. ಕೆಟ್ಟಗುಣಗಳು ಇರುತ್ತವೆ. ಆದರೆ ಅವನ ಉದ್ದೇಶ-

ವನ್ನರಿತು, ಅವನ ಕೆಟ್ಟ ಕಾಮನೆಗಳನ್ನರಿತು ದಂಡಪ್ರಯೋಗವನ್ನು ಮಾಡತಕ್ಕದ್ದು. ಒಬ್ಬ ಸಾಧುವಾದವನು ಮುಖ್ಯವಾದ ಧರ್ಮವನ್ನು ಆಚರಣೆ ಮಾಡಲು ಹೊರಟಾಗ, ಸಣ್ಣಪುಟ್ಟ ಅಧರ್ಮಗಳು ನಡೆದರೆ, ಅಂಥ ಸಂದರ್ಭದಲ್ಲಿ ದಂಡಪ್ರಯೋಗವನ್ನು ಮಾಡಬಾರದು. ಅದರಂತೆ ಒಬ್ಬ ದರೋಡೆಗಾರನು ದರೋಡೆಯನ್ನು ಮಾಡಿ, ಆ ಹಣದಿಂದ ದಾನ-ಧರ್ಮಾದಿಗಳನ್ನು ಮಾಡಿದರೆ ಅದನ್ನು ಧರ್ಮವೆಂದೂ ಕೂಡ ಭಾವಿಸಿ, ಅವನಿಗೆ ಶಿಕ್ಷೆಯನ್ನು ನೀಡದೇ ಇರಬಾರದು.

ಪಶೂನಾಂ ವೃಷಣಂ ಛಿತ್ತ್ವಾ ತತೋ ಭಿಂದಂತಿ ನಸ್ತು ತಾನ್ ।
ಕೃಷಂತಿ ಬಹವೋ ಭಾರಾನ್ ಬಧ್ನಂತಿ ದಮಯಂತಿ ಚ ॥೫೧॥

ಲೋಕದ ಜನರು ಹೋರಿಯ ಬೀಜವನ್ನು ಮೊದಲು ಒಡೆಯುತ್ತಾರೆ. ಅನಂತರ ಮೂಗಿಗೆ ದಾರವನ್ನು ಹಾಕುತ್ತಾರೆ. ಅವುಗಳ ಮೇಲೆ ದೊಡ್ಡ ಭಾರವನ್ನು ಹೊರಿಸಿ ಕಟ್ಟಿಹಾಕುತ್ತಾರೆ, ಹೊಡೆಯುತ್ತಾರೆ, ಹೊಲ ಊಳುತ್ತಾರೆ.

ಟಿಪ್ಪಣಿ – ತತೋ ಭಿಂದಂತಿ ನಸ್ತು ತಾನ್ ಇತ್ಯತ್ರ ನಸ್ತು ನಾಸಾಪುಟೇಷು ।

'ತತೋ ಭಿಂದಂತಿ ನಸ್ತು ತಾನ್' ಎಂಬಲ್ಲಿ ನಸ್ತು ಎಂದರೆ ನಾಸಾಪುಟವನ್ನು ಮೂಗುದಾರದಿಂದ ಬೀರುತ್ತಾರೆ ಎಂದರ್ಥ.

ಏವಂ ಪರ್ಯಾಕುಲೇ ಲೋಕೇ ವಿಪತೇ ಝುರ್ಝುರಿಕೃತೇ ।
ತೈಸ್ತೈರ್ನ್ಯಾಯೈರ್ಮಹಾರಾಜ ಪುರಾಣಂ ಧರ್ಮಮಾಚರ ॥೫೨॥

ಓ ಮಹಾರಾಜನೇ! ಹೀಗೆ ಸಮಸ್ತಲೋಕವು ಆಯಾ ವ್ಯವಹಾರಗಳಿಂದ ಕೂಡಿ, ಭಯದಿಂದ ಸ್ವಕಾರ್ಯದಲ್ಲಿ ಪ್ರವೃತ್ತಿಯನ್ನು ಮಾಡುತ್ತಿವೆ. ಇಲ್ಲದಿದ್ದರೆ ಯಾವುದೂ ಕೂಡ ಸರಿಯಾಗಿ ನಡೆಯುವುದೇ ಇಲ್ಲ. ಆದ್ದರಿಂದ ನೀನು ಈಗ ಹೊಸದಾದ್ದನ್ನು ಏನೂ ಮಾಡಬೇಕಾಗಿಲ್ಲ. ನಮ್ಮ ಪೂರ್ವಿಕರು ಹೇಳಿದ ಧರ್ಮವನ್ನಷ್ಟೇ ಆಚರಣೆ ಮಾಡು. ಧರ್ಮರಕ್ಷಣೆಯನ್ನು ಮಾಡು.

ಯಜ ದೇಹಿ ಪ್ರಜಾಂ ರಕ್ಷ ಧರ್ಮಂ ಸಮನುಪಾಲಯ ।
ಅಮಿತ್ರಾನ್ ಜಹಿ ಕೌಂತೇಯ ಮಿತ್ರಾಣಿ ಪರಿಪಾಲಯ ॥೫೩॥

ಯಜ್ಞ-ಯಾಗಾದಿಗಳನ್ನು ನಡೆಸು, ದಾನಗಳನ್ನು ಮಾಡು, ಪ್ರಜೆಗಳನ್ನು ಪರಿಪಾಲನೆ ಮಾಡು, ಧರ್ಮಸ್ಥಾಪನೆಯನ್ನು ಮಾಡು, ಶತ್ರುಗಳನ್ನು ಜಯಿಸು, ಮಿತ್ರರನ್ನು ಹೆಚ್ಚಿಸಿಕೋ.

ಮಾ ಚ ತೇ ನಿಘ್ನತಃ ಶತ್ರೂನ್ ಮನ್ಯುರ್ಭವತು ಭಾರತ।
ನ ತತ್ರ ಕಿಲ್ಬಿಷಂ ಕಿಂಚಿತ್ ಕರ್ತುರ್ಭವತಿ ಭಾರತ ॥೫೧॥

ಶತ್ರುಗಳನ್ನು ಕೊಂದ ಕಾರಣಕ್ಕೆ ದುಃಖವನ್ನು ಅನುಭವಿಸಬೇಡ. ಶತ್ರುವಧದಿಂದ ರಾಜರಿಗೆ ಎಂದೂ ಕೂಡ ಲವಲೇಶವು ಪಾಪವು ಅಂಟುವುದಿಲ್ಲ.

ಆತತಾಯೀ ಹಿ ಯೋ ಹನ್ಯಾದಾತತಾಯಿನಮಾಗತಮ್ ।
ನ ತೇನ ಭ್ರೂಣಹಾ ಸ ಸ್ಯಾನ್ಮನ್ಯುಸ್ತಂ ಮನ್ಯುಮೃಚ್ಛತಿ ॥೫೨॥

ಶಸ್ತ್ರವನ್ನು ಮೇಲೆತ್ತಿಕೊಂಡು ತನ್ನನ್ನು ವಧೆ ಮಾಡಲು ಬರುವವನನ್ನು ಕೊಲ್ಲುವುದು ಎಂದೂ ಕೂಡ ಭ್ರೂಣಹತ್ಯೆ ಮಾಡಿದಂತೆ ಆಗುವುದಿಲ್ಲ. ಕೋಪವನ್ನು ನಿಗ್ರಹಿಸುವುದು ಲೋಕದ ನಿಯಮವಾಗಿದೆ.

ಟಿಪ್ಪಣಿ- ಶಸ್ತ್ರವನ್ನು ಹಿಡಿದು ಯಾರು ಕೊಲ್ಲಲು ಮುನ್ನುಗ್ಗುತ್ತಾನೋ, ಅವನನ್ನು ಶಸ್ತ್ರವನ್ನು ಹಿಡಿದವನೇ ಕೊಲ್ಲಬೇಕು. ಇದರಿಂದ ಭ್ರೂಣಹತ್ಯೆಯ ಪಾಪವು ಬರುವುದಿಲ್ಲ. ಏಕೆಂದರೆ ಇಂಥ ಸಂದರ್ಭದಲ್ಲಿ ಶತ್ರುವಿನಲ್ಲಿರುವ ಕೋಪವನ್ನು ನಮ್ಮಲ್ಲಿರುವ ಕೋಪವು ನಿಗ್ರಹ ಮಾಡುತ್ತದಷ್ಟೇ. ಇದನ್ನು ಅರ್ಥಮಾಡಿಕೊಳ್ಳಬೇಕು.

ಟಿಪ್ಪಣಿ – ಮನ್ಯುಸ್ತಂ ಮನ್ಯುಮೃಚ್ಛತಿ ಇತ್ಯತ್ರ ಮನ್ಯುಃ ಏಕಸ್ಯ ಮನ್ಯುಃ ಮನ್ಯುಮ್ ಅಪರಸ್ಯ ತಂ ಮನ್ಯುಮೃಚ್ಛತಿ । ಏಕಸ್ಯ ಮನ್ಯುನಾ ಅಪರಸ್ಯ ಮನ್ಯುನಾಶೋ ಭವತೀತ್ಯರ್ಥಃ।

'ಮನ್ಯುಸ್ತಂ ಮನ್ಯುಮೃಚ್ಛತಿ' ಎಂಬುದರ ಅರ್ಥ ಹೀಗಿದೆ – ಒಬ್ಬನಲ್ಲಿರುವ ಕೋಪವು, ಮತ್ತೊಬ್ಬನಲ್ಲಿರುವ ಕೋಪವನ್ನು ನಿಗ್ರಹ ಮಾಡುತ್ತದೆ. ಒಬ್ಬನಲ್ಲಿರುವ ಕೋಪದಿಂದ ಮತ್ತೊಬ್ಬನ ಕೋಪವು ನಷ್ಟವಾಗುತ್ತದೆ.

ಅವಧ್ಯಃ ಸರ್ವಭೂತಾನಾಮಂತರಾತ್ಮಾ ನ ಸಂಶಯಃ।
ಅವಧ್ಯೇ ಚಾತ್ಮನಿ ಕಥಂ ವಧ್ಯೋ ಭವತಿ ಕೇನಚಿತ್ ॥೫೩॥

ಸಕಲ ಪ್ರಾಣಿಗಳಲ್ಲಿ ಇರುವ ಅಂತರಾತ್ಮನು ಅವಧ್ಯನಾಗಿದ್ದಾನೆ. ಈ ವಿಷಯದಲ್ಲಿ ಸಂಶಯವೇ ಇರುವುದಿಲ್ಲ. ಆತ್ಮನು ಅವಧ್ಯನಾಗಿರುವುದರಿಂದಲೇ ಒಬ್ಬನು ಮತ್ತೊಬ್ಬನನ್ನು ಕೊಲ್ಲುತ್ತಾನೆಂಬುದು ಹೇಗೆ ತಾನೇ ಸಮಂಜಸವಾಗುತ್ತದೆ? ಆತ್ಮನನ್ನು ಕೊಲ್ಲಲು ಯಾರಿಂದಲೂ ಸಾಧ್ಯವಿಲ್ಲ.

ಯಥಾ ಹಿ ಪುರುಷಃ ಶಾಲಾಂ ಪುನಃ ಸಂಪ್ರವಿಶೇನ್ನವಾಮ್।
ಏವಂ ಜೀವಃ ಶರೀರಾಣಿ ತಾನಿ ತಾನಿ ಪ್ರಪದ್ಯತೇ ॥೫೪॥

ಹೇಗೆ ಪುರುಷನು ಹೊಸ ಮನೆಗಳಿಗೆ ವಾಸ ಮಾಡಲು ತೆರಳುತ್ತಾನೋ, ಅದೇ ರೀತಿಯಲ್ಲಿ ನಮ್ಮ ದೇಹದ ಒಳಗಿರುವ ಜೀವನೂ ಕೂಡ ಹೊಸ ಶರೀರಗಳನ್ನು ಧರಿಸುತ್ತಾನೆ. ಇದರಿಂದ ಅವನು ಸತ್ತನು ಎಂದು ದುಃಖಿಸಬಾರದು.

ದೇಹಾನ್ ಪುರಾಣಾನುತ್ಸೃಜ್ಯ ನವಾನ್ ಸಂಪ್ರತಿಪದ್ಯತೇ।
ಏವಂ ಮೃತ್ಯುಮುಖಂ ಪ್ರಾಹುರ್ಯೇ ಜನಾಸ್ತತ್ತ್ವದರ್ಶಿನಃ ॥೫೫॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ಪಂಚದಶೋऽಧ್ಯಾಯಃ ॥೧೫॥

ಈ ಜೀವಾತ್ಮನು ಹಳೆಯ ಶರೀರವನ್ನು ಬಿಟ್ಟು, ಹೊಸ ಶರೀರವನ್ನು ಪಡೆಯುತ್ತಾನೆ. ಇದನ್ನೇ ತತ್ವಜ್ಞಾನಿಗಳು ಮೃತ್ಯು ಎಂಬುದಾಗಿ ಕರೆಯುತ್ತಾರೆ.

ಟಿಪ್ಪಣಿ - ಹಳೆಯ ಜೀರ್ಣವಾದ ದೇಹಗಳನ್ನು ಪರಿತ್ಯಾಗ ಮಾಡುತ್ತಾನೆ. ಹಳೆಯ ಬಟ್ಟೆಯನ್ನು ಪರಿತ್ಯಾಗ ಮಾಡಿ, ಹೊಸ ಬಟ್ಟೆಯನ್ನು ಸ್ವೀಕರಿಸಿದಾಗ ಸುಖವನ್ನು ಅನುಭವಿಸುವಂತೆ ಹಳೆಯ ದೇಹವನ್ನು ಬಿಟ್ಟಾಗ ಸಂತೋಷವನ್ನೇ ನಾವು ಪಡಬೇಕು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು - 'ಯಥಾ ಶರೀರಾಣಿ ವಿಹಾಯ ಜೀರ್ಣಾನಿ ಅನ್ಯಾನಿ ಸಂಯಾತಿ ನವಾನಿ ದೇಹಿ' ಎಂಬುದಾಗಿ ಹೇಳಿರುತ್ತಾನೆ. ಅದನ್ನೇ ಅರ್ಜುನನು ಇಲ್ಲಿ ಯುಧಿಷ್ಠಿರನಿಗೆ ಉಪದೇಶಿಸುತ್ತಿದ್ದಾನೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೫ನೆಯ ಅಧ್ಯಾಯವು ಮುಗಿಯಿತು.

೧೬. ಹದಿನಾರನೆಯ ಅಧ್ಯಾಯ

ದುರ್ಯೋಧನಾದಿಗಳಿಂದ ಹಿಂದೆ ಅನುಭವಿಸಿದ ದುಃಖಗಳನ್ನು ನೆನಪು ಮಾಡಿ ಮೋಹವನ್ನು ತ್ಯಾಗಮಾಡುವಂತೆ ರಾಜ್ಯಭಾರ ಕಾರ್ಯದಲ್ಲಿ ತೊಡಗುವಂತೆ ಭೀಮಸೇನದೇವರ ಸಲಹೆ.

ವೈಶಂಪಾಯನಃ

ಅರ್ಜುನಸ್ಯ ವಚಃ ಶ್ರುತ್ವಾ ಭೀಮಸೇನೋಽತ್ಯಮರ್ಷಣಃ।
ಧೈರ್ಯಮಾಸ್ಥಾಯ ತೇಜಸ್ವೀ ಜ್ಯೇಷ್ಠಂ ಭ್ರಾತರಮಬ್ರವೀತ್ ॥೧॥

ಅರ್ಜುನನ ಮಾತನ್ನು ಕೇಳಿದ ಮೇಲೆ ಭೀಮಸೇನನಿಗೆ ಧರ್ಮರಾಜನ ಪ್ರವೃತ್ತಿ ಸಹಿಸಲಾಗಲಿಲ್ಲ. ಧೈರ್ಯವನ್ನು ತಾಳಿದ ಭೀಮಸೇನನು, ತೇಜಸ್ವಿಯಾದ ಹಿರಿಯ ಸಹೋದರನಾದ ಧರ್ಮರಾಜನನ್ನು ಕುರಿತು ಹೀಗೆ ಹೇಳಿದನು -

ರಾಜನ್ ವಿದಿತಧರ್ಮೋಽಸಿ ನ ತೇಽಸ್ತ್ಯವಿದಿತಂ ಭುವಿ।
ಉಪಶಿಕ್ಷಾಮ ತೇ ವೃತ್ತಂ ಸದೈವ ನ ಚ ಶಕ್ನುಮಃ ॥೨॥

ರಾಜನೇ! ಲೋಕದಲ್ಲಿ ವಿದಿತವಾದ ಎಲ್ಲ ಧರ್ಮವನ್ನು ನೀನು ತಿಳಿದವನು. ನಿನಗೆ ತಿಳಿಯದ್ದು ಯಾವುದೂ ಇಲ್ಲ. ನಿನ್ನ ಸದ್‌ವಿಚಾರಗಳನ್ನು ನಡತೆಗಳನ್ನು ನಾವು ನೋಡಿ ತಿಳಿದಿದ್ದೇವೆ. ಆದರೆ ಅದರಂತೆ ನಡೆಯಲು ಸಾಧ್ಯವಾಗುತ್ತಿಲ್ಲ.

ನ ವಕ್ಷ್ಯಾಮಿ ನ ವಕ್ಷ್ಯಾಮೀತ್ಯೇವಂ ಮೇ ಮನಸಿ ಸ್ಥಿತಮ್।
ಅತಿ ದುಃಖಾತ್ತು ವಕ್ಷ್ಯಾಮಿ ತನ್ನಿಬೋಧ ಜನಾಧಿಪ ॥೩॥

ಪ್ರಜೆಗಳ ಅರಸನೇ! ಈ ಸಂದರ್ಭದಲ್ಲಿ ನಾನು ಏನನ್ನೂ ಸರ್ವಥಾ ಹೇಳ-ಬಾರದೆಂದೇ ನಾನು ಮನಸ್ಸಿನಿಂದ ಸ್ಥಿರವಾಗಿದ್ದೇನೆ. ಆದರೆ ಬಹಳವಾದ ದುಃಖದಿಂದ ನಾನು ಮಾತನಾಡಬೇಕಾಗಿದೆ. ಹೇಳುವೆನು ಕೇಳು.

ಭವತಸ್ತು ಪ್ರಮೋಹೇನ ಸರ್ವಂ ಸಂಶಯಿತಂ ಕೃತಮ್।
ವಿಕ್ಲವತ್ವಂ ಚ ನಃ ಪ್ರಾಪ್ತಮಬಲತ್ವಂ ತಥೈವ ಚ ॥೪॥

ಭರತರ್ಷಭನೇ! ನಿನಗೆ ಇರುವ ಬುದ್ಧಿಮೋಹದಿಂದ ಎಲ್ಲವನ್ನು ಸಂದೇಹ - ದಿಂದಲೇ ಕಾಣಬೇಕಾಗಿದೆ. ನಮಗೆ ಹೇಡಿತನವೂ ಮತ್ತು ಅಶಕ್ತತೆಯೂ ನಿನ್ನಿಂದಲೇ ಉಂಟಾಗುತ್ತಿದೆ.

ಕಥಂ ಹಿ ರಾಜಾ ಲೋಕಸ್ಯ ಸರ್ವಶಾಸ್ತ್ರವಿಶಾರದಃ।
ಮೋಹಮಾಪದ್ಯಸೇ ದೈನ್ಯಾದ್ ಯಥಾ ಕಾಪುರುಷಸ್ತಥಾ ॥೫॥

ಪುರುಷೋತ್ತಮನೇ! ಸಕಲಶಾಸ್ತ್ರಗಳನ್ನೆಲ್ಲಾ ತಿಳಿದು ಲೋಕದ ಪ್ರಭುವಾಗಿರುವ ನೀನು ಯಾವ ಮೋಹಕ್ಕೆ ಸಿಲುಕಿ ಇಂಥ ದೈನ್ಯದ ಅವಸ್ಥೆಯನ್ನು ಹೊಂದಿರುವಿ?

ಅಗತಿಶ್ಚ ಗತಿಶ್ಚೈವ ಲೋಕಸ್ಯ ವಿದಿತಾ ತವ।
ಆಯತ್ಯಾಂ ಚ ತದಾತ್ವೇ ಚ ನ ತೇऽಸ್ತ್ಯವಿದಿತಂ ಪ್ರಭೋ ॥೬॥

ಅರಸನೇ! ಜಗತ್ತಿನ ಆಗುಹೋಗುಗಳನ್ನು ಚೆನ್ನಾಗಿ ತಿಳಿದವನು ನೀನು. ಈಗ ನಡೆಯುತ್ತಿರುವ ಮುಂದೆ ನಡೆಯುವ ಎಲ್ಲ ವಿಷಯಗಳನ್ನು ಎಲ್ಲವನ್ನು ತಿಳಿದವನು ನೀನು.

ಟಿಪ್ಪಣಿ - ಆಯತ್ಯಾಂ ಚ ತದಾತ್ವ ಇತ್ಯತ್ರ ತದಾತ್ವೇ ತತ್ಕಾಲೇ, ಆಯತ್ಯಾಂ ಉತ್ತರಕಾಲೇ ಚ ಯತ್ ಕಾರ್ಯಂ ತತ್ ತೇ ಅವಿದಿತಂ ನಾಸ್ತಿ। 'ತತ್ಕಾಲಸ್ತು ತದಾ ತ್ವಂ ಸ್ಯಾದುತ್ತರಃ ಕಾಲ ಆಯತಿಃ' ಇತ್ಯಮರಃ । ಮುಂದೆ ಆಗುವ ಕಾರ್ಯಗಳು ನಿನಗೆ ತಿಳಿಯದೇ ಇರುವುದು ಯಾವುದೂ ಇಲ್ಲ.

ಏವಂ ಗತೇ ಮಹಾರಾಜ ರಾಜ್ಯಂ ಪ್ರತಿ ಜನಾಧಿಪ।
ಹೇತುಮತ್ರ ಪ್ರವಕ್ಷ್ಯಾಮಿ ತದಿಹೈಕಮನಾಃ ಶೃಣು ॥೭॥

ಪ್ರಜೆಗಳ ಪ್ರಭುವೇ! ಮಹಾರಾಜನೇ! ನೀನು ರಾಜ್ಯವನ್ನು ಯಾವ ಕಾರಣದಿಂದ ನಡೆಸಬೇಕು ಎಂಬುದಕ್ಕೆ ಒಂದೆರಡು ಕಾರಣಗಳನ್ನು ಹೇಳುವೆನು. ಒಂದೇ ಮನಸ್ಸಿ-ನಿಂದ ಕೇಳು.

ದ್ವಿವಿಧೋ ಜಾಯತೇ ವ್ಯಾಧಿಃ ಶಾರಿರೋ ಮಾನಸಸ್ತಥಾ।
ಪರಸ್ಪರಂ ತಯೋರ್ಜನ್ಮ ನಿರ್ದ್ವಂದ್ವಂ ನೋಪಲಭ್ಯತೇ ॥೮॥

ಜೀವನಿಗೆ ಎರಡು ರೋಗಗಳು ಅಂಟಿಕೊಂಡು ಹುಟ್ಟುತ್ತವೆ. ಒಂದು ಶಾರೀರಿಕ-ರೋಗ ಮತ್ತೊಂದು ಮಾನಸಿಕ ರೋಗ. ಇವೆರಡು ಜನ್ಮಜನ್ಮಗಳಲ್ಲಿಯೂ ಪರಸ್ಪರ ಅಂಟಿಕೊಂಡೇ ಬರುತ್ತವೆಂದು ಜ್ಞಾನಿಗಳು ಹೇಳುತ್ತಾರೆ. ಒಂದರಿಂದ ಮತ್ತೊಂದು ಹುಟ್ಟುತ್ತದೆ.

ಶಾರೀರಾಜ್ಜಾಯತೇ ವ್ಯಾಧಿರ್ಮಾನಸೋ ನಾತ್ರ ಸಂಶಯಃ।
ಮಾನಸಾಜ್ಜಾಯತೇ ವ್ಯಾಧಿ ಶಾರೀರ ಇತಿ ನಿಶ್ಚಯಃ ॥೯॥

ಶರೀರದಿಂದ ಹುಟ್ಟಿದ ರೋಗವು ವ್ಯಾಧಿ ಎನಿಸಿದ ಮನಸ್ಸಿನ ರೋಗವಾಗುವಲ್ಲಿ ಸಂದೇಹವಿಲ್ಲ. ಮನಸ್ಸಿನಿಂದ ಹುಟ್ಟಿದ ರೋಗವು ಶರೀರದ ಮೇಲೆ ಪರಿಣಾಮ ಬೀರದೆ ಇರುವುದಿಲ್ಲ. ಇದು ನಿಶ್ಚಯವು.

ಶಾರೀರ ಮಾನಸೇ ದುಃಖೇ ಯೋऽತೀತೇ ಅನುಶೋಚತಿ।
ದುಃಖೇನ ಲಭತೇ ದುಃಖಂ ದ್ವಾವನರ್ಥೌ ಪ್ರಪದ್ಯತೇ ॥೧೦॥

ಹಿಂದೆ ಕಳೆದು ಹೋದ ಶಾರೀರಿಕವಾದ ಮತ್ತು ಮಾನಸಿಕವಾದ ದುಃಖಗಳನ್ನು ಸ್ಮರಿಸಿಕೊಂಡು ಯಾರು ಶೋಕಪಡುತ್ತಾರೋ ಅವರು ದುಃಖದಿಂದ ದುಃಖವನ್ನೇ ಅನುಭವಿಸುತ್ತಾರೆ. ಈ ಎರಡು ವಿಧವಾದ ಅನರ್ಥವನ್ನೇ ಹೊಂದುತ್ತಾರೆ.

ಶೀತೋಷ್ಣೇ ಚೈವ ವಾಯುಶ್ಚ ತ್ರಯಃ ಶಾರೀರಜಾ ಗುಣಾಃ।
ತೇಷಾಂ ಗುಣಾನಾಂ ಸಾಮ್ಯಂ ಚ ತದಾಹುಃ ಸ್ವಸ್ಥಲಕ್ಷಣಮ್ ॥೧೧॥

ನೀರು (ಶೀತ) ಬೆಂಕಿ (ಪಿತ್ತ) ಗಾಳಿ (ವಾತ) ಇವುಗಳು ಶರೀರದ ಗುಣಗಳು. ಈ ಗುಣಗಳು ಸಮಾನವಾಗಿದ್ದಾಗ ದೇಹವು ಆರೋಗ್ಯವಾಗಿರುತ್ತದೆ.

ತೇಷಾಮನ್ಯತಮೋದ್ರೇಕೇ ವಿಧಾನಮುಪದಿಶ್ಯತೇ।
ಉಷ್ಣೇನ ಬಾಧ್ಯತೇ ಶೀತಂ ಶೀತೇನೋಷ್ಣಂ ಪ್ರಬಾಧ್ಯತೇ ॥೧೨॥

ಈ ಮೂರರಲ್ಲಿ ಯಾವುದೇ ಒಂದು ಉದ್ರೇಕವಾದರೂ ಚಿಕಿತ್ಸೆಯು ಆವಶ್ಯಕ.

ಭರತರ್ಷಭನೇ! ನಿನಗೆ ಇರುವ ಬುದ್ಧಿಮೋಹದಿಂದ ಎಲ್ಲವನ್ನು ಸಂದೇಹ - ದಿಂದಲೇ ಕಾಣಬೇಕಾಗಿದೆ. ನಮಗೆ ಹೇಡಿತನವೂ ಮತ್ತು ಅಶಕ್ತತೆಯೂ ನಿನ್ನಿಂದಲೇ ಉಂಟಾಗುತ್ತಿದೆ.

ಕಥಂ ಹಿ ರಾಜಾ ಲೋಕಸ್ಯ ಸರ್ವಶಾಸ್ತ್ರವಿಶಾರದಃ।
ಮೋಹಮಾಪದ್ಯಸೇ ದೈನ್ಯಾದ್ ಯಥಾ ಕಾಪುರುಷಸ್ತಥಾ ॥೫॥

ಪುರುಷೋತ್ತಮನೇ! ಸಕಲಶಾಸ್ತ್ರಗಳನ್ನೆಲ್ಲಾ ತಿಳಿದು ಲೋಕದ ಪ್ರಭುವಾಗಿರುವ ನೀನು ಯಾವ ಮೋಹಕ್ಕೆ ಸಿಲುಕಿ ಇಂಥ ದೈನ್ಯದ ಅವಸ್ಥೆಯನ್ನು ಹೊಂದಿರುವಿ?

ಅಗತಿಶ್ಚ ಗತಿಶ್ಚೈವ ಲೋಕಸ್ಯ ವಿದಿತಾ ತವ।
ಆಯತ್ಯಾಂ ಚ ತದಾತ್ವೇ ಚ ನ ತೇऽಸ್ತ್ಯವಿದಿತಂ ಪ್ರಭೋ ॥೬॥

ಅರಸನೇ! ಜಗತ್ತಿನ ಆಗುಹೋಗುಗಳನ್ನು ಚೆನ್ನಾಗಿ ತಿಳಿದವನು ನೀನು. ಈಗ ನಡೆಯುತ್ತಿರುವ ಮುಂದೆ ನಡೆಯುವ ಎಲ್ಲ ವಿಷಯಗಳನ್ನು ಎಲ್ಲವನ್ನು ತಿಳಿದವನು ನೀನು.

ಟಿಪ್ಪಣಿ - ಆಯತ್ಯಾಂ ಚ ತದಾತ್ವ ಇತ್ಯತ್ರ ತದಾತ್ವೇ ತತ್ಕಾಲೇ, ಆಯತ್ಯಾಂ ಉತ್ತರಕಾಲೇ ಚ ಯತ್ ಕಾರ್ಯಂ ತತ್ ತೇ ಅವಿದಿತಂ ನಾಸ್ತಿ। 'ತತ್ಕಾಲಸ್ತು ತದಾ ತ್ವಂ ಸ್ಯಾದುತ್ತರಃ ಕಾಲ ಆಯತಿಃ' ಇತ್ಯಮರಃ । ಮುಂದೆ ಆಗುವ ಕಾರ್ಯಗಳು ನಿನಗೆ ತಿಳಿಯದೇ ಇರುವುದು ಯಾವುದೂ ಇಲ್ಲ.

ಏವಂ ಗತೇ ಮಹಾರಾಜ ರಾಜ್ಯಂ ಪ್ರತಿ ಜನಾಧಿಪ।
ಹೇತುಮತ್ರ ಪ್ರವಕ್ಷ್ಯಾಮಿ ತದಿಹೈಕಮನಾಃ ಶೃಣು ॥೭॥

ಪ್ರಜೆಗಳ ಪ್ರಭುವೇ! ಮಹಾರಾಜನೇ! ನೀನು ರಾಜ್ಯವನ್ನು ಯಾವ ಕಾರಣದಿಂದ ನಡೆಸಬೇಕು ಎಂಬುದಕ್ಕೆ ಒಂದೆರಡು ಕಾರಣಗಳನ್ನು ಹೇಳುವೆನು. ಒಂದೇ ಮನಸ್ಸಿ-ನಿಂದ ಕೇಳು.

ದ್ವಿವಿಧೋ ಜಾಯತೇ ವ್ಯಾಧಿಃ ಶಾರಿರೋ ಮಾನಸಸ್ತಥಾ।
ಪರಸ್ಪರಂ ತಯೋರ್ಜನ್ಮ ನಿರ್ದ್ವಂದ್ವಂ ನೋಪಲಭ್ಯತೇ ॥೮॥

ಜೀವನಿಗೆ ಎರಡು ರೋಗಗಳು ಅಂಟಿಕೊಂಡು ಹುಟ್ಟುತ್ತವೆ. ಒಂದು ಶಾರೀರಿಕ-ರೋಗ ಮತ್ತೊಂದು ಮಾನಸಿಕ ರೋಗ. ಇವೆರಡು ಜನ್ಮಜನ್ಮಗಳಲ್ಲಿಯೂ ಪರಸ್ಪರ ಅಂಟಿಕೊಂಡೇ ಬರುತ್ತವೆಂದು ಜ್ಞಾನಿಗಳು ಹೇಳುತ್ತಾರೆ. ಒಂದರಿಂದ ಮತ್ತೊಂದು ಹುಟ್ಟುತ್ತದೆ.

ಶಾರೀರಾಜ್ಜಾಯತೇ ವ್ಯಾಧಿರ್ಮಾನಸೋ ನಾತ್ರ ಸಂಶಯಃ।
ಮಾನಸಾಜ್ಜಾಯತೇ ವ್ಯಾಧಿ ಶಾರೀರ ಇತಿ ನಿಶ್ಚಯಃ ॥೯॥

ಶರೀರದಿಂದ ಹುಟ್ಟಿದ ರೋಗವು ವ್ಯಾಧಿ ಎನಿಸಿದ ಮನಸ್ಸಿನ ರೋಗವಾಗುವಲ್ಲಿ ಸಂದೇಹವಿಲ್ಲ. ಮನಸ್ಸಿನಿಂದ ಹುಟ್ಟಿದ ರೋಗವು ಶರೀರದ ಮೇಲೆ ಪರಿಣಾಮ ಬೀರದೆ ಇರುವುದಿಲ್ಲ. ಇದು ನಿಶ್ಚಯವು.

ಶಾರೀರ ಮಾನಸೇ ದುಃಖೇ ಯೋಽತೀತೇ ಅನುಶೋಚತಿ।
ದುಃಖೇನ ಲಭತೇ ದುಃಖಂ ದ್ವಾವನರ್ಥೌ ಪ್ರಪದ್ಯತೇ ॥೧೦॥

ಹಿಂದೆ ಕಳೆದು ಹೋದ ಶಾರೀರಿಕವಾದ ಮತ್ತು ಮಾನಸಿಕವಾದ ದುಃಖಗಳನ್ನು ಸ್ಮರಿಸಿಕೊಂಡು ಯಾರು ಶೋಕಪಡುತ್ತಾರೋ ಅವರು ದುಃಖದಿಂದ ದುಃಖವನ್ನೇ ಅನುಭವಿಸುತ್ತಾರೆ. ಈ ಎರಡು ವಿಧವಾದ ಅನರ್ಥವನ್ನೇ ಹೊಂದುತ್ತಾರೆ.

ಶೀತೋಷ್ಣೇ ಚೈವ ವಾಯುಶ್ಚ ತ್ರಯಃ ಶಾರೀರಜಾ ಗುಣಾಃ।
ತೇಷಾಂ ಗುಣಾನಾಂ ಸಾಮ್ಯಂ ಚ ತದಾಹುಃ ಸ್ವಸ್ಥಲಕ್ಷಣಮ್ ॥೧೧॥

ನೀರು (ಶೀತ) ಬೆಂಕಿ (ಪಿತ್ತ) ಗಾಳಿ (ವಾತ) ಇವುಗಳು ಶರೀರದ ಗುಣಗಳು. ಈ ಗುಣಗಳು ಸಮಾನವಾಗಿದ್ದಾಗ ದೇಹವು ಆರೋಗ್ಯವಾಗಿರುತ್ತದೆ.

ತೇಷಾಮನ್ಯತಮೋದ್ರೇಕೇ ವಿಧಾನಮುಪದಿಶ್ಯತೇ।
ಉಷ್ಣೇನ ಬಾಧ್ಯತೇ ಶೀತಂ ಶೀತೇನೋಷ್ಣಂ ಪ್ರಬಾಧ್ಯತೇ ॥೧೨॥

ಈ ಮೂರರಲ್ಲಿ ಯಾವುದೇ ಒಂದು ಉದ್ರೇಕವಾದರೂ ಚಿಕಿತ್ಸೆಯು ಆವಶ್ಯಕ.

ಅವುಗಳಲ್ಲಿಯೇ ಒಂದಕ್ಕೊಂದು ನಿವಾರಕ. ಉಷ್ಣದಿಂದ, ಶೀತವೂ ಶೀತದಿಂದ ಉಷ್ಣವೂ, ಅವೆರಡರಿಂದ ವಾತವೂ ಪರಿಹಾರವಾಗುತ್ತದೆ.

ಸತ್ತ್ವಂ ರಜಸ್ತಮಶ್ಚೈವ ಮಾನಸಾಃ ಸ್ಯುಸ್ತ್ರಯೋ ಗುಣಾಃ।
ಹರ್ಷೇಣ ಬಾಧ್ಯತೇ ಲೋಕೋ ಹರ್ಷಃ ಲೋಕೇನ ಬಾಧ್ಯತೇ ॥೧೩॥

ಹಾಗೆಯೇ ಸತ್ವ, ರಜಸ್ಸು, ತಮಸ್ಸು ಈ ಮೂರು ಮಾನಸಿಕ ಗುಣಗಳು. ಸಂತೋಷದಿಂದ ದುಃಖವೂ, ದುಃಖದಿಂದ ಸಂತೋಷವೂ ಜಗತ್ತಿನಲ್ಲಿ ಬಂಧಿತವಾಗಿದೆ.

ವಿವರಣೆ - ಸತ್ವ, ರಜಸ್ಸು, ತಮಸ್ಸು ಎಂಬ ಈ ಮೂರುಗುಣಗಳು ಮಾನಸಿಕ ಗುಣಗಳು. ಈ ಮೂರು ಗುಣಗಳೂ ಸಮಾನವಾಗಿರುವುದೇ ಮನೋವ್ಯಾಧಿಯಿಲ್ಲದುದಕ್ಕೆ ಲಕ್ಷಣವೆಂದು ಹೇಳುವರು. ಈ ಮೂರರಲ್ಲಿ ಒಂದು ಹೆಚ್ಚಾದರೂ ಅದಕ್ಕೆ ಪರಿಹಾರವು ವಿಧಿಸಲ್ಪಟ್ಟಿದೆ. ಸಂತೋಷದಿಂದ ದುಃಖವೂ ದುಃಖದಿಂದ ಸಂತೋಷವೂ ಅವೆರಡರ ಮೋಹವು ಕ್ರಮವಾಗಿ ಕಳೆಯುವುದೆಂದು ವಿಧಿಯಿದೆ.

ಕಶ್ಚಿತ್ ಸುಖೇ ವರ್ತಮಾನೋ ದುಃಖಸ್ಯ ಸ್ಮರ್ತುಮಿಚ್ಛತಿ।
ಕಶ್ಚಿತ್ ದುಃಖೇ ವರ್ತಮಾನಃ ಸುಖಸ್ಯ ಸ್ಮರ್ತುಮಿಚ್ಛತಿ ॥೧೪॥

ಸುಖದಲ್ಲಿರುವ ಕೆಲವರು ಕಳೆದ ದುಃಖದ ಕ್ಷಣಗಳನ್ನು ಮನಸ್ಸಿಗೆ ತಂದುಕೊಳ್ಳುವರು. ದುಃಖದಲ್ಲಿರುವ ಕೆಲವರು ಹಿಂದಿನ ಸುಖವನ್ನು ಮನಸ್ಸಿಗೆ ತಂದುಕೊಳ್ಳುವರು.

ನ ತ್ವಂ ನ ದುಃಖೀ ದುಃಖಸ್ಯ ನ ಸುಖೀ ಚ ಸುಖಸ್ಯ ಚ।
ನ ದುಃಖೀ ಸುಖಜಾತಸ್ಯ ನ ಸುಖೀ ದುಃಖಜಸ್ಯವಾ ॥೧೫॥

ನೀನಾದರೂ ದುಃಖವುಳ್ಳವನೂ ಅಲ್ಲ. ದುಃಖವಿಲ್ಲದವನೂ ಅಲ್ಲ. ನೀನು ದುಃಖವನ್ನು ನೆನೆಯ ಬೇಕಾದ ಸ್ಥಿತಿಯಲ್ಲಾಗಲಿ ಸುಖವನ್ನು ನೆನೆಯ ಬೇಕಾದ ಸ್ಥಿತಿಯಲ್ಲಾಗಲಿ ಇರುವವನಲ್ಲ.

ಸ್ಮರ್ತುಮರ್ಹಸಿ ಕೌರವ್ಯ ದಿಷ್ಟಂ ತು ಬಲವತ್ತರಮ್ ।
ಅಥವಾ ತೇ ಸ್ವಭಾವೋಽಯಂ ಯೇನ ಪಾರ್ಥಿವ ಕ್ಲಿಷ್ಯಸೇ ॥೧೬॥
ದೃಷ್ಟ್ವಾ ಸಭಾಗತಾಂ ಕೃಷ್ಣಾಮೇಕವಸ್ತ್ರಾಂ ರಜಸ್ವಲಾಮ್ ।
ಮಿಷತಾಂ ಪಾಂಡುಪುತ್ರಾಣಾಂ ನ ತತ್ ಸ್ಮರ್ತುಮಿಹಾರ್ಹಸಿ ॥೧೭॥

ಕುರುಕುಲನಂದನನೇ! ಹಿಂದಿನ ಘಟನೆಗಳನ್ನೆಲ್ಲಾ ಗಮನಿಸು. ಮುಖ್ಯವಾಗಿ ದೈವವು ಬಲವತ್ತರವಾದುದು. ಹಾಗಲ್ಲದಿದ್ದರೆ ಇಂಥ ಪರಿಸ್ಥಿತಿಯಲ್ಲಿಯೂ ಶಾಂತಿಯಿಂದಿರುವುದು ನಿನ್ನ ಸ್ವಭಾವವೇ ಆಗಿರಬಹುದು. ನೋಡು, ಸಭಾಮಧ್ಯದಲ್ಲಿ ಏಕವಸ್ತ್ರಧಾರಿಣಿಯಾದ ರಜಸ್ವಲೆಯಾದ ದ್ರೌಪದಿಯನ್ನು ಎಳೆದು ತಂದದ್ದು ನೆನಪಿಲ್ಲವೆ? ಪಾಂಡುಪುತ್ರರಾದ ನಮ್ಮೆದುರೇ ನಡೆದ ಘಟನೆಯು ಮರೆತು ಹೋಯಿತೇ?

ಟಿಪ್ಪಣಿ – ನ ತತ್ ಸ್ಮರ್ತುಮಿಹಾರ್ಹಸಿ ಇತ್ಯತ್ರ ಕಥಮ್ ಇತಿ ಪದಮಿಹಾಪ್ಯಾವರ್ತ್ಯ ಕಥಂ ಸ್ಮರ್ತುಂ ನಾರ್ಹಸೀತಿ ಯೋಜನಾ ಕಾರ್ಯಾ। 'ನ ತತ ಸ್ಮರ್ತುಮಿಹಾರ್ಹಸಿ' ಎಂಬಲ್ಲಿ ಕಥಮ್ ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಸ್ಮರಣೆ ಮಾಡಿಕೊಳ್ಳಲು ಏಕೆ ಸಾಧ್ಯವಾಗದು ಎಂಬುದು ಅದರರ್ಥ.

ಪ್ರವ್ರಾಜನಂ ಚ ನಗರಾದಜಿನೈಶ್ಚ ವಿವಾಸನಮ್ ।
ಮಹಾರಣ್ಯನಿವಾಸಶ್ಚ ನ ತಸ್ಯ ಸ್ಮರ್ತುಮರ್ಹಸಿ ॥೧೮॥

ಪಟ್ಟಣವನ್ನು ಬಿಟ್ಟು ಹೊರಹಾಕಲ್ಪಟ್ಟ ನಾವು ಕೃಷ್ಣಾಜಿನವನ್ನು ತೊಟ್ಟು ಘೋರ ಅರಣ್ಯದಲ್ಲಿ ಅಲೆದಾಡಿದೆವು. ಅದೆಲ್ಲವೂ ನಿನ್ನ ನೆನಪಿಗೆ ಬರುತ್ತಿಲ್ಲವೇ?

ಜಟಾಸುರಾತ್ ಪರಿಕ್ಲೇಶಂ ಚಿತ್ರಸೇನೇನ ಚಾಹವಮ್ ।
ಸೌಂಧವಾಚ್ಚ ಪರಿಕ್ಲೇಶಂ ಕಥಂ ವಿಸ್ಮೃತವಾನಸಿ ॥೧೯॥

ಪುನರಜ್ಞಾತಚರ್ಯಾಯಾಂ ಕೀಚಕೇನ ಪದಾ ವಧಮ್ ।
ದ್ರೌಪದ್ಯಾ ರಾಜಪುತ್ರ್ಯಾಶ್ಚ ಕಥಂ ವಿಸ್ಮೃತವಾನಸಿ ॥೨೦॥

ಜಟಾಸುರನು ನಮಗೆ ಉಪದ್ರವ ನೀಡಿದ, ಚಿತ್ರಸೇನನು ಕಾದಾಡಿದ.

ಸೈಂಧವನಿಂದ ಅನೇಕ ಕ್ಲೇಶಗಳನ್ನು ಅನುಭವಿಸಿದೆವು. ಎಲ್ಲ ಘಟನೆಗಳು ನಿನ್ನ ಸ್ಮೃತಿಗೆ ಬರುತ್ತಿಲ್ಲವೇಕೆ? ಅಜ್ಞಾತವಾಸ ಕಾಲದಲ್ಲಿ ರಾಜಕುಮಾರಿಯಾದ ದ್ರೌಪದೀದೇವಿಯನ್ನು ಕೀಚಕನು ಕಾಲಿನಿಂದ ಒದ್ದದ್ದು ಇವೆಲ್ಲವನ್ನು ಹೇಗೆ ನೀನು ಮರೆತು ಬಿಟ್ಟೆ ?

ಯಚ್ಚ ತೇ ದ್ರೋಣಭೀಷ್ಮಾಭ್ಯಾಂ ಯುದ್ಧಮಾಸೀದರಿಂದಮ।
ಮನಸೈಕೇನ ಯೋದ್ಧವ್ಯಮಿದಂ ಯುದ್ಧಮುಪಸ್ಥಿತಮ್ ॥೨೧॥

ಯಾವ ರೀತಿಯಾಗಿ ಹಿಂದೆ ನೀನು ದ್ರೋಣ ಭೀಷ್ಮಾದಿಗಳೊಡನೆ ಶತ್ರುವಿನಂತೆ ಯುದ್ಧಭೂಮಿಯಲ್ಲಿ ಕಾದಾಡಿದೆಯೋ, ಹಾಗೆಯೇ ಇಂದು ನೀನು ನಿನ್ನ ಮನಸ್ಸೆಂಬ ಶತ್ರುವಿನೊಡನೆ ಘೋರವಾದ ಯುದ್ಧವನ್ನು ಮಾಡುವ ಕಾಲವು ಬಂದೊದಗಿದೆ.

ಟಿಪ್ಪಣಿ – ಮನಸೈಕೇನ ಯೋದ್ಧವ್ಯಮ್ ಇತ್ಯತ್ರ ಏಕೇನ ತವ ಮನಸಾ ಇದಾನೀಂ ಯೋದ್ಧವ್ಯಮ್। ನಿನ್ನ ಮನಸ್ಸಿನ ಜೊತೆ ನೀನು ಯುದ್ಧ ಮಾಡಬೇಕು.

ಯತ್ರ ನಾಸ್ತಿ ಶರೈಃ ಕಾರ್ಯಂ ನ ಮಿತ್ರೈರ್ನ ಚ ಬಂಧುಭಿಃ।
ಆತ್ಮನೈಕೇನ ಯೋದ್ಧವ್ಯಂ ತತ್ತೇ ಯುದ್ಧಮುಪಸ್ಥಿತಮ್ ॥೨೨॥

ಈ ಯುದ್ಧಕ್ಕೆ ಬಾಣಗಳು ಬೇಕಾಗಿಲ್ಲ. ಯಾವ ಮಿತ್ರರೂ ಬಂಧುಗಳೂ ಬೇಕಾಗಿಲ್ಲ. ನೀನು ನಿನ್ನ ಮನಸ್ಸಿನ ಜೊತೆ ಹೋರಾಡಬೇಕಾಗಿದೆ.

ತಸ್ಮಿನ್ನನಿರ್ಜಿತೇ ಯುದ್ಧೇ ಪ್ರಾಣಾನ್ ಯದಿ ಹ ಮೋಕ್ಷಸೇ।
ಅನ್ಯಂ ದೇಹಂ ಸಮಾಸ್ಥಾಯ ತತಸ್ತ್ವೈರಪಿ ಯೋತ್ಸ್ಯಸೇ ॥೨೩॥

ಈ ಮಾನಸಿಕ ಯುದ್ಧದಲ್ಲಿ ನೀನು ನಿನ್ನ ಮನಸ್ಸನ್ನು ಗೆಲ್ಲಲೇಬೇಕು. ಇಲ್ಲದಿದ್ದರೆ ಮತ್ತೊಂದು ದೇಹವನ್ನು ಪಡೆದ ಮೇಲೂ ಆ ಮನಸ್ಸು ಮತ್ತೆ ನಿನ್ನೊಡನೆ ಯುದ್ಧ ಮಾಡದೆ ಬಿಡದು.

ತಸ್ಮಾದದ್ಯೈವ ಗಂತವ್ಯಂ ಯುದ್ಧಸ್ವ ಭರತರ್ಷಭ।
ಪರಮವ್ಯಕ್ತಧರ್ಮಸ್ಯ ವ್ಯಕ್ತಂ ತ್ಯಕ್ತ್ವಾ ಸ್ವಕರ್ಮಭಿಃ।

ತಸ್ಮಿನ್ನನಿರ್ಜಿತೇ ಯುದ್ಧೇ ಕಾಮವಸಾಂ ಗಮಿಷ್ಯಸಿ ।
ಏತಜ್ಜಿತ್ವಾ ಮಹಾರಾಜ ಕೃತಕೃತ್ಯೋ ಭವಿಷ್ಯಸಿ ॥೨೪॥

ಭರತರ್ಷಭನೇ! ಆದ್ದರಿಂದ ನೀನು ಯುದ್ಧವನ್ನು ಮಾಡಿಯೇ ತೀರಬೇಕು. ಮಹಾರಾಜನೇ! ಈ ಮಾನಸಯುದ್ಧದಲ್ಲಿ ನೀನು ಗೆದ್ದರೆ ಕೃತ್ಯಕೃತ್ಯನಾಗುವಿ.

ಏತಾಂ ಬುದ್ಧಿಂ ವಿನಿಶ್ಚಿತ್ಯ ಭೂತಾನಾಮಾಗತಿಂ ಗತಿಮ್ ।
ಪಿತೃಪೈತಾಮಹೇ ವೃತ್ತೇ ಶಾಧಿ ರಾಜ್ಯಂ ಯಥೋಚಿತವತ್ ॥೨೫॥

ಈ ದೃಢಭಾವವನ್ನು ಮನಸ್ಸಿನಲ್ಲಿ ನೆಲೆಗೊಳಿಸಿ ಪ್ರಾಣಿಗಳ ಸುಗತಿ ದುರ್ಗತಿ-ಗಳನ್ನು ಚಿಂತಿಸು. ನಿನ್ನ ತಂದೆ ತಾತಂದಿರು ನಡೆದ ಹಾದಿಯನ್ನೇ ಹಿಡಿದು ಯಥಾಶಕ್ತಿ ರಾಜ್ಯವನ್ನು ರಕ್ಷಿಸು.

ದಿಷ್ಟ್ಯಾ ದುರ್ಯೋಧನಃ ಪಾಪೋ ನಿಹತಃ ಸಾನುಗೋ ಯುಧಿ ।
ದ್ರೌಪದ್ಯಾಃ ಕೇಶಪಾಶಸ್ಯ ದಿಷ್ಟ್ಯಾ ತ್ವಂ ಪದವೀಂ ಗತಃ ॥೨೬॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ಭೀಮವಾಕ್ಯೇ ಷೋಡಶೋಽಧ್ಯಾಯಃ ॥೧೬॥

ನಿನ್ನ ಅದೃಷ್ಟದಿಂದ ಪಾಪಿಯಾದ ದುರ್ಯೋಧನನು ಸಮಸ್ತ ಪರಿವಾರ-ದೊಂದಿಗೆ ಯುದ್ಧದಲ್ಲಿ ಹತನಾದನು. ದ್ರೌಪದಿಯ ತಲೆ ಕೂದಲಿನ ಭಾಗ್ಯ ವಿಶೇಷವೇ ಅವನನ್ನು ಸರ್ವನಾಶ ಮಾಡಿತು. ನಿನ್ನ ಅದೃಷ್ಟದಿಂದ ಬಂದ ಈ ರಾಜ್ಯ-ಪದವಿಯನ್ನು ನೀನು ಹೊಂದು.

ಟಿಪ್ಪಣಿ - ಪರಮವ್ಯಕ್ತಧರ್ಮಸ್ಯ ಇತ್ಯತ್ರ ಅವ್ಯಕ್ತಧರ್ಮಸ್ಯ ಅತಿಸೂಕ್ಷ್ಮಸ್ಯ ಮನೋವಿವೇಕಸ್ಯ , ತ್ಯಕ್ತ್ವಾ ಅಜ್ಞಜನಸದೃಶಂ ಭಾವಂ ತ್ಯಕ್ತ್ವಾ ತಸ್ಮಿನ್ ಮನಸಿ ಅರ್ಜಿತೇ ಸತಿ ಕಾಮವಸ್ಥಾಂ ಗಮಿಷ್ಯಸೀತ್ಯರ್ಥಃ ।

ದ್ರೌಪದ್ಯಾಃ ಕೇಶಪಕ್ಷಸ್ಯ ಇತ್ಯತ್ರ ದ್ರೌಪದ್ಯಾಃ ಕೇಶಪಕ್ಷಸ್ಯ ಪದವೀಂ ದುರ್ಯೋ-ಧನಾದಯೋ ದಿಷ್ಟ್ಯಾ ಗತಾಃ । ಯಥಾ ದ್ರೌಪದ್ಯಾಃ ಕೇಶಪಕ್ಷಸ್ಪರ್ಶಾಕರ್ಷಣಾದಿನಾ

ತೈರ್ಘಾತಿತಮ್, ತಥಾ ಮಯಾಪಿ ಕೇಶಾದೌ ಪಾದಸ್ಪರ್ಶೇನ ಇತಸ್ತತ ಆಕರ್ಷಣೇನ ನ ಘಾತಿತಾ ಇತಿ ಭಾವಃ। ದ್ರೌಪದೀದೇವಿಯ ಕೇಶಾಕರ್ಷಣೆ ಮಾಡುವ ಮೂಲಕ ಹೇಗೆ ದುರ್ಯೋಧನಾದಿಗಳು ತೊಂದರೆ ಮಾಡಿದರೋ ಅದರಂತೆ ಅದೇ ದುರ್ಯೋಧನಾದಿ -ಗಳು ಪಾದಸ್ಪರ್ಶದಿಂದ ಸಂಹೃತರಾದರು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ಹದಿನಾರನೆಯ ಅಧ್ಯಾಯವು ಮುಗಿಯಿತು.

* * * * *

೧೭. ಹದಿನೇಳನೆಯ ಅಧ್ಯಾಯ

ಭೀಮಸೇನದೇವರ ಮಾತುಗಳನ್ನು ಅಂಗೀಕರಿಸದೆ ಜ್ಞಾನಿಜನರ ಮಾರ್ಗವನ್ನು ಪ್ರಶಂಸೆ ಮಾಡಿದ ಯುಧಿಷ್ಠಿರ.

ಯುಧಿಷ್ಠಿರಃ

ಅಸಂತೋಷಃ ಪ್ರಮಾದಶ್ಚ ಮದೋ ರಾಗೋಽಪ್ರಶಾಂತತಾ।
ಬಲಂ ಮೋಹೋಽಭಿಮಾನಶ್ಚಾಪ್ಯುದ್ವೇಗಶ್ಚೈವ ಸರ್ವಶಃ ॥೧॥

ಯುಧಿಷ್ಠಿರ – ಭೀಮಸೇನ ! ಅಸಂತೃಪ್ತಿ, ಮೈಮರೆಯುವುದು, ಮದ, ರಾಗ, ಅಶಾಂತಿ, ಬಲ, ಮೋಹ, ಅಭಿಮಾನ, ಉದ್ವೇಗ ಎಂಬ ಈ ದುರ್ಗುಣಗಳು ಒಂದೆಡೆ ಸೇರಿದಾಗ ಆಸೆ ಹುಟ್ಟುವುದು ಸಹಜ.

ಏಭಿಃ ಪಾಪ್ಮಭಿರಾವಿಷ್ಟೋ ರಾಜ್ಯಂ ತ್ವಮಭಿಕಾಂಕ್ಷಸೇ।
ನಿರಾಮಿಷೋ ವಿನಿರ್ಮುಕ್ತಃ ಪ್ರಶಾಂತಃ ಸುಸುಖೀ ಭವ ॥೨॥

ಈ ಎಲ್ಲ ಪಾಪಗಳು ನಿನ್ನಲ್ಲಿ ಸೇರಿ ರಾಜ್ಯಕ್ಕಾಗಿ ಆಸೆಪಡುತ್ತಿರುವಿ. ಭೋಗ್ಯ-ವಸ್ತುಗಳನ್ನೆಲ್ಲ ಬಿಟ್ಟು ಶಾಂತಿಯನ್ನು ಬಯಸಿದರೆ ಪ್ರಶಾಂತವಾದ ಮನಸ್ಸನ್ನು ಹೊಂದಿ ಸುಖವಾಗಿರುವಿ.

ಯ ಇಮಾಮಖಿಲಾಂ ಭೂಮಿಂ ಶಿಷ್ಯಾದೇಕೋ ಮಹೀಪತಿಃ।
ತಸ್ಯಾಪ್ಯುದರಮೇಕಂ ವೈ ಕಿಮಿದಂ ತ್ವಂ ಪ್ರಶಂಸಸಿ ॥೩॥

ಭೂಮಿಪಾಲನೇ! ಸಮಸ್ತ ಭೂಮಂಡಲವನ್ನು ಆಳಬೇಕಾದ ಚಕ್ರವರ್ತಿಗೂ ಹೊರೆಯ ಬೇಕಾದ ಹೊಟ್ಟೆಯು ಒಂದೇ! ವಿಷಯವು ಹೀಗಿರುವಾಗ ರಾಜ್ಯಾಡಳಿತವನ್ನು ಏಕೆ ಪ್ರಶಂಸುತ್ತಿರುವಿ.

ಟಿಪ್ಪಣಿ - ಶಿಷ್ಯಾದೇಕೋ ಮಹೀಪತಿಃ ಇತ್ಯತ್ರ ಶಿಷ್ಯಾತ್ ಶಾಸನಂ ಕುರ್ಯಾತ್। ತಸ್ಯಾಪಿ ಏಕಮೇವ ಉದರಮ್, ನತು ದ್ವಯಮಸ್ತಿ। ರಾಜನೆಂಬ ಕಾರಣದಿಂದ ಅವನಿಗೆ ಎರಡು ಹೊಟ್ಟೆ ಇರುವುದಿಲ್ಲ.

ನಾಹ್ನಾ ಪೂರಯಿತುಂ ಶಕ್ಯಾಂ ನ ಮಾಸೈರ್ಭರತರ್ಷಭ।
ಅಪೂರ್ಯಾಂ ಪೂರಯನ್ನಿಚ್ಛಾಮಾಯುಷಾಪಿ ನ ಶಕ್ನುಯಾತ್ ॥೪॥

ನರಸಿಂಹನೇ ! ರಾಜ್ಯವನ್ನು ಪಡೆದುಕೊಳ್ಳಬೇಕೆಂದು ಹೇಳುತ್ತಿರುವಿ. ಒಂದು ದಿನದಲ್ಲಿಯಾಗಲಿ, ಅನೇಕ ತಿಂಗಳುಗಳಿಂದಾಗಲಿ ಪೂರೈಸಲು ಸಾಧ್ಯವಿಲ್ಲದ ಆಸೆಯೆಂಬುದನ್ನು ಆಯುಷ್ಯವೆಲ್ಲವೂ ದುಡಿದರೂ ಪೂರೈಸಲು ಸಾಧ್ಯವಿಲ್ಲ.

ಟಿಪ್ಪಣಿ - ಅಪೂರ್ಯಾಂ ಪೂರಯನ್ನಿಚ್ಛಾಮ್ ಇತ್ಯತ್ರ ಇಚ್ಛಾಂ ನ ಶಕ್ನುಯಾತ್ ಪೂರಯಿತುಂ ನ ಶಕ್ನುಯಾದಿತಿ ಯೋಗ್ಯಪದಾಧ್ಯಾಹಾರೇಣ ಯೋಜನಾ। 'ಪೂರಯಿತುಂ' ಎಂಬ ಪದವನ್ನು ಅಧ್ಯಾಹಾರ ಮಾಡಿಕೊಂಡು ಪೂರಯಿತುಂ ನ ಶಕ್ನುಯಾತ್ ಎಂಬರ್ಥವನ್ನು ಹೇಳಬೇಕು.

ಯಥೇದ್ಧಃ ಪ್ರಜ್ವಲತ್ಯಗ್ನಿರಸಮಿದ್ಧಃ ಪ್ರಶಾಮ್ಯತಿ।
ಅಲ್ಪಾಹಾರತಯಾ ತ್ವಗ್ನಿಂ ಶಮಯೌದರ್ಯಮುತ್ಥಿತಮ್ ॥೫॥

ಬೆಂಕಿಗೆ ಕಟ್ಟಿಗೆಯನ್ನು ಹಾಕಿದಷ್ಟು ಪ್ರಜ್ವಲಿಸುವುದು, ಕಟ್ಟಿಗೆಯನ್ನು ಹಾಕುವುದು ನಿಲ್ಲಿಸಿದರೆ ಆ ಅಗ್ನಿಯು ತನ್ನಷ್ಟಕ್ಕೆ ಶಾಂತವಾಗುವುದು.

ಆತ್ಮೋದರಕೃತೇऽಪ್ರಾಜ್ಞಃ ಕರೋತಿ ವಿಫಸಂ ಬಹು।
ಜಯೋದರಂ ಪೃಥಿವ್ಯಾ ತೇ ಶ್ರೇಯೋ ನಿರ್ಜಿತಯಾ ಜಿತಮ್ ॥೬॥

ತಿಳುವಳಿಕೆ ಇಲ್ಲದ ಮನುಷ್ಯನು ಹೊಟ್ಟೆಯನ್ನು ತುಂಬಿಸಿಕೊಳ್ಳುವುದಕ್ಕಾಗಿಯೇ

ಅನೇಕ ಬಗೆಯ ಹಿಂಸೆಯನ್ನು ಮಾಡುವನು. ಉರಿಯುವ ಜಾಠರಾಗ್ನಿಯನ್ನು ಮಿತವಾದ ಆಹಾರದಿಂದಲೇ ಕ್ರಮವಾಗಿ ಅಡಗಿಸಬಹುದು. ಆದ್ದರಿಂದ ಹೊಟ್ಟೆಯೊಂದನ್ನು ಜಯಿಸಿದರೆ ಸಮಸ್ತಭೂಮಿಯನ್ನೇ ಜಯಿಸಿದ ಶ್ರೇಯಸ್ಸು ನಿನಗಾಗುತ್ತದೆ.

ಮಾನುಷಾನ್ ಕಾಮಭೋಗಾಂಸ್ತ್ವಮೈಶ್ವರ್ಯಂ ಚ ಪ್ರಶಂಸಸಿ।
ಅಭೋಗಿನೋऽಬಲಾಶ್ಚೈವ ಯಾಂತಿ ಸ್ಥಾನಮನುತ್ತಮಮ್ ॥೭॥

ಮನುಷ್ಯರು ಬಯಸುವ ಕಾಮ, ಭೋಗ ಮತ್ತು ಐಶ್ವರ್ಯಗಳನ್ನು ನೀನು ಪ್ರಶಂಸಿಸುತ್ತಿರುವೆ. ಈ ಎಲ್ಲ ಭೋಗಗಳನ್ನು ತೊರೆದ ದೇಹಬಲಹೀನರಾದ ಅನೇಕರು ಉತ್ತಮವಾದ ಸ್ಥಾನವನ್ನು ಪಡೆದಿರುವರು.

ಯೋಗಃ ಕ್ಷೇಮಶ್ಚ ರಾಷ್ಟ್ರಸ್ಯ ಧರ್ಮಾಧರ್ಮೌ ತ್ವಯಿ ಸ್ಥಿತೌ।
ಮುಚ್ಯಸ್ವ ಮಹತೋ ಭಾರಾತ್ ತ್ಯಾಗಮೇವಾಭಿಸಂಶ್ರಯ ॥೮॥

ರಾಷ್ಟ್ರಭಾರವನ್ನು ನೀನು ವಹಿಸಿದರೆ ರಾಷ್ಟ್ರದ ಯೋಗಕ್ಷೇಮವನ್ನು ಮತ್ತು ಧರ್ಮಾಧರ್ಮದ ಭಾರವನ್ನು ಹೊರಬೇಕು. ಇಂಥ ಮಹಾಭಾರವನ್ನು ಹೊರುವುದಕ್ಕೆ ಏಕೆ ಬಯಸುವೆ. ತ್ಯಾಗರೂಪದ ಸನ್ನ್ಯಾಸವನ್ನು ಆಶ್ರಯಿಸಿ ಮುಕ್ತನಾಗು.

ಏಕೋದರಕೃತೇ ವ್ಯಾಘ್ರಃ ಕರೋತಿ ವಿಘಸಂ ಬಹು।
ತಮನ್ಯೇऽಪ್ಯುಪಜೀವಂತಿ ಮಂದಾ ಲೋಭವಶಾ ಮೃಗಾಃ ॥೯॥

ತನ್ನ ಒಂದು ಹೊಟ್ಟೆಗೋಸ್ಕರ ಹುಲಿಯು ಬಹಳ ಪ್ರಾಣಿಗಳನ್ನು ಹಿಂಸೆ ಮಾಡುತ್ತದೆ. ಆ ಮೃಗದಂತೆ ಬುದ್ಧಿಹೀನರಾದ ಕೆಲವು ಮಂದಿ ಕ್ರೂರಮಾರ್ಗವನ್ನೇ ಅನುಸರಿಸುವರು.

ಟಿಪ್ಪಣಿ - ಕರೋತಿ ವಿಘಸಂ ಬಹು ಇತ್ಯತ್ರ ವಿಘಸಂ ವಿಘಸನಂ ಪ್ರಾಣಹಿಂಸನಮ್। ಜಯೋದರಂ ಪೃಥಿವ್ಯಾ ತ ಇತ್ಯತ್ರ ಉದರಂ ಜಯ। ನಿರ್ಜಿತಯಾ ತಯಾ ಪೃಥಿವ್ಯಾ ತವ ಶ್ರೇಯೋ ಭವತೀತಿ ಯೋಜನಾ।

ವಿಷಯಾನ್ ಪ್ರತಿಸಂಗೃಹ್ಯ ಸನ್ನ್ಯಾಸಂ ಕುರುತೇ ಯತಿಃ।
ನ ಚ ತುಷ್ಯಂತಿ ರಾಜಾನಃ ಪಶ್ಯ ಬುದ್ಧ್ಯಂತರಂ ಯಥಾ ॥೧೦॥

ರಾಜ್ಯದಲ್ಲಿ ಸುಖವಿದೆ ಎಂದು ತಿಳಿದಿರುವೆಯಾ? ರಾಜನಿಗೆ ವಿಷಯಗಳ ಬಗ್ಗೆ ಮನಸ್ಸು ಚಿಂತಿಸುವುದು. ವಿಷಯಸುಖಗಳನ್ನೆಲ್ಲ ತೊರೆದು ಸನ್ನ್ಯಾಸದಲ್ಲಿ ಮನಸ್ಸಿಟ್ಟವನಿಗೆ ಮಾತ್ರ ಮನವು ಸಂತೋಷದಿಂದ ಇರುತ್ತದೆ.

ಪತ್ರಾಹಾರೈರಶ್ಮಕುಟ್ಟೈರ್ದಂತೋಲೂಖಲಿಕೈಸ್ತಥಾ।
ಅಂಬ್ಭಕ್ಷೈರ್ವಾಯುಭಕ್ಷೈಶ್ಚ ತೈರಯಂ ನರಕೋ ಜಿತಃ ॥೧೧॥

ಕೆಲವು ಸನ್ನ್ಯಾಸಿಗಳು ಬರೀ ಎಲೆಗಳನ್ನು ಮಾತ್ರ ಉಣ್ಣುವರು. ಕೆಲವರು ತಮಗೆ ದೊರೆತ ಧಾನ್ಯವನ್ನು ಕಲ್ಲಿನಿಂದ ಕುಟ್ಟಿ ತಿನ್ನುವರು. ಕೆಲವರು ಕೇವಲ ತಮ್ಮ ಹಲ್ಲಿನಿಂದ ಜಗಿದು ತಿನ್ನುವರು. ಮತ್ತು ಕೆಲವರು ಕೇವಲ ನೀರನ್ನು ಕುಡಿಯುವರು. ಕೆಲವರು ಕೇವಲ ವಾಯುಭಕ್ಷಕರಾಗಿರುವರು. ಇಂಥವರು ನರಕವನ್ನು ಗೆಲ್ಲುವರು.

ಯಸ್ತ್ವಿಮಾಂ ವಸುಧಾಂ ಕೃತ್ಸ್ನಾಂ ಪ್ರಶಾಸೇದಖಿಲಾಂ ನೃಪಃ।
ತುಲ್ಯಾಶ್ಮಕಾಂಚನೋ ಯಶ್ಚ ಸ ಕೃತಾರ್ಥೋ ನ ಪಾರ್ಥಿವಃ ॥೧೨॥

ಭೂಮಂಡಲವನ್ನು ಚಕ್ರವರ್ತಿಯಾಗಿ ಪಾಲಿಸುವ ರಾಜನು ಕಲ್ಲನ್ನು ಹಾಗೂ ಬಂಗಾರವನ್ನು ಸಮಾನವಾಗಿ ಕಾಣುವ ಸನ್ನ್ಯಾಸಿ ಇವರಿಬ್ಬರಲ್ಲಿ ಸನ್ನ್ಯಾಸಿಯೇ ಕೃತಾರ್ಥನು; ರಾಜನಲ್ಲ.

ಸಂಕಲ್ಪೇಷು ನಿರಾರಂಭೋ ನಿರಾಶೋ ನಿರ್ಮಮೋ ಭವ।
ಅಶೋಕಂ ಸ್ಥಾನಮಾತಿಷ್ಠ ಇಹ ಚಾಮುತ್ರ ಚಾವ್ಯಯಮ್ ॥೧೩॥

ಆದ್ದರಿಂದ ನೀನು ಅಂದುಕೊಂಡ ಕರ್ಮಗಳನ್ನು ಮಾಡಬೇಕಾಗಿಲ್ಲ. ಆಸೆಗಳನ್ನು ತೊರೆದು ಮಮತೆಯನ್ನು ಪರಿತ್ಯಜಿಸು. ಇದರಮೂಲಕ ಈ ಲೋಕದಲ್ಲಿ ಪರಲೋಕದಲ್ಲಿಯೂ ಅಕ್ಷಯವಾದ ದುಃಖವಿಲ್ಲದ ಪದವಿಯನ್ನು ಹೊಂದುವಿ.

ನಿರಾಮಿಷಾ ನ ಶೋಚಂತಿ ಶೋಚಸಿ ತ್ವಂ ಕಿಮಾಮಿಷಮ್ ।
ಪರಿತ್ಯಜ್ಯಾಮಿಷಂ ಸರ್ವಂ ಮೃಷಾವಾದಾತ್ ಪ್ರಮೋಕ್ಷ್ಯಸೇ ॥೧೪॥

ವಿಷಯ ಸುಖದಲ್ಲಿ ಮುಳುಗಿದಷ್ಟು ದುಃಖವೇ ಹೆಚ್ಚು. ವಿಷಯಸುಖವನ್ನು ಬಯಸದವನಿಗೆ ದುಃಖವೇ ಇಲ್ಲ. ಆದ್ದರಿಂದ ನೀನು ವಿಷಯಭೋಗವನ್ನು ಬಿಡು. ರಾಜ್ಯದಲ್ಲಿ ಇದ್ದರೂ ಅವನು ತ್ಯಾಗಿಯೇ ಎಂಬ ಸುಳ್ಳುವಾದವನ್ನು ಬಿಡು.

ಪಂಥಾನೌ ಪಿತೃಯಾನಶ್ಚ ದೇವಯಾನಶ್ಚ ವಿಶ್ರುತೌ ।
ಈಜಾನಾಃ ಪಿತೃಯಾನೇನ ದೇವಯಾನೇನ ಮೋಕ್ಷಿಣಃ ॥೧೫॥

ಪಿತೃಯಾನ ಮತ್ತು ದೇವಯಾನ ಎಂಬ ಎರಡು ಮಾರ್ಗಗಳಿವೆ. ಯಾರು ಸಕಾಮರಾಗಿ ಯಜ್ಞಾನುಷ್ಠಾನ ಮಾಡುವರೋ ಅವರು ಪಿತೃಯಾನದ ಮೂಲಕ ಪುಣ್ಯಲೋಕಗಳಿಗೆ ಹೋಗುತ್ತಾರೆ. ಯಾರು ಆಸೆಯನ್ನು ಬಿಟ್ಟು ಸನ್ಯಾಸಿಗಳಾಗುತ್ತಾರೋ, ಅವರು ದೇವಯಾನದ ಮೂಲಕ ಮೋಕ್ಷವನ್ನು ಹೊಂದುತ್ತಾರೆ.

ತಪಸಾ ಬ್ರಹ್ಮಚರ್ಯೇಣ ಸ್ವಾಧ್ಯಾಯೇನ ಮಹರ್ಷಯಃ ।
ವಿಮುಚ್ಯ ದೇಹಾಂಸ್ತೇ ಯಾಂತಿ ಮೃತ್ಯೋರವಿಷಯಂ ಗತಾಃ ॥೧೫॥

ಸ್ವಾಧ್ಯಾಯ, ತಪಸ್ಸು, ಬ್ರಹ್ಮಚರ್ಯೆ, ಇವುಗಳಿಂದ ಕಾಲವನ್ನು ಕಳೆಯುತ್ತಾ ದೇಹವನ್ನು ತ್ಯಜಿಸಿದ ಎಷ್ಟೋ ಮಹರ್ಷಿಗಳು ಮೃತ್ಯುವಿಗೆ ಗೋಚರವಲ್ಲದ ಶಾಶ್ವತಪದವಿಗೆ ಹೋಗಿರುವರು.

ವಿವರಣೆ - ಮೃತ್ಯುವಿಗೆ ಗೋಚರವಲ್ಲದ ಎಂದರೆ ಮುಕ್ತರಾಗುವುದು ಎಂದರ್ಥ. ಮೃತ್ಯುವಶರಾದವರಿಗೆ ಪುನರ್ಜನ್ಮವು ತಪ್ಪಿದ್ದಲ್ಲ. ಜನನ ಮರಣಗಳ ಚಕ್ರ ತಪ್ಪಿದ್ದಲ್ಲ.

ದೇಹವನ್ನು ಬಿಡುವುದೆಂದರೆ ಮರಣ ಹೊಂದುವುದು ಎಂದೇ ಅರ್ಥವಾದರೂ ಮೃತ್ಯುವಿಗೆ ವಿಷಯವಾಗದೇ ದೇಹವನ್ನು ಬಿಟ್ಟು ಪರಮಪದವನ್ನು ಸೇರುತ್ತಾರೆ ಎಂದರ್ಥ.

ಆಮಿಷಂ ಬಂಧನಂ ಲೋಕೇ ಕರ್ಮೇಹೋಕ್ತಂ ತಥಾಮಿಷಮ್ ।
ತಾಭ್ಯಾಂ ವಿಮುಕ್ತಃ ಪಾಪಾಭ್ಯಾಂ ಪದಮಾಪ್ನೋತಿ ತತ್ಪರಮ್ ॥೧೭॥

ಜಗತ್ತಿನಲ್ಲಿ ವಿಷಯ ಬಂಧನ ಹಾಗೂ ಅದಕ್ಕೆ ಪೂರಕವಾದ ಕರ್ಮಗಳು ಆಮಿಷಗಳೆಂದು ಕರೆಯಲ್ಪಡುತ್ತವೆ. ವಿಷಯಬಂಧನದಲ್ಲಿ ಸಿಲುಕುವುದು ಮತ್ತು ಅದಕ್ಕೆ ಪೂರಕವಾದ ಕರ್ಮಗಳಲ್ಲಿ ಆಸಕ್ತನಾಗುವುದು ಈ ಎರಡು ಪಾಪಗಳಿಂದ ಮುಕ್ತನಾದವನೇ ಪರಮಪದವನ್ನು ಹೊಂದುವನು.

ಅಪಿ ಗಾಥಾಂ ಪುರಾ ಗೀತಾಂ ಜನಕೇನ ವದಂತ್ಯುತ ।
ನಿರ್ದ್ವಂದ್ವೇನ ವಿಮುಕ್ತೇನ ಮೋಕ್ಷಂ ಸಮನುಪಶ್ಯತಾ ॥೧೮॥

ದ್ವಂದ್ವಗಳನ್ನು ತೊರೆದು ಸಂಗವಿಮುಕ್ತನಾಗಿ ಮೋಕ್ಷಮಾರ್ಗವನ್ನು ತಿಳಿದ ಜನಕಮಹಾರಾಜನು ಹಿಂದೆ ಹೇಳಿದ ಗಾಥೆಯೊಂದನ್ನು ಹಿರಿಯರು ಹೇಳುತ್ತಾರೆ. ಅದನ್ನು ನಾನು ಕೇಳಿರುವೆನು.

ಅನಂತಂ ಬತ ಮೇ ವಿತ್ತಂ ಯಸ್ಯ ಮೇ ನಾಸ್ತಿ ಕಿಂಚನ ।
ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ದಹ್ಯತಿ ಕಿಂಚನ ॥೧೯॥

ನನಗೆ ಲೆಕ್ಕವಿಲ್ಲದಷ್ಟು ಧನವಿದೆ. ಆದರೆ ಅದರಲ್ಲಿ ಒಂದೂ ನನ್ನದಲ್ಲ. ಈ ಮಿಥಿಲೆಯು ಬೆಂಕಿಯಲ್ಲಿ ಉರಿದು ಹೋದರೂ ನನ್ನದಾವುದೂ ಸುಡುವುದಿಲ್ಲ.

ವಿವರಣೆ - ಧನವು ನನ್ನದಲ್ಲವೆಂದು ತಿಳಿದಿದ್ದೇನೆ. ನನ್ನ ದೇಹ ಸಹಿತ ಈ ಮಿಥಿಲೆಯೇ ಸುಟ್ಟುಹೋದರೂ ನನ್ನದಾದ ಈ ಆತ್ಮವನ್ನು ಸುಡಲು ಯಾವ ದಾವಾಗ್ನಿಗೂ ಸಾಧ್ಯವಾಗುವುದಿಲ್ಲ.

ಪ್ರಜ್ಞಾಪ್ರಾಸಾದಮಾರುಹ್ಯ ಅಶೋಚನ್ ಶೋಚತೋ ಜನಾನ್ ।
ಜಗತೀಸ್ಥಾನಿವಾದ್ರಿಸ್ಥೋ ಮಂದಬುದ್ಧಿನವೇಕ್ಷತೇ ॥೨೦॥

ಪರ್ವತದ ಮೇಲೆ ನಿಂತುಕೊಂಡಿರುವವನು ಕೆಳಗಿರುವವನನ್ನು ಹೇಗೆ ನೋಡುತ್ತಾನೆ. ಅದರಂತೆ ಪ್ರಜ್ಞಾ ಎಂಬ ಮಹಡಿಯ ಮೇಲೆ ಕುಳಿತ ಶೋಕ,

ಮೋಹ ಮೊದಲಾದ ದೋಷಗಳಿಲ್ಲದ ಜ್ಞಾನಿಯು ಸಂಸಾರದಲ್ಲಿ ಮುಳುಗಿದ ಮಂದಬುದ್ಧಿ ಜನರನ್ನು ನೋಡುತ್ತಾನೆ.

ವಿವರಣೆ - ಪರ್ವತದ ಮೇಲೆ ನಿಂತಿರುವವನು ನೆಲದ ಮೇಲೆ ನಿಂತಿರುವವನನ್ನು ನೋಡಿ ಪ್ರಭಾವಿತನಾಗುವುದಿಲ್ಲವೋ, ಅದರಂತೆ ಪ್ರಜ್ಞಾ ಎಂಬ ಪ್ರಾಸಾದದಲ್ಲಿ ಕುಳಿತ ಜ್ಞಾನಿಯೂ ಕೂಡ ಶೋಕ, ಮೋಹಗಳನ್ನು ಹೊಂದಿ ಸಂಸಾರದಲ್ಲಿ ಮುಳುಗಿದ ಜನರಿಂದ ಯಾವುದೇ ಪ್ರಭಾವಕ್ಕೆ ಒಳಗಾಗುವುದಿಲ್ಲ.

ದೃಶ್ಯಂ ಪ್ರಶ್ಯತಿ ಯಃ ಪಶ್ಯನ್ ಸ ಚಕ್ಷುಷ್ಮಾನ್ ಸ ಬುದ್ಧಿಮಾನ್ ।
ಅಜ್ಞಾತಾನಾಂ ಚ ವಿಜ್ಞಾನಾತ್ ಸಂಬೋಧಾದ್ ಬುದ್ಧಿರುಚ್ಯತೇ॥೨೧॥

ತಿಳಿಯುವ ಸಂದರ್ಭದಲ್ಲಿ ತಿಳಿಯಲೇ ಬೇಕಾದದ್ದನ್ನು ಯಾರು ತಿಳಿಯುತ್ತಾನೋ, ಅಂಥವನೇ ಬುದ್ಧಿವಂತನು ಮತ್ತು ನಿಜವಾದ ಕಣ್ಣುಗಳನ್ನು ಹೊಂದಿರುವವನು. ಅತ್ಯಂತ ನಿಗೂಢವಾದ ವಿಚಾರವನ್ನು ತಿಳಿಸಿಕೊಡುವುದರಿಂದ ಮತ್ತು ಇದು ಕರ್ತವ್ಯ, ಇದು ಕರ್ತವ್ಯವಲ್ಲ ಎಂಬುದಾಗಿ ಬೋಧಿಸುವುದರಿಂದಲೂ ಅಂತಃಕರಣಕ್ಕೆ ಬುದ್ಧಿ ಎಂಬುದಾಗಿ ಕರೆಯುತ್ತಾರೆ.

ವಿವರಣೆ - ಯಾರು ಈ ಸಮಗ್ರ ಜಗತ್ತನ್ನು ನೋಡುತ್ತಾ ಇದೆಲ್ಲವೂ ಕೇವಲ ನಾಟಕವಾಗಿದೆ ಎಂಬುದಾಗಿ ತಿಳಿದುಕೊಳ್ಳುತ್ತಾನೋ, ಅವನು ನಿಜವಾದ ಕಣ್ಣುಗಳನ್ನು ಹೊಂದಿದವನು. ಬುದ್ಧಿವಂತನೂ ಕೂಡ ಆಗಿರುತ್ತಾನೆ. ತಿಳಿಯದೇ ಇರುವ ಆತ್ಮನನ್ನು ತಿಳಿಸಿಕೊಡವುದೇ ಬುದ್ಧಿ. ಅದರ ಅನುಭವಕ್ಕೆ ತಂದುಕೊಳ್ಳುವುದರಿಂದ ಅದನ್ನು ಬುದ್ಧಿ ಎಂಬುದಾಗಿ ಕರೆಯುತ್ತಾರೆ.

ತಿಳಿಯಬೇಕಾದ ಕರ್ತವ್ಯಾಕರ್ತವ್ಯಗಳನ್ನು ತಿಳಿದವನೇ ನಿಜವಾದ ಕಣ್ಣುಳ್ಳವನು. ಅವನೇ ಬುದ್ಧಿವಂತನು. ತಿಳಿಯದ ವಿಷಯವನ್ನು ತಿಳಿಯುವ ಹಾಗೆ ಹೇಳುವವನು ಸಂಶಯಗಳನ್ನು ಕಳೆಯುವವನು ಬುದ್ಧಿವಂತನೆಂದು ಕರೆಯಲ್ಪಡುವನು.

ಯಸ್ತು ವಾಚಂ ವಿಜಾನಾತಿ ಬಹುಮಾನಮಿಯಾತ್ ಸ ವೈ ।
ಬ್ರಹ್ಮಭಾವಪ್ರಪನ್ನಾನಾಂ ವೈದ್ಯಾನಾಂ ಭಾವಿತಾತ್ಮನಾಮ್ ॥೨೨॥

ಯಾರು ಆತ್ಮತತ್ವದಲ್ಲಿ ನೆಲೆಗೊಂಡ ಹಿರಿಯರ ನಿಜವಾದ ಮಹಿಮೆಯನ್ನು ತಿಳಿಯಬಲ್ಲನೋ ಅಂಥವನೇ ಬಹುಮಾನವನ್ನು ಹೊಂದುವನು.

ಯದಾ ಭೂತಪೃಥಗ್ಭಾವಮೇಕಸ್ಥಮನುಪಶ್ಯತಿ।
ತತ ಏವ ಚ ವಿಸ್ತಾರಂ ಬ್ರಹ್ಮ ಸಂಪದ್ಯತೇ ತದಾ ॥೨೩॥

ಬಗೆ ಬಗೆಯ ಜೀವರಾಶಿಗಳು ಒಬ್ಬನೇ ಭಗವಂತನಲ್ಲಿ ಆಶ್ರಯಿಸಿವೆ. ಅವನಿಂದಲೇ ಹುಟ್ಟುತ್ತಿವೆ. ಅವುಗಳ ತಾರತಮ್ಯಜ್ಞಾನಪೂರ್ವಕವಾಗಿ ಯಾವಾಗ ತಿಳಿಯುವನೋ ಆಗ ಸಾಧಕನು ಪರಮಾತ್ಮನನ್ನು ಸೇರುತ್ತಾನೆ.

ಟಿಪ್ಪಣಿ - ತತಃ ಬ್ರಹ್ಮಣ ಏವ ಸೃಷ್ಟಿಕಾಲೇ ವಿಸ್ತಾರಂ ಚ ಪಶ್ಯತಿ ತೇ ಜನಾಃ ಉಕ್ತ-ವಿಧಯಾ ಸೃಷ್ಟಿಪ್ರಲಯಯೋರ್ಭೇದಂ ಜಾನಂತೋ ಜನಾಃ।

ತೇ ಜನಾಸ್ತಾಂ ಗತಿಂ ಯಾಂತಿ ನಾವಿದ್ವಾಂಸೋಽಲ್ಪಚೇತಸಃ।
ನಾಬುದ್ಧಯೋ ನಾಪತಸಃ ಸರ್ವಂ ಬುದ್ಧೌ ಪ್ರತಿಷ್ಠಿತಮ್ ॥೨೪॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ಯುಧಿಷ್ಠಿರವಾಕ್ಯೇ ಸಪ್ತದಶೋಽಧ್ಯಾಯಃ ॥೧೭॥

ವಿದ್ಯೆಯಿಲ್ಲದ, ತಪಸ್ಸು ಇಲ್ಲದ, ಬುದ್ಧಿ ಇಲ್ಲದ, ಅಲ್ಪಸತ್ವವುಳ್ಳ ಜನರು ಪರಮಾತ್ಮನನ್ನು ಸೇರಲಾರರು. ಇವೆಲ್ಲವೂ ಅವರವರ ಬುದ್ಧಿಯಲ್ಲಿಯೇ ನೆಲೆ-ಗೊಂಡಿರುವುದು.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೧೭ನೆಯ ಅಧ್ಯಾಯವು ಮುಗಿಯಿತು.

* * * * *

೧೮. ಹದಿನೆಂಟನೆಯ ಅಧ್ಯಾಯ

ಅರ್ಜುನನು ಅಣ್ಣನಾದ ಧರ್ಮರಾಜನಿಗೆ ಮಾಡಬೇಕಾದ ಕರ್ತವ್ಯವನ್ನು ಬೋಧಿಸುತ್ತಿದ್ದಾನೆ. ಅದಕ್ಕಾಗಿ ಜನಕರಾಜನಿಗೂ ಮತ್ತು ಅವನ ಪತ್ನಿಗೂ ನಡೆದ ಸಂವಾದವನ್ನು ತಿಳಿಸಿ ಸನ್ಯಾಸವನ್ನು ತೆಗೆದುಕೊಳ್ಳುವಂತೆ ಯುಧಿಷ್ಠಿರನನ್ನು ತಡೆದನು.

ವೈಶಂಪಾಯನಃ

ತೂಷ್ಣೀಂಭೂತಂ ತು ರಾಜಾನಂ ಪುನರೇವಾರ್ಜುನೋಽಬ್ರವೀತ್ ।
ಸಂತಪ್ತಃ ಶೋಕದುಃಖಾಭ್ಯಾಂ ರಾಜವಾಕ್ಶಲ್ಯಪೀಡಿತಃ ॥೧॥

ವೈಶಂಪಾಯನ - ಯುಧಿಷ್ಠಿರನು ಹೀಗೆ ಹೇಳಿ ಸುಮ್ಮನಾದನು. ಆಗ ಅರ್ಜುನನಿಗೆ ಯುಧಿಷ್ಠಿರನ ಮಾತುಗಳೆಲ್ಲವೂ ಶಲ್ಯದಂತೆ ಹೃದಯಕ್ಕೆ ಘಾಸಿ ಮಾಡಿದವು. ಇದರಿಂದ ಬಹಳ ಶೋಕ ಮತ್ತು ದುಃಖಗಳಿಂದ ಕೂಡಿದ ಅರ್ಜುನನು ಆ ರಾಜನಾದ ಯುಧಿಷ್ಠಿರನನ್ನು ಕುರಿತು ಹೀಗೆ ಹೇಳಿದನು.

ಅರ್ಜುನಃ

ಕಥಯಂತಿ ಪುರಾವೃತ್ತಮಿತಿಹಾಸಮಿಮಂ ಜನಾಃ ।
ವಿದೇಹರಾಜ್ಞಃ ಸಂವಾದಂ ಭಾರ್ಯಯಾ ಸಹ ಭಾರತ ॥೨॥

ಅರ್ಜುನ - ಹಿಂದೆ ವಿದೇಹರಾಜನಾದ ಜನಕನಿಗೂ ಅವನ ಹೆಂಡತಿಗೂ ನಡೆದಿರುವ ಸಂವಾದದಿಂದ ಇತಿಹಾಸವನ್ನು ಜನರು ಹೇಳುತ್ತಾರೆ. ಅದನ್ನು ನಿನಗೆ ತಿಳಿಸುತ್ತೇನೆ ಕೇಳು.

ಉತ್ಸೃಜ್ಯ ರಾಜ್ಯಂ ಭಿಕ್ಷಾರ್ಥೇ ಕೃತಬುದ್ಧಿಂ ನರೇಶ್ವರಮ್ ।
ವಿದೇಹರಾಜಮಹಿಷೀ ದುಃಖಿತಾ ಯದಭಾಷತ ॥೩॥

ಜನಕರಾಜನು ತನ್ನ ರಾಜ್ಯವನ್ನು ಪರಿತ್ಯಾಗ ಮಾಡಿ ಭಿಕ್ಷುವಾಗಿ ಹೊರಡಲು ನಿಶ್ಚಯಿಸಿದನು. ಆಗ ಇವನ ಈ ವರ್ತನೆಯನ್ನು ಕಂಡು ಹೆಂಡತಿಗೆ ಬಹಳ ದುಃಖವಾಯಿತು. ಆಗ ತನ್ನ ಗಂಡನ ಸಮೀಪ ಬಂದ ಹೀಗೆ ಮಾತನಾಡಿದಳು

ಧನಾನ್ಯಪತ್ಯಂ ದಾರಾಶ್ಚ ರತ್ನಾನಿ ವಿವಿಧಾನಿ ಚ ।
ಪಂಥಾನಂ ಪಾವಕಂ ಹಿತ್ವಾ ಜನಕೋ ಮೋಕ್ಷ್ಯಮಾಸ್ಥಿತಃ ॥೪॥

ತಂ ದದರ್ಶ ಪ್ರಿಯಾ ಭಾರ್ಯಾ ಭೈಕ್ಷ್ಯವೃತ್ತಿಮಕಿಂಚನಮ್ ।
ಧಾನಾಮುಷ್ಟಿಮುಪಾಸೀನಂ ನಿರೀಹಂ ಗತಮತ್ಸರಮ್ ॥೫॥

ತಮುವಾಚ ಸಮಾಗತ್ಯ ಭರ್ತಾಮಕೃತೋಭಯಮ್ ।
ಕೃದ್ಧಾಮನಸ್ವಿನೀ ಭಾರ್ಯಾ ವಿವಿಕ್ತೇ ಹೇತುಮದ್ ವಚಃ ॥೬॥

ಜನಕರಾಜನು ಮೂರ್ಖನಾಗಿದ್ದಾನೆ. ತನ್ನ ಧನರತ್ನಗಳನ್ನು, ಹೆಂಡಂದಿರನ್ನು, ಮಕ್ಕಳನ್ನು, ಮಿತ್ರರನ್ನು, ತ್ರೇತಾಗ್ನಿಯನ್ನು, ಅತಿಥಿಗಳನ್ನು ಪರಿತ್ಯಾಗ ಮಾಡಿ ಭಿಕ್ಷುವೃತ್ತಿಯನ್ನು ಆಶ್ರಯಿಸಿ ಹೊರಟಿದ್ದಾನೆ. ಕೇವಲ ಮುಷ್ಟಿಮಾತ್ರದ ಹುರಿದ ಧಾನ್ಯವನ್ನೇ ನಿರೀಕ್ಷಿಸುತ್ತಾ ಯಾವುದೇ ಆಸೆಯಿಲ್ಲದೇ ಮಾತ್ಸರ್ಯರಹಿತನಾಗಿ ಯಾರಿಗೂ ಹೆದರದೇ ಹೊರಟಿದ್ದಾನೆ. ಇಂಥ ತನ್ನ ಪತಿಯನ್ನು ಕಂಡು ಧೀರ ಮನಸ್ಸುಳ್ಳ ಅವನ ಹೆಂಡತಿಗೆ ಪತಿಯ ಈ ವರ್ತನೆ ಇಷ್ಟವಾಗುವುದಿಲ್ಲ. ತನ್ನ ಪತಿಯ ಬಳಿ ತೆರಳಿ ಕಾರಣಸಹಿತವಾದ ಮಾತುಗಳಿಂದ ರಹಸ್ಯವಾಗಿ ಹೀಗೆ ಹೇಳುತ್ತಾಳೆ -

ಕಥಮುತ್ಸೃಜ್ಯ ರಾಜ್ಯಂ ಸ್ವಂ ಧನಧಾನ್ಯಸಮನ್ವಿತಮ್ ।
ಕಾಪಾಲೀಂ ವೃತ್ತಿಮಾಸ್ಥಾಯ ಧನಾಮುಷ್ಟಿರ್ನ ತೇ ವರಃ ॥೭॥

ಆರ್ಯಪುತ್ರ ! ಏಕಿದು? ಏನಿದು ನಿನ್ನ ವರ್ತನೆ? ಧನಧಾನ್ಯಸಮೃದ್ಧವಾದ ಈ ರಾಜ್ಯವನ್ನೇಕೆ ಪರಿತ್ಯಾಗ ಮಾಡುತ್ತಿರುವೆ? ಕಾಪಾಲಿಕವೃತ್ತಿಯನ್ನು ಆಶ್ರಯಿಸಿ ಒಂದು ಮುಷ್ಟಿಧಾನ್ಯ ಸಿಗುವುದೇ? ಎಂಬ ನಿರೀಕ್ಷೆಯಿಂದ ಬೀದಿ ಬೀದಿ ಅಲೆಯುವ ಕಾರಣ -ವೇನು?

ಪ್ರತಿಜ್ಞಾತೇಽನ್ಯಥಾ ರಾಜನ್ ವಿಚೇಷ್ಟಾಚಾನ್ಯಥಾ ತವ।
ಯದ್ ರಾಜ್ಯಂ ಮಹದುತ್ಸೃಜ್ಯ ಸ್ವಲ್ಪೇ ತುಷ್ಯಸಿ ಪಾರ್ಥಿವ ॥೮॥

ಓ ರಾಜನೇ! ನಿನ್ನ ಪ್ರತಿಜ್ಞೆಯೇ ಒಂದು, ನಿನ್ನ ವರ್ತನೆಯೇ ಮತ್ತೊಂದು, ಸಮೃದ್ಧವಾದ ಈ ರಾಜ್ಯವನ್ನು ಪರಿತ್ಯಾಗ ಮಾಡಿ ಅಲ್ಪಸುಖಕ್ಕಾಗಿ ಆಸೆ ಪಡುವುದೇಕೆ?

ನೈತೇನಾತಿಥಯೋ ರಾಜನ್ ದೇವರ್ಷಿಪಿತರಸ್ತಥಾ ।
ಅದ್ಯ ಶಕ್ಯಾಸ್ತ್ವಯಾ ಭರ್ತುಂ ಮೇಘಸ್ತೇಽಯಂ ಪರಿಶ್ರಮಃ ॥೯॥

ಓ ಪತಿದೇವನೇ! ನಿನ್ನ ಈ ಪ್ರಯತ್ನವು ವ್ಯರ್ಥವಾಗಿದೆ. ನೀನು ತೆರಳುತ್ತಿರುವ ಈ ದಾರಿಯಲ್ಲಿ ಯಾರೇ ಒಬ್ಬ ಅತಿಥಿಗೆ, ದೇವತೆಗೆ, ಪಿತೃಗಳಿಗೆ, ಋಷಿಗಳಿಗೆ ತೃಪ್ತಿ ಪಡಿಸಲು ಸಾಧ್ಯವಾಗುವುದಿಲ್ಲ.

ದೇವತಾತಿಥಿಭಿಶ್ಚೈವ ಪಿತೃಭಿಶ್ಚೈವ ಪಾರ್ಥಿವ।
ಸರ್ವೈರೇತೈಃ ಪರಿತ್ಯಕ್ತಃ ಪರಿವ್ರಜಸಿ ನಿಷ್ಕ್ರಿಯಃ ॥೧೦॥

ನೀನು ಕರ್ಮಭ್ರಷ್ಟನಾಗುತ್ತಿರುವೆ. ದೇವತೆಗಳು, ಋಷಿಗಳು, ಪಿತೃಗಳು ಎಲ್ಲರೂ ಕೂಡ ನಿನ್ನ ಕೈಬಿಡುವರು. ಯಾವುದೇ ಕರ್ತವ್ಯಗಳನ್ನು ಆಚರಿಸದೇ ವ್ಯರ್ಥವಾಗಿ ತಿರುಗಲು ಹೊರಟಿರುವಿ.

ಯಸ್ತ್ವಂ ತ್ರೈವಿದ್ಯವೃದ್ಧಾನಾಂ ಬ್ರಾಹ್ಮಣಾನಾಂ ಸಹಸ್ರಶಃ।
ಭರ್ತಾ ಭೂತ್ವಾ ಚ ಲೋಕಸ್ಯ ಸೋಽದ್ಯ ತೈರ್ಭರ್ತಿಮಿಚ್ಛಸಿ ॥೧೧॥

ಸಾವಿರಾರು ಮಂದಿ ವೇದವನ್ನು ಅಧ್ಯಯನ ಮಾಡುವ ವೃದ್ಧರಾದ ಬ್ರಾಹ್ಮಣರಿಗೆ ಇಷ್ಟರ ತನಕ ಆಶ್ರಯನಾಗಿದ್ದಿ, ಸಮಸ್ತ ಲೋಕಕ್ಕೆ ಒಡೆಯನಾಗಿದ್ದಿ. ಈಗ ಇಷ್ಟೊಂದು ಪುಣ್ಯಕಾರ್ಯವನ್ನು ಪರಿತ್ಯಾಗ ಮಾಡಿ, ನಿನ್ನ ಉದರಭರಣಕ್ಕಾಗಿ ಮತ್ತೊಬ್ಬರ ದಯೆಗೆ ಪಾತ್ರನಾಗಲು ಹೊರಟಿರುವೆ.

ಶ್ರಿಯಂ ಹಿತ್ವಾಪದೀಪ್ತಾಂ ತ್ವಂ ಶ್ವವತ್ ಸಂಪ್ರತಿ ವೀಕ್ಷ್ಯಸೇ।
ಅಪುತ್ರಾ ಜನನೀ ತೇಽದ್ಯ ಕೌಸಲ್ಯಾ ಚಾಪತಿಸ್ತ್ವಯಾ ॥೧೨॥

ಸಮೃದ್ಧವಾದ ಸಂಪತ್ತನ್ನು ಪರಿತ್ಯಾಗ ಮಾಡಿ ಬಂದ ನಿನ್ನನ್ನು ಇತರರು ನಾಯಿಯಂತೆ ತಿರಸ್ಕಾರದಿಂದ ಕಾಣುವರು. ನಿನ್ನನ್ನು ಹಡೆದ ತಾಯಿ ಪುತ್ರಹೀನಳೆಂಬ ಭಾವನೆ ಹೊಂದುವಳು. ಕೌಸಲ್ಯೆಯಾದ ನಿನ್ನ ಹೆಂಡತಿಯಾದ ನಾನೂ ಸಹ ಪತಿಯಿಲ್ಲದಂತೆ ಆಗುವೆನು.

ಅಮೀ ಚ ಧರ್ಮಕಾಮಾಸ್ತ್ವಾಂ ಕ್ಷತ್ರಿಯಾಃ ಪರ್ಯುಪಾಸತೇ।
ತ್ವದಾಶಾಮಭಿಕಾಂಕ್ಷಂತಃ ಕೃಪಣಾಃ ಫಲಹೇತುಕಾಃ ॥೧೩॥

ಧರ್ಮ ಮತ್ತು ಕಾಮಗಳನ್ನು ಅಪೇಕ್ಷಿಸುವ ಕ್ಷತ್ರಿಯರು ನಿನ್ನನ್ನು ಆಶ್ರಯಿಸಿ ಅನೇಕ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳಬೇಕೆಂಬ ಅಭಿಲಾಷೆ ಹೊಂದಿದ್ದಾರೆ. ಅದಕ್ಕಾಗಿ ನಿನ್ನನ್ನೇ ಉಪಾಸನೆಗೈಯುತ್ತಿದ್ದಾರೆ. ನಿನ್ನ ಸೇವೆಯಲ್ಲಿಯೇ ಆಸಕ್ತರಾಗಿದ್ದಾರೆ. ದೀನರಾದ ಆ ಕ್ಷತ್ರಿಯರು ನಿನ್ನಿಂದ ಉತ್ತಮಫಲವನ್ನು ನಿರೀಕ್ಷಿಸುತ್ತಿದ್ದಾರೆ.

ತಾಂಶ್ಚ ತ್ವಂ ವಿಫಲಾನ್ ಕುರ್ವನ್ ಕಂ ನು ಲೋಕಂ ಗಮಿಷ್ಯಸಿ।
ರಾಜನ್ ಸಂಶಯಿತೇ ಮೋಕ್ಷೇ ಪರತಂತ್ರೇಷು ದೇಹಿಷು ॥೧೪॥

ಇಂಥ ಕ್ಷತ್ರಿಯರ ಅಪೇಕ್ಷೆಗಳನ್ನೆಲ್ಲಾ ವಿಫಲವನ್ನಾಗಿ ಮಾಡಿ, ಯಾವ ಪುಣ್ಯಲೋಕವನ್ನು ಹೊಂದಲು ಬಯಸುತ್ತಿರುವಿ. ಸರ್ವಸ್ವವನ್ನು ಹೀಗೆ ಪರಿತ್ಯಾಗ ಮಾಡುವುದರಿಂದ ಮೋಕ್ಷವಾಗುತ್ತದೆಂಬ ನಿಶ್ಚಯವೂ ಕೂಡ ಇರುವುದಿಲ್ಲ. ಎಲ್ಲಾ ಜೀವರು ವಿಧಿಯ ಅಧೀನರಾಗಿದ್ದಾರೆ.

ನೈವ ತೇऽಸ್ತಿ ಪರೋ ಲೋಕೋ ನಾಪರಃ ಪಾಪಕರ್ಮಣಃ।
ಧರ್ಮ್ಯಾನ್ ದಾರಾನ್ ಪರಿತ್ಯಜ್ಯ ಯಸ್ತ್ವಮಿಚ್ಛಸಿ ಜೀವಿತುಮ್ ॥೧೫॥

ಧರ್ಮನಿರತರಾದ ಹೆಂಡಂದಿರನ್ನು ಪರಿತ್ಯಾಗ ಮಾಡಿ, ಏಕಾಕಿಯಾಗಿ ಜೀವಿಸಲು ಇಚ್ಛಿಸುತ್ತಿರುವ ನಿನ್ನ ಈ ವರ್ತನೆ ಪಾಪಕರ್ಮವೇ ಆಗಿದೆ. ನಿನಗೆ ಪರಲೋಕದಲ್ಲಿ ಯಾವುದೇ ಸುಖವು ದೊರೆಯುವುದಿಲ್ಲ. ಈ ಲೋಕವೂ ಕೂಡ ಸುಖಕರವಲ್ಲ.

ಸ್ರಜೋ ಗಂಧಾನಲಂಕಾರಾನ್ ವಾಸಾಂಸಿ ವಿವಿಧಾನಿ ಚ।
ಕಿಮರ್ಥಮಭಿಸಂತ್ಯಜ್ಯ ಪರಿವ್ರಜಸಿ ನಿಷ್ಕ್ರಿಯಃ ॥೧೬॥

ಜನಕರಾಜನೇ! ಮಾಲೆಗಳನ್ನು, ಪರಿಮಳ ದ್ರವ್ಯಗಳನ್ನು, ಅಲಂಕಾರವಸ್ತುಗಳನ್ನು, ನಾನಾವಿಧವಾದ ವಸ್ತ್ರಗಳನ್ನು ಪರಿತ್ಯಾಗ ಮಾಡಿ, ಎಲ್ಲಾ ಕರ್ತವ್ಯಗಳಿಂದ ಭ್ರಷ್ಟನಾಗಿ ಏಕೆ ಇಲ್ಲಿಂದ ಹೊರಟಿರುವಿ ?

ನಿಪಾನಂ ಸರ್ವಭೂತಾನಾಂ ಭೂತ್ವಾತ್ವಂ ಪಾವನಂ ಮಹತ್ ।
ಆಢ್ಯೋ ವನಸ್ಪತಿರ್ಭೂತ್ವಾಸೋಽನ್ಯಾಂಸ್ತ್ವಂ ಪರ್ಯುಪಾಸತೇ॥೧೭॥

ಇಲ್ಲಿಯ ತನಕ ನೀನು ಎಲ್ಲಾ ವಿಧದ ಪ್ರಾಣಿಗಳಿಗೆ ನೀರನ್ನು ಒದಗಿಸುವ ಪರಮಪವಿತ್ರವಾದ ದೊಡ್ಡದಾದ ಜಲಾಶಯದಂತೆ ಇದ್ದಿ. ಇಂಥ ನೀನು ಹಸಿವು ತೃಷೆಗಳನ್ನು ನಿವಾರಿಸಿಕೊಳ್ಳಲು ಮತ್ತೊಬ್ಬರನ್ನು ಆಶ್ರಯಿಸಲು ಹೊರಟಿರುವಿ. ಮತ್ತು ಇಲ್ಲಿಯ ತನಕ ಎಲ್ಲರಿಗೂ ಆಶ್ರಯ ನೀಡುವ ಫಲಪುಷ್ಪಭರಿತವಾದ ವೃಕ್ಷದಂತೆ ಭದ್ರವಾಗಿ ನೆಲೆಸಿದ್ದಿ. ಈಗ ಮತ್ತೊಬ್ಬರ ನೆರಳಿನಲ್ಲಿ ಬದುಕಲು ಹೊರಟಿರುವಿ.

ಖಾದಂತಿ ಹಸ್ತಿನಂ ನ್ಯಾಸ್ಯೈಃ ಕ್ರವ್ಯಾದಾ ಬಹವೋಽಪ್ಯುತ ।
ಬಹವಃ ಕೃಮಯಶ್ಚೈವ ಕಿಂ ಪುನಸ್ತ್ವಾಮನರ್ಥಕಮ್ ॥೧೮॥

ಮಾಂಸಾಹಾರಿಗಳಾದ ಕ್ಷುದ್ರವಾದ ಮೃಗಗಳು ಆನೆಯನ್ನು ತಿಂದುಬಿಡುತ್ತವೆ. ಅನೇಕ ಕ್ರಿಮಿಗಳೂ ಕೂಡ ಭಕ್ಷಿಸುತ್ತವೆ. ಹೀಗಿರುವಾಗ ನಿಷ್ಕರ್ಮಿಯಾದ ನಿನ್ನನ್ನು ಆ ಪ್ರಾಣಿಗಳು ತಿನ್ನದೇ ಬಿಡುತ್ತವೇನು ?

ಯ ಇಮಾಂ ಕುಂಡಿಕಾಂ ಭಿಂದ್ಯಾತ್ ತ್ರಿವಿಷ್ಟಬ್ಧಂ ಚ ಯೋ ಹರೇತ್।
ವಾಸಶ್ಚಾಪಿ ಹರೇತ್ ತಸ್ಮಿನ್ ಕಥಂ ತೇ ಮಾನಸಂ ಭವೇತ್ ॥೧೯॥

ನಿನ್ನಷ್ಟಕ್ಕೆ ನೀನು ಅಲೆದಾಡುತ್ತಿರುವಾಗ ಒಬ್ಬನು ಬಂದು ನಿನ್ನ ಕಮಂಡಲುವನ್ನು ಒಡೆದುಹಾಕುತ್ತಾನೆ. ಮತ್ತೊಬ್ಬನು ನಿನ್ನ ತ್ರಿದಂಡವನ್ನು ಅಪಹರಿಸಿಬಿಡುತ್ತಾನೆ. ನೀನು ಉಟ್ಟುಕೊಂಡ ಬಟ್ಟೆಯನ್ನೇ ಕಿತ್ತುಕೊಂಡು ಬಿಡುತ್ತಾನೆ. ನಿನ್ನ ಕೃಷ್ಣಾಜಿನವನ್ನೂ ಕೂಡ ಅಪಹರಿಸುತ್ತಾನೆ. ಇಂಥ ಸಂದರ್ಭದಲ್ಲಿ ನಿನ್ನ ಮನಸ್ಸು ಅವರ ಬಗ್ಗೆ ಏನು ಆಲೋಚಿಸುತ್ತದೆ? ಎಂಬುದನ್ನು ವಿಮರ್ಶೆ ಮಾಡಿರುವಿಯಾ.

ಟಿಪ್ಪಣಿ - ತ್ರಿವಿಷ್ಟಬ್ಧಂ ಚ ಯೋ ಹರೇದ್ ಇತ್ಯತ್ರ ತ್ರಿಷು ಲೋಕೇಷು ವಿಷ್ಟೋ ನಿವಿಷ್ಟೋ ಯಸ್ಮಿನ್ ಕೃಷ್ಣಾಜಿನಾದೌ ತಸ್ಯ ಭಾವಃ ತ್ರಿವಿಷ್ಟತ್ವಮ್ । 'ತ್ರಿವಿಷ್ಟಪತ್ವಂ ಚ ಯೋ ಹರೇತ್'- ಎಂಬಲ್ಲಿ ಮೂರು ಲೋಕಗಳಲ್ಲಿ ಉಪಯೋಗಿಸುವ ಕೃಷ್ಣಾಜಿನ. 'ತಸ್ಯಭಾವಃ ತ್ರಿವಿಷ್ಟತ್ವಂ' ಎಂದರ್ಥ.

ಯಸ್ತ್ವಯಂ ಸರ್ವಮುತ್ಸೃಜ್ಯ ಧಾನಾಮುಷ್ಟೇರನುಗ್ರಹಃ।
ಯದಾನೇನ ಸಮಂ ಸರ್ವಂ ಕಿಮಿದಂ ಹ್ಯವಸೀಯತೇ ॥೨೦॥

ಎಲ್ಲವನ್ನು ಪರಿತ್ಯಾಗ ಮಾಡಿ ಒಂದು ಮುಷ್ಟಿ ಧಾನ್ಯವನ್ನು ಪಡೆಯುವುದರಿಂದ ನಿನಗೇನು ಲಾಭ? ಅಷ್ಟರಿಂದಲೇ ನೀನು ಎಲ್ಲವನ್ನು ಪಡೆದು ಚರಿತಾರ್ಥ-ನಾಗುವುದಾದರೆ ಈ ರಾಜ್ಯವನ್ನೇಕೆ ಪರಿತ್ಯಾಗ ಮಾಡುತ್ತಿರುವಿ? ಆ ಮುಷ್ಟಿಯ ಧಾನ್ಯದಿಂದಲೂ ನಿನಗೆ ಸಂಗವು ತಪ್ಪಲಿಲ್ಲ.

ವಿವರಣೆ - ಎಲ್ಲಾ ರಾಜ್ಯಕೋಶಗಳನ್ನು ಪರಿತ್ಯಾಗ ಮಾಡಿ, ಒಂದು ಮುಷ್ಟಿಯ ಹಿಟ್ಟಿಗಾಗಿ ಹೊರಟಿರುವಿ. ಶರೀರವನ್ನು ಧರಿಸುವುದಕ್ಕಾಗಿ ಮುಷ್ಟಿ ಹಿಟ್ಟನ್ನು ಸ್ವೀಕರಿಸಲೇಬೇಕು ಎಂದು ಉತ್ತರಿಸುವುದಾದರೆ, ಸನ್ಯಾಸಿಯಾದರೂ ಕೂಡ ನಿನಗೆ ಅದರ ಸಂಗ ತಪ್ಪಲಿಲ್ಲ ಎಂದು ನೀನೇ ಒಪ್ಪಿಕೊಂಡಂತಾಯಿತು. ಸಮಸ್ತ ವಸ್ತುಗಳನ್ನು ನೀನು ಸಮಾನವಾದ ದೃಷ್ಟಿಯಿಂದ ಕಾಣಬೇಕು. ರಾಜ್ಯದ ವಿಷಯ-ದಲ್ಲಿ ಸಂಗವನ್ನು ಬಿಟ್ಟಂತೆ ಆ ಮುಷ್ಟಿಹಿಟ್ಟಿನಲ್ಲೂ ಸಂಗವನ್ನು ನೀನು ಬಿಡಬೇಕು. ಇಲ್ಲದಿದ್ದರೆ ರಾಜ್ಯವನ್ನಾದರೂ ಏಕೆ ಪರಿತ್ಯಾಗ ಮಾಡುವಿ ? ಒಂದು ಬೇಕು, ಮತ್ತೊಂದು ಬೇಡ ಎಂಬ ಚಿಂತನೆಯೇ ತಪ್ಪು. ಆದ್ದರಿಂದ ನೀನು ಮೊದಲು ವಿವೇಕಿಯಾಗು, ಜ್ಞಾನಶೀಲನಾಗು, ಆಗ ಈ ರಾಜ್ಯವನ್ನು ಪರಿತ್ಯಾಗ ಮಾಡುವ ಅಗತ್ಯವು ಬರುವುದಿಲ್ಲ. ಜ್ಞಾನಿಯಾದವನು ಮುಷ್ಟಿಹಿಟ್ಟನ್ನು ಪರಿತ್ಯಾಗ ಮಾಡ-ದಂತೆ ರಾಜ್ಯವನ್ನೂ ಕೂಡ ಪರಿತ್ಯಾಗ ಮಾಡಲಾರನು.

ಧಾನಾಮುಷ್ಟೇರಿಹಾರ್ಥಶ್ಚೇತ್ ಪ್ರತಿಜ್ಞಾತೇ ವಿನಶ್ಯತಿ।
ಕಾ ವಾಹಂ ತವ ಕೋ ಮೇ ತ್ವಂ ಕಶ್ಚತೇ ಮಯ್ಯನುಗ್ರಹಃ ॥೨೧॥

ನಿನ್ನ ಜೀವನದ ರಕ್ಷಣೆಗಾಗಿ ಮುಷ್ಟಿಧಾನ್ಯವನ್ನು ಪಡೆಯಲು ಇಚ್ಛಿಸುವಿ-ಯಾದರೇ, ನಿನ್ನ ಸಂಕಲ್ಪವೇ ವ್ಯರ್ಥವಾಗುತ್ತದೆ. ಇದಕ್ಕಿಂತ ರಾಜ್ಯವನ್ನು ವಹಿಸು-ವುದೇ ಹೆಚ್ಚು. ನಿನಗೆ ನಾನು ಯಾರು? ನನಗೆ ನೀನು ಯಾರು? ನನ್ನಲ್ಲಿ ನೀನು ತೋರಿಸಬೇಕಾದ ಅನುಗ್ರಹವಾದರೂ ಕೂಡ ಏನು?

ವಿವರಣೆ - ಜೀವನವನ್ನು ನಡೆಸಲು ಮುಷ್ಟಿ ಅನ್ನವು ಆವಶ್ಯಕವೆಂದು ನೀನು

ತಿಳಿದಿರುವಿ. ಆದರೆ ಎಲ್ಲವನ್ನು ತ್ಯಾಗಮಾಡುತ್ತೇನೆಂಬ ಪ್ರತಿಜ್ಞೆಯನ್ನು ಮಾಡಿರುತ್ತಿ. ನಿನ್ನ ಈ ತಿಳುವಳಿಕೆಗೂ, ನೀನು ಮಾಡಿದ ಪ್ರತಿಜ್ಞೆಗೂ ವಿರೋಧವಿದೆ. ಎಲ್ಲವನ್ನು ಪರಿತ್ಯಾಗ ಮಾಡುತ್ತೇನೆಂದು ಪ್ರತಿಜ್ಞೆ ಮಾಡಿ, ಒಂದು ವಸ್ತುವನ್ನು ಅಪೇಕ್ಷಿಸಿದರೂ ಸಾಕು ಪ್ರತಿಜ್ಞೆಯು ಭಂಗವಾಗುತ್ತದೆ. ಇದು ಅರ್ಧಜರತೀಯ ನ್ಯಾಯವಾಗುತ್ತದೆ. ಎಲ್ಲವನ್ನು ಪರಿತ್ಯಾಗ ಮಾಡಿದ ಮೇಲೆ ನಾನು ನಿನಗೇನಾಗಬೇಕು? ನಿನ್ನಿಂದ ನನಗೇನಾಗಬೇಕು? ನನ್ನ ಮೇಲೆ ನಿನಗೆ ಅನುಗ್ರಹದ ಬುದ್ಧಿ ಇರುವುದಾದರೆ, ಮೊದಲಿನಂತೆ ಈ ರಾಜ್ಯವನ್ನು ಶಾಸನ ಮಾಡು. ಅರಮನೆಯಲ್ಲಿ ವಾಸಮಾಡು, ಶ್ರೇಷ್ಠವಾದ ವಸ್ತ್ರಾಭರಣಗಳನ್ನು ಧರಿಸು.

ಪ್ರಶಾಧಿ ಪೃಥಿವೀಂ ರಾಜನ್ ಯದಿ ತೇऽನುಗ್ರಹೋ ಭವೇತ್ ।
ಪ್ರಾಸಾದಂ ಶಯನಂ ಯಾನಂ ವಾಸಾಂಸ್ಯಾಭರಣಾನಿ ಚ ॥೨೨॥

ನಿನ್ನ ಮನಸ್ಸಿನ ಆಸೆಯು ಈಡೇರಬೇಕೆಂದರೆ ಉಪ್ಪರಿಗೆಯ ಮೇಲೆ ಪವಡಿಸು. ಸಮಲಂಕೃತವಾದ ರಥದಲ್ಲಿ ಕುಳಿತುಕೋ, ಶ್ರೇಷ್ಠವಾದ ವಸ್ತ್ರಗಳನ್ನು, ಆಭರಣಗಳನ್ನು ಧಾರಣೆ ಮಾಡು, ಸಮೃದ್ಧಿಯಿಂದ ರಾಜ್ಯವನ್ನು ಪರಿಪಾಲನೆ ಮಾಡು.

ಶ್ರಿಯಾ ವಿಹೀನೈರಧನೈಸ್ತ್ಯಕ್ತಮಿತ್ರೈರಕಿಂಚನೈಃ ।
ಸೌಷ್ಟಿಕೈಃ ಸಂಭೃತಾನರ್ಥಾನ್ ಯಃ ಸಂತ್ಯಜತಿ ಕಿಂ ನು ತತ್ ॥೨೩॥

ಯಾರು ದುಡ್ಡಿನ ಆಸೆಯನ್ನು ಬಿಟ್ಟಿರುತ್ತಾರೋ, ಎಲ್ಲಾ ಬಗೆಯ ಸಂಪತ್ತುಗಳ ಅಪೇಕ್ಷೆಯನ್ನು ಹೊಂದಿರುವುದಿಲ್ಲವೋ, ಮಿತ್ರರನ್ನೂ ಕೂಡ ಪರಿತ್ಯಾಗ ಮಾಡಿರುತ್ತಾರೋ, ಏನೂ ಇಲ್ಲದವರಾಗಿ ಸನ್ಯಾಸಿಗಳಾಗಿರುತ್ತಾರೋ, ಅವರು ತಮ್ಮ ಸುಖಕ್ಕಾಗಿ ದಂಡ, ಕಮಂಡಲು ಮೊದಲಾದವುಗಳನ್ನು ಸಂಗ್ರಹ ಮಾಡಿಟ್ಟುಕೊಳ್ಳುತ್ತಾರೆ. ಹೀಗಿರುವಾಗ ಆಸೆಯುಳ್ಳ ಮನುಷ್ಯನು ರಾಜ್ಯವನ್ನು ಏಕೆ ತಾನೇ ಬಿಡಬೇಕು ?

ವಿವರಣೆ - ಯಾರು ಕಾಂತಿಹೀನರೋ, ನಿರ್ಧನರೋ, ಬಂಧು-ಮಿತ್ರ ರಹಿತರೋ, ಅವರು ಸುಖಾಪೇಕ್ಷೆಯಿಂದಲೇ ಕಮಂಡಲು, ಕೃಷ್ಣಾಜಿನ ಮೊದಲಾದವುಗಳನ್ನು ಸಂಗ್ರಹ ಮಾಡಿಕೊಳ್ಳುತ್ತಾರೆ. ನಿಜವಾಗಿಯೂ ಕೂಡ ಅವರು

ಸಂಗ್ರಾಹಕರೇ ಹೊರತು, ತ್ಯಾಗಿಗಳಲ್ಲ. ನಿರ್ಧನರಾದವರಿಗೆ ತ್ಯಾಗ ಮಾಡಲು ಏನು ತಾನೇ ಸಿಗುತ್ತದೆ? ಸನ್ನ್ಯಾಸಿಗಳು ಯಾವುದನ್ನು ತಾನೇ ತ್ಯಾಗ ಮಾಡಲು ಸಾಧ್ಯ? ಸನ್ನ್ಯಾಸಿಯಾದವನಿಗೆ ತ್ಯಾಗದಿಂದ ಆಗಬೇಕಾದದ್ದು ಯಾವುದೂ ಇಲ್ಲ. ರಾಜನಾದವನು ಸನ್ನ್ಯಾಸಿಯಾದರೆ ಅವನೂ ಕೂಡ ಏನನ್ನು ತಾನೇ ತ್ಯಾಗ ಮಾಡಲು ಸಾಧ್ಯ? ಸನ್ನ್ಯಾಸಿಯಾಗುವ ಮೊದಲಷ್ಟೇ ತ್ಯಾಗ ಮಾಡಬೇಕು. ತಾನು ಸಂಪಾದನೆ ಮಾಡಿದ್ದೆಲ್ಲವನ್ನು ದಾನ ಮಾಡಬೇಕು. ರಾಜತ್ವವನ್ನು ಪರಿತ್ಯಾಗ ಮಾಡಿ ಸನ್ನ್ಯಾಸಿಯಾಗುವುದನ್ನು ಯಾರೂ ಸಹ ತ್ಯಾಗ ಎಂದು ಕರೆಯುವುದಿಲ್ಲ. ರಾಜ್ಯಕೋಶಗಳನ್ನು ಬಿಡುವುದು ಪುರುಷಾರ್ಥಸಾಧಕವಲ್ಲ. ಕರ್ತವ್ಯವನ್ನು ಪರಿತ್ಯಾಗ ಮಾಡಿ, ಪಲಾಯನ ಮಾಡುವುದು ತ್ಯಾಗವಲ್ಲ. ನಿಜವಾಗಿಯೂ ಕೂಡ ಸನ್ನ್ಯಾಸಿಯಾಗಬೇಕು, ತ್ಯಾಗಿಯಾಗಬೇಕೆಂದರೆ ರಾಜನು ಸ್ವಧರ್ಮವನ್ನು ಪರಿಪಾಲನೆ ಮಾಡಬೇಕು, ರಾಜ್ಯಭಾರ ಮಾಡಬೇಕು, ನಿರ್ಗತಿಕರಿಗೆ ಆಶ್ರಯ ನೀಡಬೇಕು, ಯಥೇಚ್ಛವಾಗಿ ದಾನಮಾಡಬೇಕು. ರಾಜನಾದವನು ತನಗೆ ವಿಹಿತವಾದ ಕಪ್ಪಕಾಣಿಕೆಗಳನ್ನು ಮತ್ತೊಬ್ಬರಿಂದ ಸ್ವೀಕಾರ ಮಾಡಬೇಕು. ಇದನ್ನು ಬಿಟ್ಟು ಹಿಡಿಮುಷ್ಟಿಯ ಧಾನ್ಯವನ್ನು ಬೇಡುವುದು ಅಧರ್ಮವಾಗುತ್ತದೆ. ವಿಹಿತವಾದದ್ದನ್ನು ಪರಿತ್ಯಾಗ ಮಾಡಿರುವುದು ಒಂದು ದೋಷ. ಅವಿಹಿತವಾದದ್ದನ್ನು ಸ್ವೀಕಾರ ಮಾಡುವುದು ಮತ್ತೊಂದು ದೋಷ. ಆದ್ದರಿಂದ ರಾಜನಾದ ನೀನು ಕರ್ತವ್ಯಪರಿಪಾಲನೆಯನ್ನು ಮಾಡಿ ನಿಜವಾದ ತ್ಯಾಗಿಯಾಗಲು ಪ್ರಯತ್ನಿಸು ಎಂಬುದು ಅರ್ಜುನನ ಅಭಿಪ್ರಾಯ.

ಟಿಪ್ಪಣಿ - ಸೌಷ್ಟಿಕೈಃ ಸಂಭೃತಾನ್ ಇತ್ಯತ್ರ ಸುಷ್ಠು ಶೋಭನಂ ಭವೇದಿತ್ಯಾಶಾಯೇಷಾಂ ತೇ ಸೌಷ್ಠಿಕಾಃ, ತೈಃ।

ಇದು ನನಗೆ ಸುಖಕರವಾಗುತ್ತದೆ ಎಂಬ ಆಸೆಯನ್ನು ಹೊಂದಿರುವವರು 'ಸೌಷ್ಟಿಕರು' ಎಂದು ಕರೆಸಿಕೊಳ್ಳುತ್ತಾರೆ. ಅಂಥ ಸೌಷ್ಟಿಕರಿಂದ ಸಂಗ್ರಹಿಸಲ್ಪಟ್ಟದ್ದು ಎಂದರ್ಥ.

ಯೋಽತ್ಯಂತಂ ಪ್ರತಿಗೃಹ್ಣೀಯಾದ್ ಯಶ್ಚ ದದ್ಯಾತ್ ಸದೈವ ಹಿ।
ತಯೋಸ್ತ್ವಮಂತರಂ ವಿದ್ಧಿ ಶ್ರೇಯಾಂಸ್ತಾಭ್ಯಾಂ ಕ ಉಚ್ಯತೇ ॥೨೪॥

ಭಿಕ್ಷೆ ಬೇಡಲು ಹೋಗುತ್ತೇನೆಂದು ನೀನು ಹೇಳುತ್ತಿರುವಿ. ಆದರೆ ಯಾವಾ-

ಗಲೂ ಕೈ ಚಾಚಿ ಬೇಡುವವನಿಗೂ, ಯಾವಾಗಲೂ ದಾನವನ್ನು ನೀಡುವವನಿಗೂ ಇರುವ ತಾರತಮ್ಯವನ್ನು ಒಮ್ಮೆ ಆಲೋಚನೆ ಮಾಡು. ಇವರಿಬ್ಬರಲ್ಲಿ ಯಾರು ಶ್ರೇಷ್ಠರೆಂಬುದನ್ನು ಗಮನಿಸು.

ವಿವರಣೆ - ದಾನ ಮಾಡುವವನು ಹಾಗೂ ದಾನ ಕೊಡುವವನು ಇವರಿಬ್ಬರಲ್ಲಿ ದಾನ ಕೊಡುವವನೇ ಶ್ರೇಷ್ಠನೆಂಬುದು ನಿರ್ಧಾರಿತವಾದ ವಿಚಾರ. ಸನ್ಯಾಸಿಯಾದವನು ಇನ್ನೊಬ್ಬರ ಬಳಿ ಬೇಡುತ್ತಾನೆಯೇ ಹೊರತು, ಇನ್ನೊಬ್ಬನಿಗೆ ಏನನ್ನೂ ಕೂಡ ಕೊಡಲಾರನು. ಯಾರು ದಾನವನ್ನು ಮಾಡುತ್ತಾನೋ, ಅವನು ತನ್ನಲ್ಲಿರುವ ಪಾಪಗಳನ್ನು ಕಳೆದುಕೊಂಡು ದುಷ್ಕರ್ಮದ ಫಲವನ್ನು ನಿವಾರಣೆ ಮಾಡಿಕೊಳ್ಳುತ್ತಾನೆ. ಶ್ರೇಯಸ್ಸಿಗೆ ಪಾತ್ರನಾಗುತ್ತಾನೆ. ಪ್ರತಿಗ್ರಹ ಮಾಡಿದವನು ಆ ಪಾಪಗಳನ್ನು ಪಡೆದುಕೊಳ್ಳುತ್ತಾನೆ. ಆದರೆ ಪ್ರಾಯಶ್ಚಿತ್ತಾದಿಗಳನ್ನು ಮಾಡಿಕೊಂಡು, ಆ ಪಾಪವನ್ನು ದಾನ ಸ್ವೀಕರಿಸಿದವನು ಪರಿಹಾರ ಮಾಡಿಕೊಳ್ಳಬಹುದು. ಆದರೆ ಅದನ್ನು ಮೀರಿ ಪುಣ್ಯ ಸಂಪಾದನೆ ಮಾಡುವುದು ಅವನಿಗೆ ಬಹಳ ಕಷ್ಟವೇ ಆಗುತ್ತದೆ. ಆದರೆ ದಾನ ಮಾಡುವವನು ತನ್ನ ಪಾಪವನ್ನು ಕಳೆದುಕೊಂಡು ಸುಲಭವಾಗಿ ಪುಣ್ಯಸಂಪಾದನೆಯಲ್ಲಿ ತೊಡಗುತ್ತಾನೆ. ಹೆಚ್ಚಿನ ಸಮಯದ ವಿನಿಯೋಗ ಇವನಿಗೆ ಆವಶ್ಯಕವಾಗಿರುವುದಿಲ್ಲ. ಆದ್ದರಿಂದ ಯಾಚಕರಿಗೆ ಆಶ್ರಯನಾಗಿರುವುದೇ ಹೆಚ್ಚು ಶ್ರೇಯಸ್ಸಾಧನ. ಇದನ್ನು ಬಿಟ್ಟು ತಾನೇ ಯಾಚಕನಾಗಲು ತೆರಳಬಾರದು.

ಸದೈವ ಯಾಚಮಾನೇಷು ತಥಾ ದಂಭಾನ್ವಿತೇಷು ಚ।
ಏತೇಷು ದಕ್ಷಿಣಾ ದತ್ತಾ ದಾವಾಗ್ನಾವಿವ ದುರ್ಹುತಮ್ ॥೨೫॥

ನಿರಂತರ ಯಾಚನೆ ಮಾಡುವುದನ್ನೇ ವೃತ್ತಿ ಮಾಡಿಕೊಂಡಿರುವವನಿಗೆ ಡಾಂಭಿಕನಾದವನಿಗೆ ನೀಡುವ ದಕ್ಷಿಣೆಯು ಕಾಡ್ಗಿಚ್ಚಿನಲ್ಲಿ ಹುತ ಮಾಡಿದ ಹವಿಸ್ಸಿನಂತೆ ವ್ಯರ್ಥವಾಗುತ್ತದೆ.

ವಿವರಣೆ - ಯಾಚನೆ ಮಾಡುವುದನ್ನೇ ಯಾರು ವೃತ್ತಿಯನ್ನಾಗಿ ಮಾಡಿಕೊಂಡಿರುತ್ತಾರೋ, ಅವರಿಗೆ ದಾನ ಮಾಡುವುದು ವ್ಯರ್ಥ. ಮತ್ತು ತಾನು ಧರ್ಮಿಷ್ಠನೆಂಬ ಮುಖವಾಡ ಹಾಕಿಕೊಂಡ ಡಾಂಭಿಕನಿಗೂ ದಾನ ಮಾಡುವುದು

ವ್ಯರ್ಥ. ಕಾಡ್ಗಿಚ್ಚಿನಲ್ಲಿ ಆಹುತಿ ನೀಡಿದಂತೆ ಇವರಿಗೆ ಮಾಡುವ ದಾನವು ವ್ಯರ್ಥವಾಗುತ್ತದೆ. ಆದ್ದರಿಂದ ಯಾಚನಾವೃತ್ತಿಯನ್ನು ನೀನು ಸ್ವೀಕರಿಸುವುದು ಉಚಿತವಲ್ಲ.

ಜಾತವೇದಾ ಯಥಾ ರಾಜನ್ ನಾದಗ್ಧ್ವೈವೋಪಶಾಮ್ಯತಿ।
ಸದೈವ ಯಾಚಮಾನೋ ಹಿ ತಥಾ ಶಾಮ್ಯತಿ ನ ದ್ವಿಜಃ ॥೨೬॥

ಬೆಂಕಿಗೆ ಎಷ್ಟು ಕಟ್ಟಿಗೆಯನ್ನು ಹಾಕುತ್ತೇವೋ, ಅಷ್ಟು ಚೆನ್ನಾಗಿ ಅದು ಉರಿಯುತ್ತದೆ. ಕಟ್ಟಿಗೆ ಹಾಕಿದಷ್ಟು ಶಾಂತವಾಗಲು ಸಾಧ್ಯವೇ ಇಲ್ಲ. ಅದರಂತೆ ಯಾಚನೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡ ಬ್ರಾಹ್ಮಣನು ಎಂದೂ ಕೂಡ ಶಾಂತಿಯನ್ನು ಹೊಂದಲಾರನು.

ವಿವರಣೆ - ಬೇಡಿದಾಗ ಮತ್ತೊಬ್ಬರು ನೀಡಬೇಕು. ಇಲ್ಲದಿದ್ದರೆ ಸಿಟ್ಟು ಮಾಡಿಕೊಳ್ಳುತ್ತಾನೆ. ಅವನಿಗೆ ನೆಮ್ಮದಿಯೇ ಇರುವುದಿಲ್ಲ. ಶಾಂತಿಯೂ ಕೂಡ ಇರುವುದಿಲ್ಲ ಎಂಬುದು ಈ ಶ್ಲೋಕದ ಭಾವ.

ಸತಾಂ ವೈ ದದತೋಽನ್ನಂ ಚ ಲೋಕೇಽಸ್ಮಿನ್ ಪ್ರಕೃತಿರ್ಧ್ರುವಾ।
ನ ಚೇದ್ ರಾಜಾ ಭವೇದ್ ದಾತಾ ಕುತಃ ಸ್ಯುರ್ಮೋಕ್ಷಕಾಂಕ್ಷಿಣಃ ॥೨೭॥

ಸನ್ಯಾಸಿಗಿಂತಲೂ ಕೂಡ ಸನ್ಯಾಸಿಗೆ ಅನ್ನವನ್ನು ನೀಡುವ ಬ್ರಾಹ್ಮಣನೇ ಶ್ರೇಷ್ಠನು. ಅನ್ನವನ್ನು ನೀಡುವ ಬ್ರಾಹ್ಮಣನೇ ಇಲ್ಲದಿದ್ದರೆ ಮೋಕ್ಷಾರ್ಥಿಯಾದ ಸನ್ಯಾಸಿಗಳು ಇರಲು ಹೇಗೆ ಸಾಧ್ಯ ?

ವಿವರಣೆ - ಗೃಹಸ್ಥರೇ ಸನ್ಯಾಸಿಗಳಿಗೆ ಆಧಾರರಾಗಿರುತ್ತಾರೆ. ದಾನವನ್ನು ತೆಗೆದುಕೊಳ್ಳುವ ಸನ್ಯಾಸಿಗಿಂತಲೂ ಗೃಹಸ್ಥನೇ ಶ್ರೇಷ್ಠ ಎಂಬುದು ಇಲ್ಲಿಯ ಅಭಿಪ್ರಾಯ.

ಅನ್ನಾದ್ ಗೃಹಸ್ಥಾ ಲೋಕೇಽಸ್ಮಿನ್ ಭಿಕ್ಷವಸ್ತತ ಏವ ಚ।
ಅನ್ನಾತ್ ಪ್ರಾಣಃ ಪ್ರಭವತಿ ಅನ್ನದಃ ಪ್ರಾಣದೋ ಭವೇತ್ ॥೨೮॥

ಗೃಹಸ್ಥರು ನೀಡುವ ಅನ್ನದಿಂದಲೇ ಸನ್ಯಾಸಿಯು ಜೀವನವನ್ನು ನಡೆಸಬೇಕು. ಏಕೆಂದರೆ ಪ್ರಾಣವು ಅನ್ನದಲ್ಲಿ ನೆಲೆಗೊಂಡಿರುತ್ತದೆ. ಅನ್ನದಾತೃವು ಪ್ರಾಣದಾತಾ ಎಂದು ಕರೆಸಿಕೊಳ್ಳುತ್ತಾನೆ.

ವಿವರಣೆ - ಸನ್ಯಾಸಿಗಿಂತಲೂ ಕೂಡ ಗೃಹಸ್ಥನೇ ಏಕೆ ಶ್ರೇಷ್ಠನೆಂಬುದಕ್ಕೆ ಕಾರಣ ಈ ಶ್ಲೋಕದಲ್ಲಿದೆ. ಯಾರು ಅನ್ನದಾತೃವೋ ಅವನು ಪ್ರಾಣಪ್ರದ. ಪ್ರಾಣಪದನಾದವನು ಪಿತೃಸಮಾನ ಎಂಬುದು ಲೋಕಸಿದ್ಧವಾದ ನಿಯಮ. ಆದ್ದರಿಂದ ಸನ್ಯಾಸಿಗಿಂತಲೂ ಗೃಹಸ್ಥನು ಶ್ರೇಷ್ಠನೆಂದು ಇದರಿಂದ ತಿಳಿಯುತ್ತದೆ.

ಗೃಹಸ್ಥೇಭ್ಯೋಽಪಿ ನಿರ್ಮುಕ್ತಾ ಗೃಹಸ್ಥಾನೇವ ಸಂಶ್ರಿತಾಃ।
ಪ್ರಭವಂ ಚ ಪ್ರತಿಷ್ಠಾಂ ಚ ದಾಂತಾ ವಿಂದಂತ ಆಸತೇ ॥೨೯॥

ಜಿತೇಂದ್ರಿಯರಾದ ಸನ್ಯಾಸಿಗಳು ಗೃಹಸ್ಥಾಶ್ರಮವನ್ನು ಪರಿತ್ಯಾಗ ಮಾಡಿ ಗೃಹಸ್ಥ ಜನರನ್ನೇ ಆಶ್ರಯಿಸುತ್ತಾರೆ. ಆ ಎಲ್ಲಾ ಸನ್ಯಾಸಿಗಳಿಗೆ ಗೃಹಸ್ಥರೇ ಆಶ್ರಯದಾತೃರಾಗುತ್ತಾರೆ. ಸನ್ಯಾಸಿಗಳ ಉಗಮಸ್ಥಾನ ಗೃಹಸ್ಥಾಶ್ರಮವೇ ಆಗಿರುತ್ತದೆ. ಆದ್ದರಿಂದ ಗೃಹಸ್ಥರೇ ಶ್ರೇಷ್ಠರಾಗಿದ್ದಾರೆ.

ತ್ಯಾಗಾನ್ನ ಭಿಕ್ಷುಕಂ ವಿದ್ಯಾನ್ನ ಮೌಢ್ಯಾನ್ನ ಚ ಯಾಚನಾತ್।
ಋಜುಸ್ತು ಯೋಽರ್ಥಂತ್ಯಜತಿ ನಸುಖಂ ವಿದ್ಧಿ ಭಿಕ್ಷುಕಮ್ ॥೩೦॥

ಎಲ್ಲವನ್ನು ಪರಿತ್ಯಾಗ ಮಾಡುವುದರಿಂದ ಅವನು ಸನ್ಯಾಸಿ ಎಂದು ಕರೆಸಿಕೊಳ್ಳುವುದಿಲ್ಲ. ಅಥವಾ ತನ್ನ ಸನ್ಯಾಸಾಶ್ರಮದಲ್ಲಿ ತನಗಿರುವ ಮೋಹದಿಂದಲೂ ತಾನು ಸನ್ಯಾಸಿ ಎಂದು ಕರೆಸಿಕೊಳ್ಳುವುದಿಲ್ಲ. ಪ್ರಾಮಾಣಿಕವಾದ ಬುದ್ಧಿಯಿಂದ ಯಾರು ಎಲ್ಲಾ ಪ್ರಯೋಜನಗಳನ್ನು ಪರಿತ್ಯಾಗ ಮಾಡುತ್ತಾನೋ, ಅಂಥ ಭಿಕ್ಷುಕನೇ ನಿಜವಾದ ಸನ್ಯಾಸಿ ಎಂದು ಕರೆಸಿಕೊಳ್ಳುತ್ತಾನೆ.

ಟಿಪ್ಪಣಿ - ತ್ಯಾಗಾನ್ನ ಭಿಕ್ಷುಕಂ ವಿಂದ್ಯಾದ್ ಇತ್ಯತ್ರ ತ್ಯಾಗಾದ್ ಭಾರ್ಯಾದಿಷು ಕೋಪೇನ ತ್ಯಾಗಾತ್।

'ತ್ಯಾಗನ್ನಾ ಭಿಕ್ಷುಕಂ ವಿದ್ಯಾಂತ್' ಎಂಬಲ್ಲಿ 'ತ್ಯಾಗಾತ್' ಭಾರ್ಯಾದಿಗಳನ್ನು

ಕೋಪದಿಂದ ಪರಿತ್ಯಾಗ ಮಾಡುವವನು ಸನ್ಯಾಸಿ ಎಂದು ಕರೆಸಿಕೊಳ್ಳುವುದಿಲ್ಲ ಎಂದರ್ಥ.

ಅಸಕ್ತಃ ಸಕ್ತವದ್ ಗಚ್ಛನ್ ನಿಃಸಂಗೋ ಮುಕ್ತಬಂಧನಃ।
ಸಮಃ ಶತ್ರೌ ಚ ಮಿತ್ರೇ ಚ ಸ ವೈ ಮುಕ್ತೋ ಮಹೀಪತೇ ॥೩೧॥

ಯಾವುದೇ ಪದಾರ್ಥದಲ್ಲಿ ಆಸಕ್ತಿ ಇಲ್ಲದಿದ್ದರೂ ಆಸಕ್ತನಿರುವಂತೆ ಲೋಕ-ವ್ಯವಹಾರಗಳನ್ನು ನಡೆಸುತ್ತಾನೋ, ಯಾವುದಕ್ಕೂ ಅಂಟಿಕೊಳ್ಳುವುದಿಲ್ಲವೋ, ಎಲ್ಲಾ ವಿಧವಾದ ಬಂಧನಗಳಿಂದ ಮುಕ್ತನಾಗಿರುತ್ತಾನೋ, ಶತ್ರು ಹಾಗೂ ಮಿತ್ರರನ್ನು ಸಮಾನ ಭಾವನೆಯಿಂದ ಕಾಣುತ್ತಾನೋ, ಅವನು ರಾಜನಾಗಿದ್ದರೂ ಕೂಡ ಸರ್ವದಾ ಮುಕ್ತನಾಗಿರುತ್ತಾನೆ. ಸನ್ಯಾಸಿಯಾಗಿರುತ್ತಾನೆ.

ಟಿಪ್ಪಣಿ – ಅಸಕ್ತಃ ಸಕ್ತವದ್ ಇತ್ಯತ್ರ ಅಸಕ್ತಃ ಮನಸಾ ಸಂಗರಹಿತಃ, ಸಕ್ತವದ್ ಬಹಿಃ ಸಕ್ತವದ್ ಗಚ್ಛನ್।

'ಅಸಕ್ತಃ ಸಕ್ತವತ್' – ಅಸಕ್ತಃ = ಮನಸ್ಸಿನಿಂದ ಸಂಗವನ್ನು ಪರಿತ್ಯಾಗ ಮಾಡಿದವನು. ಸಕ್ತವತ್ = ಬಾಹ್ಯವಾಗಿ ಆಸಕ್ತಿಯಿದ್ದವನಂತೆ ವರ್ತಿಸುವವನು.

ಪರಿವ್ರಜಂತಿ ದಾನಾರ್ಥಂ ಮುಂಡಾಃ ಕಾಷಾಯವಾಸಸಃ।
ಸಿತಾ ಬಹುವಿಧೈಃ ಪಾಶೈಃ ಸಂಚಿನ್ವಂತೋ ವೃಥಾಮಿಷಮ್ ॥೩೨॥

ಮುಂಡನ ಮಾಡಿಸಿಕೊಂಡು ಕೆಂಪು ಬಟ್ಟೆಯನ್ನು ಧಾರಣೆ ಮಾಡಿ, ಸನ್ಯಾಸ ಜೀವನವನ್ನು ಸ್ವೀಕಾರ ಮಾಡಿ, ಇನ್ನೊಬ್ಬರ ಬಳಿ ದಾನವನ್ನು ಬೇಡುವುದಕ್ಕಾಗಿ ಅಲೆದಾಡುತ್ತಿರುತ್ತಾರೆ. ಅವರ ಅಂತರಂಗದಲ್ಲಿ ಆಸೆಗಳೇ ತುಂಬಿರುತ್ತವೆ. ಅದಕ್ಕೆ ಆ ಆಸೆಗಳನ್ನು ಪೂರೈಸಿಕೊಳ್ಳಲು ಸುಖಸಾಮಗ್ರಿಗಳನ್ನೇ ನಿರಂತರ ಯೋಚನೆ ಮಾಡುತ್ತಾರೆ.

ವಿವರಣೆ – ಶಿಷ್ಯಸಂಪತ್ತು, ಮಠಸಂಪತ್ತು, ಧನಸಂಪತ್ತು, ಆಸ್ತಿಸಂಪತ್ತು ಇವುಗಳ ರಕ್ಷಣೆ ಮಾಡಿದರೆ ಮಾತ್ರ ಸನ್ಯಾಸಿ ಎಂಬ ಲೋಕವಾಡಿಕೆಯನ್ನು ಈ ಶ್ಲೋಕದಲ್ಲಿ ನಿರಾಕರಣೆ ಮಾಡಿದ್ದಾರೆ.

ಟಿಪ್ಪಣಿ - ಸಿತಾ ಬಹುವಿಧೈಃ ಪಾಶೈಃ ಸಂಚಿನ್ವಂತೋ ವೃಥಾಮಿಷಮ್ ಇತ್ಯತ್ರ ಸಿತಾಃ ಬದ್ಧಾಃ। ಆಮಿಷಂ ಸ್ವೋದರಮಾಂಸಂ ಸಂಚಿನ್ವಂತಃ ಪೋಷಯಂತಃ।

'ಸಿತಾಃ ಬಹುವಿಧೈಃ ಪಾಶೈಃ ಸಂಚಿನ್ವಂತೋ ವೃಥಾಮಿಷಮ್' - ಸಿತಾಃ = ಬದ್ಧರಾದವರು, ಆಮಿಷಂ = ಅನೇಕ ಆಸೆಗಳನ್ನು, ಸಂಚಿನ್ವಂತಃ = ಪೋಷಿಸುವಂತವರಾಗಿ.

ತ್ರಯೀಂ ಚ ನಾಮ ವಾರ್ತಾಂ ಚ ತ್ಯಕ್ತ್ವಾ ಪುತ್ರಾನ್ ವ್ರಜಂತಿ ಯೇ।
ತ್ರಿವಿಷ್ಟಬ್ಧಂ ಚ ವಾಸಶ್ಚ ಪ್ರತಿಗೃಹ್ಣಂತ್ಯಬುದ್ಧಯಃ ॥೩೩॥

ಯಾರು ಮೂರು ವೇದಗಳ ಅಧ್ಯಯನವನ್ನು, ವಾಣಿಜ್ಯಾದಿ ವೃತ್ತಿಗಳನ್ನು, ಮಕ್ಕಳನ್ನು ಪರಿತ್ಯಾಗ ಮಾಡಿ ಹೊರಡುತ್ತಾರೋ, ತಮ್ಮ ಹೆಸರನ್ನೂ ಕೂಡ ಬಿಡುತ್ತಾರೋ, ತ್ರಿದಂಡ ಕಾಷಾಯಗಳನ್ನು ಧರಿಸಿರುತ್ತಾರೋ, ಅವರು ನಾನಾವಿಧವಾದ ಆಸೆಗಳನ್ನು ಮನಸ್ಸಿನಲ್ಲಿ ಹಾಗೇ ತುಂಬಿಕೊಂಡಿರುತ್ತಾರೆ. ಬುದ್ಧಿಹೀನರಾಗಿ ಸನ್ಯಾಸಿ-ಜೀವನವನ್ನು ಇಚ್ಛಿಸಿರುತ್ತಾರೆ.

ಟಿಪ್ಪಣಿ - ತ್ರಯೀಂ ಚ ನಾಮ ವಾರ್ತಾಂ ಚ ಇತ್ಯತ್ರ ವಾರ್ತಾಂ ವೃತ್ತಿಂ ಜೀವನೋಪಾಯಮ್, ನಾಮ ಪೂರ್ವಂ ವಿದ್ಯಮಾನಂ ಗೋತ್ರನಾಮಾದಿಕಮ್।

'ತ್ರಯೀಂ ಚ ನಾಮ ವಾರ್ತಾಂ ಚ ' ಎಂಬಲ್ಲಿ 'ವಾರ್ತಾಂ' ಎಂಬ ಪದಕ್ಕೆ ವೃತ್ತಿ ಎಂದರ್ಥ. ಜೀವನೋಪಾಯ ಎಂದರ್ಥ. 'ನಾಮ' = ಮೊದಲು ಇರುವ ಗೋತ್ರ ಮತ್ತು ಹೆಸರುಗಳನ್ನು.

ವಿವರಣೆ - ಮೂರು ವೇದಗಳ ಅಧ್ಯಯನವನ್ನೇ ಬಿಡುತ್ತಾರೆ. ವೇದಗಳಲ್ಲಿ ಹೇಳಲ್ಪಟ್ಟ ಕರ್ಮಗಳನ್ನು ಬಿಡುತ್ತಾರೆ, ಕೃಷಿ ಗೋರಕ್ಷಕ ವಾಣಿಜ್ಯಾದಿ ಲೌಕಿಕ ವೃತ್ತಿಗಳನ್ನು ಪರಿತ್ಯಾಗ ಮಾಡುತ್ತಾರೆ. ತಮ್ಮ ಹೆಸರು ಗೋತ್ರಗಳನ್ನೂ ಕೂಡ ಬಿಡುತ್ತಾರೆ. ಹೆಂಡತಿ ಮತ್ತು ಮಕ್ಕಳನ್ನೂ ಕೂಡ ಪರಿತ್ಯಾಗ ಮಾಡುತ್ತಾರೆ. ತ್ರಿದಂಡವನ್ನು ಹಿಡಿದು ಕಾಷಾಯವಸ್ತ್ರವನ್ನು ಧರಿಸಿ ಸನ್ಯಾಸಿಗಳೆಂದು ಹೇಳಿಕೊಂಡು ತಿರುಗುತ್ತಾರೆ. ಇಂಥವರು ಬುದ್ಧಿಹೀನರೇ ಸರಿ. ಯಾವುದನ್ನು ತ್ಯಾಗ ಮಾಡಬಾರದೋ ಅದನ್ನು ತ್ಯಾಗ ಮಾಡಿದರೂ, ಪ್ರತಿಗ್ರಹವನ್ನು ಇವರು ಪರಿತ್ಯಾಗ ಮಾಡಿರುವುದೇ ಇಲ್ಲ. ಮೊದಲು ಪ್ರತಿಗ್ರಹವನ್ನು ಪರಿತ್ಯಾಗ ಮಾಡಿ ಅನಂತರ ಸನ್ಯಾಸಿಯಾಗಬೇಕು ಎಂಬುದೇ ಇದರ ಭಾವ.

ಅನಿಷ್ಕಷಾಯೇ ಕಾಷಾಯಮೀಹಾರ್ಥಮಿತಿ ವಿದ್ಧಿ ತಮ್ ।
ಧರ್ಮಧ್ವಜಾನಾಂ ಮುಂಡಾನಾಂ ವೃತ್ತ್ಯರ್ಥಮಿತಿ ಮೇ ಮಿತಿಃ ॥೩೪॥

ಹೃದಯದಲ್ಲಿ ರಾಗಾದಿಗಳನ್ನು ಪರಿತ್ಯಾಗ ಮಾಡದೇ ಬಾಹ್ಯವಾಗಿ ಕಾಷಾಯ-ವಸ್ತ್ರವನ್ನು ಧರಿಸುವುದು ಕೇವಲ ಸ್ವಾರ್ಥಸಾಧನೆಯ ಒಂದು ವೇಷವಷ್ಟೇ. ಧರ್ಮದ ಮುಖವಾಡವನ್ನು ಧರಿಸಿ ತಿರುಗುವ ಮುಂಡರಿಗೆ ಸನ್ಯಾಸಿಜೀವನವು ಒಂದು ವೃತ್ತಿಯೇ ಆಗಿದೆ. ಇದು ನನ್ನ ಅಭಿಪ್ರಾಯ.

ವಿವರಣೆ - ಸನ್ಯಾಸಧರ್ಮವನ್ನು ಇಲ್ಲಿ ಅರ್ಜುನನು ನಿಂದಿಸುತ್ತಿಲ್ಲ. ಸನ್ಯಾಸಿ ವೇಷದ ಸೋಗನ್ನು ಹಾಕಿ, ಮನಸ್ಸನ್ನು ಗೆಲ್ಲಲಾಗದೇ ಧರ್ಮದ ಮುಖವಾಡವನ್ನು ಹಾಕಿಕೊಂಡವರನ್ನಷ್ಟೇ ಇಲ್ಲಿ ಅರ್ಜುನನು ನಿಂದಿಸುತ್ತಿದ್ದಾನೆ. ಹೊರಗೆ ಕಾಷಾಯ-ವಸ್ತ್ರವನ್ನು ಧಾರಣೆ ಮಾಡಬೇಕೆಂದರೆ ಹೃದಯದಲ್ಲಿ ಕಾಷಾಯವನ್ನು ಪರಿತ್ಯಾಗ ಮಾಡಿರಬೇಕು. ರಾಗ, ಕಾಮಕ್ರೋಧಾದಿಗಳನ್ನು ಗೆದ್ದಿರಬೇಕು. ಇಲ್ಲದಿದ್ದರೆ ಸ್ವಾರ್ಥಸಾಧನೆಗಾಗಿ ಕೀರ್ತಿಕಾಮುಕತನದಿಂದ ಸನ್ಯಾಸಜೀವನದ ವೇಷವಷ್ಟೇ ಇವನಿಗೆ ಬಂದ ಲಾಭ. ಧರ್ಮದ ಸೋಗನ್ನು ಹಾಕಿ, ತಾನು ನಿಜವಾದ ವಿರಕ್ತನೆಂದು ಹೇಳಿಕೊಳ್ಳುವ ಇವನು ಅಪ್ರಾಮಾಣಿಕ. ಗೋಮುಖವ್ಯಾಘ್ರ ಎಂಬುದು ಅರ್ಜುನನ ಅಭಿಪ್ರಾಯ.

ಕಾಷಾಯೈರಜಿನೈಶ್ಚೀರೈರ್ನಗ್ನಾನ್ ಮುಂಡಾನ್ ಜಟಾಧರಾನ್ ।
ಬಿಭ್ರತ್ ಸಾಧೂನ್ ಮಹಾರಾಜ ಜಯ ಲೋಕಾನ್ ಜಿತೇಂದ್ರಿಯಃ
॥೩೫॥

ಓ ಧರ್ಮರಾಜನೇ! ಯಾರು ಜೀವಿಕೆಗೋಸ್ಕರ ಕಾಷಾಯವಸ್ತ್ರವನ್ನು ಧರಿಸಿ-ದ್ದಾರೋ, ಕೃಷ್ಣಾಜಿನ, ಹರಿದ ಬಟ್ಟೆಗಳನ್ನು ಧರಿಸಿದ್ದಾರೋ, ನಗ್ನರಾಗಿ ಮುಂಡಿಗಳಾಗಿ ತಿರುಗುತ್ತಿದ್ದಾರೋ, ಜಟಾಧಾರಿಗಳಾಗಿದ್ದಾರೋ ಅಂಥ ಸನ್ಯಾಸಿಗಳನ್ನೂ ಕೂಡ ನೀನು ಜಯಿಸುವಿ. ಮೊದಲು ಜಿತೇಂದ್ರಿಯನಾಗಿ ನಿನ್ನ ಕರ್ತವ್ಯದಲ್ಲಿ ತೊಡಗು. ಆಗ ಆ ಎಲ್ಲಾ ವಿಧದ ಸನ್ಯಾಸಿಗಳಿಗೆ ಆಶ್ರಯದಾತನಾಗಿರುವಿ.

ವಿವರಣೆ - ಮೇಲೆ ಉಲ್ಲೇಖಿಸಿದಂತೆ ಕರ್ತವ್ಯಕರ್ಮಗಳನ್ನು ಪರಿತ್ಯಾಗ

ಮಾಡಿ, ಅಂತರಂಗದಲ್ಲಿ ತ್ಯಾಗಬುದ್ಧಿಯಲ್ಲಿ ಸನ್ಯಾಸಿಜೀವನವನ್ನು ಸ್ವೀಕರಿಸುವುದು ವ್ಯರ್ಥ. ಆದ್ದರಿಂದ ನೀನು ನಿಜವಾದ ಕರ್ತವ್ಯಪರಿಪಾಲಕನಾಗು. ಎಲ್ಲಾ ವಿಧವಾದ ಜನರಿಗೆ ಆಶ್ರಯದಾತನಾಗು, ಆಗ ಆ ಸನ್ಯಾಸಿಗಳನ್ನೂ ಕೂಡ ನೀನು ಜಯಿಸುವಿ. ಅವರಿಗಿಂತಲೂ ಹೆಚ್ಚಿನ ಪುಣ್ಯವನ್ನು ಸಂಪಾದನೆ ಮಾಡುವಿ. ನೀನು ಸನ್ಯಾಸವೃತ್ತಿಯನ್ನು ಸ್ವೀಕರಿಸಿದಾಗ ಏನು ಫಲವು ದೊರಕುತ್ತದೋ, ಅದಕ್ಕಿಂತ ಹೆಚ್ಚಿನ ಫಲವನ್ನೇ ಹೊಂದುವಿ. ಮತ್ತು ಕಾಷಾಯವಸ್ತ್ರವನ್ನು ಉಟ್ಟು, ಜಟಾಧಾರಿಗಳಾಗಿ ಅಥವಾ ಮುಂಡಿಗಳಾಗಿ ಸಂಚರಿಸುವ ಎಲ್ಲಾ ಸನ್ಯಾಸಿಗಳಿಗೂ ನೀನು ಆಶ್ರಯದಾತನಾಗು. ಅದರಿಂದ ನೀನು ಅವರಿಗಿಂತಲೂ ಶ್ರೇಷ್ಠನಾಗುವಿ. ಈಗಾಗಲೇ ಹಿಂದೆ ತಿಳಿಸಿದಂತೆ ದಾನವನ್ನು ಸ್ವೀಕರಿಸುವವನಿಗಿಂತ ದಾನವನ್ನು ಕೊಡುವವನೇ ಶ್ರೇಷ್ಠನಾಗಿರುತ್ತಾನೆ. ಆದ್ದರಿಂದ ಅಂಥವರಿಗೆಲ್ಲಾ ಜೀವನೋಪಾಯವನ್ನು ಕಲ್ಪಿಸಿದಾಗ ಅವರಿಗಿಂತಲೂ ನೀನು ಶ್ರೇಷ್ಠನಾಗುವಿ.

ಟಿಪ್ಪಣಿ - ಕಾಷಾಯೈರಜಿನೈಃ ಇತ್ಯತ್ರ ವೃತ್ತ್ಯರ್ಥಮ್ ಇತಿ ಪ್ರಾಚೀನಪದಮಾವರ್ತ್ಯ ವೃತ್ತ್ಯರ್ಥಂ ಸ್ವೋದರಪೂರಣಾರ್ಥಂ ಕಾಷಾಯೈರಜಿನೈಶ್ಚೀರೈಶ್ಚ ಸಂವೃತೋ ಭವತಿ । ತಥಾ ನಗ್ನಃ ಮುಂಡಃ ಜಟೀ ಚ ಭವತಿ । ಸಾಧೂನ್ ಸಜ್ಜನಾನ್ ಬಿಭ್ರದ್ ಧನ-ದಾನಾದಿನಾ ಪೋಷಯನ್ ಜಿತೇಂದ್ರಿಯೋ ಗೃಹಸ್ಥಃ ಲೋಕಾನ್ ಜಯೇತ್, ನತು ಪ್ರಾಗುಕ್ತೋ ಡಂಭಃ ಸನ್ಯಾಸೀತಿ ಭಾವಃ।

'ಕಾಷಾಯೈರಜಿನೈಃ' ಎಂಬಲ್ಲಿ ವೃತ್ತ್ಯರ್ಥಂ ಎಂಬುದಾಗಿ ಹಿಂದೆ ಇರುವ ಪದವನ್ನು ಆವೃತ್ತಿ ಮಾಡಿಕೊಂಡು ತನ್ನ ಹೊಟ್ಟೆಯನ್ನು ತುಂಬಿಸುವುದಕ್ಕಾಗಿ, ಕಾಷಾಯವಸ್ತ್ರವನ್ನು, ಕೃಷ್ಣಾಜಿನವನ್ನು, ಹರಿದ ಬಟ್ಟೆಗಳನ್ನು ಧರಿಸಿರುತ್ತಾರೆ ಎಂಬರ್ಥವನ್ನು ತಿಳಿಯಬೇಕು. ಇದರಂತೆ ನಗ್ನನಾಗುತ್ತಾನೆ, ಮುಂಡಿಯಾಗಿರುತ್ತಾನೆ, ಜಟಾಧಾರಿಯಾಗಿರುತ್ತಾನೆ. ಇಂಥ 'ಸಾಧೂನ್' = ಸಜ್ಜನರನ್ನು, 'ಬಿಭ್ರತ್' = ಆಹಾರ ಮೊದಲಾದವುಗಳನ್ನು ಕೊಡುವ ಮೂಲಕ ಪೋಷಣೆ ಮಾಡುತ್ತಾ, 'ಜಿತೇಂದ್ರಿಯಃ' = ಇಂದ್ರಿಯವನ್ನು ಗೆದ್ದ ಗೃಹಸ್ಥನಾಗಿ ಲೋಕಗಳನ್ನು ಜಯಿಸು, ಹೊರತು ಹಿಂದೆ ಹೇಳಿದಂತೆ ಡಾಂಭಿಕನಾದ ಸನ್ಯಾಸಿಯಾಗಬೇಡ ಎಂದಭಿಪ್ರಾಯ.

ಅಗ್ನ್ಯಾಧೇಯಾನಿ ಗುರ್ವರ್ಥಂ ಕ್ರತೂನಪಿ ಸುದಕ್ಷಿಣಾನ್ ।
ದದಾತ್ಯಹರಹಃ ಪೂರ್ವಂ ಕೋ ನು ಧರ್ಮರತಸ್ತತಃ ॥೩೬॥

ಪ್ರತಿನಿತ್ಯ ಮಾಡುವ ಅಗ್ನ್ಯಾದಾನಾದಿ ಕಾರ್ಯಗಳಿಗೆ ಆವಶ್ಯಕವಾದ ಸಂಪತ್ತನ್ನು, ಪಶುಗಳನ್ನು, ದಕ್ಷಿಣೆಯನ್ನು ಒದಗಿಸಿಕೊಡುತ್ತಾನೋ, ಮತ್ತು ಉತ್ತಮ ದಕ್ಷಿಣೆಗಳನ್ನು ಕೊಡುವ ಮೂಲಕ ಯಜ್ಞಗಳನ್ನೂ ಕೂಡ ಆಚರಿಸುತ್ತಾನೋ, ಅವನಿಗಿಂತಲೂ ಶ್ರೇಷ್ಠರಾದ ಮತ್ತೊಬ್ಬ ಧರ್ಮಪರಾಯಣರು ಜಗತ್ತಿನಲ್ಲಿ ಯಾರು ತಾನೇ ಇರಲು ಸಾಧ್ಯ ?

ವಿವರಣೆ - ಮತ್ತೊಬ್ಬರು ಮಾಡುವ ಯಜ್ಞಯಾಗಾದಿಗಳಿಗೆ ತಾವು ಅನುಕೂಲ ಮಾಡಬೇಕು. ಸ್ವತಃ ತಾನೂ ಕೂಡ ಯಥೇಚ್ಛವಾಗಿ ದಕ್ಷಿಣೆಗಳನ್ನು ಕೊಡುವ ಮೂಲಕ ಯಜ್ಞಯಾಗವನ್ನು ಮಾಡಬೇಕು. ಇವನೇ ನಿಜವಾದ ಧರ್ಮಿಷ್ಠ. ಇವನನ್ನು ಮೀರಿಸಿ ವ್ಯಕ್ತಿ ಮತ್ತೊಬ್ಬನಿರಲು ಸಾಧ್ಯವಿಲ್ಲ ಎಂದು ಭಾವ.

ತತ್ತ್ವಜ್ಞೋ ಜನಕೋ ರಾಜಾ ಲೋಕೇऽಸ್ಮಿನ್ನಿತಿ ಗೀಯತೇ।
ಸೋऽಪ್ಯಾಸೀನ್ಮೋಹಸಂಪನ್ನೋ ಮಾ ಮೋಹವಶಮನ್ವಗಾಃ ॥೩೭॥

ಅಣ್ಣನೇ! ಲೋಕದಲ್ಲಿ ರಾಜನಾದ ಜನಕನು ಶ್ರೇಷ್ಠವಾದ ತತ್ವಜ್ಞಾನಿಯಾಗಿದ್ದನೆಂದು ಎಲ್ಲರೂ ಹೇಳುತ್ತಾರೆ. ಅವನಿಗೂ ಕೂಡ ಒಮ್ಮೆ ಹೀಗೆ ಸನ್ಯಾಸದ ಮೇಲೆ ಮೋಹವು ಉಂಟಾಗಿತ್ತು. ಅವನಂತೆ ನೀನು ಮೋಹಕ್ಕೆ ವಶನಾಗಬೇಡ.

ಏವಂ ಧರ್ಮಮನುಕ್ರಾಂತಾಃ ಸದಾ ದಾನತಪಃಪರಾಃ।
ಆನೃಶಂಸ್ಯಗುಣೋಪೇತಾಃ ಕಾಮಕ್ರೋಧವಿವರ್ಜಿತಾಃ ॥೩೮॥

ಪ್ರಜಾನಾಂ ಪಾಲನೇ ಯುಕ್ತಾ ದಾನಮುತ್ತಮಮಾಸ್ಥಿತಾಃ।
ಇಷ್ಟ್ವಾಂಲ್ಲೋಕಾನವಾಪ್ಯಾಮೋ ಗುರುವೃದ್ಧೋಪಚಾಯಿನಃ ॥೩೯॥

ನಾವು ಯಾವಾಗಲೂ ಧರ್ಮಗಳನ್ನೇ ಆಚರಿಸೋಣ. ಯಥೇಚ್ಛವಾಗಿ ದಾನವನ್ನು ಮಾಡೋಣ. ತಪಸ್ಸನ್ನು ಆಚರಿಸೋಣ. ಹಿಂಸೆಯನ್ನು ಮಾಡದೇ ಸದ್ಗುಣಶಾಲಿಗಳಾಗಿ ಜೀವಿಸೋಣ. ಕಾಮಕ್ರೋಧಾದಿಗಳನ್ನು ಪರಿತ್ಯಾಗ ಮಾಡಿ, ಮನೋನಿಗ್ರಹದಿಂದ ಪ್ರಜೆಗಳನ್ನು ರಕ್ಷಿಸೋಣ. ಹಿರಿಯರನ್ನು, ಗುರುಗಳನ್ನು ಪೂಜಿಸಿ, ಯಜ್ಞಯಾಗಾದಿಗಳನ್ನು ನಡೆಸಿ ಜೀವನವನ್ನು ಸಾರ್ಥಕ ಮಾಡಿಕೊಳ್ಳೋಣ. ಇದರಿಂದಲೇ ನಾವು ಪುಣ್ಯಲೋಕಗಳನ್ನು ಪಡೆದುಕೊಳ್ಳುತ್ತೇವೆ.

ದೇವತಾತಿಥಿಭೂತಾನಾಂ ನಿರ್ವಪಂತೋ ಯಥಾವಿಧಿ।
ಸ್ಥಾನಮಿಷ್ಟಮವಾಪ್ನ್ಯಾಮೋ ಬ್ರಹ್ಮಣ್ಯಾಃ ಸತ್ಯವಾದಿನಃ ॥೪೦॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ಅರ್ಜುನವಾಕ್ಯೇ ಅಷ್ಟಾದಶೋऽಧ್ಯಾಯಃ ॥೧೮॥

ದೇವತೆಗಳಿಗೆ ಮತ್ತು ಅತಿಥಿಗಳಿಗೆ ಪ್ರಾಣಿಗಳಿಗೆ ಯಥಾಯೋಗ್ಯವಾಗಿ, ಅವರವರ ಭಾಗಗಳನ್ನು ಆಯಾ ಕಾಲಗಳಲ್ಲಿ ಸಮರ್ಪಿಸಿ ತೃಪ್ತಿಯನ್ನು ಪಡಿಸೋಣ. ಇದರಿಂದ ಇಷ್ಟವಾದ ಪುಣ್ಯಲೋಕಗಳನ್ನು ಪಡೆದು ಧನ್ಯರಾಗೋಣ. ಇದುವೇ ನಮ್ಮ ಜೀವನ ಋಜುವಾದ ಮಾರ್ಗ. ಇದರಿಂದಲೇ ಪುಣ್ಯಲೋಕಗಳು ನಮಗೆ ಖಂಡಿತವಾಗಿಯೂ ಲಭಿಸುತ್ತವೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೮ನೆಯ ಅಧ್ಯಾಯವು ಮುಗಿಯಿತು.

*****

೧೯. ಹತ್ತೊಂಬತ್ತನೆಯ ಅಧ್ಯಾಯ

ಅರ್ಜುನನ ಬಳಿ ಯುಧಿಷ್ಠಿರ ತನ್ನ ನಿಲುವನ್ನು ಸಮರ್ಥನೆ ಮಾಡಿಕೊಂಡನು. ಸನ್ಯಾಸವೇ ಉತ್ತಮ ಧರ್ಮವೆಂದು ಪ್ರತಿಪಾದನೆ ಮಾಡಿದನು.

ಯುಧಿಷ್ಠಿರಃ

ವೇದಾಹಂ ತಾತ ಶಾಸ್ತ್ರಾಣಿ ಅಪರಾಣಿ ಪರಾಣಿ ಚ।
ಉಭಯಂ ವೇದವಚನಂ ಕುರು ಕರ್ಮ ತ್ಯಜೇತಿ ಚ ॥೧॥

ಯುಧಿಷ್ಠಿರ - ಓ ತಮ್ಮನೇ! ಧರ್ಮವನ್ನು ತಿಳಿಸುವ ಎಲ್ಲ ಶಾಸ್ತ್ರಗಳನ್ನು ನಾನು ಚೆನ್ನಾಗಿ ಅರಿತಿರುವೆನು. ಬ್ರಹ್ಮನನ್ನು ಪ್ರತಿಪಾದನೆ ಮಾಡುವ ಶಾಸ್ತ್ರಜ್ಞಾನ ನನಗಿದೆ. ಕರ್ಮವನ್ನು ಪ್ರತಿಪಾದನೆ ಮಾಡುವ ಶಾಸ್ತ್ರಜ್ಞಾನವೂ ಕೂಡ ನನಗಿದೆ. ಮತ್ತು ಇವೆರಡಕ್ಕೆ ವಿರುದ್ಧವಾದ ಕರ್ಮಗಳನ್ನು ಪರಿತ್ಯಾಗ ಮಾಡಬೇಕೆಂದು ಹೇಳುವ ವೇದವಚನಗಳನ್ನೂ ಕೂಡ ನಾನು ಅರಿತಿರುವೆನು.

ವಿವರಣೆ - ಶಾಸ್ತ್ರಗಳು ಪರ, ಅಪರ ಎಂಬುದಾಗಿ ಎರಡು ವಿಧವಾಗಿದೆ. ಪರತತ್ವವೆನಿಸಿದ ಪರಮಾತ್ಮನನ್ನು ಪ್ರತಿಪಾದನೆ ಮಾಡುವ ಶಾಸ್ತ್ರಗಳು ಪರಶಾಸ್ತ್ರಗಳು ಎಂದು ಕರೆಸಿಕೊಳ್ಳುತ್ತವೆ. ಉಳಿದ ಕರ್ಮಾದಿಗಳನ್ನು ಪ್ರತಿಪಾದನೆ ಮಾಡುವ ಶಾಸ್ತ್ರಗಳು ಅಪರಶಾಸ್ತ್ರಗಳು ಎಂದು ಕರೆಸಿಕೊಳ್ಳುತ್ತವೆ. ಈ ಎಲ್ಲಾ ಶಾಸ್ತ್ರಗಳನ್ನೂ ಕೂಡ ನಾನು ಅರಿತಿದ್ದೇನೆ. ಮತ್ತು ವೇದದಲ್ಲಿ ಕರ್ಮವನ್ನು ಮಾಡು ಎಂದು ಹೇಳುವ ವಾಕ್ಯಗಳೂ ಇವೆ. ಕರ್ಮವನ್ನು ಪರಿತ್ಯಾಗ ಮಾಡು ಎಂಬುದಾಗಿ ಹೇಳುವ ವಾಕ್ಯಗಳೂ ಕೂಡ ಇವೆ. ಇವೆರಡಕ್ಕೆ ಪರಸ್ಪರವಾಗಿ ವಿರೋಧವು ಕಾಣಿಸುತ್ತದೆ. ಈ ಎಲ್ಲಾ ಬಗೆಯ ಶಾಸ್ತ್ರಬಗೆಯ ವಾಕ್ಯಗಳನ್ನು ನಾನು ಯುಕ್ತಿಪೂರ್ವಕವಾಗಿ ವಿಚಾರ ಮಾಡಿ ತಿಳಿದುಕೊಂಡಿದ್ದೇನೆ. ವಿರುದ್ಧವಾದ ಎರಡು ವಾಕ್ಯಗಳಲ್ಲಿ ಯಾವುದು ಸತ್ಯ , ಯಾವುದು ಸಿದ್ಧಾಂತ ಎಂಬುದನ್ನು ಯಥಾವತ್ತಾಗಿ ತಿಳಿದುಕೊಂಡಿದ್ದೇನೆ.

ಆಕುಲಾನಿ ಚ ಶಾಸ್ತ್ರಾಣಿ ಹೇತುಭಿಶ್ಚಿಂತಿತಾನಿ ಚ।
ನಿಶ್ಚಯಶ್ಚೈವ ಯೋ ಮಂತ್ರೇ ವೇದಾಹಂ ತಂ ಯಥಾವಿಧಿ ॥೨॥

ಶಾಸ್ತ್ರಗಳು ಮೇಲ್ನೋಟದಲ್ಲಿ ಪರಸ್ಪರ ವಿರೋಧವಿರುವಂತೆ ಕಾಣಿಸುತ್ತವೆ. ಅನೇಕ ಕಾರಣಗಳನ್ನು ಹುಡುಕಿ ವಿಚಾರ ಮಾಡಿದರೂ ಕೂಡ ಆ ವಾಕ್ಯಗಳು ಪರಸ್ಪರ ವಿರುದ್ಧವಾದಂತೆಯೇ ತೋರುತ್ತದೆ. ಆದರೆ ನಾನು ಅವುಗಳನ್ನೆಲ್ಲಾ ಪುನಃ ಪುನಃ ವಿಚಾರ ಮಾಡಿ, ಅವುಗಳ ಮುಖ್ಯಸಿದ್ಧಾಂತ ಏನು ಎಂಬುದನ್ನು ಯಥಾವತ್ತಾಗಿ ತಿಳಿದುಕೊಂಡಿದ್ದೇನೆ.

ತ್ವಂ ತು ಕೇವಲಮಸ್ತ್ರಜ್ಞೋ ವೀರವ್ರತಸಮನ್ವಿತಃ।
ಶಾಸ್ತ್ರಾರ್ಥಂ ತತ್ತ್ವತೋ ಗಂತುಂ ನ ಸಮರ್ಥಃ ಕಥಂಚನ ॥೩॥

ಆದರೆ ನೀನು ಅಸ್ತ್ರವಿದ್ಯೆಯನ್ನಷ್ಟೇ ಚೆನ್ನಾಗಿ ಅರಿತಿರುವಿ. ವೀರವ್ರತವನ್ನು ಆಚರಿಸುತ್ತಿರುವಿ. ಶಾಸ್ತ್ರಗಳ ಮರ್ಮವನ್ನು ಯಥಾವತ್ತಾಗಿ ತಿಳಿದುಕೊಳ್ಳಲು ನೀನು ಸಮರ್ಥನಲ್ಲ. ತತ್ವನಿರ್ಣಯವನ್ನೂ ಕೂಡ ಮಾಡಲು ನಿನ್ನಿಂದ ಸಾಧ್ಯವಿಲ್ಲ.

ಶಾಸ್ತ್ರಾರ್ಥಸೂಕ್ಷ್ಮದರ್ಶೀ ಯೋ ಧರ್ಮನಿಶ್ಚಯಕೋವಿದಃ।
ತೇನಾಪ್ಯೇವಂ ನ ವಾಚ್ಯೋಽಹಂ ಯದಿ ಧರ್ಮಂ ಪ್ರಪಶ್ಯಸಿ ॥೪॥

ಯಾರು ಶಾಸ್ತ್ರಾಸ್ತ್ರಗಳ ಸೂಕ್ಷ್ಮವಿಚಾರಗಳನ್ನು ತಿಳಿದಿರುತ್ತಾರೋ, ಧರ್ಮವನ್ನು ನಿಶ್ಚಯ ಮಾಡುವುದರಲ್ಲಿ ಪ್ರವೀಣರಾಗಿರುತ್ತಾರೋ, ಅಂಥವರು ಯಾರೇ ಆಗಿದ್ದರೂ ನೀನು ಹೇಳಿದ ಮಾತುಗಳನ್ನು ಹೇಳಲಾರರು.

ಭ್ರಾತೃಸೌಹೃದಮಾಸ್ಥಾಯ ಯದುಕ್ತಂ ವಚನಂ ತ್ವಯಾ।
ನ್ಯಾಯ್ಯಂ ಯುಕ್ತಂ ಚ ಕೌಂತೇಯ ಪ್ರೀತೋಽಹಂ ತೇನ ತೇಽರ್ಜುನ ॥೫॥

ಅರ್ಜುನನೇ ! ನೀನು ನನ್ನ ಮೇಲಿರುವ ಪ್ರೀತಿಯಿಂದ ನಿನ್ನ ಅಭಿಪ್ರಾಯವನ್ನು ತಿಳಿಸಿರುವಿ. ನ್ಯಾಯಸಮ್ಮತವಾಗಿ ನಿನಗೆ ಅನಿಸಿದ ಮಾತುಗಳನ್ನು ಆಡಿರುವಿ. ಇದರಿಂದ ನನಗೆ ಸಂತೋಷವಾಗಿದೆ.

ಯುದ್ಧಧರ್ಮೇಷು ಸರ್ವೇಷು ಕ್ರಿಯಾಣಾಂ ನೈಪುಣೇಷು ಚ।
ನ ತ್ವಯಾ ಸದೃಶಃ ಕಶ್ಚಿತ್ ತ್ರಿಷು ಲೋಕೇಷು ವಿದ್ಯತೇ ॥೬॥

ಧರ್ಮಂ ಸೂಕ್ಷ್ಮತರಂ ವಾಕ್ಯಂ ತತ್ರ ದುಷ್ಪ್ರತರಂ ತ್ವಯಾ।
ಧನಂಜಯ ನ ಮೇ ಬುದ್ಧಿಮಭಿಶಂಕಿತುಮರ್ಹಸಿ ॥೭॥

ನಮ್ಮೆಲ್ಲರಿಗೂ ಒಡೆಯನಾದ ಬ್ರಹ್ಮನೆನಿಸಿದ ವಾಸುದೇವನಿಗೆ ಸಮಾನನಾದವನು ಇಲ್ಲಿಯ ತನಕ ಹುಟ್ಟಿರುವುದಿಲ್ಲ. ಈಗಲೂ ಇಲ್ಲ. ಮುಂದೆ ಹುಟ್ಟುವ ಸಾಧ್ಯತೆಯೂ ಇಲ್ಲ. ಅದರಂತೆ ಎಲ್ಲಾ ವಿಧದ ಯೋಧರಲ್ಲಿ ನೀನೇ ಶ್ರೇಷ್ಠನಾಗಿರುವಿ. ನಿನಗೆ ಸರಿಸಾಟಿಯಾದ ಮತ್ತೊಬ್ಬ ವೀರ ಇದುವರೆಗೂ ಹುಟ್ಟಿಲ್ಲ. ಮುಂದೆ ಹುಟ್ಟುವ ಸಾಧ್ಯತೆಯೂ ಇಲ್ಲ.

ಬಲಮಿಂದ್ರೇ ಚ ವಾಯೌ ಚ ಬಲಂ ಯಚ್ಚ ಜನಾರ್ದನೇ।
ತದ್ ಬಲಂ ಭೀಮಸೇನೇ ಚ ತ್ವಯಿ ಚಾರ್ಜುನ ವಿದ್ಯತೇ ॥೮॥

ಇಂದ್ರ, ವಾಯು, ಜನಾರ್ದನ ಇವರಲ್ಲಿ ಎಂಥ ಬಲವಿದೆಯೋ, ಅಂಥದ್ದೇ ಬಲ ನಿನ್ನಲ್ಲಿ. ಹಾಗೂ ಭೀಮಸೇನನಲ್ಲಿ ನೆಲೆಗೊಂಡಿದೆ.

ತ್ವತ್ಸಮಶ್ಚಿತ್ರಯೋಧೀ ಚ ದೂರಪಾತೀ ಚ ಪಾಂಡವ।
ದಿವ್ಯಾಸ್ತ್ರೇಣ ಚ ಸಂಪನ್ನ ಕೋ ವಾನ್ಯಸ್ತ್ವತ್ಸಮೋ ನರಃ ॥೯॥

ವಿಚಿತ್ರವಾದ ಯುದ್ಧದಲ್ಲಿ ದೂರದಿಂದ ಪಡೆಯುವುದರಲ್ಲಿ ದಿವ್ಯಾಸ್ತ್ರಸಂಪತ್ತಿನಲ್ಲಿ ನಿನಗೆ ಸರಿಸಾಟಿಯಾದ ಮತ್ತೊಬ್ಬ ವೀರನಿರಲು ಸಾಧ್ಯವಿಲ್ಲ.

ಯುದ್ಧಧರ್ಮೇಷು ಸರ್ವೇಷು ಕ್ರಿಯಾಣಾಂ ನೈಪುಣೇಷು ಚ।
ನ ತ್ವಯಾ ಸದೃಶಃ ಕಶ್ಚಿತ್ ತ್ರಿಷು ಲೋಕೇಷು ವಿದ್ಯತೇ ॥೧೦॥

ಅನೇಕ ಬಗೆಯ ಯುದ್ಧದ ಧರ್ಮಗಳಲ್ಲಿ ಮತ್ತು ಸಂಗ್ರಾಮಕೌಶಲಗಳಲ್ಲಿ ನಿನಗೆ ಸರಿಸಾಟಿಯಾದವನೇ ಮೂರು ಲೋಕಗಳಲ್ಲಿ ಯಾರೂ ಇರುವುದಿಲ್ಲ.

ಧರ್ಮಂ ಸೂಕ್ಷ್ಮತರಂ ವಾಚ್ಯಂ ತತ್ರ ದುಷ್ಪ್ರತರಂ ತ್ವಯಾ।
ಧನಂಜಯ ನ ಮೇ ಬುದ್ಧಿಮಭಿಶಂಕಿತುಮರ್ಹಸಿ ॥೧೧॥

ಧರ್ಮವು ಅತ್ಯಂತಸೂಕ್ಷ್ಮವಾಗಿದೆ. ಅದರಲ್ಲಿ ನೀನು ಪ್ರಾವೀಣ್ಯವನ್ನು ಸಾಧಿಸಲು ಸಾಧ್ಯವಿಲ್ಲ. ಅಂಥ ಧರ್ಮದ ವಿಷಯದಲ್ಲಿ ನನ್ನ ಬುದ್ಧಿಗೆ ನಿರ್ಧಾರವಾಗಿ ತೋರಿದ ವಿಷಯದಲ್ಲಿ ನೀನು ಸಂದೇಹಪಡುವುದು ಯುಕ್ತವಲ್ಲ.

ಟಿಪ್ಪಣಿ – ತಚ್ಚ ದುಷ್ಪ್ರತರಂ ತ್ವಯಾ ಇತ್ಯತ್ರ ಪ್ರಕರ್ಷೇಣ ತರ್ತುಂ ಯೋಗ್ಯಂ ಪ್ರತರಂ, ಪ್ರತರಂ ನ ಭವತೀತಿ ದುಷ್ಪ್ರತರಮ್। ತತ್ತ್ವಂ ನ ವೃದ್ಧಾ ಇತ್ಯತ್ರ ತತ್ತ್ವಂ ತತ್ತ್ವತಃ। ತದ್ವತ್ತ್ವಂ ಯೋಧಮುಖ್ಯೇಷು ಇತ್ಯತ್ರ ತ್ವಂ ಯೋಧಮುಖ್ಯೇಷು ತದ್ವತ್ ಮಹೇಶ್ವರಾದಿವತ್। ತ್ವಯಿ ಪರಮಂ ಸತ್ತ್ವಮಿಷ್ಯತೇ।

'ತದ್ವತ್ತ್ವಂ ಯೋಧಮುಖ್ಯೇಷು' ಎಂಬಲ್ಲಿ ಮಹೇಶ್ವರಾದಿಗಳಲ್ಲಿ ವಿಶೇಷಶಕ್ತಿ ಇರುವಂತೆ ನಿನ್ನಲ್ಲಿ ಅಂಥ ಶಕ್ತಿ ಇದೆ ಎಂದಭಿಪ್ರಾಯ.

ಟಿಪ್ಪಣಿ – ತಚ್ಚ ದುಷ್ಪ್ರತರಂ ತ್ವಯಾ ಇತ್ಯತ್ರ ಪ್ರಕರ್ಷೇಣ ತರ್ತುಂ ಯೋಗ್ಯಂ ಪ್ರತರಂ, ಪ್ರತರಂ ನ ಭವತೀತಿ ದುಷ್ಪ್ರತರಮ್।

'ತತ್ರ ದುಷ್ಕರಂ ತ್ವಯಾ' - ಎಂಬಲ್ಲಿ ಪ್ರಕರ್ಷದಿಂದ ದಾಟಲು ಸಾಧ್ಯವಾದದ್ದು ಯಾವುದೋ, ಅದು 'ಪ್ರತರ' ಎಂದು ಕರೆಸಿಕೊಳ್ಳುತ್ತದೆ. 'ದುಷ್ಕರ' ಎಂದರೆ ದಾಟಲು ಸಾಧ್ಯವಾಗದೇ ಇರುವುದು ಎಂದರ್ಥ.

ಯುದ್ಧಶಾಸ್ತ್ರವಿದೇವ ತ್ವಂ ನ ವೃದ್ಧಾಃ ಸೇವಿತಾಸ್ತ್ವಯಾ।
ಸಂಕ್ಷಿಪ್ತವಿಸ್ತರವಿದಾಂ ನ ತೇಷಾಂ ವೇತ್ಸಿ ನಿಶ್ಚಯಮ್ ॥೧೨॥

ಓ ಅರ್ಜುನನೇ! ನೀನು ಕೇವಲ ಯುದ್ಧಶಾಸ್ತ್ರವನ್ನೇ ತಿಳಿದಿರುವಿ. ಎಂದೂ ಸಹ ಜ್ಞಾನವೃದ್ಧರನ್ನು ಸೇವೆ ಮಾಡಿರುವುದಿಲ್ಲ. ಆದ್ದರಿಂದ ಸಂಕ್ಷೇಪವಾಗಿ ಅಥವಾ ವಿಸ್ತಾರವಾಗಿ ಧರ್ಮದ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನು ತಿಳಿದುಕೊಂಡಿರುವ ನಿರ್ಧಾರಗಳನ್ನು ನಿನ್ನಿಂದ ತಿಳಿಯಲು ಸಾಧ್ಯವಿಲ್ಲ.

ಟಿಪ್ಪಣಿ - ತತ್ತ್ವಂ ನ ವೃದ್ಧಾ ಇತ್ಯತ್ರ ತತ್ತ್ವಂ ತತ್ತ್ವತಃ।

'ತ್ವಂ ನ ವೃದ್ಧಾಃ' ಎಂಬಲ್ಲಿ ತತ್ವಂ ಎಂಬ ಪದಕ್ಕೆ ತತ್ವತಃ ಎಂದರ್ಥ.

ತಪಸ್ತ್ಯಾಗೋಽವಿಧಿರಿತಿ ನಿಶ್ಚಯಸ್ತ್ವೇಷ ಧೀಮತಾಮ್।
ಪರಂ ಪರಂ ಜ್ಯಾಯ ಏಷಾಂ ಯೇಷಾಂ ನೈಶ್ಚೇಯಸೀ ಮತಿಃ ॥೧೩॥

ಯಾರಿಗೆ ಮೋಕ್ಷಾಪೇಕ್ಷಿತವಾದ ನಿಶ್ಚಯ ಜ್ಞಾನವು ಇರುತ್ತದೋ, ಅಂಥಹ ಸಾಧಕರ ನಿರ್ಣಯವು ಹೀಗಿದೆ - ತಪಸ್ಸು, ತ್ಯಾಗ ಮತ್ತು ಶಾಸ್ತ್ರೋಕ್ತವಿಧಿ-ವಿಧಾನಗಳಿಂದ ಯಾವ ಬ್ರಹ್ಮಜ್ಞಾನವಿದೆಯೋ, ಆ ಮೂರರಲ್ಲಿ ತಪಸ್ಸಿಗೆ ತ್ಯಾಗವು, ತ್ಯಾಗಕ್ಕಿಂತಲೂ ವಿಧಿಯು ಬಲಿಷ್ಠವಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಇದೇ ಮೋಕ್ಷಕ್ಕೆ ಸಾಧಕವಾಗಿದೆ.

ಯಸ್ತ್ವೇತನ್ಮನ್ಯಸೇ ಪಾರ್ಥ ನ ಜ್ಯಾಯೋಽಸ್ತಿ ಧನಾದಿತಿ।
ತತ್ರ ತೇ ವರ್ತಯಿಷ್ಯಾಮಿ ಯಥಾ ನೈತತ್ ಪ್ರಧಾನತಃ ॥೧೪॥

ಆದರೆ ನೀನು ಧನವೇ ಶ್ರೇಷ್ಠವೆಂದು ಹೇಳುತ್ತಿರುವಿ. ಆದರೆ ಆ ಧನವು ಪ್ರಧಾನವಲ್ಲ.

ತಪಃಸ್ವಾಧ್ಯಾಯಶೀಲಾ ಹಿ ದೃಶ್ಯಂತೇ ಧಾರ್ಮಿಕಾ ಜನಾಃ।
ಋಷಯಸ್ತಪಸಾ ಯುಕ್ತಾ ಯೇಷಾಂ ಲೋಕಾಃ ಸನಾತನಾಃ ॥೧೫॥

ಲೋಕದಲ್ಲಿ ತಪಸ್ಸು, ಸ್ವಾಧ್ಯಾಯ ಇವುಗಳನ್ನು ನಿರಂತರ ಆಚರಿಸುತ್ತಾ ಧಾರ್ಮಿಕರಾಗಿರುವ ಜನರು ಅನೇಕರಿದ್ದಾರೆ. ಋಷಿಗಳೂ ಕೂಡ ತಪಸ್ಸಿನಲ್ಲೇ ಆಸಕ್ತರಾಗಿರುತ್ತಾರೆ. ಇವರೆಲ್ಲರಿಗೂ ಸನಾತನವಾದ ಪುಣ್ಯಲೋಕಗಳು ಪ್ರಾಪ್ತವಾಗುತ್ತವೆ.

ಅಜಾತಶತ್ರವೋ ಧೀರಾಸ್ತಥಾನ್ಯೇ ವನವಾಸಿನಃ।
ಅರಣ್ಯೇ ಬಹವಶ್ಚೈವ ಸ್ವಾಧ್ಯಾಯೇನ ದಿವಂ ಗತಾಃ ॥೧೬॥

ಕೆಲವು ಧೀರರು ಅಜಾತಶತ್ರುಗಳಾಗಿರುತ್ತಾರೆ. ಇನ್ನೂ ಕೆಲವು ಅರಣ್ಯದಲ್ಲೇ ವಾಸ ಮಾಡುತ್ತಾರೆ. ನಿರಂತರ ಸ್ವಾಧ್ಯಾಯದಲ್ಲೇ ನಿರತರಾಗಿ ಜೀವನವನ್ನು ಸಾರ್ಥಕ ಮಾಡಿಕೊಳ್ಳುತ್ತಾರೆ. ಮರಣವನ್ನು ಹೊಂದಿದ ಮೇಲೆ ಸ್ವರ್ಗಕ್ಕೆ ತೆರಳುತ್ತಾರೆ.

ಉತ್ತರೇಣ ತು ಪಂಥಾನಮಾರ್ಯಾ ವಿಷಯನಿಗ್ರಹಾತ್।
ಅಬುದ್ಧಿಜಂ ತಮಸ್ತ್ಯಕ್ತ್ವಾ ಲೋಕಾಂಸ್ತ್ಯಾಗವತಾಂ ಗತಾಃ ॥೧೭॥

ಅನೇಕ ಆರ್ಯಪುರುಷರು ಇಂದ್ರಿಯಗಳನ್ನು ಗೆದ್ದಿದ್ದಾರೆ. ಅವುಗಳಿಗೆ ಸಂಬಂಧಪಟ್ಟ ವಿಷಯಗಳಿಂದ ದೂರ ಸರಿದಿದ್ದಾರೆ. ತಮ್ಮ ಅವಿವೇಕಬುದ್ಧಿಗಳಿಂದ ಹುಟ್ಟಿದ ಅಜ್ಞಾನವನ್ನು ಪರಿತ್ಯಾಗ ಮಾಡಿದ್ದಾರೆ. ದೇವಯಾನದ ಮೂಲಕ ತ್ಯಾಗಿಗಳಷ್ಟೇ ಹೊಂದಲ್ಪಡುವ ಪುಣ್ಯಲೋಕಗಳನ್ನು ಪಡೆದಿದ್ದಾರೆ. ಇವರದ್ದು ಉತ್ತರಾಯಣ ಮಾರ್ಗ.

ದಕ್ಷಿಣೇನ ತು ಪಂಥಾನಂ ಯಂ ಭಾಸ್ವಂತಂ ಪ್ರಚಕ್ಷತೇ।
ಏತೇ ಕ್ರಿಯಾವತಾಂ ಲೋಕಾ ಯೇ ಶ್ಮಶಾನಾನಿ ಭೇಜಿರೇ ॥೧೮॥

ಸಕಾಮಕರ್ಮಿಗಳಾದ ಗೃಹಸ್ಥರು, ದಕ್ಷಿಣಾಯನ ಮಾರ್ಗವಾಗಿದೆ. ಪಿತೃಯಾನವೆಂಬ ದಕ್ಷಿಣಮಾರ್ಗದಿಂದ ಚಂದ್ರಲೋಕವನ್ನು ಹೊಂದುತ್ತಾರೆ ಕರ್ಮ-

ಗಳಲ್ಲೇ ನಿರತರಾಗಿರುತ್ತಾರೆ. ಇವರೆಲ್ಲರೂ ಹೋಗುವ ಮಾರ್ಗವೆಂದರೆ ಅದು ಸ್ಮಶಾನಮಾರ್ಗ.

ಅನಿರ್ದೇಶ್ಯಾ ಗತಿಃ ಸಾ ತು ಯಾಂ ಪ್ರಪಶ್ಯಂತಿ ಮೋಕ್ಷಿಣಃ।
ತಸ್ಮಾದ್ ಯೋಗಃ ಪ್ರಧಾನೇಷ್ಟಃ ಸ ತು ದುಃಖಂ ಪ್ರವೇದಿತುಮ್॥೧೯॥

ಮೋಕ್ಷಾರ್ಥಿಗಳು ಯಾವ ಮಾರ್ಗವನ್ನು ಹಿಡಿದು ಆತ್ಮಸಾಕ್ಷಾತ್ಕಾರವನ್ನು ಪಡೆದುಕೊಳ್ಳುತ್ತಾರೋ, ಅದು ಇಂಥದ್ದೇ ಮಾರ್ಗದಲ್ಲಿ ಅವರು ತೆರಳಿರುತ್ತಾರೆಂದು ಹೇಳಲು ಸಾಧ್ಯವಿಲ್ಲ.

ವಿವರಣೆ - ಗುರುಗಳ ಮಾರ್ಗದರ್ಶನದಲ್ಲಿ ಆತ್ಮಸಾಕ್ಷಾತ್ಕಾರವು ಆಗುತ್ತದೆ. ಧ್ಯಾನಯೋಗದಿಂದ ಅಥವಾ ಜ್ಞಾನಯೋಗದಿಂದ ಆತ್ಮಸಾಕ್ಷಾತ್ಕಾರವು ಸಾಧ್ಯವಾಗುತ್ತದೆ. ಆ ಜ್ಞಾನಯೋಗದ ಅಥವಾ ಧ್ಯಾನಯೋಗದ ಸ್ವರೂಪವನ್ನು ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲ ಎಂಬುದು ಅಭಿಪ್ರಾಯ.

ಅನುಸ್ಮೃತ್ಯ ತು ಶಾಸ್ತ್ರಾಣಿ ಕವಯಃ ಸಮವಸ್ಥಿತಾಃ।
ಅಪೀಹ ಸ್ಯಾದಪೀಹ ಸ್ಯಾತ್ ಸಾರಾಸಾರದಿದೃಕ್ಷಯಾ ॥೨೦॥

ಎಲ್ಲಾ ವಿದ್ವಾಂಸರು ಒಂದೇ ಕಡೆ ಸೇರಿ ಈ ಮಾರ್ಗದಲ್ಲಿ ನಡೆದರೆ ಆ ಸಾರಾಸಾರ ವಿಮರ್ಶೆಯನ್ನು ತಿಳಿದ ಅನೇಕ ವಿದ್ವಾಂಸರು ಬಹಳ ವಿಷಯಗಳನ್ನು ತಿಳಿದು ಇಲ್ಲಿರುವುದೇ, ಅಲ್ಲಿರಬಹುದೇ ಎಂಬುದಾಗಿ ಹುಡುಕಿ ಕೊನೆಯಲ್ಲಿ ಈ ನಿಶ್ಚಯಕ್ಕೆ ಬಂದಿದ್ದಾರೆ.

ಟಿಪ್ಪಣಿ - ಅಪೀಹ ಸ್ಯಾದಪೀಹ ಸ್ಯಾದ್ ಇತ್ಯತ್ರ ಸಾರಾಸಾರದಿದೃಕ್ಷಯಾ ಇಹ ಸ್ಯಾದಪಿ ಇಹ ಸ್ಯಾದಪೀತಿ ಕ್ರಿಯಾಯೋಗೇ ವಿಚಾರಯಂತಿ।

ವಿವರಣೆ - ವಿದ್ವಾಂಸರು ಒಂದೇ ಕಡೆ ಸೇರಿ ಎಲ್ಲಿ ಸಾರವಿದೆ? ಯಾವುದನ್ನು ಅನುಸರಣೆ ಮಾಡುವುದರಿಂದ ಬ್ರಹ್ಮಸಾಕ್ಷಾತ್ಕಾರವಾಗುತ್ತದೆ. ಈ ಮಾರ್ಗವು ಕೇವಲ ಸಾರರಹಿತವೇ? ಅಥವಾ ಆಡಂಬರವೇ? ಈ ಮಾರ್ಗದಲ್ಲಿ ಜನನ-ಮರಣಗಳ ಬಾಧೆ ತಪ್ಪಿಸಿಕೊಳ್ಳಲು ಸಾಧ್ಯವಿದೆಯೇ? ಯಾವುದು ದಕ್ಷಿಣಮಾರ್ಗ,

ಯಾವುದು ಉತ್ತರಮಾರ್ಗ? ಎಂಬುದಾಗಿ ಸಾರಾಸಾರಗಳನ್ನು ಕಂಡುಕೊಳ್ಳಲು ಇಚ್ಛಿಸಿದ್ದಾರೆ. ಅದಕ್ಕೆ ಸಂಬಂಧಪಟ್ಟ ಎಲ್ಲಾ ಶಾಸ್ತ್ರಗಳನ್ನು ಅವಲೋಕಿಸಿದ್ದಾರೆ. ಈ ಎಲ್ಲ ವಿಚಾರಗಳು ನಿನಗೆ ತಿಳಿದಿರುವುದೇ ಇಲ್ಲ.

ವೇದವಾದಾನತಿಕ್ರಮ್ಯ ಶಾಸ್ತ್ರಾಣ್ಯರಣ್ಯಕಾನಿ ಚ।
ವಿಪಾಟ್ಯ ಕದಲೀಸ್ತಂಭಂ ಸಾರಂ ದದೃಶಿರೇ ನ ತೇ ॥೨೧॥

ಎಲ್ಲಾ ವೇದ-ವೇದಾಂತಗಳನ್ನು ಅಧ್ಯಯನ ಮಾಡಿ, ಶಾಸ್ತ್ರಗಳನ್ನು ಆರಣ್ಯಕ-ಗಳನ್ನೂ ಕೂಡ ಅಧ್ಯಯನ ಮಾಡಿ, ಕೊನೆಯಲ್ಲಿ ಬಾಳೆಯ ಕಂಬವನ್ನು ಸುಲಿದು, ಸುಲಿದು ಅದರಲ್ಲಿರುವ ತಿರುಳನ್ನು ಕಾಣದವರಂತೆ ಮುಖ್ಯಸಾರವನ್ನೇ ಇವರು ಕಾಣಲಾರರು.

ಟಿಪ್ಪಣಿ – ವಿಪಾಟ್ಯ ಕದಲೀಸ್ತಂಭಮ್ ಇತ್ಯತ್ರ ತೇ ಕದಲೀಸ್ತಂಭಂ ವಿಪಾಟ್ಯೈವ ಸಾರಂ ನ ದದೃಶಿರೇ।

'ವಿಪಾಟ್ಯ ಕದಲೀಸ್ತಂಭಂ' ಎಂಬಲ್ಲಿ 'ತೇ ಕದಲೀ ಸ್ತಂಭಂ ಸಾರಂ ದದೃಶಿರೇ' ಅವರು ಬಾಳೇಕಂಬವನ್ನು ಎಷ್ಟುಸೀಳಿದರು ಸಾರವನ್ನು ಕಾಣುವುದಿಲ್ಲ ಎಂದರ್ಥ.

ವಿವರಣೆ - ಕೆಲವರು ವೇದವಾಕ್ಯಗಳನ್ನು ಚೆನ್ನಾಗಿ ಅಧ್ಯಯನ ಮಾಡುತ್ತಾರೆ. ವೇದಾಂತಶಾಸ್ತ್ರಗಳನ್ನೂ ಕೂಡ ಅಧ್ಯಯನ ಮಾಡುತ್ತಾರೆ. ಶಾಸ್ತ್ರವಿಧಿಗಳನ್ನು ಅನುಸರಿಸುತ್ತಾರೆ, ಚರ್ಚಿಸುತ್ತಾರೆ, ಆರಣ್ಯಕಗಳನ್ನೂ ಕೂಡ ಅಧ್ಯಯನ ಮಾಡು-ತ್ತಾರೆ. ಆದರೂ ಕೂಡ ಮುಖ್ಯಸಾರವನ್ನೇ ಅವರು ಅರ್ಥಮಾಡಿಕೊಳ್ಳುವುದಿಲ್ಲ. ಇಂಥವರು ಎಷ್ಟು ಓದಿಯೂ ವ್ಯರ್ಥ.

ಅಥೈಕಾಂತವ್ಯುದಾಸೇನ ಶರೀರೇ ಪಾಂಚಭೌತಿಕೇ।
ಇಚ್ಛಾದ್ವೇಷಸಮಾಸಕ್ತಮಾತ್ಮಾನಂ ಪ್ರಾಹುರಿಂಗಿತೈಃ ॥೨೨॥

ಅಂಥವರಿಗೆ ಆತ್ಮತತ್ವವು ತಿಳಿಯುವುದಿಲ್ಲ. ಏಕಾಂತವಾದ ಸನ್ಯಾಸ ಮಾರ್ಗ-ವನ್ನು ನಿರಾಕರಣೆ ಮಾಡಿ, ಪಾಂಚಭೌತಿಕವಾದ ಶರೀರದೊಳಗಿರುವ ಆತ್ಮನನ್ನೇ ಇಚ್ಛಾದ್ವೇಷಯುಕ್ತನನ್ನಾಗಿ ತಿಳಿಯುತ್ತಾರೆ. ಆದರೆ ಆತ್ಮತತ್ವ ಹಾಗಿರುವುದೇ ಇಲ್ಲ.

ಟಿಪ್ಪಣಿ - ಏಕಾಂತವ್ಯುದಾಸೇನ ಇತ್ಯತ್ರ ವ್ಯುದಾಸಃ ಔದಾಸೀನ್ಯಮುಪೇಕ್ಷಾ ।

'ಏಕಾಂತ ಉದಾಸೇನ' ಎಂಬಲ್ಲಿ ವ್ಯುದಾಸ ಎಂಬ ಪದಕ್ಕೆ ಔದಾಸೀನ್ಯ ಎಂದರ್ಥ. ಸನ್ಯಾಸದಲ್ಲಿ ಉಪೇಕ್ಷೆಯನ್ನು ಮಾಡಿ ಎಂಬಭಿಪ್ರಾಯವನ್ನು ತಿಳಿಯಬೇಕು.

ವಿವರಣೆ - ಮೊದಲು ಜೀವಾತ್ಮನನ್ನು ತಿಳಿಯಲು ಪ್ರಯತ್ನಿಸಬೇಕು. ಅನಂತರ ಪರಮಾತ್ಮನನ್ನು ತಿಳಿಯಬೇಕು. ಅಹಂಕಾರ ಮಮಕಾರಗಳಿಂದ ಇಚ್ಛಾದ್ವೇಷಗಳನ್ನೇ ತಮ್ಮ ಪಾಂಚಭೌತಿಕ ಶರೀರಗಳಲ್ಲಿ ಇವರು ತುಂಬಿಕೊಂಡಿರುತ್ತಾರೆ. ಇದರಿಂದ ತಮ್ಮನ್ನೇ ತಾವು ತಿಳಿದುಕೊಳ್ಳುವುದಿಲ್ಲ. ಕ್ರೋಧಮೋಹಗಳಿಗೆ ಒಳಗಾಗಿ ಅಂತರಂಗಜ್ಞಾನವನ್ನು ಕಳೆದುಕೊಳ್ಳುತ್ತಾರೆ. ಹೀಗಿರುವಾಗ ಪರಮಾತ್ಮತತ್ವವನ್ನು ತಿಳಿದುಕೊಳ್ಳಲು ಇವರಿಂದ ಸಾಧ್ಯವೇ ಆಗುವುದಿಲ್ಲ.

ಅಗ್ರಾಹ್ಯಂ ಚಕ್ಷುಷಾ ಸೂಕ್ಷ್ಮಮನಿರ್ದೇಶ್ಯಂ ಚ ತದ್ಗಿರಾ ।
ಕರ್ಮಹೇತುಪುರಸ್ಕಾರಂ ಭೂತೇಷು ಪರಿವರ್ತತೇ ॥೨೩॥

ಆ ಆತ್ಮತತ್ವವು ಕಣ್ಣಿಗೆ ಕಾಣಿಸುವುದಿಲ್ಲ. ಇಂದ್ರಿಯಗಳಿಗೆ ಗೋಚರವಾಗುವುದಿಲ್ಲ. ಬಾಯಿಯಿಂದ ನಿರೂಪಣೆ ಮಾಡಲು ಸಾಧ್ಯವಾಗುವುದಿಲ್ಲ. ಕರ್ಮಕ್ಕೆ ಕಾರಣವೆನಿಸಿದ ಅಜ್ಞಾನದಿಂದ ಪುನಃ ಪುನಃ ಶರೀರಗಳನ್ನು ಪಡೆದು ಈ ಸಂಸಾರಚಕ್ರದಲ್ಲಿ ಸುತ್ತುತ್ತಲೇ ಇರುತ್ತದೆ.

ಟಿಪ್ಪಣಿ - ತದ್ಗಿರಾ ಇತ್ಯತ್ರ ತತ್ ಜೀವಸ್ವರೂಪಮ್ ।

'ತದ್ಗಿರಾ' ಎಂಬಲ್ಲಿ 'ತತ್' ಎಂಬ ಪದಕ್ಕೆ 'ಜೀವಸ್ವರೂಪ' ಎಂದರ್ಥ.

ವಿವರಣೆ - ಜೀವಸ್ವರೂಪವನ್ನು ಕಣ್ಣಿಂದ ಕಾಣಲು ಸಾಧ್ಯವಿಲ್ಲ. ಯಾವ ಇಂದ್ರಿಯಗಳಿಗೂ ಅದು ಗೋಚರವಲ್ಲ. ಅತ್ಯಂತಸೂಕ್ಷ್ಮವಾಗಿದೆ. ಮಾತಿನಿಂದಲೂ ಕೂಡ ಅದನ್ನು ವರ್ಣಿಸಲು ಸಾಧ್ಯವಿಲ್ಲ. ಅಜ್ಞಾನದ ಹೊದಿಕೆಯಿಂದ ಆತ್ಮತತ್ವವು ಮುಚ್ಚಿಹೋಗಿದೆ. ಹೀಗಿರುವಾಗ ತನ್ನ ಸ್ವರೂಪವನ್ನು ತಿಳಿದುಕೊಳ್ಳಲು ಇಂಥ ಅಜ್ಞಾನಿಗಳಿಗೆ ಸಾಧ್ಯವೇ ಆಗುವುದಿಲ್ಲ. ಪರಮಾತ್ಮನನ್ನು ತಿಳಿದುಕೊಳ್ಳುವುದಂತೂ ದೂರತೋಪಾಸ್ತ.

ಕಲ್ಯಾಣಗೋಚರಂ ಕೃತ್ವಾಮನಸ್ಪಷ್ಣಾಂ ನಿಗೃಹ್ಯ ಚ।
ಕರ್ಮಸಂತತಿಮುತ್ಸೃಜ್ಯ ಸ್ಯಾನ್ನಿರಾಲಂಬನಃ ಸುಖೀ ॥೨೪॥

ಆದ್ದರಿಂದ ಮನಸ್ಸನ್ನು ವಿಷಯದೆಡೆ ಹೋಗದಂತೆ ಮಾಡಿ, ಅಹಂಕಾರವನ್ನು ಪರಿತ್ಯಾಗ ಮಾಡಿ, ಕಲ್ಯಾಣಮಯವಾದ ಮೋಕ್ಷದ ಕಡೆ ನಡೆಯಬೇಕು. ಎಲ್ಲಾ ಕರ್ಮಸಂತತಿಗಳನ್ನು ಪರಿತ್ಯಾಗ ಮಾಡಿ ಯಾರನ್ನು ಆಶ್ರಯಿಸದೇ ಜೀವಿಸಬೇಕು. ಅಲ್ಲಿಯೇ ನಿಜವಾದ ಸುಖವಿದೆ.

ವಿವರಣೆ - ಮನಸ್ಸನ್ನು ಮೋಕ್ಷದೆಡೆ ತೊಡಗಿಸಬೇಕು. ಆಸೆಯನ್ನು ಸಂಪೂರ್ಣವಾಗಿ ನಿಗ್ರಹ ಮಾಡಬೇಕು. ಕರ್ಮಗಳ ಪರಂಪರೆಯನ್ನೇ ಪರಿತ್ಯಾಗ ಮಾಡಬೇಕು. ಯಾವುದೇ ಸಂಪತ್ತನ್ನೂ, ಜನರನ್ನೂ ಆಶ್ರಯಿಸಬಾರದು. ಆಗಷ್ಟೇ ಪರಮಸುಖಿಯಾಗಲು ಸಾಧ್ಯ .

ಅಸ್ಮಿನ್ನೇವಂ ಸೂಕ್ಷ್ಮಗಮ್ಯೇ ಮಾರ್ಗೇ ಸದ್ಭಿರ್ನಿಷೇವಿತೇ।
ಕಥಮರ್ಥಮನರ್ಥಾಢ್ಯಮರ್ಜುನ ತ್ವಂ ಪ್ರಶಂಸಸಿ ॥೨೫॥

ಹೀಗೆ ಅತ್ಯಂತಸೂಕ್ಷ್ಮದೃಷ್ಟಿಯಿಂದ ತಿಳಿಯಲ್ಪಡುವ ಮೋಕ್ಷಮಾರ್ಗದಲ್ಲಿ ನಡೆದಾಗ ಸಂಪೂರ್ಣವಾದ ಸುಖವು ದೊರೆಯುತ್ತದೆ. ಇದನ್ನು ಎಲ್ಲಾ ಸಜ್ಜನರು ಅನುಸರಿಸುತ್ತಾರೆ. ಓ ಅರ್ಜುನನೇ! ಹೀಗಿರುವಾಗ ಅನರ್ಥಪೂರ್ಣವಾದ ಅನ್ಯ-ಮಾರ್ಗವನ್ನೇಕೆ ನೀನು ಪ್ರಶಂಸೆ ಮಾಡುತ್ತಿರುವೆ?

ಟಿಪ್ಪಣಿ - ಅಸ್ಮಿನ್ ವೈ ಸೂಕ್ಷ್ಮಗಮ್ಯೇ ಚ ಇತ್ಯತ್ರ ಅಸ್ಮಿನ್ ಮಾರ್ಗೇ ವಿದ್ಯಮಾನಮ್ ಅರ್ಥಂ ಪುರುಷಾರ್ಥಮ್ ಅನರ್ಥಾಖ್ಯಂ ಕಥಂ ಪ್ರಶಂಸಸಿ ಪ್ರಕರ್ಷೇಣ ಶಂಸಸಿ ಪುನಃಪುನಃ ಕಥಯಸೀತ್ಯರ್ಥಃ।

'ಅಸ್ಮಿನ್ನೇವಂ ಸೂಕ್ಷ್ಮಗಮ್ಯೇ ಚ ' ಎಂಬಲ್ಲಿ 'ಅಸ್ಮಿನ್ ಮಾರ್ಗೇ' ಈ ಮಾರ್ಗದಲ್ಲಿ ಪುರುಷಾರ್ಥದಾಯಕವಾದ ಮಾರ್ಗವಿರುವಾಗ ಪುನಃ ಪುನಃ ಅನರ್ಥಮಾರ್ಗವನ್ನೇಕೆ ಪ್ರಶಂಸೆ ಮಾಡುತ್ತಿರುವಿ ಎಂದರ್ಥ.

ವಿವರಣೆ - ಅರ್ಜುನನೇ! ಯಾರೂ ಸಹ ಸಂಪತ್ತನ್ನು , ಭೋಗವನ್ನು ಪ್ರಶಂಸೆ

ಟಿಪ್ಪಣಿ - ಏಕಾಂತವ್ಯುದಾಸೇನ ಇತ್ಯತ್ರ ವ್ಯುದಾಸಃ ಔದಾಸೀನ್ಯಮುಪೇಕ್ಷಾ ।

'ಏಕಾಂತ ಉದಾಸೇನ' ಎಂಬಲ್ಲಿ ವ್ಯುದಾಸ ಎಂಬ ಪದಕ್ಕೆ ಔದಾಸೀನ್ಯ ಎಂದರ್ಥ. ಸನ್ಯಾಸದಲ್ಲಿ ಉಪೇಕ್ಷೆಯನ್ನು ಮಾಡಿ ಎಂಬಭಿಪ್ರಾಯವನ್ನು ತಿಳಿಯಬೇಕು.

ವಿವರಣೆ - ಮೊದಲು ಜೀವಾತ್ಮನನ್ನು ತಿಳಿಯಲು ಪ್ರಯತ್ನಿಸಬೇಕು. ಅನಂತರ ಪರಮಾತ್ಮನನ್ನು ತಿಳಿಯಬೇಕು. ಅಹಂಕಾರ ಮಮಕಾರಗಳಿಂದ ಇಚ್ಛಾದ್ವೇಷಗಳನ್ನೇ ತಮ್ಮ ಪಾಂಚಭೌತಿಕ ಶರೀರಗಳಲ್ಲಿ ಇವರು ತುಂಬಿಕೊಂಡಿರುತ್ತಾರೆ. ಇದರಿಂದ ತಮ್ಮನ್ನೇ ತಾವು ತಿಳಿದುಕೊಳ್ಳುವುದಿಲ್ಲ. ಕ್ರೋಧಮೋಹಗಳಿಗೆ ಒಳಗಾಗಿ ಅಂತರಂಗಜ್ಞಾನವನ್ನು ಕಳೆದುಕೊಳ್ಳುತ್ತಾರೆ. ಹೀಗಿರುವಾಗ ಪರಮಾತ್ಮತತ್ವವನ್ನು ತಿಳಿದುಕೊಳ್ಳಲು ಇವರಿಂದ ಸಾಧ್ಯವೇ ಆಗುವುದಿಲ್ಲ.

ಅಗ್ರಾಹ್ಯಂ ಚಕ್ಷುಷಾ ಸೂಕ್ಷ್ಮಮನಿರ್ದೇಶ್ಯಂ ಚ ತದ್ಗಿರಾ ।
ಕರ್ಮಹೇತುಪುರಸ್ಕಾರಂ ಭೂತೇಷು ಪರಿವರ್ತತೇ ॥೨೩॥

ಆ ಆತ್ಮತತ್ವವು ಕಣ್ಣಿಗೆ ಕಾಣಿಸುವುದಿಲ್ಲ. ಇಂದ್ರಿಯಗಳಿಗೆ ಗೋಚರವಾಗುವುದಿಲ್ಲ. ಬಾಯಿಯಿಂದ ನಿರೂಪಣೆ ಮಾಡಲು ಸಾಧ್ಯವಾಗುವುದಿಲ್ಲ. ಕರ್ಮಕ್ಕೆ ಕಾರಣವೆನಿಸಿದ ಅಜ್ಞಾನದಿಂದ ಪುನಃ ಪುನಃ ಶರೀರಗಳನ್ನು ಪಡೆದು ಈ ಸಂಸಾರಚಕ್ರದಲ್ಲಿ ಸುತ್ತುತ್ತಲೇ ಇರುತ್ತದೆ.

ಟಿಪ್ಪಣಿ - ತದ್ಗಿರಾ ಇತ್ಯತ್ರ ತತ್ ಜೀವಸ್ವರೂಪಮ್ ।

'ತದ್ಗಿರಾ' ಎಂಬಲ್ಲಿ 'ತತ್' ಎಂಬ ಪದಕ್ಕೆ 'ಜೀವಸ್ವರೂಪ' ಎಂದರ್ಥ.

ವಿವರಣೆ - ಜೀವಸ್ವರೂಪವನ್ನು ಕಣ್ಣಿಂದ ಕಾಣಲು ಸಾಧ್ಯವಿಲ್ಲ. ಯಾವ ಇಂದ್ರಿಯಗಳಿಗೂ ಅದು ಗೋಚರವಲ್ಲ. ಅತ್ಯಂತಸೂಕ್ಷ್ಮವಾಗಿದೆ. ಮಾತಿನಿಂದಲೂ ಕೂಡ ಅದನ್ನು ವರ್ಣಿಸಲು ಸಾಧ್ಯವಿಲ್ಲ. ಅಜ್ಞಾನದ ಹೊದಿಕೆಯಿಂದ ಆತ್ಮತತ್ವವು ಮುಚ್ಚಿಹೋಗಿದೆ. ಹೀಗಿರುವಾಗ ತನ್ನ ಸ್ವರೂಪವನ್ನು ತಿಳಿದುಕೊಳ್ಳಲು ಇಂಥ ಅಜ್ಞಾನಿಗಳಿಗೆ ಸಾಧ್ಯವೇ ಆಗುವುದಿಲ್ಲ. ಪರಮಾತ್ಮನನ್ನು ತಿಳಿದುಕೊಳ್ಳುವುದಂತೂ ದೂರತೋಪಾಸ್ತ.

ಕಲ್ಯಾಣಗೋಚರಂ ಕೃತ್ವಾ ಮನಸ್ಪ್ರಷ್ಣಾಂ ನಿಗೃಹ್ಯ ಚ।
ಕರ್ಮಸಂತತಿಮುತ್ಸೃಜ್ಯ ಸ್ಯಾನ್ನಿರಾಲಂಬನಃ ಸುಖೀ ॥೨೪॥

ಆದ್ದರಿಂದ ಮನಸ್ಸನ್ನು ವಿಷಯದೆಡೆ ಹೋಗದಂತೆ ಮಾಡಿ, ಅಹಂಕಾರವನ್ನು ಪರಿತ್ಯಾಗ ಮಾಡಿ, ಕಲ್ಯಾಣಮಯವಾದ ಮೋಕ್ಷದ ಕಡೆ ನಡೆಯಬೇಕು. ಎಲ್ಲಾ ಕರ್ಮಸಂತತಿಗಳನ್ನು ಪರಿತ್ಯಾಗ ಮಾಡಿ ಯಾರನ್ನು ಆಶ್ರಯಿಸದೇ ಜೀವಿಸಬೇಕು. ಅಲ್ಲಿಯೇ ನಿಜವಾದ ಸುಖವಿದೆ.

ವಿವರಣೆ - ಮನಸ್ಸನ್ನು ಮೋಕ್ಷದೆಡೆ ತೊಡಗಿಸಬೇಕು. ಆಸೆಯನ್ನು ಸಂಪೂರ್ಣವಾಗಿ ನಿಗ್ರಹ ಮಾಡಬೇಕು. ಕರ್ಮಗಳ ಪರಂಪರೆಯನ್ನೇ ಪರಿತ್ಯಾಗ ಮಾಡಬೇಕು. ಯಾವುದೇ ಸಂಪತ್ತನ್ನೂ, ಜನರನ್ನೂ ಆಶ್ರಯಿಸಬಾರದು. ಆಗಷ್ಟೇ ಪರಮಸುಖಿಯಾಗಲು ಸಾಧ್ಯ .

ಅಸ್ಮಿನ್ನೇವಂ ಸೂಕ್ಷ್ಮಗಮ್ಯೇ ಮಾರ್ಗೇ ಸದ್ಭಿರ್ನಿಷೇವಿತೇ।
ಕಥಮರ್ಥಮನರ್ಥಾಢ್ಯಮರ್ಜುನ ತ್ವಂ ಪ್ರಶಂಸಸಿ ॥೨೫॥

ಹೀಗೆ ಅತ್ಯಂತಸೂಕ್ಷ್ಮದೃಷ್ಟಿಯಿಂದ ತಿಳಿಯಲ್ಪಡುವ ಮೋಕ್ಷಮಾರ್ಗದಲ್ಲಿ ನಡೆದಾಗ ಸಂಪೂರ್ಣವಾದ ಸುಖವು ದೊರೆಯುತ್ತದೆ. ಇದನ್ನು ಎಲ್ಲಾ ಸಜ್ಜನರು ಅನುಸರಿಸುತ್ತಾರೆ. ಓ ಅರ್ಜುನನೇ! ಹೀಗಿರುವಾಗ ಅನರ್ಥಪೂರ್ಣವಾದ ಅನ್ಯ-ಮಾರ್ಗವನ್ನೇಕೆ ನೀನು ಪ್ರಶಂಸೆ ಮಾಡುತ್ತಿರುವೆ?

ಟಿಪ್ಪಣಿ - ಅಸ್ಮಿನ್ ವೈ ಸೂಕ್ಷ್ಮಗಮ್ಯೇ ಚ ಇತ್ಯತ್ರ ಅಸ್ಮಿನ್ ಮಾರ್ಗೇ ವಿದ್ಯಮಾನಮ್ ಅರ್ಥಂ ಪುರುಷಾರ್ಥಮ್ ಅನರ್ಥಾಖ್ಯಂ ಕಥಂ ಪ್ರಶಂಸಸಿ ಪ್ರಕರ್ಷೇಣ ಶಂಸಸಿ ಪುನಃಪುನಃ ಕಥಯಸೀತ್ಯರ್ಥಃ।

'ಅಸ್ಮಿನ್ನೇವಂ ಸೂಕ್ಷ್ಮಗಮ್ಯೇ ಚ ' ಎಂಬಲ್ಲಿ 'ಅಸ್ಮಿನ್ ಮಾರ್ಗೇ' ಈ ಮಾರ್ಗದಲ್ಲಿ ಪುರುಷಾರ್ಥದಾಯಕವಾದ ಮಾರ್ಗವಿರುವಾಗ ಪುನಃ ಪುನಃ ಅನರ್ಥಮಾರ್ಗವನ್ನೇಕೆ ಪ್ರಶಂಸೆ ಮಾಡುತ್ತಿರುವಿ ಎಂದರ್ಥ.

ವಿವರಣೆ - ಅರ್ಜುನನೇ! ಯಾರೂ ಸಹ ಸಂಪತ್ತನ್ನು , ಭೋಗವನ್ನು ಪ್ರಶಂಸೆ

ಮಾಡುವುದಿಲ್ಲ. ಅವೆಲ್ಲವೂ ಕೇವಲ ಅನರ್ಥಕಾರಿಯಾಗಿದೆ. ಸಜ್ಜನರೆಲ್ಲರೂ ಸೂಕ್ಷ್ಮಬುದ್ಧಿಯಿಂದ, ಏಕಾಗ್ರಬುದ್ಧಿಯಿಂದ ಈ ಎಲ್ಲಾ ವಿಷಯಗಳ ಪರಿತ್ಯಾಗವೇ ಪರಮಸುಖಕ್ಕೆ ಕಾರಣವೆಂದು ನಿರ್ಣಯಿಸಿದ್ದಾರೆ. ಆದ್ದರಿಂದ ನೀನು ಆ ಸಜ್ಜನರ ಅಭಿಪ್ರಾಯಕ್ಕೆ ವಿರುದ್ಧವಾದ ಅಭಿಪ್ರಾಯವನ್ನು ಹೊಂದುವುದು ಅಯುಕ್ತವಾಗಿದೆ.

ಪೂರ್ವಶಾಸ್ತ್ರವಿದೋಽಪ್ಯೇವಂ ಜನಾಃ ಪಶ್ಯಂತಿ ಭಾರತ।
ಕ್ರಿಯಾಸು ನಿರತಾ ನಿತ್ಯಂ ದಾನೇ ಯಜ್ಞೇ ಚ ಕರ್ಮಣಿ ॥೨೬॥

ಎಲ್ಲಾ ಶಾಸ್ತ್ರಗಳನ್ನು ಅರಿತಿರುವ ವಿದ್ವಾಂಸರೂ ಕೂಡ ಮತ್ತು ಯಜ್ಞದಾನಾದಿ ಕರ್ಮಗಳಲ್ಲಿ ನಿರತರಾದವರೂ ಕೂಡ ನೀನು ಹೇಳಿದ ಮಾರ್ಗವು ಅನರ್ಥ-ಕಾರಿಯೆಂದೇ ನಿರ್ಣಯ ಮಾಡಿದ್ದಾರೆ.

ವಿವರಣೆ - ಯಜ್ಞ, ದಾನ ಮೊದಲಾದ ಕರ್ಮಗಳಲ್ಲಿ ನಿರಂತರ ಆಸಕ್ತರಾದ ಪ್ರಾಚೀನಕಾಲದ ಶಾಸ್ತ್ರಜ್ಞರೂ ಕೂಡ ನಾನು ಹೇಳಿದ ಅಭಿಪ್ರಾಯವನ್ನೇ ಹೊಂದಿದ್ದಾರೆ. ಯಾರು ಕರ್ಮಮಾರ್ಗವನ್ನೇ ಅನುಸರಿಸುತ್ತಾರೋ, ಅಂಥವರೇ ಇದು ಪರಮಸುಖಕ್ಕೆ ಕಾರಣವಲ್ಲ ಎಂದು ಹೇಳುತ್ತಿರುವಾಗ ನೀನೇಕೆ ಅದನ್ನು ಪ್ರಶಂಸೆ ಮಾಡುತ್ತಿರುವೆ.

ಭವಂತಿ ಸುದುರಾವರ್ತಾ ಹೇತುಮಂತೋಽಪಿ ಪಂಡಿತಾಃ।
ದೃಢಪೂರ್ವೇ ಸ್ಮೃತಾ ಮೂಢಾ ನೈತದಸ್ತೀತಿವಾದಿನಃ ॥೨೭॥

ಆದರೆ ಕೆಲವು ವಿದ್ವಾಂಸರು ವಿಷಯಾಸಕ್ತಿಯಿಂದ ಮೋಕ್ಷವಿಲ್ಲವೆಂದು ತಿಳಿ-ಸುತ್ತಾ, ತಾವು ಮೂಢರಾಗಿಯೇ ಪ್ರವೃತ್ತಿಯನ್ನು ಮಾಡುತ್ತಿದ್ದಾರೆ. ಅಂಥವರಿಗೆ ಸರಿಯಾದ ಮಾರ್ಗವನ್ನು ತೋರಿಸುವುದು ಬಹಳ ಕಷ್ಟ.

ಟಿಪ್ಪಣಿ - ನೈತದಸ್ತೀತಿ ವಾದಿನ ಇತ್ಯತ್ರ ಏತದ್ ಯೋಗಶಾಸ್ತ್ರಮ್।

'ನೈತದಸ್ತೀತಿವಾದಿನಃ' ಎಂಬಲ್ಲಿ 'ಏತತ್' ಎಂಬ ಪದಕ್ಕೆ 'ಯೋಗಶಾಸ್ತ್ರ' ಎಂದರ್ಥ.

ವಿವರಣೆ - ಯಾರು ಆತ್ಮನನ್ನೇ ಇಲ್ಲವೆಂದು ಹೇಳುತ್ತಾರೋ, ಅಂಥವರು ಮೂರ್ಖರಾಗುತ್ತಾರೆ. ಯೋಗಶಾಸ್ತ್ರವನ್ನು ಪ್ರಮಾಣವೆಂದು ಒಪ್ಪುವವರು. ಶರೀರ

-ವನ್ನೇ ಆತ್ಮವೆಂದು ಹೇಳುತ್ತಾರೆ. ಇಂಥವರು ತಮ್ಮ ದೃಢವಾದ ಸಂಸ್ಕಾರದಿಂದ ಪ್ರಭಾವಿತರಾಗಿ ಮೂರ್ಖರಾಗುತ್ತಾರೆ ಎಂಬುದಾಗಿಯೂ ಕೂಡ ಈ ಶ್ಲೋಕಕ್ಕೆ ವ್ಯಾಖ್ಯಾನ ಮಾಡಬಹುದು.

ಅನೃ(ಮೃ)ತಸ್ಯಾವಮಂತಾರೋ ವಕ್ತಾರೋ ಜನಸಂಸದಿ।
ಚರಂತಿ ವಸುಧಾಂ ಕೃತ್ಸ್ನಾಂ ವಾವದೂಕಾ ಬಹುಶ್ರುತಾಃ ॥೨೮॥

ಯಾನ್ ವಯಂ ನಾಭಿಜಾನೀಮಃ ಕಸ್ತಾನ್ ಜ್ಞಾತುಮಿಹಾರ್ಹತಿ।
ಏವಂ ಪ್ರಾಜ್ಞಾಃ ಶ್ರುತಶ್ಚಾಪಿ ಮಹಾಂತಃ ಶಾಸ್ತ್ರವಿತ್ತಮಾಃ ॥೨೮ಎ॥

ಪಾರ್ಥ ವಯಂ ವಿಜಾನೀಮಃ ಕಸ್ತಾಂಜ್ಞಾತುಮಿಹಾರ್ಹತಿ।
ಏವಂ ಪ್ರಾಜ್ಞಾಃ ಶ್ರುತಾಶ್ಚಾಪಿ ಮಹಾಂತಃ ಶಾಸ್ತ್ರವಿತ್ತಮಾಃ ॥೨೯॥

ಮೋಕ್ಷವಿಲ್ಲ, ಧರ್ಮವಿಲ್ಲ, ಪರಲೋಕವಿಲ್ಲ ಇತ್ಯಾದಿಯಾಗಿ ಹೇಳುವ ಮಿಥ್ಯಾವಾದಿಗಳನ್ನು, ನಾಸ್ತಿಕರನ್ನು, ವಿದ್ವಾಂಸರು ಯುಕ್ತಿಯುಕ್ತವಾಗಿ ನಿರಾಕರಣೆ ಮಾಡುತ್ತಾರೆ. ಮತ್ತು ಅಖಂಡಭೂಮಂಡಲದಲ್ಲಿ ಜ್ಞಾನದಿಂದ ಬೆಳಗುತ್ತಾರೆ. ಇಂಥ ಬಹುಶ್ರುತರು ಯಾರು ಆಗಿದ್ದಾರೆಂಬುದನ್ನೇ ನಮ್ಮಿಂದ ತಿಳಿಯಲು ಸಾಧ್ಯವಾಗುವುದಿಲ್ಲ. ನಾವೇ ಅಂಥ ಮಹಾಪಂಡಿತರನ್ನು ತಿಳಿದಿಲ್ಲವೆಂದ ಮೇಲೆ ಸಾಧಾರಣ ಮನುಷ್ಯರು ಅವರನ್ನು ಹೇಗೆ ತಾನೇ ತಿಳಿಯುತ್ತಾರೆ? ಇಂಥ ಶಾಸ್ತ್ರವಿಶಾರದರು ಈ ಭೂಮಂಡಲದಲ್ಲಿದ್ದಾರೆಂದಷ್ಟೇ ನಾವು ಕೇಳಿದ್ದೇವೆ. ಅವರನ್ನು ಗುರುತಿಸಲು ನಮ್ಮಿಂದ ಸಾಧ್ಯವಾಗಿರುವುದಿಲ್ಲ.

ಟಿಪ್ಪಣಿ - ಯಾನ್ ವಯಂ ನ ವಿಜಾನೀಮ ಇತ್ಯತ್ರ ಯಾನ್ ಜ್ಞಾನನಿಷ್ಠಾನ್ ವಯಮ್ ಅಪಿ ನ ಜಾನೀಮಃ।

'ಯಾನ್ನ ವಯಂ ವಿಜಾನೀಮಃ' ಎಂಬಲ್ಲಿ 'ಯಾನ್ ' ಜ್ಞಾನನಿಷ್ಠರಾದವರನ್ನು 'ವಯಂ' ನಾವೂ ಕೂಡ ತಿಳಿದಿರುವುದಿಲ್ಲ ಎಂದರ್ಥ.

ತಪಸಾ ಮಹದಾಪ್ನೋತಿ ಬುದ್ಧ್ಯಾ ವೈ ಏಂದತೇ ಮಹತ್।
ತ್ಯಾಗೇನ ಸುಖಮಾಪ್ನೋತಿ ಸದಾ ಕೌಂತೇಯ ತತ್ತ್ವವಿತ್ ॥೩೦॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ
ರಾಜಧರ್ಮೇ ಯುಧಿಷ್ಠಿರವಾಕ್ಯೇ ಏಕೋನವಿಂಶೋಽಧ್ಯಾಯಃ ॥೧೯॥

ಅರ್ಜುನನೇ! ಯಾರು ತತ್ವವನ್ನು ತಿಳಿದಿದ್ದಾನೋ, ತಪಸ್ಸಿನಿಂದ ಮಹಾ-ವೈರಾಗ್ಯವನ್ನು ಪಡೆದಿದ್ದಾನೋ, ಅಂಥವನು ತನ್ನ ಬುದ್ಧಿಯ ಏಕಾಗ್ರತೆಯಿಂದ ಆ ಪರಮಾತ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೆ. ಸ್ವಾರ್ಥವನ್ನು ಪರಿತ್ಯಾಗ ಮಾಡುವುದರಿಂದ ನಿರಂತರವಾಗಿ ಪರಮಸುಖವನ್ನು ಹೊಂದುತ್ತಾನೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೯ನೆಯ ಅಧ್ಯಾಯವು ಮುಗಿಯಿತು.

* * * * *

೨೦. ಇಪ್ಪತ್ತನೆಯ ಅಧ್ಯಾಯ

ದೇವಸ್ಥಾನ ಎಂಬ ಋಷಿಗಳು ಯುಧಿಷ್ಠಿರನಿಗೆ
ಯಜ್ಞಮಹತ್ವವನ್ನು ತಿಳಿಸಿ ಯಜ್ಞಮಾಡಲು ಉಪದೇಶಿಸಿದರು.

ವೈಶಂಪಾಯನಃ

ತಸ್ಮಿನ್ ವಾಕ್ಯಾಂತರೇ ವಕ್ತಾ ದೇವಸ್ಥಾನೋ ಮಹಾತಪಾಃ।
ಅಭಿನೀತತರಂ ವಾಕ್ಯಮಿತ್ಯುವಾಚ ಯುಧಿಷ್ಠಿರಮ್ ॥೧॥

ವೈಶಂಪಾಯನ - ಅರ್ಜುನನಿಗೂ, ಯುಧಿಷ್ಠಿರನಿಗೂ ಪರಸ್ಪರ ವಾದಪ್ರತಿ-ವಾದಗಳು ನಡೆಯುತ್ತಿದ್ದವು. ಆಗ ಮಹಾತಪಸ್ವಿಗಳು ವಾಕ್‌ಚತುರರು ಆದ ದೇವಸ್ಥಾನ ಎಂಬ ಮುನಿಗಳು ಯುಧಿಷ್ಠಿರನನ್ನು ಕುರಿತು ಹೀಗೆ ಯುಕ್ತಿಯುಕ್ತವಾದ ಮಾತುಗಳನ್ನು ಹೇಳುವರು.

ಟಿಪ್ಪಣಿ - ದೇವಸ್ಥಾನೋ ಮಹಾತಪಾ ಇತ್ಯತ್ರ ದೇವಸ್ಥಾನಃ ದೇವಸ್ಥಾನಾಖ್ಯ-ಋಷಿಃ। 'ದೇವಸ್ಥಾನೋ ಮಹಾತಪಾಃ' - ದೇವಸ್ಥಾನ = ದೇವಸ್ಥಾನ ಎಂಬ ಋಷಿಗಳು.

ಯದ್ ವಚಃ ಫಾಲ್ಗುನೇನೋಕ್ತಂ ನ ಜ್ಯಾಯೋಽಸ್ತಿ ಧನಾದಿತಿ।
ಅತ್ರ ತೇ ವರ್ತಯಿಷ್ಯಾಮಿ ತದೇಕಾಂತಮನಾಃ ಶೃಣುಃ ॥೨॥

ಓ ಧರ್ಮರಾಜನೇ! ಸಂಪತ್ತಿಗಿಂತ ಶ್ರೇಷ್ಠವಾದದ್ದು ಮತ್ತೊಂದು ಇಲ್ಲವೆಂದು ಅರ್ಜುನನು ನಿನ್ನನ್ನು ಕುರಿತು ಹೇಳಿದನು. ಈ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ನಿನಗೆ ತಿಳಿಸುತ್ತೇನೆ. ಸಾವಧಾನಮನಸ್ಸಿನಿಂದ ಅದನ್ನು ಕೇಳು.

ಅಜಾತಶತ್ರೋ ಧರ್ಮೇಣ ಕೃತಾಸ್ತೇ ವಸುಧಾ ಜಿತಾ।
ತಾಂ ಜಿತ್ವಾ ಚ ವೃಥಾ ರಾಜನ್ ನ ಪರಿತ್ಯಕ್ತುಮರ್ಹಸಿ ॥೩॥

ಅಜಾತಶತ್ರುವೇ! ಭೂಮಂಡಲವನ್ನು ಕ್ಷಾತ್ರಧರ್ಮದಿಂದ ನೀನು ಜಯಿಸಿರುವಿ. ಧರ್ಮದಿಂದ ಪಡೆದ ಈ ಭೂಮಿಯನ್ನು ವ್ಯರ್ಥವಾಗಿ ಬಿಡುವುದು ನ್ಯಾಯವಲ್ಲ.

ಚತುಷ್ಪದೀ ಹಿ ನಿಃಶ್ರೇಣೀ ಬ್ರಹ್ಮಣ್ಯೇಷಾ ಪ್ರತಿಷ್ಠಿತಾ।
ತಾಂ ಕ್ರಮೇಣ ಮಹಾಬಾಹೋ ಯಥಾವಜ್ಜಯ ಪಾರ್ಥಿವ ॥೪॥

ಬ್ರಹ್ಮನನ್ನು ಪಡೆಯಲು ಬ್ರಹ್ಮಚರ್ಯ, ಗಾರ್ಹಸ್ಥ್ಯ, ಸನ್ಯಾಸ, ವಾನಪ್ರಸ್ಥ ಎಂಬ ನಾಕು ಹಂತಗಳಿವೆ. ಈ ನಾಕು ಮಜಲುಗಳನ್ನು ಕ್ರಮವಾಗಿ ದಾಟಿಯೇ ಆ ಪರಮಾತ್ಮನನ್ನು ಸೇರಬೇಕು. ಮಹಾಬಾಹುವೇ! ಈ ಕ್ರಮದಲ್ಲಿಯೇ ನೀನೂ ಕೂಡ ಮೊದಲು ಗೃಹಸ್ಥಧರ್ಮವನ್ನು ಆಶ್ರಯಿಸು.

ಟಿಪ್ಪಣಿ - ಬ್ರಹ್ಮಣ್ಯೇಷಾ ಪ್ರತಿಷ್ಠಿತಾ ಇತ್ಯತ್ರ ಚತುಷ್ಪದಾ ಬ್ರಹ್ಮಚಾರೀ ಗೃಹೀ ವಾನಪ್ರಸ್ಥೋ ಭಿಕ್ಷುರಿತಿ ಚತುಃಸ್ಥಾನವತೀ, ಪೂರ್ವಮೇಕಂ ತದುಪರ್ಯೇಕಂ ತದುಪರ್ಯೇಕಮಿತ್ಯಾದಿಕ್ರಮೇಣ ಚತುಷ್ಪದಾ ಚತುಃಸ್ಥಾನವತೀ ನಿಃಶ್ರೇಣೀ ಸ್ವರ್ಗಾರೋಹಣಸೋಪಾನವಿಶೇಷಃ ಬ್ರಹ್ಮಣಿ ವೇದೇ ಪ್ರತಿಷ್ಠಿತಾ।

'ಬ್ರಹ್ಮಣ್ಯೇಷಾ ಪ್ರತಿಷ್ಠಿತಾ' - ಚತುಷ್ಪದ ಎಂದರೆ ಬ್ರಹ್ಮಚಾರಿ, ಗೃಹೀ, ವಾನಪ್ರಸ್ಥ, ಭಿಕ್ಷು ಎಂಬುದು ನಾಕುಸ್ಥಾನಗಳು. ಮೊದಲು ಬ್ರಹ್ಮಚರ್ಯ, ಆನಂತರ ಗಾರ್ಹಸ್ಥ್ಯ, ವಾನಪ್ರಸ್ಥ, ಅನಂತರ ಭಿಕ್ಷು ಎಂಬುದಾಗಿ ಆ ನಾಕು ಹಂತಗಳನ್ನು ಕ್ರಮವಾಗಿಯೇ ದಾಟಬೇಕು. ಈ ನಾಕು ಸ್ವರ್ಗದ ಮೆಟ್ಟಿಲುಗಳಾಗಿವೆ.

ವಿವರಣೆ - ಮೋಕ್ಷಗಳನ್ನು ಹೊಂದಲು ನಾಕು ಆಶ್ರಮಧರ್ಮಗಳನ್ನು ಪರಿಪಾಲನೆ ಮಾಡಬೇಕೆಂದು ವೇದದಲ್ಲೇ ಹೇಳಲ್ಪಟ್ಟಿದೆ. ಈ ನಾಕು ಆಶ್ರಮಗಳನ್ನು

ಕ್ರಮಪ್ರಕಾರವಾಗಿಯೇ ಆಚರಿಸಬೇಕು. ಬ್ರಹ್ಮಚರ್ಯ ಆಶ್ರಮವನ್ನು ಪರಿಪಾಲನೆ ಮಾಡಿ, ಗೃಹಸ್ಥಾಶ್ರಮಧರ್ಮವನ್ನು ಆಚರಣೆ ಮಾಡಿ, ಅನಂತರ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಬೇಕು. ಅಂತಿಮವಾಗಿ ಸನ್ಯಾಸಾಶ್ರಮವನ್ನು ಕುರಿತು ತೆರಳಬೇಕು. ಗೃಹಸ್ಥಾಶ್ರಮದಲ್ಲಿ ಮಾಡಬೇಕಾದ ಕರ್ತವ್ಯಕರ್ಮಗಳನ್ನು ಪರಿತ್ಯಾಗ ಮಾಡಿ, ಅಂತಿಮವಾದ ಸನ್ಯಾಸಾಶ್ರಮಕ್ಕೆ ತೆರಳುವುದು ಸಮಂಜಸವಲ್ಲ.

ತಸ್ಮಾತ್ ಪಾರ್ಥ ಮಹಾಯಜ್ಞೈರ್ಯಜಸ್ವ ಬಹುದಕ್ಷಿಣೈಃ।
ಸ್ವಾಧ್ಯಾಯಯಜ್ಞಾ ಋಷಯೋ ಜ್ಞಾನಯಜ್ಞಾಸ್ತಥಾಪರೇ ॥೫॥

ಆದ್ದರಿಂದ ಓ ಕುಂತೀಪುತ್ರನೇ! ಭೂರಿದಕ್ಷಿಣೆಗಳನ್ನು ನೀಡಿ, ಮಹಾಯಜ್ಞವನ್ನು ನೀನು ಆಚರಿಸು. ಕೆಲವು ಜ್ಞಾನಿಗಳು ಸ್ವಾಧ್ಯಾಯವನ್ನೇ ಯಜ್ಞವನ್ನಾಗಿ ಆಚರಿಸುತ್ತಾರೆ. ಇನ್ನೂ ಕೆಲವರು ಬ್ರಹ್ಮಜ್ಞಾನವನ್ನೇ ಯಜ್ಞವನ್ನಾಗಿ ಆಚರಿಸುತ್ತಾರೆ.

ವಿವರಣೆ - ಋಷಿಗಳು ಅಧ್ಯಯನ ಅಧ್ಯಾಪನಗಳನ್ನು ಮಾಡುತ್ತಾರೆ. ಇವರಿಗೆ ಸ್ವಾಧ್ಯಾಯವೇ ಯಜ್ಞ. ಸನ್ಯಾಸಿಗಳು ಕೇವಲ ಜ್ಞಾನದಲ್ಲೇ ಆಸಕ್ತರಾಗಿರುತ್ತಾರೆ. ಇವರು ಜ್ಞಾನಯಜ್ಞವನ್ನು ಆಚರಿಸುತ್ತಾರೆ. ನೀನು ಬಹುದಕ್ಷಿಣಾಕವಾದ ಮಹಾಯಜ್ಞವನ್ನು ಆಚರಿಸಿ, ದೇವತೆಗಳನ್ನು ತೃಪ್ತಿಪಡಿಸು.

ಕರ್ಮನಿಷ್ಠಾಂಶ್ಚ ಬುದ್ಧ್ಯೇಥಾಸ್ತಪೋನಿಷ್ಠಾಂಶ್ಚ ಪಾರ್ಥಿವ।
ವೈಖಾನಸಾನಾಂ ಕೌಂತೇಯ ವಚನಂ ಶ್ರೂಯತೇ ಯಥಾ ॥೬॥

ಯಾರು ಕರ್ಮವನ್ನು ಹೆಚ್ಚು ಆಚರಿಸುತ್ತಾರೋ, ಅವರು ಗೃಹಸ್ಥರಾಗಿರುತ್ತಾರೆ. ತಪಸ್ಸಿನಲ್ಲಿ ಯಾರು ನಿರತರಾಗಿರುತ್ತಾರೋ, ಅವರು ವಾನಪ್ರಸ್ಥಾಶ್ರಮಿಗಳಾಗಿರುತ್ತಾರೆ. ಹೀಗೆ ವೈಖಾನಸರು ಹೇಳುತ್ತಾರೆ.

ವಿವರಣೆ - ಸ್ವಾಧ್ಯಾಯವನ್ನು ಯಜ್ಞವನ್ನಾಗಿ ಬ್ರಹ್ಮಚಾರಿಗಳು ಮಾಡುತ್ತಾರೆ. ಬ್ರಹ್ಮಜ್ಞಾನವನ್ನು ಯಜ್ಞವನ್ನಾಗಿ ಯೋಗಿಗಳು ಆಚರಿಸುತ್ತಾರೆ. ಗೃಹಸ್ಥರು ಕರ್ಮಾಚರಣೆಯನ್ನೇ ಯಜ್ಞವನ್ನಾಗಿ ಆಚರಿಸುತ್ತಾರೆ. ವಾನಪ್ರಸ್ಥಾಶ್ರಮಿಗಳು ತಪಸ್ಸನ್ನೇ ಯಜ್ಞವನ್ನಾಗಿ ಆಚರಿಸುತ್ತಾರೆ. ಪ್ರತಿಯೊಬ್ಬರು ತಮ್ಮ ತಮ್ಮ ವರ್ಣಾಶ್ರಮಗಳಿಗೆ ಉಚಿತವಾದ ವೇದೋಕ್ತಕರ್ಮಗಳನ್ನು ಆಚರಿಸಲೇಬೇಕು. ಗೃಹಸ್ಥನಾದ ಕ್ಷತ್ರಿಯನು

ಅಶ್ವಮೇಧ, ರಾಜಸೂಯ ಮೊದಲಾದ ಯಾಗಗಳನ್ನು ಆಚರಿಸಬೇಕು. ಋಷಿಗಳು ಜ್ಞಾನದ ಕಾರ್ಯವನ್ನು ಹೆಚ್ಚು ಮಾಡಬೇಕು. ನಾಕನೆಯ ಆಶ್ರಮವನ್ನು ಆಶ್ರಯಿಸಿದ ಸನ್ಯಾಸಿಗಳು ಜ್ಞಾನಯಜ್ಞದಲ್ಲಿ ನಿರತರಾಗಿರುತ್ತಾರೆ. ನೀನು ಕರ್ಮ-ನಿಷ್ಠನಾಗಬೇಕಾದವನು. ಈ ಕರ್ತವ್ಯವನ್ನು ಪರಿತ್ಯಾಗ ಮಾಡಿ ಜ್ಞಾನಯಜ್ಞದಲ್ಲಿ ಪಾಲ್ಗೊಳ್ಳುವುದು ಯುಕ್ತವಾಗುವುದಿಲ್ಲ.

ಈಹೇತ ಧನಹೇತೋರ್ಯಸ್ತಸ್ಯಾನೀಹಾ ಗರೀಯಸೀ।
ಭೂಯಾನ್ ದೋಷೋ ಹಿ ವರ್ಧೇತ ಯಸ್ತಂ ಧನಮುಪಾಶ್ರಯೇತ್॥೭॥

ಯಾಗಾದಿಕರ್ಮಗಳನ್ನು ನಡೆಸಬೇಕೆಂಬ ಉದ್ದೇಶದಿಂದ ಆಸೆಯನ್ನು ಪಟ್ಟು ಧನಸಂಪಾದನೆಯನ್ನು ಮಾಡುವುದು ಯುಕ್ತವಲ್ಲ. ಹಾಗೆ ಧನವನ್ನು ಸಂಪಾದನೆ ಮಾಡುವುದಕ್ಕಿಂತಲೂ ಆಸೆಯನ್ನು ಬಿಡುವುದೇ ಶ್ರೇಷ್ಠವಾಗಿದೆ. ಏಕೆಂದರೆ ಯಾರು ಯಾವಾಗ ಹಣದ ವಿಷಯದಲ್ಲೇ ನಿರತನಾಗಿರುತ್ತಾನೋ, ಅವನಲ್ಲಿ ಕೇವಲ ದೋಷಗಳೇ ಅಭಿವೃದ್ಧಿಯನ್ನು ಹೊಂದುತ್ತವೆ.

ಟಿಪ್ಪಣಿ – ಈಹೇತ ಧರ್ಮಹೇತೋರ್ಯ ಇತ್ಯತ್ರ ಯಃ ಧರ್ಮಹೇತೋಃ ಈಹೇತ ತಸ್ಯ ಸಾ ಈಹಾ ಗರೀಯಸೀ ಅನೀಹೈವ। ಕೇವಲಂ ಸ್ವೋದರಭರಣಾಯ ಈಹಾಯಾ ಅಕರಣಾತ್ । ಭೂಯಾನ್ ದೋಷ ಇತ್ಯತ್ರ ಸರ್ವಥಾ ಅನೀಹಾಯಾಃ ಭೂಯಾನ್ ದೋಷಃ ಅಭಿವರ್ಧೇತ।

'ಈಹೇತ ಧನಹೇತೋರ್ಯಃ' – ಧರ್ಮವನ್ನು ಆಚರಣೆ ಮಾಡಬೇಕೆಂಬ ದೃಷ್ಟಿ-ಯಿಂದ ಯಾವ ಆಸೆಯು ಉಂಟಾಗುತ್ತದೋ, ಅದು ತಪ್ಪಲ್ಲ. ಕೇವಲ ಉದರಂಭರಣೆ-ಗೋಸ್ಕರ ಆಸೆ ಪಡುವ ಹಣವಷ್ಟೇ ದೋಷದಾಯಕವಾಗಿದೆ. ಯಾವುದಕ್ಕೂ ಆಸೆ ಪಡದೇ ಇರುವುದು ದೋಷಕ್ಕೆ ಕಾರಣವಾಗುತ್ತದೆ.

ಕೃಚ್ಛ್ರಾಚ್ಚ ದ್ರವ್ಯಸಂಹಾರಂ ಕುರ್ವಂತಿ ಧನಕಾರಣಾತ್ ।
ಆತ್ಮನಾ ತೃಷಿತೋಽಬುದ್ಧ್ಯಾ ಭ್ರೂಣಹತ್ಯಾಂ ನ ಬುದ್ಧ್ಯತೇ ॥೮॥

ಯಾರು ಲೋಭಿಗಳೋ ಅವರು ಹಣವನ್ನು ಕೂಡಿಡಬೇಕು ಎಂಬ ಕಾರಣ-ದಿಂದ ಬಹಳ ಕಷ್ಟದಿಂದಲೇ ತನಗೋಸ್ಕರ ಹಣವನ್ನು ಸಂಗ್ರಹ ಮಾಡುತ್ತಾರೆ. ಆದರೆ

ಹಣದ ಆಸೆ ಹಿಂದೆ ಬಿದ್ದು, ಮತ್ತೊಬ್ಬರಿಗೆ ದಾನವನ್ನು ಮಾಡದೇ ಭ್ರೂಣ-ಹತ್ಯಾಪಾಪವನ್ನು ಹೊಂದುತ್ತಾರೆ.

ಟಿಪ್ಪಣಿ - ಆತ್ಮನಾ ತೃಪಿತ ಇತ್ಯತ್ರ ಆತ್ಮನಾ ಸ್ವೇನ ಕಾರಣೇನ ತೃಪಿತಃ ತೃಷ್ಣಾವಾನ್ ।

'ಆತ್ಮನ ತೃಷ್ಯತಃ' - ತನಗೋಸ್ಕರ ಹಣವನ್ನು ಸಂಪಾದನೆ ಮಾಡುವವನು

ವಿವರಣೆ - ಹಣವನ್ನು ಕೇವಲ ತನಗೋಸ್ಕರ ಯಾರು ಸಂಪಾದನೆ ಮಾಡುತ್ತಾರೋ, ಅಥವಾ ಹಣವನ್ನು ಕೂಡಿಡಬೇಕೆಂಬ ಉದ್ದೇಶದಿಂದ ಹಣವನ್ನು ಸಂಪಾದನೆ ಮಾಡುತ್ತಾರೋ, ಅವರಿಗೆ ಭ್ರೂಣಹತ್ಯಾದೋಷವು ಬರುತ್ತದೆ. ಧನದಾಹದಿಂದ ಕೂಡಿರುವ ಮನುಷ್ಯನು ಮತ್ತೊಬ್ಬನಿಗೆ ದಾನ ಮಾಡಲಾರನು. ಯೋಗ್ಯರಾದವರಿಗೆ ದಾನವನ್ನು ಮಾಡದೇ ಇರುವುದು ಎಷ್ಟು ಪಾಪವೋ, ಅಯೋಗ್ಯರಾದವರಿಗೆ ದಾನವನ್ನು ಕೊಡುವುದೂ ಕೂಡ ಅಷ್ಟೇ ಪಾಪ. ಧನದ ಲೋಭದಿಂದ ಧನವನ್ನು ಸಂಗ್ರಹ ಮಾಡುವುದು ಯುಕ್ತವಲ್ಲ. ಹಾಗೇನಾದರೂ ಲೋಭಗ್ರಸ್ತನಾಗಿ ಹಣವನ್ನು ಸಂಪಾದನೆ ಮಾಡಲು ಪ್ರಾರಂಭಿಸಿದರೆ ಇದರಿಂದ ಮಹಾಪಾಪ ಉಂಟಾಗುತ್ತದೆ. ಆದ್ದರಿಂದ ಹಣ ಸಂಪಾದನೆಯನ್ನು ಮಾಡಿ, ಯಜ್ಞಾಚರಣೆಯನ್ನು ಆಚರಿಸಿ, ಭೂರಿದಕ್ಷಿಣೆಯನ್ನು ಕೊಟ್ಟು ಸಾರ್ಥಕಗೊಳಿಸಬೇಕೆಂಬುದು ದೇವಸ್ಥಾನಋಷಿಗಳ ಅಭಿಪ್ರಾಯವಾಗಿದೆ.

ಅನರ್ಹತೇ ಯದ್ ದದಾತಿ ನ ದದಾತಿ ಯದರ್ಹತೇ ।
ಅಹ್ನಾನಹ್ನಾಪರಿಜ್ಞಾನಾದ್ ದಾನಧರ್ಮೋಽಪಿ ದುಷ್ಕರಃ ॥೯॥

ಯಾರು ಅಯೋಗ್ಯರಿಗೆ ದಾನವನ್ನು ಮಾಡುತ್ತಾರೋ, ಅಂಥ ದಾನವು ವ್ಯರ್ಥವಾಗುತ್ತದೆ. ದಾನವನ್ನು ಸ್ವೀಕರಿಸಲು ಯಾರು ಪಾತ್ರರೋ, ಅಂಥವರಿಗೆ ಯಾರೂ ದಾನವನ್ನು ಕೊಡುವುದಿಲ್ಲ. ಏಕೆಂದರೆ ಯಾರು ಪಾತ್ರರು, ಯಾರು ಅಪಾತ್ರರು ಎಂಬ ವಿಷಯದಲ್ಲಿ ದಾತೃಗಳಿಗೆ ಪರಿಜ್ಞಾನವೇ ಇರುವುದಿಲ್ಲ. ಆದ್ದರಿಂದ ದಾನಧರ್ಮವು ಅತ್ಯಂತ ದುಷ್ಕರವಾಗಿದೆ.

ಯಜ್ಞಾಯ ಸೃಷ್ಟಾನಿ ಧನಾನಿ ಧಾತ್ರಾ
ಯಜ್ಞೋದ್ದಿಷ್ಟಃ ಪುರುಷೋ ರಕ್ಷಿತಾ ಚ ।

ತಸ್ಮಾತ್ ಸರ್ವಂ ಯಜ್ಞ ಏವೋಪಯೋಜ್ಯಂ
ಧನಂ ತತೋಽನಂತರ ಏವ ಕಾಮಃ ॥೧೦॥

ಚತುರ್ಮುಖಬ್ರಹ್ಮನು ಧನವನ್ನು ಯಜ್ಞಕ್ಕೋಸ್ಕರವೇ ಸೃಷ್ಟಿ ಮಾಡಿದ್ದಾನೆ. ಯಜ್ಞಕ್ಕೋಸ್ಕರ ಧನವನ್ನು ಸಂಪಾದಿಸಬೇಕೆಂಬ ಉದ್ದೇಶದಿಂದಲೇ ಪುರುಷನನ್ನು ಸೃಷ್ಟಿ ಮಾಡಿದ್ದಾನೆ. ಆದ್ದರಿಂದ ಎಲ್ಲಾ ಬಗೆಯ ಸಂಪತ್ತನ್ನು ಯಜ್ಞಕ್ಕಾಗಿಯೇ ವಿನಿಯೋಗ ಮಾಡಬೇಕು. ಹಾಗೇ ಯಜ್ಞ ಮಾಡಿದಾಗ ತನ್ನ ಮನಸ್ಸಿನಲ್ಲಿ ಉದ್ದಿಷ್ಟವಾದ ಅಪೇಕ್ಷೆಗಳನ್ನು ಯಜಮಾನನು ಪಡೆದುಕೊಳ್ಳುತ್ತಾನೆ.

ಯಜ್ಞೈರಿಂದ್ರೋ ವಿವಿಧೈ ರತ್ನವದ್ಭಿ-
ರ್ದೇವಾನ್ ಸರ್ವಾನಭ್ಯಯಾದ್ ಭೂರಿತೇಜಾಃ।
ತೇನೇಂದ್ರತ್ವಂ ಪ್ರಾಪ್ಯ ವಿಭ್ರಾಜತೇಽಸೌ
ತಸ್ಮಾದ್ ಯಜ್ಞೇ ಸರ್ವಮೇವೋಪಯೋಜ್ಯಮ್ ॥೧೧॥

ಮಹಾತೇಜಸ್ವಿಯಾದ ಇಂದ್ರನು ಕೂಡ ರತ್ನಗಳನ್ನೇ ದಕ್ಷಿಣೆಯನ್ನಾಗಿ ಯಾಗಗಳಲ್ಲಿ ನೀಡಿದನು. ಆದ್ದರಿಂದಲೇ ದೇವತೆಗಳಿಗೂ ಒಡೆಯನಾದನು. ಈಗಲೂ ಕೂಡ ಇಂದ್ರಪದವಿಯಲ್ಲಿ ಕಂಗೊಳಿಸುತ್ತಿದ್ದಾನೆ. ಆದ್ದರಿಂದ ರಾಜನಾದವನು ಎಲ್ಲಾ ತನ್ನ ಸಂಪತ್ತನ್ನು ಸಕಲೈಶ್ವರ್ಯಗಳನ್ನು ಯಜ್ಞಕ್ಕಾಗಿ ವಿನಿಯೋಗ ಮಾಡಬೇಕು.

ಮಹಾದೇವಃ ಸರ್ವಯಜ್ಞೇ ಮಹಾತ್ಮಾ
ಹುತ್ವಾಽಽತ್ಮಾನಂ ದೇವದೇವೋ ಬಭೂವ।
ವಿಶ್ವಾಂಲ್ಲೋಕಾನ್ ವ್ಯಾಪ್ಯ ವಿಷ್ಟಭ್ಯ ಕೀರ್ತ್ಯಾ
ವಿರಾಜತೇ ದ್ಯುತಿಮಾನ್ ಕೃತ್ತಿವಾಸಾಃ ॥೧೨॥

ಮಹಾತ್ಮನಾದ ಶಿವನೂ ಕೂಡ ಸರ್ವಮೇಧವೆಂಬ ಯಜ್ಞವನ್ನು ಆಚರಿಸಿದನು. ಅದರಲ್ಲಿ ತನ್ನನ್ನೇ ಹೋಮ ಮಾಡಿಕೊಂಡು ತ್ರೈಲೋಕ್ಯಗಳಲ್ಲಿ ತನ್ನ ಕೀರ್ತಿಯಿಂದ ಬೆಳಗಿದನು. ತನ್ನನ್ನು ಆತ್ಮಸಮರ್ಪಣೆ ಮಾಡಿಕೊಂಡ ಕಾರಣದಂದಲೇ ಕೃತ್ತಿವಾಸನು ಸಂಪೂರ್ಣ ವಿಶ್ವವನ್ನೇ ವ್ಯಾಪಿಸಿದನು.

ಆವಿಕ್ಷಿತಃ ಪಾರ್ಥಿವೋಽಸೌ ಮರುತ್ತೋ
ವೃದ್ಧ್ಯಾ ಶಕ್ರಂ ಯೋಽಜಯದ್ ದೇವರಾಜಮ್ ।
ಯಜ್ಞೇ ಯಸ್ಯ ಶ್ರೀಃ ಸ್ವಯಂ ಸನ್ನಿವಿಷ್ಟಾ
ಯಸ್ಮಿನ್ ಭಾಂಡಂ ಕಾಂಚನಂ ಸರ್ವಮಾಸೀತ್ ॥೧೩॥

ಆವಿಕ್ಷಿತನ ಮಗನಾದ ಮರುತ್ ಎಂಬ ರಾಜನೂ ಕೂಡ ತನ್ನ ಸಮೃದ್ಧವಾದ ಸಂಪತ್ತಿನಿಂದ ಯಜ್ಞವನ್ನು ಆಚರಿಸಿ, ಇಂದ್ರನನ್ನೂ ಕೂಡ ಜಯಿಸಿದನು. ಅವನ ಯಾಗಪಾತ್ರೆಗಳೆಲ್ಲವೂ ಕೂಡ ಸುವರ್ಣಮಯವಾಗಿತ್ತು. ಅಲ್ಲಿ ಲಕ್ಷ್ಮಿಯ ದಿವ್ಯ-ಸನ್ನಿಧಾನವಿತ್ತು. ಅವನು ಮಾಡಿದ ಯಜ್ಞದಲ್ಲೂ ಕೂಡ ಲಕ್ಷ್ಮೀದೇವಿಯು ಸ್ವತಃ ನೆಲೆಸಿದ್ದಳು.

ಟಿಪ್ಪಣಿ - ಆವಿಕ್ಷಿತಃ ಪಾರ್ಥಿವ ಇತ್ಯತ್ರ ಅವಿಕ್ಷಿತಸ್ಯ ಪುತ್ರಃ ಆವಿಕ್ಷಿತಃ । 'ಆವಿಕ್ಷಿತಃ' - ಅವಿಕ್ಷಿತನ ಪುತ್ರನಾದವನು ಆವಿಕ್ಷಿತನು.

ಹರಿಶ್ಚಂದ್ರಃ ಪಾರ್ಥಿವೇಂದ್ರಃ ಶ್ರುತಸ್ತೇ
ಯಜ್ಞೈರಿಷ್ಟ್ವಾ ಪುಣ್ಯಭಾಗ್ ವೀತಶೋಕಃ ।
ಯದ್ಧ್ಯಾ ಶಕ್ರಂ ಯೋಽಜಯನ್ಮಾನುಷಃ ಸಂ-
ಸ್ತಸ್ಮಾದ್ ಯಜ್ಞೇ ಸರ್ವಮೇವೋಪಯೋಜ್ಯಮ್ ॥೧೪॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ದೇವಸ್ಥಾನವಾಕ್ಯೇ ವಿಂಶೋಽಧ್ಯಾಯಃ ॥೨೦॥

ಮಹಾರಾಜನಾದ ಹರಿಶ್ಚಂದ್ರನು ಅನೇಕ ಯಾಗಗಳನ್ನು ಆಚರಿಸಿ ಮನುಷ್ಯ-ನಾಗಿದ್ದಾಗಲೇ ದೇವೇಂದ್ರನಿಗಿಂತ ಉತ್ತಮನೆನಿಸಿದನು. ಮತ್ತು ಶೋಕರಹಿತನೂ, ಪುಣ್ಯವಂತನೂ ಆದನು. ಆದ್ದರಿಂದ ರಾಜನಾದ ನೀನು ನಿನ್ನೆಲ್ಲ ಐಶ್ವರ್ಯವನ್ನು ಯಜ್ಞದಲ್ಲಿ ಉಪಯೋಗಿಸಿ ಧನ್ಯನಾಗು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೨೦ನೆಯ ಅಧ್ಯಾಯವು ಮುಗಿಯಿತು.

* * * * *

೨೧. ಇಪ್ಪತ್ತೊಂದನೆಯ ಅಧ್ಯಾಯ

ದೇವಸ್ಥಾನಮುನಿಗಳು ಯುಧಿಷ್ಠಿರನಿಗೆ ಸ್ವಧರ್ಮಾನುಷ್ಠಾನವೇ ಶ್ರೇಯಸ್ಕರವೆಂದು ಉಪದೇಶ ಮಾಡಿದರು.

ದೇವಸ್ಥಾನಃ

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಮ್ ।
ಇಂದ್ರೇಣ ಸಮಯೇ ಪೃಷ್ಟೋ ಯದುವಾಚ ಬೃಹಸ್ಪತಿಃ ॥೧॥

ದೇವಸ್ಥಾನ - ಧರ್ಮರಾಜನೇ! ಇದೇ ವಿಷಯದಲ್ಲಿ ಈ ಹಿಂದೆ ಒಂದು ಇತಿಹಾಸ ನಡೆದಿತ್ತು. ಇದನ್ನು ಜ್ಞಾನಿಜನರು ಉದಾಹರಣೆಯನ್ನಾಗಿ ಹೇಳುತ್ತಾರೆ. ಇದೇ ರೀತಿಯಲ್ಲಿ ಬೃಹಸ್ಪತ್ಯಾಚಾರ್ಯರ ಬಳಿ ದೇವೇಂದ್ರನು ಪ್ರಶ್ನಿಸಿದ್ದನು. ಆಗ ಬೃಹಸ್ಪತ್ಯಾಚಾರ್ಯರು ಇಂದ್ರನನ್ನು ಕುರಿತು ಆ ಇತಿಹಾಸವನ್ನು ಹೇಳಿದರು.

ಸಂತೋಷೋ ವೈ ಸ್ವರ್ಗತಮಃ ಸಂತೋಷಃ ಪರಮಂ ಸುಖಮ್ ।
ತುಷ್ಟೇರ್ನ ಕಿಂಚಿತ್ ಪರತಃ ಸಾ ಸಮ್ಯಕ್ ಪ್ರತಿತಿಷ್ಠತಿ ॥೨॥

ಸಂತೋಷವು ಸ್ವರ್ಗಕ್ಕೆ ಸಮಾನವಾಗಿರುತ್ತದೆ. ಸಂತೋಷವೇ ಪರಮಸುಖವಾಗಿದೆ. ಸಂತೋಷಕ್ಕಿಂತ ಮಿಗಿಲಾಗಿದುದು ಮತ್ತೊಂದಿಲ್ಲ. ಇಂಥ ಸಂತೋಷವನ್ನು ಪಡೆದ ಮೇಲೆ ಮತ್ತೊಂದರ ಅಪೇಕ್ಷೆಯೇ ಇರುವುದಿಲ್ಲ.

ಯದಾ ಸಂಹರತೇ ಕಾಮಾನ್ ಕೂರ್ಮೋಽಂಗಾನೀವ ಸರ್ವಶಃ ।
ತದಾऽऽತ್ಮಜ್ಯೋತಿರಚಿರಾತ್ ಸ್ವಾತ್ಮನ್ಯೇವ ಪ್ರಸೀದತಿ ॥೩॥

ಆಮೆಯು ತನ್ನ ಅವಯವಗಳನ್ನು ತನ್ನಲ್ಲಿ ಹೇಗೆ ಅಡಗಿಸಿಕೊಳ್ಳುತ್ತದೋ, ಅದರಂತೆ ಯಾರು ತನ್ನ ಇಂದ್ರಿಯಗಳನ್ನೆಲ್ಲಾ ಕಾಮಗಳಿಗೆ ಒಳಪಡಿಸದೇ ತನ್ನೊಳಗೆ ಅಡಗಿಸಿಕೊಳ್ಳುತ್ತಾನೋ, ಆಗ ಅವನಿಗೆ ಜ್ಯೋತಿರ್ಮಯವಾದ ಆತ್ಮತತ್ವವು ಮನಸ್ಸಿನಲ್ಲಿ ಪ್ರಕಟವಾಗುತ್ತದೆ.

ಆವಿಕ್ಷಿತಃ ಪಾರ್ಥಿವೋಽಸೌ ಮರುತ್ತೋ
ವೃದ್ಧ್ಯಾ ಶಕ್ರಂ ಯೋಽಜಯದ್ ದೇವರಾಜಮ್ ।
ಯಜ್ಞೇ ಯಸ್ಯ ಶ್ರೀಃ ಸ್ವಯಂ ಸನ್ನಿವಿಷ್ಟಾ
ಯಸ್ಮಿನ್ ಭಾಂಡಂ ಕಾಂಚನಂ ಸರ್ವಮಾಸೀತ್ ॥೧೩॥

ಆವಿಕ್ಷಿತನ ಮಗನಾದ ಮರುತ್ ಎಂಬ ರಾಜನೂ ಕೂಡ ತನ್ನ ಸಮೃದ್ಧವಾದ ಸಂಪತ್ತಿನಿಂದ ಯಜ್ಞವನ್ನು ಆಚರಿಸಿ, ಇಂದ್ರನನ್ನೂ ಕೂಡ ಜಯಿಸಿದನು. ಅವನ ಯಾಗಪಾತ್ರೆಗಳೆಲ್ಲವೂ ಕೂಡ ಸುವರ್ಣಮಯವಾಗಿತ್ತು. ಅಲ್ಲಿ ಲಕ್ಷ್ಮಿಯ ದಿವ್ಯ-ಸನ್ನಿಧಾನವಿತ್ತು. ಅವನು ಮಾಡಿದ ಯಜ್ಞದಲ್ಲೂ ಕೂಡ ಲಕ್ಷ್ಮೀದೇವಿಯು ಸ್ವತಃ ನೆಲೆಸಿದ್ದಳು.

ಟಿಪ್ಪಣಿ – ಆವಿಕ್ಷಿತಃ ಪಾರ್ಥಿವ ಇತ್ಯತ್ರ ಅವಿಕ್ಷಿತಸ್ಯ ಪುತ್ರಃ ಆವಿಕ್ಷಿತಃ । 'ಆವಿಕ್ಷಿತಃ' – ಅವಿಕ್ಷಿತನ ಪುತ್ರನಾದವನು ಆವಿಕ್ಷಿತನು.

ಹರಿಶ್ಚಂದ್ರಃ ಪಾರ್ಥಿವೇಂದ್ರಃ ಶ್ರುತಸ್ತೇ
ಯಜ್ಞೈರಿಷ್ಟ್ವಾ ಪುಣ್ಯಭಾಗ್ ವೀತಶೋಕಃ ।
ಋದ್ಧ್ಯಾ ಶಕ್ರಂ ಯೋಽಜಯನ್ಮಾನುಷಃ ಸಂ-
ಸ್ತಸ್ಮಾದ್ ಯಜ್ಞೇ ಸರ್ವಮೇವೋಪಯೋಜ್ಯಮ್ ॥೧೪॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ದೇವಸ್ಥಾನವಾಕ್ಯೇ ವಿಂಶೋಽಧ್ಯಾಯಃ ॥೨೦॥

ಮಹಾರಾಜನಾದ ಹರಿಶ್ಚಂದ್ರನು ಅನೇಕ ಯಾಗಗಳನ್ನು ಆಚರಿಸಿ ಮನುಷ್ಯ-ನಾಗಿದ್ದಾಗಲೇ ದೇವೇಂದ್ರನಿಗಿಂತ ಉತ್ತಮನೆನಿಸಿದನು. ಮತ್ತು ಶೋಕರಹಿತನೂ, ಪುಣ್ಯವಂತನೂ ಆದನು. ಆದ್ದರಿಂದ ರಾಜನಾದ ನೀನು ನಿನ್ನೆಲ್ಲ ಐಶ್ವರ್ಯವನ್ನು ಯಜ್ಞದಲ್ಲಿ ಉಪಯೋಗಿಸಿ ಧನ್ಯನಾಗು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೨೦ನೆಯ ಅಧ್ಯಾಯವು ಮುಗಿಯಿತು.

* * * * *

೨೧. ಇಪ್ಪತ್ತೊಂದನೆಯ ಅಧ್ಯಾಯ

ದೇವಸ್ಥಾನಮುನಿಗಳು ಯುಧಿಷ್ಠಿರನಿಗೆ ಸ್ವಧರ್ಮಾನುಷ್ಠಾನವೇ ಶ್ರೇಯಸ್ಕರವೆಂದು ಉಪದೇಶ ಮಾಡಿದರು.

ದೇವಸ್ಥಾನಃ

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಮ್ ।
ಇಂದ್ರೇಣ ಸಮಯೇ ಪೃಷ್ಟೋ ಯದುವಾಚ ಬೃಹಸ್ಪತಿಃ ॥೧॥

ದೇವಸ್ಥಾನ - ಧರ್ಮರಾಜನೇ! ಇದೇ ವಿಷಯದಲ್ಲಿ ಈ ಹಿಂದೆ ಒಂದು ಇತಿಹಾಸ ನಡೆದಿತ್ತು. ಇದನ್ನು ಜ್ಞಾನಿಜನರು ಉದಾಹರಣೆಯನ್ನಾಗಿ ಹೇಳುತ್ತಾರೆ. ಇದೇ ರೀತಿಯಲ್ಲಿ ಬೃಹಸ್ಪತ್ಯಾಚಾರ್ಯರ ಬಳಿ ದೇವೇಂದ್ರನು ಪ್ರಶ್ನಿಸಿದ್ದನು. ಆಗ ಬೃಹಸ್ಪತ್ಯಾಚಾರ್ಯರು ಇಂದ್ರನನ್ನು ಕುರಿತು ಆ ಇತಿಹಾಸವನ್ನು ಹೇಳಿದರು.

ಸಂತೋಷೋ ವೈ ಸ್ವರ್ಗತಮಃ ಸಂತೋಷಃ ಪರಮಂ ಸುಖಮ್ ।
ತುಷ್ಟೇರ್ನ ಕಿಂಚಿತ್ ಪರತಃ ಸಾ ಸಮ್ಯಕ್ ಪ್ರತಿತಿಷ್ಠತಿ ॥೨॥

ಸಂತೋಷವು ಸ್ವರ್ಗಕ್ಕೆ ಸಮಾನವಾಗಿರುತ್ತದೆ. ಸಂತೋಷವೇ ಪರಮಸುಖವಾಗಿದೆ. ಸಂತೋಷಕ್ಕಿಂತ ಮಿಗಿಲಾಗಿದುದು ಮತ್ತೊಂದಿಲ್ಲ. ಇಂಥ ಸಂತೋಷವನ್ನು ಪಡೆದ ಮೇಲೆ ಮತ್ತೊಂದರ ಅಪೇಕ್ಷೆಯೇ ಇರುವುದಿಲ್ಲ.

ಯದಾ ಸಂಹರತೇ ಕಾಮಾನ್ ಕೂರ್ಮೋಽಂಗಾನೀವ ಸರ್ವಶಃ ।
ತದಾऽऽತ್ಮಜ್ಯೋತಿರಚಿರಾತ್ ಸ್ವಾತ್ಮನ್ಯೇವ ಪ್ರಸೀದತಿ ॥೩॥

ಆಮೆಯು ತನ್ನ ಅವಯವಗಳನ್ನು ತನ್ನಲ್ಲಿ ಹೇಗೆ ಅಡಗಿಸಿಕೊಳ್ಳುತ್ತದೋ, ಅದರಂತೆ ಯಾರು ತನ್ನ ಇಂದ್ರಿಯಗಳನ್ನೆಲ್ಲಾ ಕಾಮಗಳಿಗೆ ಒಳಪಡಿಸದೇ ತನ್ನೊಳಗೆ ಅಡಗಿಸಿಕೊಳ್ಳುತ್ತಾನೋ, ಆಗ ಅವನಿಗೆ ಜ್ಯೋತಿರ್ಮಯವಾದ ಆತ್ಮತತ್ವವು ಮನಸ್ಸಿನಲ್ಲಿ ಪ್ರಕಟವಾಗುತ್ತದೆ.

ನ ಬಿಭೇತಿ ಯದಾ ಚಾಯಂ ಯದಾ ಚಾಸ್ಮಾನ್ನ ಬಿಭ್ಯತಿ।
ಕಾಮದ್ವೇಷೌ ಚ ಜಯತಿ ತದಾऽऽತ್ಮಾನಂ ಚ ಪಶ್ಯತಿ ॥೪॥

ಯಾವಾಗ ಮನುಷ್ಯನು ಯಾವುದೇ ಕಾರಣಕ್ಕೂ ಯಾರಿಂದಲೂ ಹೆದರುವುದಿಲ್ಲವೋ, ಮತ್ತು ಯಾವಾಗ ಅವನಿಂದ ಯಾರಿಗೂ ಯಾವುದೇ ವಿಧವಾದ ಭಯವು ಇರುವುದಿಲ್ಲವೋ? ಯಾವಾಗ ಯಾರು ರಾಗದ್ವೇಷಗಳನ್ನು ಜಯಿಸಿರುತ್ತಾನೋ, ಆಗ ಅಂಥವನು ತನ್ನ ಹೃದಯದಲ್ಲಿ ಪರಮಾತ್ಮ ತತ್ವವನ್ನು ಕಾಣುತ್ತಾನೆ.

ಯದಾಸೌ ಸರ್ವಭೂತಾನಾಂ ನ ದ್ರುಹ್ಯತಿ ನ ಕಾಂಕ್ಷತಿ।
ಕರ್ಮಣಾ ಮನಸಾ ವಾಚಾ ಬ್ರಹ್ಮ ಸಂಪದ್ಯತೇ ತದಾ ॥೫॥

ಯಾವ ಪ್ರಾಣಿಗೇ ಆಗಲಿ ಮನೋ-ವಾಕ್-ಕಾಯಗಳಿಂದ ದ್ರೋಹವನ್ನು ಮಾಡುವುದಿಲ್ಲವೋ, ಮತ್ತೊಬ್ಬನಿಗೆ ದ್ರೋಹವಾಗುವುದನ್ನು ಬಯಸುವುದೂ ಇಲ್ಲವೋ, ಇತರ ಯಾವುದೇ ವಸ್ತುವನ್ನೂ ಕೂಡ ಬಯಸುವುದಿಲ್ಲವೋ, ಅಂಥವನು ತನ್ನ ಹೃದಯದಲ್ಲಿ ಪರಮಾತ್ಮ ತತ್ವವನ್ನು ಕಾಣುತ್ತಾನೆ.

ಏವಂ ಕೌಂತೇಯ ಭೂತಾನಿ ತಂ ತಂ ಧರ್ಮಂ ತಥಾ ತಥಾ।
ತದಾऽऽತ್ಮನಾ ಪ್ರಪಶ್ಯಂತಿ ತಸ್ಮಾದ್ ಬುಧ್ಯಸ್ವ ಭಾರತ ॥೬॥

ಓ ಯುಧಿಷ್ಠಿರನೇ! ಸಮಸ್ತಮನುಷ್ಯರು ತಮ್ಮ ಧರ್ಮಗಳನ್ನು ಆಯಾಕಾಲಗಳಲ್ಲಿ ವಿಧಿಪ್ರಕಾರವಾಗಿ ಆಚರಿಸುತ್ತಾ, ತಮ್ಮ ಹೃದಯದಲ್ಲಿ ಪರಮಾತ್ಮನನ್ನು ಕಾಣುತ್ತಾರೆ. ಆದ್ದರಿಂದ ನೀನೂ ಸಹ ಕರ್ತವ್ಯದಲ್ಲಿ ನಿರತನಾಗು.

ಅನ್ಯೇ ಸಾಮ ಪ್ರಶಂಸಂತಿ ವ್ಯಾಯಾಮಮಪರೇ ಜನಾಃ।
ನೈಕಂ ನ ಚಾಪರಂ ಕೇಚಿದುಭಯಂ ಚ ತಥಾಪರೇ ॥೭॥

ಕೆಲವರು ಪ್ರಿಯವಚನವನ್ನೇ ಶ್ರೇಷ್ಠವೆನ್ನುವರು. ಇನ್ನೂ ಕೆಲವರು ಯಾಗಾದಿಕರ್ಮಗಳನ್ನು ಶ್ರೇಷ್ಠವೆನ್ನುವರು. ಇನ್ನೂ ಕೆಲವರು ಸನ್ನ್ಯಾಸವನ್ನು ಶ್ರೇಷ್ಠವೆನ್ನುವರು. ಕೆಲವರು ಇವುಗಳಲ್ಲಿ ಒಂದನ್ನು ಮಾತ್ರ , ಶ್ರೇಷ್ಠವೆಂದು ಪ್ರಶಂಸೆ ಮಾಡುವುದಿಲ್ಲ. ಈ ಎರಡನ್ನೂ ಕೂಡ ಪ್ರಶಂಸೆ ಮಾಡುತ್ತಾರೆ.

ಟಿಪ್ಪಣಿ - ಅನ್ಯೇ ಸಾಮ ಪ್ರಶಂಸಂತಿ ಇತ್ಯತ್ರ ಸಾಮ ಪ್ರಿಯವಚನಮ್ । ಏಕಂ ಪ್ರಾಗುಕ್ತಂ ಸಾಮ, ಅಪರಂ ಪಶ್ಚಾದುಕ್ತಂ ವ್ಯಾಯಾಮಂ ಚ ನ ಪ್ರಶಂಸಂತಿ, ಅರಣ್ಯೇ ತಪಸ್ಯೇವ ವರ್ತಂತ ಇತಿ ಭಾವಃ । – 'ಅನ್ಯೇ ಸಾಮ ಪ್ರಶಂಸಂತಿ' ಸಾಮ ಶಬ್ದಕ್ಕೆ 'ಪ್ರಿಯವಾದ ಮಾತು 'ಎಂದರ್ಥ. 'ಏಕಂ' ಎಂಬ ಶಬ್ದಕ್ಕೆ 'ಹಿಂದೆ ಹೇಳಿದ ಸಾಮವಚನ' ಎಂದರ್ಥ. ಅಪರಂ ಎಂದರೆ ವ್ಯಾಯಾಮ ಎಂದರ್ಥ.

ವಿವರಣೆ - ಸಂತೋಷ ಅಥವಾ ಪರಮಾತ್ಮನ ಸಾಕ್ಷಾತ್ಕಾರವಾಗುವುದು ಜೀವನದಲ್ಲಿ ಅತ್ಯಂತಶ್ರೇಷ್ಠವಾಗಿದೆ. ಇಂಥ ಸಂತೋಷವನ್ನು ಪಡೆದುಕೊಳ್ಳ-ಬೇಕೆಂದರೆ ಅರಣ್ಯಕ್ಕೆ ಹೋಗಬೇಕಾಗಿಲ್ಲ. ತಾನಿರುವುಲ್ಲಿಯೇ ಅಂಥ ಸಂತೋಷ-ವನ್ನು ಪಡೆದುಕೊಳ್ಳಬಹುದು. ಮತ್ತು ಆತ್ಮ ಸಾಕ್ಷಾತ್ಕಾರಕ್ಕೆ ಸರ್ವತ್ಯಾಗವನ್ನೂ ಕೂಡ ಮಾಡಬೇಕಾಗಿಲ್ಲ. ಸಾಮಶಬ್ದಕ್ಕೆ ಪ್ರಿಯವಾದ ಮಾತುಗಳು ಎಂದರ್ಥ. ವ್ಯಾಯಾಮಪದಕ್ಕೆ ಯತ್ನ ಮತ್ತು ಪರಿಶ್ರಮ ಎಂದರ್ಥ. ಬೇರೆಯವರು ಧ್ಯಾನ-ವನ್ನು ಪ್ರಶಂಸೆ ಮಾಡಿಯೇ ಮಾಡುತ್ತಾರೆ. ಸಾಮ ಮತ್ತು ವ್ಯಾಯಾಮಗಳೆರಡನ್ನು ಅವಸ್ಥಾಭೇದದಿಂದ ಪ್ರಶಂಸೆ ಮಾಡುತ್ತಾರೆ ಎಂದರ್ಥ.

ಯಜ್ಞಮೇಕೇ ಪ್ರಶಂಸಂತಿ ಸನ್ನ್ಯಾಸಮಪರೇ ಜನಾಃ।
ದಾನಮೇಕೇ ಪ್ರಶಂಸಂತಿ ಕೇಚಿಚ್ಚೈವ ಪ್ರತಿಗ್ರಹಮ್ ॥೮॥

ಕೆಲವರು ಯಜ್ಞವನ್ನು ಪ್ರಶಂಸೆ ಮಾಡುತ್ತಾರೆ. ಕೆಲವರು ಸನ್ನ್ಯಾಸವನ್ನು ಪ್ರಶಂಸೆ ಮಾಡುತ್ತಾರೆ. ಇನ್ನೂ ಕೆಲವರು ದಾನ ಮಾಡುವುದನ್ನು ಪ್ರಶಂಸೆ ಮಾಡುತ್ತಾರೆ. ಕೆಲವರು ದಾನವನ್ನು ತೆಗೆದುಕೊಳ್ಳುವುದೇ ಶ್ರೇಷ್ಠವೆಂದು ಹೇಳುತ್ತಾರೆ.

ಕೇಚಿತ್ ಸರ್ವಂ ಪರಿತ್ಯಜ್ಯ ತೂಷ್ಣೀಂ ಧ್ಯಾಯಂತ ಆಸತೇ।

ಕೆಲವರು ಎಲ್ಲವನ್ನೂ ಪರಿತ್ಯಾಗ ಮಾಡಿ, ಮೌನವಾಗಿ ಧ್ಯಾನದಲ್ಲಿಯೇ ಆಸಕ್ತ-ರಾಗಿರುತ್ತಾರೆ.

ರಾಜ್ಯಮೇಕೇ ಪ್ರಶಂಸಂತಿ ಪ್ರಜಾನಾಂ ಪರಿಪಾಲನಮ್ ॥೯॥
ಹತ್ವಾಽಪಿತ್ವಾಽಪಿ ಚ ಭಿತ್ವಾಽಪಿ ಚ ಕೇಚಿದೇಕಾಂತಶೀಲಿನಃ।

ಕೆಲವರು ಶತ್ರುಗಳನ್ನು ಕೊಂದು, ಶತ್ರುಸೈನಿಕರನ್ನು ತುಂಡರಿಸಿ, ಶತ್ರುಗಳ ಕೋಟೆಯನ್ನು ಭೇದಿಸಿ ಶುತ್ರರಾಜ್ಯವನ್ನು ವಶಮಾಡಿಕೊಂಡು ಪ್ರಜೆಗಳನ್ನು ಪರಿಪಾಲನೆ ಮಾಡುವ ರಾಜ್ಯವನ್ನೇ ಪ್ರಶಂಸೆ ಮಾಡುತ್ತಾರೆ. ಇನ್ನೂ ಕೆಲವರು ಏಕಾಂತವಾಸದಲ್ಲಿ ಧ್ಯಾನಶೀಲವಾಗಿರುವುದನ್ನು ಪ್ರಶಂಸೆ ಮಾಡುತ್ತಾರೆ.

ಏತತ್ ಸರ್ವಂ ಸಮಾಲೋಕ್ಯ ಬುಧಾನಾಮೇಷ ನಿಶ್ಚಯಃ ॥೧೦॥
ಅದ್ರೋಹೇಣೈವ ಭೂತಾನಾಂ ಯೋ ಧರ್ಮಃ ಸ ಸತಾಂ ಮತಃ।

ಇವನ್ನೆಲ್ಲಾ ಸರಿಯಾಗಿ ವಿಮರ್ಶೆ ಮಾಡಿ ಕೊನೆಯಲ್ಲಿ ಪಂಡಿತರು ಹೀಗೆ ನಿಶ್ಚಯಿಸಿದ್ದಾರೆ. ಪ್ರಾಣಿಗಳಿಗೆ ದ್ರೋಹವಿಲ್ಲದೇ ಮಾಡುವ ಧರ್ಮವೇ ಸಜ್ಜನರಿಗೆ ಸಮ್ಮತವಾಗಿದೆ ಎಂದು.

ಅದ್ರೋಹಃ ಸತ್ಯವಚನಂ ಸಂವಿಭಾಗೋ ದಯಾ ದಮಃ ॥೧೧॥
ಪ್ರಜನಂ ಸ್ವೇಷು ದಾರೇಷು ಮಾರ್ದವಂ ಹ್ರೀರಚಾಪಲಮ್ ।
ಏವಂ ಧರ್ಮಂ ಪ್ರಧಾನೇಷ್ಟಂ ಮನುಃ ಸ್ವಾಯಂಭುವೋಽಬ್ರವೀತ್
॥೧೨॥
ತಸ್ಮಾದೇತತ್ ಪ್ರಯತ್ನೇನ ಕೌಂತೇಯ ಪ್ರತಿಪಾಲಯ।

ದ್ರೋಹವಿಲ್ಲದಿರುವುದು, ಸತ್ಯವನ್ನೇ ಹೇಳುವುದು, ದಾನ ಮಾಡುವುದು, ದಯೆ ಇರುವುದು, ಇಂದ್ರಿಯನಿಗ್ರಹವನ್ನು ಹೊಂದಿರುವುದು. ತನ್ನ ಹೆಂಡತಿಯಲ್ಲಷ್ಟೇ ಸಂತಾನವನ್ನು ಉತ್ಪತ್ತಿ ಮಾಡುವುದು. ಎಲ್ಲರ ವಿಷಯದಲ್ಲಿ ಮೃದುವಾಗಿರುವುದು, ದುಷ್ಕರ್ಮಗಳನ್ನು ಮಾಡಲು ನಾಚಿಕೊಳ್ಳುವುದು. ಜಿಹ್ವಾಚಾಪಲ್ಯ, ದೃಷ್ಟಿಚಾಪಲ್ಯ, ಸ್ಪರ್ಶಚಾಪಲ್ಯಗಳಿಂದ ದೂರವಿರುವುದು. ಇವುಗಳೇ ಶ್ರೇಷ್ಠವಾದ ಮತ್ತು ಇಷ್ಟವಾದ ಧರ್ಮಗಳೆಂದು ಸ್ವಾಯಂಭುವಮನು ಹೇಳಿರುತ್ತಾನೆ. ಆದ್ದರಿಂದ ನೀನೂ ಸಹ ಸ್ವಾಯಂಭುವಮನು ಹೇಳಿರುವಂತೆ ಈ ಎಲ್ಲಾ ಧರ್ಮಗಳನ್ನು ಪ್ರಯತ್ನಪೂರ್ವಕವಾಗಿ ಆಚರಿಸು.

ಯೋ ಹಿ ರಾಜ್ಯೇ ಸ್ಥಿತಃ ಶಶ್ವದ್ ವಶೀ ತುಲ್ಯಪ್ರಿಯಾಪ್ರಿಯಃ ॥೧೩॥

ಕ್ಷತ್ರಿಯೋ ಯಜ್ಞಶಿಷ್ಟಾಶೀ ರಾಜಾ ಶಾಸ್ತ್ರಾರ್ಥತತ್ತ್ವವಿತ್ ।
ಅಸಾಧುನಿಗ್ರಹರತಃ ಸಾಧೂನಾಂ ಪ್ರಗ್ರಹೇ ರತಃ ॥೧೪॥

ಧರ್ಮವರ್ತ್ಮನಿ ಸಂಸ್ಥಾಪ್ಯ ಪ್ರಜಾ ವರ್ತೇತ ಧರ್ಮತಃ ।
ಪುತ್ರಸಂಕ್ರಾಮಿತಶ್ರೀಶ್ಚ ವನೇ ವನ್ಯೇನ ವರ್ತಯನ್ ॥೧೫॥

ವಿಧಿನಾ ಶ್ರಾವಣೇನೈವ ಕುರ್ಯಾತ್ ಕರ್ಮಾಣ್ಯತಂದ್ರಿತಃ ।
ಯ ಏವಂ ವರ್ತತೇ ರಾಜನ್ ಸ ರಾಜಾ ಧರ್ಮನಿಶ್ಚಿತಃ ॥೧೬॥

ಯಾರು ರಾಜ್ಯದಲ್ಲಿ ಸಿಂಹಾಸನಾರೂಢನಾಗಿ ಅಧಿಪತಿಯಾಗಿರುತ್ತಾನೋ, ಅವನು ಎಲ್ಲಾ ಇಂದ್ರಿಯಗಳನ್ನು ಜಯಿಸಿರಬೇಕು. ಪ್ರಿಯವಾದದ್ದನ್ನು ಅಪ್ರಿಯವಾದದ್ದನ್ನು ಸಮಾನವಾಗಿ ಕಾಣುವ ಭಾವನೆಯುಳ್ಳವನಾಗಿರಬೇಕು. ಯಾಗವನ್ನು ಮಾಡಿ, ಅದರ ಶೇಷವನ್ನು ಭುಂಜಿಸಬೇಕು. ಶಾಸ್ತ್ರಾರ್ಥಗಳನ್ನು, ರಾಜನೀತಿಯನ್ನು ಯಥಾವತ್ತಾಗಿ ತಿಳಿದಿರಬೇಕು. ದುಷ್ಟರನ್ನು ಶಿಕ್ಷಿಸಬೇಕು. ಸಾಧುಗಳನ್ನು ರಕ್ಷಣೆ ಮಾಡಬೇಕು. ರಾಜ್ಯದಲ್ಲಿರುವ ಪ್ರಜೆಗಳು ಧರ್ಮವನ್ನು ಅನುಸರಿಸುವಂತೆ ಮಾಡಬೇಕು. ಕೊನೆಯಲ್ಲಿ ರಾಜ್ಯವನ್ನು ತನ್ನ ಮಗನಿಗೆ ವಹಿಸಿಕೊಡಬೇಕು. ಅನಂತರ ಕಾಡಿಗೆ ತೆರಳಿ ಅಲ್ಲಿ ಸಿಗುವ ಗೆಡ್ಡೆ-ಗೆಣಸು ಮತ್ತು ಫಲಗಳಿಂದಲೇ ದೇಹಯಾತ್ರೆಯನ್ನು ನಡೆಸಬೇಕು. ಎಚ್ಚರ ತಪ್ಪದೇ ವರ್ಣಾಶ್ರಮಧರ್ಮಗಳನ್ನು ಆಚರಿಸಬೇಕು. ಅರಣ್ಯದಲ್ಲಿ ಶಾಸ್ತ್ರಗಳ ಶ್ರವಣದಿಂದ ತಿಳಿದುಕೊಂಡ ಕರ್ಮಗಳನ್ನು ಆಚರಿಸಬೇಕು. ಇಂಥ ರಾಜನು ಧರ್ಮಪ್ರಭು ಎಂದು ಕರೆಸಿಕೊಳ್ಳುತ್ತಾನೆ.

ಟಿಪ್ಪಣಿ – ವಿಧಿನಾ ಶ್ರಾವಣೇನೈವ ಇತ್ಯತ್ರ ಶ್ರಾವಣೇನ ಶ್ರವಣಾನುಕೂಲೇನ।

'ವಿಧಿನಾ ಶ್ರಾವಣೇನೈವ' ಎಂಬಲ್ಲಿ ಶ್ರಾವಣೇನ ಎಂದರೆ ಶ್ರವಣಾನುಕೂಲವಾದದ್ದರಿಂದ.

ತಸ್ಯಾಯಂ ಚ ಪರಶ್ಚೈವ ಲೋಕಃ ಸ್ಯಾತ್ ಸಫಲೋದಯಃ ।
ನಿರ್ವಾಣಂ ಹಿ ಸುದುಷ್ಪ್ರಾಪ್ಯಂ ಬಹುವಿಘ್ನಂ ಚ ಮೇ ಮತಮ್ ॥೧೭॥

ಇಂಥ ಧರ್ಮಪ್ರಭುವಾದ ರಾಜನಿಗೆ ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ಶುಭಫಲಗಳೇ ದೊರೆಯುತ್ತವೆ. ನನ್ನ ಅಭಿಪ್ರಾಯದಲ್ಲಿ ಸನ್ಯಾಸದ ಮೂಲಕವಾಗಿ ಮೋಕ್ಷವನ್ನು ಹೊಂದುವುದು ಅತ್ಯಂತ ದುಷ್ಕರವಾಗಿದೆ. ಮತ್ತು ಅನೇಕವಾದ ವಿಘ್ನಗಳಿಂದಲೂ ಕೂಡ ಕೂಡಿರುತ್ತವೆ.

ಟಿಪ್ಪಣಿ - ನಿರ್ವಾಣಂ ಚ ಸುದುಷ್ಪ್ರಾಪ್ಯಮ್ ಇತ್ಯತ್ರ ನಿರ್ವಾಣಂ ಸರ್ವಪರಿತ್ಯಾಗ-ರೂಪಃ ಸನ್ಯಾಸಃ।

'ನಿರ್ವಾಣಂ ಚ ಸುದುಷ್ಪ್ರಾಪ್ಯಂ' - ಎಂಬಲ್ಲಿ 'ನಿರ್ವಾಣಂ' = ಸರ್ವಪರಿತ್ಯಾಗ-ರೂಪವಾದ ಸನ್ಯಾಸ.

ಏವಂ ಧರ್ಮಮನುಕ್ರಾಂತಾಃ ಸತ್ಯದಾನತಪಃಪರಾಃ।
ಆನೃಶಂಸ್ಯಗುಣೈರ್ಯುಕ್ತಾಃ ಕಾಮಕ್ರೋಧವಿವರ್ಜಿತಾಃ ॥೧೮॥

ಪ್ರಜಾನಾಂ ಪಾಲನೇ ಯುಕ್ತಾ ಧರ್ಮಮುತ್ತಮಮಾಸ್ಥಿತಾಃ।
ಗೋಬ್ರಾಹ್ಮಣಾರ್ಥೇ ಯುಧ್ಯಂತಃ ಪ್ರಾಪ್ತಾ ಗತಿಮನುತ್ತಮಾಮ್॥೧೯॥

ಯಾರು ಈ ಕ್ರಮದಲ್ಲಿ ಧರ್ಮವನ್ನು ಅನುಸರಿಸುತ್ತಾರೋ, ಅವರು ಸತ್ಯ, ದಾನ, ತಪಸ್ಸು, ಸುಳ್ಳು ಹೇಳದಿರುವಿಕೆ ಮೊದಲಾದ ಗುಣಗಳಿಂದ ಕೂಡಿ, ಕಾಮಕ್ರೋಧರಹಿತರಾಗಿ ಪ್ರಜಾಪಾಲನದಲ್ಲಿ ಆಸಕ್ತರಾಗಿ, ಗೋಬ್ರಾಹ್ಮಣರ ಸೇವೆಗಾಗಿಯೇ ಯುದ್ಧವನ್ನು ಮಾಡುತ್ತಾ ಉತ್ತಮವಾದ ಗತಿಯನ್ನು ಪಡೆಯುತ್ತಾರೆ.

ಏವಂ ರುದ್ರಾಃ ಸವಸಸ್ತಥಾऽऽದಿತ್ಯಾಃ ಪರಂತಪ।
ಸಾಧ್ಯಾ ರಾಜರ್ಷಿಸಂಘಾಶ್ಚ ಧರ್ಮಮೇತಂ ಸಮಾಶ್ರಿತಾಃ।
ಅಪ್ರಮತ್ತಾಸ್ತತಃ ಸ್ವರ್ಗಂ ಪ್ರಾಪ್ತಾಃ ಪುಣ್ಯೈಃ ಸ್ವಕರ್ಮಭಿಃ ॥೨೦॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ದೇವಸ್ಥಾನವಾಕ್ಯೇ ಏಕವಿಂಶೋऽಧ್ಯಾಯಃ ॥೨೧॥

ಯುಧಿಷ್ಠಿರನೇ ! ಹೀಗೆ ರುದ್ರರು, ವಸುಗಳು, ಆದಿತ್ಯರು, ಸಾಧ್ಯರು, ಅನೇಕ

ಋಷಿಗಳು ಅಪ್ರಮತ್ತರಾಗಿ ಇದೇ ಧರ್ಮವನ್ನು ಆಶ್ರಯಿಸಿ ತಮ್ಮ ತಮ್ಮ ಪುಣ್ಯಕರ್ಮಗಳಿಂದ ಸ್ವರ್ಗಲೋಕವನ್ನು ಪಡೆದುಕೊಳ್ಳುತ್ತಾರೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೨೧ನೆಯ ಅಧ್ಯಾಯವು ಮುಗಿಯಿತು.

*****

೨೨. ಇಪ್ಪತ್ತೆರಡನೆಯ ಅಧ್ಯಾಯ

ಕ್ಷತ್ರಿಯಧರ್ಮವೇ ಶ್ರೇಷ್ಠ ಎಂಬುದಾಗಿ ಸಮರ್ಥನೆ ಮಾಡುವ ಮೂಲಕ ಪುನಃ ಯುಧಿಷ್ಠಿರನನ್ನು ಸಮಾಧಾನ ಪಡಿಸಲು ಅರ್ಜುನನ ಪ್ರಯತ್ನ.

ವೈಶಂಪಾಯನಃ

ವೈಶಂಪಾಯನರು ಜನಮೇಜಯರಾಜನನ್ನು ಕುರಿತು ಹೇಳುತ್ತಾರೆ -

ಅಸ್ಮಿನ್ನೇವಾಂತರೇ ವಾಕ್ಯಂ ಪುನರೇವಾರ್ಜುನೋಽಬ್ರವೀತ್ ।
ನಿರ್ವಿಣ್ಣಮನಸಂ ಜ್ಯೇಷ್ಠಮಿದಂ ಭ್ರಾತರಮಚ್ಯುತಮ್ ॥೧॥

ಯುಧಿಷ್ಠಿರನು ಧರ್ಮಕ್ಕೆ ಕಟ್ಟುಬಿದ್ದು, ತನ್ನ ನಿಲುವನ್ನು ಸಮರ್ಥನೆ ಮಾಡಿಕೊಳ್ಳುತ್ತಿರುವ ಸಂದರ್ಭದಲ್ಲಿ ಪುನಃ ಅರ್ಜುನನು ತನ್ನ ನಿಲುವನ್ನು ಸಮರ್ಥಿಸಲು ಮುಂದಾದನು. ಅತ್ಯಂತ ಖಿನ್ನಮನಸ್ಕನಾಗಿದ್ದನು. ಸ್ವಲ್ಪವೂ ತನ್ನ ನಿರ್ಧಾರದಿಂದ ವಿಚಲಿತನಾಗದ ತನ್ನ ಹಿರಿಯಣ್ಣನ ಜೊತೆ ಈ ಮಾತುಗಳನ್ನು ಹೇಳಿದನು -

ಕ್ಷತ್ರಧರ್ಮೇಣ ಧರ್ಮಜ್ಞ ಪ್ರಾಪ್ಯ ರಾಜ್ಯಮನುತ್ತಮಮ್ ।
ಜಿತ್ವಾ ಚಾರೀನ್ನರಶ್ರೇಷ್ಠ ತಪ್ಯತೇ ಕಿಂ ಭವಾನ್ ಭೃಶಮ್ ॥೨॥

ಧರ್ಮವನ್ನು ಅರಿತ ಯುಧಿಷ್ಠಿರನಾದ ಅಣ್ಣನನ್ನು ಯಾರಿಂದಲೂ ಹೊಂದಲು ಸಾಧ್ಯವಾಗದ ರಾಜ್ಯವನ್ನು ನಿನ್ನ ಕ್ಷಾತ್ರಧರ್ಮದಿಂದ ಗೆದ್ದಿರುವಿ. ಆ ರಾಜ್ಯಸಂಪತ್ತು ದೊರೆತ ಮೇಲೆ ದುಃಖಿತನಾಗಿರುವಿ. ಇದಕ್ಕೇನು ಕಾರಣ? ಎಂದೇ ಅರ್ಥವಾಗುತ್ತಿಲ್ಲ.

ಕ್ಷತ್ರಿಯಾಣಾಂ ಮಹಾರಾಜ ಸಂಗ್ರಾಮೇ ನಿಧನಂ ಮತಮ್ ।
ವಿಶಿಷ್ಟಂ ಬಹುಭಿರ್ಯಜ್ಞೈಃ ಕ್ಷತ್ರಧರ್ಮಮನುಸ್ಮರ ॥೩॥

ಮಹಾರಾಜನೇ! ಕ್ಷತ್ರಿಯರಿಗೆ ಯುದ್ಧದಲ್ಲಿ ಮರಣವೇ ಸರ್ವಶ್ರೇಷ್ಠ. ಎಲ್ಲ ಯಜ್ಞಗಳಿಗಿಂತಲೂ ಕೂಡ ಅತ್ಯಂತ ಉತ್ತಮ. ಇಂಥ ಕ್ಷಾತ್ರಧರ್ಮವು ಏನು ಹೇಳುತ್ತದೆ ಎಂಬುದನ್ನು ಒಮ್ಮೆ ಸ್ಮರಣೆಗೆ ತಂದುಕೋ.

ಬ್ರಾಹ್ಮಣಾನಾಂ ತಪಸ್ತ್ಯಾಗಃ ಪ್ರೇತ್ಯ ಧರ್ಮವಿಧಿಃ ಸ್ಮೃತಃ ।
ಕ್ಷತ್ರಿಯಾಣಾಂ ಚ ನಿಧನಂ ಸಂಗ್ರಾಮೇ ವಿಹಿತಂ ಪ್ರಭೋ ॥೪॥

ಬ್ರಾಹ್ಮಣರಿಗೆ ತ್ಯಾಗದಿಂದ ಅಥವಾ ಸನ್ನ್ಯಾಸದಿಂದಲೇ ಮರಣಹೊಂದುವುದು ಧರ್ಮಸಮ್ಮತವಾಗಿದೆ. ಆದರೆ ಕ್ಷತ್ರಿಯರಿಗೆ ಯುದ್ಧದಲ್ಲಿ ಮರಣ ಹೊಂದುವುದೇ ಧರ್ಮಶಾಸ್ತ್ರಗಳಲ್ಲಿ ವಿಹಿತವಾಗಿದೆ.

ವಿವರಣೆ - ಬ್ರಾಹ್ಮಣರಿಗೆ ತ್ಯಾಗ ಮತ್ತು ತಪಸ್ಸು ಎರಡೂ ಕೂಡ ಬಹಳ ಮುಖ್ಯವಾದ ಧರ್ಮಗಳು. ಪುಣ್ಯಲೋಕಗಳನ್ನು ಗಳಿಸಬೇಕೆಂದರೆ ತಮ್ಮೆಲ್ಲ ಸಂಪತ್ತನ್ನು ಮರಣದ ಸಂದರ್ಭದಲ್ಲಿ ಪರಿತ್ಯಾಗ ಮಾಡಿರಬೇಕು. ಅವುಗಳ ಮೇಲೆ ವ್ಯಾಮೋಹವನ್ನು ಬಿಟ್ಟಿರಬೇಕು. ಹಾಗೇನಾದರೂ ಪರಿತ್ಯಾಗ ಮಾಡದೇ ಸಂಪತ್ತಿನ ಮೇಲೆ ಬಂಧು-ಬಾಂಧವರ ಮೇಲೆ ವ್ಯಾಮೋಹವನ್ನು ಇಟ್ಟುಕೊಂಡು ಮರಣವನ್ನು ಹೊಂದಿದರೆ ಸದ್ಗತಿಯು ಆಗುವುದಿಲ್ಲ. ಇದೇ ರೀತಿಯಾಗಿ ಕ್ಷತ್ರಿಯರಿಗೆ ಯುದ್ಧದಲ್ಲಿ ಮರಣಹೊಂದುವುದೇ ಶ್ರೇಯಸ್ಕರ. ಅದನ್ನು ಬಿಟ್ಟು ಸನ್ನ್ಯಾಸಿ ಜೀವನವನ್ನು ಹೊಂದಿ ಮರಣವನ್ನು ಹೊಂದಿದರೆ ಕ್ಷತ್ರಿಯರಿಗೂ ಸದ್ಗತಿಯಾಗದು. ಶಸ್ತ್ರವನ್ನು ಎಂದೂ ಸಹ ಧರಿಸದೇ ಇರಬಾರದು. ಇಂಥ ಶ್ರೇಷ್ಠವಾದ ಕ್ಷಾತ್ರಧರ್ಮದಲ್ಲಿ ಮರಣವನ್ನು ಹೊಂದಿದ ಕ್ಷತ್ರಿಯರ ವಿಷದಲ್ಲೇಕೆ ದುಃಖವನ್ನು ಹೊಂದಿರುವಿ.

ಕ್ಷಾತ್ರಧರ್ಮೋ ಮಹಾರೌದ್ರಃ ಶಸ್ತ್ರನಿತ್ಯ ಇತಿ ಸ್ಮೃತಃ ।
ವಧಶ್ಚ ಭರತಶ್ರೇಷ್ಠ ಕಾಲೇ ಶಸ್ತ್ರೇಣ ಸಂಯುಗೇ ॥೫॥

ಕ್ಷತ್ರಿಯರು ಆಚರಿಸಬೇಕಾದ ಧರ್ಮವು ಅತ್ಯಂತ ಭಯಂಕರವಾಗಿದೆ. ನಿತ್ಯವಾಗಿಯೂ ಶಸ್ತ್ರಾಸ್ತ್ರಗಳನ್ನು ಧರಿಸುವುದೇ ಅವರ ಧರ್ಮವಾಗಿದೆ. ಸಂದರ್ಭ ಬಂದಾಗ ಯುದ್ಧವನ್ನು ಮಾಡಲೇ ಬೇಕು. ಆಗ ಶಸ್ತ್ರದಿಂದ ವಧೆಯಾದರೂ ಚಿಂತಿಸಬಾರದು. ಇದುವೇ ಕ್ಷತ್ರಿಯರ ಧರ್ಮ.

ಬ್ರಾಹ್ಮಣಸ್ಯಾಪಿ ಚೇದ್ ರಾಜನ್ ಕ್ಷತ್ರಧರ್ಮೇಣ ವರ್ತತಃ।
ಪ್ರಶಸ್ತಂ ಜೀವಿತಂ ಲೋಕೇ ಕ್ಷತ್ರಂ ಹಿ ಬ್ರಹ್ಮಸಂಭವಮ್ ॥೬॥

ಬ್ರಾಹ್ಮಣನಾದವನು ಕ್ಷಾತ್ರಧರ್ಮವನ್ನು ಅನುಸರಿಸಿ ಜೀವನವನ್ನು ಮಾಡುವುದಾದಲ್ಲಿ ಅವನಿಗೂ ಕೂಡ ಯುದ್ಧದಲ್ಲಿ ಮರಣವನ್ನು ಹೊಂದುವುದು ಧರ್ಮಶಾಸ್ತ್ರಕ್ಕೆ ಸಮ್ಮತವಾಗಿದೆ. ಏಕೆಂದರೆ ಕ್ಷತ್ರಿಯಜನ್ಮವು ಅತ್ಯಂತಪ್ರಶಸ್ತವಾಗಿದೆ. ಆ ಬ್ರಹ್ಮನಿಂದ ಈ ಕ್ಷತ್ರಿಯಜಾತಿಯು ಹುಟ್ಟಿದೆ.

ವಿವರಣೆ - ಕ್ಷತ್ರಧರ್ಮದಿಂದ ಜೀವನವನ್ನು ನಡೆಸಲು ಹೊರಟಿರುವ ಬ್ರಾಹ್ಮಣನಿಗೂ ಕೂಡ ಯುದ್ಧದಲ್ಲಿ ಮರಣ ಹೊಂದುವುದೇ ಧರ್ಮ. ಇದರಿಂದ ಅವನಿಗೆ ಸದ್ಗತಿಯಾಗುವುದರಲ್ಲಿ ಸಂಶಯವಿಲ್ಲ. ಉತ್ತಮವಾದ ಕ್ಷತ್ರಿಯಧರ್ಮವನ್ನು ಆಶ್ರಯಿಸುವುದು ಬ್ರಾಹ್ಮಣರಿಗೆ ದೋಷವಾಗುವುದಿಲ್ಲ. ಯಾವ ಬ್ರಹ್ಮನಿಂದ ಬ್ರಾಹ್ಮಣಜಾತಿಯು ಹುಟ್ಟಿದೆಯೋ, ಅವನಿಂದಲೇ ಕ್ಷತ್ರಿಯಜಾತಿಯೂ ಕೂಡ ಹುಟ್ಟಿದೆ.

ನ ತ್ಯಾಗೋ ನ ಪುನರ್ಯಜ್ಞೋ ನ ತಪೋ ಮನುಜೇಶ್ವರ।
ಕ್ಷತ್ರಿಯಸ್ಯ ವಿಧೀಯಂತೇ ನ ಪರಸ್ವೋಪಜೀವನಮ್ ॥೭॥

ಓ ಮನುಜೇಶ್ವರನೇ! ಕ್ಷತ್ರಿಯನಾದವನಿಗೆ ಸನ್ಯಾಸ, ಯಜ್ಞ, ತಪಸ್ಸು ಮತ್ತೊಬ್ಬರನ್ನು ಉಪಜೀವಿಸಿ, ಜೀವನವನ್ನು ನಿರ್ವಹಿಸುವುದು ವಿಹಿತವಾಗಿರುವುದಿಲ್ಲ.

ಸ ಭವಾನ್ ಸರ್ವಧರ್ಮಜ್ಞೋ ಧರ್ಮಾತ್ಮಾ ಭರತರ್ಷಭ।
ರಾಜಾ ಮನೀಷೀ ನಿಪುಣೋ ಲೋಕೇ ದೃಷ್ಟಪರಾವರಃ ॥೮॥

ಭರತರ್ಷಭನೇ! ನೀನು ಎಲ್ಲಾ ಧರ್ಮಗಳನ್ನು ಚೆನ್ನಾಗಿ ಅರಿತವನು. ಅಷ್ಟೇ ಅಲ್ಲದೇ ಆ ಎಲ್ಲ ಧರ್ಮಗಳನ್ನು ಮನನ ಮಾಡಿರುವವನು. ಲೋಕವ್ಯವಹಾರಗಳಲ್ಲಿ ನಿಪುಣನಾಗಿರುವವನು. ಲೋಕದಲ್ಲಿ ಯಾವುದು ಶ್ರೇಷ್ಠ, ಯಾವುದು ಶ್ರೇಷ್ಠವಲ್ಲ ಎಂಬುದನ್ನು ಯಥಾರ್ಥವಾಗಿ ತಿಳಿದವನು. ಅತ್ಯಂತ ಬುದ್ಧಿವಂತನಾದ ನಿನಗೆ ಈ ದುಃಖವು ಉಚಿತವಲ್ಲ.

ತ್ಯಕ್ತ್ವಾ ಸಂತಾಪಜಂ ಶೋಕಂ ದಂಶಿತೋ ಭವ ಕರ್ಮಣಿ।
ಕ್ಷತ್ರಿಯಸ್ಯ ವಿಶೇಷೇಣ ಹೃದಯಂ ವಜ್ರಸನ್ನಿಭಮ್ ॥೯॥

ಸಂತಾಪದಿಂದ ಹುಟ್ಟಿದ ಈ ಶೋಕವನ್ನು ಪರಿತ್ಯಾಗ ಮಾಡು. ರಾಜನಿಗೆ ಉಚಿತವಾದ ಕಾರ್ಯಗಳನ್ನು ಮಾಡಲು ಸಿದ್ಧನಾಗು. ಕ್ಷತ್ರಿಯನಾದವನಿಗೆ ಹೃದಯವು ವಜ್ರದಂತೆ ಅತ್ಯಂತಕಠಿಣವಾಗಿರಬೇಕು. ನೀನೂ ಸಹ ಅಂಥ ಕಾಠಿಣ್ಯವನ್ನು ಹೊಂದಿ ಕ್ಷಾತ್ರಧರ್ಮವನ್ನು ಅನುಸರಿಸು.

ಜಿತ್ವಾರೀನ್ ಕ್ಷತ್ರಧರ್ಮೇಣ ಪ್ರಾಪ್ಯ ರಾಜ್ಯಮಕಂಟಕಮ್।
ವಿಜಿತಾತ್ಮಾ ಮನುಷ್ಯೇಂದ್ರ ಯಜ್ಞದಾನಪರೋ ಭವ ॥೧೦॥

ಕ್ಷಾತ್ರಧರ್ಮದಿಂದ ಎಲ್ಲ ಶತ್ರುಗಳನ್ನು ಗೆದ್ದು ಯಾರ ಉಪದ್ರವವೂ ಇಲ್ಲದ ರಾಜ್ಯವನ್ನು ಪಡೆದುಕೊಂಡಿರುವಿ. ಇಂಥ ನೀನು ಶೋಕಾವಿರ್ಭೂತವಾದ ಮನಸ್ಸನ್ನು ಜಯಿಸಲೇಬೇಕು. ಯಜ್ಞ ಮತ್ತು ದಾನಗಳನ್ನು ಮಾಡುವುದರಲ್ಲಿ ಆಸಕ್ತನಾಗು.

ಇಂದ್ರೋ ವೈ ಬ್ರಹ್ಮಣಃ ಪುತ್ರಃ ಕ್ಷತ್ರಿಯಃ ಕರ್ಮಣಾಭವತ್।
ಜ್ಞಾತೀನಾಂ ಪಾಪವೃತ್ತೀನಾಂ ಜಘಾನ ನವತೀರ್ನವ ॥೧೧॥

ಇಂದ್ರನು ಕಶ್ಯಪಋಷಿಯ ಮಗನಾದ್ದರಿಂದ ಬ್ರಾಹ್ಮಣನೇ ಆಗಿರುವನು. ಆದರೂ ಕೂಡ ತನ್ನ ಕರ್ಮದಿಂದ ಕ್ಷಾತ್ರಧರ್ಮವನ್ನು ಅನುಸರಿಸಿದನು. ಕ್ಷಾತ್ರಧರ್ಮಕ್ಕೆ ಅನುಸಾರಿಯಾಗಿ ಪಾಪವೃತ್ತಿಯುಳ್ಳ ಜ್ಞಾತಿಗಳಾದ ಎಂಟುನೂರ ಹತ್ತುಮಂದಿ ದೈತ್ಯರನ್ನು ಸಂಹಾರ ಮಾಡಿದನು.

ತಚ್ಚಾಸ್ಯ ಕರ್ಮ ಪೂಜ್ಯಂ ಹಿ ಪ್ರಶಸ್ಯಂ ಚ ವಿಶಾಂಪತೇ।
ತೇನ ಚೇಂದ್ರತ್ವಂ ಸಮಾಪೇದೇ ದೇವಾನಾಮಿತಿ ನಃ ಶ್ರುತಮ್ ॥೧೨॥

ಬ್ರಾಹ್ಮಣನಾಗಿ ಹುಟ್ಟಿ ಕ್ಷತ್ರಧರ್ಮವನ್ನು ಅನುಸರಿಸಿದನು ಎಂಬುದಾಗಿ ಯಾರೂ ಸಹ ಆ ದೇವೇಂದ್ರನನ್ನು ನಿಂದನೆ ಮಾಡಲಿಲ್ಲ. ಪ್ರಶಂಸೆಯನ್ನೇ ಮಾಡಿದರು. ಹೀಗೆ ಕ್ಷತ್ರಧರ್ಮವನ್ನು ಅವಲಂಬಿಸಿ ದೈತ್ಯರನ್ನು ಸಂಹಾರ ಮಾಡಿದ ಕಾರಣದಿಂದ ಅವನಿಗೆ ದೇವೇಂದ್ರಪದವಿಯೇ ದೊರೆಯಿತು. ಈ ಕಥೆಯನ್ನು ನಾವು ಕೇಳಿದ್ದೇವಷ್ಟೇ .

ಸ ತ್ವಂ ಯಜ್ಞೈರ್ಮಹಾರಾಜ ಯಜಸ್ವ ಬಹುದಕ್ಷಿಣೈಃ।
ಯಥೈವೇಂದ್ರೋ ಮನುಷ್ಯೇಂದ್ರ ಚಿರಾಯ ವಿಗತಜ್ವರಃ ॥೧೩॥

ಮಹಾರಾಜನಾದ ಮನುಷ್ಯೇಂದ್ರನೇ! ನೀನೂ ಕೂಡ ಚಿಂತೆ ಮತ್ತು ಶೋಕ-ಗಳನ್ನು ಪರಿತ್ಯಾಗ ಮಾಡು. ದೇವೇಂದ್ರನಂತೆ ಬಹುದಕ್ಷಿಣಾಕವಾದ ಯಜ್ಞಗಳಿಂದ ದೇವತೆಗಳನ್ನು ಆರಾಧನೆ ಮಾಡು.

ಮಾ ತ್ವಮೇವಂ ಗತೇ ಕಿಂಚಿಚ್ಛೋಚೇಥಾಃ ಕ್ಷತ್ರಿಯರ್ಷಭ।
ಗತಾಸ್ತೇ ಕ್ಷತ್ರಧರ್ಮೇಣ ಶಸ್ತ್ರಪೂತಾಃ ಪರಾಂ ಗತಿಮ್ ॥೧೪॥

ಕ್ಷತ್ರಿಯಶ್ರೇಷ್ಠನೇ! ನಾನು ಹೇಳುತ್ತಿರುವುದೇ ಸತ್ಯವಾದ ಮಾರ್ಗ. ಕಳೆದು ಹೋದ ವಿಷಯದಲ್ಲಿ ಸ್ವಲ್ಪವೂ ಕೂಡ ದುಃಖವು ಪಡಬೇಡ. ಕ್ಷತ್ರಿಯಧರ್ಮಕ್ಕೆ ಅನುಸಾರಿಯಾಗಿ ಯುದ್ಧವನ್ನು ಮಾಡುತ್ತಿದ್ದ ಆ ನಿನ್ನ ಬಂಧುಗಳು ಮತ್ತು ದಾಯಾದಿಗಳು ಶಸ್ತ್ರಪೂತರಾಗಿ ಅತ್ಯಂತ ಶ್ರೇಷ್ಠವಾದ ಸದ್ಗತಿಯನ್ನು ಹೊಂದಿದ್ದಾರೆ.

ಭವಿತವ್ಯಂ ತಥಾ ತಚ್ಚ ಯದ್ ವೃತ್ತಂ ಭರತರ್ಷಭ।
ದಿಷ್ಟಂ ಹಿ ರಾಜಶಾರ್ದೂಲ ನ ಶಕ್ಯಮತಿವರ್ತಿತುಮ್ ॥೧೫॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ
ರಾಜಧರ್ಮೇ ಅರ್ಜುನವಾಕ್ಯೇ ದ್ವಾವಿಂಶೋಽಧ್ಯಾಯಃ ॥೨೨॥

ಭರತವಂಶೋದ್ಭವನೇ! ರಾಜಸಿಂಹನೇ! ಯಾವುದು ಆಗಬೇಕೋ? ಅದು ಆಗಿಯೇ ಆಗುತ್ತದೆ. ಇದಕ್ಕೆ ನಾನು ನೀನು ಅಥವಾ ಬೇರೆ ಯಾರೂ ಸಹ ಕಾರಣರಲ್ಲ. ವಿಧಿಯ ನಿಯಮವನ್ನು ಉಲ್ಲಂಘನೆ ಮಾಡಿ ನಡೆಯಲು ಯಾರಿಂದಲೂ ಕೂಡ ಸಾಧ್ಯವಾಗುವುದಿಲ್ಲ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೨೨ನೆಯ ಅಧ್ಯಾಯವು ಮುಗಿಯಿತು.

* * * * *

೨೩. ಇಪ್ಪತ್ಮೂರನೆಯ ಅಧ್ಯಾಯ

ವೇದವ್ಯಾಸಋಷಿಗಳು ಯುಧಿಷ್ಠಿರನಿಗೆ ಕ್ಷಾತ್ರಧರ್ಮದ ಅನುಷ್ಠಾನವೇ ನಿನಗೆ ಉಚಿತವೆಂದು ಉಪದೇಶಿಸಿದರು. ಇದಕ್ಕೆ ಶಂಖಲಿಖಿತರ ಕಥೆಯನ್ನು ಹೇಳುವ ಪ್ರಸಂಗದಲ್ಲಿ ಸುದ್ಯುಮ್ನರಾಜನ ದಂಡಧರ್ಮಪರಿಪಾಲನೆಯ ಮಹತ್ವವನ್ನು ಉದಾಹರಣೆಯನ್ನಾಗಿ ತಿಳಿಸಿದರು.

ವೈಶಂಪಾಯನಃ

ಏವಮುಕ್ತಸ್ತು ಕೌಂತೇಯೋ ಗುಡಾಕೇಶೇನ ಪಾಂಡವಃ।
ನೋವಾಚ ಕಿಂಚಿತ್ ಕೌರವ್ಯಸ್ತತೋ ದ್ವೈಪಾಯನೋಽಬ್ರವೀತ್॥೧॥

ವೈಶಂಪಾಯನ - ಭರತಕುಲೋತ್ಪನ್ನನೇ! ಅರ್ಜುನನು ಯುಕ್ತಿಬದ್ಧವಾದ ಧರ್ಮಸಮ್ಮತವಾದ ಇಷ್ಟು ಮಾತುಗಳನ್ನು ಹೇಳಿದರೂ ಕೂಡ ಕುಂತಿಯ ಮಗನಾದ ಯುಧಿಷ್ಠಿರನಿಗೆ ಯಾವುದೇ ಪರಿವರ್ತನೆ ಆಗಲಿಲ್ಲ. ಮೌನವಾಗಿಯೇ ಕುಳಿತನು. ಆಗ ಸಾಕ್ಷಾತ್ ವೇದವ್ಯಾಸದೇವರು ಯುಧಿಷ್ಠಿರನನ್ನು ಕುರಿತು ಹಿತೋಪದೇಶವನ್ನು ಮಾಡಲು ಪ್ರವೃತ್ತರಾದರು.

ಶ್ರೀವೇದವ್ಯಾಸಃ

ಬೀಭತ್ಸೋರ್ವಚನಂ ಸೌಮ್ಯ ಸತ್ಯಮೇತದ್ ಯುಧಿಷ್ಠಿರ।
ಶಾಸ್ತ್ರದೃಷ್ಟಃ ಪರೋ ಧರ್ಮಃ ಸ್ಥಿತೋ ಗಾರ್ಹಸ್ಥ್ಯಮಾಶ್ರಿತಃ ॥೨॥

ವೇದವ್ಯಾಸದೇವರು – ಯುಧಿಷ್ಠಿರನೇ! ಅರ್ಜುನನ ಮಾತುಗಳೆಲ್ಲವೂ ಸತ್ಯವೇ ಆಗಿವೆ. ಶಾಸ್ತ್ರಸಮ್ಮತವಾಗಿವೆ. ಶಾಸ್ತ್ರದಲ್ಲಿ ಗೃಹಸ್ಥಧರ್ಮವನ್ನು ಆಶ್ರಯಿಸಿರುವ ರಾಜ್ಯಶಾಸ್ತ್ರಧರ್ಮವು ಅತ್ಯಂತ ಶ್ರೇಷ್ಠವೆಂದು ಹೇಳಲ್ಪಟ್ಟಿದೆ.

ಸ್ವಧರ್ಮಂ ಚರ ಧರ್ಮಜ್ಞ ಯಥಾಶಾಸ್ತ್ರಂ ಯಥಾವಿಧಿ।
ನ ಹಿ ಗಾರ್ಹಸ್ಥ್ಯಮುತ್ಸೃಜ್ಯ ತವಾರಣ್ಯಂ ವಿಧೀಯತೇ ॥೩॥

ಧರ್ಮಜ್ಞನೇ! ವಿಧಿಗೆ ಅನುಸಾರಿಯಾಗಿ ಕರ್ತವ್ಯವನ್ನು ನಿರ್ವಹಿಸು. ಶಾಸ್ತ್ರಕ್ಕೆ ಅನುಗುಣವಾದ ಸ್ವಧರ್ಮಾಚರಣೆಯನ್ನು ಆಚರಿಸು. ಶ್ರೇಷ್ಠವಾದ ಗೃಹಸ್ಥಾಶ್ರಮವನ್ನು ಪರಿತ್ಯಾಗ ಮಾಡಿ, ಅರಣ್ಯದಲ್ಲಿ ಜೀವಿಸುವುದು ಕ್ಷತ್ರಿಯನಾದ ನಿನಗೆ ವಿಹಿತವಲ್ಲ.

ಗೃಹಸ್ಥಂ ಹಿ ಸದಾ ದೇವಾಃ ಪಿತರೋಽತಿಥಯಸ್ತಥಾ।
ಭೃತ್ಯಾಶ್ಚೈವೋಪಜೀವಂತಿ ತಾನ್ ಭರಸ್ವ ಮಹೀಪತೇ ॥೪॥

ಯಾವಾಗಲೂ ಕೂಡ ದೇವತೆಗಳು, ಪಿತೃಗಳು, ಅತಿಥಿಗಳು, ಸೇವಕರು, ಗೃಹಸ್ಥರನ್ನೇ ಆಶ್ರಯಿಸಿ ಜೀವಿಸುತ್ತಾರೆ. ಆದ್ದರಿಂದ ಅವರೆಲ್ಲರಿಗೂ ಆಶ್ರಯನಾಗಿ ನೀನು ಗೃಹಸ್ಥಾಶ್ರಮಧರ್ಮವನ್ನೇ ಪರಿಪಾಲನೆ ಮಾಡಬೇಕು.

ವಯಾಂಸಿ ಪಶವಶ್ಚೈವ ಭೂತಾನಿ ಚ ಮಹಿಪತೇ।
ಗೃಹಸ್ಥೈರೇವ ಧಾರ್ಯಂತೇ ತಸ್ಮಾಚ್ಛ್ರೇಷ್ಠೋ ಗೃಹಾಶ್ರಮೀ ॥೫॥

ಮಹೀಪತಿಯೇ! ಪಶುಗಳು, ಪಕ್ಷಿಗಳು ಉಳಿದೆಲ್ಲಾ ಪ್ರಾಣಿಗಳೂ ಕೂಡ ಗೃಹಸ್ಥರನ್ನೇ ರಕ್ಷಕರನ್ನಾಗಿ ಆಶ್ರಯಿಸಿರುತ್ತವೆ. ಗೃಹಸ್ಥರೇ ಎಲ್ಲಾ ಪ್ರಾಣಿಗಳ ಭರಣ ಮತ್ತು ಪೋಷಣೆಗಳನ್ನು ಮಾಡುತ್ತಾರೆ. ಆದ್ದರಿಂದಲೇ ಗೃಹಸ್ಥಾಶ್ರಮವು ಅತ್ಯಂತ ಶ್ರೇಷ್ಠವೆಂದು ತಿಳಿ.

ಸೋಽಯಂ ಚತುರ್ಣಾಮೇತೇಷಾಮಾಶ್ರಮಾಣಾಂ ದುರಾಚರಃ।
ತಂ ಚರಾದ್ಯ ವಿಧಿಂ ಪಾರ್ಥ ದುಶ್ಚರಂ ದುರ್ಬಲೇಂದ್ರಿಯೈಃ ॥೬॥

ನಾಕು ಆಶ್ರಮಗಳಲ್ಲಿ ಗೃಹಸ್ಥಾಶ್ರಮದ ಆಚರಣೆಯೇ ಅತ್ಯಂತಕಠಿಣವಾಗಿದೆ. ಯಾರಿಗೆ ಇಂದ್ರಿಯಗಳು ದುರ್ಬಲವಾಗಿರುತ್ತವೋ, ಅಂಥವರಿಗೆ ಈ ಗೃಹಸ್ಥಾಶ್ರಮದ ಆಚರಣೆಯನ್ನು ಮಾಡಲು ಸಾಧ್ಯವಾಗುವುದಿಲ್ಲ. ಇಂಥ ಅಸಾಧ್ಯವಾದ ಗೃಹಸ್ಥಾಶ್ರಮಧರ್ಮವನ್ನು ನೀನು ಈಗಿನಿಂದಲೇ ಆಚರಿಸುವವನಾಗು.

ವೇದಜ್ಞಾನಂ ಚ ತೇ ಕೃತ್ಸ್ನಂ ತಪಶ್ಚಾಚರಿತಂ ಮಹತ್ ।
ಪಿತೃಪೈತಾಮಹಂ ರಾಜ್ಯಂ ಧುರ್ಯವದ್ ದ್ವೋಢುಮರ್ಹಸಿ ॥೭॥

ಓ ಧರ್ಮಜನೇ! ನಿನಗೆ ಎಲ್ಲ ವೇದಾರ್ಥಗಳ ಪರಿಜ್ಞಾನವಿದೆ. ಕಠಿಣವಾದ ತಪಸ್ಸನ್ನೂ ಕೂಡ ಆಚರಣೆ ಮಾಡಿರುವಿ. ನಿನ್ನ ತಂದೆ, ತಾತಂದಿರ ಕಾಲದಿಂದ ಆಗತವಾದ ಈ ರಾಜ್ಯವನ್ನು ನೀನು ದೊಡ್ಡ ಭಾರವನ್ನು ಹೊತ್ತಂತೆ ಧಾರಣೆ ಮಾಡಬೇಕು.

ತಪೋ ಯಜ್ಞಸ್ತಥಾ ವಿದ್ಯಾ ಭೈಕ್ಷ್ಯಮಿಂದ್ರಿಯಸಂಯಮಃ(ನಿಗ್ರಹಃ) ।
ಧ್ಯಾನಮೇಕಾಂತಶೀಲತ್ವಂ ತುಷ್ಟಿರ್ಜ್ಞಾನಂ ಚ ಶಕ್ತಿತಃ ॥೮॥
ಬ್ರಾಹ್ಮಣಾನಾಂ ಮಹಾರಾಜ ಚೇಷ್ಟಾಸಂಸಿದ್ಧಿಕಾರಿಕಾ ।

ತಪಸ್ಸು, ಯಾಗ, ಅಧ್ಯಾತ್ಮವಿದ್ಯೆ , ಭಿಕ್ಷೆ, ಇಂದ್ರಿಯ ನಿಗ್ರಹ, ಧ್ಯಾನ, ಏಕಾಂತವಾಸ, ಸಂತೋಷ, ಶಾಸ್ತ್ರಜ್ಞಾನ, ಶಕ್ತಿಗೆ ತಕ್ಕಂತೆ ದಾನ. ಈ ಎಲ್ಲ ಧರ್ಮಗಳು ಬ್ರಾಹ್ಮಣರಾದವರಿಗೆ ಸಿದ್ಧಿಯನ್ನು ತರುವ ಕಾರ್ಯಗಳಾಗಿವೆ. ಕ್ಷತ್ರಿಯರಿಗಲ್ಲ.

ಕ್ಷತ್ರಿಯಾಣಾಂ ತು ವಕ್ಷ್ಯಾಮಿ ತವಾಪಿ ವಿದಿತಂ ಪುನಃ ॥೯॥

ಕ್ಷತ್ರಿಯರು ಯಾವ ಧರ್ಮವನ್ನು ಆಚರಿಸಬೇಕೆಂಬುದನ್ನು ನಿನಗೆ ತಿಳಿದಿದ್ದರೂ ಮತ್ತೊಮ್ಮೆ ಹೇಳುತ್ತೇನೆ ಕೇಳು.

ಯಜ್ಞೋ ವಿದ್ಯಾ ಸಮುತ್ಥಾನಮಸಂತೋಷಃ ಶ್ರಿಯಂ ಪ್ರತಿ ।
ದಂಡಧಾರಣಮುಗ್ರತ್ವಂ ಪ್ರಜಾನಾಂ ಪರಿಪಾಲನಮ್ ॥೧೦॥

ವೇದಜ್ಞಾನಂ ತಥಾ ಕೃತ್ಸ್ನಂ ತಪಃ ಸುಚರಿತಂ ತಥಾ ।
ದ್ರವಿಣೋಪಾರ್ಜನಂ ಭೂರಿ ಪಾತ್ರೇ ಚ ಪ್ರತಿಪಾದನಮ್ ॥೧೧॥

ಏತಾನಿ ರಾಜ್ಞಾಂ ಕರ್ಮಾಣಿ ಸುಕೃತಾನಿ ವಿಶಾಂಪತೇ ।
ಇಮಂ ಲೋಕಮಮುಂ ಚೈವ ಸಾಧಯಂತೀತಿ ನಃ ಶ್ರುತಮ್ ॥೧೨॥

ಯಜ್ಞ ಮಾಡುವುದು, ವಿದ್ಯಾಭ್ಯಾಸ ಮಾಡುವುದು, ಮಹಾಪ್ರಯತ್ನ, ಐಶ್ವರ್ಯದಲ್ಲಿ ಅತೃಪ್ತಿ, ದಂಡನೀತಿ, ನಿರ್ದಾಕ್ಷಿಣ್ಯ, ಪ್ರಜೆಗಳ ಪರಿಪಾಲನೆ, ವೇದಗಳ ಅರ್ಥವನ್ನು ಸಂಪೂರ್ಣವಾಗಿ ತಿಳಿಯುವುದು, ತಪಸ್ಸು, ಸದಾಚಾರ, ಧನಾರ್ಜನೆ, ಸತ್ಪಾತ್ರರಲ್ಲಿ ದಾನ, ಇವೇ ಮೊದಲಾದ ಸತ್ಕರ್ಮಗಳು ಕ್ಷತ್ರಿಯರಿಗೆ ಅತ್ಯಂತ ಉಚಿತವಾಗಿವೆ. ಈ ಸತ್ಕರ್ಮಾಚರಣೆಗಳನ್ನು ಯಾರು ಆಚರಿಸುತ್ತಾರೋ, ಅಂಥವರು ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ಸುಖವಾಗಿ ಇರುತ್ತಾರೆ. ಇಹಲೋಕದಲ್ಲಿ ಸುಖವಾಗಿದ್ದು, ಅವಸಾನಾಂತರದಲ್ಲಿಯೂ ಪುಣ್ಯಲೋಕಗಳನ್ನು ಪಡೆಯುತ್ತಾರೆ.

ಏಷಾಂ ಜ್ಯಾಯಸ್ತು ಕೌಂತೇಯ ದಂಡಧಾರಣಮುಚ್ಯತೇ ।
ಬಲಂ ಹಿ ಕ್ಷತ್ರಿಯೇ ನಿತ್ಯಂ ಬಲೇ ದಂಡಃ ಸಮಾಹಿತಃ ॥೧೩॥

ಮೇಲೆ ಉಲ್ಲೇಖಿಸಿದ ಕ್ಷತ್ರಿಯರ ಧರ್ಮಗಳಲ್ಲಿ ದಂಡಧಾರಣವೇ ಅತ್ಯಂತ ಶ್ರೇಷ್ಠವಾದ ಧರ್ಮವಾಗಿದೆ ಎಂದು ಶಾಸ್ತ್ರಗಳು ಹೇಳುತ್ತವೆ. ಕ್ಷತ್ರಿಯನಲ್ಲಿ ಬಲವು ನಿತ್ಯವಾಗಿರುತ್ತದೆ. ಕ್ಷತ್ರಿಯನ ಬಲದಲ್ಲಿ ದಂಡವು ಪ್ರತಿಷ್ಠಿತವಾಗಿದೆ. ದಂಡನೀತಿಯನ್ನು ಅನುಸರಿಸಲು ಕ್ಷತ್ರಿಯನಿಗೆ ಬಲವಿರಬೇಕು.

ಏತಾ ವಿದ್ಯಾಃ ಕ್ಷತ್ರಿಯಾಣಾಂ ರಾಜನ್ ಸಂಸಿದ್ಧಿಕಾರಿಕಾಃ ।
ಅಪಿ ಗಾಥಾಮಿಮಾಂ ಚಾಪಿ ಬೃಹಸ್ಪತಿರಗಾಯತ ॥೧೪॥

ಈ ಎಲ್ಲ ಕ್ರಿಯೆಗಳು ಕ್ಷತ್ರಿಯರ ಸಂಸಿದ್ಧಿಗೆ ಕಾರಣಗಳಾಗಿವೆ. ಈ ಕ್ರಿಯೆಗಳ ಆಚರಣೆಯಿಂದ ಕ್ಷತ್ರಿಯರು ಎಲ್ಲಾ ಬಗೆಯ ಸಿದ್ಧಿಯನ್ನು ಹೊಂದುತ್ತಾರೆ. ಈ ವಿಷಯದಲ್ಲಿ ಬೃಹಸ್ಪತಿಯು ಒಂದು ಗಾಥೆಯನ್ನು ಹೇಳಿರುವನು -

ಭೂಮಿರೇತೌ ನಿಗಿರತಿ ಸರ್ಪೋ ಬಿಲಶಯಾನಿವ।
ರಾಜಾನಂ ಚಾವಿರೋದ್ಧಾರಂ ಬ್ರಾಹ್ಮಣಂ ಚಾಪ್ರವಾಸಿನಮ್ ॥೧೫॥

ಸರ್ಪವು ಬಿಲದಲ್ಲಿ ಅಡಗಿದ ಇಲಿಗಳನ್ನು ಹೇಗೆ ನುಂಗುತ್ತದೋ, ಹಾಗೇ ಭೂಮಿಯು ಶತ್ರುವನ್ನು, ಯುದ್ಧಮಾಡದ ಕ್ಷತ್ರಿಯನನ್ನು, ದೇಶಸಂಚಾರ ಮಾಡದ ಬ್ರಾಹ್ಮಣನನ್ನು ನುಂಗಿಬಿಡುತ್ತದೆ.

ಸುದ್ಯುಮ್ನಶ್ಚಾಪಿ ರಾಜರ್ಷಿಃ ಶ್ರೂಯತೇ ದಂಡಧಾರಣಾತ್।
ಪ್ರಾಪ್ತವಾನ್ ಪರಮಾಂ ಸಿದ್ಧಿಂ ದಕ್ಷಃ ಪ್ರಾಚೇತಸೋ ಯಥಾ ॥೧೬॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ
ರಾಜಧರ್ಮೇ ವ್ಯಾಸವಾಕ್ಯೇ ತ್ರಯೋವಿಂಶೋಽಧ್ಯಾಯಃ ॥೨೩॥

ರಾಜರ್ಷಿಯಾದ ಸುದ್ಯುಮ್ನನೂ ಕೂಡ ದಂಡಧಾರಣದಿಂದಲೇ ಪ್ರಚೇತಸ ಪುತ್ರನಾದ ದಕ್ಷನಂತೆ ಉತ್ತಮಸಿದ್ಧಿಯನ್ನು ಹೊಂದಿದನೆಂದು ಕೇಳಿದ್ದೇವೆ.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೨೩ನೆಯ ಅಧ್ಯಾಯವು ಮುಗಿಯಿತು.

* * * * *

೨೪. ಇಪ್ಪತ್ನಾಕನೆಯ ಅಧ್ಯಾಯ

ಯುಧಿಷ್ಠಿರನಿಗೆ ವೇದವ್ಯಾಸದೇವರಿಂದ ರಾಜಧರ್ಮದ ಉಪದೇಶ. ಶಂಖಲಿಖಿತರ ಕಥೆಯ ಉಲ್ಲೇಖ. ಅಪರಾಧಿಗಳಿಗೆ ಶಿಕ್ಷೆ ನೀಡುವುದರಿಂದಲೇ ರಾಜನಿಗೆ ಶುದ್ಧಿ. ಕಳ್ಳತನ ಮಾಡಿದ ಪ್ರೀತಿಯ ತಮ್ಮನಿಗೆ ಶಿಕ್ಷೆ ನೀಡಿದ ಅಣ್ಣನ ಉದಾತ್ತಚಿಂತನೆ. ಕಳ್ಳತನವು ಮಹಾಪಾತಕಗಳಲ್ಲಿ ಒಂದಾಗಿದೆ. ಬ್ರಹ್ಮಹತ್ಯೆಗೆ ಸಮಾನವಾಗಿದೆ. ಬ್ರಾಹ್ಮಣನಾದರೂ ಅಪರಾಧಮಾಡಿದ ಲಿಖಿತನಿಗೆ ಶಿಕ್ಷೆ ನೀಡಿದ್ದರಿಂದಲೇ ಸುದ್ಯುಮ್ನನು ಉದ್ಧಾರವಾದನು. ಅಪರಾಧಮಾಡಿದ ದುರ್ಯೋಧನಾದಿಗಳಿಗೆ ಮರಣಶಿಕ್ಷೆಯನ್ನು ನೀಡಿದ್ದರಿಂದ ನೀನೂ ಸಹ ಉದ್ಧೃತನಾಗಿರುವಿ ಎಂದು ವ್ಯಾಸರ ಉಪದೇಶ.

ಯುಧಿಷ್ಠಿರಃ

ಭಗವನ್ ಕರ್ಮಣಾ ಕೇನ ಸುದ್ಯುಮ್ನೋ ವಸುಧಾಧಿಪಃ।
ಸಂಸಿದ್ಧಿಂ ಪರಮಾಂ ಪ್ರಾಪ್ತಃ ಶ್ರೋತುಮಿಚ್ಛಾಮಿ ತಂ ನೃಪಮ್ ॥೧॥

ಯುಧಿಷ್ಠಿರ - ಯುಧಿಷ್ಠಿರನು ವೇದವ್ಯಾಸದೇವರ ಬಳಿ ಪ್ರಶ್ನಿಸುತ್ತಾನೆ. ಷಡ್ಗುಣೈಶ್ವರ್ಯಪೂರ್ಣರಾದ ಮಹಾತ್ಮರೇ! ರಾಜನಾದ ಸುದ್ಯುಮ್ನನು ಯಾವ ಕ್ರಮದಲ್ಲಿ ಸಿದ್ಧಿಯನ್ನು ಪಡೆದನು. ಮತ್ತು ಶ್ರೇಷ್ಠಸ್ಥಾನವನ್ನು ಹೊಂದಿದನು. ಇದರ ಬಗ್ಗೆ ಕೇಳಿ ತಿಳಿದುಕೊಳ್ಳಲು ಅಪೇಕ್ಷಿಸುತ್ತೇನೆ.

ವ್ಯಾಸಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್।
ಶಂಖಶ್ಚ ಲಿಖಿತಶ್ಚಾಸ್ತಾಂ ಭ್ರಾತರೌ ಸಂಶಿತವ್ರತೌ ॥೨॥

ವೇದವ್ಯಾಸದೇವರು – ಯುಧಿಷ್ಠಿರನೇ! ಸುದ್ಯುಮ್ನನ ವಿಷಯದಲ್ಲಿ ಪುರಾತನವಾದ ಇತಿಹಾಸ ಹೀಗಿದೆ - ಜಿತೇಂದ್ರಿಯರಾದ ಶಂಖ ಹಾಗೂ ಲಿಖಿತರೆಂಬ ಇಬ್ಬರು ಸಹೋದರರಿದ್ದರು.

ತಯೋರಾವಸಥಾವಾಸ್ತಾಂ ರಮಣೀಯೌ ಪೃಥಕ್ ಪೃಥಕ್।
ನಿತ್ಯಪುಷ್ಪಫಲೈರ್ವೃಕ್ಷೈರುಪೇತೌ ಬಾಹುದಾಮನು ॥೩॥

ಇವರಿಬ್ಬರಿಗೆ ಅತ್ಯಂತರಮಣೀಯವಾದ ಪ್ರತ್ಯೇಕ ಪ್ರತ್ಯೇಕವಾದ ಎರಡು ಆಶ್ರಮಗಳಿದ್ದವು. ಅವು ನಿರಂತರವಾಗಿ ಫಲಪುಷ್ಪಗಳಿಂದ ತುಂಬಿರುತ್ತಿದ್ದವು. ವೃಕ್ಷಗಳಿಂದ ನಿಬಿಡವಾಗಿದ್ದವು. ಬಾಹುದಾ ಎಂಬ ನದಿಯ ದಡದಲ್ಲಿ ಈ ಆಶ್ರಮಗಳಿದ್ದವು.

ಟಿಪ್ಪಣಿ- ಬಾಹುದಾಮನು ಇತ್ಯತ್ರ **ಬಾಹುದಾಂ** ನಾಮ ನದೀಮ್।

'ಬಾಹುದಾಮನು' ಎಂಬಲ್ಲಿ **'ಬಾಹುದಾ'** ಎಂಬುದು ನದಿಯ ಹೆಸರು.

ತತಃ ಕದಾಚಿಲ್ಲಿಖಿತಃ ಶಂಖಸ್ಯಾಶ್ರಮಮಾಗಮತ್ ।
ಯದೃಚ್ಛಾಯಾಪಿ ಶಂಖೋಽಥ ನಿಷ್ಕ್ರಾಂತೋಽಭವದಾಶ್ರಮಾತ್॥೪॥

ಒಮ್ಮೆ ಲಿಖಿತನು ಅಣ್ಣನಾದ ಶಂಖನ ಆಶ್ರಮಕ್ಕೆ ಆಗಮಿಸಿದನು. ಯದೃಚ್ಛೆಯಿಂದ ಶಂಖನು ಆಗ ಆಶ್ರಮದಲ್ಲಿ ಇರಲಿಲ್ಲ. ಹೊರಗೆ ಹೋಗಿದ್ದನು.

ಸೋಽಭಿಗಮ್ಯಾಶ್ರಮಂ ಭ್ರಾತುಃ ಶಂಖಸ್ಯ ಲಿಖಿತಸ್ತದಾ ।
ಫಲಾನಿ ಪಾತಯಾಮಾಸ ಸಮ್ಯಕ್ ಪರಿಣತಾನ್ಯುತ ॥೫॥

ಅಣ್ಣನಾದ ಶಂಖನ ಆಶ್ರಮಕ್ಕೆ ಆಗಮಿಸಿದ ಲಿಖಿತನು ಅವನ ತೋಟದಲ್ಲಿದ್ದ ಮರದಲ್ಲಿ ಬಿಟ್ಟ ಕಳಿತವಾದ ಹಣ್ಣುಗಳನ್ನು ಕೆಳಕ್ಕೆ ಬೀಳಿಸಿದನು.

ತಾನ್ಯುಪಾದಾಯ ವಿಸ್ರಬ್ಧೋ ಭಕ್ಷಯಾಮಾಸ ಸ ದ್ವಿಜಃ ।
ತಸ್ಮಿಂಶ್ಚ ಭಕ್ಷಯತ್ಯೇವ ಶಂಖ್ಯೋಽಪ್ಯಾಶ್ರಮಮಾಗಮತ್ ॥೬॥

ಬಿದ್ದ ಹಣ್ಣುಗಳನ್ನು ಆರಿಸಿಕೊಂಡನು. ಒಂದೆಡೆಯಲ್ಲಿ ಕುಳಿತು ಸಂತೋಷದಿಂದ ಎಲ್ಲವನ್ನೂ ಕೂಡ ತಿಂದನು. ಹೀಗೆ ಲಿಖಿತನು ಹಣ್ಣನ್ನು ತಿನ್ನುತ್ತಿರುವಾಗಲೇ ಶಂಖನೂ ಕೂಡ ಆಶ್ರಮಕ್ಕೆ ಆಗಮಿಸಿದನು.

ಭಕ್ಷಯಂತಂ ತು ತಂ ದೃಷ್ಟ್ವಾ ಶಂಖೋ ಭ್ರಾತರಮಬ್ರವೀತ್ ।
ಕುತಃ ಫಲಾನ್ಯವಾಪ್ತಾನಿ ಹೇತುನಾ ಕೇನ ಖಾದಸಿ ॥೭॥

ತೃಪ್ತಿಯಿಂದ ಹಣ್ಣನ್ನು ತಿನ್ನುತ್ತಿರುವ ತಮ್ಮನಾದ ಲಿಖಿತನನ್ನು ನೋಡಿ, ಶಂಖನು ಹೀಗೆ ಪ್ರಶ್ನಿಸಿದನು - ಎಲ್ಲಿಂದ ಈ ಹಣ್ಣುಗಳನ್ನು ಪಡೆದುಕೊಂಡಿ? ಯಾವ ಕಾರಣಕ್ಕಾಗಿ ಈ ಹಣ್ಣುಗಳನ್ನು ತಿನ್ನುತ್ತಿರುವಿ ?

ಸೋಽಬ್ರವೀದ್ ಭ್ರಾತರಂ ಜ್ಯೇಷ್ಠಮುಪಸ್ಪೃಶ್ಯಾಭಿವಾದ್ಯ ಚ ।
ಇತ ಏವ ಗೃಹೀತಾನಿ ಮಯೇತಿ ಪ್ರಹಸನ್ನಿವ ॥೮॥

ಆಗಮಿಸಿದ ಅಣ್ಣನನ್ನು ಕಂಡು ಲಿಖಿತನು ಮೇಲೆದ್ದು ನಿಂತನು. ಅಭಿವಾದನ

ಮಾಡಿದನು. ನಗುತ್ತಲೇ ಸಂತೋಷದಿಂದ ಉತ್ತರಿಸಿದನು - ನಾನು ಈ ಹಣ್ಣುಗಳನ್ನು ನಿನ್ನ ಈ ತೋಟದಲ್ಲಿಯೇ ತೆಗೆದುಕೊಂಡೆನು.

ತಮಬ್ರವೀತ್ ತದಾ ಶಂಖಸ್ತೀವ್ರಕೋಪಸಮನ್ವಿತಃ।
ಸ್ತೇಯಂ ತ್ವಯಾ ಕೃತಮಿದಂ ಫಲಾನ್ಯಾದದತಾ ಸ್ವಯಮ್ ॥೯॥
ಗಚ್ಛ ರಾಜಾನಮಾಸಾದ್ಯ ಸ್ವಕರ್ಮ ಪ್ರಥಯಸ್ವ ವೈ ॥

ತಮ್ಮನ ನಡತೆಯನ್ನು ಕಂಡ ಶಂಖನಿಗೆ ತೀವ್ರವಾಗಿ ಕೋಪವು ಉಂಟಾಯಿತು. ಕೋಪದಿಂದಲೇ ಹೀಗೆ ಮಾತನಾಡಿದನು -ನೀನು ಈ ಹಣ್ಣುಗಳನ್ನು ಕಳ್ಳತನ ಮಾಡಿರುವಿ. ನನ್ನ ಅನುಮತಿಯಿಲ್ಲದೇ ತೆಗೆದುಕೊಂಡಿರುವುದರಿಂದ ಕಳ್ಳತನ ಮಾಡಿದಂತೆ ಆಗಿದೆ. ಕೂಡಲೇ ರಾಜನ ಬಳಿ ತೆರಳು. ನೀನು ಮಾಡಿದ ಕಳ್ಳತನವನ್ನು ಅವನಿಗೆ ಹೀಗೆ ಹೇಳು.

ಆದತ್ತಾದಾನಮೇವೇದಂ ಕೃತಂ ಪಾರ್ಥಿವಸತ್ತಮ।
ಸ್ತೇನಂ ಮಾಂ ತ್ವಂ ವಿದಿತ್ವಾ ಚ ಸ್ವಧರ್ಮಮನುಪಾಲಯ ॥೧೦॥
ಶೀಘ್ರಂ ಧಾರಯ ಚೌರಸ್ಯ ಮಮ ದಂಡಂ ನರಾಧಿಪ ॥

ಪಾರ್ಥಿವೇಂದ್ರನೇ! ನನಗೆ ಹಣ್ಣುಗಳನ್ನು ಯಾರೂ ಕೊಟ್ಟಿರಲಿಲ್ಲ. ಮರದಲ್ಲಿರುವ ಫಲಗಳನ್ನು ಯಾರನ್ನು ಕೇಳದೇ, ಯಾರಿಗೂ ಹೇಳದೆ ನಾನಾಗಿಯೇ ತೆಗೆದುಕೊಂಡು ತಿಂದೆನು. ಆದ್ದರಿಂದ ನಾನು ಕಳ್ಳತನವನ್ನು ಮಾಡಿದಂತಾಯಿತು. ನೀನು ರಾಜಧರ್ಮವನ್ನು ಪರಿಪಾಲನೆ ಮಾಡಬೇಕು. ಕಳ್ಳಕಾಕರಿಗೆ ಶಿಕ್ಷೆಯನ್ನು ನೀಡಬೇಕು. ನಿನ್ನ ರಾಜ್ಯದಲ್ಲಿ ಕಳ್ಳತನ ಮಾಡಿದವನಿಗೆ ಯಾವ ಶಿಕ್ಷೆಯನ್ನು ನೀಡುವಿಯೋ, ಅದನ್ನೇ ನನಗೂ ಕೂಡ ನೀಡು – (ಎಂದು)

ಇತ್ಯುಕ್ತಸ್ತಸ್ಯ ವಚನಾತ್ ಸುದ್ಯುಮ್ನಂ ವಸುಧಾಧಿಪಮ್।
ಅಭ್ಯಗಚ್ಛನ್ಮಹಾಬಾಹೋ ಲಿಖಿತಃ ಸಂಶಿತವ್ರತಃ ॥೧೧॥

ಹೀಗೆ ಅಣ್ಣನು ಹೇಳಿದ ಕೂಡಲೇ ದೃಢವ್ರತನಾದ ಲಿಖಿತನು ಅಣ್ಣನ ಮಾತಿನ ಪ್ರಕಾರ ವಸುಧಾಧಿಪನಾದ ಸುದ್ಯುಮ್ನನ ಬಳಿ ತೆರಳಿದನು.

ಸುದ್ಯುಮ್ನಸ್ತ್ವಂತಪಾಲೇಭ್ಯಃ ಶ್ರುತ್ವಾ ಲಿಖಿತಮಾಗತಮ್ ।
ಅಭ್ಯಗಚ್ಛತ್ ಮಹಾಮಾತ್ಯಃ ಪದ್ಭ್ಯಾಮೇವ ನರೇಶ್ವರಃ ॥೧೨॥

ಲಿಖಿತನು ತನ್ನ ಅರಮನೆಗೆ ಆಗಮಿಸುತ್ತಿದ್ದಾನೆಂದು ರಾಜನು ದ್ವಾರಪಾಲಕರ ಮೂಲಕ ತಿಳಿದುಕೊಂಡನು. ಕೂಡಲೇ ಅಮಾತ್ಯರಿಂದ ಕೂಡಿಕೊಂಡು ಕಾಲ್ನಡಿಗೆಯಲ್ಲಿಯೇ ಲಿಖಿತನನ್ನು ಆದರಪೂರ್ವಕವಾಗಿ ಸ್ವಾಗತ ಮಾಡಿದನು.

ತಮಬ್ರವೀತ್ ಸಮಾಗತ್ಯ ಸ ರಾಜಾ ಬ್ರಹ್ಮವಿತ್ತಮಮ್ ।
ಕಿಮಾಗಮನಮಾಚಕ್ಷ್ವ ಭಗವನ್ ಕೃತಮೇವ ತತ್ ॥೧೩॥

ಬ್ರಹ್ಮಜ್ಞಾನಿಯಾದ ಲಿಖಿತನ ಬಳಿ ತೆರಳಿದ ರಾಜನು ಪ್ರಶ್ನಿಸುತ್ತಾನೆ - ತಾವು ಬಂದ ಕಾರಣವೇನು? ನನ್ನಿಂದ ಆಗಬೇಕಾದ ಕಾರ್ಯ ಯಾವುದಿದೆ?

ಏವಮುಕ್ತಃ ಸ ವಿಪ್ರರ್ಷಿಃ ಸುದ್ಯುಮ್ನಮಿದಮಬ್ರವೀತ್ ।
ಪ್ರತಿಶ್ರುತ್ಯ ಕರಿಷ್ಯೇತಿ ಶ್ರುತ್ವಾ ತತ್ ಕರ್ತುಮರ್ಹಸಿ ॥೧೪॥

ಯುಧಿಷ್ಠಿರನೇ! ರಾಜನು ಹೀಗೆ ಹೇಳಿದ ಮೇಲೆ ವಿಪ್ರರ್ಷಿಯಾದ ಲಿಖಿತನು ಸುದ್ಯುಮ್ನನಿಗೆ ಹೀಗೆ ಹೇಳಿದನು -

ಟಿಪ್ಪಣಿ - ಪ್ರತಿಶ್ರುತ್ಯ ಕರಿಷ್ಯೇತಿ ಇತ್ಯತ್ರ ಅಕರಿಷ್ಯೇ ಇತಿ ಲೃಜ್ ಆತ್ಮನೇಪದಿನಿ ಉತ್ತಮಪುರುಷೈಕವಚನಮ್ ।

'ಪ್ರತಿಶ್ರುತ್ಯ ಕರಿಷ್ಯೇತಿ' ಎಂಬಲ್ಲಿ ಅಕರಿಷ್ಯೇ ಎಂಬುದಾಗಿ ಪದಚ್ಛೇದವನ್ನು ಮಾಡಬೇಕು. ಆತ್ಮನೇಪದದ ಲೃಜ್ ಲಕಾರದ ಉತ್ತಮಪುರುಷದ ಏಕವಚನವಾಗಿದೆ.

ಅನಿಸೃಷ್ಟಾನಿ ಗುರುಣಾ ಫಲಾನಿ ಪುರುಷರ್ಷಭ ।
ಭಕ್ಷಿತಾನಿ ಮಯಾ ರಾಜಂಸ್ತತ್ರ ಮಾಂ ಶಾಧಿ ಮಾಚಿರಮ್ ॥೧೫॥

ಪುರುಷಶ್ರೇಷ್ಠನೇ! ನಾನು ಗುರುಸ್ಥಾನದಲ್ಲಿರುವ ಅಣ್ಣನ ಅನುಮತಿಯನ್ನು ಪಡೆಯದೇ ಅವನ ತೋಟದಲ್ಲಿದ್ದ ಹಣ್ಣುಗಳನ್ನು ತಿಂದುಬಿಟ್ಟೆನು. ಆದ್ದರಿಂದ ಕೂಡಲೇ ಶಿಕ್ಷೆಯನ್ನು ನೀಡು.

ಸುದ್ಯುಮ್ನಃ

ಪ್ರಮಾಣಂ ಚೇನ್ಮತೋ ರಾಜಾ ಭವತೋ ದಂಡಧಾರಣೇ।
ಅನುಜ್ಞಾಯಾಮಪಿ ತಥಾ ಹೇತುಃ ಸ್ಯಾದ್ ಬ್ರಾಹ್ಮಣರ್ಷಭ ॥೧೬॥

ಸುದ್ಯುಮ್ನ – ಬ್ರಾಹ್ಮಣಶ್ರೇಷ್ಠರೇ! ಶಿಕ್ಷೆ ನೀಡುವ ಅಧಿಕಾರದಲ್ಲಿ ರಾಜನು ಪ್ರಮಾಣವೆಂಬುದು ನಿಮಗೆ ಅಭಿಪ್ರಾಯವಾಗಿದ್ದಲ್ಲಿ, ಅದರಂತೆ ನಿಮಗೆ ಅನುಜ್ಞೆ-ಯನ್ನು ಕೊಡುವುದಕ್ಕೂ ಆ ರಾಜನಿಗೆ ಅಧಿಕಾರವಿರುತ್ತದಷ್ಟೇ !

ವಿವರಣೆ - ಸುದ್ಯುಮ್ನನು ಉತ್ತರಿಸುತ್ತಾನೆ - ಬ್ರಾಹ್ಮಣಶ್ರೇಷ್ಠನೇ! ಶಿಕ್ಷೆಯನ್ನು ನೀಡಬೇಕೋ, ಬೇಡವೋ? ಎಂಬ ವಿಷಯದಲ್ಲಿ ರಾಜನ ತೀರ್ಮಾನವೇ ಸರಿಯಾದದ್ದು ಎಂಬ ಅಭಿಪ್ರಾಯವು ನಿಮಗೆ ಇರುವುದಾದಲ್ಲಿ ನಿಮ್ಮನ್ನು ಹಿಂತಿರು-ಗಲು ನಾನು ಅನುಮತಿಯನ್ನು ನೀಡಿದ್ದೇನೆ. ಕ್ಷಮಿಸಿರುವುದರಿಂದ ತಮಗೆ ಯಾವುದೇ ಶಿಕ್ಷೆಯು ಇರುವುದಿಲ್ಲ. ರಾಜನಾದವನಿಗೆ ಶಿಕ್ಷೆ ನೀಡಲು ಅಧಿಕಾರ-ವಿರುವಂತೆ ಕ್ಷಮೆಯನ್ನು ನೀಡಲು ಕೂಡ ಅಧಿಕಾರವಿರುತ್ತದೆ. ಆಯಾ ಅಪರಾಧ-ಗಳಿಗೆ ರಾಜನಾದವನು ಕಣ್ಣುಮುಚ್ಚಿ ಶಿಕ್ಷೆಯನ್ನು ನೀಡುವುದಿಲ್ಲ. ಆಯಾ ವ್ಯಕ್ತಿಗಳ ಸ್ವಭಾವ, ಸಂದರ್ಭಗಳನ್ನೆಲ್ಲಾ ಗಮನಿಸಿ ಅಪರಾಧಕ್ಕೆ ಶಿಕ್ಷೆಯನ್ನು ನೀಡುತ್ತಾನೆ. ತಾವು ಬ್ರಹ್ಮಜ್ಞಾನಿಗಳಾಗಿದ್ದೀರಿ, ಸ್ವೋತ್ತಮರಾಗಿದ್ದೀರಿ, ಮತ್ತು ಅತ್ಯಂತಪ್ರಾಮಾ-ಣಿಕವಾಗಿ ಅಲ್ಪಮಟ್ಟದಲ್ಲಿ ನಡೆದ ಅಪರಾಧಕ್ಕೆ ದೊಡ್ಡಮಟ್ಟದಲ್ಲಿ ಶಿಕ್ಷೆಯನ್ನು ಕೇಳುತ್ತಿದ್ದೀರಿ. ಈ ಎಲ್ಲ ಕಾರಣಗಳಿಂದ ನಾನು ತಮಗೆ ಶಿಕ್ಷೆಯನ್ನು ನೀಡುವುದಿಲ್ಲ ಎಂಬುದಾಗಿ ರಾಜನು ಹೇಳುತ್ತಾನೆ.

ಟಿಪ್ಪಣಿ – ಅನುಜ್ಞಾಯಾಮಪಿ ತಥಾ ಇತ್ಯತ್ರ ಅನುಜ್ಞಾಯಾಂ ಕರ್ತವ್ಯಾಯಾಮಪಿ ತಥಾ ಜ್ಯೇಷ್ಠವದ್ ರಾಜಾಪಿ ಹೇತುಃ ಸ್ಯಾತ್ ಸ ಭವಾನ್ ಅಭ್ಯನುಜ್ಞಾತಃ ಮಯಾ ಅಭ್ಯನುಜ್ಞಾತಃ।

'ಅನುಜ್ಞಾಯಾಮಪಿ ತಥಾ' ಎಂಬಲ್ಲಿ ಜ್ಯೇಷ್ಠನಾದ ತಂದೆ ಮತ್ತು ಅಣ್ಣಂದಿರು ಕರ್ತವ್ಯಾಕರ್ತವ್ಯಗಳನ್ನು ನಿರ್ಧರಿಸುವಂತೆ ರಾಜನಿಗೂ ಕೂಡ ನಿರ್ಧಾರ ಮಾಡುವ ಅಧಿ-ಕಾರವಿದೆ. ಆದ್ದರಿಂದ ಅಣ್ಣನ ಅನುಜ್ಞೆಯನ್ನು ಕೊಡದಿದ್ದರೂ ನಾನು ಅನುಜ್ಞೆಯನ್ನು ಕೊಡುತ್ತಿದ್ದೇನೆ ಎಂದಭಿಪ್ರಾಯ.

ಸ ಭವಾನಭ್ಯನುಜ್ಞಾತಃ ಶುಚಿಕರ್ಮಾ ಮಹಾವ್ರತಃ।
ಬ್ರೂಹಿ ಕಾಮಾನತೋಽನ್ಯಾಂಸ್ತ್ವಂ ಕರಿಷ್ಯಾಮಿ ಹಿ ತೇ ವಚಃ ॥೧೭॥

ತಾವು ಅನೇಕ ಸತ್ಕರ್ಮಗಳನ್ನು ಮಾಡಿ, ಮಹಾವ್ರತವುಳ್ಳವರಾಗಿದ್ದೀರಿ. ನೀವು ಇಲ್ಲಿಂದ ಹಿಂತಿರುಗುವಂತೆ ಅನುಜ್ಞೆಯನ್ನು ನೀಡಿದ್ದೇನೆ. ಮತ್ತೇನಾದರೂ ಅಪೇಕ್ಷೆಗಳು ತಮಗಿದ್ದಲ್ಲಿ ತಿಳಿಸಿರಿ. ಆ ನಿಮ್ಮ ಎಲ್ಲಾ ಕಾಮನೆಗಳನ್ನು ಪೂರೈಸುತ್ತೇನೆ.

ವ್ಯಾಸಃ

ಛಂದ್ಯಮಾನೋಽಪಿ ಬ್ರಹ್ಮರ್ಷಿಃ ಪಾರ್ಥಿವೇನ ಮಹಾತ್ಮನಾ।
ನಾನ್ಯಂ ವೈ ವರಯಾಮಾಸ ತಸ್ಮಾದ್ ದಂಡಾದೃತೇ ವರಮ್ ॥೧೮॥

ವೇದವ್ಯಾಸದೇವರು – ನಿರ್ಬಂಧಪೂರ್ವಕವಾಗಿ ಆ ರಾಜನು ಲಿಖಿತನಿಗೆ ಹೇಳಿದರೂ ಕೂಡ ಆ ಮಹಾತ್ಮನಾದ ಬ್ರಾಹ್ಮಣನು ತನಗೆ ಶಿಕ್ಷೆಯನ್ನು ಬಿಟ್ಟು ಬೇರೆ ಯಾವುದನ್ನೂ ಕೂಡ ಕೇಳಲಿಲ್ಲ.

ತತಃ ಸ ಪೃಥಿವೀಪಾಲೋ ಲಿಖಿತಸ್ಯ ಮಹಾತ್ಮನಃ।
ಕರೌ ಪ್ರಚ್ಛೇದಯಾಮಾಸ ಧೃತದಂಡೋ ಜಗಾಮ ಸಃ ॥೧೯॥

ಪೃಥಿವೀಪಾಲಕನಾದ ರಾಜನು ಬೇರೆ ವಿಧಿಯಿಲ್ಲದೇ ಆ ಲಿಖಿತನ ಎರಡು ಕೈಗಳನ್ನು ಕತ್ತರಿಸುವಂತೆ ಭಟರಿಗೆ ಆಜ್ಞೆಯನ್ನು ಮಾಡಿದನು. ಶಿಕ್ಷೆಯನ್ನು ಸ್ವೀಕರಿಸಿದ ಲಿಖಿತನು ಅಣ್ಣನ ಬಳಿ ಹೊರಟನು.

ಸ ಗತ್ವಾ ಭ್ರಾತರಂ ಶಂಖಮಾರ್ತರೂಪೋಽಬ್ರವೀದಿದಮ್।
ಧೃತದಂಡಸ್ಯ ದುರ್ಬುದ್ಧೇರ್ಭಗವನ್ ಕ್ಷಂತುಮರ್ಹಸಿ ॥೨೦॥

ಅಣ್ಣನಾದ ಶಂಖನ ಬಳಿ ತೆರಳಿ ಅತ್ಯಂತ ದುಃಖದಿಂದ ಹೀಗೆ ಹೇಳಿದನು- ರಾಜನಿಂದ ಶಿಕ್ಷೆಯನ್ನು ಪಡೆದುಕೊಂಡಿದ್ದೇನೆ. ಭಗವನ್! ದುರ್ಬುದ್ಧಿಯಾದ ನನ್ನನ್ನು ಕ್ಷಮಿಸಿರಿ.

ಟಿಪ್ಪಣಿ- ಇಂದಿನ ಕಾಲದಲ್ಲಿ ಪ್ರತಿಯೊಬ್ಬ ಸಾತ್ವಿಕರು ಈ ಕಥೆಯನ್ನು ಅರ್ಥಮಾಡಿಕೊಂಡು ಜೀವನವನ್ನು ನಡೆಸಬೇಕು. ಮತ್ತೊಬ್ಬರ ಸ್ವತ್ತನ್ನು ಅಪಹಾರ ಮಾಡಿದರೆ, ಅವರ ಅನುಮತಿಯನ್ನು ಪಡೆಯದೇ ಸ್ವೀಕಾರ ಮಾಡಿದರೆ, ಇಂಥ ಶಿಕ್ಷೆಯನ್ನು ಅನುಭವಿಸಲೇ ಬೇಕು. ಇಲ್ಲದಿದ್ದರೆ ಜನ್ಮಾಂತರದ ತನಕ ಪಾಪರೂಪದಲ್ಲಿ ನಮ್ಮನ್ನೇ ಅದು ಕಾಡುತ್ತದೆ. ಶಿಕ್ಷೆಯನ್ನು ಅನುಭವಿಸುವ ಮೂಲಕ ತತ್‌ಕ್ಷಣದಲ್ಲಿಯೇ ಆ ಪಾಪವನ್ನು ಪರಿಹಾರ ಮಾಡಿಕೊಳ್ಳಬೇಕು. ಸ್ನೇಹಿತರು, ತಂದೆ, ತಾಯಿ, ಅಣ್ಣ, ತಮ್ಮ ಮೊದಲಾದ ತೀರಾ ಹತ್ತಿರದ ಸಂಬಂಧಿಕರ ಪದಾರ್ಥಗಳನ್ನೂ ಕೂಡ ಅವರ ಅನುಮತಿಯಿಲ್ಲದೇ ಸ್ವೀಕರಿಸಿದರೆ ಅದು ಕಳ್ಳತನವೇ ಆಗುತ್ತದೆ. ಸಚ್ಚಾರಿತ್ರ್ಯದಿಂದ ಜೀವನು ಉಜ್ವಲವಾಗಬೇಕೆಂದರೆ ಪ್ರಾಮಾಣಿತಕನ ಅತ್ಯಂತ ಮುಖ್ಯವಾಗಿರುತ್ತದೆ. ಕೆಲವರಿಗೆ ಅನ್ಯಾಯ ಮಾಡಿದವರಿಗೆ ಮೋಸ ಮಾಡಬಹುದೆಂಬ ಭಾವನೆಯಿರುತ್ತದೆ. ಇನ್ನೂ ಕೆಲವರಿಗೆ ಸರ್ಕಾರಕ್ಕೆ ಮೋಸ ಮಾಡಿದರೆ ಪಾಪ ಬರುವುದಿಲ್ಲವೆಂಬ ಭಾವನೆಯಿರುತ್ತದೆ. ಮತ್ತೊಬ್ಬ ಕಳ್ಳತನ ಮಾಡಿದ್ದನ್ನು ತಾನು ಅನುಭವಿಸಬಹುದೆಂಬ ಭಾವನೆಯಿರುತ್ತದೆ. ಈ ಎಲ್ಲಾ ಭಾವನೆಯನ್ನು ಹೊಂದಿರುವವರಿಗೆ ಈ ಶಂಖಲಿಖಿತರ ಕಥೆಯು ಆತ್ಮವಿಮರ್ಶೆಗೆ ಅವಕಾಶ ಮಾಡಿಕೊಡುತ್ತದೆ.

ಶಂಖಃ

ನ ಕುಪ್ಯೇ ತವ ಧರ್ಮಜ್ಞ ನಚ ದೂಷಯಸೇ ಮಮ।
ಸುನಿರ್ಮಲಂ ಕುಲಂ ಬ್ರಹ್ಮನ್ನಸ್ಮಿನ್ ಜಗತಿ ವಿಶ್ರುತಮ್ ॥೨೧॥
ಧರ್ಮಸ್ತು ತೇ ವ್ಯತಿಕ್ರಾಂತಸ್ತತಸ್ತೇ ನಿಷ್ಕೃತಿಃ ಕೃತಾ ॥

ಶಂಖ – ಧರ್ಮವನ್ನು ಅರಿತ ಅನುಜನೇ ! ನಿಜವಾಗಿಯೂ ನಿನ್ನ ಬಗ್ಗೆ ನನಗೆ ಕೋಪವು ಬಂದಿರುವುದಿಲ್ಲ. ನಿನ್ನನ್ನು ದೂಷಿಸುವುದೂ ಇಲ್ಲ. ನನಗೆ ಯಾವುದೇ ಅಪರಾಧವನ್ನು ನೀನು ಮಾಡಿರುವುದಿಲ್ಲ. ಆದರೆ ನಮ್ಮ ವಂಶವು ಅತ್ಯಂತ ನಿರ್ಮಲವಾಗಿದೆ. ಕಳಂಕರಹಿತವಾಗಿದೆ. ಈ ಜಗತ್ತಿನಲ್ಲಿ ಒಳ್ಳೆಯ ಪ್ರಸಿದ್ಧಿಯನ್ನು ಪಡೆದಿದೆ. ಈ ವಂಶದಲ್ಲಿ ಹುಟ್ಟಿದ ನಿನ್ನಿಂದ ಅಲ್ಪಮಟ್ಟದಲ್ಲಿಯೂ ಧರ್ಮದ ಅತಿಕ್ರಮಣ ಆಗಬಾರದು. ಆದ್ದರಿಂದ ನಿನಗೆ ಈ ಬಗ್ಗೆಯ ಪ್ರಾಯಶ್ಚಿತ್ತವನ್ನು ತಿಳಿಸಿದೆನು.

ಸ ಭವಾನಭ್ಯನುಜ್ಞಾತಃ ಶುಚಿಕರ್ಮಾ ಮಹಾವ್ರತಃ।
ಬ್ರೂಹಿ ಕಾಮಾನತೋಽನ್ಯಾಂಸ್ತ್ವಂ ಕರಿಷ್ಯಾಮಿ ಹಿ ತೇ ವಚಃ ॥೧೭॥

ತಾವು ಅನೇಕ ಸತ್ಕರ್ಮಗಳನ್ನು ಮಾಡಿ, ಮಹಾವ್ರತವುಳ್ಳವರಾಗಿದ್ದೀರಿ. ನೀವು ಇಲ್ಲಿಂದ ಹಿಂತಿರುಗುವಂತೆ ಅನುಜ್ಞೆಯನ್ನು ನೀಡಿದ್ದೇನೆ. ಮತ್ತೇನಾದರೂ ಅಪೇಕ್ಷೆಗಳು ತಮಗಿದ್ದಲ್ಲಿ ತಿಳಿಸಿರಿ. ಆ ನಿಮ್ಮ ಎಲ್ಲಾ ಕಾಮನೆಗಳನ್ನು ಪೂರೈಸುತ್ತೇನೆ.

ವ್ಯಾಸಃ

ಛಂದ್ಯಮಾನೋಽಪಿ ಬ್ರಹ್ಮರ್ಷಿಃ ಪಾರ್ಥಿವೇನ ಮಹಾತ್ಮನಾ।
ನಾನ್ಯಂ ವೈ ವರಯಾಮಾಸ ತಸ್ಮಾದ್ ದಂಡಾದೃತೇ ವರಮ್ ॥೧೮॥

ವೇದವ್ಯಾಸದೇವರು – ನಿರ್ಬಂಧಪೂರ್ವಕವಾಗಿ ಆ ರಾಜನು ಲಿಖಿತನಿಗೆ ಹೇಳಿದರೂ ಕೂಡ ಆ ಮಹಾತ್ಮನಾದ ಬ್ರಾಹ್ಮಣನು ತನಗೆ ಶಿಕ್ಷೆಯನ್ನು ಬಿಟ್ಟು ಬೇರೆ ಯಾವುದನ್ನೂ ಕೂಡ ಕೇಳಲಿಲ್ಲ.

ತತಃ ಸ ಪೃಥಿವೀಪಾಲೋ ಲಿಖಿತಸ್ಯ ಮಹಾತ್ಮನಃ।
ಕರೌ ಪ್ರಚ್ಛೇದಯಾಮಾಸ ಧೃತದಂಡೋ ಜಗಾಮ ಸಃ ॥೧೯॥

ಪೃಥಿವೀಪಾಲಕನಾದ ರಾಜನು ಬೇರೆ ವಿಧಿಯಿಲ್ಲದೇ ಆ ಲಿಖಿತನ ಎರಡು ಕೈಗಳನ್ನು ಕತ್ತರಿಸುವಂತೆ ಭಟರಿಗೆ ಆಜ್ಞೆಯನ್ನು ಮಾಡಿದನು. ಶಿಕ್ಷೆಯನ್ನು ಸ್ವೀಕರಿಸಿದ ಲಿಖಿತನು ಅಣ್ಣನ ಬಳಿ ಹೊರಟನು.

ಸ ಗತ್ವಾ ಭ್ರಾತರಂ ಶಂಖಮಾರ್ತರೂಪೋಽಬ್ರವೀದಿದಮ್।
ಧೃತದಂಡಸ್ಯ ದುರ್ಬುದ್ಧೇರ್ಭಗವನ್ ಕ್ಷಂತುಮರ್ಹಸಿ ॥೨೦॥

ಅಣ್ಣನಾದ ಶಂಖನ ಬಳಿ ತೆರಳಿ ಅತ್ಯಂತ ದುಃಖದಿಂದ ಹೀಗೆ ಹೇಳಿದನು- ರಾಜನಿಂದ ಶಿಕ್ಷೆಯನ್ನು ಪಡೆದುಕೊಂಡಿದ್ದೇನೆ. ಭಗವನ್! ದುರ್ಬುದ್ಧಿಯಾದ ನನ್ನನ್ನು ಕ್ಷಮಿಸಿರಿ.

ಟಿಪ್ಪಣಿ- ಇಂದಿನ ಕಾಲದಲ್ಲಿ ಪ್ರತಿಯೊಬ್ಬ ಸಾತ್ವಿಕರು ಈ ಕಥೆಯನ್ನು ಅರ್ಥಮಾಡಿಕೊಂಡು ಜೀವನವನ್ನು ನಡೆಸಬೇಕು. ಮತ್ತೊಬ್ಬರ ಸ್ವತ್ತನ್ನು ಅಪಹಾರ ಮಾಡಿದರೆ, ಅವರ ಅನುಮತಿಯನ್ನು ಪಡೆಯದೇ ಸ್ವೀಕಾರ ಮಾಡಿದರೆ, ಇಂಥ ಶಿಕ್ಷೆಯನ್ನು ಅನುಭವಿಸಲೇ ಬೇಕು. ಇಲ್ಲದಿದ್ದರೆ ಜನ್ಮಾಂತರದ ತನಕ ಪಾಪರೂಪದಲ್ಲಿ ನಮ್ಮನ್ನೇ ಅದು ಕಾಡುತ್ತದೆ. ಶಿಕ್ಷೆಯನ್ನು ಅನುಭವಿಸುವ ಮೂಲಕ ತತ್‌ಕ್ಷಣದಲ್ಲಿಯೇ ಆ ಪಾಪವನ್ನು ಪರಿಹಾರ ಮಾಡಿಕೊಳ್ಳಬೇಕು. ಸ್ನೇಹಿತರು, ತಂದೆ, ತಾಯಿ, ಅಣ್ಣ, ತಮ್ಮ ಮೊದಲಾದ ತೀರಾ ಹತ್ತಿರದ ಸಂಬಂಧಿಕರ ಪದಾರ್ಥಗಳನ್ನೂ ಕೂಡ ಅವರ ಅನುಮತಿಯಿಲ್ಲದೇ ಸ್ವೀಕರಿಸಿದರೆ ಅದು ಕಳ್ಳತನವೇ ಆಗುತ್ತದೆ. ಸಚ್ಚಾರಿತ್ರ್ಯದಿಂದ ಜೀವನು ಉಜ್ವಲವಾಗಬೇಕೆಂದರೆ ಪ್ರಾಮಾಣಿತಕನ ಅತ್ಯಂತ ಮುಖ್ಯವಾಗಿರುತ್ತದೆ. ಕೆಲವರಿಗೆ ಅನ್ಯಾಯ ಮಾಡಿದವರಿಗೆ ಮೋಸ ಮಾಡಬಹುದೆಂಬ ಭಾವನೆಯಿರುತ್ತದೆ. ಇನ್ನೂ ಕೆಲವರಿಗೆ ಸರ್ಕಾರಕ್ಕೆ ಮೋಸ ಮಾಡಿದರೆ ಪಾಪ ಬರುವುದಿಲ್ಲವೆಂಬ ಭಾವನೆಯಿರುತ್ತದೆ. ಮತ್ತೊಬ್ಬ ಕಳ್ಳತನ ಮಾಡಿದ್ದನ್ನು ತಾನು ಅನುಭವಿಸಬಹುದೆಂಬ ಭಾವನೆಯಿರುತ್ತದೆ. ಈ ಎಲ್ಲಾ ಭಾವನೆಯನ್ನು ಹೊಂದಿರುವವರಿಗೆ ಈ ಶಂಖಲಿಖಿತರ ಕಥೆಯು ಆತ್ಮವಿಮರ್ಶೆಗೆ ಅವಕಾಶ ಮಾಡಿಕೊಡುತ್ತದೆ.

ಶಂಖಃ

ನ ಕುಪ್ಯೇ ತವ ಧರ್ಮಜ್ಞ ನಚ ದೂಷಯಸೇ ಮಮ।
ಸುನಿರ್ಮಲಂ ಕುಲಂ ಬ್ರಹ್ಮನ್ನಸ್ಮಿನ್ ಜಗತಿ ವಿಶ್ರುತಮ್ ॥೨೧॥
ಧರ್ಮಸ್ತು ತೇ ವ್ಯತಿಕ್ರಾಂತಸ್ತತಸ್ತೇ ನಿಷ್ಕೃತಿಃ ಕೃತಾ ॥

ಶಂಖ – ಧರ್ಮವನ್ನು ಅರಿತ ಅನುಜನೇ ! ನಿಜವಾಗಿಯೂ ನಿನ್ನ ಬಗ್ಗೆ ನನಗೆ ಕೋಪವು ಬಂದಿರುವುದಿಲ್ಲ. ನಿನ್ನನ್ನು ದೂಷಿಸುವುದೂ ಇಲ್ಲ. ನನಗೆ ಯಾವುದೇ ಅಪರಾಧವನ್ನು ನೀನು ಮಾಡಿರುವುದಿಲ್ಲ. ಆದರೆ ನಮ್ಮ ವಂಶವು ಅತ್ಯಂತ ನಿರ್ಮಲವಾಗಿದೆ. ಕಳಂಕರಹಿತವಾಗಿದೆ. ಈ ಜಗತ್ತಿನಲ್ಲಿ ಒಳ್ಳೆಯ ಪ್ರಸಿದ್ಧಿಯನ್ನು ಪಡೆದಿದೆ. ಈ ವಂಶದಲ್ಲಿ ಹುಟ್ಟಿದ ನಿನ್ನಿಂದ ಅಲ್ಪಮಟ್ಟದಲ್ಲಿಯೂ ಧರ್ಮದ ಅತಿಕ್ರಮಣ ಆಗಬಾರದು. ಆದ್ದರಿಂದ ನಿನಗೆ ಈ ಬಗ್ಗೆಯ ಪ್ರಾಯಶ್ಚಿತ್ತವನ್ನು ತಿಳಿಸಿದೆನು.

ಸ ಗತ್ವಾ ಬಾಹುದಾಂ ಶೀಘ್ರಂ ತರ್ಪಯಸ್ವ ಯಥಾವಿಧಿ।
ದೇವಾನ್ ಪಿತೄನೃಷೀಂಶ್ಚೈವ ಮಾ ಚಾಧರ್ಮೇ ಮನಃ ಕೃಥಾಃ ॥೨೨॥

ಈಗ ಶೀಘ್ರದಲ್ಲಿ ಬಾಹುದಾ ನದಿಗೆ ತೆರಳು. ಅಲ್ಲಿ ವಿಧಿಪ್ರಕಾರವಾಗಿ ದೇವತೆಗಳಿಗೆ, ಋಷಿಗಳಿಗೆ, ಪಿತೃಗಳಿಗೆ ತರ್ಪಣವನ್ನು ನೀಡಿ ಅವರನ್ನು ತೃಪ್ತಿಪಡಿಸಿ ಅವರ ಅನುಗ್ರಹವನ್ನು ಪ್ರಾರ್ಥಿಸು. ಇನ್ನು ಮುಂದೆ ಯಾವುದೇ ಕ್ಷಣದಲ್ಲಿ ಇಂಥ ಅಧರ್ಮದ ಕಾರ್ಯದಲ್ಲಿ ಪ್ರವೃತ್ತಿ ಮಾಡಬೇಡ.

ಬ್ರಹ್ಮಹತ್ಯಾಂ ಸುರಾಪಾನಂ ಸ್ತೇಯಂ ಗುರ್ವಂಗನಾಗಮಮ್।
ಮಹಾಂತಿ ಪಾತಕನ್ಯಾಹುಃ ಸಯೋಗಂ ಚೈವ ತೈಃ ಸಹ ॥೨೩॥

ಬ್ರಹ್ಮಹತ್ಯೆ, ಸುರಾಪಾನ, ಕಳ್ಳತನ, ಗುರುದಾರಪರಿಗ್ರಹ ಇವುಗಳು ಮಹಾಪಾತಕಗಳು ಯಾರು ಮಾಡುತ್ತಾರೋ, ಅವರ ಸಹವಾಸವನ್ನೇ ಮಾಡಬಾರದೆಂದು ವಿದ್ವಾಂಸರು ಹೇಳುತ್ತಾರೆ.

ನ ಸ್ತೇಯಸದೃಶಂ ಬ್ರಹ್ಮನ್ ಮಹಾಪಾತಕಮಸ್ತ್ಯುತ।
ಜಗತ್ಯಸ್ಮಿನ್ ಮಹಾಭಾಗ ಬ್ರಹ್ಮಹತ್ಯಾಸಮೋ ಹಿ ತತ್ ॥೨೪॥

ಕಳ್ಳತನವು ಕೂಡ ಮಹಾಪಾತಕವೇ ಆಗಿದೆ. ಇದಕ್ಕೆ ಸದೃಶವಾದ ಮಹಾಪಾತಕ ಬೇರೊಂದು ಇರುವುದಿಲ್ಲ. ಬ್ರಹ್ಮಹತ್ಯೆಗೆ ಸಮಾನವಾದ ಮತ್ತೊಂದು ಪಾಪವು ಈ ಜಗತ್ತಿನಲ್ಲಿ ಇರುವುದಿಲ್ಲ.

ಸರ್ವಪಾತಕಿನಾ ಬ್ರಹ್ಮನ್ ದಂಡಃ ಶಾರೀರ ಉಚ್ಯತೇ।
ತಸ್ಕರಸ್ಯ ವಿಶೇಷೇಣ ನಾನ್ಯೋ ದಂಡೋ ವಿಧೀಯತೇ ॥೨೫॥

ಬೇರೆ ಅಪರಾಧವನ್ನು ಮಾಡಿದವರಿಗೆ ಕೆಲವೊಮ್ಮೆ ಮಾತ್ರ ಶಾರೀರಿಕ ದಂಡವನ್ನು ವಿಧಿಸುತ್ತಾರೆ. ಆದರೆ ಕಳ್ಳತನ ಮಾಡಿದವರಿಗೆ ಶಾರೀರಿಕ ದಂಡವೇ ಹೊರತು ಮತ್ತೊಂದು ದಂಡವು ಇರುವುದಿಲ್ಲ.

ಬ್ರಾಹ್ಮಣಃ ಕ್ಷತ್ರಿಯೋ ವಾಪಿ ವೈಶ್ಯಃ ಶೂದ್ರೋಽಥ ವಾ ದ್ವಿಜ।
ಸರ್ವೇ ಕಾಮಕೃತೇ ಪಾಪೇ ಹಂತವ್ಯಾ ನ ವಿಚಾರಣಾ ॥೨೬॥

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಅಥವಾ ಶೂದ್ರರೆಂಬ ನಾಲ್ಕು ವರ್ಣದವರಲ್ಲಿ ಯಾರೇ ಆದರೂ ಉದ್ದೇಶಪೂರ್ವಕವಾಗಿ ಪಾಪವನ್ನು ಮಾಡಿದರೆ ಅವರಿಗೆ ಶಿಕ್ಷೆಯನ್ನು ನೀಡಲೇಬೇಕು. ಈ ವಿಷಯದಲ್ಲಿ ಸಂಶಯವಿಲ್ಲ.

ರಾಜಭಿರ್ಧೃತದಂಡಾ ವೈ ಕೃತ್ವಾ ಪಾಪಾನಿ ಮಾನವಾಃ।
ನಿರ್ಮಲಾಃ ಸ್ವರ್ಗಮಾಯಾಂತಿ ಸಂತಃ ಸುಕೃತಿನೋ ಯಥಾ।
ಉದ್ಧೃತಂ ನ ಕುಲಂ ಬ್ರಹ್ಮನ್ ರಾಜ್ಞಾ ದಂಡೇ ಧೃತೇ ತ್ವಯಿ ॥೨೭॥

ಮನುಷ್ಯರು ಪಾಪಗಳನ್ನು ಮಾಡಿದಾಗ ರಾಜನಿಂದ ಶಿಕ್ಷೆಯನ್ನು ಸ್ವೀಕಾರ ಮಾಡಬೇಕು. ಆಗಷ್ಟೇ ಅವರು ಮಾಡಿದ ಪಾಪಗಳು ಪರಿಹಾರವಾಗಿ ನಿರ್ಮಲರಾಗುತ್ತಾರೆ. ಪುಣ್ಯಾತ್ಮರಂತೆ ಸ್ವರ್ಗಕ್ಕೆ ತೆರಳುತ್ತಾರೆ. ನೀನೂ ಸಹ ರಾಜನಿಂದ ಶಿಕ್ಷೆಯನ್ನು ಪಡೆದು ಶುದ್ಧನಾಗಿರುವಿ.

ಟಿಪ್ಪಣಿ - ನಮಗೆ ಅತ್ಯಂತ ಆತ್ಮೀಯರು ಅಪರಾಧವನ್ನು ಮಾಡಿದಾಗ ಅವರಿಗೆ ಶಿಕ್ಷೆಯನ್ನು ಅನುಭವಿಸುವಂತೆ ಉಪದೇಶಿಸಬೇಕು. ಒಂದು ವೇಳೆ ಸಮಾಧಾನಗೊಳಿಸಿ ನೀನು ಸುಖವಾಗಿರು ಎಂದು ಹೇಳಿದರೆ ಅವನು ಮಾಡಿದ ಪಾಪ ಹಾಗೆಯೇ ಉಳಿಯುತ್ತದೆ. ಪಾಪಕರ್ಮಕ್ಕೆ ಪ್ರೇರಣೆ ಮಾಡಿದಂತಾಗುತ್ತದೆ. ನಿಜವಾದ ಸ್ನೇಹವಿರುವವನು ಅಧರ್ಮಮಾರ್ಗದಲ್ಲಿ ಹೋಗದಂತೆ, ಅಕಸ್ಮಾತ್ ಹೋದಾಗ ಅದರಿಂದ ಪಾಪವಿಮುಕ್ತನಾಗುವಂತೆ ಪ್ರೇರಣೆ ಮಾಡಬೇಕು. ಹೆಂಡತಿ ಮಕ್ಕಳು ಯಾರೇ ಅಪರಾಧ ಮಾಡಿದರೂ, ಅವರ ಅಪರಾಧಕ್ಕೆ ಶಿಕ್ಷೆ ನೀಡಲೇಬೇಕು.

ವ್ಯಾಸಃ

ತಸ್ಯ ತದ್ ವಚನಂ ಶ್ರುತ್ವಾ ಶಂಖಸ್ಯ ಲಿಖಿತಸ್ತದಾ।
ಅವಗಾಹ್ಯಾಪಗಾಂ ಪುಣ್ಯಾಮುದಕಾರ್ಥಂ ಪ್ರಚಕ್ರಮೇ ॥೨೮॥

ವೇದವ್ಯಾಸದೇವರು – ಆಗ ಅಣ್ಣನಾದ ಶಂಖನ ಮಾತುಗಳನ್ನು ಕೇಳಿ, ಲಿಖಿತನು ಕೂಡಲೇ ಬಾಹುದಾನದಿಗೆ ಸ್ನಾನ ಮಾಡುವುದಕ್ಕಾಗಿ ತೆರಳಿದನು. ಆ ನದಿಯಲ್ಲಿ ಸ್ನಾನ ಮಾಡಿ, ತರ್ಪಣವನ್ನು ನೀಡುವುದಕ್ಕಾಗಿ ಪ್ರಯತ್ನ ಪಟ್ಟನು.

ಪ್ರಾದುರಾಸ್ತಾಂ ತತಸ್ತಸ್ಯ ಕರೌ ಜಲಸಜಸನ್ನಿಭೌ ।
ತತಃ ಸ ವಿಸ್ಮಿತೋ ಭ್ರಾತುರ್ದರ್ಶಯಾಮಾಸ ತೌ ಕರೌ ॥೨೯॥

ಆಶ್ಚರ್ಯವೆಂದರೆ ಅವನಿಗೆ ಎರಡು ಕೈಗಳು ಪ್ರಾದುರ್ಭವಿಸಿದವು. ಆಶ್ಚರ್ಯದಿಂದ ಆ ಲಿಖಿತನು ತರ್ಪಣವನ್ನು ನೀಡಿದನು. ಅಣ್ಣನಾದ ಶಂಖನ ಬಳಿ ಬಂದು ತನಗೆ ಬಂದ ಎರಡು ಕೈಗಳನ್ನು ತೋರಿಸಿದನು.

ತತಸ್ತಮಬ್ರವೀಚ್ಛಂಖಸ್ತಪಸೇದಂ ಕೃತಂ ಮಯಾ ।
ಮಾ ಚ ತೇಽತ್ರ ವಿಶಂಕಾಭೂದ್ ದೈವಮೇವ ವಿಧೀಯತೇ ॥೩೦॥

ಅನುಜನೇ! ನನ್ನ ತಪೋಮಹಿಮೆಯಿಂದ ಈ ಕೆಲಸವನ್ನು ಮಾಡಿರುವೆನು. ಈ ವಿಷಯದಲ್ಲಿ ಸಂಶಯ ಪಡಬೇಡ. ಎಲ್ಲವೂ ಕೂಡ ಭಗವಂತನ ಅನುಗ್ರಹದಿಂದ ನಡೆದಿದೆ ಎಂದನು.

ಲಿಖಿತಃ

ಕಿನ್ನು ನಾಹಂ ತ್ವಯಾ ಪೂತಃ ಪೂರ್ವಮೇವ ಮಹಾದ್ಯುತೇ ।
ಯಸ್ಯ ತೇ ತಪಸೋ ವೀರ್ಯಮೀದೃಶಂ ದ್ವಿಜಸತ್ತಮ ॥೩೧॥

ಲಿಖಿತ – ಮಹಾತೇಜಸ್ವಿಯೇ! ನಿನ್ನ ತಪಸ್ಸಿಗೆ ಇಷ್ಟು ಶಕ್ತಿಯಿರುವುದಾಗಿದ್ದಲ್ಲಿ ಮೊದಲೇ ನನ್ನನ್ನು ಪರಿಶುದ್ಧನನ್ನಾಗಿ ಮಾಡಬಹುದಿತ್ತಲ್ಲವೇ? ಹಾಗೇಕೆ ಮಾಡಲಿಲ್ಲ?

ಟಿಪ್ಪಣಿ – ಕಿನ್ನು ನಾಹಂ ತ್ವಯಾ ಪೂತ ಇತ್ಯತ್ರ ಅಹಂ ತ್ವಯೈವ ಹಸ್ತಚ್ಛೇದಂ ಕೃತ್ವಾ ಪೂರ್ವಮೇವ ಕಿನ್ನು ನ ಪೂತಃ।

'ಕಿನ್ನು ನಾಹಂ ತ್ವಯಾ ಪೂತಃ' ಎಂಬಲ್ಲಿ ನೀನೇ ನನ್ನ ಕೈಗಳನ್ನು ಕತ್ತರಿಸಬಹುದಿತ್ತು.

ಆಗ ಮತ್ತಷ್ಟು ಬೇಗ ನಾನು ಪಾಪದಿಂದ ಮುಕ್ತನಾಗುತ್ತಿದ್ದೆನು. ನೀನೇಕೆ ರಾಜನ ಬಳಿ ಕಳುಹಿಸಿ ಪಾಪವನ್ನು ಪರಿಹರಿಸಿಕೊಳ್ಳಲು ತಡಮಾಡಿಸಿದೆ.

ಶಂಖಃ

ಏವಮೇತನ್ಮಯಾ ಕಾರ್ಯಂ ನಾಹಂ ದಂಡಧರಸ್ತವ।
ಸ ಚ ಪೂತೋ ನರಪತಿಸ್ತ್ವಂ ಚಾಪಿ ಪಿತೃಭಿಃ ಸಹ ॥೩೨॥

ಶಂಖ – ಅನುಜನೇ! ನನ್ನಿಂದ ಪಾಪಪರಿಹಾರ ಮಾಡಲು ಸಾಧ್ಯವಿತ್ತು. ಆದರೆ ರಾಜದಂಡದಿಂದಲೇ ನಿನಗೆ ಪ್ರಾಯಶ್ಚಿತ್ತವಾಗಬೇಕು. ಇದು ರಾಜನ ಕರ್ತವ್ಯ. ಹೀಗೆಯೇ ರಾಜನಿಂದ ಶಿಕ್ಷೆ ಅನುಭವಿಸುವುದರಿಂದ ಪಿತೃಗಳ ಜೊತೆ ನೀನೂ ಸಹ ಪವಿತ್ರನಾಗುವಿ. ದಂಡನೀತಿಯನ್ನು ಅನುಷ್ಠಾನ ಮಾಡಿದ್ದರಿಂದ ರಾಜನೂ ಕೂಡ ಪವಿತ್ರನಾಗುತ್ತಾನೆ.

ವ್ಯಾಸಃ

ಸ ರಾಜಾ ಪಾಂಡವಶ್ರೇಷ್ಠ ಶ್ರೇಷ್ಠೋ ವೈ ತೇನ ಕರ್ಮಣಾ।
ಪ್ರಾಪ್ತವಾನ್ ಪರಮಾಂ ಸಿದ್ಧಿಂ ದಕ್ಷಃ ಪ್ರಾಚೇತಸೋ ಯಥಾ ॥೩೩॥

ವೇದವ್ಯಾಸದೇವರು – ಧರ್ಮರಾಜನೇ! ಹೇಗೆ ದಕ್ಷಪ್ರಜಾಪತಿಯು ಉತ್ತಮ ಸಿದ್ಧಿಯನ್ನು ಪಡೆದನೋ, ಅದರಂತೆ ರಾಜನಾದ ಸುದ್ಯುಮ್ನನು ದಂಡ-ಪ್ರಯೋಗವನ್ನು ಮಾಡಿದ್ದರಿಂದ ಉತ್ತಮ ಸಿದ್ಧಿಯನ್ನು ಪಡೆದನು.

ಟಿಪ್ಪಣಿ - ಪ್ರಜೆಗಳು ಅಪರಾಧ ಮಾಡಿದಾಗ, ರಾಜನು ಶಿಕ್ಷೆಯನ್ನು ನೀಡಲೇ ಬೇಕು. ಇಲ್ಲದಿದ್ದರೆ ಅವನು ಅಪವಿತ್ರನಾಗುತ್ತಾನೆ. ಲಿಖಿತನು ಮಾಡಿದ ಅಪರಾಧ-ವನ್ನು ಕ್ಷಮಿಸದೇ ಶಿಕ್ಷೆಯನ್ನು ನೀಡಿದ್ದರಿಂದ ರಾಜನು ಉದ್ಧಾರನಾಗಿದ್ದಾನೆ. ಅದರಂತೆ ನೀನೂ ಕೂಡ ಕಠಿಣವಾದ ರಾಜದಂಡವನ್ನು ಅನುಸರಿಸು ಎಂಬುದಾಗಿ ವ್ಯಾಸರು ಉಪದೇಶಿಸುತ್ತಿದ್ದಾರೆ.

ಏಷ ಧರ್ಮಃ ಕ್ಷತ್ರಿಯಾಣಾಂ ಪ್ರಜಾನಾಂ ಪರಿಪಾಲನಮ್।
ಉತ್ಪಥೇಽಸ್ಮಿನ್ ಮಹಾರಾಜ ಮಾ ಚ ಶೋಕೇ ಮನಃ ಕೃಥಾಃ ॥೩೪॥

ಕ್ಷತ್ರಿಯರಿಗೆ ಇದುವೇ ನಿಜವಾದ ಧರ್ಮ. ಪ್ರಜೆಗಳನ್ನು ರಕ್ಷಣೆ ಮಾಡಬೇಕಾದದ್ದು ಅವರ ಕರ್ತವ್ಯ. ಧರ್ಮಜ್ಞನಾದ ನೀನು ಕ್ಷಾತ್ರಧರ್ಮದಿಂದ ನಡೆಸಿದ ಕಾರ್ಯದಲ್ಲಿ ದುಃಖವನ್ನು ಹೊಂದಬೇಡ.

ಭ್ರಾತುರಸ್ಯ ಹಿತಂ ವಾಕ್ಯಂ ಶೃಣು ಧರ್ಮಜ್ಞಸತ್ತಮ।
ದಂಡ ಏವ ಹಿ ರಾಜೇಂದ್ರ ಕ್ಷತ್ರಧರ್ಮೋ ನ ಮುಂಡನಮ್ ॥೩೫॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ಚತುರ್ವಿಂಶೋಽಧ್ಯಾಯಃ ॥೨೪॥

ನಿನ್ನ ಸಹೋದರನು ಹೇಳಿದ ಮಾತಿನಂತೆ ನೀನು ನಡೆದುಕೋ. ರಾಜೇಂದ್ರನೇ ! ಕ್ಷತ್ರಿಯರಿಗೆ ಶಿಕ್ಷೆ ನೀಡುವುದೇ ಮುಖ್ಯಧರ್ಮವಾಗಿದೆ. ಮುಂಡನವು ಮುಖ್ಯಧರ್ಮವಲ್ಲ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೨೪ನೆಯ ಅಧ್ಯಾಯವು ಮುಗಿಯಿತು.

* * * * *

೨೫. ಇಪ್ಪತ್ತೈದನೆಯ ಅಧ್ಯಾಯ

ಶ್ರೀವೇದವ್ಯಾಸದೇವರು ಧರ್ಮರಾಜನಿಗೆ ದಂಡನೀತಿಯ ಬಗ್ಗೆ ವಿವರಿಸುತ್ತಿದ್ದಾರೆ. ಬಹಳ ಜಾಗ್ರತೆಯಲ್ಲಿ ದಂಡನೀತಿಯನ್ನು ಅನುಸರಿಸಬೇಕು. ಪಂಡಿತರನ್ನು ಗೌರವಿಸಬೇಕು ಎಂಬುದರ ಬಗ್ಗೆ ವಿಶ್ಲೇಷಣೆ. ಹಯಗ್ರೀವ ಎಂಬ ರಾಜನ ವೃತ್ತಾಂತ. ಕರ್ತವ್ಯನಿರತನಾದ ರಾಜನು ಯುದ್ಧದಲ್ಲಿ ಅಸು ನೀಗಿದರೂ ಸಂತೋಷ ಪಡುತ್ತಾನೆ. ದಂಡನೀತಿಯನ್ನು ಅನುಸರಿಸುವುದೇ ರಾಜನ ಮುಖ್ಯಕರ್ತವ್ಯ. ಹಯಗ್ರೀವರಾಜನು ಸ್ವಧರ್ಮನಿಷ್ಠೆಯಿಂದ ಪುಣ್ಯಾತ್ಮನಾದುದರ ಬಗ್ಗೆ ವಿವರಣೆ.

ವೈಶಂಪಾಯನಃ

ಪುನರೇವ ಮಹರ್ಷಿಸ್ತಂ ಕೃಷ್ಣದ್ವೈಪಾಯನೋಽಬ್ರವೀತ್।
ಅಜಾತಶತ್ರುಂ ಕೌಂತೇಯಮಿದಂ ವಚನಮರ್ಥವತ್ ॥೧॥

ವೈಶಂಪಾಯನರು – ಓ ಜನಮೇಜಯನೇ! ಮಹರ್ಷಿಗಳಾದ ಕೃಷ್ಣದ್ವೈಪಾಯನರು ಪುನಃ ಅಜಾತಶತ್ರುವಾದ ಕುಂತಿಯ ಪುತ್ರನಾದ ಧರ್ಮರಾಜನಿಗೆ ಹೀಗೆ ಹೇಳುತ್ತಾರೆ-

ಅರಣ್ಯೇ ವಸತಾಂ ತಾತ ಭ್ರಾತೄಣಾಂ ತೇ ತಪಸ್ವಿನಾಮ್ ।
ಮನೋರಥಾ ಮಹಾರಾಜ ಯೇ ತತ್ರಾಸನ್ ಯುಧಿಷ್ಠಿರ ॥೨॥

ಮಗು ಯುಧಿಷ್ಠಿರನೇ! ನೀವು ವನವಾಸದಲ್ಲಿದ್ದಾಗ ತಪಸ್ವಿಗಳಾದ ನಿನ್ನ ಸಹೋದರರು ಅನೇಕ ಅಭಿಲಾಷೆಗಳನ್ನು ಇಟ್ಟುಕೊಂಡಿದ್ದರು.

ತಾನಿಮೇ ಭರತಶ್ರೇಷ್ಠ ಪ್ರಾಪ್ನುವಂತು ಮಹಾರಥಾಃ ।
ಪ್ರಶಾಧಿ ಪೃಥಿವೀಂ ಪಾರ್ಥ ಯಯಾತಿರಿವ ನಾಹುಷಃ ॥೩॥

ಕುಂತಿಯ ಮಗನೇ! ನಹುಷನ ಮಗನಾದ ಯಯಾತಿಯಂತೆ ನೀನೂ ಕೂಡ ಈ ಭೂಮಿಯನ್ನು ಪರಿಪಾಲನೆ ಮಾಡು. ಆ ಮನೋರಥಗಳನ್ನು ಈಗ ಪಡೆದುಕೊಳ್ಳಲಿ.

ಅರಣ್ಯೇ ದುಃಖವಸತಿರನುಭೂತಾ ತಪಸ್ವಿಭಿಃ ।
ದುಃಖಸ್ಯಾಂತೇ ನರವ್ಯಾಘ್ರಾಃ ಸುಖಂ ತ್ವನುಭವಂತ್ವಿಮೇ ॥೪॥

ವನವಾಸ ಕಾಲದಲ್ಲಿ ತಪಸ್ವಿಗಳಾದ ನೀವೆಲ್ಲರೂ ಬಹಳ ದುಃಖವನ್ನು ಅನುಭವಿಸಿರುವಿರಿ. ಪುರುಷವ್ಯಾಘ್ರರಾದ ನೀವೆಲ್ಲರೂ ಎಲ್ಲಾ ದುಃಖಗಳು ಮುಗಿದ ಮೇಲೆ ಈಗಲಾದರೂ ಸುಖಗಳನ್ನು ಅನುಭವಿಸಿರಿ.

ಧರ್ಮಮರ್ಥಂ ಚ ಕಾಮಂ ಚ ಭ್ರಾತೃಭಿಃ ಸಹ ಭಾರತ ।
ಅನುಭೂಯ ತತಃ ಪಶ್ಚಾತ್ ಪ್ರಸ್ಥಾತಾಸಿ ವಿಶಾಂ ಪತೇ ॥೫॥

ಭಾರತನೇ! ನೀನೂ ಸಹ ಸಹೋದರರ ಜೊತೆ ಧರ್ಮ, ಅರ್ಥ, ಕಾಮಗಳನ್ನು ಅನುಭವಿಸಿದ ಅನಂತರ ವಾನಪ್ರಸ್ಥಾಶ್ರಮಕ್ಕೆ ತೆರಳಬಹುದು.

ಅತಿಥೀನಾಂ ಚ ಪಿತೄಣಾಂ ದೇವತಾನಾಂ ಚ ಭಾರತ।
ಆನೃಣ್ಯಂ ಗಚ್ಛ ಕೌಂತೇಯ ತತಃ ಸ್ವರ್ಗಂ ಗಮಿಷ್ಯಸಿ ॥೬॥

ಭರತವಂಶೋದ್ಭವನಾದ ಕೌಂತೇಯನೇ! ಮೊದಲು ನೀನು ಅತಿಥಿಗಳ, ಪಿತೃಗಳ, ದೇವತೆಗಳ ಋಣವನ್ನು ಪರಿಹಾರ ಮಾಡಿಕೊಳ್ಳಬೇಕು. ಅನಂತರ ನಿನ್ನ ಇಷ್ಟದಂತೆ ಎಲ್ಲಾ ಕಾರ್ಯಗಳನ್ನು ಮಾಡಬಹುದು.

ಸರ್ವಮೇಧಾಶ್ವಮೇಧಾಭ್ಯಾಂ ಯಜಸ್ವ ಕುರುನಂದನ।
ತತಃ ಪಶ್ಚಾನ್ಮಹಾರಾಜ ಗಮಿಷ್ಯಸಿ ಪರಾಂ ಗತಿಮ್ ॥೭॥

ಮಹಾರಾಜನೇ! ಸರ್ವಮೇಧ ಹಾಗೂ ಅಶ್ವಮೇಧಗಳೆಂಬ ಯಾಗಗಳನ್ನು ಮಾಡು. ಅನಂತರ ನೀನು ಉತ್ತಮಗತಿಯನ್ನು ಹೊಂದುವಿ.

ಭ್ರಾತೄಂಶ್ಚ ಸರ್ವಾನ್ ಕ್ರತುಭಿಃ ಸಂಯೋಜ್ಯ ಬಹುದಕ್ಷಿಣೈಃ।
ಸಂಪ್ರಾಪ್ತಃ ಕೀರ್ತಿಮತುಲಾಂ ಪಾಂಡವೇಯ ಭವಿಷ್ಯಸಿ ॥೮॥

ಬಹುದಕ್ಷಿಣಾಕವಾದ ಯಾಗಗಳನ್ನು ಮಾಡುವ ಮೂಲಕ ಎಲ್ಲ ಸಹೋದರರನ್ನು ಒಟ್ಟಿಗೆ ಸೇರಿಸು. ಎಲ್ಲರೂ ಕೂಡ ಅದರಲ್ಲಿ ಪಾಲ್ಗೊಳ್ಳುವಂತೆ ಮಾಡು. ಇದರಿಂದ ಎಣೆಯಿಲ್ಲದ ಕೀರ್ತಿಯನ್ನು ಪಡೆಯುವಿ.

ವಿದ್ಮಸ್ತೇ ಪುರುಷವ್ಯಾಘ್ರ ವಚನಂ ಕುರುನಂದನ।
ಶೃಣುಶ್ವೈವಂ ಯಥಾ ಕುರ್ವನ್ ಧರ್ಮಾನ್ನ ಚ್ಯವಸೇ ನೃಪಃ ॥೯॥

ಪುರುಷವ್ಯಾಘ್ರನೇ! ನೀನು ಹೇಳಿದ ಮಾತುಗಳನ್ನು ನಾವು ಚೆನ್ನಾಗಿ ತಿಳಿದಿದ್ದೇವೆ. ಆದರೆ ಪ್ರಕೃತ ನಾನು ಹೇಳಿದಂತೆ ಮಾಡುವುದರಿಂದ ನಿನಗೆ ಧರ್ಮಭ್ರಷ್ಟತೆಯು ಬರುವುದಿಲ್ಲ.

ಆದದಾನಸ್ಯ ಚ ಧನಂ ವಿಗ್ರಹಂ ಚ ಯುಧಿಷ್ಠಿರ।
ಸಮಾನಂ ಧರ್ಮಕುಶಲಾಃ ಸ್ಥಾಪಯಂತಿ ನರೇಶ್ವರ ॥೧೦॥

ಶತ್ರುರಾಜ್ಯವನ್ನು ವಶಪಡಿಸಿಕೊಂಡವನಿಗೆ ಶತ್ರುಗಳ ಜೊತೆಗೆ ಯುದ್ಧವು ಅವರನ್ನು ಜಯಿಸುವುದು, ಅವರ ಸಂಪತ್ತನ್ನು ಸ್ವೀಕರಿಸುವುದು ಧರ್ಮವೇ ಆಗಿರುತ್ತದೆ. ಸಮಾನಧರ್ಮದಲ್ಲಿ ಕುಶಲರಾದವರು ರಾಜನಿಗೋಸ್ಕರ ಯುದ್ಧವನ್ನು ತಿಳಿಸುತ್ತಾರೆ.

ಪ್ರತ್ಯಕ್ಷಮನುಮಾನಂ ಚ ಉಪಮಾನಂ ತಥಾಗಮಃ।
ಅರ್ಥಾಪತ್ತಿಸ್ತಥೈತಿಹ್ಯಂ ಸಂಶಯೋ ನಿರ್ಣಯಸ್ತಥಾ ॥೧೧॥

ಆಕಾರೋ ಹೀಂಗಿತಶ್ಚೈವ ಗತಿಶ್ಚೇಷ್ಟಾ ಚ ಭಾರತ।
ಪ್ರತಿಜ್ಞಾ ಚೈವ ಹೇತುಶ್ಚ ದೃಷ್ಟಾಂತೋಪನಯಸ್ತಥಾ ॥
ಉಕ್ತನಿಗಮನಂ ತೇಷಾಂ ಪ್ರಮೇಯಂ ಚ ಪ್ರಯೋಜನಮ್ ॥೧೨॥

ಪ್ರತ್ಯಕ್ಷ, ಅನುಮಾನ, ಆಗಮ, ಉಪಮಾನ, ಅರ್ಥಾಪತ್ತಿ, ಐತಿಹ್ಯ, ಸಂಶಯ, ನಿರ್ಣಯ, ಇಂಗಿತ, ಚೇಷ್ಟೆ, ನಡತೆ, ಪ್ರತಿಜ್ಞೆ, ಹೇತು, ದೃಷ್ಟಾಂತ, ಉಪನಯ, ಉಕ್ತಿ, ನಿಗಮನ ಎಂಬುದಾಗಿ ಪ್ರಮಾಣಗಳು ಇರುತ್ತವೆ. ಇವುಗಳಿಂದ ನಿರ್ಣಯ ಮಾಡಲ್ಪಟ್ಟ ವಿಷಯಗಳು ಹಾಗೂ ಅವುಗಳ ಪ್ರಯೋಜನಗಳು ಎಲ್ಲವೂ ಕಾರ್ಯಸಿದ್ಧಿಗೆ ಕಾರಣಗಳಾಗಿವೆ ಎಂದು ಹೇಳುತ್ತಾರೆ.

ದೇಶಕಾಲಪ್ರತೀಕ್ಷೀ ಯೋ ದಸ್ಯೋರ್ದರ್ಶಯತೇ ನೃಪಃ।
ಶಾಸ್ತ್ರಜ್ಞಾಂ ಬುದ್ಧಿಮಾಸ್ಥಾಯ ನೈನಸಾ ಸ ಹಿ ಯುಜ್ಯತೇ ॥೧೩॥

ಅಪರಾಧಿಗೆ ಶಿಕ್ಷೆಯನ್ನು ಕೊಡುವಾಗ ದೇಶ, ಕಾಲಗಳನ್ನು ಗಮನಿಸಬೇಕು. ಶಾಸ್ತ್ರವನ್ನು ಅರಿತು, ಶಾಸ್ತ್ರದಲ್ಲಿ ನಿರ್ಣಯಿಸಿದಂತೆ ಶಿಕ್ಷೆಯನ್ನು ನೀಡಬೇಕು. ಹೀಗೆ ಮಾಡುವುದರಿಂದ ರಾಜನಿಗೆ ಸ್ವಲ್ಪವೂ ಪಾಪವು ಬರುವುದಿಲ್ಲ.

ಟಿಪ್ಪಣಿ - ದುಷ್ಟರನ್ನು ಶಿಕ್ಷಿಸಲೇ ಬೇಕು. ಆದರೆ ಅಪರಾಧವನ್ನು ಮಾಡದೇ ಇದ್ದಾಗ ಅಪರಾಧ ಮಾಡಿದ್ದು, ನಿರ್ಣಯವಾಗದೇ ಇದ್ದಾಗ ಶಿಕ್ಷೆಯನ್ನು ನೀಡಬಾರದು. ದುಷ್ಟರನ್ನು ಶಿಕ್ಷಿಸುವಾಗ ದೇಶಕಾಲಗಳ ವಿವೇಚನೆಯು ಇರಬೇಕು. ಅವಸರವನ್ನು ಮಾಡಬಾರದು. ಇವನು ಅಪರಾಧ ಮಾಡಿದ್ದಾನೆ ಎಂಬುದನ್ನು

ಅನೇಕ ಪ್ರಮಾಣಗಳಿಂದ ಖಚಿತಪಡಿಸಿಕೊಳ್ಳಬೇಕು. ಇಲ್ಲದಿದ್ದರೆ ನಿರಪರಾಧಿಗೆ ಶಿಕ್ಷೆಯನ್ನು ನೀಡಿದಂತಾಗುತ್ತದೆ. ಶಾಸ್ತ್ರಾಧ್ಯಯನವನ್ನು ಮಾಡಿದವನಿಗಷ್ಟೇ ಯಾರು ಅಪರಾಧಿ, ಯಾರು ಅಪರಾಧಿಯಲ್ಲ ಎಂಬುದನ್ನು ತಿಳಿಯಲು ಸಾಧ್ಯ.

ಆದಾಯ ಬಲಿಷಡ್-ಭಾಗಂ ಯೋ ರಾಷ್ಟ್ರಂ ನಾಭಿರಕ್ಷತಿ।
ಪ್ರತಿಗೃಹ್ಣಾತಿ ತತ್ಪಾಪಂ ಚತುರ್ಥಾಂಶೇನ ಪಾರ್ಥಿವಃ ॥೧೪॥

ಪ್ರಜೆಗಳಿಗೆ ಎಷ್ಟು ಆದಾಯವು ಬರುತ್ತದೋ, ಅದರಲ್ಲಿ ಆರನೆಯ ಒಂದು ಭಾಗವನ್ನು ರಾಜನಾದವನು ಪಡೆದುಕೊಳ್ಳಬೇಕು. ತನ್ಮೂಲಕ ರಾಷ್ಟ್ರದ ರಕ್ಷಣೆಯಲ್ಲಿ ತೊಡಗಬೇಕು. ಹೀಗೆ ಮಾಡದಿದ್ದರೆ ಆ ಪ್ರಜೆಗಳ ಪಾಪದ ನಾಕನೆಯ ಒಂದು ಭಾಗವನ್ನು ಪಡೆದುಕೊಳ್ಳುತ್ತಾನೆ.

ಟಿಪ್ಪಣಿ - ಮಹಾಭಾರತದ ಕಾಲದಲ್ಲಿ ಎಷ್ಟು ತೆರಿಗೆ ಕೊಡುತ್ತಿದ್ದರು ಎಂಬುದನ್ನು ಈ ಶ್ಲೋಕವು ಹೇಳುತ್ತಿದೆ. ಆರನೆಯ ಒಂದು ಭಾಗವೆಂದರೆ ಒಬ್ಬ ವ್ಯಕ್ತಿಗೆ ಒಂದು ಲಕ್ಷ ಲಾಭವು ಬಂದರೆ, ಹದಿನಾರುಸಾವಿರದ ಐದುನೂರು ರೂಪಾಯಿಗಳನ್ನು ತೆರಿಗೆಯ ರೂಪದಲ್ಲಿ ರಾಜನಿಗೆ ಕೊಡಬೇಕಿತ್ತು. ಆ ಹಣವನ್ನು ರಾಜನು ತೆಗೆದುಕೊಂಡು, ಸ್ವಲ್ಪವೂ ತಾನು ಬೇರೆ ಕಾರ್ಯಕ್ಕೆ ಉಪಯೋಗ ಮಾಡದೇ ಪ್ರಜೆಗಳ ಹಿತಕ್ಕಾಗಿಯೇ ಉಪಯೋಗ ಮಾಡಬೇಕು. ಇಲ್ಲದಿದ್ದರೆ ನೂರಕ್ಕೆ ಇಪ್ಪತ್ತೈದು ಭಾಗದಷ್ಟು ಪಾಪವನ್ನು ರಾಜನು ಹೊಂದುತ್ತಿದ್ದನು.

ನಿಬೋಧ ಚ ಯಥಾ ತಿಷ್ಠನ್ ಧರ್ಮಾನ್ನ ಚ್ಯವತೇ ನೃಪಃ।
ನಿಗ್ರಹಾದ್ಧರ್ಮಶಾಸ್ತ್ರಾಣಾಮನುರುದ್ಧ್ಯನ್ನಪೇತಭೀಃ ॥೫॥

ರಾಜನಾದವನು ಧರ್ಮಮಾರ್ಗದಲ್ಲಿ ಹೇಗೆ ನಡೆಯಬೇಕೆಂಬುದನ್ನು ಹೇಳುತ್ತೇನೆ ಕೇಳು? ಧರ್ಮಶಾಸ್ತ್ರಗಳ ನಿಯಮವನ್ನು ಉಲ್ಲಂಘನೆ ಮಾಡಿದರೆ ಹೇಗೆ ಪತಿತನಾಗುತ್ತಾನೆ? ಧರ್ಮಶಾಸ್ತ್ರಗಳ ನಿಯಮದಂತೆ ನಡೆದುಕೊಂಡರೆ ಹೇಗೆ ಭಯರಹಿತನಾಗುತ್ತಾನೆ? ಇವೆಲ್ಲವನ್ನೂ ಹೇಳುತ್ತೇನೆ ಕೇಳು -

ಕಾಮಕ್ರೋಧಾವನಾದೃತ್ಯ ಪಿತೇವ ಸಮದರ್ಶನಃ।
ಶಾಸ್ತ್ರಜ್ಞಾಂ ಬುದ್ಧಿಮಾಸ್ಥಾಯ ಯುಜ್ಯತೇ ನೈನಸಾ ಹಿಸಃ ॥೧೬॥

ರಾಜನಾದವನು ಕಾಮಕ್ರೋಧಗಳನ್ನು ಎಲ್ಲಾ ಪ್ರಜೆಗಳ ವಿಷಯದಲ್ಲಿ ಪರಿತ್ಯಾಗ ಮಾಡಬೇಕು. ತಂದೆಯಾದವನು ತನ್ನ ಮಕ್ಕಳನ್ನು ಸಮಾನ ದೃಷ್ಟಿಯಿಂದ ಕಾಣುವಂತೆ ರಾಜನೂ ಸಹ ಸಮಾನದೃಷ್ಟಿಯಿಂದ ಎಲ್ಲ ಪ್ರಜೆಗಳನ್ನು ಕಾಣಬೇಕು. ಇಂಥ ರಾಜನಿಗೆ ಯಾವುದೇ ಪಾಪವು ಬರುವುದಿಲ್ಲ.

ದೈವೇನೋಪಹತೋ ರಾಜಾ ಕರ್ಮಕಾಲೇ ಮಹಾದ್ಯುತೇ।
ಪ್ರಮಾದಯತಿ ತತ್ ಕರ್ಮ ನ ತತ್ರಾಹುರತಿಕ್ರಮಮ್ ॥೧೬॥

ಮಹಾಪರಾಕ್ರಮಿಯೇ! ರಾಜನು ಪ್ರಜೆಗಳ ರಕ್ಷಣೆಯನ್ನು ಮಾಡುವ ಸಂದರ್ಭದಲ್ಲಿ ಪ್ರಮಾದದಿಂದ ಅವನು ತೊಂದರೆಗೀಡಾದರೆ ಅಥವಾ ಮಾಡಿದ ಕೆಲಸವನ್ನು ಪೂರ್ಣವಾಗಿ ಮಾಡದಿದ್ದರೆ ಅದು ರಾಜನು ಅತಿಕ್ರಮವನ್ನು ಮಾಡಿದಂತೆ, ಅಥವಾ ಅಪರಾಧವನ್ನು ಮಾಡಿದಂತೆ ಆಗುವುದಿಲ್ಲ.

ರಾಜನು ಪ್ರಜೆಗಳ ಹಿತಕ್ಕೋಸ್ಕರ ಅನೇಕ ಕಾರ್ಯಗಳನ್ನು ಮಾಡುತ್ತಲೇ ಇರಬೇಕು. ಎಂದೆಂದೂ ಕೂಡ ಆ ಕಾರ್ಯಗಳಿಂದ ವಿಮುಖನಾಗಬಾರದು. ಇದು ರಾಜನಾದವನ ಮುಖ್ಯ ಕರ್ತವ್ಯವಾಗಿದೆ. ಪ್ರಜೆಗಳ ಹಿತಕ್ಕೋಸ್ಕರ ಅನೇಕ ಕಾರ್ಯಗಳನ್ನು ಹಮ್ಮಿಕೊಂಡಾಗ ದೈವಯೋಗದಂತೆ ಯಾವುದೋ ಒಂದು ಕಾರ್ಯವು ಆಗದಿದ್ದರೆ ಅದರಿಂದ ರಾಜನು ಪಾಪವನ್ನು ಹೊಂದುವುದಿಲ್ಲ. ಉದ್ದೇಶ ಪೂರ್ವಕವಾಗಿ ಮಾಡಿದ ಕೆಲಸವನ್ನು ಮುಗಿಸದೇ ಇರುವುದರಿಂದ ಅಥವಾ ಅಂದುಕೊಂಡಂತೆ ಸಫಲವನ್ನಾಗಿ ಮಾಡದೇ ಇರುವುದರಿಂದಷ್ಟೇ ಪಾಪವು ಬರುತ್ತದೆ.

ತರಸಾ ಬುದ್ಧಿಪೂರ್ವಂ ವಾ ನಿಗ್ರಾಹ್ಯಾ ಏವ ಶತ್ರವಃ।
ಪಾಪೈಃ ಸಹ ನ ಸಂದಧ್ಯಾದ್ ರಾಷ್ಟ್ರಂ ಪುಣ್ಯಂ ನ ಕಾರಯೇತ್॥೧೭॥

ತನ್ನ ಪರಾಕ್ರಮದಿಂದ, ಬುದ್ಧಿಶಕ್ತಿಯಿಂದ ಶತ್ರುಗಳನ್ನು ದಮನ ಮಾಡಬೇಕು. ಎಂದೆಂದೂ ಪಾಪಿಷ್ಠರ ಸಹವಾಸವನ್ನು ಮಾಡಬಾರದು. ರಾಷ್ಟ್ರವನ್ನು ದುಡ್ಡಿಗೋಸ್ಕರ ಮಾರಾಟ ಮಾಡಬಾರದು.

ವಿವರಣೆ - ರಾಜನು ಎಂದೆಂದೂ ದುಷ್ಟರ, ದರೋಡೆಗಾರರ ಸಹವಾಸವನ್ನು ಮಾಡಬಾರದು. ಮತ್ತು ತನ್ನ ಹಣಸಂಪಾದನೆಗೋಸ್ಕರ ಕೆಲವು ಭಾಗಗಳನ್ನು ಮಾರಾಟ ಮಾಡುವುದು ಮೊದಲಾದವುಗಳನ್ನೂ ಕೂಡ ಮಾಡಬಾರದು.

ಶೂರಾಶ್ಚಾರ್ಯಾಶ್ಚ ಸತ್ಕಾರ್ಯಾ ವಿದ್ವಾಂಸಶ್ಚ ಯುಧಿಷ್ಠಿರ।
ಗೋಮಿನೋ ಧನಿನಶ್ಚೈವ ಪರಿಪಾಲ್ಯಾ ವಿಶೇಷತಃ ॥೧೮॥

ಶೂರರಾದವರನ್ನು, ಪೂಜ್ಯರಾದವರನ್ನು, ವಿದ್ವಾಂಸರನ್ನು ಯಥೋಚಿತವಾಗಿ ಸತ್ಕಾರ ಮಾಡಬೇಕು. ಯಾರು ಗೋಮಿಗಳೋ (ಅಪಾರವಾದ ಗೋಸಂಪತ್ತನ್ನು ಹೊಂದಿರುವರೋ), ಮತ್ತು ಶ್ರೀಮಂತರೋ ಅಂಥವರನ್ನು ವಿಶೇಷವಾಗಿ ರಕ್ಷಣೆ ಮಾಡಬೇಕು.

ಟಿಪ್ಪಣಿ- ಸರ್ವೇಷಾಂ ಯೋನಿರುಚ್ಯತ ಇತ್ಯತ್ರ ಯೋನಿಃ ಪ್ರಮಾಣಮ್।

ಗೋಮಿನೋ ಧನಿನಶ್ಚೈವ ಇತ್ಯತ್ರ ಗೋಮಿನಃ ಬಹುಗೋಧನವಂತೋ ಗೋಪಾಲಾಃ। 'ದ್ವೌ ಗವೀಶ್ವರೇ। ಗೋಮಾನ್ ಗೋಮೀ ಗೋಕುಲಂ ತು ಗೋಧನಂ ಸ್ಯಾದ್ ಗವಾಂ ವ್ರಜೇ ॥' ಇತ್ಯಮರಃ।

'ಗೋಮಿನೋ ಧನಿನಶ್ಚೈವ ಎಂಬಲ್ಲಿ ಗೋಮಿನಃ' - ಎಂಬುದಕ್ಕೆ ಗೋ ಎಂಬ ಸಂಪತ್ತುಳ್ಳವರು ಎಂದರ್ಥ. ಅಮರಕೋಶದಲ್ಲಿ ''ದ್ವೌ ಗವೀಶ್ವರೇ । ಗೋಮಾನ್ ಗೋಮೀ ಗೋಕುಲಂ ತು ಗೋಧನಂ ಸ್ಯಾದ್ ಗವಾಂ ವ್ರಜೇ ॥' ಎಂದು ಹೇಳಿರುತ್ತಾರೆ.

ವಿವರಣೆ - 'ಗಾಂ ವಿನುತೇ ಇತಿ ಗೋಮಿನಃ' ಹಸುವನ್ನು ರಕ್ಷಣೆ ಮಾಡುವವನಾದ ಗೋಪಾಲಕನು ಗೋಮಿ ಎಂದು ಕರೆಸಿಕೊಳ್ಳುತ್ತಾನೆ. ಆಗಿನ ಕಾಲದಲ್ಲಿ ಯಾರಿಗೆ ಬಹಳಷ್ಟು ಗೋವುಗಳಿರುತ್ತವೋ, ಅವನನ್ನು ಶ್ರೀಮಂತನೆಂದು ಮತ್ತು ಅಪಾರಸಂಪತ್ತುಳ್ಳವನನ್ನೂ ಕೂಡ ಶ್ರೀಮಂತನೆಂದು ಪರಿಗಣಿಸುತ್ತಿದ್ದರು. ರಾಜನಾದವನು ಶ್ರೀಮಂತರಿಗೆ ಸರಿಯಾದ ರಕ್ಷಣೆಗಳನ್ನು ನೀಡಬೇಕಿತ್ತು.

ವ್ಯವಹಾರೇಷು ಧರ್ಮ್ಯೇಷು ನಿಯೋಜ್ಯಾಶ್ಚ ಬಹುಶ್ರುತಾಃ।
ಗುಣಯುಕ್ತೇಽಪಿ ನೈಕಸ್ಮಿನ್ ವಿಶ್ವಸ್ಯಾಚ್ಚ ವಿಚಕ್ಷಣಃ ॥೧೯॥

ಧರ್ಮಕ್ಕೆ ಸಂಬಂಧಪಟ್ಟವ್ಯವಹಾರಗಳಲ್ಲಿ ಶಾಸ್ತ್ರವನ್ನು ತಿಳಿದವರನ್ನಷ್ಟೇ ಆಡಳಿತದಲ್ಲಿ ನಿಯೋಜನೆ ಮಾಡಬೇಕು. ಒಬ್ಬ ಬುದ್ಧಿವಂತನಾದವನು ಅತ್ಯಂತ ಗುಣಶಾಲಿಯಾಗಿದ್ದರೂ ಕೂಡ ಅವನನ್ನು ಪೂರ್ಣವಾಗಿ ರಾಜನಾದವನು ನಂಬಬಾರದು.

ಪ್ರಮಾಣಜ್ಞಾಮಹೀಪಾಲ ನ್ಯಾಯಶಾಸ್ತ್ರಾವಲಂಬಿನಃ।
ವೇದಾರ್ಥತತ್ತ್ವವಿದ್ ರಾಜಂಸ್ತರ್ಕಶಾಸ್ತ್ರಬಹುಶ್ರುತಾಃ ॥೨೦॥
ಮಂತ್ರೇ ಚ ವ್ಯವಹಾರೇ ಚ ನಿಯೋಕ್ತವ್ಯಾ ವಿಜಾನತಾ।

ಪ್ರಮಾಣಗಳ ಬಗ್ಗೆ ಚೆನ್ನಾಗಿ ತಿಳಿದವನು ನ್ಯಾಯಶಾಸ್ತ್ರದ ಪಾಂಡಿತ್ಯವನ್ನು ಹೊಂದಿದವನು ವೇದಗಳ ಅರ್ಥವನ್ನು ಯಥಾವತ್ತಾಗಿ ತಿಳಿದವನು ಬಹುಶ್ರುತನು ಯಾರು ಇರುತ್ತಾನೋ, ಅಂಥ ವಿದ್ವಾಂಸನನ್ನೇ ವ್ಯವಹಾರಗಳಲ್ಲಿ, ಸಭೆಗಳಲ್ಲಿ ಮಂತ್ರಾರ್ಥಲೋಚನೆ ಮಾಡುವ ಸಂದರ್ಭಗಳಲ್ಲಿ ಅಧಿಕಾರಿಗಳನ್ನಾಗಿ ನಿಯಮನ ಮಾಡಬೇಕು.

ತರ್ಕಶಾಸ್ತ್ರಕೃತಾ ಬುದ್ಧಿರ್ಧರ್ಮಶಾಸ್ತ್ರಕೃತಾ ಚ ಯಾ ॥೨೧॥
ದಂಡನೀತಿಕೃತಾ ಚೈವ ತ್ರೈಲೋಕ್ಯಮಪಿ ಸಾಧಯೇತ್।
ನಿಯೋಜ್ಯಾ ವೇದತತ್ತ್ವಜ್ಞಾಯಜ್ಞಕರ್ಮಸು ಪಾರ್ಥಿವ ॥೨೨॥

ರಾಜನಾದವನು ತರ್ಕಶಾಸ್ತ್ರ, ಧರ್ಮಶಾಸ್ತ್ರ ಮೊದಲಾದವುಗಳಲ್ಲಿ ಸುಶಿಕ್ಷಿತವಾದ ಬುದ್ಧಿಯಿಂದ ದಂಡನೀತಿಯನ್ನು ಅಳವಡಿಸಬೇಕು. ಆಗ ಅವನ ನೀತಿಯು ತ್ರೈಲೋಕ್ಯವು ಅವನ ಅಧೀನವಾಗುವಂತೆ ಮಾಡುತ್ತದೆ. ಯಾರು ವೇದತತ್ವವನ್ನು ತಿಳಿದಿರುತ್ತಾರೋ ಅವರನ್ನೇ ಯಾಗಕರ್ಮಗಳಲ್ಲಿ ರಾಜನು ನಿಯೋಜನೆ ಮಾಡಬೇಕು.

ವೇದಜ್ಞಾ ಯೇ ಚ ಶಾಸ್ತ್ರಜ್ಞಾಸ್ತೇ ಚ ರಾಜನ್ ಸುಬುದ್ಧಯಃ।
ಆನ್ವೀಕ್ಷಿಕೀತ್ರಯೀವಾರ್ತಾದಂಡನೀತಿಷು ಪಾರಗಾಃ ॥೨೩॥

ತೇ ತು ಸರ್ವತ್ರ ಯೋಕ್ತವ್ಯಾಸ್ತೇ ಚ ಬುದ್ಧೇಃ ಪರಾಂ ಗತಾಃ।
ಅರಕ್ಷಿತಾ ದುರ್ವಿನೀತೋ ಮಾನೀ ಸ್ತಬ್ಧೋಽನಸೂಯಕಃ।
ಏನಸಾ ಯುಜ್ಯತೇ ರಾಜಾ ದುರ್ದಾಂತ ಇತಿ ಚೋಚ್ಯತೇ ॥೨೪॥

ಯಾರು ವೇದವನ್ನು ಸಂಪೂರ್ಣವಾಗಿ ತಿಳಿದಿರುತ್ತಾನೋ, ಎಲ್ಲಾ ಶಾಸ್ತ್ರಗಳನ್ನು ಅಧ್ಯಯನ ಮಾಡಿರುತ್ತಾನೋ, ಬುದ್ಧಿಯಿಂದ ಚತುರನಾಗಿರುತ್ತಾನೋ, ತರ್ಕ-ಶಾಸ್ತ್ರದಲ್ಲಿ ವ್ಯವಹಾರಶಾಸ್ತ್ರದಲ್ಲಿ ಮತ್ತು ದಂಡನೀತಿಯಲ್ಲಿ ಪಾರಂಗತನಾಗಿರುತ್ತಾನೋ, ಅಂಥ ಪಂಡಿತನನ್ನೇ ಎಲ್ಲಾ ಕಾರ್ಯಗಳಲ್ಲಿ ನಿಯೋಜನೆ ಮಾಡಬೇಕು. ಪ್ರಜೆಗಳನ್ನು ರಕ್ಷಣೆ ಮಾಡದ ಹಿರಿಯರನ್ನು ಗೌರವಿಸದ, ವಿನೀತನಲ್ಲದ, ಅತ್ಯಂತ ಅಹಂಕಾರವುಳ್ಳ, ಅಸೂಯೆಯಿಂದ ಕೂಡಿದ ಅರಸನು ಪಾಪಕ್ಕೆ ಭಾಗಿಯಾಗುತ್ತಾನೆ. ಮತ್ತು ದುಷ್ಟನೆಂಬ ಬಿರುದಿಗೂ ಭಾಗಿಯಾಗುತ್ತಾನೆ. ರಾಜ್ಯವನ್ನು ಪರಿಪಾಲನೆ ಮಾಡಲು ಇವನಿಗೆ ಸಾಮರ್ಥ್ಯವೇ ಇಲ್ಲವೆಂದು ಕರೆಸಿಕೊಳ್ಳುತ್ತಾನೆ.

ಟಿಪ್ಪಣಿ - ಆನ್ವೀಕ್ಷಿಕೀತ್ರಯೀವಾರ್ತಾ ಇತ್ಯತ್ರ ಅನುಕೂಲಾ ಈಶಾ ಪರಮಾತ್ಮಾ-ಪರೋಕ್ಷಜ್ಞಾನಮ್, ತತ್ಸಂಬಂಧಿನೀ ವಿದ್ಯಾ ಆನ್ವೀಕ್ಷಿಕೀ।

'ಆನ್ವೀಕ್ಷಿಕೀತ್ರಯೀವಾರ್ತಾ' ಎಂಬಲ್ಲಿ ಪರಮಾತ್ಮನ ಅಪರೋಕ್ಷಜ್ಞಾನಕ್ಕೆ ಸಂಬಂಧಪಟ್ಟ ವಿದ್ಯೆಯೇ 'ಆನ್ವೀಕ್ಷಿಕೀ' ಎಂದು ಕರೆಸಿಕೊಳ್ಳುತ್ತದೆ. ತರ್ಕಶಾಸ್ತ್ರವನ್ನು ಆನ್ವೀಕ್ಷಿಕೀ ಎಂದು ಇಲ್ಲಿ ವಿವಕ್ಷಿಸಬಾರದು.

ಯೇಽರಕ್ಷ್ಯಮಾಣಾ ಹೀಯಂತೇ ದೈವೇನೋಪಹತೇ ನೃಪೇ।
ತಸ್ಕರೈಶ್ಚಾಪಿ ಹನ್ಯಂತೇ ಸರ್ವಂ ತದ್ ರಾಜಕಿಲ್ಬಿಷಮ್ ॥೨೫॥

ರಾಜನಿಂದ ರಕ್ಷಿಸಲ್ಪಡದೇ ಇರುವ ಪ್ರಜೆಗಳು ಅತಿವೃಷ್ಟಿ, ಅನಾವೃಷ್ಟಿ ಎಂಬ ದೈವಿಕವಾದ ಆಪತ್ತುಗಳಿಂದ ಮತ್ತು ಕಳ್ಳಕಾಕರ ಉಪಟಳಗಳಿಂದ ವಿನಾಶವನ್ನು ಹೊಂದುತ್ತಾರೆ. ಹೀಗೆ ಪ್ರಜೆಗಳ ವಿನಾಶಕ್ಕೆ ರಾಜನೇ ಕಾರಣನೆಂದು ಆಗುತ್ತದಾದ್ದರಿಂದ ಮಹಾಪಾಪವನ್ನು ಹೊಂದುತ್ತಾನೆ.

ಟಿಪ್ಪಣಿ - ರಾಜನು ಅತ್ಯಂತ ಗುಣವಂತನಾಗಿರಬೇಕು. ನೀತಿವಂತನಾಗಿರಬೇಕು. ಇಲ್ಲದಿದ್ದರೆ ದೇಶದಲ್ಲಿ ಸರಿಯಾದ ಕಾಲಕ್ಕೆ ಮಳೆಬೆಳೆಗಳೂ ಕೂಡ ಬರುವುದಿಲ್ಲ. ಕಳ್ಳಕಾರರ ಭಯವು ಹೆಚ್ಚಾಗುತ್ತದೆ. ಪ್ರಜೆಗಳೂ ಕೂಡ ನಾಶವನ್ನು ಹೊಂದುತ್ತಾರೆ. ಪ್ರಜೆಗಳ ನಾಶದ ಪಾಪವು ರಾಜನಿಗೆ ಬರುತ್ತದೆ.

ಟಿಪ್ಪಣಿ - ದೈವೇನಾಭ್ಯಾಹತಾ ನೃಪ ಇತ್ಯತ್ರ ದೈವೇನ ದೇವವಿಷಯೇ ಯಜ್ಞಾದಿಕರ್ಮಣಾ ಅಭ್ಯಾಹತಾ ರಹಿತಾಃ।

'ದೈವೇನಾಭ್ಯಾಹತಾ ನೃಪ' - ಎಂಬಲ್ಲಿ ದೈವೇನ = ದೇವತೆಯ ವಿಷಯದಿಂದ ಯಜ್ಞಾದಿಕರ್ಮಗಳಿಂದ, ಅಭ್ಯಾಹತಾ = ರಹಿತರಾದವರು ಎಂದರ್ಥ.

ಸುಮಂತ್ರಿತೇ ಸುನೀತೇ ಚ ವಿಧಿವಚ್ಚೋಪಪಾದಿತೇ।
ಪೌರುಷೇ ಕರ್ಮಣಿ ಕೃತೇ ನಾಸ್ತ್ಯಧರ್ಮೋ ಯುಧಿಷ್ಠಿರ ॥೨೬॥

ಯುಧಿಷ್ಠಿರನೇ! ಪ್ರಜೆಗಳಿಗೆ ಯಾವುದನ್ನು ಮಾಡುವುದರಿಂದ ಹಿತವಾಗುತ್ತದೆಂಬುದನ್ನು ಚೆನ್ನಾಗಿ ಆಲೋಚನೆ ಮಾಡಬೇಕು. ಧರ್ಮಮೂಲವಾದ ನೀತಿಯನ್ನು ಅನುಸರಿಸಬೇಕು. ಎಲ್ಲಾ ರೀತಿಯಿಂದಲೂ ಮನುಷ್ಯ ಪ್ರಯತ್ನದಿಂದ ಸತ್ಕಾರ್ಯಗಳನ್ನು ಮಾಡಿಯೂ ಕೂಡ ಮಳೆ, ಬೆಳೆಗಳು ಆಗದಿದ್ದರೆ, ರಾಜನು ಅಧರ್ಮ ಮಾಡಿದಂತೆ ಆಗುವುದಿಲ್ಲ.

ವಿಚ್ಛಿದ್ಯಂತೇ ಸಮಾರಂಭಾಃ ಸಿದ್ಧ್ಯಂತ್ಯಪಿ ಚ ದೈವತಃ।
ಕೃತೇ ಪುರುಷಕಾರೇ ತು ನೈನಃ ಸ್ಪೃಶತಿ ಪಾರ್ಥಿವಮ್ ॥೨೭॥

ಒಮೊಮ್ಮೆ ವ್ಯಕ್ತಿಯು ನಿರ್ದುಷ್ಟನಾಗಿದ್ದರೂ ಪ್ರಾರಂಭ ಮಾಡಿದ ಕೆಲಸಗಳು ದುರ್ಯೋಗದಿಂದ ಹಾಳಾಗುತ್ತವೆ. ದೇವತೆಗಳ ಅನುಗ್ರಹದಿಂದ ಒಮ್ಮೊಮ್ಮೆ ಸಫಲವಾಗುತ್ತವೆ. ಮನುಷ್ಯನ ಎಲ್ಲಾ ಪ್ರಯತ್ನಗಳಿಗೆ ದೈವವೇ ಉತ್ತರವನ್ನು ನೀಡುತ್ತದೆ. ಆದ್ದರಿಂದ ಶ್ರದ್ಧಾಪೂರ್ವಕವಾಗಿ ಕೆಲಸವನ್ನು ಮಾಡುವ ರಾಜನಿಗೆ ಯಾವುದೇ ಪಾಪಗಳು ತಟ್ಟುವುದಿಲ್ಲ.

ಟಿಪ್ಪಣಿ - ಮಾಡುವ ಕರ್ತವ್ಯವನ್ನು ಮಾಡಲೇಬೇಕು. ಪ್ರಾಮಾಣಿಕವಾಗಿ

ಕರ್ತವ್ಯಗಳನ್ನು ಮಾಡಿಯೂ ಕೂಡ ಹಾನಿಯುಂಟಾದರೆ ದುರ್ಭಿಕ್ಷೆಯುಂಟಾದರೆ ದುಃಖವನ್ನು ಪಡಬಾರದು. ಎಲ್ಲವೂ ಕೂಡ ಭಗವಂತನ ಅಧೀನವೆಂದು ತಿಳಿದು ಶಾಂತಮನಸ್ಕನಾಗಿರಬೇಕು. ತಾನು ಪ್ರಾಮಾಣಿಕವಾಗಿ ಕೆಲಸವನ್ನು ನಿರ್ವಹಿಸಿದ ರಾಜನು ಯಾವುದಕ್ಕೂ ಕೂಡ ಹೆದರುವ ಅವಶ್ಯಕತೆಯಿರುವುದಿಲ್ಲ ಎಂದು ಅಭಿಪ್ರಾಯ.

ಅತ್ರ ತೇ ರಾಜಶಾರ್ದೂಲ ವರ್ತಯಿಷ್ಯೇ ಕಥಾಮಿಮಾಮ್ ।
ಯದ್ ವೃತ್ತಂ ಪೂರ್ವರಾಜರ್ಷೇರ್ಹಯಗ್ರೀವಸ್ಯ ಪಾರ್ಥಿವ ॥೨೮॥

ರಾಜಸಿಂಹನೇ! ಈ ಸಂದರ್ಭದಲ್ಲಿ ಇದೇ ವಿಷಯಕ್ಕೆ ಸಂಬಂಧಪಟ್ಟ ಒಂದು ಕಥೆಯನ್ನು ನಿನಗೆ ತಿಳಿಸುತ್ತೇನೆ. ಹಿಂದೆ ರಾಜರ್ಷಿಯಾದ ಹಯಗ್ರೀವನ ವಿಷಯ-ದಲ್ಲಿ ಒಂದು ಕಥೆಯು ನಡೆಯಿತು. ಅದನ್ನು ನಿನಗೆ ತಿಳಿಸುತ್ತೇನೆ.

ಶತ್ರೂನ್ ಹತ್ವಾ ಹತಸ್ಯಾಜೌ ಶೂರಸ್ಯಾಕ್ಲಿಷ್ಟಕರ್ಮಣಃ ।
ಅಸಹಾಯಸ್ಯ ಧೀರಸ್ಯ ನಿರ್ಜಿತಸ್ಯ ಯುಧಿಷ್ಠಿರ ॥೨೯॥

ರಾಜರ್ಷಿಯಾದ ಹಯಗ್ರೀವನೆಂಬ ರಾಜನು ಶತ್ರುಗಳ ಜೊತೆ ಯುದ್ಧಕ್ಕೆ ನಿಂತನು. ತಾನು ಅಸಹಾಯಕನಾಗಿಯೇ ಅನೇಕ ಶತ್ರುಗಳನ್ನು ಕೊಂದನು. ಅಂತಿಮ -ವಾಗಿ ಶತ್ರುಗಳಿಂದ ಯುದ್ಧದಲ್ಲಿ ಹತನಾದನು. ತನ್ನ ಕರ್ತವ್ಯವನ್ನು ಪರಿಪಾಲನೆ ಮಾಡಿದ್ದರಿಂದ ಉತ್ತಮ ಲೋಕವನ್ನೇ ಹೊಂದಿದನು.

ಯತ್ಕರ್ಮ ವೈ ನಿಗ್ರಹೇ ಶಾತ್ರವಾಣಾಂ
ಯೋಗಶ್ಚಾಗ್ರ್ಯಃ ಪಾಲನೇ ಮಾನವಾನಾಮ್ ।
ಕೃತ್ವಾ ಕರ್ಮ ಪ್ರಾಪ್ಯ ಕೀರ್ತಿಂ ಸುಮುದ್ಧಾತ್
ವಾಜಿಗ್ರೀವೋ ಮೋದತೇ ದೇವಲೋಕೇ ॥೩೦॥

ಮಹಾರಾಜನೇ! ಹಯಗ್ರೀವನೆಂಬ ರಾಜನು ಶತ್ರುಗಳ ನಿಗ್ರಹದಲ್ಲಿ ಪ್ರಜೆಗಳ ಪರಿಪಾಲನದಲ್ಲಿ ಏನೇನು ಮಾಡಲು ತನ್ನಿಂದ ಸಾಧ್ಯವೋ, ಅದೆಲ್ಲವನ್ನು ಮಾಡಿ-

ದ್ದನು. ಇಹಲೋಕದಲ್ಲಿ ಪ್ರಖ್ಯಾತಿಯನ್ನು ಹೊಂದಿದನು. ಸ್ವರ್ಗದಲ್ಲಿಯೂ ಸುಖವಾಗಿ ವಾಸ ಮಾಡಿದನು.

ಸಂಯುಕ್ತಾತ್ಮಾ ಸಮರೇಷ್ವಾತತಾಯೀ
ಶಸ್ತ್ರೈಶ್ಛಿನ್ನೋ ದಸ್ಯುಭಿರ್ವಧ್ಯಮಾನಃ।
ಅಶ್ವಗ್ರೀವಃ ಕರ್ಮಶೀಲೋ ಮಹಾತ್ಮಾ
ಸಂಸಿದ್ಧಾತ್ಮಾ ಮೋದತೇ ದೇವಲೋಕೇ ॥೩೧॥

ಹಯಗ್ರೀವ ಎಂಬ ರಾಜನು ನಿರಂತರ ಆತ್ಮಚಿಂತನೆಯನ್ನೇ ಮಾಡುತ್ತಿದ್ದನು. ಪರಮ ವಿರಕ್ತನಾಗಿದ್ದನು. ಯುದ್ಧದಲ್ಲಿ ಶತ್ರುಗಳನ್ನು ಎದುರಿಸುತ್ತಿದ್ದನು. ಯುದ್ಧ ಮಾಡುತ್ತಿರುವಾಗ ಒಮ್ಮೆ ಅಸಹಾಯಕನಾಗಿ ಶತ್ರುಗಳ ಶಸ್ತ್ರಗಳಿಂದ ಛೇದಿಸಲ್ಪಟ್ಟು ಪ್ರಾಣವನ್ನು ಪರಿತ್ಯಾಗ ಮಾಡಿದನು. ಅತ್ಯಂತಕರ್ಮನಿಷ್ಠನಾದ ಅಶ್ವಗ್ರೀವನು ಸ್ವಧರ್ಮದಿಂದ ಸಿದ್ಧಿಯನ್ನು ಪಡೆದುಕೊಂಡು ದೇವಲೋಕದಲ್ಲಿ ಸುಖವನ್ನು ಅನುಭವಿಸುತ್ತಿದ್ದಾನೆ.

ಟಿಪ್ಪಣಿ - ಕ್ಷತ್ರಿಯರಿಗೆ ಶತ್ರುಗಳನ್ನು ಸಂಹಾರ ಮಾಡುವುದೇ ಸ್ವಧರ್ಮವಾಗಿದೆ. ಶತ್ರುಗಳನ್ನು ಸಂಹಾರ ಮಾಡಿ, ವಿಜಯಶಾಲಿಯಾಗಿ ರಾಜ್ಯವನ್ನು ಪರಿಪಾಲನೆ ಮಾಡಬೇಕು. ಇಂಥ ಸೌಭಾಗ್ಯವು ನಿನ್ನ ಪಾಲಿಗೆ ಒದಗಿದೆ. ಹಯಗ್ರೀವ ಎಂಬ ರಾಜನು ಹಿಂದೆ ಶತ್ರುಗಳ ಜೊತೆ ಯುದ್ಧ ಮಾಡಿ ಸತ್ತನು. ವಿಜಯವನ್ನೂ ಕೂಡ ಪಡೆಯಲಿಲ್ಲ. ಆದರೆ ಧರ್ಮಪರಿಪಾಲನೆ ಮಾಡಬೇಕೆಂಬ ಕರ್ತವ್ಯನಿಷ್ಠತೆಯು ಅವನಲ್ಲಿ ಹೇರಳವಾಗಿತ್ತು. ಶತ್ರುಗಳಿಂದ ತಾನು ಸೋಲುತ್ತೇನೆಂಬ ವಿಚಾರವು ತಿಳಿದಿದ್ದರೂ ಕೂಡ ಯುದ್ಧದಿಂದ ವಿಮುಖನಾಗಲಿಲ್ಲ. ಯುದ್ಧ ಮಾಡಿ ಸತ್ತನು. ಇದರ ಫಲವಾಗಿ ದೇವಲೋಕದಲ್ಲಿ ದೇವತೆಗಳಿಂದಲೂ ಮಾನ್ಯನಾದನು. ಇಂದೂ ಸಹ ಸುಖವಾಗಿ ದೇವಲೋಕದಲ್ಲಿದ್ದಾನೆ. ಹೀಗೆ ಯುದ್ಧದಲ್ಲಿ ಸೋಲುವುದು ಖಚಿತವಾದರೂ ಕೂಡ ಯುದ್ಧ ಮಾಡಬೇಕು. ಹೀಗಿರುವಾಗ ವಿಜಯಶಾಲಿಯಾದ ನಿನ್ನ ಸೌಭಾಗ್ಯ ಮಹತ್ತರವಾಗಿದೆ ಎಂದಭಿಪ್ರಾಯ.

ಧನುರ್ಯೂಪೋ ರಶನಾ ಜ್ಯಾ ಶರಃ ಸ್ರುಕ್-
ಸ್ರುವಃ ಖಡ್ಗೋ ರುಧಿರಂ ಯತ್ರ ಚಾಜ್ಯಮ್।

ರಥೋ ವೇದೀ ಕಾಮಗೋ ಯುದ್ಧಮಗ್ನಿಃ
ಚಾತುರ್ಹೋತ್ರಂ ಚತುರೋ ವಾಜಿಮುಖ್ಯಾಃ ॥೩೨॥

ಯುದ್ಧವೇ ಒಂದು ಪವಿತ್ರವಾದ ಯಜ್ಞ. ಆ ಯಜ್ಞದಲ್ಲಿ ಧನಸ್ಸು ಯೂಪ-ಸ್ತಂಭ. ಧನುಸ್ಸಿನ ಹಗ್ಗವೇ ಯಜ್ಞಕ್ಕೆ ಬೇಕಾದ ಬಂಧನರಜ್ಜು. ಬಾಣವು ಸ್ರುಕ್, ಖಡ್ಗವು ಸ್ರುವ, ರಕ್ತವೇ ಆಜ್ಯ. ರಥವು ಯಜ್ಞದ ವೇದಿಕೆ. ಕಾಮಮೂಲವಾದ ಕ್ರೋಧವೇ ಅಗ್ನಿ. ನಾಕು ರಥಾಶ್ವಗಳು ನಾಕುಮಂದಿ ಋತ್ವಿಜರು.

ಟಿಪ್ಪಣಿ - ಧನುರ್ಯೂಪೋ ರಶನಾ ಜ್ಯಾ ಶರಃ ಸ್ರುಕ್ ಇತ್ಯತ್ರ ಜ್ಯಾ ರಶನಾ ಯೂಪಬಂಧನಮೇಖಲಾ।

'ಧನುರ್ಯೂಪೋ ರಶನಾ ಜ್ಯಾ ಶರಃ ಸ್ರುಕ್' - ಎಂಬಲ್ಲಿ ಜ್ಯಾ ರಶನಾ ಎಂದರೆ ಯೂಪವನ್ನು ಕಟ್ಟಲು ಉಪಯೋಗಿಸುವ ಹಗ್ಗ ಎಂದರ್ಥ.

ಹುತ್ವಾತಸ್ಮಿನ್ ಯಜ್ಞವಹ್ನಾವಧಾರೀನ್
ಪಾಪಾನ್ಮುಕ್ತೋ ರಾಜಸಿಂಹಸ್ತರಸ್ವೀ।
ಪ್ರಾಣಾನ್ ಹುತ್ವಾ ಚಾವಭೃಥೇ ರಣೇ ಸ
ವಾಜಿಗ್ರೀವೋ ಮೋದತೇ ದೇವಲೋಕೇ ॥೩೩॥

ಹಯಗ್ರೀವ ಎಂಬ ರಾಜನು ಇಂಥ ಯುದ್ಧವೆಂಬ ಅಗ್ನಿಯಲ್ಲಿ ಶತ್ರುಗಳನ್ನು ಹೋಮ ಮಾಡಿ, ಸಕಲವಿಧವಾದ ಪಾಪಗಳಿಂದ ಮುಕ್ತನಾದನು. ಆ ರಣಯಜ್ಞದ ಅವಭೃಥದಲ್ಲಿ ತನ್ನ ಪ್ರಾಣಗಳನ್ನು ಹೋಮಮಾಡಿದ ಹಯಗ್ರೀವನೆಂಬ ರಾಜನು ದೇವಲೋಕದಲ್ಲಿ ಸಂತೋಷ ಪಡುತ್ತಿದ್ದಾನೆ.

ವ್ಯಾಖ್ಯಾನ - ಕ್ಷತ್ರಿಯರಿಗೆ ಯುದ್ಧವೇ ಕರ್ತವ್ಯವಾಗಿದೆ. ಇದನ್ನು ಯಜ್ಞವೆಂದು ಅನುಸಂಧಾನ ಮಾಡಿ, ಭಗವಂತನಿಗೆ ಸಮರ್ಪಣೆ ಮಾಡಬೇಕು. ಅದರ ಅನು-ಸಂಧಾನವನ್ನು ಈ ಎರಡು ಶ್ಲೋಕಗಳು ಎಚ್ಚರಿಸುತ್ತಿವೆ. ಹೋಮ ಮಾಡುವುದಕ್ಕೆ ಯೂಪಸ್ತಂಭ ಹಗ್ಗ, ಸ್ರುಕ್, ಸ್ರುವ, ತುಪ್ಪ, ವೇದಿಕೆ, ಅಗ್ನಿ ಇವುಗಳು ಬೇಕು. ಈ ಯುದ್ಧದಲ್ಲಿ ಧನುಸ್ಸನ್ನು ಯೂಪಸ್ತಂಭವೆಂದು ಭಾವಿಸಿ, ಬಾಣವನ್ನು ಸ್ರುಕ್ ಎಂದು, ಖಡ್ಗವನ್ನು ಸ್ರುವವೆಂದು, ರಕ್ತವನ್ನು ಆಜ್ಯವೆಂದು ಭಾವಿಸಿ ಶತ್ರುಗಳನ್ನು ಅಗ್ನಿಯಲ್ಲಿ

ಹೋಮ ಮಾಡಬೇಕು. ತಾನೇ ಮರಣವನ್ನು ಹೊಂದುವುದಾದರೆ, ತನ್ನನ್ನೇ ಭಗವಂತನಿಗೆ ಯುದ್ಧಾಗ್ನಿಯಲ್ಲಿ ಹೋಮಿಸಿಕೊಳ್ಳಬೇಕು. ಇದೇ ಕ್ರಮದಲ್ಲಿ ಆಯಾ ಜಾತಿಯವರು ತಮ್ಮ ತಮ್ಮ ಕರ್ತವ್ಯಗಳನ್ನು ಯಜ್ಞವೆಂದು ಅನುಸಂಧಾನ ಮಾಡಿ ಭಗವಂತನಿಗೆ ಸಮರ್ಪಣೆ ಮಾಡಬೇಕು.

ಹಯಗ್ರೀವ ಎಂಬ ರಾಜನು ಅತ್ಯಂತ ಕರ್ಮಾಚರಣೆ ಶೀಲನಾಗಿದ್ದನು. ಜೀವನ-ಪೂರ್ತಿ ಅನೇಕ ಯಜ್ಞಯಾಗಾದಿಗಳನ್ನು ಆಚರಿಸಿದ್ದನು. ಅದರ ಫಲವಾಗಿ ಯುದ್ಧವನ್ನೂ ಕೂಡ ಯಜ್ಞವೆಂದೇ ಭಾವಿಸಿ ಸಾರ್ಥಕ ಮಾಡಿಕೊಂಡನು.

ರಾಷ್ಟ್ರಂ ರಕ್ಷನ್ ಬುದ್ಧಿಪೂರ್ವಂ ನಯೇನ
ಸಂತ್ಯಕ್ತಾತ್ಮಾ ಯಜ್ಞಶೀಲೋ ಮಹಾತ್ಮಾ।
ಸರ್ವಾಂಲ್ಲೋಕಾನ್ ವ್ಯಾಪ್ಯ ಕೀರ್ತ್ಯಾ ಮನಸ್ವೀ
ವಾಜಿಗ್ರೀವೋ ಮೋದತೇ ದೇವಲೋಕೇ ॥೩೪॥

ಹಯಗ್ರೀವ ಎಂಬ ರಾಜನು ಯಜ್ಞವನ್ನು ಮಾಡುವುದರಲ್ಲಿ ಆಸಕ್ತನಾಗಿದ್ದನು, ಪುಣ್ಯಾತ್ಮನಾಗಿದ್ದನು, ಮನನಶೀಲನಾಗಿದ್ದನು, ಬುದ್ಧಿಪೂರ್ವಕವಾಗಿ ಒಳ್ಳೆಯ ನೀತಿಯನ್ನು ಅನುಸರಿಸಿ, ರಾಷ್ಟ್ರವನ್ನು ರಕ್ಷಿಸುತ್ತಿದ್ದನು. ಅವನ ಕೀರ್ತಿಯು ಎಲ್ಲಾ ಲೋಕಗಳಲ್ಲಿಯೂ ಪ್ರಸಿದ್ಧವಾಗಿತ್ತು. ಇವನು ಯಜ್ಞರೂಪದಲ್ಲಿ ಪ್ರಾಣಾರ್ಪಣೆ-ಯನ್ನು ಮಾಡಿಕೊಂಡು ದೇವಲೋಕದಲ್ಲಿ ಇಂದೂ ಕೂಡ ಆನಂದವಾಗಿದ್ದಾನೆ.

ದೈವೀಂ ಸಿದ್ಧಿಂ ಮಾನುಷೀಂ ದಂಡನೀತಿಂ
ಯೋಗ್ಯನ್ಯಾಸೈಃ ಪಾಲಯಿತ್ವಾ ಮಹೀಂ ಚ।
ತಸ್ಮಾದ್ ರಾಜಾ ಧರ್ಮಶೀಲೋ ಮಹಾತ್ಮಾ
ಹಯಗ್ರೀವೋ ಮೋದತೇ ಸ್ವರ್ಗಲೋಕೇ ॥೩೫॥

ಹಯಗ್ರೀವನೆಂಬ ರಾಜನಿಗೆ ಎಲ್ಲ ಕಾರ್ಯಗಳಲ್ಲಿ ಅತ್ಯಂತ ಉತ್ಸಾಹವಿತ್ತು. ಯಾವುದರಲ್ಲೂ ಸ್ವಾಭಿಮಾನವಿರಲಿಲ್ಲ. ಯಾಗ ಮೊದಲಾದ ದೇವಕಾರ್ಯಗಳಲ್ಲಿ ಪ್ರಜೆಗಳನ್ನು ರಕ್ಷಣೆ ಮಾಡುವ ವಿಷಯದಲ್ಲಿ ಅತ್ಯಂತಆಸಕ್ತನಾಗಿದ್ದನು. ಅಹಂಕಾರ-

ತ್ಯಾಗರೂಪವಾದ ದೈವೀಸಿದ್ಧಿಯನ್ನು, ದಂಡನೀತಿರೂಪವಾದ ಮಾನುಷೀಸಿದ್ಧಿಯನ್ನು ಹೊಂದಿ ಪುಣ್ಯವಿಶೇಷವನ್ನು ಗಳಿಸಿದನು. ಇದರ ಫಲವಾಗಿ ದೇವಲೋಕದಲ್ಲಿ ಇಂದೂ ಕೂಡ ಸುಖವನ್ನು ಅನುಭವಿಸುತ್ತಿದ್ದಾನೆ.

ವ್ಯಾಖ್ಯಾನ - ಯೋಗನ್ಯಾಸ್ಯೈಃ ಎಂಬಲ್ಲಿ ಯೋಗಶಬ್ದಕ್ಕೆ ಕಾರ್ಯೋತ್ಸಾಹ ಎಂದರ್ಥ. ನ್ಯಾಸ ಶಬ್ದಕ್ಕೆ ಅಭಿಮಾನತ್ಯಾಗ ಎಂದರ್ಥ. ಕಾರ್ಯೋತ್ಸಾಹ ಮತ್ತು ಅಭಿಮಾನತ್ಯಾಗಗಳಿಂದ ದೈವೀಸಿದ್ಧಿಯನ್ನು ಪಡೆದುಕೊಂಡಿದ್ದನು. ದೈವೀಸಿದ್ಧಿ ಎಂದರೆ ಯಜ್ಞಾದಿ ಕ್ರಿಯೆಗಳನ್ನು ಮಾಡಿ, ಸಿದ್ಧಿಯನ್ನು ಪಡೆದುಕೊಂಡಿದ್ದನು ಎಂದು ಅರ್ಥ. ಹೀಗೆ ದೈವಸಂಬಂಧವಾದ ಎಲ್ಲ ಸಿದ್ಧಿಗಳನ್ನು ಪಡೆದುಕೊಂಡು ರಾಜನು ಮಾಡಬೇಕಾದ ದಂಡನೀತಿಯನ್ನು ಅನುಸರಿಸುತ್ತಿದ್ದನು.

ವಿದ್ವಾಂಸ್ತ್ಯಾಗೀ ಶ್ರದ್ದಧಾನಃ ಕೃತಜ್ಞಃ
ತ್ಯಕ್ತ್ವಾ ಲೋಕಂ ಮಾನುಷಂ ಕರ್ಮ ಕೃತ್ವಾ।
ಮೇಧಾವಿನಾಂ ವಿದುಷಾಂ ಸಮ್ಮತಾನಾಂ
ತನುತ್ಯಜಾಂ ಲೋಕಮಾಕ್ರಮ್ಯ ರಾಜಾ ॥೩೬॥

ಹಯಗ್ರೀವನು ವಿದ್ವಾಂಸನಾಗಿದ್ದನು, ತ್ಯಾಗಿಯಾಗಿದ್ದನು, ಅತ್ಯಂತ ಶ್ರದ್ಧಾಳುವಾಗಿದ್ದನು, ಕೃತಜ್ಞನಾಗಿದ್ದನು. ಮನುಷ್ಯರು ಮಾಡಬೇಕಾದ ಕರ್ತವ್ಯಗಳನ್ನು ಆಚರಿಸುತ್ತಿದ್ದನು. ಪ್ರತಿಯೊಂದರಲ್ಲೂ ಉತ್ಸಾಹದಿಂದ ಭಾಗವಹಿಸುತ್ತಿದ್ದನು. ಯುದ್ಧವೆಂಬ ಯಜ್ಞದ ಮೂಲಕ ಈ ಶರೀರವನ್ನು ಪರಿತ್ಯಾಗ ಮಾಡಿ ಪುಣ್ಯಲೋಕಗಳನ್ನು ಹೊಂದಿ, ಆನಂದವಾಗಿ ಕಾಲಕಳೆಯುತ್ತಿದ್ದಾನೆ.

ಸಮ್ಯಗ್ ವೇದಾನ್ ಪ್ರಾಪ್ಯ ಶಾಸ್ತ್ರಾಣ್ಯಧೀತ್ಯ
ಸಮ್ಯಗ್ ರಾಷ್ಟ್ರಂ ಪಾಲಯಿತ್ವಾ ಮಹಾತ್ಮಾ।
ಚಾತುರ್ವರ್ಣ್ಯಂ ಸ್ಥಾಪಯಿತ್ವಾ ಸ್ವಧರ್ಮೇ
ವಾಜಿಗ್ರೀವೋ ಮೋದತೇ ದೇವಲೋಕೇ ॥೩೭॥

ಎಲ್ಲಾ ವೇದಗಳನ್ನು ಚೆನ್ನಾಗಿ ಅಧ್ಯಯನ ಮಾಡಿದ್ದನು. ಶಾಸ್ತ್ರಗಳನ್ನೂ ಕೂಡ

ಅಮೂಲಾಗ್ರವಾಗಿ ತಿಳಿದಿದ್ದನು. ರಾಜ್ಯವನ್ನು ನ್ಯಾಯಸಮ್ಮತವಾಗಿ ರಕ್ಷಣೆ ಮಾಡುತ್ತಿದ್ದನು. ಆದ್ದರಿಂದಲೇ ಮಹಾತ್ಮನಾಗಿದ್ದನು. ಚಾತುರ್ವರ್ಣ್ಯದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಡೆಸುತ್ತಿದ್ದನು. ತನ್ನ ಧರ್ಮದಲ್ಲಿ ರತನಾಗಿದ್ದನು. ಇಂಥ ವಾಜಿಗ್ರೀವನು ದೇವಲೋಕದಲ್ಲಿ ಸುಖವಾಗಿದ್ದಾನೆ.

ಜಿತ್ವಾ ಸಂಗ್ರಾಮಾನ್ ಪಾಲಯಿತ್ವಾ ಪ್ರಜಾಶ್ಚ
ಸೋಮಂ ಪೀತ್ವಾ ತರ್ಪಯಿತ್ವಾ ದ್ವಿಜಾಗ್ರ್ಯಾನ್ ।
ಯುಕ್ತ್ಯಾ ದಂಡಂ ಧಾರಯಿತ್ವಾ ಪ್ರಜಾನಾಂ
ಯುದ್ಧೇ ಕ್ಷೀಣೋ ಮೋದತೇ ದೇವಲೋಕೇ ॥೩೮॥

ಆ ಹಯಗ್ರೀವರಾಜನು ಅನೇಕ ಯುದ್ಧಗಳಲ್ಲಿ ಪಾಲ್ಗೊಂಡು ಶತ್ರುಗಳನ್ನು ಜಯಿಸಿದ್ದನು. ಪ್ರಜೆಗಳನ್ನು ಧರ್ಮದಿಂದ ಪರಿಪಾಲನೆ ಮಾಡುತ್ತಿದ್ದನು. ಯಜ್ಞಗಳಲ್ಲಿ ಸೋಮಪಾನವನ್ನು ಮಾಡುವಷ್ಟು ಶ್ರೇಷ್ಠನಾಗಿದ್ದನು. ಶ್ರೇಷ್ಠರಾದ ಬ್ರಾಹ್ಮಣರಿಗೆ, ದಕ್ಷಿಣಾದಿಗಳನ್ನು ಕೊಟ್ಟು ತೃಪ್ತಿಪಡಿಸುತ್ತಿದ್ದನು. ದಂಡನೀತಿಯ ಮೂಲಕ ಮತ್ತು ಯುಕ್ತಿಯಿಂದ ಪ್ರಜೆಗಳ ಪೋಷಣೆಯನ್ನು ಮಾಡುತ್ತಿದ್ದನು. ಇಂಥ ಶ್ರೇಷ್ಠನಾದ ರಾಜನು ಯುದ್ಧದಲ್ಲಿ ಅಸು ನೀಗಿ ದೇವಲೋಕದಲ್ಲಿ ಆನಂದವಾಗಿದ್ದಾನೆ.

ವೃತ್ತಂ ಯಸ್ಯ ಶ್ಲಾಘನೀಯಂ ಮನುಷ್ಯಾಃ
ಸಂತೋ ವಿದ್ವಾಂಸಶ್ಚಾರ್ಹಯಂತ್ಯರ್ಹಣೀಯಾಃ ।
ಸ್ವರ್ಗಂ ಜಿತ್ವಾ ವೀರಲೋಕಾಂಶ್ಚ ಗತ್ವಾ
ಸಿದ್ಧಿಂ ಪ್ರಾಪ್ತಾಃ ಪುಣ್ಯಕೀರ್ತಿರ್ಮಹಾತ್ಮಾ ॥೩೯॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ
ರಾಜಧರ್ಮೇ ಪಂಚವಿಂಶೋಽಧ್ಯಾಯಃ ॥೨೫॥

ವಿದ್ವಾಂಸರು, ಸಜ್ಜನರು ಇವನ ಉತ್ತಮ ಕಾರ್ಯಗಳನ್ನು ಇಂದೂ ಕೂಡ ಪ್ರಶಂಸೆ ಮಾಡುತ್ತಾರೆ. ಪುಣ್ಯಕೀರ್ತಿಯಾದ ಈ ಮಹಾತ್ಮನು ವೀರಜನರಿಗೆ

ಯೋಗ್ಯವಾದ ಗತಿಯನ್ನು ಪಡೆದು, ಈಗ ಸ್ವರ್ಗಲೋಕದಲ್ಲಿ ಆನಂದವನ್ನು ಅನುಭವಿಸುತ್ತಿದ್ದಾನೆ. ,

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೨೫ನೆಯ ಅಧ್ಯಾಯ ಮುಗಿಯಿತು.

* * * * *

೨೬. ಇಪ್ಪತ್ತಾರನೆಯ ಅಧ್ಯಾಯ

ವೇದವ್ಯಾಸದೇವರಿಂದ ಯುಧಿಷ್ಠಿರನಿಗೆ ರಾಜಧರ್ಮದ ಉಪದೇಶ. ಸೇನಜಿತ್ ಎಂಬ ರಾಜನು ಉಪದೇಶಿಸಿದ ಧರ್ಮದ ಅನುವಾದ. ದ್ವಂದ್ವಾತೀತನಾಗಬೇಕೆಂಬುದರ ಉಪದೇಶ. ಕ್ಷಣಿಕವಾದ ಸಂಸಾರದಲ್ಲಿ ಆಸೆಯನ್ನು ಪರಿತ್ಯಾಗ ಮಾಡಬೇಕೆಂಬುದರ ವಿವರಣೆ.

ವೈಶಂಪಾಯನಃ

ದ್ವೈಪಾಯನವಚಃ ಶ್ರುತ್ವಾ ಕುಪಿತೇ ಚ ಧನಂಜಯೇ।
ವ್ಯಾಸಮಾಮಂತ್ರ್ಯ ಕೌಂತೇಯಃ ಪ್ರತ್ಯುವಾಚ ಯುಧಿಷ್ಠಿರಃ ॥೧॥

ವೈಶಂಪಾಯನರು– ಜನಮೇಜಯನೇ! ಅರ್ಜುನನಿಗೆ ಬಹಳ ಕೋಪವು ಬಂದಿತ್ತು. ಇವನನ್ನು ನೋಡಿ, ವೇದವ್ಯಾಸದೇವರ ಬಳಿ ಯುಧಿಷ್ಠಿರನು ಹೀಗೆ ಹೇಳುತ್ತಾನೆ -

ನ ಪಾರ್ಥಿವಮಿದಂ ರಾಜ್ಯಂ ನಚ ಭೋಗಾಃ ಪೃಥಗ್ವಿಧಾಃ।
ಪ್ರೀಣಯಂತಿ ಮನೋ ಮೇಽದ್ಯ ಶೋಕೋ ಮಾ ನರ್ದಯತ್ಯಯಮ್ ॥೨

ಭಗವಾನ್ ವೇದವ್ಯಾಸರೇ! ಸಮಸ್ತ ಭೂಮಿಯಿಂದ ಕೂಡಿದ ಈ ರಾಜ್ಯ ಮತ್ತು ವಿವಿಧ ಭೋಗಗಳು ನನ್ನ ಮನಸ್ಸಿಗೆ ಸಂತೋಷಕರವಾಗಿರುವುದಿಲ್ಲ. ಕೇವಲ ದುಃಖವೇ ನನ್ನಲ್ಲಿ ವಿಜೃಂಭಿಸುತ್ತಿದೆ.

ಶ್ರುತ್ವಾ ಚ ವೀರಹೀನಾನಾಮಪುತ್ರಾಣಾಂ ಚ ಯೋಷಿತಾಮ್।
ಪರಿದೇವಯಮಾನಾನಾಂ ಶಾಂತಿಂ ನೋಪಲಭೇ ಮುನೇ ॥೩॥

ಪತಿಯನ್ನು, ಪುತ್ರರನ್ನು ಕಳೆದುಕೊಂಡ ಸ್ತ್ರೀಯರ ಆಕ್ರಂದನವನ್ನು ಕೇಳಿ ನನ್ನ ಮನಸ್ಸಿಗೆ ಶಾಂತಿಯೇ ದೊರೆಯುತ್ತಿಲ್ಲ.

ಇತ್ಯುಕ್ತಃ ಪ್ರತ್ಯುವಾಚೇದಂ ವ್ಯಾಸೋ ಯೋಗವಿದಾಂ ವರಃ।
ಯುಧಿಷ್ಠಿರಂ ಮಹಾಪ್ರಾಜ್ಞೋ ಧರ್ಮಜ್ಞೋ ವೇದಪಾರಗಃ ॥೪॥

ಜನಮೇಜಯನೇ! ಯುಧಿಷ್ಠಿರನು ವೇದವ್ಯಾಸದೇವರನ್ನು ಕುರಿತು ಹೀಗೆ ಹೇಳಿದನು - ಆಗ ಯೋಗಿಜ್ಞಾನಿಗಳಲ್ಲಿ ಸರ್ವೋತ್ತಮರಾದ, ಸರ್ವಜ್ಞರಾದ, ಧರ್ಮಜ್ಞರಾದ, ವೇದವೇದಾಂಗಪರಾಂಗತರಾದ ಶ್ರೀವೇದವ್ಯಾಸದೇವರು ಯುಧಿಷ್ಠಿರನನ್ನು ಕುರಿತು ಹೀಗೆ ಹೇಳಿದರು.

ನ ಕರ್ಮಣಾ ಲಭ್ಯತೇ ಚಿಂತಯಾ ವಾ
ನಾಪ್ಯಸ್ತಿ ದಾತಾ ಪುರುಷಸ್ಯ ಕಶ್ಚಿತ್।
ಪರ್ಯಾಯಯೋಗಾದ್ ವಿಹಿತಂ ವಿಧಾತ್ರಾ
ಕಾಲೇನ ಸರ್ವಂ ಲಭತೇ ಮನುಷ್ಯಃ ॥೫॥

ನಮಗೆ ಅಪೇಕ್ಷಿತವಾದ ವಸ್ತುವು ಕೇವಲ ಕಾರ್ಯದಿಂದ ದೊರಕುವುದಿಲ್ಲ. ಚಿಂತೆ ಮಾಡುವುದರಿಂದ ಅದು ಸಿಗುವುದಿಲ್ಲ. ತನಗೆ ಅಪೇಕ್ಷಿತವಾದ ವಸ್ತುವನ್ನು ಕೊಡುವ ಪುರುಷನೂ ಕೂಡ ಯಾರೂ ಇರುವುದಿಲ್ಲ. ಕಾಲಯೋಗವನ್ನನುಸರಿಸಿ ದೈವದಿಂದ ಅದು ದೊರಕುತ್ತದೆ. ಎಲ್ಲವನ್ನೂ ಕೂಡ ಆಯಾ ಸಮಯದಲ್ಲಿ ಮನುಷ್ಯರಿಗೆ ಭಗವಂತನು ನೀಡುತ್ತಾನೆ.

ನ ಬುದ್ಧಿಶಾಸ್ತ್ರಾಧ್ಯಯನೇನ ಶಕ್ಯಂ
ಪ್ರಾಪ್ತುಂ ವಿಶೇಷಂ ಮನುಜೈರಕಾಲೇ।
ಮೂರ್ಖೋऽಪಿ ಪ್ರಾಪ್ನೋತಿ ಕದಾಚಿದರ್ಥಾನ್
ಕಾಲೋ ಹಿ ಕಾರ್ಯಂ ಪ್ರತಿ ನಿರ್ವಿಶೇಷಃ ॥೬॥

ಬುದ್ಧಿಯಿಂದ ಶಾಸ್ತ್ರಗಳ ಅಧ್ಯಯನದಿಂದ ಯೋಗವಿಲ್ಲದ ಕಾಲದಲ್ಲಿ ಯಾವುದೇ

ವಿಶೇಷಫಲವನ್ನು ಪಡೆಯಲು ಯಾವ ಮನುಷ್ಯರಿಗೂ ಕೂಡ ಸಾಧ್ಯವಿಲ್ಲ. ಕಾಲವು ಪಕ್ವವಾದಾಗಷ್ಟೇ ಫಲವು ದೊರಕುತ್ತದೆ. ಬುದ್ಧಿಹೀನನಾದ ಮೂರ್ಖನಿಗೂ ಕಾಲ ಬಂತೆಂದರೆ ಯಥೇಚ್ಛವಾದ ಐಶ್ವರ್ಯವು ತಾನಾಗಿಯೇ ಬರುತ್ತದೆ. ಆದ್ದರಿಂದ ಕಾರ್ಯದ ಸಿದ್ಧಿಗೆ ಕಾಲದ ಪಕ್ವತೆಯೇ ಕಾರಣವಾಗುತ್ತದೆ. ಪ್ರಾಜ್ಞರು, ಮೂರ್ಖರು ಎಂಬ ಭೇದವಿರುವುದಿಲ್ಲ.

ನಾಭೂತಿಕಾಲೇ ಚ ಫಲಂ ದದಾತಿ
ಶಿಲ್ಪಾನಿ ನ ಮಂತ್ರಾಶ್ಚ ತಥೌಷಧಾನಿ।
ತಾನ್ಯೇವ ಕಾಲೇನ ಸಮಾಹಿತಾನಿ
ಸಿದ್ಧ್ಯಂತಿ ವರ್ಧಂತಿ ಚ ಭೂತಿಕಾಲೇ ॥೭॥

ಮನುಷ್ಯನಿಗೆ ದೊರೆಯಬಾರದು ಎಂಬ ಭಗವತ್ ಸಂಕಲ್ಪವಿದ್ದಾಗ, ಮಂತ್ರ-ಗಳು, ಔಷಧಿಗಳು, ಶಿಲ್ಪಶಾಸ್ತ್ರಗಳು ಯಾವುದೇ ಬಗೆಯ ಫಲವನ್ನು ನೀಡುವುದಿಲ್ಲ. ಇದೇ ಶಿಲ್ಪಶಾಸ್ತ್ರ ಹಾಗೂ ಮಂತ್ರೌಷಧಿಗಳು ಮನುಷ್ಯರನ್ನು ಉಚ್ಚ್ರಾಯಸ್ಥಿತಿಯಲ್ಲಿ-ಡುತ್ತವೆ. ಕಾಲನ ಪ್ರೇರಣೆಯಿಂದ ಕೈ ಹಾಕಿದ ಕಾರ್ಯಗಳೆಲ್ಲವೂ ಸಿದ್ಧಿಸುತ್ತವೆ.

ಕಾಲೇನ ಶೀಘ್ರಾಃ ಪ್ರವಿವಾಂತಿ ವಾತಾಃ
ಕಾಲೇನ ವೃಷ್ಟಿರ್ಜಲದಾನುಪೈತಿ।
ಕಾಲೇನ ಪದ್ಮೋತ್ಪಲವಜ್ಜಲಂ ಚ
ಕಾಲೇನ ಪುಷ್ಯಂತಿ ವನೇಷು ವೃಕ್ಷಾಃ ॥೮॥

ಕಾಲವು ಬಂದಾಗಷ್ಟೇ ಗಾಳಿಯು ವೇಗವಾಗಿ ಬೀಸುತ್ತದೆ. ಕಾಲವು ಬಂದಾಗಷ್ಟೇ ಮೋಡಗಳು ನೀರನ್ನು ಸುರಿಸುತ್ತವೆ. ಕಾಲವು ಪ್ರಾಪ್ತವಾದಾಗಷ್ಟೇ ಸರೋವರದ ನೀರು ಕಮಲಪುಷ್ಪಗಳಿಂದ ಶೋಭಾಯಮಾನವಾಗುತ್ತದೆ. ಸರಿಯಾದ ಕಾಲದಲ್ಲಷ್ಟೇ ಅರಣ್ಯದಲ್ಲಿರುವ ಮರಗಳು ಚಿಗುರಿ ಹಸಿರಾಗುತ್ತವೆ.

ಟಿಪ್ಪಣಿ - ಬಿರುಗಾಳಿಯು ಯಾವಾಗಲೂ ಬರುವುದಿಲ್ಲ. ಮಳೆಯೂ ಕೂಡ ವರ್ಷಪೂರ್ತಿ ಬರುವುದಿಲ್ಲ. ಕಮಲಪುಷ್ಪ ರಾತ್ರಿ ಅರಳುವುದಿಲ್ಲ. ಕುಮುದಪುಷ್ಪ

ಹಗಲು ಆರಳುವುದಿಲ್ಲ. ವಸಂತಕಾಲ ಬಿಟ್ಟು, ಬೇರೆ ಕಾಲದಲ್ಲಿ ಗಿಡಮರಗಳು ಚಿಗುರುವುದಿಲ್ಲ. ಹೀಗೆ ಪ್ರತಿಯೊಂದಕ್ಕೂ ಆಯಾ ಕಾಲಗಳು ಪಕ್ವವಾಗಬೇಕು. ಹೀಗೆ ಪ್ರತಿಯೊಂದಕ್ಕೂ ಕಾಲವು ಬರಬೇಕು.

ಕಾಲೇನ ಕೃಷ್ಣಾಶ್ಚ ಸಿತಾಶ್ಚ ರಾತ್ರ್ಯಃ
ಕಾಲೇನ ಚಂದ್ರಃ ಪರಿಪೂರ್ಣಬಿಂಬಃ।
ನಾಕಾಲತಃ ಪುಷ್ಪಫಲಂ ನಗಾನಾಂ
ನಾಕಾಲವೇಗಾಃ ಸರಿತೋ ವಹಂತಿ ॥೯॥

ಕಾಲಕ್ಕೆ ಅನುಗುಣವಾಗಿ ಶುಕ್ಲಪಕ್ಷ-ಕೃಷ್ಣಪಕ್ಷಗಳೆರಡು ಬರುತ್ತವೆ. ಕಾಲಕ್ಕನುಗುಣವಾಗಿಯೇ ಚಂದ್ರನು ಪರಿಪೂರ್ಣವಾಗುತ್ತಾನೆ. ಅಕಾಲದಲ್ಲಿ ವೃಕ್ಷಗಳು ಫಲ-ಪುಷ್ಪಗಳನ್ನು ನೀಡುವುದಿಲ್ಲ. ಅಕಾಲದಲ್ಲಿ ನದಿಗಳು ವೇಗವಾಗಿ ಹರಿಯುವುದಿಲ್ಲ.

ನಾಕಾಲಮತ್ತಾಃ ಖಗಪನ್ನಗಾಶ್ಚ
ಮೃಗದ್ವಿಪಾಃ ಶೈಲಮೃಗಾಶ್ಚ ಲೋಕೇ।
ನಾಕಾಲತಃ ಸ್ತ್ರೀಷು ಭವಂತಿ ಗರ್ಭಾ
ನಾಯಾಂತ್ಯಕಾಲೇ ಶಿಶಿರೋಷ್ಣವರ್ಷಾಃ ॥೧೦॥

ಪಕ್ಷಿಗಳು, ಸರ್ಪಗಳು, ಮೃಗಗಳು, ಆನೆಗಳು, ಬೆಟ್ಟದ ಜಂತುಗಳು ಇವುಗಳಲ್ಲಿ ಯಾವುದೊಂದೂ ಕೂಡ ಅಕಾಲದಲ್ಲಿ ಮದಭರಿತವಾಗುವುದಿಲ್ಲ. ಸ್ತ್ರೀಯರಿಗೆ ಅಕಾಲದಲ್ಲಿ ಗರ್ಭವು ಉಂಟಾಗುವುದಿಲ್ಲ. ಶೀತೋಷ್ಣಗಳಾಗಲೀ, ಮಳೆಯಾಗಲೀ ಅಕಾಲದಲ್ಲಿ ಉಂಟಾಗುವುದಿಲ್ಲ.

ನಾಕಾಲತೋ ಮ್ರಿಯತೇ ಜಾಯತೇ ವಾ
ನಾಕಾಲತೋ ವ್ಯಾಹರತೇ ಚ ಬಾಲಃ।
ನಾಕಾಲತೋ ಯೌವನಮಭ್ಯುಪೈತಿ
ನಾಕಾಲತೋ ರೋಹತಿ ಬೀಜಮುಪ್ತಮ್ ॥೧೧॥

ಅಕಾಲದಲ್ಲಿ ಮಗು ಹುಟ್ಟುವುದಿಲ್ಲ. ಮತ್ತು ಸಾಯುವುದೂ ಇಲ್ಲ. ಕಾಲಕ್ಕೂ ಮೊದಲು ಮಾತನಾಡಲು ಕಲಿಯುವುದಿಲ್ಲ. ಕಾಲವು ಪಕ್ವವಾಗದೇ ಯೌವನ ಬರುವುದಿಲ್ಲ.

ಟಿಪ್ಪಣಿ - ಮಗು ಹುಟ್ಟಬೇಕೆಂದು ಏನೇ ಪ್ರಯತ್ನ ಪಟ್ಟರೂ ಮಗುವು ಹುಟ್ಟುವುದಿಲ್ಲ. ಪೂರ್ವಕರ್ಮದ ಅನುಸಾರಿಯಾಗಿಯೇ ಮಗುವು ಹುಟ್ಟುತ್ತದೆ. ಅದರಂತೆ ಹುಟ್ಟಿದ ಮಗು ಎಲ್ಲಿ ಸಾಯುತ್ತದೋ, ಎಂಬ ಭಯವೂ ಅನಾವಶ್ಯಕ. ಪೂರ್ವಕರ್ಮದಂತೆ ಕಾಲವು ಬಂದಾಗಷ್ಟೇ ಅದಕ್ಕೆ ಸಾವು ಬರುತ್ತದೆ. ಹುಟ್ಟು ಸಾವುಗಳು ನಮ್ಮ ಅಧೀನವಾಗಿರುವುದಿಲ್ಲ. ಆದ್ದರಿಂದ ಪ್ರತಿಯೊಂದು ಕಾಲನಾಮಕನಾದ ಪರಮಾತ್ಮನ ಅಧೀನವೆಂದು ಭಾವಿಸಿ, ಸುಖ-ದುಃಖಗಳಿಂದ ರಹಿತರಾಗಿರಬೇಕು.

ನಾಕಾಲತೋ ಭಾನುರುಪೈತಿ ಯೋಗಂ
ನಾಕಾಲತೋಽಸ್ತಂ ಗಿರಿಮಭ್ಯುಪೈತಿ।
ನಾಕಾಲತೋ ವರ್ಧತೇ ಹೀಯತೇ ಚ
ಚಂದ್ರಃ ಸಮುದ್ರೋಪಿ ಮಹೋರ್ಮಿಮಾಲೀ ॥೧೨॥

ಅಕಾಲದಲ್ಲಿ ಸೂರ್ಯೋದಯವಾಗುವುದಿಲ್ಲ. ಅಕಾಲದಲ್ಲಿ ಚಂದ್ರೋದಯವೂ ಆಗುವುದಿಲ್ಲ. ಅಕಾಲದಲ್ಲಿ ಸೂರ್ಯ-ಚಂದ್ರರು ಅಸ್ತಂಗತರೂ ಕೂಡ ಆಗುವುದಿಲ್ಲ. ಪರ್ವಕಾಲವು ಬರದೇ ಅಕಾಲದಲ್ಲಿ ಸಮುದ್ರಕ್ಕೆ ವೃದ್ಧಿಕ್ಷಯವು ಇರುವುದಿಲ್ಲ. ಇದರಂತೆ ಚಂದ್ರನೂ ಕೂಡ ಅಕಾಲದಲ್ಲಿ ವೃದ್ಧಿಹ್ರಾಸಗಳನ್ನು ಹೊಂದುವುದಿಲ್ಲ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್।
ಗೀತಂ ರಾಜ್ಞಾ ಸೇನಜಿತಾ ದುಃಖಾರ್ತೇನ ಯುಧಿಷ್ಠಿರ ॥೧೩॥

ಇದೇ ವಿಷಯದಲ್ಲಿ ಒಮ್ಮೆ ದುಃಖಿತನಾದ ಸೇನಾಜಿತ್ ಎಂಬ ರಾಜನು ತನ್ನ ಅನುಭವವನ್ನು ಪದ್ಯಗಳ ಮೂಲಕ ಹೇಳಿದ್ದಾನೆ. ಅದನ್ನೇ ನಿನಗೂ ಕೂಡ ತಿಳಿಸುತ್ತೇನೆ ಕೇಳು.

ಸರ್ವಾನೇವೈಷ ಪರ್ಯಾಯೋ ಮರ್ತ್ಯಾನ್ ಸ್ಪೃಶತಿ ದುಸ್ತರಃ।
ಕಾಲೇನ ಪರಿಪಕ್ವಾಹಿ ಮ್ರಿಯಂತೇ ಸರ್ವಮಾನವಾಃ ॥೧೪॥

ಯಾರಿಂದಲೂ ಎದುರಿಸಲಾಗದ ಈ ಕಾಲಚಕ್ರವು ಎಲ್ಲಾ ಮನುಷ್ಯರನ್ನು ಬಂಧಿಸುತ್ತದೆ. ಭೂಮಿಯಲ್ಲಿರುವ ಎಲ್ಲಾ ಪ್ರಾಣಿಗಳು ಕಾಲದಿಂದ ಪರಿಪಕ್ವಗೊಂಡೇ ಮರಣವನ್ನು ಹೊಂದುತ್ತವೆ.

ಘ್ನಂತಿ ಚಾನ್ಯಾನ್ನರಾ ರಾಜಂಸ್ತಾನಪ್ಯನ್ಯೇ ನರಾಸ್ತಥಾ।
ಸಂಜ್ಞಯಾ ಲೌಕಿಕೀ ರಾಜನ್ನ ಹಿನಸ್ತಿ ನ ಹನ್ಯತೇ ॥೧೫॥

ಲೋಕದಲ್ಲಿ ಒಬ್ಬನು ಮತ್ತೊಬ್ಬನನ್ನು ಕೊಲ್ಲುತ್ತಾನೆ. ಆ ಕೊಂದವನನ್ನು ಇನ್ನು ಕೆಲವರು ಕೊಲ್ಲುತ್ತಾರೆ. ನಾನು ಕೊಂದೆ, ಅವನು ಕೊಂದನು ಇತ್ಯಾದಿಯಾದ ವ್ಯವಹಾರಗಳೆಲ್ಲವೂ ಕೂಡ ವಿಚಾರ ಮಾಡಿದರೆ ಒಬ್ಬನು ಮತ್ತೊಬ್ಬನನ್ನು ಕೊಲ್ಲುವುದೂ ಇಲ್ಲ. ಮತ್ತೊಬ್ಬನಿಂದ ಕೊಲ್ಲಲ್ಪಡುವುದೂ ಇಲ್ಲ. ಕಾಲಾಧೀನವಾಗಿಯೇ ಎಲ್ಲರೂ ಮರಣವನ್ನು ಹೊಂದುತ್ತಾರೆ.

ಹಂತೀತಿ ಮನ್ಯತೇ ಕಶ್ಚಿನ್ನ ಹಂತೀತ್ಯಪಿ ಚಾಪರೇ।
ಸ್ವಭಾವತಸ್ತು ನಿಯತೌ ಭೂತಾನಾಂ ಪ್ರಭವಾಪ್ಯಯೌ ॥೧೬॥

ಅವನು ಇವನನ್ನು ಕೊಲ್ಲುತ್ತಾನೆ. ಇವನು ಅವನನ್ನು ಕೊಲ್ಲುತ್ತಾನೆ ಎಂಬುದೆಲ್ಲವೂ ಕೂಡ ಭ್ರಾಂತಿಯಾಗಿದೆ. ವಾಸ್ತವಿಕವಾಗಿ ಪ್ರಾಣಿಗಳ ಹುಟ್ಟುಸಾವುಗಳು ಸ್ವಾಭಾವಿಕವಾಗಿಯೇ ನಡೆಯುತ್ತವೆ.

ನಷ್ಟೇ ಧನೇ ವಾ ದಾರೇ ವಾ ಪುತ್ರೇ ಪಿತರಿ ವಾ ಮೃತೇ।
ಅಹೋ ಕಷ್ಟಮಿತಿ ಧ್ಯಾಯನ್ ಶೋಕಸ್ಯಾಪಚಿತಿಂ ಚರೇತ್ ॥೧೭॥

ಧನವು ನಾಶವಾದರೆ ಅಥವಾ ಪತ್ನಿ, ಪುತ್ರ, ಪಿತೃ ಮೊದಲಾದ ತುಂಬಾ ಹತ್ತಿರದವರು ಸತ್ತರೆ, ಅಯ್ಯೋ! ಎಂಥ ಕಷ್ಟವು ಒದಗಿತು! ಎಂಥ ದುಃಖವು ಬಂದಿತು! ಎಂದು ಗೋಳಿಡುತ್ತಾ ದುಃಖಿಸುತ್ತಿದ್ದೂ ದುಃಖವು ಹೆಚ್ಚಾಗುತ್ತದೆ. ಕಡಿಮೆಯಾಗುವುದಿಲ್ಲ.

ಸ ಕಿಂ ಶೋಚಸಿ ಮೂಢಃ ಸಂಶೋಚ್ಯಾನ್ ಕಿಮನುಶೋಚಸಿ।
ಪಶ್ಯ ದುಃಖೇಷು ದುಃಖಾನಿ ಭಯೇಷು ಚ ಭಯಾನ್ಯಪಿ ॥೧೮॥

ಹೀಗೆ ಮನುಷ್ಯನು ತನ್ನಲ್ಲದ ದುಃಖವನ್ನು ಹೆಚ್ಚಿಸಿಕೊಂಡು, ಮರಗುತ್ತಾನೆ. ಹೀಗಿರುವಾಗ ನೀನೇಕೆ ಮೂರ್ಖನಂತೆ ದುಃಖಪಡದವರಿಗಾಗಿ ದುಃಖಿಸುತ್ತಿರುವಿ. ನೀನೇ ಗಮನಿಸು. ದುಃಖಕ್ಕೆ ಅವಕಾಶ ಕೊಟ್ಟಷ್ಟು ಅದು ಉಮ್ಮಳಿಸುತ್ತದೆ. ಭಯವೂ ಕೂಡ ಇದರಂತೆ. ಭಯದಿಂದಲೇ ಭಯ ಹೆಚ್ಚುತ್ತದೆ.

ಟಿಪ್ಪಣಿ - ದುಃಖವು ಬಂದಾಗ ನಿಜವಾದ ವಿವೇಕವನ್ನು ಹೊಂದಿ, ಆ ದುಃಖವನ್ನು ಪರಿತ್ಯಾಗಮಾಡಬೇಕು. ಎಲ್ಲವೂ ಕೂಡ ಕಾಲಾಧೀನವಾಗಿ ನಡೆಯುತ್ತಿರುವಾಗ ದುಃಖಪಡಲು ಯಾವುದೇ ಕಾರಣಗಳಿರುವುದಿಲ್ಲ. ಒಂದುವೇಳೆ ವಿನಾಕಾರಣ ದುಃಖವನ್ನೇ ಅನುಭವಿಸುವುದಾದರೆ, ಆ ದುಃಖದಿಂದ ಮತ್ತೊಂದು ದುಃಖ ಉಲ್ಬಣವಾಗಿ ಬರುತ್ತದೆ. ಅದರಿಂದ ಮತ್ತೊಂದು ದುಃಖ ಬರುತ್ತದೆ. ಇದರಂತೆ ಭಯಪ್ರಸಂಗದಲ್ಲೂ ಭಯವನ್ನು ಪಡುತ್ತಲೇ ಇದ್ದರೆ ಭಯವು ಹೆಚ್ಚಾಗುತ್ತದೆ. ಅಂಥ ಸಂದರ್ಭದಲ್ಲಿ ಭಯವನ್ನು ನಿಗ್ರಹ ಮಾಡಬೇಕು. ನೀನು ದುಃಖವನ್ನು ಅನುಭವಿಸುತ್ತಿದ್ದರೆ, ಉಳಿದ ರಾಜಸ್ತ್ರೀಯರೆಲ್ಲರೂ ಕೂಡ ತಮ್ಮ ದುಃಖವನ್ನು ಹೆಚ್ಚಿಸಿಕೊಂಡು ಪಡಬಾರದ ಕಷ್ಟವನ್ನು ಅನುಭವಿಸುತ್ತಾರೆ. ನೀನು ಮನೋನಿಗ್ರಹವನ್ನು ಮಾಡಿಕೊಂಡು ದುಃಖವನ್ನು ಪರಿತ್ಯಾಗ ಮಾಡಿದರೆ, ನಿನ್ನಿಂದ ಉಳಿದವರೆಲ್ಲರೂ ಸಮಾಧಾನವನ್ನು ಹೊಂದುತ್ತಾರೆ.

ಆತ್ಮಾಪಿ ಚಾಯಂ ನ ಮಮ ಸರ್ವಾಪಿ ಪೃಥಿವೀ ಮಮ।
ಯಥಾ ಮಮ ತಥಾನ್ಯೇಷಾಮಿತಿ ಪಶ್ಯನ್ನ ಮುಹ್ಯತಿ ॥೧೯॥

ದೇಹವು ನನ್ನದಲ್ಲ. ಭೂಮಿಯೊಳಗಿರುವ ಯಾವುದೇ ಪದಾರ್ಥಗಳೂ ಕೂಡ ನನ್ನದಲ್ಲ. ಹೇಗೆ ಈ ಪದಾರ್ಥಗಳು ನನ್ನದಲ್ಲವೋ, ಅದರಂತೆ ಮತ್ತೊಬ್ಬನದ್ದೂ ಅಲ್ಲ ಎಂದೇ ತಿಳಿಯಬೇಕು. ತನ್ನದಲ್ಲ, ಮತ್ತೊಬ್ಬನದ್ದು ಎಂದು ತಿಳಿದರೂ ಕೂಡ ಭ್ರಾಂತಿಯಾಗುತ್ತದೆ.

ಟಿಪ್ಪಣಿ - ಪ್ರತಿಯೊಂದು ಪದಾರ್ಥಗಳು ಪರಮಾತ್ಮನ ಅಧೀನವಾಗಿವೆ.

ಸರ್ವತ್ರ ವ್ಯಾಪ್ತನಾದ ಪರಮಾತ್ಮನದ್ದೇ ಪ್ರತಿಯೊಂದು ವಸ್ತುಗಳು. ಹೀಗಿರುವಾಗ ಈ ಪದಾರ್ಥವು ನನ್ನದಲ್ಲ. ಅವನದ್ದು ಎಂದು ಎಷ್ಟೋ ಮಂದಿ ಹೇಳುತ್ತಾರೆ. ಇದೂ ಕೂಡ ಭ್ರಾಂತಿ. ಏಕೆಂದರೆ ಯಾವ ಪದಾರ್ಥಗಳು ಯಾರ ಅಧೀನವೂ ಅಲ್ಲ. ಕೇವಲ ಪರಮಾತ್ಮನ ಅಧೀನವಾಗಿವೆ. ಆದ್ದರಿಂದ ಇದು ನನ್ನದು, ಇದು ಅವನದ್ದು ಎಂಬ ಅಭಿಮಾನದಿಂದ ದುಃಖವನ್ನು ಅನುಭವಿಸುವ ಪ್ರಸಕ್ತಿಯು ಇರುವುದಿಲ್ಲ.

ಶೋಕಸ್ಥಾನಸಹಸ್ರಾಣಿ ಹರ್ಷಸ್ಥಾನಶತಾನಿ ಚ।
ದಿವಸೇ ದಿವಸೇ ಮೂಢಮಾವಿಶಂತಿ ನ ಪಂಡಿತಮ್ ॥೨೦॥

ದುಃಖಕ್ಕೆ ಸಾವಿರ ಕಾರಣಗಳಿರುವಂತೆ, ಸಂತೋಷಕ್ಕೂ ಕೂಡ ಸಾವಿರ ಕಾರಣಗಳಿರುತ್ತವೆ. ಇವೆರಡೂ ಕೂಡ ಮೂರ್ಖರನ್ನಷ್ಟೇ ಆವರಿಸುತ್ತವೆ. ನಿಜವಾದ ವಿವೇಕಿಯ ಹತ್ತಿರವೇ ಸುಳಿಯುವುದಿಲ್ಲ.

ಟಿಪ್ಪಣಿ - ಸುಖ-ದುಃಖಗಳೆರಡೂ ಕೂಡ 'ಆಗಮಾಪಾಯಿನೋ ನಿತ್ಯಾಃ' ಎಂದು ಹೇಳುವಂತೆ ಸಹಜವಾಗಿ ಬಂದುಹೋಗುವ ಪ್ರಕ್ರಿಯೆಗಳು. ಎರಡೂ ಕೂಡ ಅನಿತ್ಯವೇ ಆಗಿವೆ. ಅನಿತ್ಯವಾದ ಸುಖ-ದುಃಖಗಳನ್ನು ಅನುಭವಿಸಿ ಯಾರು ಕುಗ್ಗುವಿಕೆ, ಹಿಗ್ಗುವಿಕೆಯನ್ನು ಹೊಂದುತ್ತಾನೋ, ಅವನು ಮೂರ್ಖನೇ ಆಗಿದ್ದಾನೆ. ನಿಜವಾದ ವಿವೇಕಿಯಾದ ವಿದ್ವಾಂಸನು ಸುಖ-ದುಃಖಗಳೆರಡರ ವಿಷಯದಲ್ಲಿ ಸಮತ್ವಬುದ್ಧಿಯನ್ನು ಹೊಂದಿರುತ್ತಾನೆ. ಸುಖದಿಂದ ಹಿಗ್ಗುವುದಿಲ್ಲ, ದುಃಖದಿಂದ ಕುಗ್ಗುವುದಿಲ್ಲ. ಆದ್ದರಿಂದ ಅವನ ಮನಸ್ಸಿನ ಮೇಲೆ ಈ ಸುಖ-ದುಃಖಗಳು ಯಾವುದೇ ಪರಿಣಾಮವನ್ನು ಉಂಟುಮಾಡುವುದಿಲ್ಲ.

ಏವಮೇತಾನಿ ಕಾಲೇನ ಪ್ರಿಯದ್ವೇಷ್ಯಾಣಿ ಭಾಗಶಃ।
ಜೀವೇಷು ಪರಿವರ್ತಂತೇ ದುಃಖಾನಿ ಚ ಸುಖಾನಿ ಚ ॥೨೧॥

ಕಾಲಕ್ಕೆ ಅನುಗುಣವಾಗಿ ಈ ಸುಖ-ದುಃಖಗಳೆರಡೂ ಅಪ್ರಿಯ ಹಾಗೂ ಪ್ರಿಯಗಳಾಗುತ್ತವೆ. ಜೀವರಲ್ಲಿ ಪ್ರತ್ಯೇಕವಾದ ಪರಿವರ್ತನೆಯನ್ನು ಹೊಂದಿಸುತ್ತಾ, ಸುಖ-ದುಃಖಗಳೆರಡನ್ನೂ ಹೆಚ್ಚಿಸುತ್ತಾ ಚಕ್ರದಂತೆ ಸುತ್ತಿ, ಸುತ್ತಿ ಬರುತ್ತಲೇ ಇರುತ್ತವೆ.

ವಾಸ್ತವಿಕವಾಗಿ ಲೋಕದಲ್ಲಿ ಸುಖವೇ ಇರುವುದಿಲ್ಲ. ದುಃಖವಷ್ಟೇ ಇರುತ್ತದೆ. ಪ್ರಪಂಚದಲ್ಲಿ ದುಃಖವೇ ಬಹಳವಿದೆ. ಸುಖವೇ ಇಲ್ಲದಾಗಿದೆ. ಹೆಜ್ಜೆಹೆಜ್ಜೆಗೂ ದುಃಖವೇ ಒದಗುತ್ತವೆ. ಏಕೆಂದರೆ ಪ್ರತಿಯೊಬ್ಬರಿಗೂ ಅತ್ಯಾಸೆಗಳು ಮೂಡುತ್ತವೆ. ಇದರಿಂದ ಪೀಡಿತರಾಗಿ ದುಃಖವನ್ನೇ ಹೊಂದುತ್ತಾರೆ. ದುಃಖವೆಂಬ ಪೀಡೆಗೆ ವಿನಾಶವೇ ಸುಖ. ಎಲ್ಲಾ ಆಸೆಗಳನ್ನು ಪರಿತ್ಯಾಗ ಮಾಡಬೇಕು. ಆಗಷ್ಟೇ ಸುಖವು ದೊರಕುತ್ತದೆ.

ವಿವರಣೆ - ಆಸೆಗೆ ಮಿತಿಯೇ ಇಲ್ಲ. ಪ್ರತಿಯೊಬ್ಬರೂ ಆಸೆಯಿಂದ ಪೀಡಿತರಾಗಿ ಮನಸ್ಸಿಗೆ ಬಹಳ ದುಃಖವನ್ನು ಅನುಭವಿಸುತ್ತಾರೆ. ಎಷ್ಟೇ ಐಶ್ವರ್ಯವಿದ್ದರೂ ಭೋಗವಿದ್ದರೂ, ತೃಷ್ಣೆಯಿಂದ ಪೀಡಿತನಾದ ವ್ಯಕ್ತಿಯು ದುಃಖಿಯಾಗಿರುತ್ತಾನೆ. ಆದ್ದರಿಂದ ಈ ಲೋಕದಲ್ಲಿ ಸುಖವೇ ಕಾಣಿಸುತ್ತಿಲ್ಲ. ಸುಖಬಂದಾಗಲೂ ಮತ್ತಷ್ಟು ಸುಖದ ಅಪೇಕ್ಷೆಯನ್ನು ಪಟ್ಟು ಬಂದಿರುವ ಸುಖವನ್ನು ಅನುಭವಿಸಲು ಇವನಿಂದ ಸಾಧ್ಯವಾಗುವುದಿಲ್ಲ. ಆದ್ದರಿಂದ ಭಾಗವತದಲ್ಲಿ 'ನೈರಾಶ್ಯಂ ಪರಮಂ ಸುಖಂ' ಎಂಬುದಾಗಿ ಯಯಾತಿಯು ಹೇಳುತ್ತಾನೆ. ಆಸೆಯನ್ನು ಪರಿತ್ಯಾಗ ಮಾಡುವುದೇ ನಿಜವಾದ ಸುಖ.

ದುಃಖಮೇವಾತಿ ನ ಸುಖಂ ತಸ್ಮಾತ್ ತದುಪಲಭ್ಯತೇ।
ತೃಷ್ಣಾರ್ತಿಪ್ರಭವಂ ದುಃಖಂ ದುಃಖಾರ್ತಿಪ್ರಭವಂ ಸುಖಮ್ ॥೨೨॥

ಈ ಜಗತ್ತಿನಲ್ಲಿ ಕೇವಲ ದುಃಖವೇ ತುಂಬಿದೆ. ಸುಖವೇ ಕಾಣಿಸುತ್ತಿಲ್ಲ. ಪ್ರತಿಯೊಬ್ಬರೂ ದುಃಖವನ್ನೇ ಅನುಭವಿಸುತ್ತಿದ್ದಾರೆ. ಇದಕ್ಕೆ ಕಾರಣವೇನೆಂದರೆ ಅತ್ಯಾಸೆಯೇ ಆಗಿದೆ. ಅತಿಯಾದ ಆಸೆಯಿಂದಲೇ ದುಃಖವು ಹುಟ್ಟುತ್ತದೆ. ಇಂತಹ ದುಃಖದಿಂದ ವಿನಾಶವು ಆಗುತ್ತದೆ. ಆದ್ದರಿಂದ ಅತಿಯಾದ ಆಸೆಯನ್ನು ಬಿಡುವುದೇ ನಿಜವಾದ ಸುಖ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ವಿವರಣೆ - ಪ್ರಪಂಚದಲ್ಲಿ ಪ್ರತಿಯೊಬ್ಬರಿಗೂ ಕೂಡ ಅತಿಯಾದ ಆಸೆಯು ಹೆಚ್ಚುತ್ತದೆ. ಈ ಆಸೆ ಎಂಬ ಸಂಕೋಲೆಯಿಂದ ಪ್ರತಿಯೊಬ್ಬರು ಬಂಧಿತರಾಗಿದ್ದಾರೆ. ಅತಿಯಾದ ಆಸೆಯೊಂದು ರೋಗವಾಗಿದೆ. ಯಾರಿಗೆ ಈ ರೋಗವು ಇರುತ್ತದೆ ಅಂಥವರಿಗೆ ಎಷ್ಟು ಐಶ್ವರ್ಯವು ಬಂದರೂ ಕೂಡ ಸುಖ ಉಂಟಾಗುವುದಿಲ್ಲ.

ಅದಕ್ಕಾಗಿ ಆಸೆಯನ್ನು ಮೊಟ್ಟಮೊದಲು ಪೂರ್ಣವಾಗಿ ಬಿಟ್ಟುಬಿಡಬೇಕು. 'ನೈರಾಶ್ಯಂ ಪರಮಂ ಸುಖಂ' ಎಂಬುದಾಗಿ ಭಾಗವತದಲ್ಲಿ ಹೇಳಿದ್ದನ್ನು ಅನುಸರಿಸಿ ಸುಖದ ಕಡೆ ಧಾವಿಸಬೇಕು.

ಟಿಪ್ಪಣಿ - ದುಃಖಮೇವಾತಿ ನ ಸುಖಮ್ ಇತ್ಯತ್ರ **ಅತಿ** ಅತಿಶಯೇನ ನಿಯಮೇನ **ದುಃಖಮೇವ ನ, ಸುಖಮಪಿ ನ । ತಸ್ಮಾದ್** ದುಃಖಾದನಂತರಂ ತತ್ ಸುಖಮ್, ತಸ್ಮಾತ್ ಸುಖಾದನಂತರಂ ತದ್ ದುಃಖಮಿತ್ಯಾವೃತ್ತ್ಯಾ ಯೋಜನಾ।

'ದುಃಖಮೇವಾತಿ ನ ಸುಖಮ್' ಎಂಬಲ್ಲಿ **ಅತಿ** ಎಂಬುದಕ್ಕೆ ಅತಿಶಯೇನ ಅಥವಾ ನಿಯಮದಿಂದ ದುಃಖವೇ ಆಗುತ್ತದೆಂಬ ನಿಯಮವಿಲ್ಲ. ಸುಖವೂ ಕೂಡ ಆಗುವುದಿಲ್ಲ. ಆದ್ದರಿಂದ 'ದುಃಖದ ಅನಂತರ ಸುಖ, ಸುಖದ ಅನಂತರ ದುಃಖ' ಎಂಬುದಾಗಿ ಆವೃತ್ತಿಯಿಂದ ಯೋಜನೆ ಮಾಡಿಕೊಳ್ಳಬೇಕು.

ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಮ್ ।
ನ ನಿತ್ಯಂ ಲಭತೇ ದುಃಖಂ ನ ನಿತ್ಯಂ ಲಭತೇ ಸುಖಮ್ ॥೨೩॥

ಸುಖದ ಅನಂತರ ದುಃಖವು ಬರುತ್ತದೆ. ದುಃಖದ ಅನಂತರ ಸುಖವು ಬರುತ್ತದೆ. ಯಾರೊಬ್ಬನೂ ಕೂಡ ಕೇವಲ ದುಃಖವನ್ನು, ಕೇವಲ ಸುಖವನ್ನು ಅನುಭವಿಸಲು ಸಾಧ್ಯವಿಲ್ಲ.

ಟಿಪ್ಪಣಿ - ಸುಖದಿಂದ ಹಿಗ್ಗಬಾರದು. ದುಃಖದಿಂದ ಕುಗ್ಗಬಾರದು. ಏಕೆಂದರೆ ಸುಖದ ಗರ್ಭದಲ್ಲಿ ದುಃಖವಿದೆ ಎಂಬ ಎಚ್ಚರಿಕೆಯನ್ನು ಹೊಂದಿ, ಹಿಗ್ಗದೇ ಸಮಚಿತ್ತನಾಗಿರಬೇಕು. ದುಃಖವು ಬಂದಾಗ, ದುಃಖದ ಗರ್ಭದಲ್ಲಿ ಸುಖವಿದೆ ಎಂದು ತಿಳಿದು ಕುಗ್ಗಬಾರದು.

ಸುಖಮೇವ ಹಿ ದುಃಖಾಂತ ಕದಾಚಿದ್ ದುಃಖತಃ ಸುಖಮ್ ।
ತಸ್ಮಾದೇತದ್ ದ್ವಯಂ ಜಹ್ಯಾದ್ಯ ಇಚ್ಛೇಚ್ಛಾಶ್ವತಂ ಸುಖಮ್ ॥೨೪॥

ಸುಖವು ದುಃಖದಲ್ಲಿ ಕೊನೆಗೊಳ್ಳುತ್ತದೆ. ದುಃಖವು ಸುಖದಲ್ಲಿ ಕೊನೆಗೊಳ್ಳುತ್ತದೆ. ಸುಖವು ದುಃಖದ ಅಂತ್ಯದಲ್ಲಿ ಪ್ರಾರಂಭವಾಗುತ್ತದೆ. ಹೀಗೆ ಸುಖ-ದುಃಖಗಳೆ-

ರಡು ಅನಿತ್ಯವಾಗಿವೆ. ಆದ್ದರಿಂದ ಈ ಎರಡನ್ನು ಪರಿತ್ಯಾಗ ಮಾಡಿ, ಶಾಶ್ವತಸುಖವನ್ನೇ ನಿಜವಾದ ವ್ಯಕ್ತಿಯು ಅಪೇಕ್ಷಿಸಬೇಕು.

ಯನ್ನಿಮಿತ್ತಂ ಭವೇಚ್ಛೋಕಸ್ತಾಪೋ ವಾ ದುಃಖಮೂರ್ಛಿತಃ।
ಆಯಾಸೋ ವಾಪಿ ಯನ್ಮೂಲಸ್ತದೇಕಾಂಗಮಪಿ ತ್ಯಜೇತ್ ॥೨೫॥

ಯಾವ ಕಾರಣದಿಂದ ದುಃಖವು ಬಂದಿರುತ್ತದೋ, ಯಾವ ಕಾರಣದಿಂದ ತಡೆಯಲಾರದ ಪರಿತಾಪವು ಬಂದಿರುತ್ತದೋ, ಯಾವ ಕಾರಣದಿಂದ ಆಯಾಸವು ಉಂಟಾಗುತ್ತದೋ, ಆ ಕಾರಣವನ್ನೇ ಮೂಲಸಹಿತ ತೆಗೆದುಹಾಕಬೇಕು. ಶೋಕ, ಪರಿತಾಪ, ಆಯಾಸಗಳು ಶರೀರದ ಅವಯವಗಳಿಂದಲೇ ಬಂದರೂ ಅಂಥ ಅಂಗವನ್ನೇ ಕತ್ತರಿಸಬೇಕು.

ಟಿಪ್ಪಣಿ - ಹಾವು ಕಚ್ಚಿದ ಅವಯವವನ್ನು ತುಂಡರಿಸಿದರೆ ಹೇಗೆ ಕ್ಷೇಮವಾಗುತ್ತದೋ, ಅದರಂತೆ ಯಾವ ಅವಿಭಾಜ್ಯ ಅಂಗದಿಂದ ದುಃಖವಾಗುತ್ತದೋ, ಆ ಅಂಗವನ್ನೇ ಕತ್ತರಿಸಬೇಕು. ಅವಿಭಾಜ್ಯವಾದ ಸಂಬಂಧಿಕರಿಂದ ಅಂಥ ದುಃಖವು ಹೆಚ್ಚುತ್ತಿದ್ದರೆ ಆ ವ್ಯಕ್ತಿಯನ್ನೇ ಪರಿತ್ಯಾಗ ಮಾಡಬೇಕು. ದುರ್ಯೋಧನಾದಿಗಳಿಂದ ಅಸಾಧ್ಯವಾದ ದುಃಖವು ಪ್ರಾಪ್ತವಾಗಿತ್ತು. ಆದ್ದರಿಂದ ಆ ದುರ್ಯೋಧನನನ್ನು ಕೊಂದದ್ದು ಎಲ್ಲರಿಗೂ ಕ್ಷೇಮಕರವಾಗಿದೆ ಎಂದಭಿಪ್ರಾಯ.

ಸುಖಂ ವಾ ಯದಿ ವಾ ದುಃಖಂ ಪ್ರಿಯಂ ವಾ ಯದಿ ವಾಪ್ರಿಯಮ್।
ಪ್ರಾಪ್ತಂ ಪ್ರಾಪ್ತಮುಪಾಸೀತ ಹೃದಯೇನಾಪರಾಜಿತಃ ॥೨೬॥

ಸುಖವಾಗಲೀ, ದುಃಖವಾಗಲೀ, ಪ್ರಿಯವಾಗಲಿ, ಅಪ್ರಿಯಳಾಗಲೀ ಯಾವುದು ಬಂದರೂ ಎದೆಗುಂದದೆ ಸ್ವಾಗತ ಮಾಡಬೇಕು.

ಟಿಪ್ಪಣಿ - ಜೀವನದಲ್ಲಿ ಸುಖದ ನಿರೀಕ್ಷೆಯಲ್ಲಿ ಕಾಲ ಕಳೆಯಬಾರದು. ಪ್ರಿಯವಾದದ್ದೇ ದೊರಕಬೇಕೆಂದು ಅಪೇಕ್ಷಿಸಬಾರದು. ದುಃಖವು ಬಂದರೆ ಅದನ್ನೂ ಸ್ವಾಗತ ಮಾಡಬೇಕು. ಅಪ್ರಿಯವಾದದ್ದು ಬಂದರೆ ಅದನ್ನೂ ಕೂಡ ಸ್ವಾಗತ ಮಾಡಬೇಕು. ಆಗಷ್ಟೇ ಅವನು ವಿವೇಕಿ ಎಂದು ಕರೆಸಿಕೊಳ್ಳುತ್ತಾನೆ.

ಈರ್ಷ್ಯದಪ್ಯಂಗ ದಾರಾಣಾಂ ಪುತ್ರಾಣಾಂ ವಾ ಚರಾಪ್ರಿಯಮ್ ।
ತತೋ ಜ್ಞಾಸ್ಯಸಿ ಕಃ ಕಸ್ಯ ಕೇನ ವಾ ಕಥಮೇವ ವಾ ॥೨೭॥

ಪ್ರಿಯಮಿತ್ರನೇ! ಅಷ್ಟೇ ಅಲ್ಲದೇ ತನ್ನ ಪತ್ನಿಯರಿಗಾಗಲೀ, ಪುತ್ರರಿಗಾಗಲೀ ಪ್ರಿಯವಲ್ಲದ ಕಾರ್ಯವನ್ನು ಸ್ವಲ್ಪ ಮಾಡಿದರೂ ಸಾಕು, ಯಾರಿಗೆ ಯಾರು ಎಂಬುದು ತಿಳಿಯುತ್ತದೆ. ಮತ್ತು ಯಾರಲ್ಲಿ ಯಾರು ಹೇಗೆ ಇರುತ್ತಾರೆಂಬುದೂ ಕೂಡ ಸ್ಪಷ್ಟವಾಗಿ ತಿಳಿಯುತ್ತದೆ.

ವಿವರಣೆ - ಈ ಲೋಕದಲ್ಲಿ ಯಾರೊಬ್ಬರೂ ಕೂಡ ಅಪ್ರಿಯವಾದದ್ದನ್ನು ಸಹಿಸಿಕೊಳ್ಳುವುದಿಲ್ಲ. ಅಚಾತುರ್ಯದಿಂದ ಅಪ್ರಿಯವಾದದ್ದನ್ನು ಮಾಡಿದರೆ ನಮ್ಮನ್ನು ದ್ವೇಷಿಸುತ್ತಾರೆ. ಉಳಿದವರಿರಲಿ, ಹೆಂಡತಿ ಮಕ್ಕಳೂ ಕೂಡ ಅಪ್ರಿಯವಾದದ್ದನ್ನು ಸಹಿಸಲಾರರು. ಹಿಂದೆ ಎಷ್ಟೇ ಪ್ರೀತಿಯನ್ನು ತೋರಿಸಿದ್ದರೂ ಒಂದು ಬಾರಿ ಅಪ್ರಿಯವಾದದ್ದನ್ನು ಆಚರಿಸಿದರೆ ಅಪ್ರಿಯವಾದದ್ದನ್ನಷ್ಟೇ ನೆನಪಿನಲ್ಲಿ ಇಟ್ಟುಕೊಳ್ಳುತ್ತಾರೆ. ಅಪ್ರಿಯವಾದ ಕಾರ್ಯವನ್ನು ಮಾಡಿದರೆ ಸಂಬಂಧಿಯೇ ಅಲ್ಲವೆಂಬ ರೀತಿಯಲ್ಲಿ ನಡೆದುಕೊಳ್ಳುತ್ತಾರೆ. ತಮಗೆ ಇವನಿಂದ ಎಷ್ಟು ಉಪಯೋಗವಿದೆ ಎಂಬುದನ್ನಷ್ಟೇ ಅವರು ಗಮನಿಸುತ್ತಿರುತ್ತಾರೆ. ಅವನಿಂದ ತಮಗೆ ಯಾವುದೇ ಉಪಯೋಗವಿಲ್ಲವೆಂದು ತಿಳಿದ ಮೇಲೆ ಅವನನ್ನು ಮೂಲೆಗುಂಪನ್ನಾಗಿ ಮಾಡುತ್ತಾರೆ. ಮುಪ್ಪಿನ ಕಾಲದಲ್ಲಿ ದೇಹವು ಯಾರಿಗೂ ಬೇಡವಾದಾಗ ಸಂಪೂರ್ಣವಾಗಿ ಉಪೇಕ್ಷಿಸುತ್ತಾರೆ. ಆದ್ದರಿಂದ ಯಾರು ಹೆಂಡತಿ, ಯಾರು ಮಗ. ಈ ಸಂಸಾರ ಎಷ್ಟು ವಿಚಿತ್ರ , ನೀನು ಯಾರು? ಅವನು ಯಾರು? ಎಲ್ಲ ವಿಷಯ-ವನ್ನು ಗಮನಿಸಿದಾಗ ಸಂಸಾರಕ್ಕೂ ನಮಗೂ ಯಾವುದೇ ಸಂಬಂಧವಿಲ್ಲವೆಂದು ಮನದಟ್ಟಾಗುತ್ತದೆ.

ಜೀವನದಲ್ಲಿ ಹೇಗಿರಬೇಕು ಎಂದರೆ ಯಾರು ಭಗವಂತನನ್ನು ಪ್ರೀತಿ ಮಾಡುತ್ತಾರೋ, ಅವರನ್ನಷ್ಟೇ ನಾವು ಪ್ರೀತಿ ಮಾಡಬೇಕು. ಅದರಲ್ಲೂ ಕೂಡ ಇವನು ಹರಿಭಕ್ತನಾಗಿದ್ದಾನೆ. ಇವನಿಂದ ನನ್ನಲ್ಲಿ ಹರಿಭಕ್ತಿ ಅಭಿವೃದ್ಧಿವಾಗುತ್ತದೆಂದಷ್ಟೇ ಭಾವನೆಯಿರಬೇಕು. ಹರಿಭಕ್ತನಲ್ಲಿಯೂ ಕೂಡ ವ್ಯಾವಹಾರಿಕವಾದ ಸಂಬಂಧಗಳನ್ನು ಇಟ್ಟುಕೊಳ್ಳಬಾರದು. ಅಧ್ಯಾತ್ಮಬಾಂಧವ್ಯವನ್ನಷ್ಟೇ ಇಟ್ಟುಕೊಳ್ಳ-

ಬೇಕು. ಯಾರು ಹರಿಭಕ್ತನಾಗಿರುವುದಿಲ್ಲವೋ, ಅಂಥವನನ್ನು ಹರಿಭಕ್ತರನ್ನಾಗಿ ಮಾಡಲು ಪ್ರಯತ್ನಿಸಬೇಕು. ಅಥವಾ ಹರಿಭಕ್ತನೇ ಆಗಿದ್ದರೂ ಹರಿಭಕ್ತಿಯು ಅವನಲ್ಲಿ ಅಭಿವೃದ್ಧಿ ಆಗುವಂತೆ ಅವನ ಜೊತೆ ಸಂಬಂಧವನ್ನು ಬೆಳೆಸಬೇಕು. ಹರಿಭಕ್ತರಲ್ಲದವರನ್ನು ಅಥವಾ ಹರಿಭಕ್ತರಲ್ಲದ ವಿಷಯದಲ್ಲಷ್ಟೇ ದ್ವೇಷ ತಾತ್ಸಾರಗಳನ್ನು ಮಾಡಬೇಕು. ಇದನ್ನು ಬಿಟ್ಟು ನನಗೆ ಪ್ರಿಯವನ್ನು ಮಾಡುವವನನ್ನು ಪ್ರೀತಿಸುವುದು, ನನಗೆ ಪ್ರಿಯವನ್ನು ಮಾಡದಿರುವನನ್ನು ದ್ವೇಷಿಸುವುದು ಸರ್ವಥಾ ತಪ್ಪು. ಹೀಗೆ ಮಾಡುವುದರಿಂದ ಜೀವನದಲ್ಲಿ ಅನಂತದುಃಖಗಳನ್ನೇ ಎದುರಿಸಬೇಕಾಗುತ್ತದೆ. ಪ್ರಾಮಾಣಿಕಜೀವನವೆಂದರೆ ಇದು ಮಾತ್ರ. ಮತ್ತೊಂದಲ್ಲ ಎಂಬುದು ಇಲ್ಲಿನ ಅಭಿಪ್ರಾಯ. ಅಂದಮಾತ್ರಕ್ಕೆ ಯಾರಿಗೂ ಪ್ರಿಯವನ್ನೇ ಮಾಡಬಾರದು, ಉಪಕಾರವನ್ನು ಮಾಡಬಾರದು ಎಂದಭಿಪ್ರಾಯವಲ್ಲ. ಏನೇ ಪ್ರಿಯವನ್ನು ಮಾಡಿದರೂ ಅದು ಭಗವಂತನಿಗೆ ಸಮರ್ಪಿತವಾಗಲಿ ಎಂಬ ಅನುಸಂಧಾನವಿರಬೇಕು. ಅಚಾತುರ್ಯದಿಂದ ಮತ್ತೊಬ್ಬರಿಗೆ ಅಪ್ರಿಯವು ನಡೆದರೆ ಅದರಿಂದ ಸಂಸಾರದ ಸ್ವರೂಪವನ್ನು ಅರ್ಥಮಾಡಿಕೊಂಡು ವಿರಕ್ತನಾಗಬೇಕು.

ಯೇ ಚ ಮೂಢತಮಾ ಲೋಕೇ ಯೇ ಚ ಬುದ್ಧೇ ಪರಂ ಗತಾಃ।
ತ ಏವ ಸುಖಮೇಧಂತೇ ಮಧ್ಯಮಃ ಕ್ಲಿಷ್ಯತೇ ಜನಃ ॥೨೮॥

ಲೋಕದಲ್ಲಿ ಇಬ್ಬರು ಮಾತ್ರ ಸಂತೋಷದಲ್ಲಿರುತ್ತಾರೆ. ಒಬ್ಬ ಮೂಢ, ಮತ್ತೊಬ್ಬ ಬುದ್ಧಿವಂತ. ಇವರಿಬ್ಬರ ನಡುವೆ ಇರುವ ವ್ಯಕ್ತಿಯು ಯಾವಾಗಲೂ ದುಃಖವನ್ನೇ ಅನುಭವಿಸುತ್ತಾನೆ.

ಇತ್ಯಬ್ರವೀನ್ಮಹಾಪ್ರಾಜ್ಞೋ ಯುಧಿಷ್ಠಿರ ಸ ಸೇನಜಿತ್।
ಪರಾವರಜ್ಞೋ ಲೋಕಸ್ಯ ಧರ್ಮವಿತ್ ಸುಖದುಃಖವಿತ್ ॥೨೯॥

ಯುಧಿಷ್ಠಿರನೇ! ಇಷ್ಟು ವಿಷಯವನ್ನು ಮಹಾಪ್ರಾಜ್ಞನಾದ, ದೇವಜ್ಞನಾದ ಸೇನಜಿತ್ ಎಂಬ ರಾಜನು ತಿಳಿಸಿರುವನು. ಲೋಕದಲ್ಲಿ ಮುಂದೆ ಏನು ನಡೆಯುತ್ತದೆ, ಹಿಂದೆ ಏನು ನಡೆದಿದೆ ಎಂಬುದನ್ನು, ಯಾವುದು ಸುಖ, ಯಾವುದು ದುಃಖ ಎಂಬುದನ್ನು ಪರಾಂಬರಿಸಿ ತಿಳಿಸಿರುವನು.

ಪರದುಃಖೇನ ಯೋ ದುಃಖೀ ನ ಜಾತು ಸ ಸುಖೀ ಭವೇತ್ ।
ದುಃಖಾನಾಂ ಹಿ ಕ್ಷಯೋ ನಾಸ್ತಿ ಜಾಯತೇ ಹ್ಯಪರಾತ್ ಪರಮ್ ॥೩೦॥

ಧರ್ಮರಾಜನೇ! ಮತ್ತೊಬ್ಬರ ದುಃಖಕ್ಕಾಗಿ ಯಾರು ದುಃಖಿಸುತ್ತಾನೋ, ಅವನು ಎಂದೂ ಕೂಡ ಸುಖಿಯಾಗಲಾರ. ಏಕೆಂದರೆ ದುಃಖಗಳಿಗೆ ಎಂದೂ ಕೂಡ ಕೊನೆಯೆಂಬುದೇ ಇರುವುದಿಲ್ಲ. ದುಃಖದಿಂದ ದುಃಖವೇ ಹುಟ್ಟುತ್ತಾ ಹೋಗುತ್ತದೆ.

ಟಿಪ್ಪಣಿ- ಪರದುಃಖೇನ ಯೋ ದುಃಖೀ ಇತ್ಯತ್ರ **ಪರದುಃಖೇನ** ಪುತ್ರದಾರಾದೀನಾಂ ದುಃಖೇನ।

'ಪರದುಃಖೇನ ಯೋ ದುಃಖೀ' ಎಂಬಲ್ಲಿ **'ಪರದುಃಖೇನ'** ಮಕ್ಕಳು, ಹೆಂಡತಿ ಮೊದಲಾದವರ ದುಃಖದಿಂದ ಎಂದರ್ಥ.

ಸುಖಂ ಚ ದುಃಖಂ ಚ ಭವಾಭವೌ ಚ
ಲಾಭಾಲಾಭೌ ಮರಣಂ ಜೀವಿತಂ ಚ ।
ಪರ್ಯಾಯತಃ ಸರ್ವಮಿಹ ಸ್ಪೃಶಂತಿ
ತಸ್ಮಾದ್ ಧೀರೋ ನೈವ ಹೃಷ್ಯೇನ್ನ ಶೋಚೇತ್ ॥೩೧॥

ಸುಖ-ದುಃಖಗಳು, ಸಂಪತ್ತು-ವಿಪತ್ತುಗಳು, ಲಾಭ-ನಷ್ಟಗಳು, ಜನನ-ಮರಣ -ಗಳು ಇವೆಲ್ಲವೂ ಒಂದಾದ ಮೇಲೆ ಒಂದರಂತೆ ಸುತ್ತಿ ಬರುತ್ತಲೇ ಇರುತ್ತವೆ. ಸಮುದ್ರದ ಅಲೆಗಳಂತೆ ಬರುತ್ತಿರುವ ಇವುಗಳನ್ನು ಕಂಡು ದುಃಖಿಸಲೂ ಬಾರದು. ಸಂತೋಷವನ್ನೂ ಪಡಬಾರದು. ಅಂಥವನೇ ಧೀರ ಎಂದು ಕರೆಸಿಕೊಳ್ಳುತ್ತಾನೆ.

ದೀಕ್ಷಾಂ ರಾಜ್ಞಃ ಸಂಯುಗೇ ಯುದ್ಧಮಾಹು-
ರ್ಯೋಗಂ ರಾಷ್ಟ್ರೇ ದಂಡನೀತ್ಯಾಂ ಚ ಸಮ್ಯಕ್ ।
ವಿತ್ತತ್ಯಾಗೋ ದಕ್ಷಿಣಾನಾಂ ಚ ಯಜ್ಞೇ
ಸಮ್ಯಗ್ ಜ್ಞಾನಂ ಪಾವನಾನೀತಿ ವಿದ್ಯಾತ್ ॥೩೨॥

ಧರ್ಮರಾಜನೇ! ಯುದ್ಧ ಮಾಡುವುದು, ರಾಜ್ಯವನ್ನು ಪರಿಪಾಲನೆ ಮಾಡು-

ವುದು, ದಂಡನೀತಿಯನ್ನು ಅನುಸರಿಸುವುದು, ಸಂಪತ್ತನ್ನು ದಕ್ಷಿಣರೂಪದಲ್ಲಿ ದಾನ ಮಾಡುವುದು ಇವೆಲ್ಲವೂ ಕುಲಧರ್ಮಗಳಾಗಿವೆ. ಇವುಗಳನ್ನು ಆಚರಣೆ ಮಾಡು-ವುದರಿಂದ ರಾಜನು ಪಾವನನಾಗುತ್ತಾನೆ.

ವಿವರಣೆ - ಜೀವನವು ಯಜ್ಞರೂಪದಿಂದ ಇರಬೇಕು. ಜೀವನವನ್ನು ನಡೆಸು-ವವನು ಯಜ್ಞದೀಕ್ಷಿತನಂತೆ ಇರಬೇಕು. ಯುದ್ಧಭೂಮಿಯಲ್ಲಿ ಮಾಡುವ ಯುದ್ಧವೂ ಕೂಡ ಯಜ್ಞರೂಪವಾಗಿರಬೇಕು. ದಂಡನೀತಿಯನ್ನು ಆಳವಡಿಸುವುದೂ ಕೂಡ ಯೋಗಸಾಧನರೂಪದಲ್ಲಿರಬೇಕು ಎಂದಭಿಪ್ರಾಯ.

ರಕ್ಷನ್ ರಾಷ್ಟ್ರಂ ಬುದ್ಧಿಪೂರ್ವಂ ನಯೇನ
ಸಂತ್ಯಕ್ತಾತ್ಮಾ ಯಜ್ಞಶೀಲೋ ಮಹಾತ್ಮಾ।
ಸರ್ವಾಂಲ್ಲೋಕಾನ್ ಧರ್ಮದೃಷ್ಟ್ಯಾ ಚರಂಶ್ಚಾ-
ಪ್ಯೂರ್ಧ್ವಂ ದೇಹಾನ್ಮೋದತೇ ದೇವಲೋಕೇ ॥೩೩॥

ಯಥಾರ್ಥಜ್ಞಾನವನ್ನು ಪಡೆದು ಅಹಂಕಾರವನ್ನು ಪರಿತ್ಯಾಗ ಮಾಡಿ, ನೀತಿ-ಯಿಂದ ರಾಜ್ಯವನ್ನು ಪರಿಪಾಲನೆ ಮಾಡಬೇಕು. ಯಜ್ಞಗಳನ್ನು ಮಾಡಬೇಕು. ಎಲ್ಲಾ ಪ್ರಾಣಿಗಳನ್ನು ಸಮಾನದೃಷ್ಟಿಯಿಂದ ನೋಡಬೇಕು. ಇಂಥ ಮಹಾತ್ಮನಾದ ರಾಜನು ದೇಹವನ್ನು ಬಿಟ್ಟ ಮೇಲೆ ಸ್ವರ್ಗಲೋಕದಲ್ಲಿ ಆನಂದವಾಗಿರುತ್ತಾನೆ.

ಜಿತ್ವಾ ಸಂಗ್ರಾಮಾನ್ ಪಾಲಯಿತ್ವಾ ಚ ರಾಷ್ಟ್ರಂ
ಸೋಮಂ ಪೀತ್ವಾ ವರ್ಧಯಿತ್ವಾ ಪ್ರಜಾಶ್ಚ।
ಯುಕ್ತ್ಯಾ ದಂಡಂ ಧಾರಯಿತ್ವಾ ಪ್ರಜಾನಾಂ
ಯುದ್ಧೇ ಕ್ಷೀಣೋ ಮೋದತೇ ದೇವಲೋಕೇ ॥೩೪॥

ಯುದ್ಧದಲ್ಲಿ ಜಯಗಳಿಸಬೇಕು. ರಾಜ್ಯವನ್ನು ಧರ್ಮದಿಂದ ಪರಿಪಾಲನೆ ಮಾಡಬೇಕು. ಯಜ್ಞಗಳಲ್ಲಿ ಸೋಮರಸವನ್ನು ಪಾನ ಮಾಡಬೇಕು. ದಂಡನೀತಿ-ಯಿಂದ ಪ್ರಜೆಗಳನ್ನು ಸಂತೋಷಪಡಿಸಬೇಕು. ಈ ಕ್ರಮದಲ್ಲಿ ಯಾವ ಕ್ಷತ್ರಿಯನು ಧರ್ಮಪರಿಪಾಲನೆಯನ್ನು ಮಾಡುತ್ತಾನೋ, ಅಂಥವನು ಮರಣದ ಅನಂತರ ಎಲ್ಲಾ ಲೋಕಗಳಲ್ಲಿಯೂ ಸಂತೋಷಪಡುತ್ತಾನೆ.

ಸಮ್ಯಗ್ ವೇದಾನ್ ಪ್ರಾಪ್ಯ ಶಾಸ್ತ್ರಾಣ್ಯಧೀತ್ಯ
ಸಮ್ಯಗ್ ರಾಷ್ಟ್ರಂ ಪಾಲಯಿತ್ವಾ ಚ ರಾಜಾ ।
ಚಾತುರ್ವರ್ಣ್ಯಂ ಸ್ಥಾಪಯಿತ್ವಾ ಸ್ವಧರ್ಮೇ
ಪೂತಾತ್ಮಾ ವೈ ಮೋದತೇ ದೇವಲೋಕೇ ॥೩೫॥

ವೇದಗಳನ್ನು ಮತ್ತು ಶಾಸ್ತ್ರಗಳನ್ನು ಚೆನ್ನಾಗಿ ಅಧ್ಯಯನ ಮಾಡಬೇಕು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣದವರು ಅವರವರ ಧರ್ಮವನ್ನು ನಿಷ್ಠೆಯಿಂದ ಪರಿಪಾಲನೆ ಮಾಡಲು ವ್ಯವಸ್ಥೆಗೊಳಿಸಬೇಕು. ಇಂಥ ರಾಜನು ಪೂತಾತ್ಮನಾಗುತ್ತಾನೆ. ಮರಣದ ಅನಂತರ ದೇವರಾಜ್ಯದಲ್ಲಿ ಸುಖವಾಗಿರುತ್ತಾನೆ.

ಯಸ್ಯ ವೃತ್ತಂ ನಮಸ್ಯಂತಿ ಸ್ವರ್ಗಸ್ಥಸ್ಯಾಪಿ ಮಾನವಾಃ ।
ಪೌರಜಾನಪದಾಮಾತ್ಯಾಃ ಸ ರಾಜಾ ರಾಜಸತ್ತಮಃ ॥೩೬॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ
ರಾಜಧರ್ಮೇ ಸೇನಜಿದುಪಾಖ್ಯಾನಂ ನಾಮ ಷಡ್ವಿಂಶೋಽಧ್ಯಾಯಃ ॥೨೬॥

ಮರಣದ ಅನಂತರದಲ್ಲಿ ಯಾವ ರಾಜನ ಉತ್ತಮ ನಡತೆಯನ್ನು ಪ್ರತಿಯೊಬ್ಬ ಪ್ರಜೆಗಳು ಮಂತ್ರಿಗಳು ನಿರಂತರ ಕೊಂಡಾಡುತ್ತಾರೋ, ಅಂಥ ರಾಜನೇ ರಾಜ-ಶ್ರೇಷ್ಠನೆಂದು ಕರೆಸಿಕೊಳ್ಳುತ್ತಾನೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೨೬ನೆಯ ಅಧ್ಯಾಯವು ಮುಗಿಯಿತು.

* * * * *

೨೭. ಇಪ್ಪತ್ತೇಳನೆಯ ಅಧ್ಯಾಯ

ಸಕಲವನ್ನು ಪರಿತ್ಯಾಗ ಮಾಡುವುದೇ ಶ್ರೇಷ್ಠವೆಂದು ಯುಧಿಷ್ಠಿರನ ಸಮರ್ಥನೆ.

ವೈಶಂಪಾಯನಃ

ಅಸ್ಮಿನ್ನೇವ ಪ್ರಕರಣೇ ಧನಂಜಯಮುದಾರಧೀಃ ।
ಅಭಿನೀತತರಂ ವಾಕ್ಯಮಿತ್ಯುವಾಚ ಯುಧಿಷ್ಠಿರಃ ॥೧॥

ವೈಶಂಪಾಯನರು – ಜನಮೇಜಯನೇ! ಉತ್ಕೃಷ್ಟವಾದ ಬುದ್ಧಿಯುಳ್ಳ ಧರ್ಮರಾಜನು ಇದೇ ಸಂದರ್ಭದಲ್ಲಿ ಅರ್ಜುನನ್ನು ಕುರಿತು ಸಂದರ್ಭಕ್ಕೆ ಉಚಿತವಾದ ಮಾತುಗಳನ್ನು ಹೇಳಿದನು.

ಯದೇತನ್ಮನ್ಯಸೇ ಪಾರ್ಥ ನ ಜ್ಯಾಯೋಽಸ್ತಿ ಧನಾದಿತಿ।
ನ ಸ್ವರ್ಗೋ ನ ಸುಖಂ ನಾರ್ಥೋ ನಿರ್ಧನಸ್ಯೇತಿ ತನ್ಮೃಷಾ ॥೨॥

ಅರ್ಜುನನೇ! ಹಣವೇ ಶ್ರೇಷ್ಠ. ಹಣಕ್ಕಿಂತಲೂ ಶ್ರೇಷ್ಠವಾದದ್ದು ಮತ್ತೊಂದಿಲ್ಲ. ಹಣವಿಲ್ಲದವನಿಗೆ ಸ್ವರ್ಗ, ಸುಖ, ಪ್ರಯೋಜನಗಳು ಯಾವುದೂ ಇಲ್ಲವೆಂದು ನೀನು ಭಾವಿಸಿರುವುದು ತಪ್ಪು.

ಸ್ವಾಧ್ಯಾಯಯಜ್ಞಸಂಸಿದ್ಧಾ ದೃಶ್ಯಂತೇ ಬಹವೋ ಜನಾಃ।
ತಪೋರತಾಶ್ಚ ಮುನಯೋ ಯೇಷಾಂ ಲೋಕಾಃ ಸನಾತನಾಃ ॥೩॥

ಹಣವೇ ಇಲ್ಲದೆ ಅದೆಷ್ಟೋ ಸಾಧಕರು ವೇದಗಳ ಅಧ್ಯಯನ ಮತ್ತು ಅಧ್ಯಾಪನಗಳಿಂದಲೇ ಸಿದ್ಧಿಯನ್ನು ಪಡೆದಿದ್ದಾರೆ. ಅನೇಕ ಋಷಿಮುನಿಗಳು ತಪೋನಿಷ್ಠರಾಗಿ ಸನಾತನವಾದ ಲೋಕಗಳನ್ನು ಪಡೆದುಕೊಂಡಿದ್ದಾರೆ.

ಋಷೀಣಾಂ ಸಮಯಂ ಶಶ್ವದ್ ಯೇ ರಕ್ಷಂತಿ ಧನಂಜಯ।
ಆಶ್ರಿತಾಃ ಸರ್ವಧರ್ಮಜ್ಞಾ ದೇವಾಸ್ತಾನ್ ಬ್ರಾಹ್ಮಣಾನ್ ವಿದುಃ ॥೪॥

ಧನಂಜಯನೇ! ಎಲ್ಲಾ ಧರ್ಮಗಳನ್ನು ತಿಳಿಸಿಕೊಂಡಿರುವ ಯಾವ ಮನುಷ್ಯರಿದ್ದಾರೋ, ಬ್ರಹ್ಮಚರ್ಯ ಆಶ್ರಮದಲ್ಲಿದ್ದು ಋಷಿಗಳ ನಿಯಮದಿಂದ ಯಥಾವತ್ತಾಗಿ ಅಧ್ಯಯನಸಂಪತ್ತನ್ನು ರಕ್ಷಿಸಿಕೊಂಡು ಯಾರು ಬರುತ್ತಿದ್ದಾರೋ, ಅಂಥ ಸಾಧಕರನ್ನೇ ದೇವತೆಗಳು ಬ್ರಾಹ್ಮಣರೆಂದು ಹೇಳುತ್ತಾರೆ.

ಸ್ವಾಧ್ಯಾಯನಿಷ್ಠಾನ್ ಹಿ ಋಷೀನ್ ಜ್ಞಾನನಿಷ್ಠಾಂಸ್ತಥಾಽಪರಾನ್।
ಬುದ್ಧ್ಯೇಥಾಃ ಸಂತತಂ ಚಾಪಿ ಧರ್ಮನಿಷ್ಠಾನ್ ಧನಂಜಯ ॥೫॥

ಧನಂಜಯನೇ! ಕೆಲವು ಋಷಿಗಳು ವೇದಶಾಸ್ತ್ರಗಳ ಅಧ್ಯಯನ ಮತ್ತು ಅಧ್ಯಾಪನಗಳಲ್ಲೇ ಆಸಕ್ತರಾಗಿರುತ್ತಾರೆ. ಇನ್ನೂ ಕೆಲವರು ಜ್ಞಾನವನ್ನು ಸಂಪಾದನೆ ಮಾಡುವುದರಲ್ಲಿ ಅಭಿಲಾಷೆಯುಳ್ಳವರಾಗಿರುತ್ತಾರೆ. ಇವರೆಲ್ಲರೂ ನಿರಂತರ ಧರ್ಮಪರಿಪಾಲನೆಯಲ್ಲಿ ಆಸಕ್ತರಾಗಿರುತ್ತಾರೆಂಬುದನ್ನು ನೀನು ಅರ್ಥಮಾಡಿಕೊಳ್ಳಬೇಕು.

ಜ್ಞಾನನಿಷ್ಠೇಷು ಕಾರ್ಯಾಣಿ ಪ್ರತಿಷ್ಠಾಪ್ಯಾನಿ ಪಾಂಡವ।
ವೈಖಾನಸಾನಾಂ ವಚನಂ ಯಥಾ ನೋ ವಿದಿತಂ ಪ್ರಭೋ ॥೬॥

ಪಾಂಡವನೇ! ನಮಗೆ ತಿಳಿದಂತೆ ಯಾರು ಶ್ರೇಷ್ಠ ಜ್ಞಾನವನ್ನು ಹೊಂದಿರುತ್ತಾರೋ, ಅಂಥವರಿಗೆ ರಾಜ್ಯದ ಆಡಳಿತಕಾರ್ಯವನ್ನು ಒಪ್ಪಿಸಬೇಕು. ಹೀಗೆ ವೈಖಾನಸರು ಹೇಳುತ್ತಾರೆ.

ಅಜಾಶ್ಚ ಪೃಶ್ನಯಶ್ಚೈವ ಸಿಕತಾಶ್ಚೈವ ಭಾರತ।
ಅರುಣಾಃ ಕೇತವಶ್ಚೈವ ಸ್ವಾಧ್ಯಾಯೇನ ದಿವಂ ಗತಾಃ ॥೭॥

ಅಜರು, ಪೃಶ್ನಿಗಳು, ಸಿಕತರು, ಅರುಣರು, ಕೇತವರು ಇವರೆಲ್ಲರೂ ಅಧ್ಯಯನದಿಂದಲೇ ಉತ್ತಮ ಲೋಕವನ್ನು ಪಡೆದಿದ್ದಾರೆ.

ಟಿಪ್ಪಣಿ - ಅಜಾಶ್ಚ ಪೃಶ್ನಯಶ್ಚೈವ ಇತ್ಯತ್ರ **ಅಜಾಃ** ಅಜನಾಮಕಾಃ । ಪೃಶ್ನಯಃ ಪೃಶ್ನಿನಾಮಕಾಃ, ಏವಮುತ್ತರತ್ರಾಪಿ।

'ಅಜಾಶ್ಚ ಪೃಶ್ನಯಶ್ಚೈವ ಎಂಬಲ್ಲಿ **ಅಜಾಃ** ಎಂದರೆ ಅಜನಾಮಕರು ಎಂದರ್ಥ. 'ಪೃಶ್ನಯಃ' ಎಂದರೆ ಪೃಶ್ನಿ ಎಂಬ ಹೆಸರುಳ್ಳವರು ಎಂದರ್ಥ. ಇದರಂತೆ ಉಳಿದದ್ದನ್ನೂ ಕೂಡ ತಿಳಿದುಕೊಳ್ಳಬೇಕು.

ಅವಾಪ್ಯೈತಾನಿ ಕರ್ಮಾಣಿ ವೇದೋಕ್ತಾನಿ ಧನಂಜಯ।
ದಾನಮಧ್ಯಯನಂ ಯಜ್ಞೋ ನಿಗ್ರಹಶ್ಚೈವ ದುರ್ಗ್ರಹಃ ॥೮॥

ದಾನ, ಅಧ್ಯಯನ, ಯಜ್ಞ, ಇಂದ್ರಿಯನಿಗ್ರಹ ಮೊದಲಾದ ವೇದಗಳಲ್ಲಿ ಹೇಳಲ್ಪಟ್ಟ ಸತ್ಕರ್ಮಗಳ ಆಚರಣೆಯಿಂದಲೇ ಇವರೆಲ್ಲರೂ ಉತ್ತಮಲೋಕವನ್ನು ಪಡೆದಿದ್ದಾರೆ.

ದಕ್ಷಿಣೇನ ಚ ಪಂಥಾನಮರ್ಯಮ್ಣೋ ಯೇ ದಿವಂ ಗತಾಃ।
ಏತಾನ್ ಕ್ರಿಯಾವತಾಂ ಲೋಕಾನುಕ್ತವಾನ್ ಪೂರ್ವಮಪ್ಯಹಮ್ ॥೯॥

ಅತ್ಯಂತ ಕಠಿಣವಾದ ಕರ್ಮಗಳನ್ನು ಆಚರಣೆ ಮಾಡಿ, ಅನೇಕ ಸಾಧಕರು ದಕ್ಷಿಣಾಯನ ಮಾರ್ಗದಿಂದ ಸ್ವರ್ಗಕ್ಕೆ ತೆರಳಿದ್ದಾರೆ. ವೇದಗಳಲ್ಲಿ ಹೇಳಲ್ಪಟ್ಟ ಧರ್ಮಾಚರಣೆಯನ್ನು ಮಾಡಿದವರಿಗೆ ಯಾವ ಲೋಕಗಳು ದೊರಕುತ್ತವೆ ಎಂಬುದನ್ನು ಈ ಹಿಂದೆಯೇ ನಾನು ತಿಳಿಸಿದ್ದೇನೆ.

ಉತ್ತರೇಣ ತು ಪಂಥಾನಂ ನಿಯಮಾದ್ ಯಂ ಪ್ರಪಶ್ಯಸಿ।
ಏತೇ ಯಾಗವತಾಂ ಲೋಕಾ ಭಾಂತಿ ಪಾರ್ಥ ಸನಾತನಾಃ ॥೧೦॥

ಅರ್ಜುನನೇ! ಅತ್ಯಂತನಿಯಮಾನುಷ್ಠಾನದಲ್ಲಿರುವುದರಿಂದ ನೀನೂ ಸಹ ಇದೆಲ್ಲವನ್ನು ಕಾಣುತ್ತಿರುವಿ. ಅದರಲ್ಲಿ ಯಾವ ಉತ್ತರಾಯಣಮಾರ್ಗವನ್ನು ನೋಡುತ್ತಿರುವಿಯೋ, ಆ ಮಾರ್ಗವು ಜ್ಞಾನಯಜ್ಞವನ್ನು ಆಚರಿಸುವ ಸಾಧಕರಿಗಷ್ಟೇ ದೊರಕುತ್ತದೆ.

ತತ್ರೋತ್ತರಾಂ ಗತಿಂ ಪಾರ್ಥ ಪ್ರಶಂಸಂತಿ ಪುರಾವಿದಃ।
ಸಂತೋಷೋ ವೈ ಸ್ವರ್ಗತಮಃ ಸಂತೋಷಃ ಪರಮಂ ಸುಖಮ್॥೧೧॥

ಪಾರ್ಥನೇ! ಜ್ಞಾನದಿಂದ ಲಭಿಸುವ ಉತ್ತರಾಯಣಮಾರ್ಗವನ್ನೇ ಪುರಾತನಮುನಿಗಳು ಪ್ರಶಂಸೆ ಮಾಡುತ್ತಾರೆ. ಸಂತೋಷವೇ ಪರಮಸುಖವಾಗಿದೆ. ಸಂತೋಷಕ್ಕಿಂತಲೂ ಮತ್ತೊಂದು ಪಡೆಯಬೇಕಾದ್ದು ಇರುವುದಿಲ್ಲ.

ತುಷ್ಟೇರ್ನ ಕಿಂಚಿತ್ ಪರಮಂ ಸಾ ಸಮ್ಯಕ್ ಪ್ರತಿತಿಷ್ಠತಿ।
ವಿನೀತಕ್ರೋಧಹರ್ಷಸ್ಯ ಸತತಂ ಸಿದ್ಧಿರುತ್ತಮಾ ॥೧೨॥

ಯಾರು ಕೋಪ ಮತ್ತು ಸಂತೋಷಗಳನ್ನು ಜಯಿಸಿರುತ್ತಾನೋ, ಅವನಿಗೆ ಸಂತೃಪ್ತಿಯು ಇರುತ್ತದೆ. ಅಂತಹವನಿಗೆ ಯಾವಾಗಲೂ ಉತ್ತಮವಾದ ಸಿದ್ಧಿಯು ಲಭಿಸುತ್ತದೆ.

ಅತ್ರಾಪ್ಯುದಾಹರಂತೀಮಾಂ ಗಾಥಾಂ ಗೀತಾಂ ಯಯಾತಿನಾ ।
ಯಾऽಭಿಪ್ರತ್ಯಾಹರೇತ್ ಕಾಮಾನ್ ಕೂರ್ಮೋऽಂಗಾನೀವ ಸರ್ವಶಃ ॥೧೩॥

ಇದೇ ವಿಷಯದಲ್ಲಿ ಹಿಂದೆ ಯಯಾತಿರಾಜನು ತನ್ನ ಆತ್ಮಾನುಭವವನ್ನು ಪದ್ಯಗಳ ಮೂಲಕ ಹೇಳಿರುತ್ತಾನೆ. ಅವನು ಹೇಳಿದಂತೆ ಆಮೆಯು ತನ್ನ ಅವಯವಗಳನ್ನು ಒಳಗೆ ಬೇಕಾದಾಗ ಸೆಳೆದುಕೊಂಡು, ಬೇಕಾದಾಗ ಹೊರಗೆ ಬಿಡುತ್ತದೋ, ಅದರಂತೆ ಕಾಮಾದಿಗಳನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಂಡಿರುವವನು ಸಂತೋಷದಿಂದ ಇರುತ್ತಾನೆ.

ಯದಾ ಚಾಯಂ ನ ಬಿಭೇತಿ ಯದಾ ಚಾಸ್ಮಾನ್ನ ಬಿಭ್ಯತಿ ।
ಯದಾ ನೇಚ್ಛತಿ ನ ದ್ವೇಷ್ಟಿ ಬ್ರಹ್ಮ ಸಂಪದ್ಯತೇ ತದಾ ॥೧೪॥

ನಿಜವಾದ ಸಾಧಕನು ಯಾರೊಬ್ಬನಿಗೂ ಭಯ ಪಡುವುದಿಲ್ಲ. ಯಾರೊಬ್ಬರನ್ನು ಭಯಪಡಿಸುವುದೂ ಇಲ್ಲ. ಯಾವಾಗ ಯಾವುದನ್ನು ಇಚ್ಛಿಸುವುದಿಲ್ಲವೋ. ಯಾವುದನ್ನು ದ್ವೇಷ ಮಾಡುವುದಿಲ್ಲವೋ, ಆಗ ಪರಮಾತ್ಮನ ಸಾಮೀಪ್ಯವನ್ನು ಹೊಂದುತ್ತಾನೆ.

ಯದಾ ನ ಭಾವಂ ಕುರುತೇ ಸರ್ವಭೂತೇಷು ಪಾಪಕಮ್ ।
ಕರ್ಮಣಾ ಮನಸಾ ವಾಚಾ ಬ್ರಹ್ಮ ಸಂಪದ್ಯತೇ ತದಾ ॥೧೫॥

ನಿಜವಾದ ಸಾಧಕನು ಬೇರೆ ಪ್ರಾಣಿಗಳಿಗೆ ಮನಸ್ಸಿನಿಂದ ಮಾತಿನಿಂದ ಕಾರ್ಯದಿಂದ ಕೆಟ್ಟದ್ದನ್ನು ಬಯಸುವುದಿಲ್ಲವೋ, ಆಗ ಅವನು ಪರಮಾತ್ಮನನ್ನು ಹೊಂದುತ್ತಾನೆ.

ವಿನೀತಮಾನಮೋಹಶ್ಚ ಬಹುಸಂಗವಿವರ್ಜಿತಃ ।
ತದಾತ್ಮಜ್ಯೋತಿಷಃ ಸಾಧೋ ನಿರ್ವಾಣಮುಪಪದ್ಯತೇ ॥೧೬॥

ಮಾನ ಮತ್ತು ಮೋಹಗಳನ್ನು ನಿಗ್ರಹ ಮಾಡಿ ಎಲ್ಲರ ಸಂಗವನ್ನು ಯಾವಾಗ ಬಿಡುತ್ತಾನೋ, ಪರಮಾತ್ಮನೆಂಬ ಜ್ಯೋತಿಯ ಬಗ್ಗೆ ನಿರಂತರ ತಿಳಿದುಕೊಳ್ಳುತ್ತಾನೋ, ಆಗ ಅಂಥ ಸಾಧಕನು ಮೋಕ್ಷವನ್ನು ಹೊಂದುತ್ತಾನೆ.

ಇದಂ ತು ಶೃಣು ಮೇ ಪಾರ್ಥ ಬ್ರುವತಃ ಸಂಯತೇಂದ್ರಿಯಃ।
ಧರ್ಮಮನ್ಯೇ ವೃತ್ತಮನ್ಯೇ ಧನಮೀಹಂತಿ ಚಾಪರೇ ॥೧೭॥

ಓ ಪಾರ್ಥನೇ! ನಾನು ಈಗ ಹೇಳುವ ವಿಷಯವನ್ನು ಗಮನವಿಟ್ಟು ಕೇಳು. ಇಂದ್ರಿಯನಿಗ್ರಹವು ಅತ್ಯಂತಶ್ರೇಷ್ಠವಾದದ್ದು. ಕೆಲವರು ಧರ್ಮವನ್ನು ಅನುಷ್ಠಾನ-ಮಾಡಬೇಕೆಂದು ಪ್ರಯತ್ನ ಪಡುತ್ತಾರೆ. ಇನ್ನು ಕೆಲವರು ಅಪಾರವಾದ ಹಣವನ್ನು ಸಂಪಾದನೆ ಮಾಡಬೇಕೆಂದು ಪ್ರಯತ್ನ ಪಡುತ್ತಾರೆ.

ಧನಹೇತೋರ್ಯ ಈಹೇತ ತಸ್ಯಾನೀಹಾ ಗರೀಯಸೀ।
ಭೂಯಾನ್ ದೋಷೋ ಹಿ ವಿತ್ತಸ್ಯ ಯಶ್ಚ ಧರ್ಮಸ್ತದಾಶ್ರಯಃ ॥೧೮॥

ಕೆಲವರು ಧರ್ಮಕ್ಕೆ ಧನವು ಆಧಾರವಾಗಿದೆ ಎಂಬ ಉದ್ದೇಶದಿಂದ ಧನಾ-ರ್ಜನೆಯನ್ನು ಮಾಡಲು ಆಸೆ ಪಡಬಹುದು. ಆದರೆ ಅಂಥ ಹಣಕ್ಕಾಗಿ ಆಸೆ ಪಡದಿ-ರುವುದೇ ಒಳ್ಳೆಯದು. ಧರ್ಮಕ್ಕೆ ಆ ಹಣವು ಆವಶ್ಯಕವಾಗಿದ್ದರೂ ಅದರಲ್ಲಿ ಅನೇಕ ದೋಷಗಳಿರುತ್ತವೆ.

ಪ್ರತ್ಯಕ್ಷಮನುಪಶ್ಯಾಮಿ ತ್ವಮಪಿ ದ್ರಷ್ಟುಮರ್ಹಸಿ।
ವರ್ಜನಂ ವರ್ಜನೀಯಾನಾಮೀಹಮಾನೇನ ದುಷ್ಕರಮ್ ॥೧೯॥

ನಾನು ಪ್ರತ್ಯಕ್ಷವಾಗಿಯೇ ಹಣ ಸಂಪಾದನೆಯಲ್ಲಿರುವ ದೋಷಗಳನ್ನು ಕಾಣು-ತ್ತಿದ್ದೇನೆ. ನೀನೂ ಸಹ ಇದನ್ನು ಪ್ರತ್ಯಕ್ಷವಾಗಿ ಕಾಣಬಹುದು. ಹಣದ ಸಂಪಾದನೆ-ಯಲ್ಲಿ ಯಾರು ಆಸಕ್ತರಾಗಿರುತ್ತಾರೋ, ಬಿಡಬೇಕಾದದ್ದನ್ನು ಬಿಡದೇ ಪಾಪವನ್ನೇ ಹೊಂದುತ್ತಾರೆ.

ಯೇ ವಿತ್ತಮಭಿಪದ್ಯಂತೇ ಸಮ್ಯಕ್ತ್ವಂ ತೇಷು ದುರ್ಲಭಮ್।
ದ್ರುಹ್ಯತಃ ಪ್ರೈತಿ ತತ್ ಪ್ರಾಹುಃ ಪ್ರತಿಕೂಲಂ ಯಥಾತಥಮ್ ॥೨೦॥

ಯಾರು ಹಣದ ಬೆನ್ನು ಹತ್ತುತ್ತಾರೋ, ಅವರಲ್ಲಿ ಸಜ್ಜನಿಕೆಯು ಬಹಳ ಅಪರೂಪ. ಏಕೆಂದರೆ ಹಣವು ದ್ರೋಹ ಮಾಡುವನಿಗಷ್ಟೇ ಲಭಿಸುತ್ತದೆ. ಹೀಗೆ

ಅನುಭವಿಗಳು ಹೇಳುತ್ತಾರೆ. ಹಾಗೇನಾದರೂ ಸಜ್ಜನನು ಹಣವನ್ನು ಸಂಪಾದನೆ ಮಾಡಿದರೂ ಮುಂದೆ ಅದು ತನ್ನ ಸಾಧನೆಗೆ ಪ್ರತಿಕೂಲವೇ ಆಗುತ್ತದೆ.

ಟಿಪ್ಪಣಿ - ದ್ರುಹ್ಯತಃ ಪ್ರೈತಿ ತತ್ ಪ್ರಾಹುಃ ಇತ್ಯತ್ರ **ದ್ರುಹ್ಯತಃ** ಪುರುಷಸ್ಯ ಪ್ರತಿಕೂಲಂ ಯಥಾ ಭವತಿ ತಥಾ **ತತ್** ಪರಲೋಕಸುಖಂ **ಪ್ರೈತಿ** ನಶ್ಯತಿ।

'ದ್ರುಹ್ಯತಃ' ಎಂಬುದಕ್ಕೆ ಪುರುಷನಿಗೆ ಪ್ರತಿಕೂಲವಾಗುತ್ತದೆ. ಈ ಹಣ ಸಂಪಾದನೆಯಿಂದ ಪರಲೋಕ ಸುಖವು ನಾಶವಾಗುತ್ತದೆ ಎಂದಭಿಪ್ರಾಯ.

ವಿವರಣೆ - ಹಣಸಂಪಾದನೆಯನ್ನು ಮಾಡುವುದೇ ಜೀವನದ ಮುಖ್ಯ ಉದ್ದೇಶವಾಗಿರಬಾರದು. ಹಣಸಂಪಾದನೆಯನ್ನು ಕೇವಲ ಜೀವನ ನಿರ್ವಾಹಣೆಗೆ ಆವಶ್ಯಕವಿದ್ದಷ್ಟೇ ಮಾಡಬೇಕು. ಹೆಚ್ಚು ಮಾಡಿದರೆ ಅದು ಅನ್ಯಮಾರ್ಗದಲ್ಲೇ ನಮ್ಮನ್ನು ಕರೆದುಕೊಂಡು ಹೋಗುತ್ತದೆ. ಅಂದಮಾತ್ರಕ್ಕೆ ಹಣವನ್ನೇ ಸಂಪಾದನೆ ಮಾಡಬಾರದು ಎಂದಭಿಪ್ರಾಯವಲ್ಲ. ಆವಶ್ಯಕವಿದ್ದಷ್ಟು ಹಣವನ್ನು ಸಂಪಾದನೆ ಮಾಡಿ ಅದರಿಂದ ಜೀವನವನ್ನು ಸಾಗಿಸಬೇಕು.

ಯಸ್ತು ಸಂಭಿನ್ನವೃತ್ತಃ ಸ್ಯಾದ್ ವೀತಶೋಕಭಯೋ ನರಃ।
ಅಲ್ಪೇನ ತೃಷಿತೋ ದ್ರುಹ್ಯನ್ ಭ್ರೂಣಹತ್ಯಾಂ ನ ಬುಧ್ಯತೇ ॥೨೧॥

ಅಲ್ಪವಾದ ಧನದ ಆಸೆಗಾಗಿ ಮನುಷ್ಯನು ಸದಾಚಾರದಿಂದ ಭ್ರಷ್ಟನಾಗುತ್ತಾನೆ. ಶೋಕ ಮತ್ತು ಭಯಗಳನ್ನೇ ಲೆಕ್ಕಿಸುವುದಿಲ್ಲ. ಆದ್ದರಿಂದಲೇ ಮತ್ತೊಬ್ಬರಿಗೆ ದ್ರೋಹವನ್ನೂ ಕೂಡ ಮಾಡುತ್ತಾನೆ. ಇವನು ಭ್ರೂಣಹತ್ಯಾಪಾಪವನ್ನೂ ಕೂಡ ಗಮನಿಸುವುದಿಲ್ಲ.

ಟಿಪ್ಪಣಿ - ಹಣವೇ ಮುಖ್ಯವಾದಾಗ ಎಲ್ಲಾ ಪಾಪಕಾರ್ಯಗಳಲ್ಲೂ ತೊಡಗುತ್ತಾನೆ. ಸುಳ್ಳುಗಳನ್ನು ಹೇಳುವುದು. ಅಪ್ರಾಮಾಣಿಕತನದಿಂದ ನಡೆದುಕೊಳ್ಳುವುದು ಆಯಾ ಕಾಲಕ್ಕೆ ಮಾಡಬೇಕಾದ ಕರ್ತವ್ಯಗಳನ್ನು ಪರಿತ್ಯಾಗ ಮಾಡುವುದು. ಕೇವಲ ಸ್ವಾರ್ಥನಾಗಿರುವುದು. ತನ್ನನ್ನು ಪ್ರಶಂಸೆ ಮಾಡಿಕೊಳ್ಳುವುದು. ಮತ್ತೊಬ್ಬರನ್ನು ನಿಂದನೆ ಮಾಡುವುದು. ಈ ದುರ್ಗುಣಗಳು ಇದ್ದರಷ್ಟೇ ಹಣಸಂಪಾದನೆಯು ಸುಲಭವಾಗುತ್ತದೆ. ಆದ್ದರಿಂದ ಸಜ್ಜನನೂ ಕೂಡ ಹಣಸಂಪಾದನೆಯಲ್ಲಿ ತೊಡಗಿದಾಗ ಈ ಎಲ್ಲ ದುರ್ಗುಣಗಳನ್ನು ಹೊಂದುವ ಸಾಧ್ಯತೆಯಿರುತ್ತದೆ.

ಟಿಪ್ಪಣಿ - ಅಲ್ಪೇನ ತೃಷಿತ ಇತ್ಯತ್ರ **ತೃಷಿತಃ** ಧನತೃಷ್ಣಾವಾನ್ ।

'ಅಲ್ಪೇನ ತೃಷಿತಃ' ಎಂಬಲ್ಲಿ **'ತೃಷಿತಃ'** ಎಂಬುದಕ್ಕೆ ಹಣದ ತೃಷೆ ಇರುವವನು ಎಂದರ್ಥ.

ದುಷ್ಯಂತ್ಯಾದದತೋ ಭೃತ್ಯಾ ನಿತ್ಯಂ ದಸ್ಯುಭಯಾದಿವ ।
ದುರ್ಲಭಂ ಚ ಧನಂ ಪ್ರಾಪ್ಯ ಭೃಶಂ ದತ್ತ್ವಾನುತಪ್ಯತೇ ॥೨೨॥

ಭೃತ್ಯರು ತಮಗೆ ಬರಬೇಕಾದ ಹಣವನ್ನು ಸರಿಯಾದ ಕಾಲಕ್ಕೆ ಪಡೆದುಕೊಳ್ಳುತ್ತಾರೆ. ಮತ್ತು ತಮ್ಮ ಪ್ರಯತ್ನಕ್ಕೆ ಪ್ರತಿಫಲವಾಗಿ ಆ ಹಣವನ್ನು ಪಡೆದುಕೊಳ್ಳುತ್ತಾರೆ. ಹಣವನ್ನು ಕೊಟ್ಟ ಯಜಮಾನನು ಮಾತ್ರ ಕಳ್ಳರು ಧನವನ್ನು ಕೊಳ್ಳೆಹೊಡೆದುಕೊಂಡು ಹೋದರೆ ಹೇಗೆ ದುಃಖಿಸುತ್ತಾನೋ, ಹಾಗೇ ಇವನು ದುಃಖಿಸುತ್ತಾನೆ.

ಅಧನಃ ಕಸ್ಯ ಕಿಂ ವಾಚ್ಯೋ ವಿಮುಕ್ತಃ ಸರ್ವಶಃ ಸುಖೀ ।
ದೇವಸ್ವಮುಪಗೃಹ್ಯೈವ ಧನೇನ ನ ಸುಖೀ ಭವೇತ್ ॥೨೩॥

ಹಣವಿಲ್ಲದವನ ಬಗ್ಗೆ ಯಾರೂ ಏನನ್ನೂ ಮಾತನಾಡುವುದಿಲ್ಲ. ಯಾವುದೇ ಕಾರಣಕ್ಕೂ ಅವನನ್ನು ಯಾರೂ ನಿಂದಿಸುವುದಿಲ್ಲ. ಎಲ್ಲಾ ವಿಧವಾದ ಭಯಗಳಿಂದ ರಹಿತನಾಗಿರುತ್ತಾನೆ. ಒಂದು ವೇಳೆ ದೇವಸ್ವತ್ತಾದ ಹಣವನ್ನು ಮನುಷ್ಯನು ತೆಗೆದುಕೊಂಡರೂ ಅದನ್ನು ಸುಖಕ್ಕಾಗಿ ಉಪಯೋಗಿಸಬಾರದು. ಹಣದಿಂದ ಮನುಷ್ಯನಿಗೆ ಸುಖವು ದೊರಕುವುದಿಲ್ಲ.

ತತ್ರ ಗಾಥಾಂ ಯಜ್ಞಗೀತಾಂ ಕೀರ್ತಯಂತಿ ಪುರಾವಿದಃ ।
ತ್ರಯೀಮುಪಾಶ್ರಿತಾಂ ಲೋಕೇ ಯಜ್ಞಸಂಸ್ತರಕಾರಿಕಾಮ್ ॥೨೪॥

ಇದೇ ವಿಷಯದಲ್ಲಿ ಪುರಾಣವನ್ನು ತಿಳಿದವರು ವೇದಪ್ರತಿಪಾದಿತವಾದ ಯಜ್ಞಗೀತೆ ಎಂಬ ಒಂದು ಸುಭಾಷಿತವನ್ನು ಹೇಳುತ್ತಾರೆ.

ಯಜ್ಞಾಯ ಸೃಷ್ಟಾನಿ ಧನಾನಿ ಧಾತ್ರಾ
ಯಜ್ಞಾಯ ಸೃಷ್ಟಃ ಪುರುಷೋ ರಕ್ಷಿತಾ ಚ ।

ತಸ್ಮಾತ್ ಸರ್ವಂ ಯಜ್ಞಏವೋಪಯೋಜ್ಯಂ
ಧನಂ ನ ಕಾಮಾಯ ಹಿತಂ ಪ್ರಶಸ್ತಮ್ ॥೨೫॥

ಯಜ್ಞಕ್ಕೋಸ್ಕರವೇ ಬ್ರಹ್ಮನು ಹಣವನ್ನು ಸೃಷ್ಟಿ ಮಾಡಿರುವನು. ಆ ಹಣವನ್ನು ರಕ್ಷಣೆ ಮಾಡಿ ಯಜ್ಞ ಮಾಡುವುದಕ್ಕಾಗಿಯೇ ಮನುಷ್ಯರನ್ನು ಸೃಷ್ಟಿ ಮಾಡಿರುವನು. ಆದ್ದರಿಂದ ಆ ಶ್ರೇಷ್ಠವಾದ ಹಣವನ್ನು ಯಜ್ಞಕ್ಕಾಗಿಯೇ ಉಪಯೋಗಿಸಬೇಕು. ಸ್ವೇಚ್ಛೆಯಿಂದ ಹಣವನ್ನು ಉಪಯೋಗಿಸುವುದು ಪ್ರಶಸ್ತವಾಗಿರುವುದಿಲ್ಲ.

ಏತತ್ ಸಾರ್ಥೇ ಚ ಕೌಂತೇಯ ಧನಂ ಧನವತಾಂ ವರ।
ಧಾತಾ ದದಾತಿ ಮರ್ತ್ಯೇಭ್ಯೋ ಯಜ್ಞಾರ್ಥಮಿತಿ ವಿದ್ಧಿ ತತ್ ॥೨೬॥

ಧನವಂತರಲ್ಲಿ ಶ್ರೇಷ್ಠನಾದ ಅರ್ಜುನನೇ! ಪರಮಾತ್ಮನು ಯಾವ ಕಾರಣಕ್ಕಾಗಿ ಹಣವನ್ನು ನಮಗೆ ನೀಡುತ್ತಾನೋ, ಅದನ್ನು ಯಜ್ಞಕ್ಕೋಸ್ಕರವೇ ಉಪಯೋಗಿಸಬೇಕೆಂದು ತಿಳಿ.

ತಸ್ಮಾದ್ ಬುದ್ಧ್ಯಂತಿ ಪುರುಷಾ ನಹಿ ತತ್ ಕಸ್ಯಚಿದ್ ಧ್ರುವಮ್।
ಶ್ರದ್ಧಾನಸ್ತತೋ ಲೋಕೋ ದದ್ಯಾಚ್ಚೈವ ಯಜೇತ ಚ ॥೨೭॥

ಆದ್ದರಿಂದ ಮತಿವಂತರು ಹಣವು ಯಾರಲ್ಲಿಯೂ ಕೂಡ ಸ್ಥಿರವಾಗಿ ನಿಲ್ಲುವುದಿಲ್ಲವೆಂದು ಹೇಳುತ್ತಾರೆ. ವೇದೋಕ್ತಕರ್ಮಗಳಲ್ಲಿ ಶ್ರದ್ಧೆಯಿರುವ ಮನುಷ್ಯರು ಕ್ಷಣಿಕವಾದ ಹಣವನ್ನು ಯಜ್ಞದ ಮೂಲಕ ಮತ್ತು ದಾನದ ಮೂಲಕ ಉಪಯೋಗಿಸುತ್ತಾರೆ.

ಲಬ್ಧಸ್ಯ ತ್ಯಾಗಮಿತ್ಯಾಹುರ್ನ ಭೋಗಂ ನಚ ಸಂಚಯಮ್।
ತಸ್ಯ ಕಿಂ ಸಂಚಯೇನಾರ್ಥಃ ಕಾರ್ಯೇ ಜ್ಯಾಯಸಿ ತಿಷ್ಠತಿ ॥೨೮॥

ಸಂಪಾದನೆ ಮಾಡಿದ ಹಣವನ್ನು ಯಜ್ಞ ಹಾಗೂ ದಾನದ ಮೂಲಕ ತ್ಯಾಗ ಮಾಡಬೇಕು. ಅದನ್ನು ಕೂಡಿಡಬಾರದು. ಸುಖವನ್ನು ಅನುಭವಿಸುವುದಕ್ಕಾಗಿಯೂ ಖರ್ಚು ಮಾಡಬಾರದು. ಆದ್ದರಿಂದ ಹಣವನ್ನು ಸಂಪಾದನೆ ಮಾಡುವುದರಿಂದ

ಟಿಪ್ಪಣಿ - ಅಲ್ಪೇನ ತೃಷಿತ ಇತ್ಯತ್ರ **ತೃಷಿತಃ** ಧನತೃಷ್ಣಾವಾನ್।

'ಅಲ್ಪೇನ ತೃಷಿತಃ' ಎಂಬಲ್ಲಿ **'ತೃಷಿತಃ'** ಎಂಬುದಕ್ಕೆ ಹಣದ ತೃಷೆ ಇರುವವನು ಎಂದರ್ಥ.

ದುಷ್ಯಂತ್ಯಾದದತೋ ಭೃತ್ಯಾ ನಿತ್ಯಂ ದಸ್ಯುಭಯಾದಿವ।
ದುರ್ಲಭಂ ಚ ಧನಂ ಪ್ರಾಪ್ಯ ಭೃಶಂ ದತ್ತ್ವಾನುತಪ್ಯತೇ ॥೨೨॥

ಭೃತ್ಯರು ತಮಗೆ ಬರಬೇಕಾದ ಹಣವನ್ನು ಸರಿಯಾದ ಕಾಲಕ್ಕೆ ಪಡೆದುಕೊಳ್ಳುತ್ತಾರೆ. ಮತ್ತು ತಮ್ಮ ಪ್ರಯತ್ನಕ್ಕೆ ಪ್ರತಿಫಲವಾಗಿ ಆ ಹಣವನ್ನು ಪಡೆದುಕೊಳ್ಳುತ್ತಾರೆ. ಹಣವನ್ನು ಕೊಟ್ಟ ಯಜಮಾನನು ಮಾತ್ರ ಕಳ್ಳರು ಧನವನ್ನು ಕೊಳ್ಳೆಹೊಡೆದುಕೊಂಡು ಹೋದರೆ ಹೇಗೆ ದುಃಖಿಸುತ್ತಾನೋ, ಹಾಗೇ ಇವನು ದುಃಖಿಸುತ್ತಾನೆ.

ಅಧನಃ ಕಸ್ಯ ಕಿಂ ವಾಚ್ಯೋ ವಿಮುಕ್ತಃ ಸರ್ವಶಃ ಸುಖೀ।
ದೇವಸ್ವಮುಪಗೃಹ್ಯೈವ ಧನೇನ ನ ಸುಖೀ ಭವೇತ್ ॥೨೩॥

ಹಣವಿಲ್ಲದವನ ಬಗ್ಗೆ ಯಾರೂ ಏನನ್ನೂ ಮಾತನಾಡುವುದಿಲ್ಲ. ಯಾವುದೇ ಕಾರಣಕ್ಕೂ ಅವನನ್ನು ಯಾರೂ ನಿಂದಿಸುವುದಿಲ್ಲ. ಎಲ್ಲಾ ವಿಧವಾದ ಭಯಗಳಿಂದ ರಹಿತನಾಗಿರುತ್ತಾನೆ. ಒಂದು ವೇಳೆ ದೇವಸ್ವತ್ತಾದ ಹಣವನ್ನು ಮನುಷ್ಯನು ತೆಗೆದುಕೊಂಡರೂ ಅದನ್ನು ಸುಖಕ್ಕಾಗಿ ಉಪಯೋಗಿಸಬಾರದು. ಹಣದಿಂದ ಮನುಷ್ಯನಿಗೆ ಸುಖವು ದೊರಕುವುದಿಲ್ಲ.

ತತ್ರ ಗಾಥಾಂ ಯಜ್ಞಗೀತಾಂ ಕೀರ್ತಯಂತಿ ಪುರಾವಿದಃ।
ತ್ರಯೀಮುಪಾಶ್ರಿತಾಂ ಲೋಕೇ ಯಜ್ಞಸಂಸ್ತರಕಾರಿಕಾಮ್ ॥೨೪॥

ಇದೇ ವಿಷಯದಲ್ಲಿ ಪುರಾಣವನ್ನು ತಿಳಿದವರು ವೇದಪ್ರತಿಪಾದಿತವಾದ ಯಜ್ಞಗೀತೆ ಎಂಬ ಒಂದು ಸುಭಾಷಿತವನ್ನು ಹೇಳುತ್ತಾರೆ.

ಯಜ್ಞಾಯ ಸೃಷ್ಟಾನಿ ಧನಾನಿ ಧಾತ್ರಾ
ಯಜ್ಞಾಯ ಸೃಷ್ಟಃ ಪುರುಷೋ ರಕ್ಷಿತಾ ಚ।

ತಸ್ಮಾತ್ ಸರ್ವಂ ಯಜ್ಞಏವೋಪಯೋಜ್ಯಂ
ಧನಂ ನ ಕಾಮಾಯ ಹಿತಂ ಪ್ರಶಸ್ತಮ್ ॥೨೫॥

ಯಜ್ಞಕ್ಕೋಸ್ಕರವೇ ಬ್ರಹ್ಮನು ಹಣವನ್ನು ಸೃಷ್ಟಿ ಮಾಡಿರುವನು. ಆ ಹಣವನ್ನು ರಕ್ಷಣೆ ಮಾಡಿ ಯಜ್ಞ ಮಾಡುವುದಕ್ಕಾಗಿಯೇ ಮನುಷ್ಯರನ್ನು ಸೃಷ್ಟಿ ಮಾಡಿರುವನು. ಆದ್ದರಿಂದ ಆ ಶ್ರೇಷ್ಠವಾದ ಹಣವನ್ನು ಯಜ್ಞಕ್ಕಾಗಿಯೇ ಉಪಯೋಗಿಸಬೇಕು. ಸ್ವೇಚ್ಛೆಯಿಂದ ಹಣವನ್ನು ಉಪಯೋಗಿಸುವುದು ಪ್ರಶಸ್ತವಾಗಿರುವುದಿಲ್ಲ.

ಏತತ್ ಸಾರ್ಥೇ ಚ ಕೌಂತೇಯ ಧನಂ ಧನವತಾಂ ವರ।
ಧಾತಾ ದದಾತಿ ಮರ್ತ್ಯೇಭ್ಯೋ ಯಜ್ಞಾರ್ಥಮಿತಿ ವಿದ್ಧಿ ತತ್ ॥೨೬॥

ಧನವಂತರಲ್ಲಿ ಶ್ರೇಷ್ಠನಾದ ಅರ್ಜುನನೇ! ಪರಮಾತ್ಮನು ಯಾವ ಕಾರಣಕ್ಕಾಗಿ ಹಣವನ್ನು ನಮಗೆ ನೀಡುತ್ತಾನೋ, ಅದನ್ನು ಯಜ್ಞಕ್ಕೋಸ್ಕರವೇ ಉಪಯೋಗಿಸಬೇಕೆಂದು ತಿಳಿ.

ತಸ್ಮಾದ್ ಬುದ್ಧ್ಯಂತಿ ಪುರುಷಾ ನಹಿ ತತ್ ಕಸ್ಯಚಿದ್ ಧ್ರುವಮ್।
ಶ್ರದ್ಧಾನಸ್ತತೋ ಲೋಕೋ ದದ್ಯಾಚ್ಚೈವ ಯಜೇತ ಚ ॥೨೭॥

ಆದ್ದರಿಂದ ಮತಿವಂತರು ಹಣವು ಯಾರಲ್ಲಿಯೂ ಕೂಡ ಸ್ಥಿರವಾಗಿ ನಿಲ್ಲುವುದಿಲ್ಲವೆಂದು ಹೇಳುತ್ತಾರೆ. ವೇದೋಕ್ತಕರ್ಮಗಳಲ್ಲಿ ಶ್ರದ್ಧೆಯಿರುವ ಮನುಷ್ಯರು ಕ್ಷಣಿಕವಾದ ಹಣವನ್ನು ಯಜ್ಞದ ಮೂಲಕ ಮತ್ತು ದಾನದ ಮೂಲಕ ಉಪಯೋಗಿಸುತ್ತಾರೆ.

ಲಬ್ಧಸ್ಯ ತ್ಯಾಗಮಿತ್ಯಾಹುರ್ನ ಭೋಗಂ ನಚ ಸಂಚಯಮ್।
ತಸ್ಯ ಕಿಂ ಸಂಚಯೇನಾರ್ಥಃ ಕಾರ್ಯೇ ಜ್ಯಾಯಸಿ ತಿಷ್ಠತಿ ॥೨೮॥

ಸಂಪಾದನೆ ಮಾಡಿದ ಹಣವನ್ನು ಯಜ್ಞ ಹಾಗೂ ದಾನದ ಮೂಲಕ ತ್ಯಾಗ ಮಾಡಬೇಕು. ಅದನ್ನು ಕೂಡಿಡಬಾರದು. ಸುಖವನ್ನು ಅನುಭವಿಸುವುದಕ್ಕಾಗಿಯೂ ಖರ್ಚು ಮಾಡಬಾರದು. ಆದ್ದರಿಂದ ಹಣವನ್ನು ಸಂಪಾದನೆ ಮಾಡುವುದರಿಂದ

ಏನು ಉಪಯೋಗವಿದೆ? ಮತ್ತು ಯಜ್ಞಯಾಗಾದಿಗಳಿಗಿಂತಲೂ ಜ್ಞಾನಸಂಪಾದನೆಯು ಅತ್ಯಂತಶ್ರೇಷ್ಠವಾಗಿರುವುದರಿಂದ ಅದಕ್ಕಾಗಿ ಹಣಸಂಪಾದನೆಯನ್ನೇಕೆ ಮಾಡಬೇಕು.

ಯೇ ಸ್ವಧರ್ಮಾದಪೇತೇಭ್ಯಃ ಪ್ರಯಚ್ಛಂತ್ಯಲ್ಪಬುದ್ಧಯಃ।
ಶತಂ ವರ್ಷಾಣಿ ತೇ ಪ್ರೇತ್ಯ ಪುರೀಷಂ ಭುಂಜತೇ ಜನಾಃ ॥೨೯॥

ಯಾರು ವಿವೇಕವಿಲ್ಲದೇ ಸ್ವಧರ್ಮದಿಂದ ಭ್ರಷ್ಟರಾಗಿ ಹಣವನ್ನು ಸಂಪಾದನೆ ಮಾಡುತ್ತಾರೋ, ಅವರು ದೇಹವನ್ನು ಬಿಟ್ಟ ಮೇಲೆ ನೂರಾರು ವರ್ಷಗಳ ಕಾಲ ಅಮೇಧ್ಯವನ್ನು ತಿನ್ನುತ್ತಾ ಕಾಲವನ್ನು ಕಳೆಯುತ್ತಾರೆ. ಅಪಾತ್ರನಿಗೆ ದಾನ ಮಾಡುವುದರಿಂದಲೂ ಇದೇ ದುಃಖವನ್ನು ಅನುಭವಿಸುತ್ತಾನೆ.

ಅನರ್ಹತೇ ಯದ್ ದದಾತಿ ನ ದದಾತಿ ಯದರ್ಹತೇ।
ಅಹ್ನಾನಹ್ನಾಪರಿಜ್ಞಾನಾದ್ ದಾನಧರ್ಮೋಽಪಿ ದುಷ್ಕರಃ ॥೩೦॥

ಅಯೋಗ್ಯರಿಗೆ ಯಾರು ದಾನವನ್ನು ಮಾಡುತ್ತಾರೋ, ಯೋಗ್ಯರಿಗೆ ಯಾರು ದಾನವನ್ನು ಮಾಡುವುದಿಲ್ಲವೋ, ಯಾರಿಗೆ ದಾನಕ್ಕೆ ಪಾತ್ರಾಪಾತ್ರವಿಚಾರವು ತಿಳಿದಿರುವುದಿಲ್ಲವೋ, ಅಂಥವರಿಗೆ ದಾನಧರ್ಮವೂ ಕೂಡ ದುರ್ಲಭವೇ ಆಗುತ್ತದೆ.

ಲಬ್ಧಾನಾಮಪಿ ವಿತ್ತಾನಾಂ ಬೋದ್ಧವ್ಯೌ ದ್ವಾವತಿಕ್ರಮೌ।
ಅಪಾತ್ರೇ ಪ್ರತಿಪತ್ತಿಶ್ಚ ಪಾತ್ರೇ ಚಾಪ್ರತಿಪಾದನಮ್ ॥೩೧॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ಸಪ್ತವಿಂಶೋಽಧ್ಯಾಯಃ ॥೨೭॥

ಸಂಗ್ರಹ ಮಾಡಿದ ಹಣವನ್ನು ವಿನಿಯೋಗ ಮಾಡುವ ಸಂದರ್ಭದಲ್ಲಿಯೂ ಕೂಡ ಎರಡನ್ನು ಅವಶ್ಯವಾಗಿ ತಿಳಿದುಕೊಳ್ಳಬೇಕು. ಅಪಾತ್ರನಿಗೆ ದಾನ ಮಾಡು-

ವುದು, ಪಾತ್ರನಾದವನಿಗೆ ದಾನವನ್ನು ಕೊಡದಿರುವುದು. ಇವೆರಡೂ ಕೂಡ ಪಾಪಕರವಾದ ಕಾರ್ಯಗಳೇ ಆಗಿವೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೨೭ನೆಯ ಅಧ್ಯಾಯವು ಮುಗಿಯಿತು.

* * * * *

೨೭. ಇಪ್ಪತ್ತೆಂಟನೆಯ ಅಧ್ಯಾಯ

ಧರ್ಮರಾಜನು ವೇದವ್ಯಾಸರ ಬಳಿ ಬಿಕ್ಕಿ ಬಿಕ್ಕಿ ಅತ್ತನು. ಪ್ರಾಯೋಪವೇಶವನ್ನು ಮಾಡಿ ದೇಹವನ್ನು ಪರಿತ್ಯಾಗ ಮಾಡುತ್ತೇನೆಂದು ಗೋಳಿಟ್ಟನು. ಆಗ ವೇದವ್ಯಾಸದೇವರು ಅಸ್ವತಂತ್ರನಾದ ನಿನಗೆ ಇದರಲ್ಲಿ ಅಧಿಕಾರವಿಲ್ಲ. ನಿನ್ನ ಕರ್ತವ್ಯಪರಿಪಾಲನೆ ಮಾಡುವುದೇ ನಿನಗೆ ಧರ್ಮ ಎಂದು ಉಪದೇಶಿಸಿದರು.

ಯುಧಿಷ್ಠಿರಃ

ಅಭಿಮನ್ಯೌ ಹತೇ ಬಾಲೇ ದ್ರೌಪದ್ಯಾಸ್ತನಯೇಷು ಚ।
ಧೃಷ್ಟದ್ಯುಮ್ನೇ ವಿರಾಟೇ ಚ ದ್ರುಪದೇ ಚ ಮಹೀಪತೌ ॥೧॥

ಯುಧಿಷ್ಠಿರ – ಮಹಾತ್ಮರೇ! ಪುಟ್ಟ ಬಾಲಕನಾದ ಅಭಿಮನ್ಯು ಮೃತನಾದನು. ದ್ರೌಪದಿಯ ಐದು ಮಕ್ಕಳೂ ಕೂಡ ಸತ್ತುಹೋದರು. ಧೃಷ್ಟದ್ಯುಮ್ನ, ವಿರಾಟ, ದ್ರುಪದ ಮೊದಲಾದ ಮಹೀಪತಿಗಳೂ ಕೂಡ ಮೃತರಾದರು.

ವಸುಷೇಣೇ ಚ ಧರ್ಮಜ್ಞೇ ಧೃಷ್ಟಕೇತೌ ಚ ಪಾರ್ಥಿವೇ।
ತಥಾನ್ಯೇಷು ನರೇಂದ್ರೇಷು ನಾನಾದೇಶ್ಯೇಷು ಸಂಯುಗೇ ॥೨॥

ಧರ್ಮಜ್ಞನಾದ ವಸುಷೇಣ, ಧೃಷ್ಟಕೇತು ಅನೇಕ ದೇಶದ ರಾಜರುಗಳು ನಮಗಾಗಿ ಪ್ರಾಣತ್ಯಾಗ ಮಾಡಿದರು.

ನ ವಿಮುಂಚತಿ ಮಾಂ ಶೋಕೋ ಜ್ಞಾತಿಘಾತಿನಮಾತುರಮ್।
ರಾಜ್ಯಕಾಮುಕಮತ್ಯುಗ್ರಂ ಸ್ವವಂಶೋಚ್ಛೇದಕಾರಕಮ್ ॥೩॥

ಈ ಎಲ್ಲ ಬಂಧುಜನರ ದುಃಖಕ್ಕೆ ನಾನೇ ಕಾರಣನಾಗಿದ್ದೇನೆ. ರಾಜ್ಯಲೋಭಿಯಾದ, ಅತ್ಯಂತ ಕಠಿಣವಾದ ಕರ್ಮವನ್ನು ಆಚರಿಸಿರುವ ವಂಶವನ್ನೇ ನಿರ್ಮೂಲ ಮಾಡಿದ ನಾನು ಈ ಎಲ್ಲ ದುಃಖವನ್ನು ಹೇಗೆ ತಾನೇ ಸಹಿಸಿಕೊಳ್ಳಲಿ?

ಯಸ್ಯಾಂಕೇ ಕ್ರೀಡಮಾನೇನ ಮಯಾ ವಿಪರಿವರ್ತಿತಮ್ ।
ಸ ಮಯಾ ರಾಜ್ಯಲುಬ್ಧೇನ ಗಾಂಗೇಯೋ ವಿನಿಪಾತಿತಃ ॥೪॥

ಯಾರ ತೊಡೆಯ ಮೇಲೆ ಆಟವಾಡಿಕೊಂಡು ಬೆಳೆದೆನೋ, ಅಂಥ ಗಂಗಾಪುತ್ರನಾದ ಭೀಷ್ಮನನ್ನೇ ಕೊಲ್ಲಿಸಿಬಿಟ್ಟೆನು. ರಾಜ್ಯದ ಲೋಭ ಬಿಟ್ಟು ಬೇರೆ ಯಾವ ಉದ್ದೇಶ ನನಗಿತ್ತು.

ಟಿಪ್ಪಣಿ - ಮಯಾ ವಿಪರಿವರ್ತಿತಮ್ ಇತ್ಯತ್ರ **ವಿಪರಿವರ್ತಿತಮ್** ಇತಸ್ತತೋ ವೇಷ್ಟನಂ ಕೃತಮ್ ।

ಮಯಾ ವಿಪರಿವರ್ತಿತಮ್ ಎಂಬಲ್ಲಿ **ವಿಪರಿವರ್ತಿತಮ್** ಎಂಬುದಕ್ಕೆ ಸುತ್ತಲೂ ಹೊರಳಾಡುತ್ತಿದ್ದೆನು ಎಂದರ್ಥ.

ಯದಾ ಹ್ಯೇನಂ ವಿಘೂರ್ಣಂತಮಪಶ್ಯಂ ಪಾರ್ಥಸಾಯಕೈಃ ।
ಕಂಪಮಾನಂ ಯಥಾ ವಜ್ರೈಃ ಪ್ರೇಕ್ಷ್ಯಮಾಣಂ ಶಿಖಂಡಿನಾ ॥೫॥

ಜೀರ್ಣಂ ಸಿಂಹಮಿವ ಪ್ರಾಂಶುಂ ನರಸಿಂಹಂ ಪಿತಾಮಹಮ್ ।
ಕೀರ್ಯಮಾಣಂ ಶರೈಸ್ತೀಕ್ಷ್ಣೈರ್ದೃಷ್ಟ್ವಾ ಮೇ ವ್ಯಥಿತಂ ಮನಃ ॥೬॥

ಆ ಭೀಷ್ಮನು ವಯಸ್ಸಾದರೂ ಸಿಂಹದಂತಿದ್ದನು. ಎತ್ತರವಾದ ಶರೀರ ಅವನದ್ದಾಗಿತ್ತು. ನರಸಿಂಹನಂತೆ ಶೋಭಿಸುತ್ತಿದ್ದನು. ಪಿತಾಮಹನಾದ ಆ ಭೀಷ್ಮನು ಘರ್ಜಿಸುತ್ತಿದ್ದನು. ಅರ್ಜುನನ ತೀಕ್ಷ್ಣವಾದ ಬಾಣಗಳಿಂದ ಪೀಡಿತನಾಗಿ ಕಂಪಿಸುತ್ತಿದ್ದನು. ಅವನನ್ನು ಕೊಲ್ಲುವುದಕ್ಕಾಗಿ ಶಿಖಂಡಿಯನ್ನು ಅರ್ಜುನನು ನಿಲ್ಲಿಸಿದನು. ಶಿಖಂಡಿಯನ್ನು ಮುಂದಿಟ್ಟು ಹೊಡೆದ ಅರ್ಜುನನ ಬಾಣಗಳಿಂದ ಶರೀರವೆಲ್ಲವೂ ಮುಚ್ಚಲ್ಪಟ್ಟಿತ್ತು. ಇಂಥ ಪಿತಾಮಹನನ್ನು ನೆನೆಸಿಕೊಂಡರೆ ಇಂದೂ ಕೂಡ ನನ್ನ ಮನಸ್ಸು ಬಹಳ ದುಃಖಿತವಾಗುತ್ತದೆ.

ಪ್ರಾಙ್ಮುಖಂ ಸೀದಮಾನಂ ಚ ರಥಾದಪಚ್ಯುತಂ ಶರೈಃ।
ಘೂರ್ಣಮಾನಂ ಯಥಾ ಶೈಲಂ ತದಾ ಮೇ ಕಶ್ಮಲೋಽಭವತ್॥೭॥

ಶತ್ರುಪಕ್ಷದ ಸೈನಿಕರನ್ನು ಧ್ವಂಸ ಮಾಡುವುದರಲ್ಲಿ ಅತ್ಯಂತ ಶಕ್ತಿಶಾಲಿಯಾದ ಆ ಭೀಷ್ಮನು ರಥದಲ್ಲಿ ಪೂರ್ವಾಭಿಮುಖವಾಗಿ ಕುಳಿತುಕೊಂಡನು. ಅರ್ಜುನನ ಬಾಣಗಳ ಪ್ರಹಾರದಿಂದ ಪ್ರತಿಕ್ಷಣವೂ ಕುಸಿಯುತ್ತಿದ್ದನು. ವಜ್ರಾಘಾತದಿಂದ ಕುಸಿಯುವ ಪರ್ವತದಂತೆ ಭೀಷ್ಮನೂ ಕೂಡ ಕುಸಿದು ಬಿದ್ದನು. ಇಂಥ ಭೀಷ್ಮನನ್ನು ನೆನೆಸಿಕೊಂಡರೆ ನನಗೆ ಮೂರ್ಛೆಯೇ ಬರುತ್ತದೆ.

ಯಃ ಸ ಬಾಣಧನುಷ್ಪಾಣಿರ್ಯೋಧಯಾಮಾಸ ಭಾರ್ಗವಮ್।
ಬಹೂನ್ಯಹಾನಿ ಕೌರವ್ಯಃ ಕುರುಕ್ಷೇತ್ರೇ ಮಹಾಮೃಧೇ ॥೮॥

ಸಮೇತಂ ಪಾರ್ಥಿವಂ ಕ್ಷತ್ರಂ ವಾರಣಸ್ಯಾಂ ನದೀಸುತಃ।
ಕನ್ಯಾರ್ಥಮಾಹ್ವಯದ್ ವೀರೋ ರಥೇನೈಕೇನ ಸಂಯುಗೇ ॥೯॥

ಯಾವ ಕುರುಕುಲೋದ್ಭವನಾದ ಭೀಷ್ಮನು ಕುರುಕ್ಷೇತ್ರದಲ್ಲಿ ನಡೆದ ಮಹಾಯುದ್ಧದಲ್ಲಿ ಅನೇಕ ದಿವಸಗಳ ಕಾಲ ಧನುರ್ಬಾಣಗಳನ್ನು ಹಿಡಿದು ಪರಶುರಾಮದೇವರ ಜೊತೆ ಯುದ್ಧ ಮಾಡಿದನು. ಕಾಶಿಯಲ್ಲಿ ಭೀಷ್ಮನು ಕನ್ಯಾರ್ಥವಾಗಿ ಹೋಗಿದ್ದಾಗ ಒಬ್ಬನೇ ಎಲ್ಲಾ ರಾಜರುಗಳನ್ನು ಯುದ್ಧಕ್ಕೆ ಆಹ್ವಾನಿಸಿ, ಪರಾಭವಗೊಳಿಸಿದನು. ಅಂಥ ಭೀಷ್ಮನನ್ನೇ ನಾವು ಕೊಂದುಬಿಟ್ಟೆವು.

ಯೇನ ಚೋಗ್ರಾಯುಧೋ ರಾಜಾ ಚಕ್ರವರ್ತೀ ದುರಾಸದಃ।
ದಗ್ಧಃ ಶಸ್ತ್ರಪ್ರತಾಪೇನ ಸ ಮಯಾ ಯುಧಿ ಘಾತಿತಃ ॥೧೦॥

ಯಾವ ಭೀಷ್ಮನು ತನ್ನ ಅಸ್ತ್ರಗಳ ಪ್ರತಾಪದಿಂದ ದುರ್ಜಯನಾದ ಉಗ್ರಾಯುಧ ಎಂಬ ಚಕ್ರವರ್ತಿಯನ್ನು ಸುಟ್ಟುಬಿಟ್ಟನು. ಅಂಥ ಮಹಾತ್ಮನಾದ ಭೀಷ್ಮನನ್ನೇ ನಾನು ತಂತ್ರಗಾರಿಕೆಯಿಂದ ಯುದ್ಧದಲ್ಲಿ ಕೊಂದುಬಿಟ್ಟೆನು.

ಸ್ವಯಂ ಮೃತ್ಯುಂ ರಕ್ಷಮಾಣಃ ಪಾಂಚಾಲ್ಯಂ ಯಃ ಶಿಖಂಡಿನಮ್ ।
ನ ಬಾಣೈಃ ಪಾತಯಾಮಾಸ ಸೋಽರ್ಜುನೇನ ನಿಪಾತಿತಃ ॥೧೧॥

ಆ ಭೀಷ್ಮನಿಗೆ ಶಿಖಂಡಿಯು ತನ್ನ ಮೃತ್ಯುವೆಂದು ತಿಳಿದಿತ್ತು. ಆದರೂ ತನ್ನ ಪ್ರತಿಜ್ಞೆಯು ಭಂಗವಾಗಬಾರದೆಂಬ ದೃಷ್ಟಿಯಿಂದ ಅವನ ಮೇಲೆ ಕೈ ಎತ್ತಲಿಲ್ಲ. ಸುಮ್ಮನೆ ನಿಂತು ಬಿಟ್ಟನು. ಆಗ ಅರ್ಜುನನು ಆ ಭೀಷ್ಮನ ಮೇಲೆ ಬಾಣಪ್ರಯೋಗವನ್ನು ಮಾಡಿ ಬೀಳಿಸಿಬಿಟ್ಟನು.

ಯದೈನಂ ಪತಿತಂ ಭೂಮಾವಪಶ್ಯಂ ರುಧಿರೋಕ್ಷಿತಮ್ ।
ತದೈವಾವಿಶದತ್ಯುಗ್ರೋ ಜ್ವರೋ ಮಾಂ ಮುನಿಸತ್ತಮ ॥೧೨॥

ಓ ಮುನಿಸತ್ತಮನೇ! ಯಾವಾಗ ಅರ್ಜುನನ ಬಾಣಗಳಿಂದ ಗಾಯಗೊಂಡ ಆ ಭೀಷ್ಮನು ಸುರಿಯುವ ರಕ್ತದ ಜೊತೆ ಕೆಳಗೆ ಬೀಳುತ್ತಿದ್ದನೋ, ಅದನ್ನು ನೆನೆಸಿಕೊಂಡು ನನ್ನ ಮನಸ್ಸಿಗೆ ಜ್ವರವು ಬಂದುಬಿಟ್ಟಿದೆ.

ಯೇನ ಸಂವರ್ಧಿತಾ ಬಾಲಾ ಯೇನ ಸ್ಮ ಪರಿರಕ್ಷಿತಾಃ ।
ಸ ಮಯಾ ರಾಜ್ಯಲುಬ್ಧೇನ ಪಾಪೇನ ಗುರುಘಾತಿನಾ ॥೧೩॥
ಅಲ್ಪಕಾಲಸ್ಯ ರಾಜ್ಯಸ್ಯ ಕೃತೇ ಮೂಢೇನ ಘಾತಿತಃ ॥

ಯಾವ ಭೀಷ್ಮನಿಂದ ಸಣ್ಣಮಕ್ಕಳಾದ ನಾವೆಲ್ಲರೂ ಬೆಳೆದೆವೋ, ಅಂಥ ಶ್ರೇಷ್ಠನಾದ ಭೀಷ್ಮನನ್ನು ನಾನು ಕೊಂದುಬಿಟ್ಟೆ. ಕ್ಷಣಿಕವಾದ ಅಲ್ಪಕಾಲದ ಈ ರಾಜ್ಯದ ಆಸೆಗಾಗಿ ಮತಿಹೀನನಾಗಿ, ಪಿತೃಘಾತಿಯಾದೆ.

ಆಚಾರ್ಯಶ್ಚ ಮಹೇಷ್ವಾಸಃ ಸರ್ವಪಾರ್ಥಿವಪೂಜಿತಃ ।
ಅಭಿಗಮ್ಯ ರಣೇ ಮಿಥ್ಯಾ ಪಾಪೇನೋಕ್ತಃ ಸುತಂ ಪ್ರತಿ ॥೧೪॥

ಇಷ್ಟೇ ಅಲ್ಲದೇ ಆ ದ್ರೋಣನನ್ನೂ ಕೂಡ ಕೊಂದವನು ನಾನೇ. ಆ ದ್ರೋಣಾಚಾರ್ಯರು ಸಾಮಾನ್ಯರಲ್ಲ. ನಮ್ಮೆಲ್ಲರಿಗೂ ಗುರುಗಳೂ ಆಚಾರ್ಯಪುರುಷರೂ

ಧನುರ್ಧರರಲ್ಲೇ ಅಗ್ರೇಸರರೂ ಎಲ್ಲಾ ರಾಜರುಗಳಿಂದ ಪೂಜಿತರಾದವರು ಆಗಿದ್ದಾರೆ. ಅವರನ್ನು ಕೊಲ್ಲುವುದಕ್ಕಾಗಿ ಆ ರಣರಂಗದಲ್ಲಿ ಪಾಪಿಯಾದ ನಾನು ನಿಮ್ಮ ಮಗನು ಸತ್ತನು ಎಂಬ ಸುಳ್ಳನ್ನು ಹೇಳಿಬಿಟ್ಟೆನು.

ತನ್ಮೇ ದಹತಿ ಗಾತ್ರಾಣಿ ಯನ್ಮಾಂ ಗುರುರಭಾಷತ।
ಸತ್ಯವಾಕ್ಯೋ ಹಿ ರಾಜಂಸ್ತ್ವಂ ಯದಿ ಜೀವತಿ ಮೇ ಸುತಃ।
ಸತ್ಯಮಾಮರ್ಶಯನ್ ವಿಪ್ರೋ ಮಯಿ ತತ್ ಪರಿಪೃಷ್ಟವಾನ್॥೧೫॥

ಅಂಥ ಸಂದರ್ಭದಲ್ಲಿಯೂ ಕೂಡ ಆ ದ್ರೋಣಾಚಾರ್ಯರು ನನ್ನನ್ನು ಪ್ರಶ್ನಿಸಿದರು. ಧರ್ಮರಾಜನೇ! ನಿನ್ನ ಮೇಲೆ ನನಗೆ ಬಹಳ ವಿಶ್ವಾಸವಿದೆ. ನನ್ನ ಮಗನು ಬದುಕಿದ್ದಾನೋ ಇಲ್ಲವೋ ನಿಜವಾಗಿ ಹೇಳು ಎಂದು ದೈನ್ಯದಿಂದ ಪ್ರಶ್ನಿಸಿದನು. ಅವರ ಈ ಪ್ರಶ್ನೆಗಳು ನನ್ನ ಶರೀರವನ್ನು ಸುಟ್ಟುಬಿಡುತ್ತಿದೆ. ನನ್ನ ಮೇಲೆ ವಿಶ್ವಾಸವಿಟ್ಟು ಪ್ರಶ್ನೆ ಮಾಡಿದಾಗಲೂ ನಾನು ರಾಜ್ಯದ ಆಸೆಯಿಂದ ಸುಳ್ಳನ್ನು ಹೇಳಿಬಿಟ್ಟೆನು.

ಕುಂಜರಂ ಚಾಂತರಂ ಕೃತ್ವಾ ಮಿಥ್ಯೋಪಚರಿತಂ ಮಯಾ।
ಸುಭೃಶಂ ರಾಜ್ಯಲುಬ್ಧೇನ ಪಾಪೇನ ಗುರುಘಾತಿನಾ ॥೧೬॥

ಪಾಪಿಷ್ಟನಾದ ಗುರುಹಂತಕನಾದ ರಾಜ್ಯಲೋಲುಪನಾದ ನಾನು ಆನೆಯನ್ನು ನೆಪವನ್ನಾಗಿ ಮಾಡಿಕೊಂಡು ಅವರ ಬಳಿ ಕೂಡಲೇ ಸುಳ್ಳುಗಳನ್ನು ಹೇಳಿದೆನು.

ಸತ್ಯಕಂಚುಕಮುನ್ಮುಚ್ಯ ಮಯಾಸಕ್ತೋ ಗುರುರಾಹವೇ।
ಅಶ್ವತ್ಥಾಮಾ ಹತ ಇತಿ ಕುಂಜರೇ ವಿನಿಪಾತಿತೇ ॥೧೭॥
ಕಾನ್ನು ಲೋಕಾನ್ ಗಮಿಷ್ಯಾಮಿ ಕೃತ್ವಾ ತತ್ ಕರ್ಮ ದಾರುಣಮ್॥

ಸತ್ಯದ ಮುಸುಕು ಹಾಕಿಕೊಂಡು ಪಾಪಿಯಾದ ನಾನು ರಾಜ್ಯದ ಆಸೆಯಿಂದ ಅಶ್ವತ್ಥಾಮನೆಂಬ ಆನೆಯು ಸತ್ತಿದ್ದರಿಂದ 'ಅಶ್ವತ್ಥಾಮಾ ಹತಃ' ಎಂಬುದಾಗಿ ಸುಳ್ಳನ್ನು ಹೇಳಿ ವಂಚಿಸಿದೆನು. ಗುರುಘಾತಿಯಾದ ರಾಜ್ಯಲೋಲುಪನಾದ ನನ್ನಂಥ ಪಾಪಿಷ್ಠ

ಮತ್ತೊಬ್ಬನಿರಲು ಸಾಧ್ಯವಿಲ್ಲ. ಇಂಥ ಪಾಪಿಯಾದ ನಾನು ಯಾವ ನರಕಕ್ಕೆ ಹೋಗಬೇಕೋ ನನಗೆ ತಿಳಿಯುತ್ತಿಲ್ಲ.

ಅಘಾತಯಂ ಚ ಯತ್ ಕರ್ಣಂ ಸಮರೇಷ್ವಪಲಾಯಿನಮ್ ।
ಜ್ಯೇಷ್ಠಂ ಭ್ರಾತರಮತ್ಯುಗ್ರಂ ಕೋ ಮತ್ತಃ ಪಾಪಕೃತ್ತಮಃ ॥೧೮॥

ಇಷ್ಟೇ ಅಲ್ಲದೇ ಒಡಹುಟ್ಟಿದ ನನ್ನ ಅಣ್ಣನಾದ ಕರ್ಣನನ್ನೂ ಕೂಡ ಕೊಲ್ಲಿಸಿಬಿಟ್ಟೆ. ನನಗಿಂತ ಕಡುಪಾಪಿ ಮತ್ತೊಬ್ಬನಿರಲು ಹೇಗೆ ಸಾಧ್ಯ ?

ಅಭಿಮನ್ಯುಂ ಚ ಯದ್ ಬಾಲಂ ಜಾತಂ ಸಿಂಹಮಿವಾದ್ರಿಷು ।
ಪ್ರಾವೇಶಯಮಹಂ ಲುಬ್ಧೋ ವಾಹಿನೀಂ ದ್ರೋಣಪಾಲಿತಾಮ್ ॥೧೯॥

ಪರ್ವತದಲ್ಲಿರುವ ಸಿಂಹದಂತೆ ಅರ್ಜುನನ ಮಗುವಾಗಿ ಹುಟ್ಟಿದ ಆ ಅಭಿಮನ್ಯುವನ್ನು ದ್ರೋಣರಿಂದ ಪಾಲಿತವಾದ ಸೇನೆಯ ವ್ಯೂಹದೊಳಗೆ ಪ್ರವೇಶಿಸುವಂತೆ ಮಾಡಿದ, ಪಾಪಿಯೂ ಕೂಡ ನಾನೇ ಆಗಿದ್ದೇನೆ.

ತದಾಪ್ರಭೃತಿ ಬೀಭತ್ಸುಂ ನ ಶಕ್ನೋಮಿ ನಿರೀಕ್ಷಿತುಮ್ ।
ಕೃಷ್ಣಂ ಚ ಪುಂಡರೀಕಾಕ್ಷಂ ಕಿಲ್ಬಿಷೀ ಭ್ರೂಣಹಾ ಯಥಾ ॥೨೦॥

ಅವತ್ತಿನಿಂದ ಭ್ರೂಣಹತ್ಯೆ ಮಾಡಿದ ಮಹಾಪಾಪಿಷ್ಠನಂತೆ ನಾನು ಅರ್ಜುನನ್ನಾಗಲೀ, ಪುಂಡರೀಕಾಕ್ಷನಾದ ಕೃಷ್ಣನನ್ನಾಗಲೀ ಮುಖ ಎತ್ತಿ ನೋಡಲೂ ಸಹ ನಾಚಿಕೆ ಪಡುತ್ತಿದ್ದೇನೆ.

ದ್ರೌಪದೀಂ ಚಾಪ್ಯದುಃಖಾರ್ಹಾಂ ಪಂಚಪುತ್ರವಿನಾಕೃತಾಮ್ ।
ಶೋಚಾಮಿ ಪೃಥಿವೀಂ ಹೀನಾಂ ಪಂಚಭಿಃ ಪರ್ವತೈರಿವ ॥೨೧॥

ಭೂಮಿಯು ಐದು ಪರ್ವತಗಳ ಆಧಾರದಲ್ಲಿದೆ. ಆ ಐದು ಪರ್ವತಗಳನ್ನೂ ಕೂಡ ಕಳೆದುಕೊಂಡ ಪೃಥಿವಿಯು ಎಷ್ಟು ದುಃಖವನ್ನು ಹೊಂದುತ್ತದೋ, ಅದರಂತೆ ದ್ರೌಪದಿಯೂ ಕೂಡ ತನ್ನ ಐದು ಮಂದಿ ಮಕ್ಕಳನ್ನು ಕಳೆದುಕೊಂಡು ದುಃಖ ಕೂಪದಲ್ಲಿ ಮುಳುಗಿದ್ದಾಳೆ.

ಸೋಽಹಮಾಗಸ್ಕರಃ ಪಾಪಃ ಪೃಥಿವೀನಾಶಕಾರಕಃ।
ಆಸೀನ ಏವಮೇವೇದಂ ಶೋಷಯಿಷ್ಯೇ ಕಲೇವರಮ್ ॥೨೨॥

ಸಮಸ್ತಲೋಕಕ್ಕೆ ಹಾನಿಯನ್ನುಂಟುಮಾಡಿದ ಮಹಾಪಾಪಿಷ್ಠನು ನಾನಾಗಿರುವೆನು. ಇನ್ನುಮುಂದೆ ನಾನು ಈ ಭೂಮಿಯಲ್ಲಿ ಬದುಕಿರಲು ಅರ್ಹನಲ್ಲ. ನಾನು ಇಲ್ಲಿ ಕುಳಿತಿರುವ ಹಾಗೇ ಈ ದೇಹವನ್ನು ಶೋಷಣೆ ಮಾಡುತ್ತೇನೆ.

ಪ್ರಾಯೋಪವಿಷ್ಟಂ ಜಾನೀಧ್ವಮದ್ಯ ಮಾಂ ಗುರುಘಾತಿನಮ್।
ಯಥಾನ್ಯಾಸ್ವಪಿ ಜಾತೀಷು ನ ಭವೇಯಂ ಕುಲಾಂತಕೃತ್ ॥೨೩॥

ಅನೇಕ ಗುರುಹಿರಿಯರನ್ನು ಸಂಹಾರ ಮಾಡಿದ ನಾನು ಮುಂದಿನ ಜನ್ಮದಲ್ಲಿ ಈ ಪರಿಯಲ್ಲಿ ಕುಲಘಾತುಕನಾಗಿ ಹುಟ್ಟುವುದು ಬೇಡ. ಅದಕ್ಕಾಗಿ ಈಗಲೇ ಪ್ರಾಯೋಪವೇಶಕ್ಕೆ ಕುಳಿತುಬಿಡುತ್ತೇನೆ.

ನ ಭೋಕ್ಷ್ಯೇ ನ ಚ ಪಾನೀಯಮುಪಯೋಕ್ಷ್ಯೇ ಕಥಂಚನ।
ಶೋಷಯಿಷ್ಯೇ ಪ್ರಿಯಾನ್ ಪ್ರಾಣಾನಿಹಸ್ಥೋಽಯಂ ತಪೋಧನ ॥೨೪॥

ತಪೋಧನರೇ! ಇನ್ನು ಮುಂದೆ ನಾನು ಏನನ್ನೂ ತಿನ್ನಲಾರೆ. ಏನನ್ನೂ ಕುಡಿಯಲಾರೆ. ಹೀಗೆ ಸಂಪೂರ್ಣ ಆಹಾರವನ್ನು ತ್ಯಾಗಮಾಡಿ, ನನ್ನ ಪ್ರಾಣಗಳನ್ನು ಪರಿತ್ಯಾಗ ಮಾಡುತ್ತೇನೆ.

ಯಥೇಷ್ಟಂ ಗಮ್ಯತಾಂ ಕಾಮಮನುಜಾನೇ ಪ್ರಸಾದ್ಯ ವಃ।
ಸರ್ವೇ ಮಾಮನುಜಾನೀತ ತ್ಯಕ್ಷ್ಯಮೀದಂ ಕಲೇವರಮ್ ॥೨೫॥

ಬಂದ ತಾವೆಲ್ಲರೂ ತಮ್ಮ ಇಚ್ಛೆಯಂತೆ ಇಲ್ಲಿಂದ ತೆರಳಿರಿ. ತಮ್ಮನ್ನು ಕೈಮುಗಿದು ಪ್ರಾರ್ಥಿಸುತ್ತೇನೆ. ನನ್ನ ಸಂಕಲ್ಪಕ್ಕೆ ಅನುಮತಿಯನ್ನು ಕೊಟ್ಟು, ತಾವು ಹೊರಡಿರಿ. ಪಾಪಿಷ್ಟನಾದ ನಾನು ಈ ಶರೀರವನ್ನು ಇಲ್ಲಿಯೇ ಪರಿತ್ಯಾಗ ಮಾಡುತ್ತೇನೆ.

ವೈಶಂಪಾಯನಃ

ತಮೇವಂವಾದಿನಂ ಪಾರ್ಥಂ ಬಂಧುಶೋಕೇನ ವಿಹ್ವಲಮ್ ।
ಮೈವಮಿತ್ಯಬ್ರವೀದ್ ವ್ಯಾಸೋ ನಿಗೃಹ್ಯ ಮುನಿಸತ್ತಮಃ ॥೨೬॥

ವೈಶಂಪಾಯನರು– ಜನಮೇಜಯನೇ! ಬಂಧುಗಳ ವಿಯೋಗದಿಂದ ಪ್ರಾಪ್ತವಾದ ಶೋಕವನ್ನು ಧರ್ಮರಾಜನಿಗೆ ತಡೆದುಕೊಳ್ಳಲಾಗಲಿಲ್ಲ. ಅತ್ಯಂತವಿಹ್ವಲನಾದನು. ಪ್ರಾಯೋಪವೇಶದ ಮೂಲಕ ದೇಹವನ್ನೇ ಪರಿತ್ಯಾಗಮಾಡುತ್ತೇನೆಂದು ಹೇಳಿದನು. ಹೀಗಿರುವಾಗ ಆ ವೇದವ್ಯಾಸದೇವರು ಆ ಧರ್ಮರಾಜನನ್ನು ಕುರಿತು ಹೇಳುತ್ತಾರೆ - ಯುಧಿಷ್ಠಿರ ! ಎಂದಿಗೂ ಈ ಕೆಲಸವನ್ನು ಮಾಡಬೇಡ.

ಅತಿವೇಲಂ ಮಹಾರಾಜ ನ ಶೋಕಂ ಕರ್ತುಮರ್ಹಸಿ ।
ಪುನರುಕ್ತಂ ಪ್ರವಕ್ಷ್ಯಾಮಿ ದಿಷ್ಟಮೇತದಿತಿ ಪ್ರಭೋ ॥೨೭॥

ಮಹಾರಾಜನೇ! ಮಿತಿಮೀರಿ ಪರಿತಾಪಪಡಬೇಡ. ಎಲ್ಲವೂ ಕೂಡ ದೈವಾಧೀನವೆಂದು ಈಗಾಗಲೇ ನಾನು ತಿಳಿಸಿರುವೆನು. ಪುನಃ ಅದನ್ನೇ ಹೇಳುತ್ತಿದ್ದೇನೆ. ಆದ್ದರಿಂದ ಈ ವಿಷಯದಲ್ಲಿ ದುಃಖವನ್ನು ಪಡಬೇಡ.

ಸಂಯೋಗಾ ವಿಪ್ರಯೋಗಾಂತಾಃ ಜಾತಾನಾಂ ಪ್ರಾಣಿನಾಂ ಧ್ರುವಮ್।
ಬುದ್ಬುದಾ ಇವ ತೋಯೇಷು ಭವಂತಿ ನ ಭವಂತಿ ಚ ॥೨೮॥

ಲೋಕದಲ್ಲಿ ಹುಟ್ಟಿದ ಪ್ರತಿಯೊಬ್ಬರಿಗೂ ಸೇರುವಿಕೆ ಹಾಗೂ ಅಗಲುವಿಕೆಗಳು ನೀರಿನ ಮೇಲಿನ ಗುಳ್ಳೆಯಂತೆ ಅತ್ಯಂತಕ್ಷಣಿಕವಾಗಿವೆ. ಕೆಲವು ಹೊತ್ತು ಇದ್ದಹಾಗೇ ಕಾಣಿಸುತ್ತವೆ. ಕೂಡಲೇ ಏನೂ ಇಲ್ಲದಂತಾಗುತ್ತವೆ.

ಸರ್ವೇ ಕ್ಷಯಾಂತಾ ನಿಚಯಾಃ ಪತನಾಂತಾಃ ಸಮುಚ್ಛ್ರಯಾಃ ।
ಸಂಯೋಗಾ ವಿಪ್ರಯೋಗಾಂತಾ ಮರಣಾಂತಂ ಹಿ ಜೀವಿತಮ್॥೨೯॥

ಸಾಮಾನ್ಯವಾಗಿ ಸೇರುವಿಕೆಯು ಅಗಲುವಿಕೆಯಲ್ಲಿ ಪರ್ಯವಸಾನವಾಗುತ್ತದೆ. ಅಭಿವೃದ್ಧಿಗಳು ಕ್ಷಯದಲ್ಲಿ ಪರ್ಯವಸಾನವಾಗುತ್ತವೆ. ಉನ್ನತಿಯು ಕೆಳಗೆ ಬೀಳುವು-

ದರಲ್ಲಿ ಪರ್ಯವಸಾನವಾಗುತ್ತದೆ. ಜೀವನವು ಮರಣದಲ್ಲಿ ಪರ್ಯವಸಾನವಾಗುತ್ತದೆ.

ವಿವರಣೆ - ಜೀವನದಲ್ಲಿ ಮಾಡಿದ ಎಲ್ಲಾ ಸಂಪಾದನೆಗಳು ಅಂತಿಮವಾಗಿ ನಾಶವೇ ಆಗುತ್ತವೆ. ಮಿತಿಮೀರಿದ ಔನ್ನತ್ಯ ಹಾಗೂ ಏರುವಿಕೆಗಳು ಪತನದಲ್ಲಿಯೇ ಪರ್ಯವಸಾನಗೊಳ್ಳುತ್ತವೆ. ಒಬ್ಬರ ಜೊತೆ ಅತಿಯಾದ ಸ್ನೇಹವು ಅಗಲುವಿಕೆಯಲ್ಲಿಯೇ ಕೊನೆಗೊಳ್ಳುತ್ತದೆ. ಹುಟ್ಟು ಮರಣದಲ್ಲಿ ಕೊನೆಗೊಳ್ಳುತ್ತದೆ. ಆದ್ದರಿಂದ ಪ್ರತಿಯೊಂದರಲ್ಲಿಯೂ ದ್ವಂದ್ವಾತೀತರಾಗಲು ಪ್ರಯತ್ನಿಸಬೇಕು.

ಸುಖಂ ದುಃಖಾಂತಮಾಲಸ್ಯಂ ದಾಕ್ಷ್ಯಂ ದುಃಖಂ ಸುಖೋದಯಮ್ ।
ಭೂತಿಃ ಶ್ರೀರ್ಹ್ರೀರ್ಧೃತಿಃ ಸಿದ್ಧಿರ್ನಾದಕ್ಷೇ ನಿವಸಂತ್ಯುತ ॥೩೦॥

ಸುಖವು ದುಃಖದಲ್ಲಿ ಕೊನೆಗೊಳ್ಳುತ್ತದೆ. ಆಲಸ್ಯವು ಆ ಕಾಲದಲ್ಲಿ ಮಾತ್ರ ಸುಖದಾಯಕ. ಅದೂ ಸಹ ದುಃಖದಲ್ಲಿಯೇ ಕೊನೆಗೊಳ್ಳುತ್ತದೆ. ಸಾಹಸವು ತತ್ಕಾಲದಲ್ಲಿ ದುಃಖಕರವಾಗಿ ತೋರಿದರೂ ಕೊನೆಯಲ್ಲಿ ಸುಖಕರವಾಗುತ್ತದೆ. ಅಣಿಮಾಹದೈಶ್ವರ್ಯಗಳು, ನಾಚಿಕೆ, ಧೈರ್ಯ, ಕೀರ್ತಿ ಇವುಗಳೆಲ್ಲವೂ ಪ್ರಯತ್ನಶೀಲರಲ್ಲಷ್ಟೇ ನೆಲೆಗೊಳ್ಳುತ್ತದೆ. ಸೋಮಾರಿಗಳಲ್ಲಿ ಕ್ಷಣಮಾತ್ರವು ಇರಲಾರವು.

ವಿವರಣೆ - 'ಆಲಸ್ಯಂ ಅಮೃತಂ ವಿಷಂ' ಎಂಬಂತೆ ಮನುಷ್ಯನು ಎಂದೂ ಸಹ ಆಲಸ್ಯವನ್ನು ಮಾಡಬಾರದು. ಅದು ತತ್ಕಾಲದಲ್ಲಷ್ಟೇ ಸುಖಕರವಾಗಿದ್ದರೂ ಅದರಿಂದ ಮುಂದೆ ದುಃಖವೇ ಒದಗುತ್ತದೆ. ಸುಖವೂ ಕೂಡ ದುಃಖದಲ್ಲಿಯೇ ಕೊನೆಗೊಳ್ಳುತ್ತದೆ. ಯಾರಿಗೆ ದುಃಖವು ಬಂದಿರುತ್ತದೋ, ಅವನು ದಕ್ಷತೆಯಿಂದ ಅದನ್ನು ಎದುರಿಸಬೇಕು. ಯಾರು ಕಾರ್ಯದಕ್ಷನಾಗಿರುತ್ತಾನೋ, ಅವನಿಗಷ್ಟೇ ಐಶ್ವರ್ಯ, ಧೈರ್ಯ, ಕೀರ್ತಿಗಳು ಬರುತ್ತವೆ. ಕಾರ್ಯದಕ್ಷನಲ್ಲದವನಿಗೆ ಇವು ಒಂದೂ ಕೂಡ ಸಿಗಲಾರವು.

ನಾಲಂ ಸುಖಾಯ ಸುಹೃದೋ ನಾಲಂ ದುಃಖಾಯ ದುರ್ಹೃದಃ ।
ನಚ ಪ್ರಜಾಲಮರ್ಥೇಭ್ಯೋ ನ ಸುಖೇಭ್ಯೋಽಪ್ಯಲಂ ಧನಮ್ ॥೩೧॥

ವೈಶಂಪಾಯನಃ

ತಮೇವಂವಾದಿನಂ ಪಾರ್ಥಂ ಬಂಧುಶೋಕೇನ ವಿಹ್ವಲಮ್ ।
ಮೈವಮಿತ್ಯಬ್ರವೀದ್ ವ್ಯಾಸೋ ನಿಗೃಹ್ಯ ಮುನಿಸತ್ತಮಃ ॥೨೬॥

ವೈಶಂಪಾಯನರು– ಜನಮೇಜಯನೇ! ಬಂಧುಗಳ ವಿಯೋಗದಿಂದ ಪ್ರಾಪ್ತವಾದ ಶೋಕವನ್ನು ಧರ್ಮರಾಜನಿಗೆ ತಡೆದುಕೊಳ್ಳಲಾಗಲಿಲ್ಲ. ಅತ್ಯಂತವಿಹ್ವಲನಾದನು. ಪ್ರಾಯೋಪವೇಶದ ಮೂಲಕ ದೇಹವನ್ನೇ ಪರಿತ್ಯಾಗಮಾಡುತ್ತೇನೆಂದು ಹೇಳಿದನು. ಹೀಗಿರುವಾಗ ಆ ವೇದವ್ಯಾಸದೇವರು ಆ ಧರ್ಮರಾಜನನ್ನು ಕುರಿತು ಹೇಳುತ್ತಾರೆ - ಯುಧಿಷ್ಠಿರ ! ಎಂದಿಗೂ ಈ ಕೆಲಸವನ್ನು ಮಾಡಬೇಡ.

ಅತಿವೇಲಂ ಮಹಾರಾಜ ನ ಶೋಕಂ ಕರ್ತುಮರ್ಹಸಿ ।
ಪುನರುಕ್ತಂ ಪ್ರವಕ್ಷ್ಯಾಮಿ ದಿಷ್ಟಮೇತದಿತಿ ಪ್ರಭೋ ॥೨೭॥

ಮಹಾರಾಜನೇ! ಮಿತಿಮೀರಿ ಪರಿತಾಪಪಡಬೇಡ. ಎಲ್ಲವೂ ಕೂಡ ದೈವಾಧೀನವೆಂದು ಈಗಾಗಲೇ ನಾನು ತಿಳಿಸಿರುವೆನು. ಪುನಃ ಅದನ್ನೇ ಹೇಳುತ್ತಿದ್ದೇನೆ. ಆದ್ದರಿಂದ ಈ ವಿಷಯದಲ್ಲಿ ದುಃಖವನ್ನು ಪಡಬೇಡ.

ಸಂಯೋಗಾ ವಿಪ್ರಯೋಗಾಂತಾಃ ಜಾತಾನಾಂ ಪ್ರಾಣಿನಾಂ ಧ್ರುವಮ್।
ಬುದ್ಬುದಾ ಇವ ತೋಯೇಷು ಭವಂತಿ ನ ಭವಂತಿ ಚ ॥೨೮॥

ಲೋಕದಲ್ಲಿ ಹುಟ್ಟಿದ ಪ್ರತಿಯೊಬ್ಬರಿಗೂ ಸೇರುವಿಕೆ ಹಾಗೂ ಅಗಲುವಿಕೆಗಳು ನೀರಿನ ಮೇಲಿನ ಗುಳ್ಳೆಯಂತೆ ಅತ್ಯಂತಕ್ಷಣಿಕವಾಗಿವೆ. ಕೆಲವು ಹೊತ್ತು ಇದ್ದಹಾಗೇ ಕಾಣಿಸುತ್ತವೆ. ಕೂಡಲೇ ಏನೂ ಇಲ್ಲದಂತಾಗುತ್ತವೆ.

ಸರ್ವೇ ಕ್ಷಯಾಂತಾ ನಿಚಯಾಃ ಪತನಾಂತಾಃ ಸಮುಚ್ಛ್ರಯಾಃ ।
ಸಂಯೋಗಾ ವಿಪ್ರಯೋಗಾಂತಾ ಮರಣಾಂತಂ ಹಿ ಜೀವಿತಮ್॥೨೯॥

ಸಾಮಾನ್ಯವಾಗಿ ಸೇರುವಿಕೆಯು ಅಗಲುವಿಕೆಯಲ್ಲಿ ಪರ್ಯವಸಾನವಾಗುತ್ತದೆ. ಅಭಿವೃದ್ಧಿಗಳು ಕ್ಷಯದಲ್ಲಿ ಪರ್ಯವಸಾನವಾಗುತ್ತವೆ. ಉನ್ನತಿಯು ಕೆಳಗೆ ಬೀಳುವು-

ದರಲ್ಲಿ ಪರ್ಯವಸಾನವಾಗುತ್ತದೆ. ಜೀವನವು ಮರಣದಲ್ಲಿ ಪರ್ಯವಸಾನವಾಗುತ್ತದೆ.

ವಿವರಣೆ - ಜೀವನದಲ್ಲಿ ಮಾಡಿದ ಎಲ್ಲಾ ಸಂಪಾದನೆಗಳು ಅಂತಿಮವಾಗಿ ನಾಶವೇ ಆಗುತ್ತವೆ. ಮಿತಿಮೀರಿದ ಔನ್ನತ್ಯ ಹಾಗೂ ಏರುವಿಕೆಗಳು ಪತನದಲ್ಲಿಯೇ ಪರ್ಯವಸಾನಗೊಳ್ಳುತ್ತವೆ. ಒಬ್ಬರ ಜೊತೆ ಅತಿಯಾದ ಸ್ನೇಹವು ಅಗಲುವಿಕೆಯಲ್ಲಿಯೇ ಕೊನೆಗೊಳ್ಳುತ್ತದೆ. ಹುಟ್ಟು ಮರಣದಲ್ಲಿ ಕೊನೆಗೊಳ್ಳುತ್ತದೆ. ಆದ್ದರಿಂದ ಪ್ರತಿಯೊಂದರಲ್ಲಿಯೂ ದ್ವಂದ್ವಾತೀತರಾಗಲು ಪ್ರಯತ್ನಿಸಬೇಕು.

ಸುಖಂ ದುಃಖಾಂತಮಾಲಸ್ಯಂ ದಾಕ್ಷ್ಯಂ ದುಃಖಂ ಸುಖೋದಯಮ್ ।
ಭೂತಿಃ ಶ್ರೀರ್ಹ್ರೀರ್ಧೃತಿಃ ಸಿದ್ಧಿರ್ನಾದಕ್ಷೇ ನಿವಸಂತ್ಯುತ ॥೩೦॥

ಸುಖವು ದುಃಖದಲ್ಲಿ ಕೊನೆಗೊಳ್ಳುತ್ತದೆ. ಆಲಸ್ಯವು ಆ ಕಾಲದಲ್ಲಿ ಮಾತ್ರ ಸುಖದಾಯಕ. ಅದೂ ಸಹ ದುಃಖದಲ್ಲಿಯೇ ಕೊನೆಗೊಳ್ಳುತ್ತದೆ. ಸಾಹಸವು ತತ್ಕಾಲದಲ್ಲಿ ದುಃಖಕರವಾಗಿ ತೋರಿದರೂ ಕೊನೆಯಲ್ಲಿ ಸುಖಕರವಾಗುತ್ತದೆ. ಅಣಿಮಾಹದೈಶ್ವರ್ಯಗಳು, ನಾಚಿಕೆ, ಧೈರ್ಯ, ಕೀರ್ತಿ ಇವುಗಳೆಲ್ಲವೂ ಪ್ರಯತ್ನಶೀಲರಲ್ಲಷ್ಟೇ ನೆಲೆಗೊಳ್ಳುತ್ತದೆ. ಸೋಮಾರಿಗಳಲ್ಲಿ ಕ್ಷಣಮಾತ್ರವು ಇರಲಾರವು.

ವಿವರಣೆ - 'ಆಲಸ್ಯಂ ಅಮೃತಂ ವಿಷಂ' ಎಂಬಂತೆ ಮನುಷ್ಯನು ಎಂದೂ ಸಹ ಆಲಸ್ಯವನ್ನು ಮಾಡಬಾರದು. ಅದು ತತ್ಕಾಲದಲ್ಲಷ್ಟೇ ಸುಖಕರವಾಗಿದ್ದರೂ ಅದರಿಂದ ಮುಂದೆ ದುಃಖವೇ ಒದಗುತ್ತದೆ. ಸುಖವೂ ಕೂಡ ದುಃಖದಲ್ಲಿಯೇ ಕೊನೆಗೊಳ್ಳುತ್ತದೆ. ಯಾರಿಗೆ ದುಃಖವು ಬಂದಿರುತ್ತದೋ, ಅವನು ದಕ್ಷತೆಯಿಂದ ಅದನ್ನು ಎದುರಿಸಬೇಕು. ಯಾರು ಕಾರ್ಯದಕ್ಷನಾಗಿರುತ್ತಾನೋ, ಅವನಿಗಷ್ಟೇ ಐಶ್ವರ್ಯ, ಧೈರ್ಯ, ಕೀರ್ತಿಗಳು ಬರುತ್ತವೆ. ಕಾರ್ಯದಕ್ಷನಲ್ಲದವನಿಗೆ ಇವು ಒಂದೂ ಕೂಡ ಸಿಗಲಾರವು.

ನಾಲಂ ಸುಖಾಯ ಸುಹೃದೋ ನಾಲಂ ದುಃಖಾಯ ದುರ್ಹೃದಃ ।
ನಚ ಪ್ರಜಾಲಮರ್ಥೇಭ್ಯೋ ನ ಸುಖೇಭ್ಯೋಽಪ್ಯಲಂ ಧನಮ್ ॥೩೧॥

ಸ್ನೇಹಿತರು ನಮಗೆ ನಿರಂತರ ಸುಖವನ್ನು ಕೊಡಲು ಸಮರ್ಥರಲ್ಲ. ಶತ್ರುಗಳೂ ಕೂಡ ನಮಗೆ ದುಃಖವನ್ನು ನೀಡಲು ಸಮರ್ಥರಲ್ಲ. ಎಷ್ಟು ಮಂದಿ ಪ್ರಜೆಗಳಿದ್ದರೂ ಅವರಿಂದ ನಮಗೆ ಧನವು ದೊರೆಯುವುದಿಲ್ಲ. ಎಷ್ಟೇ ಧನವಿದ್ದರೂ ಅದರಿಂದ ಸುಖವು ದೊರೆಯುವುದಿಲ್ಲ.

ಯಥಾ ಸೃಷ್ಟೋಽಸಿ ಕೌಂತೇಯ ಧಾತ್ರಾ ಕರ್ಮಸು ತತ್ ಕುರು।
ಅತ ಏವ ಹಿ ಸಿದ್ಧಿಸ್ತೇ ನೇಶಸ್ತ್ವಂಕರ್ಮಣಾ ನೃಪ ॥೩೨॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ಧರ್ಮರಾಜದುಃಖವರ್ಣನಂ ನಾಮ ಅಷ್ಟಾವಿಂಶೋಽಧ್ಯಾಯಃ ॥೨೮

ಕುಂತೀಪುತ್ರನೇ! ಆ ವಿಧಿಯು ನಿನ್ನನ್ನು ಯಾವುದಕ್ಕೋಸ್ಕರ ಸೃಷ್ಟಿ ಮಾಡಿದೆಯೋ, ಆ ಕರ್ಮಗಳನ್ನು ನೀನು ಆಚರಿಸಲೇ ಬೇಕು. ಅದರಿಂದಲೇ ನಿನಗೆ ಸಿದ್ಧಿಯುಂಟಾಗುತ್ತದೆ. ಅದಕ್ಕೆ ವಿರುದ್ಧವಾಗಿ ಸ್ವಂತವಾಗಿ ಮಾಡಲು ನಿನಗೆ ಯಾವುದೇ ಸ್ವಾತಂತ್ರ್ಯವಿರುವುದಿಲ್ಲ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ಧರ್ಮರಾಜನ ದುಃಖವರ್ಣನೆ ಎಂಬ ೨೮ನೆಯ ಅಧ್ಯಾಯವು ಮುಗಿಯಿತು.

*****

೨೯. ಇಪ್ಪತ್ತೊಂಬತ್ತನೆಯ ಅಧ್ಯಾಯ

ಅಶ್ಮಮಹರ್ಷಿ ಮತ್ತು ಜನಕರ ಸಂವಾದವನ್ನು ಉಪಾಖ್ಯಾನವನ್ನು ಹೇಳುವ ಮೂಲಕ ವೇದವ್ಯಾಸದೇವರು ಯುಧಿಷ್ಠಿರನಿಗೆ ಕ್ಷತ್ರಿಯಧರ್ಮದ ಶ್ರೇಷ್ಠತೆಯನ್ನು ಉಪದೇಶಿಸಿದರು.

ವೈಶಂಪಾಯನಃ

ಜ್ಞಾತಿಶೋಕಾಭಿತಪ್ತಸ್ಯ ಪ್ರಾಣಾನಭ್ಯುತ್ಸಿಸೃಕ್ಷತಃ।
ಜ್ಯೇಷ್ಠಸ್ಯ ಪಾಂಡುಪುತ್ರಸ್ಯ ವ್ಯಾಸಃ ಶೋಕಮಪಾನುದತ್ ॥೧॥

ವೈಶಂಪಾಯನರು – ಬಂಧುಗಳ ವಿಯೋಗದಿಂದ ಪ್ರಾಣತ್ಯಾಗವನ್ನೇ ಮಾಡು-

ತ್ತೇನೆಂದು ಹೇಳುತ್ತಿರುವ ಧರ್ಮರಾಜನನ್ನು ನೋಡಿ, ಅವನ ದುಃಖವನ್ನು ಪರಿಹರಿಸಲು ವೇದವ್ಯಾಸದೇವರು ಹೀಗೆ ಹೇಳುತ್ತಾರೆ -

ವ್ಯಾಸಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಅಶ್ಮಗೀತಂ ನರವ್ಯಾಘ್ರ ತನ್ನಿಬೋಧ ಯುಧಿಷ್ಠಿರ ॥೨॥

ಓ ಯುಧಿಷ್ಠಿರನೇ! ಈ ವಿಷಯದಲ್ಲಿ ಹಿಂದೆ ನಡೆದ ಅಶ್ಮಗೀತೆಯೆಂಬ ಒಂದು ಪುರಾತನವಾದ ಇತಿಹಾಸವನ್ನು ಜ್ಞಾನಿಜನರು ಉದಾಹರಿಸುತ್ತಾರೆ. ಅದನ್ನೇ ನಿನಗೆ ತಿಳಿಸುತ್ತೇನೆ ಕೇಳು -

ಅಶ್ಮನಾಂ ಬ್ರಾಹ್ಮಣಂ ಪ್ರಾಜ್ಞಂ ವೈದೇಹೋ ಜನಕೋ ನೃಪಃ ।
ಸಂಶಯಂ ಪರಿಪಪ್ರಚ್ಛ ದುಃಖಶೋಕಪರಿಪ್ಲುತಃ ॥೩॥

ಹಿಂದೆ ವಿದೇಹರಾಜನಾದ ಜನಕನು ಅತ್ಯಂತದುಃಖಿತನಾಗಿದ್ದನು. ಅಶ್ಮ ಎಂಬ ಪ್ರಾಜ್ಞನಾದ ಬ್ರಾಹ್ಮಣನ ಬಳಿ ತೆರಳಿ ತನ್ನ ಸಂಶಯವನ್ನು ಪರಿಹರಿಸೆಂದು ಪ್ರಾರ್ಥಿಸಿದನು.

ಜನಕಃ

ಆಗಮೇ ಯದಿ ವಾಪಾಯೇ ಜ್ಞಾತೀನಾಂ ದ್ರವಿಣಸ್ಯ ಚ ।
ನರೇಣ ಪ್ರತಿಪತ್ತವ್ಯಂ ಕಲ್ಯಾಣಂ ಕಥಮಿಚ್ಛತಾ ॥೪॥

ಜನಕರಾಜ – ಬ್ರಾಹ್ಮಣಶ್ರೇಷ್ಠನೇ! ಬಂಧುಗಳು ಹಾಗೂ ಸಂಪತ್ತು ನಮ್ಮ ಸಮೀಪಕ್ಕೆ ಬರುವಾಗ, ಮತ್ತು ಕೈಬಿಟ್ಟು ಹೋಗುವಾಗ ಕಲ್ಯಾಣವನ್ನೇ ಅಪೇಕ್ಷಿಸುವ ಮನುಷ್ಯನು ಹೇಗೆ ವರ್ತಿಸಬೇಕು? ಇದನ್ನು ದಯವಿಟ್ಟು ನನಗೆ ತಿಳಿಸಿರಿ.

ಅಶ್ಮ

ಉತ್ಪನ್ನಮಿಮಮಾತ್ಮಾನಂ ನರಸ್ಯಾನಂತರಂ ತತಃ ।
ತಾನಿ ತಾನ್ಯಭಿವರ್ತಂತೇ ದುಃಖಾನಿ ಚ ಸುಖಾನಿ ಚ ॥೫॥

ಅಶ್ಮ – ರಾಜನೇ ಈ ದೇಹವು ಹುಟ್ಟುವ ಕ್ಷಣದಲ್ಲಿಯೇ ಸುಖ-ದುಃಖಗಳ ಬೆನ್ನು ಹತ್ತುತ್ತದೆ. ಸ್ವಲ್ಪವೂ ವ್ಯವಧಾನವಿಲ್ಲದೇ ಅವನವನ ಕರ್ಮಗಳಿಗನುಗುಣವಾಗಿ ಸುಖದುಃಖಗಳು ಬರುತ್ತಲೇ ಇರುತ್ತವೆ.

ತೇಷಾಮನ್ಯತರಾಪತ್ತೌ ಯದ್ ಯದೇವೋಪಸೇವತೇ।
ತತ್ ತದ್ಧಿ ಚೇತನಾಮಸ್ಯ ಹರತ್ಯಭ್ರಮಿವಾನಿಲಃ ॥೬॥

ಈ ಸುಖ ಮತ್ತು ದುಃಖಗಳು ಎರಡೂ ಕೂಡ ಮನಸ್ಸಿಗೆ ಹೆಚ್ಚು ಹತ್ತಿಸಿಕೊಂಡರೆ, ಗಾಳಿಯು ಮೋಡವನ್ನು ಹೇಗೆ ಹಾರಿಸಿಕೊಂಡು ಹೋಗುತ್ತದೋ, ಹಾಗೇ ಇವುಗಳು ಮನುಷ್ಯನ ವಿವೇಕವನ್ನೇ ಹಾರಿಸಿಬಿಡುತ್ತವೆ.

ವಿವರಣೆ - ಸಹಜವಾಗಿ ಸುಖ-ದುಃಖಗಳು ಬರುತ್ತಲೇ ಇರುತ್ತವೆ. ಎರಡೂ ಕೂಡ ನಮ್ಮ ಮನಸ್ಸಿನ ಸ್ಥಿಮಿತವನ್ನು ಅಲ್ಲೋಲಕಲ್ಲೋಲ ಮಾಡುತ್ತವೆ. ಇದನ್ನು ಮನಸ್ಸಿಗೆ ಹತ್ತಿಸಿಕೊಂಡರೆ, ಮನುಷ್ಯನು ವಿವೇಕವನ್ನೇ ಕಳೆದುಕೊಳ್ಳುತ್ತಾನೆ.

ಅಭಿಜಾತೋಽಸ್ಮಿ ಸಿದ್ಧೋಽಸ್ಮಿ ನಾಸ್ಮಿ ಕೇವಲಮಾನುಷಃ।
ಇತ್ಯೇಭಿಃ ಹೇತುಭಿಸ್ತಸ್ಯ ತ್ರಿಭಿಶ್ಚಿತ್ತಂ ಪ್ರಸಿಚ್ಯತೇ ॥೭॥

'ನನ್ನ ವಂಶ ದೊಡ್ಡದು', 'ನಾನು ಸಿದ್ಧಿಪುರುಷ', 'ನಾನು ಇತರರಂತೆ ಸಾಧಾರಣನಲ್ಲ' ಹೀಗೆ ಮೂರು ಬಗೆಯ ಅಹಂಕಾರಗಳಿಂದ ಮನುಷ್ಯನ ಬುದ್ಧಿಯು ಅವನಲ್ಲಿ ಹುಟ್ಟಿ ಅವನನ್ನು ಉಬ್ಬಿಸಿಬಿಡುತ್ತದೆ. ಮನುಷ್ಯನು ಅತ್ಯಂತ ಗರ್ವಿಷ್ಠನಾಗುತ್ತಾನೆ.

ಸಂಪ್ರಸಕ್ತಮನಾ ಭೋಗಾನ್ ವಿಸೃಜ್ಯ ಪಿತೃಸಂಚಿತಾನ್।
ಪರಿಕ್ಷೀಣಃ ಪರಸ್ವಾನಾಮಾದಾನಂ ಸಾಧು ಮನ್ಯತೇ ॥೮॥

ಅಹಂಕಾರವನ್ನು ಹೊಂದಿದ ಮನುಷ್ಯನು ನಿರಂತರ ಕಾಮೋಪಭೋಗಗಳಲ್ಲಿ ಆಸಕ್ತನಾಗುತ್ತಾನೆ. ತಂದೆ, ತಾತ, ಮುತ್ತಾತ ಮೊದಲಾದವರು ಸಂಪಾದನೆ ಮಾಡಿದ ಐಶ್ವರ್ಯವನ್ನು ವ್ಯಯ ಮಾಡುತ್ತಾನೆ. ಅದು ಪೂರ್ಣ ಮುಗಿದ ಮೇಲೆ ಮತ್ತೊ-

ಬ್ಬರ ಸ್ವತ್ತನ್ನು ಅಪಹರಿಸುವುದೇ ಒಳ್ಳೆಯದೆಂದು ಭಾವಿಸುತ್ತಾನೆ. 'ಭೋಗಾನ್' ಎಂದರೆ ಭೋಗಸಾಧನದ್ರವ್ಯಗಳು ಎಂದರ್ಥ.

ಟಿಪ್ಪಣಿ - ರಥಾತ್ ಪರರಥಾರುಜಮ್ ಇತ್ಯತ್ರ ರಥಾತ್ ಸ್ವರಥಾತ್ ಪರರಥಾನಾಮ್ ಆ ಸಮಂತಾದ್ ರುಗ್ ಯಸ್ಮಾತ್ ತಂ ಪರರಥಾರುಜಮ್। ಸ ಪ್ರಸಿಕ್ತಮನಾ ಭೋಗಾನ್ ಇತ್ಯತ್ರ ಭೋಗಾನ್ ಭೋಗಸಾಧನದ್ರವ್ಯಾಣಿ।

ತಮತಿಕ್ರಾಂತಮರ್ಯಾದಮಾದದಾನಮಸಾಂಪ್ರತಮ್।
ಪ್ರತಿಷೇಧಂತಿ ರಾಜಾನೋ ಲುಬ್ಧಾ ಮೃಗಮಿವೇಷುಭಿಃ ॥೯॥

ಲೋಕದ ಮೇರೆಯನ್ನೇ ಮೀರಿ, ಕಳ್ಳತನ ಮೊದಲಾದ ಕೆಟ್ಟ ಕೆಲಸಗಳಲ್ಲಿ ತೊಡಗುತ್ತಾನೆ. ಜಿಂಕೆಗಳನ್ನು ಬೇಡರು ಬಾಣಗಳಿಂದ ಹೊಡೆಯುವಂತೆ ರಾಜನು ಅಂಥ ಕಳ್ಳನನ್ನು ದಂಡಿಸುತ್ತಾನೆ.

ಯೇ ಚ ವಿಂಶತಿವರ್ಷಾ ವಾ ತ್ರಿಂಶದ್ವರ್ಷಾಶ್ಚ ಮಾನವಾಃ।
ಪರೇಣ ತೇ ವರ್ಷಶತಾನ್ನ ಭವಿಷ್ಯಂತಿ ಪಾರ್ಥಿವ ॥೧೦॥

ರಾಜದಂಡಕ್ಕೆ ಪಾತ್ರರಾಗಿ ಕೆಟ್ಟಕೆಲಸಗಳಿಂದ ಇಪ್ಪತ್ತು ವರ್ಷದಲ್ಲೇ ಸತ್ತುಹೋಗುತ್ತಾರೆ. ಅಥವಾ ಮೂವತ್ತು ವರ್ಷದಲ್ಲಿ ತೀರಿಹೋಗುತ್ತಾರೆ. ಸಂಪೂರ್ಣ ನೂರು ವರ್ಷಗಳ ಕಾಲ ಅಂಥ ಹೀನರು ಬದುಕುವುದೇ ಇಲ್ಲ.

ಟಿಪ್ಪಣಿ - ಪರೇಣ ತೇ ವರ್ಷಶತಾ ಇತ್ಯತ್ರ ಪರೇಣ ವೈರಿಣಾ ವರ್ಷಾಣಾಂ ಶತಂ ಯೇಷಾಂ ತೇ ವರ್ಷಶತಾಃ।

'ಪರೇಣ' ವೈರಿಗಳಿಂದ ನೂರು ವರ್ಷಗಳ ಕಾಲ ಬದುಕುವುದಿಲ್ಲ.

ವಿವರಣೆ - ತಂದೆ, ಮುತ್ತಾತ ಮೊದಲಾದವರು ಸಂಪಾದನೆ ಮಾಡಿದ ಹಣದ ಮೌಲ್ಯವನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಯಾವುದೇ ಕಾರಣಕ್ಕೂ ಅಪವ್ಯಯ ಮಾಡಬಾರದು. ಹಾಗೇನಾದರೂ ತನ್ನ ಇಚ್ಛೆಗೆ ಅನುಗುಣವಾಗಿ ಆ ಹಣವನ್ನು ವ್ಯರ್ಥ ಮಾಡಿದರೆ, ಆಯುಷ್ಯವನ್ನು ಕಳೆದುಕೊಳ್ಳುತ್ತಾನೆ. ಮತ್ತು ಅವನಿಗೆ ಧರ್ಮಾಧರ್ಮಗಳಲ್ಲಿ ನಂಬಿಕೆ ಇಲ್ಲದ ಕಾರಣ, ಪಿತೃವಂಶದ ಹಣವನ್ನೇ

ಅಪವ್ಯಯಮಾಡಿದ ಮೇಲೆ ಉಳಿದವರ ಹಣವನ್ನು ಕದಿಯುವುದರಲ್ಲಿಯೂ ಅಧರ್ಮದ ಬುದ್ಧಿಯು ಅವರಿಗೆ ಉಂಟಾಗುವುದಿಲ್ಲ. ಧರ್ಮವನ್ನು ನಂಬದ ಅಂಥ ಮನುಷ್ಯನು ಕಳ್ಳತನ ಆರಂಭ ಮಾಡುತ್ತಾನೆ. ಆದರೆ ಅಂತಿಮವಾಗಿ ಜಗತ್ತಿನಲ್ಲಿ ಅವನು ಕಳ್ಳನೇ ಆಗುತ್ತಾನೆ. ಅವನನ್ನು ಹಿಡಿದು ರಾಜಭಟರು ಶಿಕ್ಷೆಗೆ ಒಳಪಡಿಸುತ್ತಾರೆ. ಅಥವಾ ಶತ್ರುಜನರು ಅವರನ್ನು ಕೊಲ್ಲುತ್ತಾರೆ.

ಟಿಪ್ಪಣಿ - ಕೆಲವು ಕಳ್ಳರು ರಾಜದಂಡಕ್ಕೆ ಪಾತ್ರರಾಗಿ ಮರಣವನ್ನು ಹೊಂದುತ್ತಾರೆ. ಇನ್ನು ಕೆಲವರು ತಮ್ಮ ಶತ್ರುಗಳಿಂದಲೇ ಮರಣವನ್ನು ಹೊಂದುತ್ತಾರೆ. ಕಳ್ಳತನವನ್ನು ಮಾಡಲು ಹೊರಟು ಎಲ್ಲರನ್ನೂ ಶತ್ರುಗಳನ್ನಾಗಿ ಮಾಡಿಕೊಳ್ಳುತ್ತಾರೆ. ಅವರಿಂದಲೇ ಸಾಯುತ್ತಾರೆ.

ತೇಷಾಂ ಪರಮದುಃಖಾನಾಂ ಬುದ್ಧ್ಯಾ ಭೈಷದ್ಯಮಾಚರೇತ್ ।
ಸರ್ವಪ್ರಾಣಭೃತಾಂ ವೃತ್ತಂ ಪ್ರೇಕ್ಷಮಾಣಸ್ತತಸ್ತತಃ ॥೧೧॥

ಇಂಥ ಪರಮದುಃಖವನ್ನು ಹೊಂದುವ ಮನುಷ್ಯರಿಗೆ ಸರಿಯಾದ ಮಾರ್ಗವನ್ನು ತೋರಿಸುವುದಕ್ಕಾಗಿ ಬುದ್ಧಿಯಿಂದ ಆಲೋಚಿಸಿ, ಚಿಕಿತ್ಸೆಯನ್ನು ಅವರಿಗೆ ನೀಡಬೇಕು. ಅದಕ್ಕಾಗಿ ರಾಜನಾದವನು ತನ್ನ ಎಲ್ಲಾ ಪ್ರಜೆಗಳ ನಡುವಳಿಕೆಗಳನ್ನು ಪರಿಶೀಲನೆ ಮಾಡುತ್ತಲೇ ಇರಬೇಕು.

ಮಾನಸಾನಾಂ ಪುನರ್ಯೋನಿರ್ದುಃಖಾನಾಂ ಚಿತ್ತವಿಭ್ರಮಃ ।
ಅನಿಷ್ಟೋಪನಿಪಾತೋ ವಾ ತೃತೀಯಂ ನೋಪಪದ್ಯತೇ ॥೧೨॥

ಮನುಷ್ಯರಿಗೆ ದುಃಖವನ್ನು ತಂದುಕೊಳ್ಳಲು ಎರಡು ಪ್ರಬಲಕಾರಣಗಳಿರುತ್ತವೆ. ಬುದ್ಧಿಭ್ರಮೆ ಮತ್ತು ಅನಿಷ್ಟಪ್ರಾಪ್ತಿ. ಇವೆರಡು ಮಾತ್ರ ಮನುಷ್ಯನಿಗೆ ದುಃಖವನ್ನು ನೀಡುತ್ತವೆ. ಇವೆರಡನ್ನು ಬಿಟ್ಟು, ಮೂರನೆಯ ಕಾರಣವು ಇರುವುದಿಲ್ಲ.

ಏವಮೇತಾನಿ ದುಃಖಾನಿ ತಾನಿ ತಾನೀಹ ಮಾನವಮ್ ।
ವಿವಿಧಾನ್ಯುಪವರ್ತಂತೇ ತಥಾ ಸಾಂಸ್ಪರ್ಶಕಾನಿ ಚ ॥೧೩॥

ಹೀಗೆ ಬೇರೆ ಬೇರೆ ವಿಧವಾದ ಆಯಾ ದುಃಖಗಳು ವಿಷಯಸಂಗದಿಂದ ಬರುವ ದುಃಖಗಳು ಮನುಷ್ಯನಿಗೆ ತೊಂದರೆಯನ್ನು ಕೊಡುತ್ತಲೇ ಇರುತ್ತವೆ.

ಜರಾಮೃತ್ಯೂ ಹಿ ಭೂತಾನಾಂ ಖಾದಿತಾರೌ ವೃಕಾವಿವ।
ಬಲಿನಾಂ ದುರ್ಬಲಾನಾಂ ಚ ಹ್ರಸ್ವಾನಾಂ ಮಹತಾಮಪಿ ॥೧೪॥

ಮುಪ್ಪು ಮತ್ತು ಸಾವುಗಳಿಗೆ ಬಲಿಷ್ಠರಾದವರೆಂದು, ದುರ್ಬಲರೆಂದು, ಚಿಕ್ಕವರೆಂದು, ದೊಡ್ಡವರೆಂದು ತಾರತಮ್ಯವೇ ಇರುವುದಿಲ್ಲ. ಎಲ್ಲರನ್ನು ನುಂಗಿಹಾಕುತ್ತವೆ.

ನ ಕಶ್ಚಿಜ್ಜಾತ್ವತಿಕ್ರಾಮೇತ್ ಜರಾಮೃತ್ಯೂ ಹ ಮಾನವಃ।
ಅಪಿ ಸಾಗರಪರ್ಯಂತಾಂ ವಿಜಿತ್ಯೇಮಾಂ ವಸುಂಧರಾಮ್ ॥೧೫॥

ಮನುಷ್ಯನು ಸಾಗರದ ತನಕ ಸಮಸ್ತ ಭೂಮಂಡಲವನ್ನು ಜಯಿಸಬಹುದು. ಆದರೆ ಯಾರೊಬ್ಬನೂ ಕೂಡ ಎಂದೆಂದೂ ಮುಪ್ಪು ಮತ್ತು ಸಾವುಗಳನ್ನು ಗೆಲ್ಲಲು ಸಮರ್ಥನಾಗುವುದಿಲ್ಲ.

ಸುಖಂ ವಾ ಯದಿ ವಾ ದುಃಖಂ ಭೂತಾನಾಂ ಪರ್ಯುಪಸ್ಥಿತಮ್।
ಪ್ರಾಪ್ತವ್ಯಮವಶೈಃ ಸರ್ವಂ ಪರಿಹಾರೋ ನ ವಿದ್ಯತೇ ॥೧೬॥

ಸುಖ ಮತ್ತು ದುಃಖಗಳು ಪ್ರತಿಯೊಬ್ಬರಿಗೂ ಬರುತ್ತವೆ. ಇದನ್ನು ಎಲ್ಲರೂ ಅನುಭವಿಸಿಯೇ ತೀರಬೇಕು. ತಾವಾಗಿಯೇ ಬಂದು ಹಿಡಿದುಕೊಳ್ಳುವ ಈ ಸುಖ-ದುಃಖಗಳಿಗೆ ಪರಿಹಾರವು ಇರುವುದಿಲ್ಲ.

ಪೂರ್ವೇ ವಯಸಿ ಮಧ್ಯೇ ವಾಪ್ಯುತ್ತರೇ ವಾ ನರಾಧಿಪ।
ಅವರ್ಜನೀಯಾಸ್ತೇऽರ್ಥಾ ವೈ ಕಾಂಕ್ಷಿತಾಶ್ಚ ತತೋऽನ್ಯಥಾ ॥೧೭॥

ಮನುಷ್ಯನಾಗಿ ಹುಟ್ಟಿದಾಗ ಸಣ್ಣವಯಸ್ಸಿನಲ್ಲಿ, ಯೌವನದಲ್ಲಿ, ವೃದ್ಧಾಪ್ಯದಲ್ಲಿ ಸುಖ-ದುಃಖರೂಪವಾದ ವಿಷಯಗಳು ತಪ್ಪುವುದೇ ಇಲ್ಲ. ತಾನು ಅಪೇಕ್ಷಿಸಿದ ಅಥವಾ ಅಪೇಕ್ಷಪಡದ ವಿಷಯಗಳಲ್ಲಿ ಯಾವುದು ಬಂದರೂ ಅದನ್ನು ಸ್ವಾಗತ ಮಾಡಬೇಕು. ಬಿಡಲು ಸಾಧ್ಯವಿಲ್ಲ.

ಸುಪ್ರಿಯೈರ್ವಿಪ್ರಯೋಗಾಶ್ಚ ಸಂಪ್ರಯೋಗಸ್ತಥಾಪ್ರಿಯೈಃ।
ಅರ್ಥಾನರ್ಥೌ ಸುಖಂ ದುಃಖಂ ವಿಧಾನಮನುವರ್ತತೇ ॥೧೮॥

ತನಗೆ ಅತ್ಯಂತ ಇಷ್ಟರಾದವರ ಸಹವಾಸವೇ ದೊರಕುವುದಿಲ್ಲ, ಅಪ್ರಿಯರಾದವರ ಜೊತೆ ಬೇಡವೆಂದರೂ ಸಹವಾಸವು ದೊರಕುತ್ತದೆ. ಅರ್ಥಪ್ರಾಪ್ತಿ, ಅನರ್ಥದ ಪ್ರಾಪ್ತಿ, ಸುಖ ಮತ್ತು ದುಃಖ ಇವುಗಳೆಲ್ಲವೂ ಅವರವರ ಪ್ರಾರಬ್ಧಕರ್ಮವನ್ನು ಅನುಸರಿಸಿಯೇ ಬರುತ್ತವೆ.

ಪ್ರಾದುರ್ಭಾವಶ್ಚ ಭೂತಾನಾಂ ದೇಹತ್ಯಾಗಸ್ತಥೈವ ಚ।
ಪ್ರಾಪ್ತಿರ್ವ್ಯಾಯಾಮಯೋಗಶ್ಚ ಸರ್ವಮೇತತ್ ಪ್ರತಿಷ್ಠಿತಮ್ ॥೧೯॥

ಇದರಂತೆ ಪ್ರಾಣಿಗಳ ಹುಟ್ಟು, ಸಾವು, ಲಾಭ, ನಷ್ಟ ಎಲ್ಲವೂ ಕೂಡ ದೈವದ ಅಧೀನವಾಗಿಯೇ ಇರುತ್ತವೆ.

ಗಂಧವರ್ಣರಸಸ್ಪರ್ಶಾ ನಿವರ್ತಂತೇ ಸ್ವಭಾವತಃ।
ತಥೈವ ಸುಖದುಃಖಾನಿ ವಿಧಾನಮನುವರ್ತತೇ ॥೨೦॥

ರೂಪ, ರಸ, ಗಂಧ, ಸ್ಪರ್ಶಾದಿಗಳು ಸಹಜವಾಗಿ ಬರುತ್ತವೆ. ಅದರಂತೆ ಸುಖ-ದುಃಖಗಳೂ ಕೂಡ ದೈವಾಧೀನವಾಗಿ ಬರುತ್ತವೆ.

ಟಿಪ್ಪಣಿ - ಗಂಧವರ್ಣರಸಸ್ಪರ್ಶಾ ನಿವರ್ತಂತ ಇತ್ಯತ್ರ ಎಂದರೆ ಸುತರಾಂ ಇರುತ್ತದೆ ಎಂದರ್ಥ.

ವಿವರಣೆ - ಗಂಧ, ರೂಪ, ರಸ, ಸ್ಪರ್ಶಗಳೆಲ್ಲವೂ ಕೂಡ ಸಹಜವಾಗಿ ಬರುತ್ತವೆ, ಹೋಗುತ್ತವೆ. ಹೂವು ಅರಳಿದಾಗ ಸಹಜವಾಗಿ ಪರಿಮಳ ಬರುತ್ತದೆ. ಹೂವು ಬಾಡುವುದರಿಂದ ಪರಿಮಳವು ಹೋಗುತ್ತದೆ. ಅದರಂತೆ ಸುಖ-ದುಃಖಿಗಳೂ ಕೂಡ ಅವರವರ ಕರ್ಮಗಳಿಗೆ ಅನುಗುಣವಾಗಿ ಬರುತ್ತವೆ, ಹೋಗುತ್ತವೆ.

ಆಸನಂ ಶಯನಂ ಯಾನಮುತ್ಥಾನಂ ಪಾನಭೋಜನಮ್।
ನಿಯತಂ ಸರ್ವಭೂತಾನಾಂ ಕಾಲೇನೈವ ಭವಂತ್ಯುತ ॥೨೧॥

ಕುಳಿತುಕೊಳ್ಳುವುದು, ಮಲಗುವುದು, ಓಡಾಡುವುದು, ಎದ್ದುನಿಂತುಕೊಳ್ಳುವುದು, ಕುಡಿಯುವುದು, ತಿನ್ನುವುದು ಇವುಗಳನ್ನು ಎಲ್ಲಾ ಪ್ರಾಣಿಗಳೂ ಕೂಡ ಮಾಡುತ್ತವೆ.

ವೈದ್ಯಶ್ಚಾಪ್ಯಾತುರಾಃ ಸಂತಿ ಬಲವಂತಃ ಸುದುರ್ಬಲಾಃ।
ಸ್ತ್ರೀಮಂತಶ್ಚ ತಥಾ ಷಂಢಾ ವಿಚಿತ್ರಃ ಕಾಲಪರ್ಯಯಃ ॥೨೨॥

ವೈದ್ಯರೇ ರೋಗಿಗಳಾಗುತ್ತಾರೆ. ಬಲಿಷ್ಠರು ದುರ್ಬಲರಾಗುತ್ತಾರೆ. ಷಂಡರು ಹೆಂಡತಿಯೊಡನೆ ಕೂಡುತ್ತಾರೆ. ಹೀಗೆ ಕಾಲಗತಿಯೇ ಬಲುವಿಚಿತ್ರ .

ಕುಲೇ ಜನ್ಮ ತಥಾ ವೀರ್ಯಮಾರೋಗ್ಯಂ ಧೈರ್ಯಮೇವ ಚ।
ಸೌಭಾಗ್ಯಮುಪಭೋಗಶ್ಚ ಭವಿತವ್ಯೇನ ಲಭ್ಯತೇ ॥೨೩॥

ಸತ್ಕುಲದಲ್ಲಿ ಹುಟ್ಟುವುದು, ವೀರ್ಯವಂತನಾಗುವುದು, ದೇಹವನ್ನು ಆರೋಗ್ಯವಾಗಿ ಇರುವಂತೆ ನೋಡಿಕೊಳ್ಳುವುದು, ಎಂಥಾ ಸಂದರ್ಭದಲ್ಲೂ ಧೈರ್ಯವಂತನಾಗಿರುವುದು, ಸೌಭಾಗ್ಯವಂತನಾಗಿರುವುದು ಎಲ್ಲಾ ಭಾಗ್ಯಗಳನ್ನು ಅನುಭವಿಸುವುದು ಇವೆಲ್ಲವೂ ಆ ದೈವದ ಅಧೀನವಾಗಿಯೇ ಪ್ರಾಪ್ತವಾಗುತ್ತವೆ.

ಸಂತಿ ಪುತ್ರಾಃ ಸುಬಹವೋ ದರಿದ್ರಾಣಾಮನಿಚ್ಛತಾಮ್ ।
ಬಹೂನಾಮಿಚ್ಛತಾಂ ನಾಸ್ತಿ ಸಮೃದ್ಧಾನಾಂ ವಿಚೇಷ್ಟತಾಮ್ ॥೨೪॥

ಇಚ್ಛೆಪಡದಿದ್ದರೂ ದರಿದ್ರರಿಗೆ ಅನೇಕ ಮಕ್ಕಳು ಹುಟ್ಟುತ್ತಾರೆ. ಅತ್ಯಂತ-ಶ್ರೀಮಂತರು ತಮ್ಮ ಅಪೇಕ್ಷೆಯಂತೆ ಖರ್ಚು ಮಾಡಿದರೂ ಆಸೆಯನ್ನಿಟ್ಟುಕೊಂಡರೂ ಮಕ್ಕಳಾಗುವುದಿಲ್ಲ ಹೀಗೆ ವಿಧಿಯ ಕಾರ್ಯವೇ ಬಲುವಿಚಿತ್ರ .

ವ್ಯಾಧಿರಗ್ನಿರ್ಜಲಂ ಶಸ್ತ್ರಂ ಬುಭುಕ್ಷಾ ಶ್ವಾಪದೋ ವಿಷಮ್ ।
ಜ್ವರಶ್ಚ ಮರಣಂ ಜಂತೋರುಚ್ಚಾಚ್ಚ ಪತನಂ ತಥಾ ॥೨೫॥

ನಿರ್ಯಾಣಂ ಯಸ್ಯ ಯದ್ ದಿಷ್ಟಂ ತೇನ ಗಚ್ಛತಿ ಹೇತುನಾ ।
ದೃಶ್ಯತೇ ನಾಭ್ಯತಿಕ್ರಾಮನ್ನತಿಕ್ರಾಂತೋ ನವಾ ಪುನಃ ॥೨೬॥

ರೋಗ, ಬೆಂಕಿ, ನೀರು, ಶಸ್ತ್ರ, ಹಸಿವೆ, ಅಪಘಾತ, ವಿಷ, ಜ್ವರ, ಕೆಳಗೆ ಬೀಳುವುದು ಇಷ್ಟು ಮರಣದ ನಿಮಿತ್ತಕಾರಣಗಳು. ಪರಲೋಕಯಾತ್ರೆಗೆ ಇವುಗಳೇ ಸೇತುವೆಯಂತಿವೆ. ಆಯಾ ವ್ಯಕ್ತಿಯು ಹುಟ್ಟಿದಾಗ ಇವನು ಹೇಗೆ ಪರಲೋಕಕ್ಕೆ ಹೋಗಬೇಕೆಂದು ನಿರ್ಣಯ ಮಾಡಲಾಗಿರುತ್ತದೋ, ಅದೇ ಕ್ರಮದಲ್ಲಿಯೇ ನಿರ್ಯಾಣವನ್ನು ಮಾಡುತ್ತಾನೆ.

ದೃಶ್ಯತೇ ಹಿ ಯುವೈವೇಹ ವಿನಶ್ಯನ್ ವಸುಮಾನ್ನರಃ।
ದರಿದ್ರಶ್ಚ ಪರಿಕ್ಲಿಷ್ಟಃ ಶತವರ್ಷೋ ಜರಾನ್ವಿತಃ ॥೨೭॥

ಕೆಲವರು ಐಶ್ವರ್ಯವನ್ನು ಹೊಂದಿರುತ್ತಾರೆ. ಆದರೆ ಯುವಕನಾಗಿರುವಾಗಲೇ ಮರಣ ಬರುತ್ತದೆ. ಕೆಲವರು ಬಹಳ ಬಡತನದಲ್ಲಿ ಜೀವನವನ್ನು ನಡೆಸುತ್ತಾರೆ. ಆದರೂ ನೂರು ವರ್ಷಗಳ ತನಕ ಬದುಕುತ್ತಾರೆ.

ವಿವರಣೆ - ಕೆಲವರಿಗೆ ಬೇಕಾದಷ್ಟು ಹಣವಿರುತ್ತದೆ. ಆ ಹಣವನ್ನು ವಿನಿಯೋಗಿಸಿ ತಮ್ಮ ಜೀವನವನ್ನು ಕಾಪಾಡಿಕೊಳ್ಳುತ್ತಾರೆ. ಮತ್ತು ಅತ್ಯಂತಸತ್ವಯುತವಾದ ಆಹಾರವನ್ನು ತಿನ್ನುತ್ತಾರೆ. ಆರೋಗ್ಯವನ್ನು ಯಥೇಚ್ಛವಾಗಿ ಹಣವನ್ನು ವಿನಿಯೋಗ ಮಾಡಿ ಕಾಪಾಡಿಕೊಳ್ಳುತ್ತಾರೆ. ಆದರೂ ಕೂಡ ಅವರಿಗೆ ರೋಗಗಳು ಬಂದೇ ಬರುತ್ತವೆ. ಯೌವನದಲ್ಲಿಯೇ ಮರಣವನ್ನೂ ಹೊಂದುತ್ತಾರೆ. ಆದರೆ ಮತ್ತೊಬ್ಬ ಕಡುಬಡವನಿರುತ್ತಾನೆ. ತನ್ನ ಆರೋಗ್ಯಕ್ಕಾಗಿ ಸತ್ವಯುತವಾದ ಆಹಾರವನ್ನೇ ತಿನ್ನುವುದಿಲ್ಲ. ತಂಗಳನ್ನವನ್ನೇ ತಿಂದು ಬದುಕುತ್ತಾನೆ. ಕೆಲವೊಮ್ಮೆ ಉಪವಾಸವಿರುತ್ತಾನೆ. ನೀರು ಕುಡಿಯುತ್ತಾನೆ. ಆದರೂ ಕೂಡ ನೂರು ವರ್ಷಗಳ ತನಕ ಬದುಕುತ್ತಾನೆ. ಇದರಿಂದಲೇ ತಿಳಿಯುತ್ತದೆ. ಎಲ್ಲವೂ ಕೂಡ ದೈವಾಧೀನವೆಂದು.

ಅಕಿಂಚನಾಶ್ಚ ದೃಶ್ಯಂತೇ ಪುರುಷಾಶ್ಚಿರಜೀವಿನಃ।
ಸಮೃದ್ಧೇ ಚ ಕುಲೇ ಜಾತಾ ವಿನಶ್ಯಂತಿ ಪತಂಗವತ್ ॥೨೮॥

ಯಾರ ಹತ್ತಿರ ಏನೂ ಕೂಡ ಇರುವುದಿಲ್ಲವೋ, ಅಂಥ ದರಿದ್ರನು ಚಿರಂಜೀವಿಯಾಗಿ ಬದುಕುತ್ತಾನೆ. ಆಗರ್ಭಶ್ರೀಮಂತನು ಪತಂಗದಂತೆ ಬಹುಬೇಗ ಸತ್ತು ಹೋಗುತ್ತಾನೆ.

ಪ್ರಾಯೇಣ ಶ್ರೀಮತಾಂ ಲೋಕೇ ಭೋಕ್ತುಂ ಶಕ್ತಿರ್ನ ವಿದ್ಯತೇ।
ಕಾಷ್ಠಾನ್ಯಪಿ ಹಿ ಜೀರ್ಯಂತೇ ದರಿದ್ರಾಣಾಂ ನರಾಧಿಪ ॥೨೯॥

ಸಾಮಾನ್ಯವಾಗಿ ಶ್ರೀಮಂತರಿಗೆ ಅನ್ನವನ್ನು ಅರಗಿಸಿಕೊಳ್ಳುವ ಶಕ್ತಿಯೇ ಇರುವುದಿಲ್ಲ. ದರಿದ್ರರಿಗೆ ಕಟ್ಟಿಗೆಯನ್ನು ತಿಂದರೂ ಕೂಡ ಜೀರ್ಣಿಸಿಕೊಳ್ಳುವ ಶಕ್ತಿಯಿರುತ್ತದೆ.

ಅಹಮೇತತ್ ಕರೋಮೀತಿ ಮನ್ಯತೇ ಕಾಲಚೋದಿತಃ।
ಯದ್ಯದಿಷ್ಟಮಸಂತೋಷಾದ್ ದುರಾತ್ಮಾ ಪಾಪಮಾಚರನ್ ॥೩೦॥

ಒಬ್ಬನು ವಿಧಿಯ ಅಧೀನವಾಗಿ ಎಲ್ಲ ಕೆಲಸವನ್ನು ಮಾಡುತ್ತಾನೆ. ಅಂತಿಮವಾಗಿ ನಾನೇ ಮಾಡಿದೆನೆಂದು ತಿಳಿದುಬಿಡುತ್ತಾನೆ. ಇಂಥವನೇ ನಿಜವಾದ ದುರಾತ್ಮನು ಮತ್ತು ಪಾಪಿಷ್ಠನು.

ಟಿಪ್ಪಣಿ – ಯದ್ಯದಿಷ್ಟಮಸಂತೋಷಾದ್ ಇತ್ಯತ್ರ ಯದಿ ಅದಿಷ್ಟಮ್ ಅಪ್ರಾಪ್ತಮ್।

'ಯದ್ಯದಿಷ್ಟಮ್' ಎಂಬಲ್ಲಿ ಯದಿ ಅದಿಷ್ಟಮ್ ಎಂಬುದಾಗಿ ಪದಚ್ಛೇದ ಮಾಡಬೇಕು. ಅದಿಷ್ಟಮ್ ಎಂದರೆ ದೊರಕದೇ ಇರುವುದು ಎಂದರ್ಥ. ತನಗೆ ಯಾವುದು ದೊರಕಿಲ್ಲವೋ, ಅದನ್ನು ಸಾಧಿಸಿಕೊಳ್ಳಲು ಪಾಪಕರ್ಮಗಳನ್ನು ಆಚರಿಸುತ್ತಾನೆ ಎಂದಭಿಪ್ರಾಯ.

ಸ್ತ್ರಿಯೋಽಕ್ಷಾಮೃಗಯಾ ಪಾನಂ ಪ್ರಸಂಗಾನ್ನಿಂದಿತಾ ಬುಧೈಃ।
ದೃಶ್ಯಂತೇ ಚಾಪಿ ಬಹವಃ ಸಂಪ್ರಸಕ್ತಾ ಬಹುಶ್ರುತಾಃ ॥೩೧॥

ಬೇಟೆಯಾಡುವುದು, ಜೂಜಾಡುವುದು, ಸ್ತ್ರೀಯರಲ್ಲಿ ಅತಿಯಾದ ಆಸಕ್ತಿಯನ್ನು ಹೊಂದಿರುವುದು, ಹೆಂಡ ಕುಡಿಯುವುದು, ಈ ಎಲ್ಲಾ ದುರಭ್ಯಾಸಗಳನ್ನು ವಿದ್ವಾಂಸರು ನಿಂದನೆ ಮಾಡುತ್ತಾರೆ. ಆದರೂ ಕೂಡ ಶಾಸ್ತ್ರಗ್ರಂಥಗಳನ್ನು ಓದಿದ ವಿದ್ವಾಂಸರುಗಳೇ ಇಂಥ ಕುಕೃತ್ಯಗಳಲ್ಲಿ ಆಸಕ್ತರಾಗಿಬಿಡುತ್ತಾರೆ.

ಇತಿ ಕಾಲೇನ ಸರ್ವಾರ್ಥಾನೀಪ್ಸಿತಾನೀಪ್ಸಿತಾನಿ ಚ।
ಸ್ಪೃಶ್ಯಂತಿ ಸರ್ವಭೂತಾನಿ ನಿಮಿತ್ತಂ ನೋಪಲಭ್ಯತೇ ॥೩೨॥

ಹೀಗೆ ಮನುಷ್ಯನಿಗೆ ಬರುವ ಇಷ್ಟ - ಅನಿಷ್ಟಗಳು, ಧರ್ಮ, ಅರ್ಥಗಳೆಲ್ಲವೂ ವಿಧಿಯ ಅಧೀನವಾಗಿಯೇ ಇರುತ್ತವೆ. ಇದಕ್ಕೆ ಬೇರೆ ಕಾರಣಗಳು ಇರುವುದಿಲ್ಲ.

ಟಿಪ್ಪಣಿ - ನಿಮಿತ್ತಂ ನೋಪಲಭ್ಧತ ಇತ್ಯತ್ರ ನಿಮಿತ್ತಂ ನಿಮಿತ್ತಭೂತಃ ಸರ್ವೇಶ್ವರಃ।

'ನಿಮಿತ್ತಂ' ಎಂದರೆ ನಿಮಿತ್ತನಾದ ಸರ್ವೇಶ್ವರನನ್ನು ಬಿಟ್ಟರೆ, ಬೇರೆ ಕಾರಣವಿರುವು-ದಿಲ್ಲ ಎಂದರ್ಥ.

ವಾಯುಮಾಕಾಶಮಗ್ನಿಂ ಚ ಚಂದ್ರಾದಿತ್ಯಾವಹಃಕ್ಷಪೇ।
ಜ್ಯೋತಿಂಷಿ ಸರಿತಃ ಶೈಲಾನ್ ಕಃ ಕರೋತಿ ಬಿಭರ್ತಿ ವಾ ॥೩೩॥

ವಾಯು, ಆಕಾಶ, ಅಗ್ನಿ, ಚಂದ್ರ, ಸೂರ್ಯ,ಹಗಲು, ರಾತ್ರಿ, ನಕ್ಷತ್ರ, ನದಿಗಳು, ಪರ್ವತಗಳು ಇವುಗಳನ್ನು ಆ ಪರಮಾತ್ಮ ಬಿಟ್ಟರೆ ಬೇರೆ ಯಾರು ತಾನೇ ಸೃಷ್ಟಿ ಮಾಡಲು, ಧಾರಣೆ ಮಾಡಲು ಸಮರ್ಥನಾಗಿರುತ್ತಾನೆ.

ಶೀತಮುಷ್ಣಂ ತಥಾ ವರ್ಷಂ ಕಾಲೇನ ಪರಿವರ್ತತೇ।
ಏವಮೇವ ಮನುಷ್ಯಾಣಾಂ ಸುಖದುಃಖೇ ನರರ್ಷಭ ॥೩೪॥

ಓ ನರೋತ್ತಮನೇ! ಚಳಿಗಾಲ, ಬೇಸಿಗೆಕಾಲ, ಮಳೆಗಾಲಗಳು ಆ ಕಾಲದ ಅಧೀನವಾಗಿಯೇ ಸುತ್ತಿ ಬರುತ್ತವೆ. ಅದರಂತೆ ಸುಖ-ದುಃಖಗಳೂ ಕೂಡ ಕಾಲದ ಅಧೀನವಾಗಿವೆಯೇ ಒಂದರ ಮೇಲೊಂದು ಬರುತ್ತಿರುತ್ತವೆ.

ನೌಷಧಾನಿ ನ ಶಾಸ್ತ್ರಾಣಿ ನ ಹೋಮಾ ನ ಪುನರ್ಜಪಾಃ।
ತ್ರಾಯಂತೇ ಮೃತ್ಯುನೋಪೇತಂ ಜರಯಾ ವಾಪಿ ಮಾನುಷಮ್॥೩೫॥

ಔಷಧಿಗಳು, ಶಾಸ್ತ್ರಗಳು, ಹೋಮಗಳು ಅನೇಕ ಬಗೆಯ ಜಪಗಳು ಮರಣ-ದಿಂದ ಮನುಷ್ಯನನ್ನು ರಕ್ಷಣೆ ಮಾಡಲಾರವು. ಮುಪ್ಪನ್ನೂ ಕೂಡ ತಪ್ಪಿಸಲಾರವು.

ಯಥಾ ಕಾಷ್ಠಂ ನ ಕಾಷ್ಠಂ ಚ ಸಮೇಯಾತಾಂ ಮಹೋದಧೌ।
ಸಮೇತ್ಯ ಚ ವ್ಯತೀಯಾತಾಂ ತದ್ವದ್ ಭೂತಸಮಾಗಮಃ ॥೩೬॥

ಮಹಾಸಮುದ್ರದಲ್ಲಿ ಎರಡು ಕಟ್ಟಿಗೆಗಳು ಎಲ್ಲಿಂದಲೋ ತೇಲಿಕೊಂಡು ಬಂದು, ಕೆಲವು ಸಮಯ ಒಟ್ಟಾಗಿಯೇ ಇದ್ದು ಪುನಃ ಅಗಲುತ್ತವೆ. ಅನಂತರ ಅವೆರಡೂ ಬೇರೆ ಬೇರೆಯೇ ಹೋಗುತ್ತವೆ. ಇದರಂತೆ ಈ ಸಂಸಾರದಲ್ಲಿ ಹೆಂಡತಿ, ಮಕ್ಕಳು, ತಂದೆ, ತಾಯಿ ಮೊದಲಾದ ಬಂಧುಗಳ ಸಮಾಗಮವೂ ಕೂಡ ಕೆಲವು ಕಾಲ ಇರುತ್ತದೆ. ಕೆಲವು ಕಾಲದ ಅನಂತರ ಅಗಲುತ್ತವೆ.

ಟಿಪ್ಪಣಿ - ಈ ಶ್ಲೋಕವು ಭಾಗವತದಲ್ಲಿಯೂ ಕೂಡ ಬರುತ್ತದೆ. ಈ ಶ್ಲೋಕವು ಅತ್ಯಂತಮಾರ್ಮಿಕವಾಗಿದೆ.

ಯೇ ಚಾಪಿ ಪುರುಷೈಃ ಸ್ತ್ರೀಭಿರ್ಗೀತವಾದ್ಯೈರುಪಸ್ಥಿತಾಃ।
ಯೇ ಚಾನಾಥಾಃ ಪರಾನ್ನಾದಾಃ ಕಾಲಸ್ತೇಷು ಸಮಕ್ರಿಯಃ ॥೩೭॥

ಯಾವ ಪುರುಷರು ಸ್ತ್ರೀಯರ ಮಧ್ಯದಲ್ಲಿಯೇ ಇರುತ್ತಾರೋ, ಅವರ ಗೀತೆಗಳನ್ನು, ವಾದ್ಯಗಳನ್ನು ಕೇಳುತ್ತಾ, ಆನಂದತುಂದಿಲರಾಗಿರುತ್ತಾರೋ, ಅಂಥ ಶ್ರೀಮಂತರ ವಿಷಯದಲ್ಲಿ ಮತ್ತು ಪರಾನ್ನದಲ್ಲಿ ಆಸಕ್ತರಾದ ಅನಾಥರ ವಿಷಯ-ದಲ್ಲಿಯೂ ಕಾಲವು ಸಮಾನವಾಗಿಯೇ ಕೆಲಸವನ್ನು ಮಾಡುತ್ತದೆ. ಧನಿಕರು, ದರಿದ್ರರು, ಮೂರ್ಖರು ವಿದ್ವಾಂಸರು ಎಂಬ ವ್ಯತ್ಯಾಸವು ಕಾಲಕ್ಕೆ ಇರುವುದಿಲ್ಲ.

ಮಾತೃಪಿತೃಸಹಸ್ರಾಣಿ ಪುತ್ರದಾರಶತಾನಿ ಚ।
ಸಂಸಾರೇಷ್ವನುಭೂತಾನಿ ಕಸ್ಯ ತೇ ಕಸ್ಯ ವಾ ವಯಮ್ ॥೩೮॥

ಅನೇಕ ಜನ್ಮಗಳಲ್ಲಿ, ಅನೇಕ ತಾಯಿ, ಅನೇಕ ತಂದೆ, ನೂರಾರು ಹೆಂಡತಿ-ಯರು, ಸಾವಿರಾರು ಮಕ್ಕಳು ಇವರನ್ನೆಲ್ಲಾ ಪಡೆದಿದ್ದಾಗಿದೆ. ಅನುಭವಿಸಿದ್ದೂ ಆಗಿದೆ. ಹೀಗಿರುವಾಗ ಯಾರಿಗೆ ಯಾರು ಸಂಬಂಧಪಟ್ಟವರು?

ಟಿಪ್ಪಣಿ - ಅದೆಷ್ಟೋ ಜನ್ಮಗಳನ್ನು ತಾಳಿದ್ದೇವೆ. ಅದೆಷ್ಟೋ ಜನ್ಮಗಳಲ್ಲಿ ಯಾರು ತಂದೆಯಾಗಿದ್ದಾರೆ, ತಾಯಿಯಾಗಿದ್ದಾರೆ, ಮಕ್ಕಳುಗಳಾಗಿದ್ದಾರೆ. ಹೀಗಿರುವಾಗ, ಯಾರು ತಂದೆ, ಯಾರು ತಾಯಿ, ಯಾರು ಮಕ್ಕಳು, ಯಾರು ಹೆಂಡತಿ, ಅವರಲ್ಲಿ ಯಾರೊಬ್ಬರೂ ಕೂಡ ಈ ಜನ್ಮದಲ್ಲಿ ಇರುವುದಿಲ್ಲ. ನಾವೂ ಕೂಡ ಅವರಿಗೆ

ಯಾವುದೇ ರೀತಿಯಲ್ಲಿ ಸಂಬಂಧಿಕರಾಗಿರುವುದಿಲ್ಲ. ಈ ಜನ್ಮದಲ್ಲಿ ತಂದೆ, ತಾಯಿ, ಹೆಂಡತಿ, ಮಕ್ಕಳು ಯಾರಾಗಿದ್ದಾರೋ, ಅವರು ಕೇವಲ ಈ ಜನ್ಮಕ್ಕಷ್ಟೇ ಸೀಮಿತರಾದವರು. ಸಂಸಾರವು ಬಲು ಕ್ಷಣಿಕ. ಎಲ್ಲವೂ ಕೂಡ ಭಗವಂತನ ಅಧೀನವಾಗಿ ನಡೆದು ಹೋಗುತ್ತದೆ. ಹೀಗಿರುವಾಗ ಹೆಂಡತಿ ಮಕ್ಕಳ ಮೇಲೆ ವಿಪರೀತವಾದ ಅಭಿಮಾನವೇಕೆ? ಅವರಿಗೋಸ್ಕರ ಸಮಯವನ್ನು ವ್ಯರ್ಥ-ಮಾಡುವುದೇಕೆ? ಇದನ್ನು ವಿವೇಚನೆ ಮಾಡಿ, ಸಂಸಾರದಲ್ಲಿ ಅನುರಕ್ತನಾಗದೇ ಕರ್ತವ್ಯದೃಷ್ಟಿಯಿಂದಷ್ಟೇ ಬದುಕಲು ಕಲಿಯಬೇಕು.

ನೈವಾಸ್ಯ ಕಶ್ಚಿದ್ ಭವಿತಾ ನಾಯಂ ಭವತಿ ಕಸ್ಯಚಿತ್ ।
ಪಥಿ ಸಂಗತಮೇವೇದಂ ದಾರಬಂಧುಸುಹೃದ್ಗಣೈಃ ॥೩೯॥

ಈ ಜಗತ್ತಿನಲ್ಲಿ ಯಾರೊಬ್ಬನೂ ಕೂಡ ಯಾರಿಗೂ ಉಪಕಾರಿಯಲ್ಲ. ಯಾರಿಗೂ ಸಂಬಂಧಪಟ್ಟವನೂ ಅಲ್ಲ. ತಮ್ಮ ಕರ್ಮಕ್ಕೆ ಅನುಗುಣವಾಗಿ ದಾರಿಯಲ್ಲಿ ಪ್ರಯಾಣ ಮಾಡುವವರ ಜೊತೆ ಕೂಡುವಂತೆ ಇವರೂ ಕೂಡ ಕೂಡಿ ಆಗಲುತ್ತಾರೆ.

ವಿವರಣೆ - ತಂದೆ, ತಾಯಿ, ಹೆಂಡತಿ, ಮಕ್ಕಳು, ಸ್ನೇಹಿತರು, ಬಂಧುಗಳು ಇವರೆಲ್ಲರೂ ಕೂಡ ಅತ್ಯಂತ ಕ್ಷಣಿಕರು. ದಾರಿಯಲ್ಲಿ ನಡೆದು ಹೋಗುವಾಗ ಅನೇಕರು ನಮ್ಮ ಜೊತೆ ಕೆಲವು ಕ್ಷಣಗಳ ಕಾಲ ಇರುತ್ತಾರೆ. ಅನಂತರ ಅವರು ಬೇರೆ ಊರಿಗೆ ಹೋಗುತ್ತಾರೆ. ನಾವು ನಮ್ಮ ಊರಿಗೆ ತೆರಳುತ್ತೇವೆ. ಅದರಂತೆ ಮೋಕ್ಷದ ದಾರಿಯಲ್ಲಿ ಸಾಗುವಾಗ, ಈ ಹೆಂಡತಿ, ಮಕ್ಕಳು ಮೊದಲಾದವರೆಲ್ಲರೂ ಕೆಲವು ಕಾಲವಷ್ಟೇ ನಮ್ಮ ಜೊತೆ ಇರುತ್ತಾರೆ. ಇದನ್ನೆಲ್ಲಾ ಆಲೋಚನೆ ಮಾಡಿ, ಮನಸ್ಸನ್ನು ಸ್ಥಿರಗೊಳಿಸಬೇಕು.

ಕಾಽಽಪಂ ಕಾಽಽಸ್ಮಿ ಗಮಿಷ್ಯಾಮಿ ಕೋ ನ್ವಹಂ ಕಿಮಿಹಾಸ್ಥಿತಃ ।
ಕಸ್ಮಾತ್ ಕಮನುಶೋಚೇಯಮಿತ್ಯೇವಂ ಸ್ಥಾಪಯೇನ್ಮನಃ ॥೪೦॥

ಆದ್ದರಿಂದ ಯಾರು ವಿವೇಕಿಯೋ, ಅವನು ತನ್ನ ಮನಸ್ಸಿನಲ್ಲಿ ನಾನು ಎಲ್ಲಿದ್ದೇನೆ? ಎಲ್ಲಿಗೆ ಹೋಗುತ್ತಿದ್ದೇನೆ? ನಾನು ಯಾರು? ಇಲ್ಲಿಗೇಕೆ ಬಂದಿದ್ದೇನೆ?

ಯಾರಿಗೋಸ್ಕರ ಇಲ್ಲಿ ಇದ್ದೇನೆ? ಏತಕ್ಕಾಗಿ ಇದನ್ನೆಲ್ಲಾ ಆಲೋಚನೆ ಮಾಡುತ್ತಿದ್ದೇನೆ? ಹೀಗೆ ತನ್ನಂತರಂಗದಲ್ಲಿ ಆತ್ಮವಿಮರ್ಶೆಯನ್ನು ಮಾಡಿಕೊಂಡು ಮನಸ್ಸನ್ನು ಸ್ಥಿರಗೊಳಿಸಬೇಕು.

ಅನಿತ್ಯೇ ಪ್ರಿಯಸಂವಾಸೇ ಸಂಸಾರೇ ಚಕ್ರವದ್ ಗತೌ।
ನ ದೃಷ್ಟಪೂರ್ವಂ ಪ್ರತ್ಯಕ್ಷಂ ಪರಲೋಕಂ ವಿದುರ್ಬುಧಾಃ॥
ಆತಮಾಂಸ್ತ್ವನತಿಕ್ರಮ್ಯ ಶ್ರದ್ಧಾತವ್ಯಂ ಬುಭೂಷತಾ ॥೪೧॥

ಈ ಸಂಸಾರವು ಚಕ್ರದಂತೆ ಸುತ್ತುತ್ತಿದೆ. ಇದರಲ್ಲಿ ಪ್ರಿಯವಾದವರ ಜೊತೆ ಸೇರುವಿಕೆ ಅನಿತ್ಯವಾಗಿದೆ, ಶಾಶ್ವತವಲ್ಲ. ಯಾರು ವಿವೇಕಿಯೋ, ಅವನು ಬಂಧುಮರಣದಿಂದ ದುಃಖಿಸಬಾರದು. ಪರಲೋಕವು ಕಣ್ಣಿಗೆ ಕಾಣಿಸುವುದಲ್ಲ. ಯಾರು ಪರಲೋಕಕ್ಕೆ ಆಸೆ ಪಡುತ್ತಾನೋ, ಅವನು ಶಾಸ್ತ್ರಮಾರ್ಯಾದೆಯನ್ನು ಮೀರದೇ ಅದರಲ್ಲಿ ನಂಬಿಕೆಯನ್ನಿಡಬೇಕೆಂದು ವಿದ್ವಾಂಸರು ಹೇಳುತ್ತಾರೆ. ಆದರೆ ಯಾರು ಶ್ರೇಯಸ್ಸನ್ನು ಅಪೇಕ್ಷಿಸುತ್ತಾನೋ, ಅವನು ವೇದಗಳಲ್ಲಿ ಹೇಳಿದ್ದನ್ನು ಉಲ್ಲಂಘನೆ ಮಾಡದೇ ಶ್ರದ್ಧೆಯನ್ನು ಹೊಂದಬೇಕು.

ವಿವರಣೆ - ನಾವು ಪರಲೋಕವನ್ನು ನೋಡದೇ ಇರಬಹುದು. ಅಥವಾ ನೋಡಿದ್ದು ನೆನಪಿಲ್ಲದೇ ಇರಬಹುದು. ಆದರೆ ಯಾರು ಧರ್ಮಾಧರ್ಮಗಳ ಬಗ್ಗೆ, ಪರಲೋಕದ ಬಗ್ಗೆ ಅನುಭವದಿಂದ ಮಾತನಾಡುತ್ತಾರೋ, ಅಂಥ ಋಷಿಮುನಿಗಳ ಮಾತಿನಲ್ಲಿ ಶ್ರದ್ಧೆಯನ್ನಿಡಬೇಕು. ವೇದೋಕ್ತವಾದ ಕರ್ಮಗಳನ್ನು ಆಚರಿಸುತ್ತಾ, ವೇದವು ಹೇಳಿಕೊಟ್ಟ ಮಾರ್ಗದಲ್ಲಿ ಸಾಗಬೇಕು. ಅಂಥವನು ಮಾತ್ರ ನಿಜವಾದ ವಿವೇಕಿ ಎಂಬುದಾಗಿ ಕರೆಸಿಕೊಳ್ಳುತ್ತಾನೆ.

ಕುರ್ವೀತ ಪಿತೃದೈವತ್ಯಂ ಧರ್ಮಾಣಿ ಚ ಸಮಾಚರೇತ್।
ಯಜೇಚ್ಚ ವಿದ್ವಾನ್ ವಿಧಿವತ್ ತ್ರಿವರ್ಗಂ ಚಾಪ್ಯನುವ್ರಜೇತ್ ॥೪೨॥

ಯಾರು ನಿಜವಾದ ಜ್ಞಾನಿಯೋ, ಅವನು ಪಿತೃಸಂಬಂಧಿಯಾದ ಶ್ರಾದ್ಧ, ತರ್ಪಣ ಮೊದಲಾದ ಕಾರ್ಯಗಳನ್ನು ಮಾಡಬೇಕು. ದೇವತೆಗಳಿಗೆ ಸಂಬಂಧಪಟ್ಟ

ಧರ್ಮಾಚರಣೆಗಳನ್ನು ಮಾಡಬೇಕು. ಹಾಗೂ ಯಾಗದ ಮೂಲಕ ಎಲ್ಲಾ ದೇವತೆಗಳನ್ನು ಸಂತೋಷ ಪಡಿಸಬೇಕು. ಹೀಗೆ ಧರ್ಮ, ಅರ್ಥ, ಕಾಮಗಳಲ್ಲಿ ಅನುರಕ್ತನಾಗಬೇಕು.

ಸನ್ನಿಮಜ್ಜೇಜ್ಜಗದಿದಂ ಗಂಭೀರೇ ಕಾಲಸಾಗರೇ।
ಜರಾಮೃತುಯಮಹಾಗ್ರಾಹೇ ನ ಕಶ್ಚಿದವಬುಧ್ಯತೇ ॥೪೩॥

ಈ ಕಾಲವೆಂಬ ಸಾಗರವು ಮುಪ್ಪು ಮತ್ತು ಮರಣಗಳೆಂಬ ಮೊಸಳೆಗಳಿಂದ ಕೂಡಿದೆ. ಈ ಸಾಗರದಲ್ಲಿ ಜಗತ್ತೇ ಮುಳುಗಿ ಹೋಗುತ್ತಿದೆ. ಆದರೆ ಯಾವ ಮನುಷ್ಯನೂ ಕೂಡ ಇದನ್ನು ತಿಳಿದುಕೊಳ್ಳುತ್ತಿಲ್ಲ.

ಆಯುರ್ವೇದಮಧೀಯಾನಾಃ ಕೇವಲಂ ಸಪರಿಗ್ರಹಮ್।
ದೃಶ್ಯಂತೇ ಬಹವೋ ವೈದ್ಯಾ ವ್ಯಾಧಿಭಿಃ ಸಮಭಿಪ್ಲುತಾಃ ॥೪೪॥

ಯಾರು ಆಯುರ್ವೇದವನ್ನು ಚೆನ್ನಾಗಿ ತಿಳಿದು ವೈದ್ಯರಾಗಿದ್ದಾರೋ, ಅಂಥವರೂ ಕೂಡ ರೋಗಪೀಡಿತರಾಗಿರುವುದನ್ನು ಕಣ್ಣಾರೆ ಕಾಣುತ್ತಿದ್ದೇವೆ. ಅವರಷ್ಟೇ ಅಲ್ಲದೇ ಅವರ ಪರಿವಾರದವರೂ ಕೂಡ ರೋಗಗಳಿಂದ ಪೀಡಿತರಾಗಿದ್ದಾರೆ.

ತೇ ಪಿಬಂತಃ ಕಷಾಯಾಂಶ್ಚ ಸರ್ಪೀಂಷಿ ವಿವಿಧಾನಿ ಚ।
ನ ಮೃತ್ಯುಮತಿವರ್ತಂತೇ ವೇಲಾಮಿವ ಮಹೋದಧಿಃ ॥೪೫॥

ಆ ಆಯುರ್ವೇದ ವೈದ್ಯರು ರೋಗದ ನಿವಾರಣೆಗಾಗಿ ಅನೇಕ ಬಗೆಯ ಕಷಾಯಗಳನ್ನು ಕುಡಿಯುತ್ತಾರೆ. ಔಷಧಿಸಸ್ಯಗಳಿಂದ ಬೆರೆಸಿದ ಘೃತಗಳನ್ನು ಕುಡಿಯುತ್ತಾರೆ. ಆದರೆ ಸಮುದ್ರವು ತೀರವನ್ನು ದಾಟಿ ಹೊರಗೆ ಬಾರದೇ ಇರುವಂತೆ ಅವರೂ ಕೂಡ ಮೃತ್ಯುವನ್ನು ದಾಟಿ, ಹೊರಗಡೆ ಬರಲು ಸಾಧ್ಯವಾಗುವುದಿಲ್ಲ.

ವಿವರಣೆ - ಸಾಮಾನ್ಯವಾಗಿ ಆಯುರ್ವೇದ ವೈದ್ಯರು ಮುಪ್ಪು ಬರುವುದಿಲ್ಲ, ಯಾವುದೇ ರೋಗಗಳು ಬರುವುದಿಲ್ಲ ಎಂದು ಹೇಳುತ್ತಾ ಅನೇಕ ಬಗೆಯ ಔಷಧಿಗಳನ್ನು ನೀಡುತ್ತಾರೆ. ಮತ್ತೊಬ್ಬರಿಗೆ ಚಿಕಿತ್ಸೆಗಳನ್ನು ಮಾಡುತ್ತಾರೆ. ಆದರೆ ಸ್ವತಃ

ತಾವೇ ಆ ಮೃತ್ಯುಕೂಪದಲ್ಲಿ ಬಿದ್ದಿರುತ್ತಾರೆ. ತಮಗೆ ಅಂಟಿಕೊಂಡ ರೋಗಗಳನ್ನು ಪರಿಹರಿಸಿಕೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲ. ವೈದ್ಯವಿಜ್ಞಾನವು ಪ್ರತಿಯೊಂದಕ್ಕೂ ಉಪಾಯವನ್ನು ಹೇಳಿದೆ. ಅದೆಲ್ಲವನ್ನೂ ಅನುಷ್ಠಾನಕ್ಕೆ ತಂದರೂ, ಇವರಿಂದ ರೋಗವನ್ನು ದಾಟಲು ಸಾಧ್ಯವಾಗುತ್ತಿಲ್ಲ. ಮರಣವನ್ನೂ ಕೂಡ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದರಿಂದಲೇ ನಮಗೆ ಸ್ಪಷ್ಟವಾಗುತ್ತದೆ. ಎಲ್ಲವೂ ಕೂಡ ಕಾಲದ ಅಧೀನ ಎಂದು.

ರಸಾಯನವಿದಶ್ಚೈವ ಸುಪ್ರಯುಕ್ತರಸಾಯನಾಃ।
ದೃಶ್ಯಂತೇ ಜರಯಾ ಭಗ್ನಾ ನಗಾ ನಾಗೈರಿವೋತ್ತಮೈಃ ॥೪೬॥

ವೈದ್ಯರುಗಳು ಆಯುರ್ವೇದಶಾಸ್ತ್ರವನ್ನು ಅಧ್ಯಯನಮಾಡಿ, ರಸಾಯನಗಳನ್ನು ಸಿದ್ಧಪಡಿಸುತ್ತಾರೆ. ಮತ್ತು ಆಯುರ್ವೇದಶಾಸ್ತ್ರ ಹೇಳಿದ ಪ್ರಕಾರದಲ್ಲಿಯೇ ಎಲ್ಲಾ ಪಥ್ಯಗಳನ್ನು ಮಾಡುತ್ತಾ ಔಷಧಿಗಳನ್ನು ಸೇವಿಸುತ್ತಾರೆ. ಆದರೂ ಕೂಡ ವೃಕ್ಷಗಳು ಬಲಿಷ್ಠವಾದ ಆನೆಯ ಶಕ್ತಿಯಿಂದ ಹೇಗೆ ಮುರಿದುಬಿಡುತ್ತವೋ, ಹಾಗೆಯೇ ಈ ವೈದ್ಯರೂ ಕೂಡ ಮುಪ್ಪಿನಿಂದ ಭಗ್ನರಾಗುತ್ತಾರೆ.

ತಥೈವ ತಪಸೋಪೇತಾಃ ಸ್ವಾಧ್ಯಾಯಾಭ್ಯಸನೇ ರತಾಃ।
ದಾತಾರೋ ಯಜ್ಞಶೀಲಾಶ್ಚ ನ ತರಂತಿ ಜರಾಂತಕೌ ॥೪೭॥

ಇದರಂತೆ ಋಷಿಮುನಿಗಳು ತಪಸ್ಸಿನಲ್ಲಿ ನಿರತರಾಗಿರುತ್ತಾರೆ. ವೇದಶಾಸ್ತ್ರಗಳ ಅಧ್ಯಯನದಲ್ಲಿ ಆಸಕ್ತರಾಗಿರುತ್ತಾರೆ. ಇವರುಗಳು ಮತ್ತು ದಾನಿಗಳು, ಯಜ್ಞಶೀಲರು ಆ ವೈದ್ಯರಂತೆಯೇ ಮುಪ್ಪು ಮತ್ತು ಸಾವುಗಳನ್ನು ದಾಟಲು ಸಮರ್ಥರಾಗುವುದಿಲ್ಲ.

ನ ಹ್ಯಹಾನಿ ನಿವರ್ತಂತೇ ನ ಮಾಸಾ ನ ಪುನಃ ಸಮಾಃ।
ಜಾತಾನಾಂ ಸರ್ವಭೂತಾನಾಂ ನ ಪಕ್ಷಾ ನ ಪುನಃ ಕ್ಷಪಾಃ ॥೪೮॥

ಕಳೆದು ಹೋದ ದಿನಗಳು ಪುನಃ ಬರುವುದಿಲ್ಲ. ಕಳೆದು ಹೋದ ರಾತ್ರಿಗಳು, ಪಕ್ಷಗಳು, ಮಾಸಗಳು, ವರ್ಷಗಳು ಎಂದೆಂದೂ ಹಿಂದೆ ತಿರುಗಿ ಬರುವುದಿಲ್ಲ.

ಟಿಪ್ಪಣಿ - ನಹ್ಯಹಾನಿ ನಿವರ್ತಂತ ಇತ್ಯತ್ರ **ಅಹಾನಿ** ಗತಾಹಾನಿ **ನ ನಿವರ್ತಂತೇ** ಪುನರ್ನಾಯಾಂತಿ। ಏವಮುತ್ತರತ್ರಾಪಿ।

'ನಹ್ಯಹಾನಿ' ಎಂದರೆ ಕಳೆದ ದಿನಗಳು ಎಂದರ್ಥ. ನ **ನಿವರ್ತಂತೇ' ಎಂದರೆ ಪುನಃ ಬರುವುದಿಲ್ಲ ಎಂದರ್ಥ.**

ವಿವರಣೆ - ಆಯುಷ್ಯವು ಪ್ರತಿಕ್ಷಣವು ಕ್ಷೀಣಿಸುತ್ತದೆ. ಕಾಲದ ಬೆಲೆಯನ್ನು ಅರ್ಥಮಾಡಿಕೊಳ್ಳದೇ ಆಯುಷ್ಯದ ಹರಣವನ್ನೇ ಎಲ್ಲರೂ ಮಾಡುತ್ತಾರೆ. ಸೂರ್ಯಾಸ್ತವಾಯಿತೆಂದರೆ ಸಂತೋಷ ಪಡಬಾರದು. ಈ ದಿನದಲ್ಲಿ ನಾನು ಯಾವುದೇ ಸಾಧನೆಯನ್ನು ಮಾಡಲಿಲ್ಲ ಎಂಬುದಾಗಿ ಎಚ್ಚೆತ್ತುಕೊಂಡು, ಸಮಯ -ಸಾರ್ಥಕದ ಬಗ್ಗೆ ಗಮನವನ್ನು ಹರಿಸಬೇಕು. ಉಳಿದವರು ರೋಗರುಜಿನಗಳಿಂದ ಮರಣಗಳಿಂದ ಬಾಧಿತರಾಗುತ್ತಿದ್ದಾರೆ. ನಾನೂ ಕೂಡ ಇಂಥ ಸನ್ನಿವೇಶಕ್ಕೆ ಮುಂದೊಂದು ದಿನ ಭಾಗಿಯಾಗುತ್ತೇನೆ. ಆದ್ದರಿಂದ ಈಗ ನನಗೆ ದೊರೆತ ಸಮಯವನ್ನು ಸಾರ್ಥಕ ಮಾಡಿಕೊಳ್ಳಬೇಕು ಯಾವುದೇ ರೀತಿಯಲ್ಲಿ ಆಲಸ್ಯವನ್ನು ನಾನು ಮಾಡಬಾರದು ಎಂಬುದಾಗಿ ಎಲ್ಲಿಯ ತನಕ ಮನುಷ್ಯನು ಎಚ್ಚೆತ್ತು-ಕೊಳ್ಳುವುದಿಲ್ಲವೋ, ಅಲ್ಲಿಯ ತನಕವೂ ಅವನು ಅವಿವೇಕಿಯಾಗಿಯೇ ಬದುಕು-ತ್ತಾನೆ.

ಸೋಽಯಂ ವಿಪುಲಮಧ್ವಾನಂ ಕಾಲೇನ ಧ್ರುವಮಧ್ರುವಃ।
ನರೋಽವಶಃ ಸಮಭ್ಯೇತಿ ಸರ್ವಭೂತನಿಷೇವಿತಮ್ ॥೪೯॥

ಅತ್ಯಂತ ಅಸ್ಥಿರನಾದ, ಅಸ್ವತಂತ್ರನಾದ ಮನುಷ್ಯನ ಕಾಲವು ಸನ್ನಿಹಿತವಾದಾಗ ಎಲ್ಲಾ ಪ್ರಾಣಿಗಳು ತುತ್ತಾಗುವ ವಿಶಾಲವಾದ ಆ ಮೃತ್ಯುವಿನ ದಾರಿಯನ್ನು ಹಿಡಿ-ಯುತ್ತಾನೆ.

ದೇಹೋ ವಾ ಜೀವತೋಽಪ್ಯೇತಿ ಜೀವೋ ವಾಪ್ಯೇತಿ ದೇಹತಃ।
ಪಥಿ ಸಂಗತಮೇವೇದಂ ದಾರೈರನ್ಯೈಶ್ಚ ಬಂಧುಭಿಃ ॥೫೦॥

ಒಂದೋ ದೇಹವು ಜೀವನನ್ನು ಬಿಡುತ್ತದೆ. ಅಥವಾ ಜೀವನು ದೇಹವನ್ನು ಬಿಡುತ್ತಾನೆ. ಇದರ ನಡುವೆ ಸೇರುವ ಹೆಂಡತಿ ಮಕ್ಕಳೆಂಬ ಸಂಸರ್ಗವು ಕೇವಲ ಪ್ರಯಾಣಿಕರ ಸೇರುವಿಕೆಯಂತೆ ಅಶಾಶ್ವತವಾಗಿದೆ.

ಟಿಪ್ಪಣಿ - ದೇಹೋ ವಾ ಜೀವತಃ ಇತ್ಯತ್ರ **ಜೀವತಃ** ಜೀವಾತ್ **ದೇಹೋ** ಗಚ್ಛೇತ್, ಶಿರಶ್ಛೇದದಾಹಾದೌ ದೇಹಸ್ಯೈವ ಪ್ರಾಗ್ ಗಮನಾತ್। **ಜೀವೋಽಪ್ಯೇತಿ** ದೇಹತಃ ಯೋಗಾಭ್ಯಾಸಾದಿನಾ ಮರಣೇ ಸತಿ ದೇಹತಃ ಜೀವಃ ಅಪ್ಯೇತಿ ನಾಶಂ ಪ್ರಾಪ್ನೋತಿ।

'ಜೀವಿತಃ' ಜೀವಿಸಲ್ಪಟ್ಟ, 'ದೇಹಃ' ದೇಹವು ನಾಶವಾಗುತ್ತದೆ. ಶಿರಶ್ಛೇದ ಮತ್ತು ದಾಹಾದಿಗಳಲ್ಲಿ ದೇಹವೇ ಮೊದಲು ನಾಶವಾಗುತ್ತದೆ. ಅನಂತರ ಜೀವನು ತೆರಳುತ್ತಾನೆ. ಯೋಗಾಭ್ಯಾಸಗಳಿಂದ ಮರಣವಾದಾಗ ಮೊದಲು ಜೀವನು ಹೊರಡುತ್ತಾನೆ. ಅನಂತರ ದೇಹವು ನಾಶವಾಗುತ್ತದೆ.

ನಾಯಮತ್ಯಂತಸಂವಾಸೋ ಲಭ್ಯತೇ ಜಾತು ಕೇನಚಿತ್ ।
ಅಪಿ ಸ್ವೇನ ಶರೀರೇಣ ಕಿಮುತಾನ್ಯೇನ ಕೇನಚಿತ್ ॥೫೧॥

ಒಬ್ಬ ಮನುಷ್ಯನು ಮತ್ತೊಬ್ಬ ಮನುಷ್ಯನ ಜೊತೆ ಸ್ನೇಹದಿಂದ ಹೆಚ್ಚು ಕಾಲ ಬದುಕಲು ಸಾಧ್ಯವಿಲ್ಲ. ಬೇರೆ ಎಲ್ಲರಿಗಿಂತಲೂ ಹೆಚ್ಚು ಪ್ರೀತಿಯನ್ನು ಮಾಡುವ ತನ್ನ ಶರೀರದಲ್ಲಿಯೇ ತಾನು ಹೆಚ್ಚು ಕಾಲವಿರಲು ಸಾಧ್ಯವಾಗುವುದಿಲ್ಲ. ಹೀಗಿರುವಾಗ ಮತ್ತೊಬ್ಬನ ಜೊತೆ ಹೆಚ್ಚು ಕಾಲ ಇರುವುದಿಲ್ಲವೆಂದು ಹೇಳುವುದೇನಿದೆ.

ವಿವರಣೆ - ಪ್ರೀತ್ಯಾಸ್ಪದರು ಅಗಲಿದಾಗ ದುಃಖ ಪಡುವುದು, ಒಂದಾದಾಗ ಸಂತೋಷಪಡುವುದು, ಇದು ಅವಿವೇಕಿಗಳ ವರ್ತನೆ. ಏಕೆಂದರೆ 'ಯಾರಿಗೆ ಯಾರಿಗುಂಟು ಎರವಿನ ಸಂಸಾರ' ಎಂಬ ನಾಣ್ನುಡಿಯಂತೆ ಪ್ರೀತ್ಯಾಸ್ಪದನಾದ ವ್ಯಕ್ತಿಯಿದ್ದರೂ ಅವನ ಜೊತೆ ಅಭಿಮಾನವನ್ನು ಬೆಳಸಿಕೊಳ್ಳದೇ ಬದುಕಬೇಕು. ಆಗಷ್ಟೇ ಅಗಲಿದಾಗ ಯಾವುದೇ ದುಃಖವು ಉಂಟಾಗುವುದಿಲ್ಲ. ತನ್ನ ಶರೀರವನ್ನೂ ಕೂಡ ಹೆಚ್ಚು ಪ್ರೀತಿ ಮಾಡಬಾರದು. ಸಾಧನೆಗೆ ಅನುಕೂಲವಾಗಲು ಮಾತ್ರ ಅದನ್ನು ಉಪಯೋಗಿಸಿಕೊಳ್ಳಬೇಕು. ಒಂದು ವಾಹನವನ್ನು ಉಪಯೋಗಿಸಿಕೊಂಡು ನಾವು ಎಲ್ಲಿಗೆ ತಲುಪಬೇಕೋ, ಅಲ್ಲಿಗೆ ತಲುಪುತ್ತೇವೆ. ತಲುಪುವ ತನಕ ಮಾತ್ರ ವಾಹನವು ನಮಗೆ ಅನಿವಾರ್ಯವಾಗುತ್ತದೆ. ನಮ್ಮ ಉದ್ದಿಷ್ಟವಾದ ಸ್ಥಳವು ದೊರೆತ ಮೇಲೆ ವಾಹನವನ್ನು ಯಾವುದೇ ಅಭಿಮಾನವಿಲ್ಲದೆ ಬಿಟ್ಟು ಹೇಗೆ ತೆರಳುತ್ತೇವೋ, ಅದರಂತೆ ಈ ದೇಹವೂ ಕೂಡ ಒಂದು ಜನ್ಮದಿಂದ ಮತ್ತೊಂದು ಜನ್ಮದ ತನಕ ನಡೆಯಲು ವಾಹನವಾಗಿದೆ. ಆದ್ದರಿಂದ ದೇಹದ ವಿಷಯದಲ್ಲೂ ಹೆಚ್ಚು ಅಭಿಮಾನವನ್ನು ಮಾಡಬಾರದು.

ಕ್ವನು ತೇऽದ್ಯ ಪಿತಾ ರಾಜನ್ ಕ್ವನು ತೇऽದ್ಯ ಪಿತಾಮಹಃ।
ನ ತ್ವಂ ಪಶ್ಯಸಿ ತಾನದ್ಯ ನ ತ್ವಾಂ ಪಶ್ಯಂತಿ ತೇऽಪಿ ಚ ॥೫೨॥

ಪಾಪರಹಿತನಾದ ಜನಕರಾಜನೇ! ನಿನ್ನ ತಂದೆಯು ಎಲ್ಲಿದ್ದಾನೆ ತಿಳಿಸು. ನಿನ್ನ ತಾತಂದಿರು ಎಲ್ಲಿದ್ದಾರೆ ತಿಳಿಸು. ಯಾರೂ ಸಹ ಇಂದು ನಿನ್ನ ಕಣ್ಣಿಗೆ ಕಾಣಿಸುತ್ತಿಲ್ಲ. ನೀನೂ ಸಹ ಅವರ ಕಣ್ಣಿಗೆ ಕಾಣಿಸುತ್ತಿಲ್ಲ.

ವಿವರಣೆ - ನಿನ್ನ ತಂದೆ ತಾತಂದಿರು, ನಿನ್ನ ಜೊತೆ ಇಂದು ಹೇಗೆ ಇರುವುದಿಲ್ಲವೋ, ಅದರಂತೆ ಮುಂದೊಂದು ದಿನ ಹೆಂಡತಿ, ಮಕ್ಕಳು, ಮೊಮ್ಮಕ್ಕಳಿಂದ ದೂರನಾಗುವಿ. ಅಂದು ಅವರನ್ನು ನೀನು ನೋಡಲು ಸಾಧ್ಯವಿಲ್ಲ. ನಿನ್ನನ್ನು ಅವರು ನೋಡಲು ಸಾಧ್ಯವಿಲ್ಲ. ಆದ್ದರಿಂದ ಹೆಂಡತಿ ಮಕ್ಕಳ ಮೇಲೆ ಅಭಿಮಾನವನ್ನು ಪರಿತ್ಯಾಗ ಮಾಡಬೇಕು.

ನ ಹ್ಯೇವ ಪುರುಷೋ ದ್ರಷ್ಟಾ ಸ್ವರ್ಗಸ್ಯ ನರಕಸ್ಯ ವಾ।
ಆಗಮಸ್ತು ಸತಾಂ ಚಕ್ಷುರ್ನೃಪತೇ ತಮಿಹಾಚರ ॥೫೩॥

ನರೋತ್ತಮನೇ! ಯಾರೇ ಒಬ್ಬ ಪುರುಷನು ಮಾಂಸಮಯವಾದ ಈ ಕಣ್ಣಿನಿಂದ ಅತೀಂದ್ರಿಯವಾದ ಸ್ವರ್ಗವನ್ನು ಕಾಣಲು ಸಾಧ್ಯವಿಲ್ಲ. ನರಕವನ್ನೂ ಕೂಡ ನೋಡಲು ಸಾಧ್ಯವಿಲ್ಲ. ಸಜ್ಜನರಿಗೆ ಸ್ವರ್ಗ ಹಾಗೂ ನರಕಗಳನ್ನು ನೋಡುವ ಕಣ್ಣು ಎಂದರೆ ಅದು ವೇದ ಮಾತ್ರ. ಅಂಥ ಕಣ್ಣಿನಂತಿರುವ ವೇದದಲ್ಲಿ ಹೇಳಲ್ಪಟ್ಟ ಕರ್ತವ್ಯಗಳನ್ನು ಆಚರಿಸುವುದರಲ್ಲಿ ಆಸಕ್ತನಾಗು.

ವಿವರಣೆ - ದೇವರು, ಧರ್ಮ, ಸ್ವರ್ಗ, ನರಕ ಇವುಗಳನ್ನು ವೇದದಿಂದಷ್ಟೇ ತಿಳಿಯಲು ಸಾಧ್ಯ. ವೇದವು ಹೇಳುವ ವಿಷಯದಲ್ಲಿ ವಿಶ್ವಾಸವನ್ನಿಟ್ಟು, ನರಕಕ್ಕೆ ಹೆದರಿ ಸ್ವರ್ಗದಲ್ಲಿ ಅನುರಕ್ತರಾಗಿ ನಾವು ನಮ್ಮ ಕರ್ತವ್ಯಗಳಲ್ಲಿ ತೊಡಗಬೇಕು. ಸ್ವರ್ಗಾದಿಗಳನ್ನು ನೋಡಲು ನಮಗಿರುವ ಕಣ್ಣು ಎಂದರೆ ವೇದಮಾತ್ರ. ಯಾರು ಈ ವೇದವನ್ನು ಓದುವುದಿಲ್ಲವೋ, ಅವರು ಕಣ್ಣಿಲ್ಲದ ಕುರುಡನಂತೆ ಪ್ರಪಾತಕ್ಕೆ ಬಿದ್ದು ಅಧೋಗತಿಯನ್ನೇ ಹೊಂದುತ್ತಾನೆ.

ಚರಿತಬ್ರಹ್ಮಚರ್ಯೋ ಹಿ ಪ್ರಜಾಯೇತ ಯಜೇತ ಚ।
ಪಿತೃದೇವಮಹರ್ಷೀಣಾಮಾನೃಣ್ಯಾದನಸೂಯಕಃ ॥೫೪॥

ತ್ರೈವರ್ಣಿಕನಾದ ಪುರುಷನು ಬ್ರಹ್ಮಚರ್ಯ ಆಶ್ರಮವನ್ನು ನಿಷ್ಠೆಯಿಂದ ಪರಿಪಾಲನೆ ಮಾಡಬೇಕು. ಆ ಸಂದರ್ಭದಲ್ಲಿ ಗುರುಶುಶ್ರೂಷೆಯನ್ನು ಮಾಡುತ್ತಾ, ವೇದವನ್ನು ಅಧ್ಯಯನ ಮಾಡಬೇಕು. ವೇದಾಂಗಗಳನ್ನೂ ಕೂಡ ಅಧ್ಯಯನ ಮಾಡಬೇಕು. ಜೀವನದ ಪ್ರಾರಂಭದಲ್ಲಿ ಹೀಗೆ ಬ್ರಹ್ಮಚರ್ಯ ಆಶ್ರಮವನ್ನು ಪಾಲನೆ ಮಾಡಿದ ಮೇಲೆ, ಗೃಹಸ್ಥಾಶ್ರಮವನ್ನು ಸ್ವೀಕಾರ ಮಾಡಬೇಕು. ಗೃಹಸ್ಥಾಶ್ರಮವನ್ನು ತೆಗೆದುಕೊಂಡ ಮೇಲೆ ಪಿತೃಯಜ್ಞ, ದೇವಯಜ್ಞ, ಮನುಷ್ಯಯಜ್ಞಗಳನ್ನು ಮಾಡುವ ಮೂಲಕ ಋಣಪರಿಹಾರವನ್ನು ಮಾಡಿಕೊಳ್ಳಬೇಕು. ಪ್ರಜಾಸಂತಾನವನ್ನು ಅಭಿವೃದ್ಧಿಗೊಳಿಸಬೇಕು. ಯಜ್ಞಗಳನ್ನು ಆಚರಣೆ ಮಾಡಬೇಕು. ಪ್ರತಿಯೊಂದು ಕರ್ಮಗಳ ಹಿಂದೆ ಅಸೂಯೆಯೆಂಬ ದೋಷವು ಬರಬಾರದು.

ಟಿಪ್ಪಣಿ - ಪ್ರಜಾಯೇತ ಯಜೇತ ಚ ಇತ್ಯತ್ರ **ಪ್ರಜಾಯೇತ** ಪ್ರಜಾಂ ಜನಯೇತ್।

ಟಿಪ್ಪಣಿ - ತ್ರೈವರ್ಣಿಕನಾದ ಮನುಷ್ಯನು ಹುಟ್ಟಿದಾಗಿನಿಂದ ಸಾಯುವ ತನಕ ಹೇಗೆ ಸಾಧನೆಯನ್ನು ಮಾಡಿಕೊಳ್ಳಬೇಕು. ಬ್ರಹ್ಮಚರ್ಯ ಆಶ್ರಮದಲ್ಲಿ ಯಾವ ಧರ್ಮವನ್ನು ಮುಖ್ಯವಾಗಿ ಅನುಷ್ಠಾನ ಮಾಡಬೇಕು ಎಂಬುದರ ಬಗ್ಗೆ ಈ ಶ್ಲೋಕದಲ್ಲಿ ವಿಶ್ಲೇಷಣೆ ಮಾಡುತ್ತಿದ್ದಾರೆ. ಗುರುಶುಶ್ರೂಷೆ, ವೇದಾಧ್ಯಯನ, ವೇದಾಂಗಗಳ ಅಧ್ಯಯನ ಈ ಮೂರು ಬ್ರಹ್ಮಚಾರಿಗೆ ಆವಶ್ಯಕವಾದ ಕರ್ಮಗಳಾಗಿವೆ. ಗೃಹಸ್ಥಾಶ್ರಮಿಗೆ ಋಣಪರಿಹಾರ, ಸಂತಾನಾಭಿವೃದ್ಧಿ, ಅಧ್ಯಯನ, ಯಜನ ಮೊದಲಾದ ಕರ್ಮಗಳು ಅತ್ಯಂತ ಅವಶ್ಯಕವಾಗಿವೆ.

ಸ ಯಜ್ಞಶೀಲಃ ಪ್ರಜನೇ ನಿವಿಷ್ಟಃ
ಪ್ರಾಗ್ ಬ್ರಹ್ಮಚಾರೀ ಪ್ರವಿಭಕ್ತಪಕ್ಷಃ।
ಆರಾಧಯೇತ್ ಸ್ವರ್ಗಮಿಮಂ ಚ ಲೋಕಂ
ಪರಂ ಚ ಮುಕ್ತ್ವಾ ಹೃದಯವ್ಯಲೀಕಮ್ ॥೫೫॥

ಸಾಧಕನಾದವನು ಮೊದಲು ಬ್ರಹ್ಮಚರ್ಯವ್ರತವನ್ನು ಶ್ರದ್ಧೆಯಿಂದ ಅನುಷ್ಠಾನ ಮಾಡಬೇಕು. ವೇದಾಧ್ಯಯನವು ಮುಗಿದ ಮೇಲೆ ಗೃಹಸ್ಥಾಶ್ರಮವನ್ನು ಸ್ವೀಕಾರ ಮಾಡಿ, ಸಂತಾನವನ್ನು ಪಡೆಯಬೇಕು. ಕಣ್ಣಿನಿಂದ ಯಾವುದೇ ತಪ್ಪನ್ನು ಮಾಡಬಾರದು. ಹೃದಯದಲ್ಲಿ ಯಾವುದೇ ದೋಷವನ್ನು ಇಟ್ಟುಕೊಳ್ಳಬಾರದು. ಯಜ್ಞಶೀಲನಾಗಿರಬೇಕು. ಮೋಕ್ಷವನ್ನು ಬಯಸಬೇಕು. ಪರಮಾತ್ಮನನ್ನು ಆರಾಧನೆ ಮಾಡಬೇಕು.

ಟಿಪ್ಪಣಿ - ಯಜ್ಞವನ್ನು ಆಚರಣೆ ಮಾಡಿದರೆ ದೇವತೆಗಳು ತೃಪ್ತರಾಗುತ್ತಾರೆ. ತನ್ಮೂಲಕ ಭಗವಂತನೂ ಕೂಡ ತೃಪ್ತನಾಗುತ್ತಾನೆ. ಜೀವನದಲ್ಲಿ ಬ್ರಹ್ಮಚರ್ಯ ಆಶ್ರಮವನ್ನು ಮೊದಲು ಹೊಂದಿ, ಉತ್ತಮ ಜ್ಞಾನಿಯಾಗಿ ಅನಂತರ ಗೃಹಸ್ಥಾಶ್ರಮವನ್ನು ಸ್ವೀಕಾರ ಮಾಡಬೇಕು. ಅನೇಕ ಸತ್ಕರ್ಮಗಳನ್ನು ಆಚರಣೆ ಮಾಡುವ ಮೂಲಕ ಗೃಹಸ್ಥಾಶ್ರಮವನ್ನು ಸಾರ್ಥಕ ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ.

ಸಮ್ಯಗ್ ಹಿ ಧರ್ಮಂ ಚರತೋ ನೃಪಸ್ಯ
ದ್ರವ್ಯಾಣಿ ಚಾಭ್ಯಾಹರತೋ ಯಥಾವತ್ ।
ಪ್ರವೃತ್ತಧರ್ಮಸ್ಯ ಯಶೋಽಭಿವರ್ಧತೇ
ಸರ್ವೇಷು ಲೋಕೇಷು ಚರಾಚರೇಷು ॥೫೬॥

ಧರ್ಮವನ್ನು ಅಚ್ಚುಕಟ್ಟಾಗಿ ಅನುಷ್ಠಾನ ಮಾಡಬೇಕು. ಧರ್ಮಮಾರ್ಗದಲ್ಲಿ ಪ್ರಜಾಪರಿರಕ್ಷಣೆಯನ್ನು ಮಾಡಬೇಕು. ಆಯಾ ಪ್ರಜೆಗಳಿಗೆ ಬರುವ ಆದಾಯಕ್ಕೆ ಅನುಗುಣವಾಗಿ ತೆರಿಗೆಯನ್ನು ತೆಗೆದುಕೊಳ್ಳಬೇಕು. ಹೀಗೆ ಯಾರು ಧರ್ಮಮಾರ್ಗದಲ್ಲಿ ರಾಜ್ಯವನ್ನು ಪರಿರಕ್ಷಣೆ ಮಾಡುತ್ತಾನೋ, ಅಂಥ ರಾಜನ ಕೀರ್ತಿಯು ಎಲ್ಲ ಲೋಕಗಳಲ್ಲೂ ಕೂಡ ಹಬ್ಬುತ್ತದೆ.

ಟಿಪ್ಪಣಿ - ಕ್ಷತ್ರಿಯನಾದ ರಾಜನು ಏನು ಮಾಡಬೇಕೆಂಬುದನ್ನು ಈ ಶ್ಲೋಕವು ತಿಳಿಸುತ್ತಿದೆ. ತನ್ನ ವೈಯಕ್ತಿಕ ಅಭಿಪ್ರಾಯವನ್ನಿಟ್ಟುಕೊಂಡು ಒಬ್ಬರಲ್ಲಿ ಅನುರಾಗ, ಮತ್ತೊಬ್ಬರಲ್ಲಿ ದ್ವೇಷಗಳನ್ನು ಮಾಡಬಾರದು. ಎಲ್ಲ ಪ್ರಜೆಗಳನ್ನು ಅನುರಾಗದಲ್ಲಿಯೇ ಕಾಣಬೇಕು. ತನಗೆ ಅವಶ್ಯಕವಿದೆಯೆಂದು ತೆರಿಗೆಯನ್ನೂ ಕೂಡ ಬಹಳ

ಸ್ವೀಕಾರ ಮಾಡಬಾರದು. ಎಷ್ಟು ತೆರಿಗೆಯನ್ನು ತೆಗೆದುಕೊಂಡಾಗ ಪ್ರಜೆಗಳಿಗೆ ಕಷ್ಟವಾಗುವುದಿಲ್ಲವೋ, ಅಷ್ಟನ್ನು ಮಾತ್ರ ಸ್ವೀಕಾರ ಮಾಡಬೇಕು.

ಇತ್ಯೇವಮಾಜ್ಞಾಯ ವಿದೇಹರಾಜೋ
ವಾಕ್ಯಂ ಸಮಗ್ರಂ ಪರಿಪೂರ್ಣಹೇತುಃ।
ಅಶ್ಮಾನಮಾಮಂತ್ರ್ಯ ವಿಶುದ್ಧಬುದ್ಧಿಃ
ಯಯೌ ಗೃಹಂ ಸ್ವಂ ಪ್ರತಿ ಶಾಂತಶೋಕಃ ॥೫೭॥

ಹೀಗೆ ಶುದ್ಧವಾದ ಬುದ್ಧಿಯಿಂದ ಕೂಡಿದ ವಿದೇಹರಾಜನು ಅಶ್ಮಮುನಿಯು ಹೇಳಿದ ಯುಕ್ತಿಯಿಂದ ಕೂಡಿದ, ಸಮಗ್ರ ಉಪದೇಶವನ್ನು ಕೇಳಿದನು. ಅದರಿಂದ ಅವನಿಗಿರುವ ದುಃಖವೆಲ್ಲವೂ ಪರಿಹಾರವಾಯಿತು. ಆ ಅಶ್ಮಋಷಿಯ ಅಪ್ಪಣೆಯನ್ನು ಪಡೆದುಕೊಂಡು ತನ್ನ ಅರಮನೆಗೆ ಹಿಂತಿರುಗಿದನು.

ಟಿಪ್ಪಣಿ - ಇಲ್ಲಿಯ ತನಕ ಅಶ್ಮಮುನಿಯು ಜನಕರಾಜನಿಗೆ ಉಪದೇಶ ಮಾಡಿದ್ದನ್ನು ವೇದವ್ಯಾಸದೇವರು ಯುಧಿಷ್ಠಿರನಿಗೆ ತಿಳಿಸಿದರು. ಯುಧಿಷ್ಠಿರನೇ ! ಅಶ್ಮಮುನಿಯ ಯುಕ್ತಿಯುಕ್ತವಾದ ಉಪದೇಶವನ್ನು ಕೇಳಿರುವಿ ಅಲ್ಲವೇ? ಯಾವಾಗ ಸಂಪೂರ್ಣವಾಗಿ ಉಪದೇಶವನ್ನು ಪಡೆದನೋ, ಆಗ ಜನಕರಾಜನು ಬಹಳ ಸಂತೋಷ ಪಟ್ಟನು. ತನ್ನಲ್ಲಿರುವ ದುಃಖವೆಲ್ಲವನ್ನು ಪರಿಹಾರ ಮಾಡಿಕೊಂಡನು. ಮತ್ತು ರಾಜ್ಯಭಾರಕ್ಕಾಗಿ ತನ್ನ ಅರಮನೆಗೆ ಹೊರಟನು.

ತಥಾ ತ್ವಮಪ್ಯಚ್ಯುತ ಮುಂಚ ಶೋಕಂ
ಉತ್ತಿಷ್ಠ ಶಕ್ರೋಪಮ ಹರ್ಷಮೇಹಿ।
ಕ್ಷಾತ್ರೇಣ ಧರ್ಮೇಣ ಮಹೀ ಜಿತಾ ತೇ
ತಾಂ ಭುಂಕ್ಷ ಕುಂತೀಸುತ ಮಾ ವಿಷಾದೀಃ ॥೫೮॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ವ್ಯಾಸವಾಕ್ಯೇ ಅಶ್ಮಗೀತಂ ನಾಮ ಏಕೋನತ್ರಿಂಶೋಽಧ್ಯಾಯಃ ॥೨೯

ಯಾವುದೇ ದೋಷವಿಲ್ಲದ ಇಂದ್ರನಿಗೆ ಸಮಾನನಾದ ಕುಂತಿಪುತ್ರನೇ! ಅಶ್ಮ-

ಋಷಿಯು ಜನಕರಾಜನಿಗೆ ಮನಸ್ಸಿಗೆ ನಾಟುವಂತೆ ಉಪದೇಶವನ್ನು ಮಾಡಿದರು. ಇದರಿಂದ ಆ ಜನಕರಾಜನ ಶೋಕಮೋಹಗಳೆಲ್ಲವೂ ಪರಿಹಾರವಾದವು. ಮತ್ತು ಅದೇ ಪ್ರಭಾವದಿಂದ ನೀನೂ ಸಹ ಶೋಕವನ್ನು ಪರಿತ್ಯಾಗ ಮಾಡು. ಉತ್ಸಾಹ ಭರಿತನಾಗು. ಸಂತೋಷವನ್ನು ಹೊಂದು, ನಿನ್ನ ಧರ್ಮಕ್ಕೆ ಅನುಸಾರಿಯಾಗಿ ಭೂಮಂಡಲವನ್ನು ಜಯಿಸಿರುವಿ, ನಿನಗಾಗಿ ಒಲಿದ ಭೂಮಿಯ ಅವಹೇಳವನ್ನು ಮಾಡಬೇಡ. ನಿನ್ನ ಪರಾಕ್ರಮವೆಂಬ ಶುಲ್ಕದಿಂದ ಪಡೆದುಕೊಂಡ ಈ ಭೂಮಿಯನ್ನು ಅನುಭವಿಸು.

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು.

* * * * *

೩೦. ಮೂವತ್ತನೆಯ ಅಧ್ಯಾಯ

ವೈಶಂಪಾಯನಃ

ಅವ್ಯಾಹರತಿ ಕೌಂತೇಯೇ ಧರ್ಮಪುತ್ರೇ ಯುಧಿಷ್ಠಿರೇ।
ಗುಡಾಕೇಶೋ ಹೃಷೀಕೇಶಮಭ್ಯಭಾಷತ ಪಾಂಡವಃ ॥೧॥

ವೈಶಂಪಾಯನರು – ಎಲ್ಲ ಋಷಿಮುನಿಗಳು ಎಷ್ಟೇ ಸಮಾಧಾನ ಮಾಡಿದರೂ, ಯುಧಿಷ್ಠಿರನು ಏನನ್ನೂ ಮಾತನಾಡಲಿಲ್ಲ. ಮೌನವಾಗಿಯೇ ಕುಳಿತಿದ್ದ. ಹೀಗಿರುವಾಗ ಪಾಂಡುವಿನ ಪುತ್ರನಾದ ಅರ್ಜುನನು ಶ್ರೀಕೃಷ್ಣನನ್ನು ಕುರಿತು ಹೀಗೆ ಹೇಳುತ್ತಾನೆ

ಜ್ಞಾತಿಶೋಕಾಭಿಸಂತಪ್ತೋ ಧರ್ಮರಾಜಃ ಪರಂತಪಃ।
ಏಷ ಶೋಕಾರ್ಣವೇ ಮಗ್ನಸ್ತಮಾಶ್ವಾಸಯ ಮಾಧವ ॥೨॥

ಓ ಮಾಧವನೇ! ಶತ್ರುಗಳಿಗೆ ತಾಪವನ್ನು ಉಂಟುಮಾಡುವ ಧರ್ಮರಾಜನು ಈಗ ಜ್ಞಾತಿಗಳ ವಿಯೋಗದಿಂದ ಬಹಳ ದುಃಖವನ್ನು ಅನುಭವಿಸುತ್ತಿದ್ದಾನೆ. ದುಃಖಸಾಗರದಲ್ಲಿಯೇ ಮುಳುಗಿದ್ದಾನೆ. ಇಂಥ ನಮ್ಮಣ್ಣನಾದ ಧರ್ಮರಾಜನಿಗೆ ನೀನೇ ಸಮಾಧಾನ ಮಾಡಬೇಕು.

ಸರ್ವೇ ಸ್ಮ ತೇ ಸಂಶಯಿತಾಃ ಪುನರೇವ ಜನಾರ್ದನ।
ಅಸ್ಯ ಶೋಕಂ ಮಹಾಬಾಹೋ ಪ್ರಣಾಶಯಿತುಮರ್ಹಸಿ ॥೩॥

ಅಣ್ಣನಾದ ಧರ್ಮರಾಜನು ಹೀಗೆ ದುಃಖಿತನಾದರೆ, ನಾವೆಲ್ಲರೂ ಸಂಶಯಗ್ರಸ್ತರಾಗುತ್ತೇವೆ. ಏನನ್ನು ಮಾಡಬೇಕೆಂದು ತಿಳಿಯದೇ ದಿಗ್ಭ್ರಾಂತರಾಗುತ್ತೇವೆ. ಮಹಾಬಾಹುವೇ! ಕಾರುಣ್ಯದಿಂದ ಆ ಧರ್ಮರಾಜನ ಶೋಕವನ್ನು ಪರಿಹಾರ ಮಾಡು. ನೀನೊಬ್ಬನೇ ಇದಕ್ಕೆ ಸಮರ್ಥನು.

ಏವಮುಕ್ತಸ್ತು ಗೋವಿಂದೋ ವಿಜಯೇನ ಮಹಾತ್ಮನಾ।
ಪರ್ಯವರ್ತತ ರಾಜಾನಂ ಪುಂಡರೀಕೇಕ್ಷಣೋಽಚ್ಯುತಃ ॥೪॥

ಜನಮೇಜಯರಾಜನೇ! ಅರ್ಜುನನು ಹೀಗೆ ಪ್ರಾರ್ಥನೆ ಮಾಡಿದಾಗ ಪುಂಡರೀಕಾಕ್ಷನಾದ ಶ್ರೀಕೃಷ್ಣಪರಮಾತ್ಮನು ಹಾಗೆಯೇ ಆಗಲಿ ಎಂದು ಸಮ್ಮತಿ ನೀಡಿದನು. ರಾಜನಾದ ಧರ್ಮರಾಜನಿರುವಲ್ಲಿಗೆ ನಡೆದನು. ಅವನೆದುರು ಕುಳಿತು, ಮಾತನಾಡಲು ಪ್ರಾರಂಭ ಮಾಡಿದನು.

ಅನತಿಕ್ರಮಣೀಯೋ ಹಿ ಧರ್ಮರಾಜಸ್ಯ ಕೇಶವಃ।
ಬಾಲ್ಯಾತ್ ಪ್ರಭೃತಿ ಗೋವಿಂದಃ ಪ್ರೀತ್ಯಾ ಚಾಭ್ಯಧಿಕೋಽರ್ಜುನಾತ್॥೫॥

ಧರ್ಮರಾಜನು ಕೇಶವನಾದ ಶ್ರೀಕೃಷ್ಣನ ಮಾತನ್ನು ಎಂದೂ ಸಹ ಉಲ್ಲಂಘನೆ ಮಾಡಿರುವನಲ್ಲ. ಬಾಲ್ಯದಿಂದ ಅರ್ಜುನನಿಗಿಂತಲೂ ಹೆಚ್ಚು ಶ್ರೀಕೃಷ್ಣನೇ ಪ್ರೀತ್ಯಾಸ್ಪದನಾಗಿದ್ದನು. ಶ್ರೀಕೃಷ್ಣನನ್ನು ಪ್ರೀತಿಸುವಷ್ಟು ಯಾರನ್ನೂ ಸಹ ಪ್ರೀತಿಸುತ್ತಿರಲಿಲ್ಲ.

ಸಂಪ್ರಗೃಹ್ಯ ಮಹಾಬಾಹುರ್ಭುಜಂ ಚಂದನಭೂಷಿತಮ್।
ಶೈಲಸ್ತಂಭೋಪಮಂ ಶೌರಿರುವಾಚಾಭಿವಿನೋದಯನ್ ॥೬॥

ಯುಧಿಷ್ಠಿರನು ದುಃಖದಲ್ಲಿ ಮುಳುಗಿ ಕಲ್ಲಿನ ಕಂಭದಂತೆ ಕುಳಿತುಬಿಟ್ಟಿದ್ದನು. ಅವನ ಭುಜವು ಚಂದನಚರ್ಚಿತವಾಗಿತ್ತು. ಇಂಥ ಎರಡು ಭುಜಗಳನ್ನು ಹಿಡಿದುಕೊಂಡು ವಿನೋದದಿಂದ ಶ್ರೀಕೃಷ್ಣಪರಮಾತ್ಮನು ಮಾತನಾಡಲು ಪ್ರಾರಂಭ ಮಾಡಿದನು.

ಶುಶುಭೇ ವದನಂ ತಸ್ಯ ಸುದಂಷ್ಟ್ರಂ ಚಾರುಲೋಚನಮ್ ।
ವ್ಯಾಕೋಶಮಿವ ವಿಸ್ಪಷ್ಟಂ ಪದ್ಮಂ ಸೂರ್ಯವಿಬೋಧಿತಮ್ ॥೭॥

ಮಾತನಾಡುತ್ತಿರುವಾಗ ಶ್ರೀಕೃಷ್ಣನ ಮುಖಕಮಲವು ಅತ್ಯಂತ ಸುಂದರವಾಗಿ ಕಾಣಿಸುತ್ತಿತ್ತು. ಕಣ್ಣುಗಳಿಂದ ಕಾಂತಿಯು ಹೊರಹೊಮ್ಮುತ್ತಿತ್ತು. ಸುಂದರವಾದ ದಂತಪಂಕ್ತಿಗಳು ಶೋಭಾಯಮಾನವಾಗಿದ್ದವು. ಶ್ರೀಕೃಷ್ಣನ ಮುಖವು ಕಮಲಕ್ಕಿಂತಲೂ ಹೆಚ್ಚು ಮುದವನ್ನು ನೀಡುತ್ತಿದ್ದವು. ಸೂರ್ಯೋದಯವಾದಾಗ ಕಮಲವು ಅರಳುವಂತೆ, ಶ್ರೀಕೃಷ್ಣನು ಅರಳಿದ ಮುಖದಿಂದ ಮಾತನಾಡಲು ಪ್ರಾರಂಭ ಮಾಡಿದನು.

ವಿವರಣೆ - ನಮ್ಮ ಜೀವನದಲ್ಲಿ ಅನೇಕ ಬಾರಿ ದುಃಖಸಾಗರದಲ್ಲಿ ಮುಳುಗಿ ಬಿಡುತ್ತೇವೆ. ಜಗತ್ತೇ ಶೂನ್ಯವಾಗುತ್ತದೆ. ಇಂಥ ಸಂದರ್ಭದಲ್ಲಿ ಶ್ರೀಕೃಷ್ಣಪರಮಾತ್ಮನ ಈ ರೂಪವನ್ನು, ಈ ಸೌಂದರ್ಯವನ್ನು ಸ್ಮರಣೆ ಮಾಡಿಕೊಳ್ಳಬೇಕು. ನಮ್ಮ ದುಃಖವನ್ನು ಶ್ರೀಕೃಷ್ಣನು ಬಂದು ಪರಿಹಾರ ಮಾಡುತ್ತಿದ್ದಾನೆ ಎಂದು ಭಾವಿಸಬೇಕು.

ಮಾ ಕೃಥಾಃ ಪುರುಷವ್ಯಾಘ್ರ ಶೋಕಂ ತ್ವಂ ಗಾತ್ರಶೋಷಣಮ್ ।
ನಹಿ ತೇ ಸುಲಭಾ ಭೂಯೋ ಯೇ ಹತಾಽಸ್ಮಿನ್ ರಣಾಜಿರೇ ॥೮॥

ಧರ್ಮರಾಜನೇ! ನೀನು ಎಲ್ಲ ಪುರುಷರ ಮಧ್ಯದಲ್ಲಿ ಸಿಂಹದಂತೆ ಇರುವಂಥವನು. ಏಕೆ ದುಃಖವನ್ನು ಹೊಂದಿರುವಿ. ನಿನಗಿರುವ ಈ ದುಃಖವು ನಿನ್ನ ಶರೀರವನ್ನೇ ಶೋಷಣೆ ಮಾಡಿಬಿಡುತ್ತದೆ. ನೀನು ಎಷ್ಟೇ ದುಃಖವನ್ನು ಹೊಂದಿದರೂ ರಣಾಂಗಣದಲ್ಲಿ ಮೃತರಾದವರು ಮರಳಿ ಬರುವುದಿಲ್ಲ. ನಿನ್ನ ಈ ದುಃಖವು ಸಂಪೂರ್ಣ ವ್ಯರ್ಥವಾದುದು.

ಸ್ವಪ್ನಲಬ್ಧಾ ಯಥಾ ಲಾಭಾ ವಿತಥಾಃ ಪ್ರತಿಬೋಧನೇ ।
ಏವಂ ತೇ ಕ್ಷತ್ರಿಯಾ ರಾಜನ್ ಯೇ ವ್ಯತೀತಾ ಮಹಾರಣೇ ॥೯॥

ಸ್ವಪ್ನದಲ್ಲಿ ಅದೆಷ್ಟೋ ಸಂಪತ್ತು ಸಿಕ್ಕಿರುತ್ತದೆ. ಎಚ್ಚರವಾದ ಮೇಲೆ ಆ ಸಂಪತ್ತು

ಬೇಕೆಂದರೂ ಸಹ ದೊರೆಯುವುದಿಲ್ಲ. ಅದರಂತೆ ಮಹಾಯುದ್ಧದಲ್ಲಿ ನಾಶವನ್ನು ಹೊಂದಿದ ಯಾರೊಬ್ಬ ಕ್ಷತ್ರಿಯರೂ ಕೂಡ ನಿನಗೆ ಈಗ ಬೇಕೆಂದರೂ ಸಹ ದೊರಕುವುದಿಲ್ಲ.

ಸರ್ವೇ ಹ್ಯಭಿಮುಖಾಃ ಶೂರಾ ವಿಗತಾ ರಣಶೋಭಿನಃ।
ನೈಷಾಂ ಕಶ್ಚಿತ್ ಪೃಷ್ಠತೋ ವಾ ಪಾಲಯನ್ ವಾಪಿ ಪಾತಿತಃ ॥೧೦॥

ಮಹಾಯುದ್ಧದಲ್ಲಿ ಯುದ್ಧವನ್ನು ಆಡುತ್ತಿದ್ದ ಕ್ಷತ್ರಿಯರು ಆ ಯುದ್ಧಭೂಮಿಗೆ ಅಲಂಕಾರಪ್ರಾಯರಾಗಿದ್ದರು. ಪ್ರತಿಯೊಬ್ಬರೂ ಸಹ ಶತ್ರುಗಳಿಗೆ ಅಭಿಮುಖರಾಗಿ ನಿಂತು, ಧೈರ್ಯದಿಂದ ಯುದ್ಧವನ್ನು ಮಾಡುತ್ತಿದ್ದರು. ಹೀಗಿರುವಾಗಲೇ ಅವರು ಶತ್ರುಗಳಿಂದ ಮೃತರಾಗಿದ್ದಾರೆ. ಮೃತರಾದವರಲ್ಲಿ ಯಾರೊಬ್ಬರೂ ಸಹ ಶತ್ರುಗಳಿಗೆ ಬೆನ್ನು ತೋರಿಸಿ ಓಡಿದವರಲ್ಲ. ತಮ್ಮ ಬೆನ್ನಿಗೆ ಬಾಣವನ್ನು ಚುಚ್ಚಿಸಿಕೊಂಡವರಲ್ಲ. ಅಥವಾ ಭಯಗೊಂಡು ಓಡುತ್ತಾ ಶಸ್ತ್ರಾಘಾತಗಳಿಂದ ಸತ್ತವರೂ ಅಲ್ಲ.

ವಿವರಣೆ - ಯಾರಿಗಾಗಿ ನೀನು ದುಃಖವನ್ನು ಹೊಂದುತ್ತಿರುವೆಯೋ, ಅವರೆಲ್ಲರೂ ಉತ್ತಮಪರಾಕ್ರಮಿಗಳು. ಸಂತೋಷದಿಂದಲೇ ಪ್ರಾಣವನ್ನು ಬಿಟ್ಟವರು. ಯುದ್ಧವನ್ನು ಮಾಡುತ್ತಿರುವಾಗಲೂ ಸಂತೋಷದಿಂದ ಇದ್ದು, ಮೃತರಾದ ಮೇಲೂ ಸಹ ವೀರಸ್ವರ್ಗವನ್ನು ಹೊಂದಿರುವರು. ಇಂಥವರ ಬಗ್ಗೆ ನೀನೇಕೆ ಕಳವಳವನ್ನು ಹೊಂದಿರುವಿ. ಅವರನ್ನು ನೋಡಬೇಕೆಂಬ ಆಸೆಯಿಂದ ದುಃಖವನ್ನು ಹೊಂದುತ್ತಿರುವಿಯಾದರೆ ಇದು ಸಾಧ್ಯವಾಗದ ಮಾತು. ಅವರೆಂದೂ ಸಹ ಮರಳಿ ಬರಲು ಸಾಧ್ಯವಿಲ್ಲ. ಸ್ವಪ್ನದಲ್ಲಿ ಕಂಡ ಚಿನ್ನವು ಹೇಗೆ ಎದ್ದಮೇಲೆ ದೊರಕುವುದಿಲ್ಲವೋ, ಮೃತರಾದವರು ಭೂಲೋಕಕ್ಕೆ ಬರಲು ಸಾಧ್ಯವಿಲ್ಲ ಇತ್ಯಾದಿಯಾಗಿ ಶ್ರೀಕೃಷ್ಣಪರಮಾತ್ಮನು ಸಮಾಧಾನವನ್ನು ಮಾಡುತ್ತಿದ್ದಾನೆ.

ಸರ್ವೇ ತ್ಯಕ್ತ್ವಾತ್ಮನಃ ಪ್ರಾಣಾನ್ ಯುದ್ಧಾ ವೀರಾ ಮಹಾಹವೇ।
ಶಸ್ತ್ರಪೂತಾ ದಿವಂ ಪ್ರಾಪ್ತಾ ನ ತಾನ್ ಶೋಚಿತುಮರ್ಹಸಿ ॥೧೧॥

ಪ್ರತಿಯೊಬ್ಬ ಯೋಧರು ತಮ್ಮ ಸಂಪೂರ್ಣ ಪರಾಕ್ರಮದಿಂದ ಯುದ್ಧವನ್ನು ಮಾಡಿ, ಪ್ರಾಣಗಳನ್ನು ಪರಿತ್ಯಾಗ ಮಾಡಿರುವರು. ಶಸ್ತ್ರದಿಂದ ಪವಿತ್ರರಾಗಿರುವರು.

ಆದ್ದರಿಂದಲೇ ಈಗ ಸ್ವರ್ಗದಲ್ಲಿ ಸುಖಿಯಾಗಿರುವರು. ಅವರೆಲ್ಲರೂ ಸುಖದಲ್ಲಿರುವಾಗ ನೀನೇಕೆ ದುಃಖವನ್ನು ಹೊಂದುವಿ.

ಕ್ಷತ್ರಧರ್ಮರತಾ ಶೂರಾ ವೇದವೇದಾಂಗಪಾರಗಾಃ।
ಪ್ರಾಪ್ತಾ ವೀರಗತಿಂ ಪುಣ್ಯಾಂ ನ ತಾನ್ ಶೋಚಿತುಮರ್ಹಸಿ ॥೧೨॥

ತಮ್ಮ ಕ್ಷತ್ರಿಯ ಧರ್ಮಕ್ಕೆ ಉಚಿತವಾದ ರೀತಿಯಲ್ಲಿಯೇ ಆ ಶೂರರು ಪ್ರಾಣತ್ಯಾಗವನ್ನು ಮಾಡಿದ್ದಾರೆ. ಅವೆರಲ್ಲರೂ ವೇದವೇದಾಂಗಪಾರಂಗತರಾಗಿದ್ದಾರೆ. ವೀರರಗಷ್ಟೇ ದೊರಕುವ ಪುಣ್ಯಮಯ ಸ್ವರ್ಗವನ್ನು ಹೊಂದಿರುತ್ತಾರೆ. ಅವರ ವಿಷಯದಲ್ಲಿ ದುಃಖ ಪಡಲು ಕಾರಣವಿಲ್ಲ.

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಮ್।
ಸೃಂಜಯಂ ಪುತ್ರಶೋಕಾರ್ತಂ ಯಥಾಯಂ ಪ್ರಾಹ ನಾರದಃ ॥೧೩॥

ಧರ್ಮರಾಜನೇ! ಈ ಹಿಂದೆ ಪುತ್ರಶೋಕದಿಂದ ಸೃಂಜಯನು ಬಹಳ ದುಃಖವನ್ನು ಹೊಂದಿದ್ದನು. ಆಗ ನಾರದರು ಬಂದು ಅವನಿಗೊಂದು ಪುರಾತನದ ಇತಿಹಾಸವನ್ನು ಉದಾಹರಿಸಿದರು. ಅದನ್ನು ನಿನಗೀಗ ಹೇಳುತ್ತೇನೆ ಕೇಳು.

ಸುಖದುಃಖೈರಹಂ ತ್ವಂ ಚ ಪ್ರಜಾಃ ಸರ್ವಾಶ್ಚ ಸೃಂಜಯ।
ಅವಿಮುಕ್ತಂ ಚರಿಷ್ಯಾಮಸ್ತತ್ರ ಕಾ ಪರಿದೇವನಾ ॥೧೪॥

ಸೃಂಜಯನೇ! ಸತ್ತ ಮಗುವಿಗೇಕೇ ಇಷ್ಟೊಂದು ದುಃಖಿಸುವಿ. ನಾನು, ನೀನು ಮತ್ತು ಸಮಸ್ತ ಪ್ರಜೆಗಳು ಸುಖ-ದುಃಖಗಳನ್ನು ದಾಟಲಾರೆವು. ಪ್ರತಿಯೊಬ್ಬರೂ ಅದನ್ನು ಅನುಭವಿಸಲೇಬೇಕು. ಈ ವಿಷಯದಲ್ಲೇಕೆ ನಿನಗೆ ದುಃಖ.

ಮಹಾಭಾಗ್ಯಂ ಪುರಾ ರಾಜ್ಞಾಂ ಕೀರ್ತ್ಯಮಾನಂ ಮಯಾ ಶೃಣು।
ಗಚ್ಛಾವಧಾನಂ ನೃಪತೇ ತತೋ ದುಃಖಂ ಪ್ರಹಾಸ್ಯಸಿ ॥೧೫॥

ನಾನೀಗ ನಿನಗೆ ಹಿಂದಿನ ರಾಜರ ಮಹಾಸೌಭಾಗ್ಯದ ಇತಿಹಾಸವನ್ನು

ಹೇಳುತ್ತೇನೆ. ಇದನ್ನು ಸಾವಧಾನಚಿತ್ತದಿಂದ ಕೇಳು. ಇದರಿಂದಲಾದರೂ ನಿನಗೆ ದುಃಖವು ಪರಿಹಾರವಾಗುತ್ತದೆ.

ಮೃತಾನ್ ಮಹಾನುಭಾವಾಂಸ್ತ್ವಂ ಶ್ರುತ್ವೈವ ತು ಮಹೀಪತೀನ್ ।
ಶಮಮಾನಯ ಸಂತಾಪಂ ಶೃಣು ವಿಸ್ತರಶಶ್ಚ ಮೇ ॥೧೬॥

ಮಹಾನುಭಾವರಾದ ಪರಲೋಕವನ್ನು ಹೊಂದಿದ, ಆ ಎಲ್ಲಾ ರಾಜರುಗಳ ಚರಿತ್ರೆಗಳನ್ನು ಕೇಳಿದ ನಂತರ ಪುತ್ರವಿಯೋಗದಿಂದ ನಿನಗಾದ ದುಃಖವನ್ನು ಪರಿಹಾರ ಮಾಡಿಕೋ. ಅವರ ಚರಿತ್ರೆಯನ್ನು ವಿಸ್ತಾರವಾಗಿ ಹೇಳುತ್ತೇನೆ ಕೇಳು.

ಕ್ರೂರಗ್ರಹಾಭಿಶಮನಮಾಯುರ್ವರ್ಧನಮುತ್ತಮಮ್ ।
ಅಗ್ರಿಮಾಣಾಂ ಕ್ಷಿತಿಭುಜಾಮುಪಾದಾನಮನೋಹರಮ್ ॥೧೭॥

ಅವರ ಚರಿತ್ರೆಯು ಅತ್ಯಂತ ಪವಿತ್ರವಾಗಿವೆ. ಕೇಳಿದ ಮಾತ್ರದಿಂದಲೇ ಕ್ರೂರವಾದ ಗ್ರಹಗಳ ದೋಷಗಳು ಪರಿಹಾರವಾಗುತ್ತವೆ. ಆಯುಸ್ಸು ಅಭಿವೃದ್ಧವಾಗುತ್ತದೆ. ಶ್ರೇಷ್ಠರಾದ ಹದಿನಾರು ಮಂದಿ ರಾಜರ ಚರಿತ್ರೆಯನ್ನು ನಿನಗೆ ಹೇಳುತ್ತೇನೆ ಕೇಳು.

ಟಿಪ್ಪಣಿ - ಜಾತಕ ಕುಂಡಲಿಯಲ್ಲಿ ಕ್ರೂರ ಗ್ರಹಗಳ ದೃಷ್ಟಿಯಿದ್ದರೆ ಅಥವಾ ಕ್ರೂರ ಗ್ರಹಗಳ ಬಾಧೆಯಿದ್ದರೆ ಮುಂದೆ ಹೇಳುವ ಹದಿನಾರು ಮಂದಿ ರಾಜರ ಚರಿತ್ರೆಯನ್ನು ಓದಬೇಕು. ಆಗ ಆ ಎಲ್ಲ ಬಾಧೆಗಳು ಪರಿಹಾರವಾಗುತ್ತವೆ. ಅಥವಾ ಮತ್ತೊಬ್ಬರಿಗೆ ಗ್ರಹಬಾಧೆ ದೋಷವು ಇದ್ದಲ್ಲಿ ಈ ಹದಿನಾರು ರಾಜರ ಕಥೆಯನ್ನು ಅವರಿಗೆ ಹೇಳುವುದರಿಂದಲೂ ದೋಷವು ಪರಿಹಾರವಾಗುತ್ತದೆ.

ಮರುತ್ ರಾಜನ ಸಾಧನೆ

ಆವಿಕ್ಷಿತಂ ಮರುತ್ತಂ ಮೇ ಮೃತಂ ಸೃಂಜಯ ಶುಶ್ರುಮ ।
ಯಸ್ಯ ಸೇಂದ್ರಾಃ ಸವರುಣಾ ಬೃಹಸ್ಪತಿಪುರೋಗಮಾಃ ॥೧೮॥

ದೇವಾ ವಿಶ್ವಸೃಜೋ ರಾಜ್ಞೋ ಯಜ್ಞಮೀಯುರ್ಮಹಾತ್ಮನಃ ।
ಯಃ ಸ್ಪರ್ಧಮನಯಚ್ಛಕ್ರಂ ದೇವರಾಜಂ ಶತಕ್ರತುಮ್ ॥೧೯॥

ಆವಿಕ್ಷಿತನ ಮಗನಾದ ಮರುತ್ ಎಂಬ ರಾಜನು ಮೃತನಾದ ವಿಷಯವನ್ನು ನಾವು ಕೇಳಿದ್ದೇವೆ. ಮಹಾತ್ಮನಾದ ಮರುತ್‌ರಾಜನು ಒಮ್ಮೆ ಮಹಾಯಜ್ಞವನ್ನು ಆಚರಿಸಿದನು. ಅದರಲ್ಲಿ ಇಂದ್ರ, ವರುಣ, ಬೃಹಸ್ಪತಿ, ಮೊದಲಾದ ದೇವತೆಗಳು ಪ್ರಜಾಪತಿಗಳು ಬೃಹಸ್ಪತಿಯನ್ನು ಮುಂದೆ ಮಾಡಿಕೊಂಡು, ಭಾಗವಹಿಸಿದರು. ಆ ಮರುತ್‌ರಾಜನು ಯಜ್ಞಮಾಡುವುದರ ಮೂಲಕ ದೇವರಾಜನಾದ ಶತಕ್ರತು ಎನಿಸಿದ ಇಂದ್ರನನ್ನೂ ಕೂಡ ಸ್ಪರ್ಧಿಸಿದನು.

ಶಕ್ರಪ್ರಿಯೈಷೀ ಯಂ ವಿದ್ವಾನ್ ಪ್ರತ್ಯಾಚಷ್ಟ ಬೃಹಸ್ಪತಿಃ।
ಸಂವರ್ತೋ ಯಾಜಯಾಮಾಸ ಯಂ ಪೀಡಾರ್ಥಂ ಬೃಹಸ್ಪತೇಃ॥೨೦॥

ಆ ಯಾಗದಲ್ಲಿ ಇಂದ್ರನ ಪ್ರೇರಣೆಯಿಂದ ಬೃಹಸ್ಪತಿಯು ಅವನ ಬಳಿ ತೆರಳಿದನು. ಯಾಗವನ್ನು ನಿಲ್ಲಿಸು ಎಂದು ಹೇಳಿದನು. ಆಗ ಬೃಹಸ್ಪತಿಯ ತಮ್ಮನಾದ ಸಂವರ್ತನು ಇಂದ್ರನ ಮೇಲಿನ ಸ್ಪರ್ಧೆಯಿಂದ ಇಂದ್ರನಿಗೆ ವಿರುದ್ಧವಾದ ಆ ಯಾಗವನ್ನು ಮಾಡಿಸಿದನು.

ಯಸ್ಮಿನ್ ಪ್ರಶಾಸತಿ ಸತಾಂ ನೃಪತೌ ನೃಪಸತ್ತಮ।
ಅಕೃಷ್ಟಪಚ್ಯಾ ಪೃಥಿವೀ ವಿಬಭೌ ಚೈತ್ಯಮಾಲಿನೀ ॥೨೧॥

ಆ ಮರುತ್‌ರಾಜನು ರಾಜ್ಯಭಾರವನ್ನು ಮಾಡುತ್ತಿರುವಾಗ ಕೃಷಿಮಾಡದೆಯೂ, ಪೃಥಿವಿಯು ಸಸ್ಯಗಳಿಂದ ಸಮೃದ್ಧವಾಗಿ ಶೋಭಿಸುತ್ತಿತ್ತು. ಯಜ್ಞಶಾಲೆಗಳ ಸಾಲುಗಳಿಂದ ಭೂಮಂಡಲವು ಪ್ರಕಾಶಿಸುತ್ತಿತ್ತು.

ಆವಿಕ್ಷಿತಸ್ಯ ವೈ ಸತ್ರೇ ವಿಶ್ವೇ ದೇವಾಃ ಸಭಾಸದಃ।
ಮರುತಃ ಪರಿವೇಷ್ಟಾರಃ ಸಾಧ್ಯಾಶ್ಚಾಸನ್ ಮಹಾತ್ಮನಃ ॥೨೨॥

ಆವಿಕ್ಷಿತನ ಮಗನಾದ ಮಹಾತ್ಮನಾದ ಮರುತ್‌ನ ಯಜ್ಞದಲ್ಲಿ ವಿಶ್ವೇದೇವತೆಗಳೇ ಸಭಾಸದರಾಗಿದ್ದರು. ಮರುತ್‌ಗಣಗಳು ಮತ್ತು ಸಾಧ್ಯರು ಯಜ್ಞದಲ್ಲಿ ಭಾಗವಹಿಸಿದ ಋತ್ವಿಜರಿಗೆ ಪರಿಚಾರಕರಾಗಿದ್ದರು.

ಟಿಪ್ಪಣಿ - "ಮರುತಃ ಪರಿವೇಷ್ಟಾರೋ ಮರುತಸ್ಯಾ ವಸುಂಧರೇಃ ।
ಆವಿಕ್ಷಿತಸ್ಯ ವೈ ಸತ್ರೇ ವಿಶ್ವೇ ದೇವಾಃ ಸಭಾಸದಃ" ಎಂಬುದಾಗಿ ಮರುತ್‌ರಾಜನು ಮಾಡಿದ ಯಜ್ಞವನ್ನು ಐತರೇಯ ಬ್ರಾಹ್ಮಣವೂ ಕೂಡ ಪ್ರಶಂಸೆ ಮಾಡುತ್ತದೆ.

ಮರುದ್ಗಣಾ ಮರುತ್ತಸ್ಯ ಯತ್ ಸೋಮಮಪಿಬಂತ ತೇ।
ದೇವಾನ್ ಮನುಷ್ಯಾನ್ ಗಂಧರ್ವಾನತ್ಯರಿಚ್ಯಂತ ದಕ್ಷಿಣಾಃ ॥೨೩॥

ಆ ಯಾಗದಲ್ಲಿ ಅವನು ಕೊಟ್ಟ ದಕ್ಷಿಣೆಗಳು ದೇವತೆಗಳು, ಮನುಷ್ಯರು, ಗಂಧರ್ವಾದಿಗಳೆಲ್ಲರೂ ನೀಡಿದ ದಕ್ಷಿಣೆಗಳಿಗಿಂತಲೂ ಅತಿಶಯವಾಗಿದ್ದವು. ಎಲ್ಲಾ ಮರುದ್ಗಣದವರು ಯಥೇಚ್ಛವಾಗಿ ಸೋಮರಸವನ್ನು ಆ ಯಜ್ಞದಲ್ಲಿ ಪಾನ ಮಾಡಿದರು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ।
ಪುತ್ರಾತ್ ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ ॥೨೪॥

ಸೃಂಜಯನೇ! ನಿನಗಿಂತಲೂ ನಿನ್ನ ಪುತ್ರನಿಗಿಂತಲೂ, ಧರ್ಮ, ಜ್ಞಾನ, ಐಶ್ವರ್ಯ, ವೈರಾಗ್ಯಗಳೆಂಬ ನಾಲ್ಕರಲ್ಲಿಯೂ ಆ ರಾಜನು ಬಹಳ ಉತ್ತಮನಾಗಿದ್ದನು. ಅಂಥ ರಾಜನೇ! ಇಂದು ಮೃತನಾಗಿರುವಾಗ, ನಿನ್ನ ಮಗನ ವಿಷಯದಲ್ಲಿ ಏಕೆ ದುಃಖ ಪಡುತ್ತಿರುವಿ?

ಟಿಪ್ಪಣಿ - ಸೂರ್ಯವಂಶದಲ್ಲಿ ಅವಿಕ್ಷಿತ್ ಎಂಬ ರಾಜನಿದ್ದನು. ಇವನ ಮಗನೇ ಆವಿಕ್ಷಿತ. ಇವನಿಗೆ ಮರುತ್ ಎಂಬ ಹೆಸರಿದೆ. ಮರುದ್ದೇವತೆಗಳಂತೆ ಮಹಾಶಕ್ತಿವಂತನಾದ್ದರಿಂದ ಇವನನ್ನು ಮರುತ್‌ರಾಜ ಎಂದೇ ಕರೆಯುತ್ತಿದ್ದರು. ವಿಶಾಲಾದೇವಿಯೇ ಇವನ ತಾಯಿ. ಬೃಹಸ್ಪತಿಯ ತಮ್ಮನಾದ ಸಂವರ್ತನನಿಂದ ಒಂದು ಮಹಾಯಾಗವನ್ನು ಆಚರಿಸಿದನು. ಆ ಯಜ್ಞದಲ್ಲಿ ಎಲ್ಲವೂ ಕೂಡ ಸ್ವರ್ಣಮಯವಾಗಿತ್ತು. ಸೋಮರಸಪಾನದಿಂದ ಇಂದ್ರನು ಮತ್ತನಾದನು. ದಕ್ಷಿಣೆಗಳಿಂದ ಬ್ರಾಹ್ಮಣರು ತೃಪ್ತರಾದರು. ಆ ಯಜ್ಞದಲ್ಲಿ ದೇವತೆಗಳಿಗೆ ಮರುತ್‌ಗಳೇ ಬಡಿಸಿದರು. ಮೊದಲು ಇಂದ್ರನು ಯಜ್ಞಕ್ಕೆ ವಿಘ್ನವನ್ನುಂಟು ಮಾಡಿದರೂ ಅಂತಿಮವಾಗಿ ಸ್ನೇಹವನ್ನು ಬೆಳೆಸಿದನು. ಆ ಯಜ್ಞದಲ್ಲಿ ಕೊಟ್ಟ ಹಣವನ್ನು

ಬ್ರಾಹ್ಮಣರು ಎತ್ತಲಾಗದೇ, ಒಯ್ಯಲಾಗದೇ ಹಿಮಾಚಲ ಪ್ರದೇಶದಲ್ಲಿ ಬೆಲ್ಲಿ ಹೋದರು. ಇದನ್ನು ವೇದವ್ಯಾಸರ ಸೂಚನೆಯಂತೆ ಧರ್ಮರಾಜನು ಹಸ್ತಿನಾವತಿಗೆ ತರಿಸಿ, ಅಶ್ವಮೇಧಯಾಗವನ್ನು ಮಾಡಿದನು. ಇವನು ಏಕಚಕ್ರಾಧಿಪತಿಯಾಗಿ ೮೫೦೦೦ ವರ್ಷಗಳ ಕಾಲ ರಾಜ್ಯಭಾರವನ್ನು ಮಾಡಿದನು. ರಾಮಾಯಣ ಹಾಗೂ ಮಹಾಭಾರತದ ದ್ರೋಣಪರ್ವದಲ್ಲಿಯೂ ಇವನ ಕಥೆಯು ವಿಸ್ತಾರವಾಗಿ ಬರುತ್ತದೆ.

ಸುಹೋತ್ರ ರಾಜನ ಸಾಧನೆ

ಸುಹೋತ್ರಂ ಚೇದ್ ವೈತಿಥಿನಂ ಮೃತಂ ಸೃಂಜಯ ಶುಶ್ರುಮ।
ಯಸ್ಮೈ ಹಿರಣ್ಯಂ ವವೃಷೇ ಮಘವಾನ್ ಪರಿವತ್ಸರಮ್ ॥೨೫॥

ವಿತಿಥ ಎಂಬ ರಾಜನಿಗೆ ಸುಹೋತ್ರ ಎಂಬ ಮಗನಿದ್ದನು. ಇವನೂ ಕೂಡ ಮರಣವನ್ನು ಹೊಂದಿದನು. ಇವನು ರಾಜ್ಯಭಾರ ಮಾಡುತ್ತಿದ್ದಾಗ, ದೇವೇಂದ್ರನು ಒಂದು ವರ್ಷಗಳ ಕಾಲ ಎಡೆಬಿಡದೆ ಸುವರ್ಣವೃಷ್ಟಿಯನ್ನು ಮಾಡುತ್ತಿದ್ದನು.

ಸತ್ಯನಾಮಾ ವಸುಮತೀ ಯಂ ಪ್ರಾಪ್ಯಾಸೀಜ್ಜನಾಧಿಪ।
ಹಿರಣ್ಯಮವಹನ್ನದ್ಯಸ್ತಸ್ಮಿನ್ ಜನಪದೇಶ್ವರೇ ॥೨೬॥

ಅವನ ರಾಜ್ಯಭಾರದಲ್ಲಿಯೇ ಭೂದೇವಿಗೆ ವಸುಮತಿ ಎಂಬ ಹೆಸರು ಬಂದಿತ್ತು. ನದಿಗಳು ಸುವರ್ಣದ ನೀರನ್ನೇ ಪ್ರವಹಿಸುತ್ತಿದ್ದವು.

ಕೂರ್ಮಾನ್ ಕರ್ಕಟಕಾನ್ ನಕ್ರಾನ್ ಮಕರಾನ್ ಶಿಂಶುಕಾನಪಿ।
ನದೀಷ್ವಪಾತಯದ್ ರಾಜನ್ ಮಘವಾ ಲೋಕಪೂಜಿತಾಃ ॥೨೭॥

ಸರ್ವಲೋಕಗಳಿಂದ ಪೂಜಿತನಾದ ದೇವೇಂದ್ರನು ಸುವರ್ಣಮಯವಾದ ಆಮೆಗಳನ್ನು, ಏಡಿಗಳನ್ನು, ಮೊಸಳೆಗಳೇ ಮೊದಲಾದ ಜಲಜಂತುಗಳನ್ನು ದೇವೇಂದ್ರನು ಸುವರ್ಣಮಯಗಳನ್ನಾಗಿಯೇ ಮಾಡಿಟ್ಟಿದ್ದನು.

ಹೈರಣ್ಯಾನ್ ಪತಿತಾನ್ ದೃಷ್ಟ್ವಾ ಮತ್ಸ್ಯಾನ್ ಮಕರಕಚ್ಛಪಾನ್।
ಸಹಸ್ರಶೋಽಥ ಶತಶಸ್ತತೋಽಸ್ಮಯತ ವೈತಿಥಿಃ ॥೨೮॥

ಸುವರ್ಣಮಯವಾದ ಸಾವಿರಾರು ಮೀನುಗಳು ಅಲ್ಲಿದ್ದವು. ಸಾವಿರಾರು ಮೊಸಳೆಗಳನ್ನು, ಆಮೆಗಳನ್ನು ಆ ನದಿಗಳಲ್ಲಿ ದೇವೇಂದ್ರನು ಬಿಟ್ಟಿದ್ದನ್ನು ನೋಡಿ, ಆ ಸುಹೋತ್ರನೇ ಅಚ್ಚರಿಪಟ್ಟಿದ್ದನು.

ತದ್ ಹಿರಣ್ಯಮಪರ್ಯಂತಮಾವೃತ್ತಂ ಕುರುಜಾಂಗಲೇ।
ಈಜಾನೋ ವಿತತೇ ಯಜ್ಞೇ ಬ್ರಾಹ್ಮಣೇಭ್ಯಃ ಸಮಾರ್ಪಯತ್ ॥೨೯॥

ಕುರುಜಾಂಗಲಾ ದೇಶದಲ್ಲಿ ಸುವರ್ಣರಾಶಿಯು ಮೊದಲಿನಿಂದ ಕೊನೆಯ ತನಕ ಪರ್ವತದಂತೆ ವ್ಯಾಪಿಸಿತ್ತು. ಆಗ ಸುಹೋತ್ರನು ಒಂದು ಮಹಾಯಾಗವನ್ನು ನಡೆಸಿದನು. ಆಗ ಆ ಎಲ್ಲಾ ಸುವರ್ಣದ ರಾಶಿಯನ್ನು ಬ್ರಾಹ್ಮಣರಿಗೆ ದಕ್ಷಿಣಾ-ರೂಪದಲ್ಲಿ ಆ ಸುಹೋತ್ರನು ದಾನ ಮಾಡಿದನು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ।
ಪುತ್ರಾತ್ ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ ॥೩೦॥
ಅದಕ್ಷಿಣಮಯಜ್ವಾನಂ ಚೈತ್ಯ ಸಂಶಾಮ್ಯ ಮಾ ಶುಚಃ।

ಸೃಂಜಯನೇ! ನಿನಗಿಂತಲೂ ಮತ್ತು ನಿನ್ನ ಮಗನಿಗಿಂತಲೂ, ಆ ಸುಹೋತ್ರನು ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯಗಳಲ್ಲಿ ಶ್ರೇಷ್ಠನಾಗಿದ್ದನು. ಹೆಚ್ಚು ಪುಣ್ಯ-ಶಾಲಿಯಾಗಿದ್ದನು. ಅಂಥ ಸುಹೋತ್ರನೂ ಕೂಡ ಮೃತನಾದನು. ಹೀಗಿರುವಾಗ ಯಾವುದೇ ಯಾಗ ಮಾಡದ, ಬ್ರಾಹ್ಮಣನಿಗೆ ಅಪಾರದಕ್ಷಿಣೆಯನ್ನು ಕೊಡದ ಮೃತನಾದ ನಿನ್ನ ಮಗನ ವಿಷಯದಲ್ಲಿ ಏಕೆ ದುಃಖ ಪಡುತ್ತಿರುವಿ ?

ಟಿಪ್ಪಣಿ - ಚೈತ್ಯ ಸಂಶಾಮ್ಯ ಮಾ ಶುಚ ಇತ್ಯತ್ರ ಚೈತ್ಯ ಚಿತ್ತಸಮಾಧಾನಯುಕ್ತಃ।

'ಚೈತ್ಯಃ' ಎಂಬುದಕ್ಕೆ ಚಿತ್ತಸಮಾಧಾನದಿಂದ ಯುಕ್ತನಾದವನು ಎಂದರ್ಥ.

ಟಿಪ್ಪಣಿ - ಭೂಮನ್ಯು ಎಂಬ ರಾಜನ ಮಗನೇ ಸುಹೋತ್ರ. ಚಂದ್ರವಂಶ-ದವನು. ಇವನ ಹೆಂಡತಿ ಜಯಂತಿ. ಅಜಮೀಢಾ ಮತ್ತು ಹಸ್ತಿ ಎಂಬುವರು ಇವನ ಮಕ್ಕಳು. ಇವನೂ ಕೂಡ ಅನೇಕ ಯಾಗಗಳನ್ನು ಆಚರಿಸಿದ್ದು ಮಹಾ-ಭಾರತದ ದ್ರೋಣಪರ್ವದಲ್ಲಿ ವಿಸ್ತಾರವಾಗಿ ಬರುತ್ತದೆ. ಇವನ ರಾಜ್ಯದಲ್ಲಿ

ಸುವರ್ಣವೃಷ್ಟಿಯನ್ನು ದೇವೇಂದ್ರನು ಮಾಡಿದ ಬಗ್ಗೆಯೂ ವಿವರಣೆ ದ್ರೋಣ-ಪರ್ವದಲ್ಲೇ ಇರುತ್ತದೆ.

ಬೃಹದ್ರಥರಾಜನ ಸಾಧನೆ

ಅಂಗಂ ಬೃಹದ್ರಥಂ ಚೈವ ಮೃತಂ ಶುಶ್ರುಮ ಸೃಂಜಯ।
ಯಃ ಸಹಸ್ರಂ ಸಹಸ್ರಾಣಾಂ ಗಜಾನಾಮತಿಪದ್ಮಿನಾಮ್।
ಈಜಾನೋ ವಿತತೇ ಯಜ್ಞೇ ದಕ್ಷಿಣಾಮತ್ಯಕಾಲಯತ್।
ಯಃ ಸಹಸ್ರಂ ಸಹಸ್ರಾಣಾಂ ಶ್ವೇತಾನಶ್ವಾನವಾಸೃಜತ್ ॥೩೧॥

ಅಂಗದೇಶದಲ್ಲಿ ಬೃಹದ್ರಥ ಎಂಬ ರಾಜನಿದ್ದನು. ಅವನೂ ಸಹ ಮೃತನಾದನು. ಇವನು ರಾಜ್ಯಭಾರವನ್ನು ಮಾಡುತ್ತಿದ್ದಾಗ, ಪದ್ಮಮಾಲಿಕೆಯುಳ್ಳ ಹತ್ತು ಲಕ್ಷ ಆನೆಗಳನ್ನು ಮಹಾಯಾಗದಲ್ಲಿ ದಾನ ಮಾಡಿದನು. ಬಿಳಿ ಬಣ್ಣದ ಹತ್ತು ಲಕ್ಷ ಕುದುರೆಗಳನ್ನು ಆ ಯಾಗದಲ್ಲಿ ದಾನ ಮಾಡಿದನು.

ಸಹಸ್ರಂ ಚ ಸಹಸ್ರಾಣಾಂ ಕನ್ಯಾ ಹೇಮವಿಭೂಷಿತಾಃ।
ಈಜಾನೋ ವಿತತೇ ಯಜ್ಞೇ ದಕ್ಷಿಣಾಮತ್ಯಕಾಲಯತ್ ॥೩೨॥

ಸುವರ್ಣಾಭರಣಗಳಿಂದ ಅಲಂಕೃತಗೊಂಡ ಹತ್ತುಲಕ್ಷಕನ್ಯೆಯರನ್ನು ದಕ್ಷಿಣಾ-ರೂಪದಲ್ಲಿ ದಾನ ಮಾಡಿದನು.

ಶತಂ ಶತಸಹಸ್ರಾಣಾಂ ವೃಷಾಣಾಂ ಹೇಮಮಾಲಿನಾಮ್।
ಗವಾಂ ಸಹಸ್ರಾನುಚರಂ ದಕ್ಷಿಣಾಮತ್ಯಕಾಲಯತ್ ॥೩೩॥

ಬೃಹದ್ರಥನು ಒಂದು ಕೋಟಿ ಗೋವುಗಳನ್ನು, ಹಾಗೂ ಸ್ವರ್ಣಮಾಲೆಗಳಿಂದ ಅಲಂಕೃತಗೊಂಡ ಒಂದು ಕೋಟಿ ಎತ್ತುಗಳನ್ನು ಅವುಗಳ ಸೇವೆಗಾಗಿ ಸಾವಿರಾರು ಸೇವಕರನ್ನು ದಕ್ಷಿಣರೂಪವಾಗಿ ದಾನ ಮಾಡಿದನು.

ಅಂಗಸ್ಯ ಯಜಮಾನಸ್ಯ ತದಾ ವಿಷ್ಣುಪದೇ ಗಿರೌ।
ಅಮಾದ್ಯದಿಂದ್ರಃ ಸೋಮೇನ ದಕ್ಷಿಣಾಭಿರ್ದ್ವಿಜಾತಯಃ ॥೩೪॥

ಅಂಗರಾಜ್ಯದ ದೊರೆಯಾದ ಬೃಹದ್ರಥನು ವಿಷ್ಣುಪದ ಎಂಬ ಗಿರಿಯಲ್ಲಿ ಯಜ್ಞವನ್ನು ಆಚರಿಸಿದನು. ಆಗ ದೇವೇಂದ್ರನೂ ಕೂಡ ಯಥೇಚ್ಛೆಯಾಗಿ ಸೋಮ -ರಸವನ್ನು ಪಾನ ಮಾಡಿ, ದೇಹದ ಬಗ್ಗೆ ಪರಿಜ್ಞಾನವೇ ಇಲ್ಲದಷ್ಟು ತೃಪ್ತನಾದನು. ಬ್ರಾಹ್ಮಣರು ಭೋಜನ ಮತ್ತು ದಕ್ಷಿಣೆಗಳಿಂದ ತೃಪ್ತರಾದರು.

ಯಸ್ಯ ಯಜ್ಞೇಷು ರಾಜೇಂದ್ರ ಶತಸಂಖ್ಯೇಷು ವೈ ಪುರಾ ।
ದೇವಾನ್ ಮನುಷ್ಯಾನ್ ಗಂಧರ್ವಾನತ್ಯರಿಚ್ಯಂತ ದಕ್ಷಿಣಾಃ ॥೩೫॥

ಅವನು ನಡೆಸಿದ ನೂರಾರು ಯಜ್ಞಗಳಲ್ಲಿ ಕೊಟ್ಟ ದಕ್ಷಿಣೆಗಳು, ದೇವತೆಗಳು, ಮನುಷ್ಯರು, ಗಂಧರ್ವರು ಎಲ್ಲರೂ ಸೇರಿ, ಯಜ್ಞಸಭೆಯಲ್ಲಿ ಕೊಡುತ್ತಿದ್ದ ದಕ್ಷಿಣೆ-ಗಳನ್ನೆಲ್ಲಾ ಮೀರಿಸಿತ್ತು.

ನ ಜಾತೋ ಜನಿತಾ ಚಾನ್ಯಃ ಪುಮಾನ್ ಯಸ್ತತ್ ಪ್ರದಾಸ್ಯತಿ ।
ಯದಂಗಃ ಪ್ರದದೌ ವಿತ್ತಂ ಸೋಮಸಂಸ್ಥಾಸು ಸಪ್ತಸು ॥೩೬॥

ಸೋಮಸಂಸ್ಥಾ ಎಂದು ಕರೆಯಲ್ಪಡುವ ಏಳು ಯಾಗಗಳಲ್ಲಿಯೂ ಅಂಗ-ರಾಜನು ಎಷ್ಟು ದಕ್ಷಿಣೆಗಳನ್ನು ಕೊಟ್ಟನೋ, ಅಷ್ಟು ದಕ್ಷಿಣೆಗಳನ್ನು ಕೊಟ್ಟ ಮನುಷ್ಯನು ಈ ಹಿಂದೆ ಹುಟ್ಟಿಲ್ಲ. ಮುಂದೆಯೂ ಕೂಡ ಹುಟ್ಟಲು ಸಾಧ್ಯವಿಲ್ಲ.

ಟಿಪ್ಪಣಿ - ಅಗ್ನಿಷ್ಟೋಮ, ಅತ್ಯಗ್ನಿಷ್ಟೋಮ, ಉಕ್ಥ್ಯ, ಶೋಡಶಿ, ಅತಿರಾತ್ರ, ವಾಜಪೇಯ, ಆಪ್ತೋರ್ಯಾಮ ಎಂಬ ಏಳು ಯಾಗಗಳನ್ನು ಸೋಮಸಂಸ್ಥಾ ಎಂದು ಕರೆಯುತ್ತಾರೆ.

ನ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ।
ಪುತ್ರಾತ್ ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ ॥೩೭॥

ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯವೆಂಬ ನಾಕು ಗುಣಗಳಲ್ಲಿ ನಿನ್ನ ಮಗನಿಗಿಂತ ಅತ್ಯುತ್ತಮನಾದ ಆ ಬೃಹದ್ರಥರಾಜನೇ ಮರಣವನ್ನು ಹೊಂದಿ-ರುವಾಗ, ನಿನ್ನ ಮಗನಿಗೋಸ್ಕರ ಏಕೆ ದುಃಖವನ್ನು ಅನುಭವಿಸುವಿ.

ಟಿಪ್ಪಣಿ - ಬೃಹದ್ರಥ ಚಂದ್ರವಂಶದ ಕ್ಷತ್ರಿಯ. ಕಾಶೀರಾಜನ ಇಬ್ಬರು ಪುತ್ರಿಯರೇ ಇವನ ಪತ್ನಿಯರು. ಜರಾಸಂಧನು ಇವನ ಮಗ. ಮಹಾಭಾರತದ ಅರಣ್ಯಪರ್ವದಲ್ಲಿ ಇವನ ಕಥೆಯು ವಿಸ್ತಾರವಾಗಿ ಬಂದಿದೆ. ಬೃಹದ್ರಥನ ಹೆಸರು ಋಗ್ವೇದದಲ್ಲಿಯೂ ಕೂಡ ಬರುತ್ತದೆ.

ಶಿಬಿ ಚಕ್ರವರ್ತಿಯ ಸಾಧನೆ

ಶಿಬಿಮೌಶೀನರಂ ಚೈವ ಮೃತಂ ಶುಶ್ರುಮ ಸೃಂಜಯ।
ಯ ಇಮಾಂ ಪೃಥಿವೀಂ ಕೃತ್ಸ್ನಾಂ ಚರ್ಮವತ್ಸಮವೇಷ್ಟಯತ್ ॥೩೮॥

ಉಶೀನರ ಎಂಬ ರಾಜನಿಗೆ, ಶಿಬಿ ಎಂಬ ಮಗನಿದ್ದನು. ಇವನೂ ಸಹ ರಾಜ್ಯಭಾರವನ್ನು ಮಾಡಿ, ಮೃತನಾದನು. ಸೃಂಜಯನೇ! ಸಮಗ್ರಭೂಮಂಡಲವನ್ನು ಚರ್ಮದಂತೆ ಹೊದಿಸಿ, ತನ್ನ ಅಧೀನವನ್ನಾಗಿ ಮಾಡಿಕೊಂಡಿದ್ದನು.

ಟಿಪ್ಪಣಿ - ಚಾಪೆಯ ಸುರುಳಿಯನ್ನು ಬಿಡಿಸಿ, ಹರಡಿದಷ್ಟು ಸುಲಭವಾಗಿ ಸಮಗ್ರ ಭೂಮಂಡಲವನ್ನೇ ಹರಡಿ, ತನ್ನ ಅಧೀನವನ್ನಾಗಿ ಮಾಡಿಕೊಂಡಿದ್ದನು. ಹರಡಿದ ಚಾಪೆಯು ಹೇಗೆ ಸಂಪೂರ್ಣವಾಗಿ ನಮ್ಮ ಅಧೀನವಾಗಿರುತ್ತದೋ, ಅದರಂತೆ ಈ ಭೂಮಂಡಲವನ್ನು ತನ್ನ ಅಧೀನವನ್ನಾಗಿ ಮಾಡಿಕೊಂಡಿದ್ದನು. ಅವನ ರಾಜ್ಯಾಡಳಿತದಲ್ಲಿ ಬೇರೆ ಯಾರೊಬ್ಬನೂ ರಾಜನಾಗಿರಲಿಲ್ಲ ಎಂದಭಿಪ್ರಾಯ.

ಮಹತಾ ರಥಘೋಷೇಣ ಪೃಥಿವೀಮನುನಾದಯನ್।
ಏಕಚಕ್ರಾಂ ಮಹೀಂ ಚಕ್ರೇ ಜೈತ್ರೇಣೈಕರಥೇನ ಯಃ ॥೩೯॥

ಶಿಬಿಯು ತನ್ನ ರಥದ ಘೋಷದಿಂದ ಭೂಮಂಡಲವನ್ನೇ ಪ್ರತಿಧ್ವನಿಗೊಳಿಸಿದನು. ಸಮಗ್ರ ಭೂಮಂಡಲವನ್ನು ಏಕಚಕ್ರಾಧಿಪತ್ಯದಿಂದ ಆಳಿದನು.

ಯಾವದದ್ಯ ಗವಾಶ್ವಂ ಸ್ಯಾದಾರಣ್ಯೈಃ ಪಶುಭಿಃ ಸಹ।
ತಾವತೀಃ ಪ್ರದದೌ ಗಾಃ ಸ ಶಿಬಿರೌಶೀನರೋಽಧ್ವರೇ ॥೪೦॥

ಆ ಶಿಬಿಯು ಒಮ್ಮೆ ಮಹಾಯಾಗವನ್ನು ಆಚರಿಸಿದನು. ಆಗ ಅರಣ್ಯದಲ್ಲೂ ಸೇರಿದಂತೆ ತನ್ನ ಆಡಳಿತದಲ್ಲಿ ಎಷ್ಟು ಹಸು, ಕುದುರೆಗಳಿದ್ದವೋ, ಅಷ್ಟೇ ಸಂಖ್ಯೆಯ ಹಸುಗಳನ್ನು ದಾನವನ್ನಾಗಿ ನೀಡಿದನು.

ನೋದ್ಯಂತಾರಂ ಧುರಂ ತಸ್ಯ ಕಂಚಿನ್ಮೇನೇ ಪ್ರಜಾಪತಿಃ।
ನ ಭೂತಂ ನ ಭವಿಷ್ಯಂತಂ ಸರ್ವರಾಜಸು ಭಾರತ।
ಅನ್ಯತ್ರೌಶೀನರಾಚ್ಛೈಬ್ಯಾದ್ ರಾಜರ್ಷೇರಿಂದ್ರವಿಕ್ರಮಾತ್ ॥೪೧॥

ಇಂದ್ರನ ಪರಾಕ್ರಮದಂತೆ ಬಲಿಷ್ಠನಾದ ಆ ಶಿಬಿಯೆಂಬ ಯಾವ ರಾಜರ್ಷಿಯಿದ್ದನೋ, ಅವನು ಮಾಡಿದ ಪ್ರಜಾರಕ್ಷಣೆಯಂತೆ ಮತ್ತೊಬ್ಬ ರಾಜನು ಹಿಂದೆಂದೂ ಮಾಡಿರುವುದಿಲ್ಲ. ಮುಂದೆಯೂ ಕೂಡ ಅವನನ್ನು ಮೀರಬಲ್ಲ ಮತ್ತೊಬ್ಬ ರಾಜನು ಹುಟ್ಟಲು ಸಾಧ್ಯವಿಲ್ಲ. ಹೀಗೆ ಆ ಬ್ರಹ್ಮನೇ ತಿಳಿದಿದ್ದನು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ।
ಪುತ್ರಾತ್ ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ॥
ಅದಕ್ಷಿಣಮಯಜ್ವಾನಂ ತಂ ವೈ ಸಂಶಾಮ್ಯ ಮಾ ಶುಚಃ ॥೪೨॥

ನಿನಗಿಂತ ಮತ್ತು ನಿನ್ನ ಮಗನಿಗಿಂತ ಧರ್ಮ, ಜ್ಞಾನ, ವೈರಾಗ್ಯ ಮತ್ತು, ಐಶ್ವರ್ಯ ನಾಲ್ಕು ಗುಣಗಳಲ್ಲಿ ಅಧಿಕನಾದ ಆ ಶಿಬಿ ಚಕ್ರವರ್ತಿಯೇ ಮರಣವನ್ನು ಹೊಂದಿದ ಮೇಲೆ, ಯಜ್ಞ-ಯಾಗಾದಿಗಳನ್ನು ಮಾಡದ, ದಕ್ಷಿಣೆಗಳನ್ನು ಕೊಡದ ನಿನ್ನ ಮಗನ ವಿಷಯದಲ್ಲಿ ಇಷ್ಟೇಕೆ ದುಃಖವನ್ನು ಅನುಭವಿಸುತ್ತಿರುವಿ. ದುಃಖವನ್ನು ಹೊಂದಬೇಡ.

ಟಿಪ್ಪಣಿ - ಚಂದ್ರವಂಶದಲ್ಲಿ ಹುಟ್ಟಿದ ಉಶೀನರ ಎಂಬ ರಾಜನ ಮಗನೇ ಶಿಬಿ. ಯಯಾತಿಯ ಮಗಳಾದ ಮಾಧವಿಯು ಇವನ ತಾಯಿ. ಗೋಪತಿಯು ಇವನ ಮಗ. ಋಷಗರ್ಭ, ಶಿಬಿರ, ಮದ್ರ, ಕೇಕಯ ಮೊದಲಾದ ಮಕ್ಕಳು ಇವನಿಗಿದ್ದರು ಎಂಬುದಾಗಿ ಭಾಗವತವು ಹೇಳುತ್ತಿದೆ. ಇವನಿಗೆ ಬೃಹದ್‌ಗರ್ಭನೆಂಬ ಮತ್ತೊಬ್ಬ ಮಗನಿದ್ದನು. ಇವನನ್ನು ಬ್ರಹ್ಮದೇವನಿಗೆ ಸಮರ್ಪಣೆ ಮಾಡಿದನು. ಇವನೊಮ್ಮೆ

ನದಿಯ ದಡದಲ್ಲಿ ಯಾಗವನ್ನು ಮಾಡುತ್ತಿದ್ದಾಗ ಇಂದ್ರನು ಗಿಡುಗನಾಗಿ, ಅಗ್ನಿಯು ಪಾರಿವಾಳವಾಗಿಯೂ ಬಂದರು. ಆ ಪಾರಿವಾಳವನ್ನು ಶಿಬಿಯು ರಕ್ಷಣೆ ಮಾಡುವುದಕ್ಕಾಗಿ ತನ್ನ ದೇಹವನ್ನೇ ಗಿಡುಗಕ್ಕೆ ಸಮರ್ಪಣೆ ಮಾಡಿದನು. ಶರಣಾಗತ ರಕ್ಷಣೆಯ ಈ ಗುಣವನ್ನು ಕಂಡು, ದೇವತೆಗಳು ಮೆಚ್ಚಿದರು.

ಭರತ ಚಕ್ರವರ್ತಿಯ ಸಾಧನೆ

ಭರತಂ ಚೈವ ದೌಃಷಂತಿಂ ಮೃತಂ ಸೃಂಜಯ ಶುಶ್ರುಮ।
ಶಾಕುಂತಲಂ ಮಹೇಷ್ವಾಸಂ ಭೂರಿದ್ರವಿಣತೇಜಸಮ್ ॥೪೩॥

ದುಷ್ಷಂತನಿಗೆ ಶಕುಂತಲೆಯಲ್ಲಿ ಭರತನು ಮಗನಾಗಿ ಹುಟ್ಟಿದನು. ಇವನೂ ಸಹ ಚಕ್ರವರ್ತಿಯಾಗಿ ಭೂಮಿಯನ್ನು ಆಳಿದನು. ಆದರೆ ಕಾಲಗತಿಯಂತೆ ಇವನೂ ಸಹ ಮೃತನಾಗಿದ್ದಾನೆ. ಈ ಭರತನು ಮಹಾತೇಜಸ್ವಿಯಾಗಿದ್ದನು. ಧನುರ್ಧಾರಿಯಾಗಿದ್ದನು. ಅತ್ಯಂತ ಶ್ರೀಮಂತನಾಗಿದ್ದನು.

ಯೋ ಬದ್ಧಾತ್ರಿಂಶತೋ ಹ್ಯಶ್ವಾನ್ ದೇವೇಭ್ಯೋ ಯಮುನಾಮನು।
ಸರಸ್ವತೀಂ ವಿಂಶತಿಂ ಚ ಗಂಗಾಮನು ಚತುರ್ದಶ ॥೪೪॥

ಇವನು ದೇವತೆಗಳನ್ನು ತೃಪ್ತಿ ಪಡಿಸುವುದಕ್ಕಾಗಿ, ಯಮುನಾ ನದಿಯ ತೀರದಲ್ಲಿ ಮೂವತ್ತು ಅಶ್ವಮೇಧಯಾಗಗಳನ್ನು, ಗಂಗಾನದಿ ತೀರದಲ್ಲಿ ಇಪ್ಪತ್ತು ಅಶ್ವಮೇಧಯಾಗಗಳನ್ನು, ಸರಸ್ವತೀ ನದಿಯ ತೀರದಲ್ಲಿ ಹದಿನಾಲ್ಕು ಅಶ್ವಮೇಧಯಾಗಗಳನ್ನು ಆಚರಿಸಿದನು.

ಅಶ್ವಮೇಧಸಹಸ್ರಾಣಿ ರಾಜಸೂಯಶತೇನ ಚ।
ಇಷ್ಟವಾನ್ ಸ ಮಹಾತೇಜಾ ದೌಃಷಂತಿರ್ಭರತಃ ಪುರಾ ॥೪೫॥

ಆ ಭರತನು ತಾನು ಚಕ್ರವರ್ತಿಯಾಗಿದ್ದಾಗ ಒಟ್ಟು ಒಂದು ಸಾವಿರ ಅಶ್ವಮೇಧಯಾಗಗಳನ್ನು, ನೂರು ರಾಜಸೂಯಯಾಗಗಳನ್ನು ಆಚರಿಸಿ ದೇವತೆಗಳನ್ನು ತೃಪ್ತಿಗೊಳಿಸಿದ್ದನು.

ಭರತಸ್ಯ ಮಹತ್ ಕರ್ಮ ಸರ್ವರಾಜಸು ಪಾರ್ಥಿವಾಃ।
ಖಂ ಮರ್ತ್ಯ ಇವ ಬಾಹುಭ್ಯಾಂ ನಾನುಗಂತುಮಶಕ್ನುವನ್ ॥೪೬॥

ಮನುಷ್ಯನು ತನ್ನ ಬಾಹುಗಳಿಂದ ಆಕಾಶವನ್ನು ಮುಟ್ಟಲು ಹೇಗೆ ಅಸಾಧ್ಯವೋ? ಅದರಂತೆ ಆ ಭರತನು ಮಾಡಿದ ಮಹತ್ಕಾರ್ಯಗಳನ್ನು ಯಾವ ರಾಜನೂ ಕೂಡ ಅನುಸರಿಸಲು ಸಾಧ್ಯವಾಗುವುದಿಲ್ಲ.

ಪರಂ ಸಹಸ್ರಾದ್ ಯೋ ಬದ್ಧಾನ್ ಹಯಾನ್ ವೇದೀಂ ವಿತತ್ಯ ಚ।
ಸಹಸ್ರಂ ಯತ್ರ ಪದ್ಮಾನಾಂ ಕಣ್ವಾಯ ಭರತೋ ದದೌ ॥೪೭॥

ಭರತನು ಸಾವಿರಕ್ಕಿಂತ ಅಧಿಕವಾದ ಅಶ್ವಗಳನ್ನು ಬಂಧಿಸಿ, ಯಾಗ ಮಾಡಿದನು. ಆ ಯಾಗದಲ್ಲಿ ನೂರು ಕೋಟಿ ಹಸುಗಳನ್ನು ಕಣ್ವಋಷಿಗಳಿಗೆ ದಾನ ಮಾಡಿದನು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ।
ಪುತ್ರಾತ್ ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ ॥೪೮॥

ನಾಕು ಗುಣಗಳಿಂದ ನಿನಗಿಂತಲೂ, ನಿನ್ನ ಮಗನಿಗಿಂತಲೂ ಹೆಚ್ಚು ಮಹಾಭಾಗ್ಯಶಾಲಿಯಾದ ಆ ಭರತನೇ ಮರಣವನ್ನು ಹೊಂದಿದ ಮೇಲೆ ನಿನ್ನ ಮಗನ ವಿಷಯದಲ್ಲಿ ಏಕೆ ದುಃಖವನ್ನು ಅನುಭವಿಸುವಿ?

ಟಿಪ್ಪಣಿ - ದುಷ್ಟಂತರಾಜನು ಕಣ್ವಾಶ್ರಮಕ್ಕೆ ತೆರಳಿದಾಗ ಅಲ್ಲಿ ಶಕುಂತಲೆಯನ್ನು ನೋಡಿ ಮನಸೋತನು. ಗಾಂಧರ್ವವಿವಾಹವಾದನು. ಅವಳಲ್ಲಿ ಗರ್ಭಾಧಾನ ಮಾಡಿದನು. ನಿನ್ನನ್ನು ಕರೆಯಿಸಿಕೊಳ್ಳುತ್ತೇನೆಂದು ವಾಗ್ದಾನ ಮಾಡಿ, ತನ್ನ ಪಟ್ಟಣಕ್ಕೆ ಹೊರಟುಬಿಟ್ಟನು. ಶಕುಂತಲೆಯು ಪುತ್ರನನ್ನು ಹೆತ್ತು ಕೆಲವು ವರ್ಷಗಳು ದಾಟಿದರೂ ದುಷ್ಟಂತನು ಈಕೆಯನ್ನು ಕರೆಸಿಕೊಳ್ಳಲ್ಲಿಲ್ಲ. ಕಣ್ವಋಷಿಗಳು ಶಕುಂತಲೆಯನ್ನು ತನ್ನ ಶಿಷ್ಯರ ಜೊತೆ ರಾಜನ ಆಸ್ಥಾನಕ್ಕೆ ಕಳುಹಿಸಿದರು. ರಾಜನು ಆ ಶಕುಂತಲೆಯನ್ನು ಮತ್ತು ಮಗುವನ್ನು ಸ್ವೀಕರಿಸಲು ಅನುಮಾನ ಪಟ್ಟನು. ಆಗ ಆಕಾಶವಾಣಿಯಾಯಿತು. 'ಶಕುಂತಲೆಯು ನಿನ್ನ ಪತ್ನಿ, ಬಾಲಕನು ನಿನ್ನ ಮಗ ಸ್ವೀಕರಿಸು' ಎಂದು. ಅನಂತರ ರಾಜನು ಅವರನ್ನು ಸ್ವೀಕರಿಸಿದನು. ಆ ಮಗುವೇ

ಭರತನಾದನು. ದುಷ್ಷಂತನ ಅನಂತರ ಭರತನು ರಾಜನಾದನು. ಅವನಿಗೆ ಮೂರು ಮಂದಿ ಪತ್ನಿಯರಿದ್ದರು. ಒಂಬತ್ತು ಮಂದಿ ಮಕ್ಕಳಾದರು. ಈ ಭರತನ ಆಳ್ವಿಕೆಯಿಂದಲೇ ಈ ದೇಶಕ್ಕೆ 'ಭಾರತ' ಎಂಬ ಹೆಸರು ಬಂದಿತು. ಮತ್ತು ಅವನ ವಂಶಕ್ಕೂ 'ಭರತವಂಶ' ಎಂದೇ ಹೆಸರು ಬಂದಿತು. ಇವನು ಗಂಗಾತೀರದಲ್ಲಿ ಮತ್ತು ಯಮುನಾ ತೀರದಲ್ಲಿ ಅನೇಕ ಅಶ್ವಮೇಧಯಾಗಗಳನ್ನು ಆಚರಿಸಿದನು. ಚಂದ್ರವಂಶದಲ್ಲೇ ಅತ್ಯಂತ ಹೆಸರುವಾಸಿಯಾದನು. ಇವನು ಕಥೆಯು ಆದಿಪರ್ವದಲ್ಲಿ ವಿಸ್ತಾರವಾಗಿ ಬಂದಿದೆ.

ಶ್ರೀರಾಮಚಂದ್ರನ ಸಾಧನೆ

ರಾಮಂ ದಾಶರಥಿಂ ಚೈವ ಮೃತಂ ಶುಶ್ರುಮ ಸೃಂಜಯ।
ಯೋಽನ್ವಕಂಪತ ವೈ ನಿತ್ಯಂ ಪ್ರಜಾಃ ಪುತ್ರಾನಿವೌರಸಾನ್ ॥೪೯॥

ಸೃಂಜಯನೇ! ದಶರಥನಿಗೆ ಶ್ರೀರಾಮನೆಂಬ ಮಗನಿದ್ದನು. ನಿತ್ಯವಾಗಿಯೂ ಎಲ್ಲಾ ಪ್ರಜೆಗಳನ್ನು ಔರಸಪುತ್ರರಂತೆ ಕಾಣುತ್ತಾ, ಅತ್ಯಂತ ಅನುಕಂಪದಿಂದ ಎಲ್ಲರನ್ನೂ ತನ್ನ ಮಕ್ಕಳಂತೆ ನೋಡಿಕೊಳ್ಳುತ್ತಿದ್ದನು. ಅಂಥ ಶ್ರೀರಾಮನೂ ಕೂಡ ಪರಂಧಾಮವನ್ನು ಪ್ರವೇಶಿಸಿದನು.

ವಿಧವಾ ಯಸ್ಯ ವಿಷಯೇ ನಾನಾಥಾಃ ಕಾಶ್ಚನಾಭವನ್।
ಸರ್ವಸ್ಯಾಸೀತ್ ಪಿತೃಸಮೋ ರಾಮೋ ರಾಜ್ಯಂ ಯದಾನ್ವಶಾತ್॥೫೦॥

ಆ ಶ್ರೀರಾಮಚಂದ್ರನು ರಾಜ್ಯಭಾರವನ್ನು ಮಾಡುತ್ತಿರುವಾಗ, ಒಬ್ಬಳೇ ಒಬ್ಬಳು ಸ್ತ್ರೀಯು ವಿಧವೆಯಾಗಿರಲಿಲ್ಲ. ಒಬ್ಬರೂ ಕೂಡ ಅನಾಥರಾಗಿರಲಿಲ್ಲ. ಪ್ರತಿಯೊಬ್ಬ ಪ್ರಜೆಗಳಿಗೂ ಈ ಶ್ರೀರಾಮಚಂದ್ರನು ತಂದೆಯ ಸಮಾನನಾಗಿದ್ದನು.

ಕಾಲವರ್ಷಾಶ್ಚ ಪರ್ಜನ್ಯಾಃ ಸಸ್ಯಾನಿ ರಸವಂತಿ ಚ।
ನಿತ್ಯಂ ಸುಭಿಕ್ಷಮೇವಾಸೀದ್ ರಾಮೇ ರಾಜ್ಯಂ ಪ್ರಶಾಸತಿ ॥೫೧॥

ಕಾಲಕ್ಕೆ ಸರಿಯಾಗಿ ಮಳೆಯಾಗುತ್ತಿತ್ತು. ಬೆಳೆಗಳು ಸಮೃದ್ಧವಾಗಿ ಬೆಳೆಯು-

ತ್ತಿದ್ದವು. ನಿತ್ಯವೂ ಅವನ ರಾಜ್ಯದಲ್ಲಿ ಸುಭಿಕ್ಷವೇ ಇದ್ದಿತು. ದುರ್ಭಿಕ್ಷವೇ ಆ ರಾಮ-ರಾಜ್ಯದಲ್ಲಿ ಇರಲಿಲ್ಲ.

ಪ್ರಾಣಿನೋ ನಾಪ್ಸು ಮಜ್ಜಂತಿ ನಾನರ್ಥೇ ಪಾವಕೋऽದಹತ್ ।
ನ ವ್ಯಾಲಜಂ ಭಯಂ ಚಾಸೀದ್ ರಾಮೇ ರಾಜ್ಯಂ ಪ್ರಶಾಸತಿ ॥೫೨॥

ಶ್ರೀರಾಮಚಂದ್ರನು ರಾಜ್ಯಭಾರ ಮಾಡುತ್ತಿದ್ದಾಗ ಒಬ್ಬರೇ ಒಬ್ಬರೂ ಕೂಡ ನೀರಿನಲ್ಲಿ ಮುಳುಗಿ ಸಾಯಲಿಲ್ಲ. ಅಗ್ನಿಯಲ್ಲಿ ಬಿದ್ದು ಪ್ರಾಣ ಬಿಡಲಿಲ್ಲ. ರೋಗ-ದಿಂದ ಪೀಡಿತರಾಗಿರಲಿಲ್ಲ.

ಆಸನ್ ವರ್ಷಸಹಸ್ರಾಣಿ ತಥಾ ಪುತ್ರಸಹಸ್ರಿಕಾಃ ।
ಅರೋಗಾಃ ಸರ್ವಸಿದ್ಧಾರ್ಥಾಃ ಪ್ರಜಾ ರಾಮೇ ಪ್ರಶಾಸತಿ ॥೫೩॥

ಸ್ತ್ರೀಯರು ಸಾವಿರ ವರ್ಷಗಳ ಕಾಲ ಬದುಕುತ್ತಿದ್ದರು. ಸಾವಿರ ವರ್ಷಗಳನ್ನು ತುಂಬಿದ ಪುರುಷರಿದ್ದರು. ಎಲ್ಲಾ ಪ್ರಜೆಗಳು ರೋಗವಿಲ್ಲದೇ ದೃಢಕಾಯರಾಗಿದ್ದರು. ಪೂರ್ಣವಾದ ಅಭಿಲಾಷೆಗಳನ್ನು ಹೊಂದುತ್ತಿದ್ದರು.

ನಾನ್ಯೋನ್ಯೇನ ವಿವಾದೋऽಭೂತ್ ಸ್ತ್ರೀಣಾಮಪಿ ಕುತೋ ನೃಣಾಮ್।
ಧರ್ಮನಿತ್ಯಾಃ ಪ್ರಜಾಶ್ಚಾಸನ್ ರಾಮೇ ರಾಜ್ಯಂ ಪ್ರಶಾಸತಿ ॥೫೪॥

ಆ ರಾಮರಾಜ್ಯದಲ್ಲಿ ಸ್ತ್ರೀಯರು ಪರಸ್ಪರವಾಗಿ ಜಗಳ ಮಾಡುತ್ತಿರಲಿಲ್ಲ. ಹೀಗಿದ್ದ ಮೇಲೆ ಪುರುಷರಲ್ಲಿ ವಿವಾದವಿರಲಿಲ್ಲವೆಂದು ಪ್ರತ್ಯೇಕವಾಗಿ ಹೇಳ-ಬೇಕೇನು? ಪ್ರಜೆಗಳು ಯಾವುದೇ ಭಯ ಇಲ್ಲದೇ ಧರ್ಮವನ್ನು ಅನುಷ್ಠಾನ ಮಾಡುತ್ತಿದ್ದರು. ಇದುವೇ ರಾಮರಾಜ್ಯದ ವೈಭವ.

ಸಂತುಷ್ಟಾಸರ್ವಸಿದ್ಧಾರ್ಥಾ ನಿರ್ಭಯಾ ಸ್ವೈರಚಾರಿಣಃ ।
ನರಾಃ ಸತ್ಯವ್ರತಾಶ್ಚಾಸನ್ ರಾಮೇ ರಾಜ್ಯಂ ಪ್ರಶಾಸತಿ ॥೫೫॥

ಎಲ್ಲ ಪ್ರಜೆಗಳು ತಮ್ಮೆಲ್ಲ ಅಭೀಷ್ಟಗಳನ್ನು ಪೂರೈಸಿಕೊಂಡು ಸಂತೃಪ್ತರಾಗಿದ್ದರು. ಯಾವುದೇ ಭಯವಿರಲಿಲ್ಲ. ಯಥೇಚ್ಛವಾಗಿ ಕಾಮನೆಗಳನ್ನು ಪಡೆದುಕೊಳ್ಳು-

ತ್ತಿದ್ದರು. ಪ್ರತಿಯೊಬ್ಬರೂ ಸತ್ಯಪರಾಯಣರಾಗಿದ್ದರು. ಹೀಗೆ ರಾಮರಾಜ್ಯವನ್ನು ಪ್ರಶಂಸೆ ಮಾಡುತ್ತಾರೆ.

ನಿತ್ಯಪುಷ್ಪಫಲಾಶ್ಚೈವ ಪಾದಪಾ ನಿರುಪದ್ರವಾಃ।
ಸರ್ವಾ ದ್ರೌಣದುಘಾ ಗಾವೋ ರಾಮೇ ರಾಜ್ಯಂ ಪ್ರಶಾಸತಿ ॥೫೬॥

ವೃಕ್ಷಗಳೂ ಕೂಡ ಪ್ರತಿನಿತ್ಯ ಹೂವು, ಹಣ್ಣುಗಳನ್ನು ಯಥೇಚ್ಛವಾಗಿ ಬಿಡುತ್ತಿದ್ದವು. ಯಾವುದೇ ಉಪದ್ರವವು ವೃಕ್ಷಗಳಿಗೆ ಇರಲಿಲ್ಲ. ಎಲ್ಲ ಹಸುಗಳು ಕೊಳಗದಷ್ಟು ಹಾಲನ್ನು ನೀಡುತ್ತಿದ್ದವು. ಹೀಗೆ ಶ್ರೀರಾಮನು ರಾಜ್ಯವನ್ನು ಶಾಸನೆ ಮಾಡುತ್ತಿದ್ದನು.

ಸ ಚತುರ್ದಶ ವರ್ಷಾಣಿ ವನೇ ಪ್ರೋಷ್ಯ ಮಹಾತಪಾಃ।
ದಶಾಶ್ವಮೇಧಾನ್ ಜಾರೂಥ್ಯಾಮಾಜಹಾರ ನಿರರ್ಗಲಾನ್ ॥೫೭॥

ಆ ಶ್ರೀರಾಮನು ಹದಿನಾಕು ವರ್ಷಗಳ ಕಾಲ ವನವಾಸವನ್ನು ಮುಗಿಸಿ ರಾಜ್ಯಕ್ಕೆ ಹಿಂತಿರುಗಿದನು. ಅನಂತರ ಹತ್ತು ಅಶ್ವಮೇಧಯಾಗಗಳನ್ನು, ಜಾರೂಥೀ ಎಂಬ ನದಿಯ ತೀರದಲ್ಲಿ ಯಾವ ತೊಂದರೆಯಿಲ್ಲದೇ ಆಚರಿಸಿದನು.

ಟಿಪ್ಪಣಿ- ಜಾರುಥ್ಯಮಾಜಹಾರ ನಿರರ್ಗಲಾನ್ ಇತ್ಯತ್ರ **ಜಾರುಥ್ಯಾಂ** ಜಾರು-ಥೀಸಂಜ್ಞಾಯಾಂ ನದ್ಯಾಮ್।

ಜಾರೂಥೀ ಎಂಬ ಹೆಸರುಳ್ಳ ನದಿಯಲ್ಲಿ

ಶ್ಯಾಮೋ ಯುವಾ ಲೋಹಿತಾಕ್ಷೋ ಮತ್ತವಾರಣವಿಕ್ರಮಃ।
ಆಜಾನುಬಾಹುಃ ಸುಮುಖೋ ಹರಿಃ ಸ್ಕಂಧೋ ಮಹಾಭುಜಃ ॥೫೮॥
ದಶವರ್ಷಸಹಸ್ರಾಣಿ ರಾಮೋ ರಾಜ್ಯಮಕಾರಯತ್।

ಶ್ರೀರಾಮಚಂದ್ರನ ದೇಹದ ಕಾಂತಿಯು ಶ್ಯಾಮಲವರ್ಣದಿಂದ ಕಂಗೊಳಿಸುತ್ತಿತ್ತು. ಕೆಂಪಾದ ಕಡೆಗಣ್ಣುಗಳ ನೋಟವನ್ನು ಹೊಂದಿದ್ದನು. ಆನೆಗಳ ಗುಂಪಿನಲ್ಲಿ ಮಹಾಸಲಗದಂತೆ ಬಲಿಷ್ಠನಾಗಿದ್ದನು. ಆಜಾನುಬಾಹುವಾಗಿದ್ದನು. ಸುಂದರ-

ವಾದ ಮುಖವುಳ್ಳವನಾಗಿದ್ದನು. ಸಿಂಹದ ಹೆಗಲಿನಂತೆ ವಿಶಾಲವಾದ ಹೆಗಲುಳ್ಳವನಾಗಿದ್ದನು. ಮಾಂಸಲವಾದ ಭುಜಗಳನ್ನು ಹೊಂದಿದ್ದನು. ಇಂಥ ಶ್ರೀರಾಮಚಂದ್ರನು ಹನ್ನೊಂದು ಸಾವಿರ ವರ್ಷಗಳ ಕಾಲ ರಾಜ್ಯಪರಿಪಾಲನೆಯನ್ನು ಮಾಡಿದನು.

ಸ ಚೇನ್ನಮಾರ ಸೃಂಜಯ ಚತುರ್ಭದ್ರತರಸ್ತ್ವಯಾ।
ಪುತ್ರಾತ್ ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ ॥೫೯॥

ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯಗಳಲ್ಲಿ ನಿನಗಿಂತಲೂ, ನಿನ್ನ ಮಗನಿಗಿಂತಲೂ ಅತ್ಯಧಿಕನಾದ ಆ ಶ್ರೀರಾಮಚಂದ್ರನೇ ಪರಂಧಾಮವನ್ನು ಪ್ರವೇಶ ಮಾಡಿದ ಮೇಲೆ ನೀನು ನಿನ್ನ ಮಗನ ವಿಷಯದಲ್ಲಿ ಏಕೆ ವ್ಯರ್ಥವಾಗಿ ಸಂಕಟವನ್ನು ಅನುಭವಿಸುತ್ತಿರುವಿ?

ಟಿಪ್ಪಣಿ - ಶ್ರೀರಾಮಚಂದ್ರನ ಆಡಳಿತವನ್ನು ರಾಮಾಯಣವು ಅತ್ಯಂತ ವಿಸ್ತಾರವಾಗಿ ವರ್ಣನೆ ಮಾಡಿದೆ. ಮಹಾಭಾರತದ ವನಪರ್ವದಲ್ಲಿಯೂ ಸಂಕ್ಷೇಪವಾಗಿ ಸಂಪೂರ್ಣರಾಮಾಯಣದ ಕಥೆಯು ಇರುತ್ತದೆ. ಶ್ರೀರಾಮಚಂದ್ರನು ಒಟ್ಟು ಹನ್ನೊಂದು ಸಾವಿರ ವರ್ಷಗಳ ಕಾಲ ರಾಜ್ಯಭಾರವನ್ನು ಮಾಡಿದನು. ನಕ್ಷತ್ರಮಾಸದ ಪ್ರಕಾರ ಹದಿಮೂರುಸಾವಿರ ವರ್ಷಗಳ ಕಾಲ ರಾಜ್ಯಭಾರವನ್ನು ಮಾಡಿದ್ದಾನೆ. ಜಾರೂಥೀ ಎಂಬ ನದಿಯ ದಡದಲ್ಲಿ ಹತ್ತು ಅಶ್ವಮೇಧಯಾಗಗಳನ್ನು ಮಾಡಿದನೆಂಬ ವಿಚಾರವು ಇಲ್ಲಿ ಮಾತ್ರ ಬರುತ್ತಿದೆ. ವಾಸ್ತವಿಕವಾಗಿ ಜಾರೂಥೀ ಎಂಬ ಒಂದು ನಗರವಿತ್ತು. ಅಲ್ಲಿ ಆಹುತಿ ಎಂಬ ರಾಜನಿದ್ದನು. ಅವನು ಶ್ರೀಕೃಷ್ಣನಿಂದ ಪರಾಜಿತನಾದನೆಂದು ಮಹಾಭಾರತದ ವನಪರ್ವದಲ್ಲಿ ಕಥೆಯು ಬಂದಿದೆ. ಆದರೆ ಇಲ್ಲಿ ಲಕ್ಷಾಲಂಕಾರದಲ್ಲಿ ಜಾರೂಥೀ ಎಂಬ ನದಿಯ ದಡದಲ್ಲಿ ಎಂದು ಹೇಳುತ್ತಿದ್ದಾರೆ.

ಭಗೀರಥನ ಸಾಧನೆ

ಭಗೀರಥಂ ಚ ರಾಜಾನಂ ಮೃತಂ ಶುಶ್ರುಮ ಸೃಂಜಯ।
ಯಸ್ಯೇಂದ್ರೋ ವಿತತೇ ಯಜ್ಞೇ ಸೋಮಂ ಪೀತ್ವಾ ಮದೋತ್ಕಟಃ ॥೬೦॥

ಅಸುರಾಣಾಂ ಸಹಸ್ರಾಣಿ ಬಹೂನಿ ಸುರಸತ್ತಮಃ।
ಅಜಯದ್ ಬಾಹುವೀರ್ಯೇಣ ಭಗವಾನ್ ಪಾಕಶಾಸನಃ ॥೬೧॥

ಸೃಂಜಯನೇ! ಭಗೀರಥನೆಂಬ ರಾಜನೂ ಕೂಡ ಮರಣವನ್ನು ಹೊಂದಿದನೆಂಬುದನ್ನು ನಾವು ಕೇಳಿದ್ದೇವೆ. ಅವನೂ ಕೂಡ ಒಂದು ದೊಡ್ಡ ಯಾಗವನ್ನು ಆಚರಿಸಿದನು. ಅದರಲ್ಲಿ ಸುರಶ್ರೇಷ್ಠನಾದ ಪಾಕಶಾಸನನಾದ ಭಗವಾನ್ ಇಂದ್ರನು ಸೋಮರಸವನ್ನು ಯಥೇಚ್ಛವಾಗಿ ಪಾನ ಮಾಡಿದನು. ಇದರಿಂದ ಮದಭರಿತನಾದನು. ಹೀಗೆ ಯಾಗವನ್ನು ಆಚರಿಸಿದ ಆ ಭಗೀರಥನು ಸಾವಿರಾರು ಅಸುರರನ್ನು ತನ್ನ ಭುಜಪರಾಕ್ರಮದಿಂದ ಒಬ್ಬನೇ ಸದೆಬಡೆದನು.

ಯಃ ಸಹಸ್ರಂ ಸಹಸ್ರಾಣಾಂ ಕನ್ಯಾ ಹೇಮವಿಭೂಷಿತಾಃ।
ಈಜಾನೋ ವಿತತೇ ಯಜ್ಞೇ ದಕ್ಷಿಣಾಮತ್ಯಕಾಲಯತ್ ॥೬೨॥

ತಾನು ಮಾಡಿದ ಆ ದೊಡ್ಡಯಾಗದಲ್ಲಿ ಸುವರ್ಣಾಭರಣಗಳಿಂದ ಭೂಷಿತರಾದ ಹತ್ತುಲಕ್ಷ ಕನ್ಯೆಯರನ್ನು ದಕ್ಷಿಣಾರೂಪದಲ್ಲಿ ದಾನವನ್ನು ಮಾಡಿದನು.

ಸರ್ವಾ ರಥಗತಾಃ ಕನ್ಯಾ ರಥಾಃ ಸರ್ವೇ ಚತುರ್ಯುಜಃ।
ರಥೇ ರಥೇ ಶತಂ ನಾಗಾಃ ಪದ್ಮಿನೋ ಹೇಮಮಾಲಿನಃ ॥೬೩॥

ಆ ಪ್ರತಿಯೊಬ್ಬ ಕನ್ಯೆಯರು ರಥಾರೂಢರಾಗಿದ್ದರು. ಒಂದೊಂದು ರಥದ ಹಿಂದೆಯೂ ಸುವರ್ಣಾಭರಣಗಳಿಂದ ಭೂಷಿತವಾದ ಹಣೆಯಲ್ಲಿ ಕಮಲದ ಚಿಹ್ನೆಯನ್ನು ಹೊಂದಿದ ನೂರು ಆನೆಗಳಿಂದಲೂ ಮತ್ತು ಪ್ರತಿಯೊಂದು ರಥಕ್ಕೂ ನಾಕು ಕುದುರೆಗಳಿದ್ದವು.

ಸಹಸ್ರಮಶ್ವಾ ಏಕೈಕಂ ಹಸ್ತಿನಂ ಪೃಷ್ಠತೋಽನ್ವಯುಃ।
ಗವಾಂ ಸಹಸ್ರಮಶ್ವೇಽಶ್ವೇ ಸಹಸ್ರಂ ಗವ್ಯಜಾವಿಕಮ್ ॥೬೪॥

ಪ್ರತಿಯೊಂದು ಆನೆಗಳ ಜೊತೆಗೂ ಸಾವಿರಾರು ಕುದುರೆಗಳಿದ್ದವು. ಪ್ರತಿಯೊಂದು ಕುದುರೆಗಳ ಜೊತೆ ಸಾವಿರಾರು ಹಸುಗಳಿದ್ದವು. ಒಂದೊಂದು ಹಸುವಿನ

ಹಿಂದೆಯೂ ಸಾವಿರ ಆಡು ಮತ್ತೆ ಮೇಕೆಗಳು ಇದ್ದವು. ಇವೆಲ್ಲವನ್ನೂ ಭಗೀರಥನು ದಾನ ಮಾಡಿದನು.

ಉಪಹ್ವರೇ ನಿವಸತೋ ಯಸ್ಯಾಂಕೇ ನಿಷಸಾದ ಹ।
ಗಂಗಾ ಭಾಗೀರಥೀ ತಸ್ಮಾದುರ್ವಶೀ ಹ್ಯಭವತ್ ಪುರಾ ॥೬೫॥

ಒಮ್ಮೆ ಭಗೀರಥನು ಗಂಗಾನದಿಯ ತೀರದಲ್ಲಿ ವಾಸ ಮಾಡುತ್ತಿದ್ದಾಗ, ಗಂಗಾದೇವಿಯು ಸಣ್ಣಬಾಲಕಿಯಂತೆ ಬಂದು, ಆ ಭಗೀರಥನ ತೊಡೆಯಲ್ಲಿ ಕುಳಿತಳು. ಆದ್ದರಿಂದಲೇ ಆ ಗಂಗೆಯು ಭಾಗೀರಥೀ ಎಂದು, ಊರ್ವಶೀ ಎಂದು ಪ್ರಸಿದ್ಧಳಾದಳು.

ಟಿಪ್ಪಣಿ - ಉಪಹ್ವರೇ ನಿಮಿತ ಇತ್ಯತ್ರ **ಉಪಹ್ವರೇ** ಸಮೀಪೇ ಏಕಾಂತೇ ವಾ।

'ಉಪಹ್ವರೇ' ಎಂಬುದಕ್ಕೆ ಸಮೀಪದಲ್ಲಿ ಅಥವಾ ಏಕಾಂತದಲ್ಲಿ ಎಂದರ್ಥ.

ಭೂರಿದಕ್ಷಿಣಮಿಕ್ಷ್ವಾಕುಂ ಯಜಮಾನಂ ಭಗೀರಥಮ್ ।
ತ್ರಿಲೋಕಪಥಗಾ ಗಂಗಾ ದುಹಿತೃತ್ವಮುಪೇಯುಷೀ ॥೬೬॥

ಯಜ್ಞದಲ್ಲಿ ಯಜಮಾನನಾಗಿ ಯಥೇಚ್ಛವಾಗಿ ದಕ್ಷಿಣೆಯನ್ನು ನೀಡುತ್ತಿದ್ದ ಇಕ್ಷ್ವಾಕುಕುಲೋದ್ಭವನಾದ ಆ ಭಗೀರಥನನ್ನು ತ್ರಿಲೋಕಪಾವನೆಯಾದ ಗಂಗಾದೇವಿಯು ತಂದೆಯನ್ನಾಗಿ ಮಾಡಿಕೊಂಡಳು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ।
ಪುತ್ರಾತ್ ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ ॥೬೭॥

ಸೃಂಜಯನೇ! ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯಗಳಲ್ಲಿ ಭಗೀರಥನು ನಿನಗಿಂತಲೂ, ನಿನ್ನ ಮಗನಿಗಿಂತಲೂ ಅತ್ಯಂತಪುಣ್ಯಶಾಲಿಯಾಗಿದ್ದಾನೆ. ಅವನೇ ಮರಣವನ್ನು ಹೊಂದಿದ ಮೇಲೆ ನೀನು ಬೇರೆಯವರ ವಿಷಯದಲ್ಲಿ ದುಃಖಪಡಲು ಅರ್ಥವೇ ಇಲ್ಲ. ಆದ್ದರಿಂದ ನಿನ್ನ ಮಗನು ಸತ್ತನೆಂದು ದುಃಖಿಸಬೇಡ.

ಟಿಪ್ಪಣಿ - ಇಕ್ಷ್ವಾಕುವಂಶದ ದಿಲೀಪನ ಮಗನೇ ಭಗೀರಥನು. ಇವನಿಗೆ

ಹಂಸಿ ಎಂಬ ಮಗಳಿದ್ದಳು. ಕೌತ್ಸಮುನಿಯೇ ಅಳಿಯನು. ಕಪಿಲಮುನಿಯ ಕೋಪ -ದಿಂದ ಬೂದಿಯಾದ ಅರವತ್ತುಸಾವಿರ ಮಂದಿ ಸಾಗರರ ಸದ್ಗತಿಗಾಗಿ ಗಂಗಾ-ವತರಣವನ್ನು ಮಾಡಿಸಿದ ಮಹಾಧೀರ. ಭಗೀರಥನ ತಂದೆಯಾದ ದಿಲೀಪನು ಗಂಗಾವತರಣದ ಪ್ರಯತ್ನದಲ್ಲಿ ಸದ್ಗತಿಯನ್ನು ಹೊಂದಿದನು. ಅವನ ತಂದೆಯ ಆಸೆಯನ್ನು ಈಡೇರಿಸಬೇಕೆಂದು ಭಗೀರಥನು ತಪಸ್ಸಿಗಾಗಿ ಹಿಮಾಲಯ ಪ್ರಾಂತ್ಯಕ್ಕೆ ತೆರಳಿದನು. ಅಲ್ಲಿ ಆ ರಾಜನು ಕಂದಮೂಲಫಲಗಳನ್ನು ಹಾಗೂ ನೀರನ್ನೇ ಆಹಾರವನ್ನಾಗಿ ಸೇವಿಸುತ್ತಾ, ಒಂದು ಸಾವಿರ ವರ್ಷಗಳ ಕಾಲ ಘೋರ ತಪಸ್ಸನ್ನು ಮಾಡಿದನು. ಅಂತೂ ಗಂಗೆಯು ಪ್ರತ್ಯಕ್ಷಳಾದಳು. ಭೂಮಿಗೆ ಬರಲು ಒಪ್ಪಿದಳು. ಆದರೆ ತನ್ನ ವೇಗವನ್ನು ತಡೆಯುವರು ಯಾರು ಎಂದು ಕೇಳಿದಳು. ಆಗ ಭಗೀರಥನು ಪುನಃ ಮಹಾರುದ್ರದೇವರನ್ನು ಕುರಿತು ತಪಸ್ಸು ಮಾಡಿದನು. ಪ್ರತ್ಯಕ್ಷರಾದ ಮಹಾದೇವರು ಗಂಗೆಯನ್ನು ತಾನು ಧರಿಸುತ್ತೇನೆಂದು ಅಭಯ ಪ್ರದಾನ ಮಾಡಿದರು. ಪುನಃ ಗಂಗೆಯನ್ನು ಪ್ರಾರ್ಥಿಸಿ, ಭೂಮಿಗೆ ಬರುವಂತೆ ಕೇಳಿಕೊಂಡನು. ಆಗ ಗಂಗೆಯು ಶಿವನ ಜಡೆಯಲ್ಲಿ ಧುಮುಕಿದಳು. ಶಿವನ ಜಡೆ-ಯಿಂದ ಕೆಳಗೆ ಹರಿದು, ಆ ಸಗರರಿಗೆ ಸದ್ಗತಿಯನ್ನು ಉಂಟುಮಾಡಿದಳು. ಒಮ್ಮೆ ಕಾಲೇರಯೆಂಬ ರಕ್ಕಸರ ನಾಶಕ್ಕಾಗಿ ಅಗಸ್ತ್ಯನು ಸಮುದ್ರವನ್ನೇ ಆಚಮನ ಮಾಡಿ-ಬಿಟ್ಟನು. ಆಗ ಭಗೀರಥನು ಆ ಸಮುದ್ರವನ್ನು ಗಂಗೋದಕದಿಂದ ತುಂಬಿಸಿದನು. ಗಂಗೋತ್ರಿಯ ಸನ್ನಿಧಾನದಲ್ಲಿ ಭೂಮಿಗೆ ಗಂಗೆಯು ಇಳಿದುಬಂದದ್ದೆಂದು ದಾಖಲೆಗಳಿವೆ. ಅಂದಿನಿಂದ ಇಲ್ಲಿಯ ತನಕವೂ ಭರತಖಂಡದಲ್ಲಿರುವವರನ್ನು, ಈ ಗಂಗೆಯು ಪಾವನ ಮಾಡುತ್ತಿದ್ದಾಳೆ. ಈ ಗಂಗೆಯ ಕಥೆಯನ್ನು ರಾಮಾ-ಯಣದ ಬಾಲಕಾಂಡದಲ್ಲಿ ಶ್ರೀರಾಮನಿಗೆ ವಿಶ್ವಾಮಿತ್ರರು ತಿಳಿಸುತ್ತಾರೆ. ಮತ್ತು ಮಹಾಭಾರತದ ಅರಣ್ಯಪರ್ವದಲ್ಲಿ, ದ್ರೋಣಪರ್ವಗಳಲ್ಲಿಯೂ ಇದರ ವಿಚಾರವಿದೆ.

ದಿಲೀಪರಾಜನ ಸಾಧನೆ

ದಿಲೀಪಂ ಚ ಮಹಾತ್ಮಾನಂ ಮೃತಂ ಶುಶ್ರುಮ ಸೃಂಜಯ।
ಯಸ್ಯ ಕರ್ಮಾಣಿ ಭೂರೀಣಿ ಕಥಯಂತಿ ದ್ವಿಜಾತಯಃ ॥೬೮॥

ಸೃಂಜಯನೇ! ಯಾವ ರಾಜನು ಮಾಡಿದ ಮಹಾಕಾರ್ಯಗಳನ್ನು ಬ್ರಾಹ್ಮಣರು ಇಂದೂ ಕೂಡ ಪ್ರಶಂಸೆ ಮಾಡುತ್ತಾರೋ, ಅಂಥ ಕೀರ್ತಿಶಾಲಿಯಾದ, ಮಹಾತ್ಮನಾದ ದೀಲೀಪನೂ ಕೂಡ ಮೃತನಾದನು ಎಂಬುದಾಗಿ ನಾವು ಕೇಳಿದ್ದೇವೆ.

ಇಮಾಂ ವೈ ವಸುಸಂಪನ್ನಾಂ ವಸುಧಾಂ ವಸುಧಾಧಿಪಃ।
ದದೌ ತಸ್ಮಿನ್ ಮಹಾಯಜ್ಞೇ ಬ್ರಾಹ್ಮಣ್ಯೇಭ್ಯಃ ಸಮಾಹಿತಃ ॥೬೯॥

ಅವನ ಆಡಳಿತದಲ್ಲಿ ಸಮಗ್ರಭೂಮಿಯು ಧನಸಮೃದ್ಧವಾಗಿತ್ತು. ಆದ್ದರಿಂದಲೇ ವಸುಧೆಯಾಗಿದ್ದಳು. ಇವನು ವಸುಧಾಧಿಪನಾಗಿದ್ದನು. ಇವನು ಒಂದು ದೊಡ್ಡ-ಯಾಗವನ್ನು ಆಚರಣೆ ಮಾಡಿದನು. ಈ ಧನಸಮೃದ್ಧವಾದ ಭೂಮಿಯನ್ನೇ ಬ್ರಾಹ್ಮಣರಿಗೆ ದಾನವನ್ನಾಗಿ ನೀಡಿದನು.

ತಸ್ಯೇಹ ಜಾಯಮಾನಸ್ಯ ಯಜ್ಞೇ ಯಜ್ಞೇ ಪುರೋಹಿತಃ।
ಸಹಸ್ರಂ ವಾರಣಾನ್ ಹೈಮಾನ್ ದಕ್ಷಿಣಾಮತ್ಯಕಾಲಯತ್ ॥೭೦॥

ಆ ಯಾಗದಲ್ಲಿ ಪ್ರತಿಯೊಬ್ಬ ಪುರೋಹಿತರು ಸುವರ್ಣಾಲಂಕೃತವಾದ ಸಾವಿರ ಆನೆಗಳನ್ನು ದಕ್ಷಿಣೆಯನ್ನಾಗಿ ಸ್ವೀಕರಿಸಿದರು.

ತಸ್ಯ ಯಜ್ಞೇ ಮಹಾನಾಸೀದ್ ಯೂಪಃ ಶ್ರೀಮಾನ್ ಹಿರಣ್ಮಯಃ।
ತಂ ದೇವಾಃ ಕರ್ಮ ಕುರ್ವಾಣಾಃ ಶಕ್ರಜ್ಯೇಷ್ಠಾ ಉಪಾಶ್ರಯನ್॥೭೧॥

ಅವನು ಮಾಡುತ್ತಿದ್ದ ಯಾಗದಲ್ಲಿ ನೆಡಲ್ಪಟ್ಟ ಯೂಪಸ್ತಂಭವೂ ಕೂಡ ಸುವರ್ಣಮಯವಾಗಿತ್ತು. ಅತ್ಯಂತಕಾಂತಿಯುತವಾಗಿತ್ತು. ಆ ಯೂಪಸ್ತಂಭವನ್ನು ಆಶ್ರಯಿಸಿ, ಇಂದ್ರನೇ ಮೊದಲಾದ ದೇವತೆಗಳು ಯಜ್ಞಕರ್ಮಗಳನ್ನು ಮಾಡುತ್ತಿದ್ದರು.

ಚಷಾಲೌ ಯಸ್ಯ ಸೌವರ್ಣಸ್ತಸ್ಮಿನ್ ಯೂಪೇ ಹಿರಣ್ಮಯೇ।
ನನೃತುರ್ದೇವಗಂಧರ್ವಾಃ ಷಟ್ ಸಹಸ್ರಾಣಿ ಸಪ್ತಧಾ ॥೭೨॥

ಸುವರ್ಣಮಯವಾದ ಯೂಪಸ್ತಂಭದ ಮೇಲೆ ಚಷಾಲ ಎಂಬ ಸುವರ್ಣ-ಸೂಚಿಯು ಆರುಸಾವಿರ ಮಂದಿ ದೇವಗಂಧರ್ವರು ನರ್ತನ ಮಾಡುತ್ತಿದ್ದರು.

ಟಿಪ್ಪಣಿ - ಚಷಾಲೌ ಯಸ್ಯ ಸೌವರ್ಣೌ ಇತ್ಯತ್ರ **ಚಷಾಲೌ** ಯೂಪಕಟಕೌ। 'ಚಷಾಲೋ ಯೂಪಕಟಕಃ' ಇತ್ಯಮರಃ।

'ಚಷಾಲೌ ಯಸ್ಯ ಸೌವರ್ಣೌ' ಎಂಬಲ್ಲಿ 'ಚಷಾಲೌ' ಎಂದರೆ ಬಂಗಾರದ ಬಳೆಯಲ್ಲಿ ಎಂದರ್ಥ. 'ಚಷಾಲೋ ಯೂಪಕಟಕಃ' ಎಂಬುದಾಗಿ ಅಮರ-ಕೋಶವು ಹೇಳುತ್ತದೆ.

ಅವಾದಯತ್ತತ್ರ ವೀಣಾಂ ಮಧ್ಯೇ ವಿಶ್ವಾವಸುಃ ಸ್ವಯಮ್ ।
ಸರ್ವಭೂತಾನ್ಯಮನ್ಯಂತ ಮಮ ವಾದಯತೀತ್ಯಯಮ್ ॥೭೩॥

ಅವರ ಮಧ್ಯದಲ್ಲಿ ವಿಶ್ವಾವಸು ಎಂಬ ಗಂಧರ್ವನು ಸಪ್ತಸ್ವರಗಳಿಂದ ಕೂಡಿದ ವೀಣಾವಾದನವನ್ನು ಮಾಡುತ್ತಿದ್ದನು. ಆ ವೀಣಾವಾದನವನ್ನು ಕೇಳುತ್ತಿದ್ದ ಎಲ್ಲಾ ಭೂತಗಳು ಇದು ನಮಗೋಸ್ಕರವೇ ಎಂಬ ಭಾವನೆಯಿಂದ ಅತ್ಯಂತ ಆದರವುಳ್ಳ-ವರಾಗಿ ಆ ಸಂಗೀತವನ್ನು ಕೇಳುತ್ತಿದ್ದರು.

ಏತದ್ರಾಜ್ಞೋ ದಿಲೀಪಸ್ಯ ರಾಜಾನೋ ನಾನುಚಕ್ರಿರೇ ।
ಯತ್ ಸ್ತ್ರಿಯೋ ಹೇಮಸಂಪನ್ನಾಃ ಪಥಿ ಮತ್ತಾಃ ಸ್ಮ ಶೇರತೇ ॥೭೪॥

ಈ ದಿಲೀಪರಾಜನು ಮಾಡಿದ ಯಾಗಕಾರ್ಯದಂತೆ ಮತ್ತೊಬ್ಬ ರಾಜನು ಮಾಡಲು ಸಾಧ್ಯವೇ ಇಲ್ಲ. ಸುವರ್ಣಮಯವಾದ ಆಭರಣಗಳಿಂದ ಅಲಂಕೃತ-ರಾದ ಸಾವಿರಾರು ಆನೆಗಳು ಮದಭರಿತವಾಗಿ ಬೀದಿಯಲ್ಲೇ ಮಲಗುತ್ತಿದ್ದವು.

ಟಿಪ್ಪಣಿ - 'ಯತ್ ಸ್ತ್ರಿಯೋ ಹೇಮಸಂಪನ್ನಾಃ' ಎಂಬ ಪಾಠವು ಕಾಣಿಸುತ್ತಿದೆ. ಈ ಪಾಠದ ಪ್ರಕಾರ ಸ್ತ್ರೀಯರು ಮದೋನ್ಮತ್ತರಾಗಿ ಬೀದಿಯಲ್ಲಿ ಮಲಗುತ್ತಿದ್ದ-ರೆಂದು ಅರ್ಥವಾಗುತ್ತದೆ. ಆದರೆ ಉಳಿದ ಪುಸ್ತಕಗಳಲ್ಲಿ 'ಗಜಾಃ' ಎಂಬ ಪಾಠವಿದೆ. ಆಗ ಆನೆಗಳು ಸುವರ್ಣಾಭರಣಗಳನ್ನು ಹಾಕಿಕೊಂಡು ಬೀದಿಯಲ್ಲಿ ಮಲಗುತ್ತಿ-ದ್ದವು ಎಂದು ಅರ್ಥವಾಗುತ್ತದೆ.

ರಾಜಾನಮುಗ್ರಧನ್ವಾನಂ ದಿಲೀಪಂ ಸತ್ಯವಾದಿನಮ್ ।
ಯೇऽಪಶ್ಯನ್ ಸುಮಹಾತ್ಮಾನಂ ತೇऽಪಿ ಸ್ವರ್ಗಜಿತೋ ನರಾಃ॥೭೫॥

ಆ ದಿಲೀಪನು ಉಗ್ರವಾದ ಧನುಸ್ಸುಳ್ಳವನಾಗಿದ್ದನು. ಸತ್ಯವಾದಿಯಾಗಿದ್ದನು. ಶ್ರೇಷ್ಠಮಹಾತ್ಮನಾಗಿದ್ದನು. ಇವನನ್ನು ಯಾರು ನೋಡುತ್ತಾರೋ, ಅವರೂ ಕೂಡ ಸ್ವರ್ಗವನ್ನು ಪಡೆಯುತ್ತಾರೆ.

ತ್ರಯಃ ಶಬ್ದಾ ನ ಜೀರ್ಯಂತೇ ದಿಲೀಪಸ್ಯ ನಿವೇಶನೇ ।
ಸ್ವಾಧ್ಯಾಯಘೋಷೋ ಜ್ಯಾಘೋಷೋ ದೀಯತಾಮಿತಿ ಚೈವ ಹಿ॥೭೬॥

ಆ ದಿಲೀಪನ ಮನೆಯಲ್ಲಿ ವೇದದ ಧ್ವನಿ, ಬಿಲ್ಲಿನ ಧ್ವನಿ, ದಾನ ಮಾಡಿರಿ ಎಂಬ ಧ್ವನಿ ಈ ಮೂರು ನಿರಂತರ ಕೇಳಿಸುತ್ತಲೇ ಇದ್ದವು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ।
ಪುತ್ರಾತ್ ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ ॥೭೭॥

ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯಗಳಲ್ಲಿ ಆ ದಿಲೀಪನು ನಿನಗಿಂತಲೂ ಅತ್ಯಧಿಕನಾಗಿದ್ದಾನೆ. ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯವಂತನಾಗಿದ್ದಾನೆ. ಅವನೇ ಮರಣವನ್ನು ಹೊಂದಿದಲ್ಲಿ ಬೇರೆಯವರ ವಿಷಯದಲ್ಲಿ ಹೇಳುವುದೇನಿದೆ. ಆದ್ದರಿಂದ ನಿನ್ನ ಮಗನು ಸತ್ತನೆಂಬ ವಿಷಯದಲ್ಲಿ ದುಃಖಿಸಬೇಡ.

ಮಾಂಧಾತ ರಾಜನ ಸಾಧನೆ

ಮಾಂಧಾತಾರಂ ಯೌವನಾಶ್ವಂ ಮೃತಂ ಶುಶ್ರುಮ ಸೃಂಜಯ ।
ಯಂ ದೇವಾ ಮರುತೋ ಗರ್ಭಂ ಪಿತುಃ ಪಾರ್ಶ್ವಾದಪಾಹರನ್॥೭೮॥

ಯೌವನಾಶ್ವನ ಮಗನೇ ಮಾಂಧಾತಾ ಇವನೂ ಕೂಡ ಮರಣವನ್ನು ಹೊಂದಿದನೆಂಬುದನ್ನು ನಾವು ಕೇಳಿದ್ದೇವೆ. ಇವನು ತನ್ನ ತಂದೆಯ ಗರ್ಭದಲ್ಲಿಯೇ ಬೆಳೆದು ಅವನ ಒಂದು ಪಾರ್ಶ್ವವನ್ನು ಭೇದಿಸಿಕೊಂಡು ಹುಟ್ಟಿದನು.

ಸುವರ್ಣಮಯವಾದ ಯೂಪಸ್ತಂಭದ ಮೇಲೆ ಚಷಾಲ ಎಂಬ ಸುವರ್ಣ-ಸ್ಥೂಪಿಯು ಆರುಸಾವಿರ ಮಂದಿ ದೇವಗಂಧರ್ವರು ನರ್ತನ ಮಾಡುತ್ತಿದ್ದರು.

ಟಿಪ್ಪಣಿ - ಚಷಾಲೌ ಯಸ್ಯ ಸೌವರ್ಣೌ ಇತ್ಯತ್ರ **ಚಷಾಲೌ** ಯೂಪಕಟಕೌ। 'ಚಷಾಲೋ ಯೂಪಕಟಕಃ' ಇತ್ಯಮರಃ।

'ಚಷಾಲೌ ಯಸ್ಯ ಸೌವರ್ಣೌ' ಎಂಬಲ್ಲಿ 'ಚಷಾಲೌ' ಎಂದರೆ ಬಂಗಾರದ ಬಳೆಯಲ್ಲಿ ಎಂದರ್ಥ. 'ಚಷಾಲೋ ಯೂಪಕಟಕಃ' ಎಂಬುದಾಗಿ ಅಮರ-ಕೋಶವು ಹೇಳುತ್ತದೆ.

ಅವಾದಯತ್ತತ್ರ ವೀಣಾಂ ಮಧ್ಯೇ ವಿಶ್ವಾವಸುಃ ಸ್ವಯಮ್ ।
ಸರ್ವಭೂತಾನ್ಯಮನ್ಯಂತ ಮಮ ವಾದಯತೀತ್ಯಯಮ್ ॥೭೩॥

ಅವರ ಮಧ್ಯದಲ್ಲಿ ವಿಶ್ವಾವಸು ಎಂಬ ಗಂಧರ್ವನು ಸಪ್ತಸ್ವರಗಳಿಂದ ಕೂಡಿದ ವೀಣಾವಾದನವನ್ನು ಮಾಡುತ್ತಿದ್ದನು. ಆ ವೀಣಾವಾದನವನ್ನು ಕೇಳುತ್ತಿದ್ದ ಎಲ್ಲಾ ಭೂತಗಳು ಇದು ನಮಗೋಸ್ಕರವೇ ಎಂಬ ಭಾವನೆಯಿಂದ ಅತ್ಯಂತ ಆದರವುಳ್ಳ-ವರಾಗಿ ಆ ಸಂಗೀತವನ್ನು ಕೇಳುತ್ತಿದ್ದರು.

ಏತದ್ರಾಜ್ಞೋ ದಿಲೀಪಸ್ಯ ರಾಜಾನೋ ನಾನುಚಕ್ರಿರೇ ।
ಯತ್ ಸ್ತ್ರಿಯೋ ಹೇಮಸಂಪನ್ನಾಃ ಪಥಿ ಮತ್ತಾಃ ಸ್ಮ ಶೇರತೇ ॥೭೪॥

ಈ ದಿಲೀಪರಾಜನು ಮಾಡಿದ ಯಾಗಕಾರ್ಯದಂತೆ ಮತ್ತೊಬ್ಬ ರಾಜನು ಮಾಡಲು ಸಾಧ್ಯವೇ ಇಲ್ಲ. ಸುವರ್ಣಮಯವಾದ ಆಭರಣಗಳಿಂದ ಅಲಂಕೃತ-ರಾದ ಸಾವಿರಾರು ಆನೆಗಳು ಮದಭರಿತವಾಗಿ ಬೀದಿಯಲ್ಲೇ ಮಲಗುತ್ತಿದ್ದವು.

ಟಿಪ್ಪಣಿ - 'ಯತ್ ಸ್ತ್ರಿಯೋ ಹೇಮಸಂಪನ್ನಾಃ' ಎಂಬ ಪಾಠವು ಕಾಣಿಸುತ್ತಿದೆ. ಈ ಪಾಠದ ಪ್ರಕಾರ ಸ್ತ್ರೀಯರು ಮದೋನ್ಮತ್ತರಾಗಿ ಬೀದಿಯಲ್ಲಿ ಮಲಗುತ್ತಿದ್ದ-ರೆಂದು ಅರ್ಥವಾಗುತ್ತದೆ. ಆದರೆ ಉಳಿದ ಪುಸ್ತಕಗಳಲ್ಲಿ 'ಗಜಾಃ' ಎಂಬ ಪಾಠವಿದೆ. ಆಗ ಆನೆಗಳು ಸುವರ್ಣಾಭರಣಗಳನ್ನು ಹಾಕಿಕೊಂಡು ಬೀದಿಯಲ್ಲಿ ಮಲಗುತ್ತಿ-ದ್ದವು ಎಂದು ಅರ್ಥವಾಗುತ್ತದೆ.

ರಾಜಾನಮುಗ್ರಧನ್ವಾನಂ ದಿಲೀಪಂ ಸತ್ಯವಾದಿನಮ್ ।
ಯೇಽಪಶ್ಯನ್ ಸುಮಹಾತ್ಮಾನಂ ತೇಽಪಿ ಸ್ವರ್ಗಜಿತೋ ನರಾಃ॥೭೫॥

ಆ ದಿಲೀಪನು ಉಗ್ರವಾದ ಧನುಸ್ಸುಳ್ಳವನಾಗಿದ್ದನು. ಸತ್ಯವಾದಿಯಾಗಿದ್ದನು. ಶ್ರೇಷ್ಠಮಹಾತ್ಮನಾಗಿದ್ದನು. ಇವನನ್ನು ಯಾರು ನೋಡುತ್ತಾರೋ, ಅವರೂ ಕೂಡ ಸ್ವರ್ಗವನ್ನು ಪಡೆಯುತ್ತಾರೆ.

ತ್ರಯಃ ಶಬ್ದಾ ನ ಜೀರ್ಯಂತೇ ದಿಲೀಪಸ್ಯ ನಿವೇಶನೇ ।
ಸ್ವಾಧ್ಯಾಯಘೋಷೋ ಜ್ಯಾಘೋಷೋ ದೀಯತಾಮಿತಿ ಚೈವ ಹಿ॥೭೬॥

ಆ ದಿಲೀಪನ ಮನೆಯಲ್ಲಿ ವೇದದ ಧ್ವನಿ, ಬಿಲ್ಲಿನ ಧ್ವನಿ, ದಾನ ಮಾಡಿರಿ ಎಂಬ ಧ್ವನಿ ಈ ಮೂರು ನಿರಂತರ ಕೇಳಿಸುತ್ತಲೇ ಇದ್ದವು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ।
ಪುತ್ರಾತ್ ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ ॥೭೭॥

ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯಗಳಲ್ಲಿ ಆ ದಿಲೀಪನು ನಿನಗಿಂತಲೂ ಅತ್ಯಧಿಕನಾಗಿದ್ದಾನೆ. ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯವಂತನಾಗಿದ್ದಾನೆ. ಅವನೇ ಮರಣವನ್ನು ಹೊಂದಿದಲ್ಲಿ ಬೇರೆಯವರ ವಿಷಯದಲ್ಲಿ ಹೇಳುವುದೇನಿದೆ. ಆದ್ದರಿಂದ ನಿನ್ನ ಮಗನು ಸತ್ತನೆಂಬ ವಿಷಯದಲ್ಲಿ ದುಃಖಿಸಬೇಡ.

ಮಾಂಧಾತ ರಾಜನ ಸಾಧನೆ

ಮಾಂಧಾತಾರಂ ಯೌವನಾಶ್ವಂ ಮೃತಂ ಶುಶ್ರುಮ ಸೃಂಜಯ ।
ಯಂ ದೇವಾ ಮರುತೋ ಗರ್ಭಂ ಪಿತುಃ ಪಾರ್ಶ್ವಾದಪಾಹರನ್॥೭೮॥

ಯೌವನಾಶ್ವನ ಮಗನೇ ಮಾಂಧಾತಾ ಇವನೂ ಕೂಡ ಮರಣವನ್ನು ಹೊಂದಿದನೆಂಬುದನ್ನು ನಾವು ಕೇಳಿದ್ದೇವೆ. ಇವನು ತನ್ನ ತಂದೆಯ ಗರ್ಭದಲ್ಲಿಯೇ ಬೆಳೆದು ಅವನ ಒಂದು ಪಾರ್ಶ್ವವನ್ನು ಭೇದಿಸಿಕೊಂಡು ಹುಟ್ಟಿದನು.

ಸಮೃದ್ಧೋ ಯುವನಾಶ್ವಸ್ಯ ಜಠರೇ ಯೋ ಮಹಾತ್ಮನಃ।
ಪೃಷದಾಜ್ಯೋದ್ಭವಃ ಶ್ರೀಮಾಂಸ್ತ್ರಿಲೋಕವಿಜಯೀ ನೃಪಃ ॥೭೯॥

ಸಂತಾನಪ್ರಾಪ್ತಿಯ ಉದ್ದೇಶದಿಂದ ಯುವನಾಶ್ವನು ತುಪ್ಪ, ಮೊಸರು ಎರಡನ್ನು ಬೆರೆಸಿಟ್ಟದ್ದನ್ನು ಕುಡಿದು ಬಿಟ್ಟನು. ಅದು ಮಂತ್ರಪೂತವಾಗಿತ್ತು. ಇದರ ಪರಿಣಾಮದಿಂದ ಅವನ ಹೊಟ್ಟೆಯಲ್ಲಿಯೇ ಗರ್ಭವು ಬೆಳೆಯಿತು. ಅವನ ದೇಹದ ಭಾಗದಿಂದಲೇ ಮರುದ್ದೇವತೆಗಳು ಆ ಗರ್ಭವನ್ನು ಹೊರಗೆ ತೆಗೆದರು.

ಟಿಪ್ಪಣಿ- ಪೃಷದಾಜ್ಯೋದ್ಭವಃ ಶ್ರೀಮಾನ್ ಇತ್ಯತ್ರ **ಪೃಷದಾಜ್ಯಂ** ಸರ್ಪಿಷಾ ಮಿಶ್ರಃ ಹವಿಃ। 'ಪೃಷದಾಜ್ಯಂ ಹವಿಃ ಸರ್ಪಿಃ' ಇತ್ಯಮರಃ।

'ಪೃಷದಾಜ್ಯಂ' ಎಂದರೆ ತುಪ್ಪದಿಂದ ಮಿಶ್ರಿತವಾದ ಹವಿಸ್ಸು. 'ಪೃಷದಾಜ್ಯಂ ಹವಿಃ ಸರ್ಪಿಃ' ಎಂಬುದಾಗಿ ಅಮರಕೋಶವು ಹೇಳುತ್ತದೆ.

ಯಂ ದೃಷ್ಟ್ವಾ ಪಿತುರುತ್ಸಂಗೇ ಶಯಾನಂ ದೇವರೂಪಿಣಮ್।
ಅನ್ಯೋನ್ಯಮಬ್ರುವನ್ ದೇವಾಃ ಕಮಯಂ ಧಾಸ್ಯತೀತಿ ವೈ ॥೮೦॥

ದೇವತೆಯಂತೆ ಕಾಣುತ್ತಿರುವ ಹುಟ್ಟಿದ ಮಗುವು ತನ್ನ ತಂದೆಯ ತೊಡೆಯ ಮೇಲೆ ಮಲಗಿತ್ತು. ಆ ಶಿಶುವನ್ನು ನೋಡಿ, ಜನರು 'ಕಂ ಧಾಸ್ಯತಿ' 'ಯಾರ ಹಾಲನ್ನು ಕುಡಿಯುತ್ತದೆ' ಎಂದು ಮಾತನಾಡಿಕೊಂಡರು.

ಮಾಮೇವ ಧಾಸ್ಯತೀತ್ಯೇವಮಿಂದ್ರೋ ಅಭ್ಯವಪದ್ಯತ।
ಮಾಂಧಾತೇತಿ ತತಸ್ತಸ್ಯ ನಾಮ ಚಕ್ರೇ ಶತಕ್ರತುಃ ॥೮೧॥

ಆಗ ದೇವೇಂದ್ರನು 'ಮಾಮೇವ ಧಾಸ್ಯತಿ' 'ನನ್ನ ಹಾಲನ್ನೇ ಕುಡಿಯುತ್ತಾನೆ' ಎಂದು ಹೇಳಿ, ಆ ಶಿಶುವನ್ನು ಸಮೀಪಿಸಿದನು. ಆದ್ದರಿಂದಲೇ 'ಮಾಂಧಾತಾ' ಎಂಬ ಹೆಸರು ಅವನಿಗೆ ಬಂದಿತು.

ತತಸ್ತು ಪಯಸೋ ಧಾರಾಂ ಪುಷ್ಟಿಹೇತೋರ್ಮಹಾತ್ಮನಃ।
ತಸ್ಯಾಸ್ಯೇ ಯೌವನಾಶ್ವಸ್ಯ ಪಾಣೇರಿಂದ್ರಸ್ಯ ಚಾಸ್ರವತ್ ॥೮೨॥

ಅನಂತರ ಮಹಾತ್ಮನಾದ ಯೌವನಾಶ್ವನಾದ ಮಾಂಧಾತನ ಶರೀರದ ಪೋಷಣೆಗಾಗಿ ದೇವೇಂದ್ರನು ತನ್ನ ಬೆರಳನ್ನು ಮಗುವಿನ ಬಾಯಿಯಲ್ಲಿ ಇಟ್ಟನು. ಮಗು ಆ ದೇವೇಂದ್ರನ ಬೆರಳನ್ನೇ ಚೀಪಿತು. ಆ ಬೆರಳಿನಿಂದ ಅಮೃತವು ಸ್ರವಿಸಿತು.

ತಂ ಪಿಬತ್ ಪಾಣಿಮಿಂದ್ರಸ್ಯ ಸಮಾಮಹ್ನಾ ವ್ಯವರ್ಧತ।
ಸ ಆಸೀದ್ ದ್ವಾದಶಸಮೋ ದ್ವಾದಶಾಹೇನ ಪಾರ್ಥಿವ ॥೮೩॥

ದೇವೇಂದ್ರನ ಕೈಯ ಬೆರಳನ್ನು ಚೀಪುತ್ತಾ ಆ ಮಗುವು ಅಮೃತಪಾನವನ್ನೇ ಮಾಡುತ್ತಿತ್ತು. ಇದರಿಂದ ಆ ಮಗುವಿನ ದೇಹವು ಹನ್ನೆರಡು ದಿವಸಗಳಲ್ಲಿಯೇ ಹನ್ನೆರಡು ವರ್ಷದಷ್ಟು ಪರಿಪುಷ್ಟವಾದ ದೇಹವನ್ನು ಹೊಂದಿತು.

ಟಿಪ್ಪಣಿ - ಸಮಾಮಹ್ನಾ ವ್ಯವರ್ಧತ ಇತ್ಯತ್ರ **ಅಹ್ನಾ** ಏಕದಿವಸೇನ **ಸಮಾಂ** ಏಕವರ್ಷಂ ವ್ಯವರ್ಧತ। ಏಕದಿವಸೇನ ಏಕವರ್ಷಬಾಲೋಪಮೋಽಭೂದಿತ್ಯರ್ಥಃ।

'ಅಹ್ನಾ' ಒಂದೇ ದಿವಸದಲ್ಲಿ, 'ಸಮಾಂ' ಒಂದು ವರ್ಷದಷ್ಟು ಬೆಳೆದನು. ಒಂದೇ ದಿವಸದಲ್ಲಿ ಒಂದು ವರ್ಷದ ಮಗುವಿಗೆ ಸಮಾನವಾಗಿ ಬೆಳೆದನು ಎಂದು ಅರ್ಥ. ಹನ್ನೆರಡು ದಿವಸದಲ್ಲಿ ಹನ್ನೆರಡು ವರ್ಷದ ಮಗುವಿಗೆ ಸಮಾನವಾಗಿ ಬೆಳೆದನು ಎಂದು ಅರ್ಥ.

ತಮಿಯಂ ಪೃಥಿವೀ ಸರ್ವಾ ಏಕಾಹ್ನಾ ಸಮಪದ್ಯತ।
ಧರ್ಮಾತ್ಮಾನಂ ಮಹಾತ್ಮಾನಂ ಶೂರಮಿಂದ್ರಸಮಂ ಯುಧಿ ॥೮೪॥

ಆ ಬಾಲಕನು ದೇವೇಂದ್ರನಿಗೆ ಸಮಾನನಾಗಿ ಬೆಳೆದನು. ಅಖಂಡ ಭೂಮಂಡಲವನ್ನು ಒಂದೇ ದಿವಸದಲ್ಲಿ ತನ್ನ ಅಧೀನವನ್ನಾಗಿ ಮಾಡಿಕೊಂಡನು. ಮಹಾತ್ಮನು, ಧರ್ಮಸ್ವರೂಪನು, ಅತ್ಯಂತಪರಾಕ್ರಮಿಯೂ ಆಗಿ ಬೆಳೆದನು.

ಯಶ್ಚಾಂಗಾರಂ ಹಿ ನೃಪತಿಂ ಮರುತ್ತಮಸಿತಂ ಗಯಮ್।
ಅಂಗಂ ಬೃಹದ್ರಥಂ ಚೈವ ಮಾಂಧಾತಾ ಸಮರೇಽಜಯತ್ ॥೮೫॥

ಮಾಂಧಾತನು ಯುದ್ಧದಲ್ಲಿ ಅಂಗಾರ, ಮರುತ್, ಅಸಿತ, ಗಯ, ಬೃಹದ್ರಥ ಮೊದಲಾದ ರಾಜರನ್ನು ಗೆದ್ದನು.

ಯೌವನಾಶ್ವೋ ಯದಾಗ್ಞಾಂರಂ ಸಮರೇ ಸಮಯೋಧಯತ್ ।
ವಿಸ್ಫಾರ್ಯೈರ್ಧನುಷೋ ದೇವಾ ದ್ಯೌರಭೇದೀತಿ ಮೇನಿರೇ ॥೮೬॥

ಅಂಗರಾಜನ ಜೊತೆ ಮಾಂಧಾತನು ಯುದ್ಧ ಮಾಡುತ್ತಿದ್ದನು. ಆಗೊಮ್ಮೆ ಬಿಲ್ಲಿನಿಂದ ಠೇಂಕಾರವನ್ನು ಮಾಡಿದನು. ಈ ಧ್ವನಿಯು ಎಷ್ಟು ಭಯಂಕರವಾಗಿತ್ತು ಎಂದರೆ ದೇವತೆಗಳು ತಮ್ಮ ಲೋಕವೇ ಸೀಳಿಹೋಯಿತೆಂದು ಹೆದರಿದರು.

ಯತಃ ಸೂರ್ಯ ಉದೇತಿ ಸ್ಮ ಯತ್ರ ಚ ಪ್ರತಿತಿಷ್ಠತಿ ।
ಸರ್ವಂ ತದ್ ಯೌವನಾಶ್ವಸ್ಯ ಮಾಂಧಾತುಃ ಕ್ಷೇತ್ರಮುಚ್ಯತೇ ॥೮೭॥

ಸೂರ್ಯನು ಉದಯಿಸಿ, ಅಸ್ತಂಗತನಾಗುವ ಭೂಭಾಗವೆಲ್ಲವೂ ಮಾಂಧಾತ-ರಾಜನ ಕ್ಷೇತ್ರವೆಂದೇ ಕರೆಯಲ್ಪಡುತ್ತದೆ.

ವಿವರಣೆ - ಸಮಗ್ರ ಭೂಮಂಡಲದಲ್ಲಿಯೇ ಸೂರ್ಯನ ಕಿರಣಗಳು ಬೀಳುತ್ತವೆ. ಆ ಸೂರ್ಯನ ಕಿರಣಗಳು ಬೀಳುವ ಪ್ರದೇಶವನ್ನು ಮಾಂಧಾತ-ರಾಜನು ತನ್ನ ಅಧೀನವನ್ನಾಗಿ ಮಾಡಿಕೊಂಡನು ಎಂದಭಿಪ್ರಾಯ.

ಅಶ್ವಮೇಧಶತೇನೇಷ್ಟ್ವಾ ರಾಜಸೂಯಶತೇನ ಚ ।
ಅದದಾದ್ ರೋಹಿತಾನ್ ಮತ್ಸ್ಯಾನ್ ಬ್ರಾಹ್ಮಣೇಭ್ಯೋ ಮಹೀಪತಿಃ ॥೮೮

ಆ ಮಾಂಧಾತರಾಜನು ನೂರು ಅಶ್ವಮೇಧಯಾಗಗಳನ್ನು, ನೂರು ರಾಜ-ಸೂಯಯಾಗಗಳನ್ನು ಮಾಡಿದನು. ಆ ಸಂದರ್ಭದಲ್ಲಿ ರೋಹಿತ ಮತ್ಸ್ಯಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದನು.

ಹೈರಣ್ಯಾನ್ ಯೋಜನೋತ್ಸೇಧಾನಾಯತಾನ್ ದಶಯೋಜನಮ್।
ಅತಿರಿಕ್ತಾನ್ ದ್ವಿಜಾತಿಭ್ಯೋ ವ್ಯಭಜನ್ನಿತರೇ ಜನಾಃ ॥೮೯॥

ದಾನಮಾಡಲ್ಪಟ್ಟ ಆ ರೋಹಿತಮತ್ಸ್ಯಗಳು ಒಂದು ಯೋಜನ ಎತ್ತರವಾಗಿ-ದ್ದವು, ಹತ್ತುಯೋಜನ ಉದ್ದವಾಗಿದ್ದವು. ಬ್ರಾಹ್ಮಣರಿಗೆ ದಾನ ಮಾಡಿ ಉಳಿದ ಹಣವನ್ನು ಬೇರೆ ಜನರು ಹಂಚಿಕೊಂಡರು.

ಟಿಪ್ಪಣಿ - ದ್ರೋಣಪರ್ವದ ಅರವತ್ತೆರಡನೆಯ ಅಧ್ಯಾಯದಲ್ಲೂ ಇಂಥದ್ದೇ ಶ್ಲೋಕವೊಂದು ಇದೆ -'ಹೈರಣ್ಯಾನ್ ಯೋಜನೋತ್ಸೇಧಾನ್ ಆಯತಾನ್ ದಶಯೋಜನಮ್ ।' ಎಂದು. ಈ ಮಾಂಧಾತರಾಜನ ಕಥೆಯು ಅಲ್ಲಿಯೂ ಬಂದಿದೆ. ಬಂಗಾರದ ಮೀನುಗಳು ಹತ್ತು ಯೋಜನದಷ್ಟು ಸ್ಥಳದಲ್ಲಿ ತುಂಬಿದ್ದವು ಎಂದೂ ಕೂಡ ಅರ್ಥವನ್ನು ಮಾಡಬಹುದು. ಆಗ ಹತ್ತು ಯೋಜನದಷ್ಟು ಚಿನ್ನವು ತುಂಬಿತ್ತು. ಆ ಮತ್ಸ್ಯಗಳು ಒಂದೊಂದೂ ಕೂಡ ಹತ್ತು ಯೋಜನದಷ್ಟು ಉದ್ದವಾಗಿದ್ದವೆಂದು ಹೇಳಬೇಕಾಗಿಲ್ಲ.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ।
ಪುತ್ರಾತ್ ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ ॥೯೦॥

ಸೃಂಜಯನೇ! ನಿನಗಿಂತಲೂ ನಿನ್ನ ಮಗನಿಗಿಂತಲೂ ಆ ಮಾಧಾಂತನು ಧರ್ಮ, ಜ್ಞಾನ, ವೈರಾಗ್ಯ ಐಶ್ವರ್ಯಗಳಲ್ಲಿ ಅತ್ಯಧಿಕನು. ಅವನೇ ಮರಣವನ್ನು ಹೊಂದಿದ ಮೇಲೆ ಏನೂ ಮಾಡದ ನಿನ್ನ ಮಗ ಮರಣ ಹೊಂದಿರುವುದರಲ್ಲಿ ಏನು ವಿಶೇಷವಿದೆ? ಇದಕ್ಕೇಕೆ ದುಃಖಿಸುವೆ?

ಟಿಪ್ಪಣಿ - ಯುವನಾಶ್ವನು ಸೂರ್ಯವಂಶದವನು. ಇವನು ಪುತ್ರನಿಗಾಗಿ ಯಾಗವನ್ನು ಆಚರಿಸುತ್ತಿದ್ದನು. ಭೃಗುಋಷಿಗಳು ಪುತ್ರಪ್ರದವಾದ ಉದಕವನ್ನು ಮಂತ್ರಿಸಿಟ್ಟಿದ್ದರು. ಇವನು ತಿಳಿಯದೇ ಅದನ್ನು ಕುಡಿದು ಗರ್ಭವನ್ನು ಧರಿಸಿದನು. ದೇವತೆಗಳೇ ಬಂದು ಆ ಉದರದಿಂದ ಆ ಮಗುವನ್ನು ಹೊರಗೆ ತೆಗೆದರು. ಇಂದ್ರನ ಹೆಬ್ಬೆರಳಿನಿಂದ ಅಮೃತರಸವನ್ನು ಪಾನ ಮಾಡಿ, ದೇವೇಂದ್ರನಿಗೆ ಸಮಾನನಾಗಿ ಭೂಲೋಕದಲ್ಲಿ ಬೆಳೆದನು. ಲವಣಾಸುರನ ಜೊತೆ ಯುದ್ಧವನ್ನು ಮಾಡಿ ಅವನಿಂದ ಹತನಾದನು. ಇವನ ಪತ್ನಿಯೇ ಶಶಿಬಿಂದು, ಪುತ್ರಿ ಬಿಂದುಮತಿ, ಪುರುಪುತ್ಸ, ಅಂಬರೀಷ, ಮುಚುಕುಂದರು ಇವನ ಮಕ್ಕಳು. ಇದಲ್ಲದೇ ಐವತ್ತು ಮಂದಿ ಪುತ್ರಿಯರೂ ಕೂಡ ಮಾಂಧಾತನಿಗೆ ಇದ್ದರು. ಅವರನ್ನೇ ಸೌಭರಿ-ಮಹರ್ಷಿಗಳು ವಿವಾಹವಾದರು.

ಯಯಾತಿಂ ನಾಹುಷಂ ಚೈವ ಮೃತಂ ಶುಶ್ರುಮ ಸೃಂಜಯ ।
ಯ ಇಮಾಂ ಪೃಥಿವೀಂ ಸರ್ವಾಂ ವಿಜಿತ್ಯ ಸಹಸಾಗರಾಮ್ ॥೯೧॥

ನಹುಷನ ಪುತ್ರನೇ ಯಯಾತಿ. ಇವನೂ ಕೂಡ ಮೃತನಾದದ್ದನ್ನು ನಾವು ಕೇಳುತ್ತೇವೆ. ಈ ಯಯಾತಿಯು ಸಮುದ್ರದ ತನಕವಿರುವ ಸಮಗ್ರ ಭೂಮಿಯನ್ನು ಗೆದ್ದನು.

ಶಮ್ಯಾಪಾತೇನಾಭ್ಯತೀಯಾದ್ ವೇದೀಭಿಶ್ಚಿತ್ರಯನ್ನೃಪ।
ಈಜಾನಃ ಕ್ರತುಭಿಃ ಪುಣ್ಯೈಃ ಪರ್ಯಗಚ್ಛದ್ ವಸುಂಧರಾಮ್ ॥೯೨॥

ಒಬ್ಬ ಬಲಿಷ್ಠನಾದವನು ಶಮ್ಯಾ ಎಂಬ ದಂಡವನ್ನು ಎಸೆದರೆ ಎಷ್ಟು ದೂರಕ್ಕೆ ಹೋಗಿ ಬೀಳುವುದು. ಅಷ್ಟಷ್ಟು ದೂರಕ್ಕೆ ಒಂದೊಂದು ಯಜ್ಞವೇದಿಕೆಯನ್ನು ಮಾಡಿಸಿದ್ದನು. ಅಷ್ಟು ಯಾಗಗಳನ್ನು ಆಚರಿಸಿದ್ದನು. ಅನೇಕ ಯಾಗಗಳನ್ನು ಆಚರಣೆ ಮಾಡಿ, ಕೊನೆಯಲ್ಲಿ ಸಮಗ್ರಭೂಮಿಯನ್ನೇ ಯಜ್ಞವೇದಿಕೆಯನ್ನಾಗಿ ಮಾಡಿದ್ದನು. ಸಮಗ್ರ ಭೂಮಂಡಲವನ್ನೇ ಪ್ರದಕ್ಷಿಣೆ ಮಾಡಿದನು.

ವಿವರಣೆ - 'ಶಮ್ಯಾ' ಎಂಬುದಕ್ಕೆ 'ಸ್ಥೂಲಬುದ್ಧ್ಯಾ ಕಾಷ್ಠ ದಂಡಃ' ಎಂದರ್ಥ. ಬುಡವು ಸ್ಥೂಲವಾಗಿರಬೇಕು. ಅಂಥ ಒಂದು ಮರದ ಕೋಲು. ಗೂಟದ ಕೋಲು ಎಂದು ಕರೆಯುತ್ತಾರೆ. ಬಲಿಷ್ಠನಾದ ವ್ಯಕ್ತಿಯು ಈ ದಂಡವನ್ನು ಹಿಡಿದು ಬೀಸಿ ಎಸೆದರೆ ಎಷ್ಟು ದೂರ ಹೋಗಿ ಬೀಳುತ್ತದೋ, ಆ ಸ್ಥಳವನ್ನೇ ಶಮ್ಯಾಪಾತವೆನ್ನುತ್ತಾರೆ. ಈ ಅಳತೆಯನ್ನು ಮಾಡಿಕೊಂಡು ಸಮಗ್ರಭೂಮಂಡಲದಲ್ಲಿ ಯಜ್ಞವೇದಿಕೆಯನ್ನು ನಿರ್ಮಾಣ ಮಾಡಿದ್ದನು. ಪ್ರತಿಯೊಂದು ಶಮ್ಯಾಪಾತಗಳಲ್ಲಿಯೂ ಯಜ್ಞವನ್ನು ಮಾಡಿದ್ದನು. ಹೀಗೆ ಸಮಗ್ರಭೂಮಂಡಲವನ್ನೇ ಪರ್ಯಟನೆ ಮಾಡಿದ್ದನು. ಮತ್ತು ಭೂಮಿಯಲ್ಲೆಲ್ಲೆಡೆಯೂ ಯಜ್ಞವೇದಿಕೆಗಳೇ ಕಾಣುವಂತೆ ಮಾಡಿದ್ದನು.

ಟಿಪ್ಪಣಿ- ಶಮ್ಯಾಪಾತೇನಾಭ್ಯಗಚ್ಛನ್ ಇತ್ಯತ್ರ ಆ ಸಮಂತಾತ್ ಪತತೀತ್ಯಾಪಾತೋ ರಥಚಕ್ರಮ್। ಶಮೀಮಯಃ ಆಪಾತೋ ಯಸ್ಯ ತೇನ ರಥೇನ।

ವಿಮರ್ಶೆ -

'ಶಮ್ಯಾಪ್ರಾಸ ಎಂದರೇನು ?

'ಶಮ್ಯಾ' ಎಂದರೆ ಬುಡವು ದಪ್ಪವಿರುವ ಒಂದು ಕೋಲು. ಇದನ್ನು ಬಲಿಷ್ಠ-

ನಾದವನು ದೂರ ಎಸೆದರೆ, ಎಷ್ಟು ದೂರವು ಹೋಗುತ್ತದೋ, ಅದನ್ನು ಅಳತೆಯನ್ನಾಗಿಟ್ಟುಕೊಂಡು, ಯಜ್ಞವೇದಿಕೆಗಳನ್ನು ಸಿದ್ಧಗೊಳಿಸಿ, ಯಜ್ಞವನ್ನು ಆಚರಿಸುವುದು. ಪುನಃ ಅಲ್ಲಿ ಯಜ್ಞವು ಮುಗಿದ ಮೇಲೆ ಆ ಶಮ್ಯವನ್ನು ಎಸೆಯಬೇಕು. ಅದು ಬಿದ್ದಲ್ಲಿ, ಯಜ್ಞಶಾಲೆಯನ್ನು ನಿರ್ಮಾಣ ಮಾಡಿ, ಅಲ್ಲಿ ಯಜ್ಞವನ್ನು ಆಚರಿಸುವುದು. ಹೀಗೆ ಸಮಗ್ರಭೂಮಂಡಲದಲ್ಲಿ ಎಲ್ಲೆಡೆಯು ಯಜ್ಞಶಾಲೆಗಳನ್ನು ನಿರ್ಮಾಣ ಮಾಡಿ, ಯಜ್ಞಗಳನ್ನು ಮಾಡುತ್ತಿದ್ದನೆಂದು ಹೇಳುತ್ತಾರೆ.

ಭಾಗವತದಲ್ಲಿ 'ಶಮ್ಯಾಪ್ರಾಸ' ಎಂಬ ಶಬ್ದವು ಪ್ರಸಿದ್ಧವಾಗಿದೆ. ಅದರ ಆಧಾರದಲ್ಲಿ ಇದಕ್ಕೆ ಸ್ಪಷ್ಟವಾದ ಅರ್ಥವನ್ನು ಹೀಗೆ ತಿಳಿಯಬೇಕು. ಶಮ್ಯಾಪ್ರಾಸ ಎಂಬ ಹೆಸರಿನ ಆಶ್ರಮವಿತ್ತು ಎಂಬುದಾಗಿ ಭಾಗವತದಲ್ಲಿ ಹೇಳಿದ್ದಾರೆ. ಭಾಗವತದಲ್ಲಿ ಪ್ರಥಮಸ್ಕಂಧದ ಏಳನೆಯ ಅಧ್ಯಾಯದ ಎರಡನೆಯ ಶ್ಲೋಕದಲ್ಲಿ 'ಬ್ರಹ್ಮಾದ್ಯಾಃ ಸರಸ್ವತ್ಯಾಃ ಆಶ್ರಮೇ ಪಶ್ಚಿಮೇ ತಟೇ ಶಮ್ಯಾಪ್ರಾಸ ಇತಿ ಪ್ರೋಕ್ತಃ ಋಷೀನಾಂ ಸತ್ರವರ್ಧನಃ' ಇದಕ್ಕೆ ಭಾಗವತ ತಾತ್ಪರ್ಯದಲ್ಲಿ ಹೀಗೆ ವ್ಯಾಖ್ಯಾನವನ್ನು ಮಾಡಿದ್ದಾರೆ - 'ಶಮ್ಯಂ ಪ್ರಾಸ್ಯ ತತ್ರ ಶಾಲಾಂ ಕೃತ್ವಾ ಯಜ್ಞಃ ಕ್ರಿಯತೇ ಸಃ ಶಮ್ಯಾಪ್ರಾಸಃ' ಇಲ್ಲಿಯೂ ಕೂಡ ಶಮ್ಯಾ ಎಂಬುದಕ್ಕೆ ಗೂಟ ಎಂದೇ ಅರ್ಥ. ಅದನ್ನು ಬಿದ್ದ ಸ್ಥಳದಲ್ಲಿ ಆಶ್ರಮವನ್ನು ನಿರ್ಮಾಣ ಮಾಡಬೇಕು ಎಂದೇ ಅರ್ಥ. ಆದರೆ ಶಮ್ಯಾ ಎಂಬುದಕ್ಕೆ ಯಾವುದೋ ಮರದ ಗೂಟವೆಂದರ್ಥವಲ್ಲ. ಖದಿರ ಎಂಬ ಮರವಿದೆ. ಅದರ ಕಾಷ್ಠದಿಂದ ನಿರ್ಮಾಣ ಮಾಡಿರಬೇಕು. ಮೂವತ್ತಾರು ಇಂಚು ಉದ್ದವಿರಬೇಕು. ಗದೆಯ ಆಕಾರದಲ್ಲಿರಬೇಕು. ಇದು ಯಜ್ಞಾಯುಧವೆಂದು ಪರಿಗಣಿಸಲಾಗಿದೆ. ಈ ಗೂಟದ ತುದಿಯು ಎಂಟು ಕುಂಭಗಳಿರುತ್ತವೆ. ಯಜಮಾನನ ಪತ್ನಿಯು ತಲೆಗೆ ಕಟ್ಟಿಕೊಳ್ಳುವ ಬಟ್ಟೆಯನ್ನು ಕಟ್ಟಿರುತ್ತಾರೆ ಎಂದರ್ಥ. ಕೃಷ್ಣಾಜಿನದ ಮೇಲೆ ಶಮ್ಯವನ್ನು ಇಟ್ಟು ಅದರ ಮೇಲೆ ಬೀಸುವ ಕಲ್ಲನ್ನಿಟ್ಟು ಅಗ್ನೀಧ್ರ ಎಂಬ ಋತ್ವಿಜನು ಅಕ್ಕಿ, ಮೊದಲಾದ ಹವಿಸ್ಸುಪದಾರ್ಥಗಳನ್ನು ಬೀಸಬೇಕು. ಭಾಗವತ ವ್ಯಾಖ್ಯಾನಗಳಿಂದ ಈ ವಿಷಯವು ತಿಳಿಯುತ್ತದೆ. ಇಂಥ ಶಮ್ಯವನ್ನು ಎಸೆಯಬೇಕು, ಅಲ್ಲಿಯ ತನಕ ಯಾಗ ಶಾಲೆಯನ್ನು ನಿರ್ಮಾಣ ಮಾಡಬೇಕು. ಆ ಶಮ್ಯವು ಎಲ್ಲಿ ಬಿದ್ದಿರುತ್ತದೋ, ಅಲ್ಲಿಯೇ ಅಗ್ನಿಕುಂಡವನ್ನು ರಚನೆ ಮಾಡಬೇಕು. ಒಂದುವೇಳೆ, ಆ ಗುರುತು ಮಾಡಿದ ಸ್ಥಳದಿಂದ ಹೊರಗೆ ಹೋಮಕಾಲದಲ್ಲಿ ಅಗ್ನಿಯು ಬಿದ್ದರೆ ಕವಿರಗ್ನಿ ಎಂಬ

ಮಂತ್ರವನ್ನು ಹೇಳಿ, ಮೂರು ಪ್ರದಕ್ಷಿಣೆ ಮಾಡಿ ಕುಂಡದೊಳಗೆ ಅಗ್ನಿಯನ್ನು ಹಾಕಬೇಕು. ಶಮ್ಯದಿಂದ ಗುರುತು ಮಾಡಿದ ಸ್ಥಳದಿಂದ ಸ್ವಲ್ಪ ದೂರ ಅಗ್ನಿಯು ಬಿದ್ದರೆ, ಕುಂಡದಲ್ಲಿರುವ ಎಲ್ಲಾ ಅಗ್ನಿಯನ್ನು ಆ ಸ್ಥಳಕ್ಕೆ ತಂದು, ಆ ಸ್ಥಳದಲ್ಲಿಟ್ಟು ಋತ್ವಿಜರು ದಿನಪೂರ್ತಿ ಅಲ್ಲಿಯೇ ವಾಸವನ್ನು ಮಾಡಬೇಕು. ಆಪಸ್ತಂಭ ಶ್ರೌತ ಸೂತ್ರದಲ್ಲಿ 'ಶಮ್ಯಾ ಪರಾಸ' ಎಂದು ಹೇಳಲಾಗುತ್ತದೆ. ಭಾಗವತದಲ್ಲಿ 'ಶಮ್ಯಾ-ಪ್ರಾಸ' ಎಂಬ ಶಬ್ದವಿದೆ. ಆದರೆ ಆಪಸ್ತಂಭದಲ್ಲಿ 'ಪರಾಸ' ಎಂಬ ಮೂರಕ್ಷರದ ಶಬ್ದವಿದೆ. ಶಬ್ದದಲ್ಲಿ ಮಾತ್ರ ವ್ಯತ್ಯಾಸ. ಅರ್ಥದಲ್ಲಿ ವ್ಯತ್ಯಾಸವು ಇರುವುದಿಲ್ಲ. ಪ್ರಕೃತ ಮಹಾಭಾರತದ ೯೨ನೆಯ ಶ್ಲೋಕದಲ್ಲಿ 'ಪಾತ' ಎಂಬ ಪದಪ್ರಯೋಗವಿದೆ. 'ಪಾತ' ಎಂದರೂ ಪ್ರಾಸ' ಎಂದೇ ಅರ್ಥ. ಆದ್ದರಿಂದ ಶಮ್ಯಾಪ್ರಾತ, ಶಮ್ಯಾಪ್ರಾಸ, ಶಮ್ಯಾಪರಾಸ ಮೂರು ಕೂಡ ಪರ್ಯಾಯ ಶಬ್ದಗಳೇ ಆಗಿವೆ.

ದೃಷ್ಟ್ವಾಕ್ರತುಸಹಸ್ರೇಣ ವಾಜಿಮೇಧಶತೇನ ಚ।
ತರ್ಪಯಾಮಾಸ ದೇವೇಂದ್ರಂ ತ್ರಿಭಿಃ ಕಾಂಚನಪರ್ವತೈಃ ॥೯೩॥

ಈ ಯಾಯಾತಿಯು ನೂರು ವಾಜಪೇಯಯಾಗಗಳನ್ನು ಸಾವಿರಾರು ಇತರೆ ಯಾಗಗಳನ್ನು ಮಾಡಿ, ಬಂಗಾರದ ಪರ್ವತಗಳನ್ನು ದಾನ ಮಾಡಿ, ದೇವೇಂದ್ರನನ್ನು ತೃಪ್ತಿ ಪಡಿಸಿದನು.

ವ್ಯೂಢೇ ದೇವಾಸುರೇ ಯುದ್ಧೇ ಹತ್ವಾ ದೈತೇಯದಾನವಾನ್।
ವ್ಯಭಜತ್ ಪೃಥಿವೀಂ ಕೃತ್ಸ್ನಾಂ ಯಯಾತಿರ್ನಹುಷಾತ್ಮಜಃ ॥೯೪॥

ಆ ಯಾಯಾತಿಯು ಯುದ್ಧವನ್ನು ಮಾಡಿ, ಭೂಮಿಯಲ್ಲಿರುವ ದೈತ್ಯರನ್ನು ದಾನವರನ್ನು ಸದೆಬಡೆದನು. ಸಮಗ್ರಭೂಮಂಡಲವನ್ನೇ ತನ್ನ ಅಧೀನವನ್ನಾಗಿ ಮಾಡಿಕೊಂಡನು. ಮತ್ತು ಆ ಭೂಮಿಯನ್ನು ತನ್ನ ಮಕ್ಕಳಿಗೆ ವಿಭಾಗ ಮಾಡಿ ನೀಡಿದನು.

ಅಂತ್ಯೇಷು ಪುತ್ರಾನ್ನಿಕ್ಷಿಪ್ಯ ಯದುದ್ರುಹ್ಯುಪರೋಗಮಾನ್।
ಪೂರುಂ ರಾಜ್ಯೇಽಭಿಷಿಚ್ಯ ಸ್ವೇ ಸದಾರಃ ಪ್ರಸ್ಥಿತೋ ವನಮ್ ॥೯೫॥

ಆ ಯಯಾತಿಗೆ ಒಟ್ಟು ನಾಕು ಮಕ್ಕಳಿದ್ದರು. ಕೊನೆಯವನೇ ಪುರು ಎಂಬುವನು. ಇವನಿಗೆ ತನ್ನ ರಾಜ್ಯದಲ್ಲಿ ಅಭಿಷೇಕವನ್ನು ಮಾಡಿದನು. ಯದು, ದ್ರುಹ್ಯ, ಅನು ಎಂಬ ಉಳಿದ ಮೂರು ಮಕ್ಕಳನ್ನು ಗಡಿಯ ಪ್ರಾಂತ್ಯದಲ್ಲಿ ರಾಜರನ್ನಾಗಿ ಮಾಡಿದನು. ಪತ್ನಿಯ ಸಹಿತನಾಗಿ ಅರಣ್ಯಕ್ಕೆ ತೆರಳಿದನು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರರಸ್ತ್ವಯಾ।
ಪುತ್ರಾತ್ ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ ॥೯೬॥

ಯಯಾತಿಯು, ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯಗಳಲ್ಲಿ ನಿನಗಿಂತಲೂ ನಿನ್ನ ಮಗನಿಗಿಂತಲೂ ಅತ್ಯಧಿಕನಾಗಿದ್ದನು. ಅವನೇ ಮರಣವನ್ನು ಹೊಂದಿದ ಮೇಲೆ ನೀನೇನು? ನಿನ್ನ ಮಗನೇನು? ಅದಕ್ಕೇಕೆ ನೀನು ಚಿಂತಿಸುವಿ.

ವಿವರಣೆ - ನಹುಷನ ಮಗನೇ ಯಯಾತಿ. ಚಂದ್ರವಂಶದವನು. ದೇವಯಾನಿ, ಶರ್ಮಿಷ್ಠೆ ಎಂಬ ಇಬ್ಬರು ಪತ್ನಿಯರು ಇವನಿಗಿದ್ದರು. ಶುಕ್ರಾಚಾರ್ಯರ ಮಗಳೇ ದೇವಯಾನಿ. ಇವಳಲ್ಲಿ ಯದು ಮತ್ತು ತುರ್ವಸು ಎಂಬ ಇಬ್ಬರು ಮಕ್ಕಳು ಹುಟ್ಟಿದರು. ಶರ್ಮಿಷ್ಠೆಯಲ್ಲಿ ದ್ರುಹ್ಯ ಮತ್ತು ಅನು, ಪೂರು ಎಂಬ ಮೂವರು ಗಂಡು ಮಕ್ಕಳು ಹುಟ್ಟಿದರು. ಮಾಧವಿ ಎಂಬ ಒಬ್ಬ ಹೆಣ್ಣು ಮಗಳೂ ಕೂಡ ಹುಟ್ಟಿದಳು. ದೇವಯಾನಿಯನ್ನು ಕೇಳದೇ ಶರ್ಮಿಷ್ಠೆಯನ್ನು ವಿವಾಹವಾಗಿದ್ದರಿಂದ ಶುಕ್ರಾಚಾರ್ಯರು ಅಕಾಲವೃದ್ಧಾಪ್ಯವು ಬರುವಂತೆ ಶಪಿಸಿದ್ದರು. ಆ ವೃದ್ಧಾಪ್ಯವನ್ನು ಬೇರೆಯವರಿಗೆ ನೀಡಬಹುದೆಂದೂ ಕೂಡ ಅನುಶಾಪವನ್ನು ನೀಡಿದ್ದರು. ಆದರೆ ಯದು ಮೊದಲಾದ ಮಕ್ಕಳು ಆ ವೃದ್ಧಾಪ್ಯವನ್ನು ಸ್ವೀಕರಿಸಲಿಲ್ಲ. ಶರ್ಮಿಷ್ಠೆಯ ಕೊನೆಯ ಮಗನಾದ ಪೂರುವು ಮಾತ್ರ ತಂದೆಯ ವೃದ್ಧಾಪ್ಯವನ್ನು ಸಂತೋಷದಿಂದ ಸ್ವೀಕರಿಸಿದನು. ಇದರಿಂದ ತೃಪ್ತನಾದ ಯಯಾತಿಯು ಆ ಪೂರುವಿಗೆ ತನ್ನ ರಾಜ್ಯಭಾರವನ್ನು ಒಪ್ಪಿಸಿದನು. ಮುಂದೆ ವೈರಾಗ್ಯವನ್ನು ತಾಳಿ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿದನು. ಆದಿಪರ್ವದಲ್ಲಿ ಇವನ ಕಥೆಯು ವಿಸ್ತಾರವಾಗಿ ಬಂದಿದೆ.

ಅಂಬರೀಷಂ ಚ ನಾಭಾಗಂ ಮೃತಂ ಶುಶ್ರುಮ ಸೃಂಜಯ।
ಯಂ ಪ್ರಜಾ ವವ್ರೀರೇ ಪುಣ್ಯಂ ಗೋಪ್ತಾರಂ ನೃಪಸತ್ತಮ್ ॥೯೭॥

ನಾಭಾಗನ ಮಗನಾದ ಅಂಬರೀಷರಾಜನೂ ಕೂಡ ಮೃತನಾಗಿದ್ದಾನೆಂದು ಕೇಳಿದ್ದೇವೆ. ಪ್ರಜೆಗಳು ಅವನನ್ನು ತಮಗೆ ರಕ್ಷಕನಾದ ಪುಣ್ಯಪುರುಷನೆಂದು ಅತ್ಯಂತ ವಿಶ್ವಾಸವಿಟ್ಟಿದ್ದರು.

ಯಃ ಸಹಸ್ರಂ ಸಹಸ್ರಾಣಾಂ ರಾಜ್ಞಾಮಯುತಯಾಜಿನಾಮ್ ।
ಈಜಾನೋ ವಿತತೇ ಯಜ್ಞೇ ಬ್ರಾಹ್ಮಣೇಭ್ಯಃ ಸಮಾಹಿತಃ ॥೯೮॥

ಇವನು ಒಂದು ಯಾಗವನ್ನು ಮಾಡಿದನು. ಆ ಯಾಗದ ವೈಭವವೇನೆಂದರೆ ಆ ಯಾಗದಲ್ಲಿ ಯಾವ ಬ್ರಾಹ್ಮಣರನ್ನು ಆಹ್ವಾನ ಮಾಡಿದ್ದನೋ, ಅವರನ್ನು ಸೇವೆ ಮಾಡುವುದಕ್ಕಾಗಿ ಒಂದುಲಕ್ಷ ಹತ್ತುಸಾವಿರ ರಾಜರನ್ನು ಯೋಜಿಸಿದ್ದನು. ಆ ರಾಜರೂ ಕೂಡ ಹತ್ತುಸಾವಿರ ಯಾಗಗಳನ್ನು ಮಾಡಿದ ಮಹಾಪುರುಷರೇ ಆಗಿದ್ದರು.

ನೈತತ್ ಪೂರ್ವೇ ಜನಾಶ್ಚಕ್ರುರ್ನ ಕರಿಷ್ಯಂತಿ ಚಾಪರೇ ।
ಇತ್ಯಂಬರೀಷಂ ನಾಭಾಗಿಮನ್ವಮೋದಂತ ದಕ್ಷಿಣಾಃ ॥೯೯॥

''ಇಂಥ ವೈಭವ ಯಾಗವನ್ನು ನಡೆಸದವರು ಇದುವರೆಗೂ ಯಾರು ಹುಟ್ಟಿಲ್ಲ. ಮುಂದೆ ಹುಟ್ಟುವ ಸಾಧ್ಯತೆಯೂ ಇಲ್ಲ'' ಎಂಬುದಾಗಿ ಪ್ರತಿಯೊಬ್ಬರೂ ಕೂಡ ನಾಭಾಗನ ಪುತ್ರನಾದ ಅಂಬರೀಷನನ್ನು ಪ್ರಶಂಸೆ ಮಾಡಿದರು.

ಶತಂ ರಾಜಸಹಸ್ರಾಣಿ ಶತಂ ರಾಜಶತಾನಿ ಚ ।
ಸರ್ವೇಽಶ್ವಮೇಧೈರೀಜಾನಾಸ್ತೇಽಭ್ಯಯುರ್ದಕ್ಷಿಣಾಯನಮ್॥೧೦೦॥

ಬ್ರಾಹ್ಮಣರ ಸೇವೆಯಲ್ಲಿ ನಿರತರಾದ ಒಂದು ಲಕ್ಷದ ಹತ್ತುಸಾವಿರ ರಾಜರು ಅಶ್ವಮೇಧಯಾಗಗಳನ್ನು ಮಾಡಿದ ಫಲವನ್ನೇ ಪಡೆದರು. ದಕ್ಷಿಣಾಯಣ ಮಾರ್ಗ-ದಿಂದ ಪುಣ್ಯಲೋಕಗಳಿಗೆ ತೆರಳಿದರು.

ಟಿಪ್ಪಣಿ- **ತೇಽಭ್ಯಯುರ್ದಕ್ಷಿಣಾಯನಮ್** ಇತ್ಯತ್ರ **ದಕ್ಷಿಣಾಯನಂ** ದಕ್ಷಿಣಾ-ಮಾರ್ಗಮ್ । ದಕ್ಷಿಣಾಮಿತಿ ಯಾವತ್ ।

ಟಿಪ್ಪಣಿ - 'ಅಭ್ಯಯು ದಕ್ಷಿಣಾಯನಮ್' ಎಂಬುದಾಗಿ ದಕ್ಷಿಣಾಯನ ಮಾರ್ಗದಲ್ಲಿ ತೆರಳಿದ್ದಾರೆ ಎಂದು ಹೇಳಿದ್ದಾರೆ. ಆದರೆ ಉತ್ತರಾಯಣದ ಮಾರ್ಗದ ಮೂಲಕ ಬ್ರಹ್ಮಲೋಕಕ್ಕೆ ತೆರಳಿದರು ಎಂದೇ ಅರ್ಥವನ್ನು ಮಾಡಬೇಕು. ಏಕೆಂದರೆ ಪ್ರತಿಯೊಬ್ಬ ಸಾಧಕರು ಉತ್ತರಾಯಣ ಎಂಬ ದೇವಯಾನ ಮಾರ್ಗದಿಂದಲೇ ಬ್ರಹ್ಮಲೋಕಕ್ಕೆ ತೆರಳುತ್ತಾರೆ. ಆದ್ದರಿಂದ ದಕ್ಷಿಣಾಯನದ ಅನಂತರ ಉತ್ತರಾಯಣಮಾರ್ಗದಿಂದ ಬ್ರಹ್ಮಲೋಕಕ್ಕೆ ತೆರಳಿದರು ಎಂಬುದು ಇದರ ಅಭಿಪ್ರಾಯ.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ।
ಪುತ್ರಾತ್ ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ ॥೧೦೧॥

ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯಗಳಲ್ಲಿ ಅಂಬರೀಷನಿಗಿಂತಲೂ ಅಧಿಕನಾದವನು ಮತ್ತೊಬ್ಬನಿರಲಿಲ್ಲ. ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯವಂತನಾಗಿದ್ದನು. ಅವನೇ ಮರಣವನ್ನು ಹೊಂದಿದ ಮೇಲೆ, ನಿನ್ನ ವಿಷಯದಲ್ಲಿ ನಿನ್ನ ಮಗನ ವಿಷಯದಲ್ಲಿ ದುಃಖಪಡಲು ಕಾರಣವೇ ಇಲ್ಲ.

ಟಿಪ್ಪಣಿ - ಈ ಅಂಬರೀಷರಾಜನು ಸೂರ್ಯವಂಶದವನು. ವೈವಸ್ವತಮನುವಿನ ಮೊಮ್ಮಗನು. ನಾಭಾಗನ ಮಗನು. ಏಕಾದಶಿ ವ್ರತ ಮತ್ತು ದ್ವಾದಶಿ ಪಾರಣೆಯ ವಿಷಯದಲ್ಲಿ ಪ್ರಸಿದ್ಧಿಯನ್ನು ಪಡೆದನು. ದೂರ್ವಾಸ ಋಷಿಯು ದ್ವಾದಶಿ ಪಾರಣೆಯ ಕಾಲದಲ್ಲಿ ಬಾರದೇ ಇದಿದ್ದರಿಂದ ತೀರ್ಥಸೇವನೆಯನ್ನು ಮಾಡಿದನು. ಇದರಿಂದ ಕುಪಿತನಾದ ದೂರ್ವಾಸಮುನಿಯು ಅಂಬರೀಷನ ನಾಶಕ್ಕಾಗಿ ಕೃತ್ಯವೊಂದನ್ನು ನಿರ್ಮಾಣ ಮಾಡಿಬಿಟ್ಟನು. ಆಗ ಭಗವಂತನು ತನ್ನ ಚಕ್ರಾಯುಧದಿಂದ ಆ ಕೃತ್ಯನನ್ನು ಸಂಹರಿಸಿ ಅಂಬರೀಷನನ್ನು ಕಾಪಾಡಿದನು. ಈ ಅಂಬರೀಷನಿಗೆ ವಿರೂಪ, ಕೇತುಮಂತ, ಶಂಭು ಎಂಬ ಮೂವರು ಮಕ್ಕಳು ಹುಟ್ಟಿದರು.

ಶಶಬಿಂದು ರಾಜನ ಸಾಧನೆ

ಶಶಬಿಂದುಂ ಚೈತ್ರರಥಂ ಮೃತಂ ಶುಶ್ರುಮ ಸೃಂಜಯ।
ಯಸ್ಯ ಭಾರ್ಯಾಸಹಸ್ರಾಣಾಂ ಶತಮಾಸೀನ್ಮಹಾತ್ಮನಃ ॥೧೦೨॥

ಚಿತ್ರರಥ ಎಂಬ ರಾಜನ ಮಗನೇ ಶಶಬಿಂದು ರಾಜ. ಇವನೂ ಕೂಡ ಸತ್ತನು ಎಂಬ ವಾರ್ತೆಯನ್ನು ಕೇಳಿದ್ದೇವೆ. ಇವನಿಗೆ ಒಂದು ಲಕ್ಷ ಹೆಂಡತಿಯರಿದ್ದರು. ಪ್ರತಿಯೊಬ್ಬರಲ್ಲಿಯೂ ಹತ್ತುಲಕ್ಷಮಂದಿ ಮಕ್ಕಳನ್ನು ಹುಟ್ಟಿಸಿದ್ದನು.

ಸಹಸ್ರಂ ತು ಸಹಸ್ರಾಣಾಂ ಯಸ್ಯಾಸನ್ ಶಾಶಬಿಂದವಃ।
ಹಿರಣ್ಯಕವಚಾಃ ಸರ್ವೇ ಸರ್ವೇ ಚೋತ್ತಮಧನ್ವಿನಃ ॥೧೦೩॥

ಆ ಮಕ್ಕಳಲ್ಲಿ ಪ್ರತಿಯೊಬ್ಬರೂ ಕೂಡ ಸುವರ್ಣಕವಚಗಳನ್ನೇ ಧಾರಣೆ ಮಾಡಿದ್ದರು. ಮಹಾಧನುರ್ಧಾರಿಗಳಾಗಿದ್ದರು.

ಟಿಪ್ಪಣಿ - ಯಸ್ಯಾಸನ್ ಶಾಶಬಿಂದವ ಇತ್ಯತ್ರ **ಶಾಶಬಿಂದವಃ** ಶಶಬಿಂದುಕುಮಾರಾಃ।

'ಶಾಶಬಿಂದವ' ಎಂಬುದಕ್ಕೆ ಶಶಬಿಂದು ರಾಜನ ಮಕ್ಕಳು ಎಂದರ್ಥ.

ಶತಂ ಕನ್ಯಾ ರಾಜಪುತ್ರಮೇಕೈಕಂ ಪೃಷ್ಠತೋಽನ್ವಯುಃ।
ಕನ್ಯಾಂ ಕನ್ಯಾಂ ಶತಂ ನಾಗಾ ನಾಗಂ ನಾಗಂ ಶತಂ ರಥಾಃ ॥೧೦೪॥

ಈ ಶಶಬಿಂದು ರಾಜನ ಪ್ರತಿಯೊಬ್ಬ ಮಕ್ಕಳೂ ಕೂಡ ನೂರು ಮಂದಿ ಹೆಣ್ಣು-ಮಕ್ಕಳನ್ನು ವಿವಾಹವಾದರು. ಪ್ರತಿಯೊಬ್ಬ ಕನ್ಯೆಯ ಹಿಂದೆಯ ಕೂಡ ನೂರು ನೂರು ಆನೆಗಳು ಹೋಗುತ್ತಿದ್ದವು. ಒಂದೊಂದು ಆನೆಯ ಹಿಂದೆಯೂ ನೂರು ನೂರು ರಥಗಳು ಹೋಗುತ್ತಿದ್ದವು.

ರಥಂ ರಥಂ ಶತಂ ಚಾಶ್ವಾ ದೇಶಜಾ ಹೇಮಮಾಲಿನಃ।
ಅಶ್ವಮಶ್ವಂ ಶತಂ ಗಾವೋ ಗಾಂ ಗಾಂ ತದ್ವದಜಾವಿಕಮ್ ॥೧೦೫॥

ಪ್ರತಿಯೊಂದು ರಥದ ಹಿಂದೆಯೂ ಸುವರ್ಣಮಾಲೆಗಳಿಂದ ಅಲಂಕೃತವಾದ ನೂರು ನೂರು ದೇಶಿಯ ಕುದುರೆಗಳು ತೆರಳುತ್ತಿದ್ದವು. ಪ್ರತಿಯೊಂದು ಕುದುರೆಯ ಹಿಂದೆಯೂ ಕೂಡ ನೂರು ನೂರು ಹಸುಗಳು ತೆರಳುತ್ತಿದ್ದವು. ಪ್ರತಿಯೊಂದು ಹಸುಗಳ ಹಿಂದೆ ನೂರು ನೂರು ಆಡುಗಳು ತೆರಳುತ್ತಿದ್ದವು.

ಏತದ್ಧನಮಪರ್ಯಂತಮಶ್ವಮೇಧೇ ಮಹಾಮಖೇ।
ಶಶಬಿಂದುರ್ಮಹಾರಾಜಃ ಬ್ರಾಹ್ಮಣೇಭ್ಯಃ ಸಮಾದಿಶತ್ ॥೧೦೬॥

ಈ ಶಶಬಿಂದು ರಾಜನು ಒಂದು ಅಶ್ವಮೇಧಯಾಗವನ್ನು ಮಾಡಿದನು. ಆ ಯಾಗದಲ್ಲಿ ಇಷ್ಟು ಧನರಾಶಿಯನ್ನು ಬ್ರಾಹ್ಮಣರಿಗೆ ದಾನ ಮಾಡಿಬಿಟ್ಟನು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ।
ಪುತ್ರಾತ್ ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ ॥೧೦೭॥

ಈ ಶಶಬಿಂದು ರಾಜನೂ ಕೂಡ ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯ-ಗಳಲ್ಲಿ ನಿನಗಿಂತ ಬಹಳ ಉತ್ತಮನಾಗಿದ್ದನು. ಹೀಗಿರುವಾಗ ನಿನ್ನ ಮಗನ ವಿಷಯ-ದಲ್ಲಿ ನೀನು ದುಃಖಿಸುವುದು, ನಿನ್ನ ವಿಷಯದಲ್ಲಿ ನೀನು ದುಃಖಿಸುವುದರಲ್ಲಿ ಅರ್ಥವೇ ಇಲ್ಲ.

ಟಿಪ್ಪಣಿ - ವೃಷ್ಣಿವಂಶದ ಚಿತ್ರರಥರಾಜನ ಮಗನೇ ಶಶಬಿಂದು. ಇವನು ಮಾಡಿದ ದಂಡನೀತಿ, ನ್ಯಾಯಗಳನ್ನು ಅನುಸರಿಸಿ ಅನೇಕ ರಾಜರು ರಾಜರ್ಷಿ ಪದವನ್ನು ಪಡೆದರು. ಇವನಿಗೆ ಬಿಂದುಮತಿ ಎಂಬ ಮಗಳಿದ್ದಳು. ಇವಳೇ ಮಾಂಧಾತನ ಹೆಂಡತಿ ಈ ಶಶಬಿಂದು ರಾಜನಿಗೆ ಚೈತ್ರರಥ ಎಂಬ ಹೆಸರೂ ಕೂಡ ಇರುತ್ತದೆ.

ಗಯ ರಾಜನ ಸಾಧನೆ

ಗಯಂಚಾಮೂರ್ತರಯಸಂ ಮೃತಂ ಶುಶ್ರುಮ ಸೃಂಜಯ।
ಯಃ ಸ ವರ್ಷಶತಂ ರಾಜಾ ಹುತಶಿಷ್ಟಾಶನೋಽಭವತ್ ॥೧೦೮॥

ಸಂಜಯನೇ! ಗಯ ಎಂಬ ರಾಜನಿದ್ದನು. ಇವನು ''ಅಮೂರ್ತರಯಸ'' ಎಂಬ ರಾಜನ ಮಗನಿವನು. ನೂರು ವರ್ಷಗಳ ಕಾಲ ಹೋಮವನ್ನು ಮಾಡಿ, ಹೋಮಶೇಷವನ್ನೇ ಇವನು ತಿನ್ನುತ್ತಿದ್ದನು.

ಯಸ್ಮೈ ವಹ್ನಿರ್ವರಾನ್ ಪ್ರಾದಾತ್ ತತೋ ವವ್ರೇ ವರಾನ್ ಗಯಃ।
ದದತೋ ಮೇಽಕ್ಷಯಾ ಚಾಸ್ತು ಧರ್ಮೇ ಶ್ರದ್ಧಾ ಚ ವರ್ಧತಾಮ್ ॥೧೦೯॥

ಮನೋ ಮೇ ರಮತಾಂ ಸತ್ಯೇ ತ್ವತ್ಪ್ರಸಾದಾದ್ ಹುತಾಶನ।
ಲೇಭೇ ಚ ಕಾಮಾಂಸ್ತಾನ್ ಸರ್ವಾನ್ ಪಾವಕಾದಿತಿ ನಃ ಶ್ರುತಮ್ ॥೧೧೦॥

ಇವನ ಈ ನಿಷ್ಠೆಯನ್ನು ನೋಡಿ, ಅಗ್ನಿದೇವನು ಸುಪ್ರೀತನಾದನು. ಯಾವುದಾದರೂ, ವರವನ್ನು ಕೇಳುವಂತೆ ಗಯನಿಗೆ ಹೇಳಿದನು. ಆಗ ಗಯನು ಅಗ್ನಿಯಿಂದ ಈ ವರವನ್ನು ಕೇಳಿದನು. ''ಯಜ್ಞೇಶ್ವರನೇ ! ನಾನು ಎಷ್ಟು ದಾನವನ್ನು ಮಾಡಿದರೂ ಅದು ಅಷ್ಟೇ ಅಕ್ಷಯವಾಗಬೇಕು. ನನಗೆ ನಿರಂತರಧರ್ಮದಲ್ಲಿ ಶ್ರದ್ಧೆಯು ಅಭಿವೃದ್ಧಿಯಾಗಬೇಕು. ನನ್ನ ಮನಸ್ಸು ಯಾವಾಗಲೂ ಸತ್ಯದಲ್ಲಿ ಆಸಕ್ತವಾಗಿರಬೇಕು. ನಿನ್ನ ಅನುಗ್ರಹ ನನಗೆ ಎಂದೆಂದೂ ಇರಬೇಕು''. ಅಗ್ನಿಯು ಅವನಿಗೆ ಈ ಎಲ್ಲಾ ವರಗಳನ್ನು ನೀಡಿದನೆಂದು ನಾವು ಕೇಳಿದ್ದೇವೆ.

ದರ್ಶೇನ ಪೌರ್ಣಮಾಸೇನ ಚಾತುರ್ಮಾಸ್ಯೈಃ ಪುನಃಪುನಃ।
ಅಯಜತ್ ಸ ಮಹಾತೇಜಾಃ ಸಹಸ್ರಂ ಪರಿವತ್ಸರಾನ್ ॥೧೧೧॥

ಸೃಂಜಯನೇ! ಆ ಗಯನು ಸಾವಿರ ವರ್ಷಗಳ ಕಾಲ ದರ್ಶಯಾಗ ಪೌರ್ಣಮಾಸ ಯಾಗ, ಚಾತುರ್ಮಾಸ್ಯ ಯಾಗ, ಅಶ್ವಮೇಧಯಾಗಗಳನ್ನು ಆಚರಿಸಿದನು.

ಶತಂ ಗವಾಂ ಸಹಸ್ರಾಣಿ ಶತಮಶ್ವಶತಾನಿ ಚ।
ಉತ್ಥಾಯೋತ್ಥಾಯ ವೈ ಪ್ರಾದಾತ್ ಸಹಸ್ರಂ ಪರಿವತ್ಸರಾನ್ ॥೧೧೨॥

ಆ ಸಂದರ್ಭದಲ್ಲಿ ಆ ರಾಜನು ಸಾವಿರ ವರ್ಷಗಳವರೆಗೂ ಲಕ್ಷಸಂಖ್ಯೆಯ ಗೋವುಗಳನ್ನು, ಹತ್ತು ಸಾವಿರ ಕುದುರೆಗಳನ್ನು, ಪುನಃ ಪುನಃ ದಾನ ಮಾಡುತ್ತಲೇ ಇದ್ದನು.

ತರ್ಪಯಾಮಾಸ ಸೋಮೇನ ದೇವಾನ್ ವಿತ್ತೈರ್ದ್ವಿಜಾನಪಿ।
ಪಿತೄನ್ ಸ್ವಧಾಭಿಃ ಕಾಮೈಶ್ಚ ಸ್ತ್ರಿಯಃ ಸ್ವಾಃ ಪುರುಷರ್ಷಭ ॥೧೧೩॥

ದೇವತೆಗಳನ್ನು ಸೋಮರಸವನ್ನು ನೀಡುವ ಮೂಲಕ ತೃಪ್ತಿಪಡಿಸಿದನು. ಯಥೇಚ್ಛವಾದ ಐಶ್ವರ್ಯಗಳನ್ನು ಕೊಡುವ ಮೂಲಕ ಬ್ರಾಹ್ಮಣರನ್ನು ತೃಪ್ತಿ

ಪಡಿಸಿದನು. ಶ್ರಾದ್ಧ ಹಾಗೂ ತರ್ಪಣಗಳಿಂದ ಪಿತೃಗಳನ್ನು ತೃಪ್ತಿಪಡಿಸಿದನು. ವಿವಿಧವಾದ ಕಾಮೋಪಭೋಗಗಳಿಂದ ಸ್ತ್ರೀಯರನ್ನು ತೃಪ್ತಿಪಡಿಸಿದನು.

ಸೌವರ್ಣಾಂ ಪೃಥಿವೀಂ ಕೃತ್ವಾ ದಶವ್ಯಾಮಾಂ ದ್ವಿರಾಯತಾಮ್ ।
ದಕ್ಷಿಣಾಮದದದ್ ರಾಜಾ ವಾಜಿಮೇಧೇ ಮಹಾಮಖೇ ॥೧೧೪॥

ಅವನು ಒಂದು ಅಶ್ವಮೇಧಯಾಗದಲ್ಲಿ ಐವತ್ತು ಮಾರುಗಳಷ್ಟು ಅಗಲವಾದ, ನೂರು ಮಾರುಗಳಷ್ಟು ಉದ್ದವಾದ ಸುವರ್ಣದ ಭೂಮಿಯನ್ನು ಮಾಡಿಸಿ, ಅದನ್ನು ಬ್ರಾಹ್ಮಣರಿಗೆ ದಕ್ಷಿಣಾರೂಪವಾಗಿ ನೀಡಿದನು.

ಟಿಪ್ಪಣಿ – ದಶವ್ಯಾಮಾಂ ದ್ವಿರಾಯತಾಮ್ ಇತ್ಯತ್ರ **ದಶವ್ಯಾಮಾಂ** ದಶಪ್ರಮಾಣೇನ ವ್ಯಾಮೋ ವಿಸ್ತಾರೋ ಯಸ್ಯಾಃ ಸಾ ತಾಮ್ । **ದ್ವಿರಾಯತಾಂ** ತತೋ ದ್ವಿಃ ಪ್ರಮಾಣೇನ ದೀರ್ಘಾಮ್ ।

'ದಶವ್ಯಾಮಾಂ' ಎಂಬುದಕ್ಕೆ ಹತ್ತು ಮಾರುಗಳಷ್ಟು ವಿಸ್ತಾರವಾದ ಎಂದರ್ಥ. ಅದರ ಎರಡು ಪಟ್ಟು ಅಗಲವಾದ ಭೂಮಿಯನ್ನು ಎಂದರ್ಥ.

ಯಾವತ್ಯಃ ಸಿಕತಾ ರಾಜನ್ ಗಂಗಾಯಾಃ ಪುರುಷರ್ಷಭ ।
ತಾವತೀರೇವ ಗಾಃ ಪ್ರಾದಾದಾಮೂರ್ತರಯಸೋ ಗಯಃ ॥೧೧೫॥

ಗಂಗಾನದಿಯಲ್ಲಿ ಎಷ್ಟು ಮರಳಿನ ಕಣಗಳಿವೆಯೋ, ಅಷ್ಟು ಸಂಖ್ಯೆಯ ಗೋವು -ಗಳನ್ನು ಅಮೂರ್ತರಯಸನ ಮಗನಾದ ಗಯನು ಬ್ರಾಹ್ಮಣರಿಗೆ ದಾನವನ್ನು ಮಾಡಿದನು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ।
ಪುತ್ರಾತ್ ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ ॥೧೧೬॥

ಸೃಂಜಯನೇ! ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯಗಳಲ್ಲಿ ಆ ಗಯನು ನಿನಗಿಂತ ಅತ್ಯುತ್ತಮನಾಗಿದ್ದನು. ನಿನ್ನ ಮಗನಿಗಿಂತಲೂ ಪುಣ್ಯವಂತನಾಗಿದ್ದನು. ಅವನೇ ಮರಣವನ್ನು ಹೊಂದಿದ ಮೇಲೆ ನೀನೇಕೆ ದುಃಖಿಸುವಿ.

ವ್ಯಾಖ್ಯಾನ - ಅಮೂರ್ತರಯ ಅಥವಾ ಅಧೂರ್ತರಜ ಎಂಬ ರಾಜನ ಮಗನೇ ಗಯ. ಈ ಮಹಾರಾಜನಿಂದ ನಿರ್ಮಿತವಾದ ಪರ್ವತಕ್ಕೆ 'ಗಯಶಿರಸ್' ಎಂದು ಕರೆಯುತ್ತಾರೆ. ಫಲ್ಗುನದಿಯು ಇಲ್ಲಿಯೇ ಹರಿಯುತ್ತದೆ. ಈ ಮಹಾರಾಜನು ಪ್ರತಿನಿತ್ಯವು ಪರ್ವತಕಾರವಾಗಿ ಅನ್ನವನ್ನು ಮಾಡಿ, ಕಾಲುವೆಯಂತೆ ತುಪ್ಪವನ್ನು ಹರಿಸಿ, ನದಿಯಂತೆ ಮೊಸರು ಹರಿಸಿ, ವ್ಯಂಜನಗಳನ್ನು ರಾಶಿರಾಶಿಯಾಗಿ ಮಾಡಿಸಿ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸುತ್ತಿದ್ದನಂತೆ. ಇವನು ಕೊಟ್ಟ ದಕ್ಷಿಣೆಗಳು ನದಿತೀರದ ಮರಳಿನ ಕಣಗಳಂತೆ ಅಸಂಖ್ಯಾಕವಾಗಿದ್ದವು. ಇವನ ಬಗ್ಗೆ ವನಪರ್ವದಲ್ಲಿ ಇನ್ನೂ ಹೆಚ್ಚಿನ ವಿಚಾರವು ಬಂದಿದೆ.

ರಂತಿದೇವನ ಸಾಧನೆ

ರಂತಿದೇವಂ ಚ ಸಾಂಕೃತ್ಯಂ ಮೃತಂ ಶುಶ್ರುಮ ಸೃಂಜಯ।
ಸಮ್ಯಗಾರಾಧ್ಯ ಯಃ ಶಕ್ರಂ ವರಂ ಲೇಭೇ ಮಹಾಯಶಾಃ ॥೧೧೭॥

ಸಂಕೃತಿ ಎಂಬ ರಾಜನ ಮಗನೇ ರಂತಿದೇವ. ಇವನೂ ಕೂಡ ಮರಣವನ್ನು ಹೊಂದಿದನೆಂದು ಕೇಳಿದ್ದೇವೆ. ಮಹಾಯಶಸ್ಸನ್ನು ಹೊಂದಿದ ರಂತಿದೇವನು ದೇವೇಂದ್ರನನ್ನು ತನ್ನ ಆರಾಧನೆಯಿಂದ ಒಲಿಸಿಕೊಂಡು, ವರಗಳನ್ನು ಪಡೆದುಕೊಂಡನು.

ಅನ್ನಂ ಚ ನೋ ಬಹು ಭವೇದತಿಥೀಂಶ್ಚ ಲಭೇಮಹಿ।
ಶ್ರದ್ಧಾ ಚ ನೋ ಮಾ ವ್ಯಗಮನ್ಮಾ ಚ ಯಾಚಿಷ್ಮ ಕಂಚನ ॥೧೧೮॥

ದಾನಮಾಡಲು ಯಥೇಚ್ಛವಾದ ಅನ್ನ ತನ್ನಲ್ಲಿರಬೇಕು. ಸೇವೆ ಮಾಡುವುದಕ್ಕಾಗಿ ನಿರಂತರ ಅತಿಥಿಗಳು ತನಗೆ ದೊರೆಯಬೇಕು. ಅತಿಥಿ ಸತ್ಕಾರದಲ್ಲಿ ಎಂದೂ ಶ್ರದ್ಧೆಯು ಕಮ್ಮಿಯಾಗಬಾರದು. ಮತ್ತೊಬ್ಬರನ್ನು ಯಾವುದಕ್ಕೂ ಯಾಚನೆ ಮಾಡಬಾರದು.

ಉಪಾತಿಷ್ಠಂತ ಪಶವಃ ಸ್ವಯಂ ತಂ ಸಂಶಿತವ್ರತಮ್ ।
ಗ್ರಾಮ್ಯಾರಣ್ಯಾ ಮಹಾತ್ಮಾನಂ ರಂತಿದೇವಂ ಯಶಸ್ವಿನಮ್ ॥೧೧೯॥

ಅತ್ಯಂತ ನಿಯಮವ್ರತವನ್ನು ಹೊಂದಿದ ಮಹಾತ್ಮನಾದ ರಂತಿದೇವನು ಉತ್ತಮ ಕೀರ್ತಿವಂತನಾದನು. ಅವನ ಬಳಿಗೆ ಗ್ರಾಮಗಳಲ್ಲಿರುವ, ಅರಣ್ಯಗಳಲ್ಲಿರುವ ಪಶು-ಪಕ್ಷಿಗಳು ತಾವಾಗಿಯೇ ಆಗಮಿಸುತ್ತಿದ್ದವು.

ಮಹಾನದೀ ಚರ್ಮರಾಶೇರುಕ್ಲೇದಾತ್ ಸುಸ್ರುವೇ ಯತಃ।
ತತಶ್ಚರ್ಮಣ್ವತೀತ್ಯೇವಂ ವಿಖ್ಯಾತಾ ಸಾ ಮಹಾನದೀ ॥೧೨೦॥

ಆ ರಂತಿದೇವನು ಯಾಗದಲ್ಲಿ ಉಪಯೋಗಿಸಿದ ಪಶುಗಳ ಚರ್ಮದಿಂದ ಸ್ರವಿಸಿದ ಜಲವೇ ನದಿಯಾಗಿ ಹರಿದು, ಚರ್ಮಣ್ವತಿ ಎಂದು ಪ್ರಸಿದ್ಧಿ ಪಡೆಯಿತು. ಇದು ಮಹಾನದಿಯಾಗಿದೆ.

ವಿಮರ್ಶೆ -

ರಂತಿದೇವನು ಗೋಹತ್ಯೆಯನ್ನು ಮಾಡುತ್ತಿದ್ದನೇ ?

ಕೆಲವು ಪಾಠಗಳಲ್ಲಿ ಸಸೃಜೇ ಎಂದಿದೆ. ಇಲ್ಲಿ ಸುಸ್ರುವೇ ಎಂದಿದೆ. ಈ ಶ್ಲೋಕಕ್ಕೆ ಹೀಗೆ ವ್ಯಾಖ್ಯಾನವನ್ನು ಮಾಡುತ್ತಾರೆ. ರಂತಿದೇವನ ಆಸ್ಥಾನದಲ್ಲಿ ನಿತ್ಯವು ಪ್ರಾಣಹತ್ಯೆಯು ನಡೆಯುತ್ತಿತ್ತು. ಎಷ್ಟು ನಡೆಯುತ್ತಿತ್ತೆಂದರೆ ಪ್ರಾಣಿಗಳ ರಕ್ತದ ನದಿಯೇ ಹರಿಯಿತು. ಅದರಿಂದಲೇ ಚರ್ಮಣ್ವತಿ ಎಂಬ ಹೆಸರು ಆ ನದಿಗೆ ಬಂದಿತು.

ಮುಂದೆ ಇದಕ್ಕೆ ಪೂರಕವಾದ ಮತ್ತೊಂದು ಶ್ಲೋಕವು ಬರುತ್ತದೆ-

ಸಾಂಕೃತೇ ರಂತಿದೇವಸ್ಯ ಯಾಂ ರಾತ್ರಿಮವಸದ್ ಗೃಹೇ।
ಆಲಭ್ಯಂತ ಶತಂ ಗಾವಃ ಸಹಸ್ರಾಣಿ ಚ ವಿಂಶತಿಃ ॥೧೨೪॥

ಕೆಲವು ಪುಸ್ತಕಗಳಲ್ಲಿ ಆಲಭ್ಯಂತ ಎಂಬ ಪಾಠವಿದೆ. ಆದರೆ ಅಲಭಂತ ಎಂಬ ಪಾಠವೇ ಸಾಧುವಾಗಿದೆ. 'ಅಲಭಂತ' ಎಂದರೆ ಇಪ್ಪತ್ತು ಸಾವಿರ ಹಸುಗಳನ್ನು ಹೊಂದಿದರು ಎಂದರ್ಥ. 'ಆಲಭ್ಯಂತ' ಎಂಬ ಪಾಠವನ್ನು ವಿವಕ್ಷಿಸಿ ಕೆಲವರು ನಿತ್ಯವೂ ಇಪ್ಪತ್ತು ಸಾವಿರ ಹಸುಗಳನ್ನು ಕಡಿಯುತ್ತಿದ್ದರು ಎಂದು ವ್ಯಾಖ್ಯಾನವನ್ನು ಮಾಡುತ್ತಾರೆ. ಮಹಾಭಾರತವನ್ನು ಸರಿಯಾಗಿ ಅರ್ಥವನ್ನು ಮಾಡಿಕೊಳ್ಳದೇ ಆಂಗ್ಲಭಾಷೆಯಲ್ಲಿ ಕೆಲವರು ಈ ಶ್ಲೋಕಗಳಿಗೆ ವಿಮರ್ಶೆಯನ್ನು ಮಾಡಿದ್ದಾರೆ.

ಇದನ್ನೇ ಆಧಾರವನ್ನಾಗಿ ಇಟ್ಟುಕೊಂಡು ಕೆಲವರು ಪ್ರತಿನಿತ್ಯವು ರಂತಿದೇವನು ಇಪ್ಪತ್ತು ಸಾವಿರ ಹಸುಗಳನ್ನು ಕಡಿಯುತ್ತಿದ್ದರು ಎಂದು ಹೇಳುತ್ತಾರೆ.

ಇದು ತಪ್ಪು. ರಂತಿದೇವನು ಸರ್ವಥಾ ಪ್ರಾಣಿಹತ್ಯೆಯನ್ನು ಮಾಡುತ್ತಿದ್ದಾರೆ. ಗೋಹತ್ಯೆಯನ್ನು ಸುತರಾಂ ಮಾಡುತ್ತಿರಲಿಲ್ಲ. ಹಾಗಿದ್ದರೆ 'ಚರ್ಮರಾಶೇರು-ಕ್ಲೇದಾತ್ ಸುಸ್ರುವೇ' ಎಂಬುದಕ್ಕೆ ಹೇಗೆ ವ್ಯಾಖ್ಯಾನವನ್ನು ಮಾಡಬೇಕು ಎಂದರೆ, ರಂತಿದೇವನು ಪ್ರತಿನಿತ್ಯವು ಬ್ರಾಹ್ಮಣರಿಗೆ ಇಪ್ಪತ್ತು ಸಾವಿರ ಹಸುಗಳನ್ನು ದಾನ ಮಾಡುತ್ತಿದ್ದನೆಂದು ನೂರಿಪ್ಪತ್ತಾಕನೆಯ ಶ್ಲೋಕದಲ್ಲಿ ಹೇಳಿದ್ದಾರೆ. ಅರ್ಥಾತ್ ಅಷ್ಟು ಹಸುಗಳನ್ನು ತನ್ನ ಆಸ್ಥಾನದಲ್ಲಿಟ್ಟುಕೊಂಡು ಅವುಗಳಿಗೆ ಉಪಚಾರವನ್ನು ಮಾಡುತ್ತಿದ್ದನು. ಅದಕ್ಕಾಗಿ ನೀರಿನಿಂದ ಹಸುಗಳನ್ನು ತೊಳೆಯುತ್ತಿದ್ದನು. ಆ ತೊಳೆದ ನೀರು ಹರಿದು ಹರಿದು ನದಿಯಾಯಿತು. ಹಸುಗಳ ಚರ್ಮದ ವಾಸನೆ-ಯಿಂದ ಕೂಡಿದ್ದರಿಂದ ಅದಕ್ಕೆ 'ಚರ್ಮಣ್ವತಿ' ಎಂಬ ಹೆಸರು ಬಂದಿತು ಎಂಬುದಾಗಿ ಅರ್ಥವನ್ನು ತಿಳಿಯಬೇಕು. ಹೀಗೆ ಸಂಸ್ಕೃತದಲ್ಲಿ ಕ್ರಿಯಾಪದವನ್ನು ಸ್ವಲ್ಪ ವ್ಯತ್ಯಾಸವಾಗಿ ತಿಳಿದರೂ ಅರ್ಥವೇ ವ್ಯತ್ಯಾಸವಾಗಿಬಿಡುತ್ತದೆ. ಸಂಸ್ಕೃತ ಭಾಷೆಯಲ್ಲಿ ಗಮನಿಸಿ ಅರ್ಥವನ್ನು ತಿಳಿಯತಕ್ಕದ್ದು. ಈ ವ್ಯಾಖ್ಯಾನಕ್ಕೆ ಆಧಾರವು ನೂರ ಹತ್ತೊಂಬತ್ತನೆಯ ಶ್ಲೋಕದಿಂದ ತಿಳಿಯುತ್ತಿದೆ.

ಉಪಾತಿಷ್ಠಂತ ಪಶವಃ ಸ್ವಯಂ ತಂ ಸಂಶಿತವ್ರತಮ್ ।
ಗ್ರಾಮ್ಯಾರಣ್ಯಾ ಮಹಾತ್ಮಾನಂ ರಂತಿದೇವಂ ಯಶಸ್ವಿನಮ್ ॥೧೧೯॥

ಅರಣ್ಯದಲ್ಲಿರುವ ಪ್ರಾಣಿಗಳು ನಿರ್ಭಯದಿಂದ ಯಾವುದೇ ಸಂಶಯವಿಲ್ಲದೇ ರಂತಿದೇವನ ಬಳಿ ಬರುತ್ತಿದ್ದವು ಎಂಬುದಾಗಿ ಈ ಶ್ಲೋಕದಲ್ಲಿ ಹೇಳಿದ್ದಾರೆ. ಬಂದ ಪ್ರಾಣಿಗಳಿಗೆ ಸ್ನಾನ, ಪಾನ, ಆಹಾರಗಳನ್ನು ನೀಡುತ್ತಿದ್ದವು ಎಂಬುದನ್ನು ಮುಂದಿನ ಶ್ಲೋಕವು ವರ್ಣನೆ ಮಾಡಿದೆ. ಒಂದು ವೇಳೆ ಪ್ರಾಣಿಗಳನ್ನೆಲ್ಲಾ ರಂತಿದೇವನು ಸಂಹಾರ ಮಾಡುವುದಿದ್ದರೆ ನಿರ್ಭಯದಿಂದ ಆ ಪ್ರಾಣಿಗಳು ಬರುತ್ತರಲೇ ಇರಲಿಲ್ಲ. ಆದ್ದರಿಂದ 'ಉಪಾತಿಷ್ಠಂತ' ಎಂಬ ಶ್ಲೋಕದಲ್ಲಿ ನಿರ್ಭಯದಿಂದ ಪ್ರಾಣಿಗಳು ಬರುತ್ತಿದ್ದವು ಎಂದು ಹೇಳಿ, 'ಮಹಾನದೀ ಚರ್ಮರಾಶೇಃ' ಎಂಬ ಶ್ಲೋಕದಿಂದ ರಂತಿದೇವನು ಹಸು ಮೊದಲಾದ ಪ್ರಾಣಿಗಳಿಗೆ ಉಪಚಾರವನ್ನು ಮಾಡುತ್ತಿದ್ದನೆಂದು ಹೇಳಿ, ಮುಂದಿನ ಮೂರು ಶ್ಲೋಕಗಳಲ್ಲಿ ಅವನ ಸಂಪತ್ತನ್ನು

ವರ್ಣನೆ ಮಾಡಿ, ನೂರಿಪ್ಪತ್ತಾಕನೆಯ ಶ್ಲೋಕದಲ್ಲಿ ಹಸುಗಳನ್ನು ಮುಟ್ಟುವ ಮಾತ್ರದಿಂದಲೇ ಬ್ರಾಹ್ಮಣರಿಗೆ ಇಪ್ಪತ್ತು ಸಾವಿರ ಹಸುಗಳನ್ನು ದಾನ ಮಾಡುತ್ತಿದ್ದ-ನೆಂದು ಹೇಳಿದ್ದಾರೆ. ಆದ್ದರಿಂದ ಗೋಹತ್ಯೆಯನ್ನು ಮಾಡಿ, ಗೋವುಗಳ ರಕ್ತವೇ ಚರ್ಮಣ್ವತಿ ನದಿಯಾಗಿದೆ ಎಂಬ ವಾಕ್ಯವು ಅಪ್ರಬುದ್ಧವಾಗಿದೆ.

ಬ್ರಾಹ್ಮಣೇಭ್ಯೋ ದದೌ ನಿಷ್ಕಾನ್ ಸದಸಿ ಪ್ರತತೇ ನೃಪಃ।
ತುಭ್ಯಂ ತುಭ್ಯಂ ನಿಷ್ಕಮಿತಿ ಯತ್ರಾಕ್ರೋಶಂತಿ ವೈ ದ್ವಿಜಾಃ ॥೧೨೧॥

ಆ ರಂತಿದೇವನು ಬ್ರಾಹ್ಮಣರಿಗೆ ಯಥೇಚ್ಚವಾಗಿ ಸುವರ್ಣಾನ್ನಾಗಳನ್ನು ದಕ್ಷಿಣೆಯನ್ನಾಗಿ ನೀಡಿದನು. ಆ ಸಂದರ್ಭದಲ್ಲಿ ಬ್ರಾಹ್ಮಣರು ''ನಿನಗೆ ರಾಜನು ಎಷ್ಟು ವರಾಹಗಳನ್ನು ಕೊಡುತ್ತಿದ್ದಾನೆ, ನನಗೂ ಕೂಡ ಅಷ್ಟೇ ದಕ್ಷಿಣೆಯನ್ನು ಕೊಡು-ತ್ತಾನೆ'' ಎಂದು ಪರಸ್ಪರವಾಗಿ ಚರ್ಚಿಸುತ್ತಿದ್ದರು.

ಸಹಸ್ರಂ ತುಭ್ಯಮಿತ್ಯುಕ್ತ್ವಾ ಬ್ರಾಹ್ಮಣಾನ್ ಸಂಪ್ರಪದ್ಯತೇ।
ಅನ್ವಾಹಾರ್ಯೋಪಕರಣಂ ದ್ರವ್ಯೋಪಕರಣಂ ಚ ಯತ್ ॥೧೨೨॥

ಹೀಗೆ ಬ್ರಾಹ್ಮಣರು ಪರಸ್ಪರ ಮಾತನಾಡಿಕೊಳ್ಳುತ್ತಿರುವಾಗ ಆ ರಂತಿದೇವನು ಸಾವಿರ ನಿಷ್ಕಗಳನ್ನು ನೀವು ತೆಗೆದುಕೊಳ್ಳಿ ಬನ್ನಿ ಎಂಬುದಾಗಿ ಹೇಳುತ್ತಾ, ಅವರವರ ಅಪೇಕ್ಷೆಗಿಂತಲೂ ಹೆಚ್ಚು ದಕ್ಷಿಣೆಗಳನ್ನು ನೀಡಿ ಸಂತೋಷ ಪಡಿಸುತ್ತಿದ್ದನು. ಯಜ್ಞಕ್ಕೆ ಸಂಬಂಧಪಟ್ಟ ಅನ್ವಹಾರ್ಯಾಗ್ನಿಯಲ್ಲಿ ಹೋಮ ಮಾಡಲು ಉಪಯುಕ್ತವಾದ ಉಪಕರಣಗಳು ಹಾಗೂ ಯಜ್ಞದ್ರವ್ಯಗಳನ್ನು ಸಂಗ್ರಹಿಸಲು ಆವಶ್ಯಕವಾದ ಉಪ-ಕರಣಗಳೆಲ್ಲವೂ ಸ್ವರ್ಣಮಯವಾಗಿದ್ದವು.

ಘಟಾಃ ಸ್ಥಾಲ್ಯಃ ಕಟಾಹಾಶ್ಚ ಪಾತ್ರ್ಯಶ್ಚ ಪಿಠರಾ ಅಪಿ।
ನ ತತ್ ಕಿಂಚಿದಸೌವರ್ಣಂ ರಂತಿದೇವಸ್ಯ ಧೀಮತಃ ॥೧೨೩॥

ಗಡಿಗೆಗಳು, ಹಂಡೆಗಳು, ತಾಲಿಗಳು, ಬೋಗೋಣಿಗಳು ಇವೆಲ್ಲವೂ ಕೂಡ ಬಂಗಾರದ್ದೇ ಆಗಿದ್ದವು. ಬಂಗಾರವಲ್ಲದ ಒಂದೇ ಒಂದು ವಸ್ತು ಅಲ್ಲಿ ಇರಲಿಲ್ಲ.

ಸಾಂಕೃತೇ ರಂತಿದೇವಸ್ಯ ಯಾಂ ರಾತ್ರಿಮವಸದ್ ಗೃಹೇ।
ಅಲಭಂತ ಶತಂ ಗಾವಃ ಸಹಸ್ರಾಣಿ ಚ ವಿಂಶತಿಃ ॥೧೨೪॥

ಸಂಕೃತಿಯ ಮಗನಾದ ಆ ರಂತಿದೇವನ ಮನೆಯಲ್ಲಿ ಒಂದು ರಾತ್ರಿಯ ಅತಿಥಿ ಭೋಜನಕ್ಕಾಗಿ ಸಾವಿರದ ನೂರಿಪ್ಪತ್ತು, (ಇಪ್ಪತ್ತು ಸಾವಿರದ ನೂರು ಗೋವುಗಳನ್ನು ಸ್ಪರ್ಶ ಮಾಡುವುದರ ಮೂಲಕವೇ ದಾನವನ್ನಾಗಿ ಪಡೆಯುತ್ತಿದ್ದರು.) ಆ ಸಮಯ-ದಲ್ಲಿ ಆ ಬ್ರಾಹ್ಮಣರು –

ವಿಮರ್ಶೆ - ಅಲಭಂತ ಎಂಬ ಪಾಠವೇ ಸಾಧುವಾಗಿದೆ. ಆಲಭ್ಯಂತ ಎಂಬ ಪಾಠವು ಅಸಾಧುವಾಗಿದೆ. ಇಂದಿನ ಹಲವಾರು ಪುಸ್ತಕಗಳಲ್ಲಿ ಆಲಭ್ಯಂತ ಎಂಬ ಪಾಠವೇ ಕಾಣಿಸುತ್ತಿದೆ. ಆಲಂಭನ ಮಾಡುವುದು ಎಂದರೆ ಕಡಿಯುವುದು ಎಂದರ್ಥ. ಹಸುಗಳನ್ನು ರಂತಿದೇವನು ಕಡಿಯಲು ಸಾಧ್ಯವೇ ಇಲ್ಲ. ಇದನ್ನು ಯಾರು ತಮ್ಮ ದೃಷ್ಟಿಗೆ ಅನುಗುಣವಾಗಿ ಸೇರಿಸಿದ ಪಾಠ. ಆದ್ದರಿಂದ 'ಅಲಭಂತ' ಎಂಬ ಪಾಠವನ್ನೇ ಸ್ವೀಕಾರ ಮಾಡಬೇಕು.

ತತ್ರ ಸ್ಮ ಸೂದಾಃ ಕ್ರೋಶಂತಿ ಸುಮೃಷ್ಟಮಣಿಕುಂಡಲಾಃ।
ಸೂಪಭೂಯಿಷ್ಠಮಶ್ನೀಧ್ವಂ ನಾದ್ಯ ಮಾಂಸಂ ಯಥಾ ಪುರಾ ॥೧೨೫॥

ಅಲ್ಲಿರುವ ಅಡುಗೆ ಮಾಡುವವರೂ ಕೂಡ ರತ್ನದ ಕುಂಡಲಗಳನ್ನು ಧಾರಣೆ ಮಾಡುತ್ತಿರುತ್ತಿದ್ದರು. ಅವರು ತೊವ್ವೆಗಳನ್ನು ಯಥೇಚ್ಛವಾಗಿ ಭುಂಜಿಸಿರಿ. ಮೊದ-ಲಿನಂತೆ ಈಗ ಊಟದಲ್ಲಿ ಮಾಂಸವಿಲ್ಲ ಎಂದು ಬ್ರಾಹ್ಮಣರನ್ನು ಕುರಿತು ಉಪಚರಿಸು-ತ್ತಿದ್ದರು.

ನ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ।
ಪುತ್ರಾತ್ ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ ॥೧೨೬॥

ಸೃಂಜಯನೇ! ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯಗಳಲ್ಲಿ ನಿನಗಿಂತಲೂ ಈ ರಂತಿದೇವನು ಅತ್ಯಧಿಕನಾಗಿದ್ದನು. ನಿನ್ನ ಮಗನಿಗಿಂತಲೂ ಪುಣ್ಯವಂತನಾ-

ಗಿದ್ದನು. ಇವನೇ ಮರಣವನ್ನು ಹೊಂದಿದ ಮೇಲೆ ನಿನ್ನ ಮಗನ ವಿಷಯಕ್ಕಾಗಿ ಏಕೆ ದುಃಖವನ್ನು ಹೊಂದುವಿ?

ವ್ಯಾಖ್ಯಾನ - ಸಂಕೃತಿಯ ಮಗನಾದ ಊರು ವಂಶದವನಾದ ರಂತಿದೇವನು ಮಾಡಿದ ಪಶುಯಜ್ಞವು ಈಗಲೂ ಪ್ರಸಿದ್ಧಿಯನ್ನು ಪಡೆದಿದೆ. ಆ ಪಶುಯಜ್ಞದ ಚರ್ಮದ ರಾಶಿಯಿಂದಲೇ ಚರ್ಮಣ್ವತಿ ನದಿಯು ಉತ್ಪತ್ತಿಯಾಗಿದೆ. ರಂತಿದೇವನು ರಾಜ್ಯಭಾರವನ್ನು ಮುಗಿಸಿ ವನಪ್ರಸ್ಥಾಶ್ರಮಕ್ಕೆ ತೆರಳಿದಾಗ ನಲವತ್ತೆಂಟು ದಿವಸಗಳ ಕಾಲ ಉಪವಾಸವನ್ನು ಮಾಡುತ್ತಾನೆ. ಆಗ ನಲವತ್ತೆಂಟನೆಯ ದಿವಸ ದಿವ್ಯಭೋಜನವು ದೊರೆತಾಗ ತನ್ನ ಸಂಸಾರಕ್ಕೆ ಹಂಚಿ, ತನ್ನ ಪಾಲಿನದ್ದನ್ನು ಉಣ್ಣಬೇಕೆನ್ನುವಷ್ಟರಲ್ಲಿ ಬ್ರಾಹ್ಮಣನು ಬಂದು ಆಹಾರ ಬೇಡುತ್ತಾನೆ. ಪುನಃ ಕೆಲವು ದಿವಸಗಳ ಕಾಲ ಉಪವಾಸವಿದ್ದ ಮೇಲೆ ಶೂದ್ರನೊಬ್ಬನು ಬಂದು, ಇನ್ನೂ ಕೆಲವು ದಿವಸಗಳ ಅನಂತರ ತಾಯಿಯು ಬಂದು, ಮತ್ತೊಮ್ಮೆ ಬೇಡನು ಬಂದು, ಆ ರಂತಿದೇವನ ಆಹಾರವನ್ನು ಬೇಡುತ್ತಾರೆ. ಹಸಿದಿದ್ದರೂ ಕೂಡ ರಂತಿದೇವನು ಇವರನ್ನೆಲ್ಲಾ ತೃಪ್ತಿ ಪಡಿಸಿ ನಿರ್ವಿಕಾರನಾಗಿರುತ್ತಾನೆ. ರಂತಿದೇವನ ತ್ಯಾಗದಿಂದ ಭಗವಂತನು ಪ್ರಸನ್ನನಾಗಿ ಸದ್ಗತಿಯನ್ನು ನೀಡುತ್ತಾನೆ. ಭಾಗವತದಲ್ಲಿ ಮಹಾಭಾರತದ ದ್ರೋಣಪರ್ವದಲ್ಲಿಯೂ ಇವನ ಕಥೆಯು ಬರುತ್ತದೆ.

ಸಗರ ಚಕ್ರವರ್ತಿಯ ಸಾಧನೆ

ಸಗರಂ ಚ ಮಹಾತ್ಮಾನಂ ಮೃತಂ ಶುಶ್ರುಮ ಸೃಂಜಯ।
ಐಕ್ಷ್ವಾಕಂ ಪುರುಷವ್ಯಾಘ್ರಮತಿಮಾನುಷವಿಕ್ರಮಮ್ ॥೧೨೬॥

ಇಕ್ಷ್ವಾಕು ವಂಶದಲ್ಲಿ ಸಗರ ಎಂಬ ರಾಜನಿದ್ದನು. ಇವನೂ ಕೂಡ ಮೃತನಾದನೆಂಬುದನ್ನು ನಾವು ಕೇಳಿದ್ದೇವೆ. ಮಹಾತ್ಮನು, ಪುರುಷಶ್ರೇಷ್ಠನು, ಅತಿಮಾನುಷವಾದ ಪರಾಕ್ರಮವುಳ್ಳವನು ಇವನಾಗಿದ್ದನು.

ಷಷ್ಟಿಃ ಪುತ್ರಸಹಸ್ರಾಣಿ ಯಂ ಯಾಂತಂ ಪೃಷ್ಠತೋಽನ್ವಯುಃ।
ನಕ್ಷತ್ರರಾಜಂ ವರ್ಷಾಂತೇ ವ್ಯಭ್ರೇ ಜ್ಯೋತಿರ್ಗಣಾ ಇವ ॥೧೨೭॥

ಇವನಿಗೆ ಅರವತ್ತು ಸಾವಿರ ಮಕ್ಕಳಿದ್ದರು. ಚಂದ್ರನನ್ನು ಸಾವಿರಾರು ನಕ್ಷತ್ರಗಳು ಅನುಸರಿಸುವಂತೆ ಎಲ್ಲಾ ಮಕ್ಕಳು ಇವನನ್ನು ಅನುಸರಿಸುತ್ತಿದ್ದರು.

ಏಕಚ್ಛತ್ರಾ ಮಹೀ ಯಸ್ಯ ಪ್ರಣತಾ ಹ್ಯಭವತ್ ಪುರಾ ।
ಯೋಽಶ್ವಮೇಧಸಹಸ್ರೇಣ ತರ್ಪಯಾಮಾಸ ದೇವತಾಃ ॥೧೨೯॥

ಈ ಸಗರನು ಏಕಚ್ಛತ್ರದಿಂದ ಭೂಮಿಯನ್ನು ಪರಿಪಾಲನೆ ಮಾಡಿದನು. ಸಾವಿರ ಅಶ್ವಮೇಧಯಾಗಗಳನ್ನು ಮಾಡಿ, ದೇವತೆಗಳನ್ನು ತೃಪ್ತಿ ಪಡಿಸಿದನು.

ಯಃ ಪ್ರಾದಾತ್ ಕಾಂಚನಸ್ತಂಭಂ ಪ್ರಾಸಾದಂ ಸರ್ವಕಾಂಚನಮ್ ।
ಪೂರ್ಣಂ ಪದ್ಮದಲಾಕ್ಷೀಣಾಂ ಸ್ತ್ರೀಣಾಂ ಶಯನಸಂಕುಲಮ್ ॥೧೩೦॥

ಚಿನ್ನದ ಕಂಬಗಳಿಂದ ನಿರ್ಮಿಸಿದ ಪದ್ಮದಲಾಯತಾಕ್ಷಿಯರಾದ ಸ್ತ್ರೀಯರಿಂದ ಕೂಡಿದ ಹಂಸತೂಲಿಕಾತಲ್ಪಗಳಿಂದ ಅಲಂಕೃತವಾದ ಸುವರ್ಣಮಯವಾದ ಪ್ರಾಸಾದಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದನು.

ದ್ವಿಜಾತಿಭ್ಯೋಽನುರೂಪೇಭ್ಯಃ ಕಾಮಾನುಚ್ಚಾವಚಾಂಸ್ತಥಾ ।
ಯಸ್ಯಾದೇಶೇನ ತದ್ ವಿತ್ತಂ ವ್ಯಭಜಂತ ದ್ವಿಜಾತಯಃ ॥೧೩೧॥

ಬ್ರಾಹ್ಮಣರಿಗೆ ವಿವಿಧವಾದ ಕಾಮೋಪಭೋಗಸಾಮಗ್ರಿಗಳನ್ನು ದಾನ ಮಾಡಿದನು. ಮತ್ತು ಅವರವರು ಕೇಳಿದ ಕೋರಿಕೆಗಳನ್ನೆಲ್ಲಾ ಸಲ್ಲಿಸಿದನು. ಅವನ ಆದೇಶದಿಂದ ಎಲ್ಲಾ ಬ್ರಾಹ್ಮಣರು ಅವನು ನೀಡಿದ ಭೋಗ್ಯವಸ್ತುಗಳನ್ನು ಹಂಚಿಕೊಂಡರು.

ಖಾನಯಾಮಾಸ ಯಃ ಕೋಪಾತ್ ಪೃಥಿವೀಂ ಸಾಗರಾಂಕಿತಾಮ್।
ಯಸ್ಯ ನಾಮ್ನಾ ಸಮುದ್ರಶ್ಚ ಸಾಗರತ್ವಮುಪಾಗತಃ ॥೧೩೨॥

ಕುಪಿತನಾದ ಚಕ್ರವರ್ತಿಯು ಈಗ ಸಾಗರ ಎಂಬ ಹೆಸರಿನಿಂದ ಕರೆಯುವ ಭೂಭಾಗವನ್ನು ಅಗೆಸಿದನು. ಮುಂದೆ ಅವನ ಹೆಸರಿನಿಂದಲೇ ಸಮುದ್ರವು ಸಾಗರ ಎಂಬ ಬಿರುದನ್ನು ಹೊಂದಿತು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ।
ಪುತ್ರಾತ್ ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ ॥೧೩೩॥

ಸೃಂಜಯನೇ! ಹೀಗೆ ಸಗರನು ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯ-ಗಳಲ್ಲಿ ನಿನಗಿಂತಲೂ ನಿನ್ನ ಮಗನಿಗಿಂತಲೂ ಅತ್ಯಧಿಕನಾಗಿದ್ದನು. ಅವನೇ ಮೃತನಾದ ಮೇಲೆ ಬೇರೆಯವರ ವಿಷಯದಲ್ಲಿ ದುಃಖಿಸುವ ಅವಶ್ಯಕತೆಯಿಲ್ಲ. ನಿನ್ನ ಮಗನು ಹೊಂದಿದ್ದಾನೆಂದು ಏಕೆ ದುಃಖಿಸುವಿ?

ವ್ಯಾಖ್ಯಾನ - ಇಕ್ಷ್ವಾಕುವಂಶದ ಬಾಹುಕನ ಮಗನೇ ಸಗರ. ತನ್ನ ಮಲ-ತಾಯಿಯು ತನ್ನ ತಾಯಿಗೆ ಹಾಕಿದ ಗರ್ಭಸ್ತಂಭ ಹಾಗೂ ವಿಷದ ಪರಿಣಾಮವಾಗಿ ಏಳುವರ್ಷ ತಾಯಿಯ ಉದರದಲ್ಲೇ ಇದ್ದನು. ಔರ್ವಮುನಿಯ ಆಶ್ರಮದಲ್ಲೇ ಬಾಹುಕನು ಮೃತನಾದನು. ಅದೇ ಔರ್ವಮುನಿಯಿಂದ ಶಿಕ್ಷಿತನಾದ ಸಗರನು ಹೈಹಯರನ್ನು ನಿಶ್ಶೇಷವಾಗಿ ನಾಶ ಮಾಡಿದನು. ಸಗರಚಕ್ರವರ್ತಿಯು ಸಪ್ತದ್ವೀಪ-ವತಿಯಾದ ಭೂಮಂಡಲವನ್ನು ಪರಿಪಾಲನೆ ಮಾಡಿದನು. ಸುಮತಿ ಮತ್ತು ಕೇಶಿನಿಯರು ಸಗರನ ಪತ್ನಿಯರು. ಇವರೂ ಕೂಡ ಔರ್ವಋಷಿಯನ್ನು ಸೇವೆ ಮಾಡಿದರು. ಆ ಮುನಿಗಳ ಅನುಗ್ರಹದಿಂದ ಸುಮತಿಯು ಅರವತ್ತು ಸಾವಿರ ಕುಮಾರರನ್ನು ಪಡೆದಳು. ಕೇಶಿನಿ ಅಸಮಂಜಸನೆಂಬ ಮಗನನ್ನೂ ಕೂಡ ಪಡೆದಳು. ಅಸಮಂಜಸನು ಕೆಟ್ಟವನಾದ್ದರಿಂದ ತಂದೆಯು ಆತನನ್ನು ಬಿಟ್ಟನು. ಮುಂದೆ ಅಸಮಂಜಸನ ದುಶ್ಚಟವನ್ನೇ ಅರವತ್ತು ಸಾವಿರ ಬಾಲಕರೂ ಕೂಡ ಅನುಸರಿಸಲು ಅವರಿಂದ ಯಜ್ಞಾದಿಷಟ್ಕರ್ಮಗಳೆಲ್ಲ ನಾಶವಾದವು. ಆಗ ದೇವತೆಗಳು ಕಪಿಲಮಹಾಮುನಿಗೆ ಶರಣಾಗತರಾದರು. ಆಗ ಕಪಿಲಮಹರ್ಷಿಯು ಸ್ವಲ್ಪಕಾಲದಲ್ಲಿಯೇ ಅರವತ್ತು ಸಾವಿರ ಮಕ್ಕಳು ನಾಶ ಹೊಂದುತ್ತಾರೆಂದು ಅಭಯ ದಾನ ಮಾಡಿದನು. ಕೆಲವು ಸಮಯದಲ್ಲಿಯೇ ಸಗರ ಚಕ್ರವರ್ತಿಯು ಅಶ್ವಮೇಧಯಾಗವನ್ನು ಕೈಗೊಂಡನು. ಅರವತ್ತು ಸಾವಿರ ಮಕ್ಕಳು ಆ ಕುದುರೆಯ ರಕ್ಷಣೆಗಾಗಿ ನಿಂತರು. ಆ ಅಶ್ವವನ್ನು ಇಂದ್ರನು ಅಪಹರಿಸಿ, ಬಿಲವನ್ನು ಪ್ರವೇಶಿಸಿ-ದನು. ಆಗ ಸಗರಪುತ್ರರು ಭೂಮಿಯಲ್ಲಿ ಎಲ್ಲಿಯೂ ಅಶ್ವವನ್ನು ಕಾಣದೇ ಪಾತಾಳವನ್ನು ಶೋಧಿಸಬೇಕೆಂದು ಯೋಜನಪ್ರಮಾಣ ಭೂಮಿಯನ್ನು ಅಗೆದರು. ಪಾತಾಳವನ್ನು ಪ್ರವೇಶಮಾಡಿ, ಅಲ್ಲಿ ಶರತ್ಕಾಲದ ಸೂರ್ಯನಂತೆ

ಕಂಗೊಳಿಸುತ್ತಿದ್ದ ಕಪಿಲಋಷಿಯನ್ನು ಕಂಡು ಇವನೇ ಕುದುರೆಯನ್ನು ಕದ್ದಿದ್ದಾನೆಂದು ಅವನ ಮೇಲೆ ಯುದ್ಧಕ್ಕೆ ಹೊರಟರು. ಆಗ ಕಪಿಲಋಷಿಯು ಒಮ್ಮೆ ಕಣ್ಣು ತೆರೆದನು. ಅದರಿಂದಲೇ ಎಲ್ಲರೂ ಸುಟ್ಟು ಭಸ್ಮರಾದರು. ಇವರು ಅಗೆದ ಕಾರಣದಿಂದಲೇ ಸಮುದ್ರಕ್ಕೆ ಸಾಗರ ಎಂದು ಹೆಸರು ಬಂದಿತು.

ರಾಜಾನಂ ಚ ಪೃಥುಂ ವೈನ್ಯಂ ಮೃತಂ ಶುಶ್ರುಮ ಸೃಂಜಯ।
ಯಮಭ್ಯಷಿಂಚನ್ ಸಂಭೂಯ ಮಹಾರಣ್ಯೇ ಮಹರ್ಷಯಃ॥೧೩೪॥

ವೇನನ ಮಗನೇ ಪೃಥುಚಕ್ರವರ್ತಿ. ಇವನೂ ಸಹ ಮೃತನಾದನೆಂದು ನಾವು ಕೇಳಿದ್ದೇವೆ. ಅನೇಕ ಮಹರ್ಷಿಗಳು ಗೊಂಡಾರಣ್ಯದಲ್ಲಿ ಒಂದಾಗಿ ಸೇರಿ ಈ ಪೃಥು-ಚಕ್ರವರ್ತಿಯನ್ನು ಸಿಂಹಾಸನದಲ್ಲಿ ಪಟ್ಟಾಭಿಷೇಕ ಮಾಡಿದರು.

ಪ್ರಥಯಿಷ್ಯತಿ ವೈ ಲೋಕಾನ್ ಪೃಥುರಿತ್ಯೇವ ಶಬ್ದಿತಃ।
ಕ್ಷತಾಚ್ಚ ನಸ್ತ್ರಾಯತೀತಿ ಸ ತಸ್ಮಾತ್ ಕ್ಷತ್ರಿಯಃ ಸ್ಮೃತಃ ॥೧೩೫॥

ಒಳ್ಳೆಯ ಧರ್ಮಮರ್ಯಾದೆಗಳನ್ನು ಲೋಕದಲ್ಲಿ ಸ್ಥಾಪನೆ ಮಾಡುತ್ತಾನೆ. ಆದ್ದರಿಂದ ಇವನನ್ನು 'ಪೃಥು' ಎಂದೇ ಕರೆಯಬೇಕೆಂದು ಎಲ್ಲ ಋಷಿಗಳು ಇವನನ್ನು 'ಪೃಥು' ಎಂದರು. ಆಪತ್ತಿನಿಂದ ಎಲ್ಲರನ್ನು ರಕ್ಷಣೆ ಮಾಡುತ್ತಾನಾದ್ದರಿಂದ ಇವನು ಉತ್ತಮಕ್ಷತ್ರಿಯನಾಗಿದ್ದನು.

ಪೃಥುಂ ವೈನ್ಯಂ ಪ್ರಜಾ ದೃಷ್ಟ್ವಾ ರಕ್ತಾಃ ಸ್ಮೇತಿ ಯದಬ್ರುವನ್।
ತತೋ ರಾಜೇತಿ ನಾಮಾಸ್ಯ ಅನುರಾಗಾದಜಾಯತ ॥೧೩೬॥

ವೇನರಾಜನ ಮಗನಾದ ಪೃಥುಚಕ್ರವರ್ತಿಯನ್ನು ನೋಡಿದ ಕೂಡಲೇ ಪ್ರಜೆ-ಗಳೆಲ್ಲರೂ "ನಮಗೆ ಪೃಥು ಎಂದರೆ ಇಷ್ಟ" ಎಂದು ಹೇಳುತ್ತಿದ್ದರು. ಈ ಅನು-ರಾಗದ ಕಾರಣದಿಂದಲೇ ಅವನಿಗೆ ರಾಜಾ ಎಂಬ ಹೆಸರು ಅನ್ವರ್ಥಕವಾಯಿತು.

ಅಕೃಷ್ಟಪಚ್ಯಾ ಪೃಥಿವೀ ಪುಟಕೇ ಪುಟಕೇ ಮಧು।
ಸರ್ವಾ ದ್ಯೋಣದುಘಾ ಗಾವೋ ವೈನ್ಯಸ್ಯಾಸನ್ ಪ್ರಶಾಸತಃ ॥೧೩೭॥

ಪೃಥುರಾಜನು ರಾಜ್ಯಭಾರವನ್ನು ಮಾಡುತ್ತಿರುವಾಗ ಕೃಷಿಯನ್ನು ಮಾಡದೇ ಇದ್ದರೂ ಕೂಡ ಸಮೃದ್ಧವಾಗಿ ಬೆಳೆಯು ಬೆಳೆಯುತ್ತಿತ್ತು. ಪ್ರತಿಯೊಂದು ವೃಕ್ಷದ ಕೊಟರೆಗಳಲ್ಲಿ ಜೇನು ಕಟ್ಟಿರುತ್ತಿತ್ತು. ಹಸುಗಳು ಕೊಳಗದಷ್ಟು ಹಾಲುಗಳನ್ನು ನೀಡುತ್ತಿದ್ದವು. ಹೀಗೆ ಪೃಥಿವಿಯನ್ನು ಪಾಲನೆ ಮಾಡಿದನು.

ಟಿಪ್ಪಣಿ- ಪುಟಕೇ ಪುಟಕೇ ಮಧು ಇತ್ಯತ್ರ **ಪುಟಕೇ ಪುಟಕೇ** ವೃಕ್ಷಾದೀನಾಂ ಕೋಟರೇ ಕೋಟರೇ। – 'ಪುಟಕೇ ಪುಟಕೇ' ವೃಕ್ಷಗಳ ಪ್ರತಿಯೊಂದು ಕೊಟರೆಗಳಲ್ಲಿ.

ಅರೋಗಾಃ ಸರ್ವಸಿದ್ಧಾರ್ಥಾ ಮನುಷ್ಯಾ ಅಕುತೋಭಯಾಃ।
ಯತಾಭಿಕಾಮಮವಸನ್ ಕ್ಷೇತ್ರೇಷು ಚ ಗೃಹೇಷು ಚ ॥೧೩೮॥

ಅವನ ರಾಜ್ಯಪರಿಪಾಲನೆಯಲ್ಲಿ ಯಾರೇ ಒಬ್ಬ ಮನುಷ್ಯರಿಗೆ ಖಾಯಿಲೆಗಳು ಇರಲಿಲ್ಲ. ಪ್ರತಿಯೊಬ್ಬರೂ ದೃಢಕಾಯರಾಗಿದ್ದರು. ತಮಗೆ ಅವಶ್ಯಕವಾದ ಎಲ್ಲಾ ಅಭಿಲಾಷೆಗಳನ್ನು ಪಡೆದುಕೊಳ್ಳುತ್ತಿದ್ದರು. ಯಾವುದೇ ಭಯವು ಅವರಿಗಿರಲಿಲ್ಲ. ಆ ಪೃಥುರಾಜನ ಪ್ರಜೆಗಳು ತಾವು ಇರುವ ಕ್ಷೇತ್ರಗಳಲ್ಲಿ ಮನೆಗಳಲ್ಲಿ ನಿಶ್ಚಿಂತೆಯಾಗಿ ವಾಸ ಮಾಡುತ್ತಿದ್ದರು.

ಆಪಃ ಸಂಸ್ತಂಭಿರೇ ಯಸ್ಯ ಸಮುದ್ರಸ್ಯ ಯಿಯಾಸತಃ।
ಸರಿತಶ್ಚಾನುದೀರ್ಯಂತ ಧ್ವಜಸಂಗಶ್ಚ ನಾಭವತ್ ॥೧೩೯॥

ಅವನು ಸಮುದ್ರದ ಮೇಲೆ ತೆರಳುತ್ತಿರುವಾಗ ಜಲವೂ ಕೂಡ ಕಲ್ಲಿನಂತೆ ಅವನಿಗೆ ಅನುಕೂಲ ಮಾಡಿಕೊಡುತ್ತಿತ್ತು. ಅವನು ತನ್ನ ಬಿಲ್ಲಿನ ತುದಿಗಳಿಂದ ಬೆಟ್ಟಗಳನ್ನೇ ಕಡಿದು ಭೂಮಿಯನ್ನು ಸಮತಟ್ಟನ್ನಾಗಿ ಮಾಡಿದನು.

ಹೈರಣ್ಯಾಂ ತ್ರಿನಲೋತ್ಸೇಧಾನ್ ಪರ್ವತಾನೇಕವಿಂಶತಿಮ್।
ಬ್ರಾಹ್ಮಣೇಭ್ಯೋ ದದೌ ರಾಜಾ ಯೋಽಶ್ವಮೇಧೇ ಮಹಾಮಖೇ ॥೧೪೦॥

ಅವನು ಒಂದು ಅಶ್ವಮೇಧಯಾಗವನ್ನು ನಡೆಸಿದನು. ಆಗ ಮೂರು ಆಳು-ಗಳಷ್ಟು ಎತ್ತರದಲ್ಲಿರುವ ಸುವರ್ಣಪರ್ವತಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದನು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ।
ಪುತ್ರಾತ್ ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ ॥೧೪೧॥

ಇಂಥ ಶ್ರೇಷ್ಠನಾದ ಪೃಥುರಾಜನು ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯ-ಗಳಲ್ಲಿ ನಿನಗಿಂತಲೂ ಅತ್ಯಧಿಕನಾಗಿದ್ದನು. ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯವಂತ-ನಾಗಿದ್ದನು. ಅವನೇ ಮರಣವನ್ನು ಹೊಂದಿದ ಮೇಲೆ ಉಳಿದವರ ವಿಷಯದಲ್ಲಿ ಏಕೆ ದುಃಖವನ್ನು ಅನುಭವಿಸುವಿ.

ವ್ಯಾಖ್ಯಾನ - ಪೃಥುರಾಜನ ಪತ್ನಿಯೇ ಅರ್ಚಿ. ಈಕೆಯಲ್ಲಿ ಅಂತರ್ಧಾನನೆಂಬ ಮಗನು ಹುಟ್ಟಿದನು. ಇವನ ಮೊಮ್ಮಗನು ಪ್ರಾಚೀನಬರ್ಹಿ. ಇವನ ತಂದೆಯಾದ ವೇನನು ನಾಸ್ತಿಕನು ದುಷ್ಟನು ಆಗಿದ್ದನು. ಋಷಿಗಳೇ ಹೂಂಕಾರದಿಂದ ಇವನನ್ನು ಕೊಂದರು. ಮುಂದೆ ಯಾರು ರಾಜನಾಗ ಬೇಕು ಎಂದು ವಿಚಾರ ಮಾಡಿದಾಗ, ಆ ವೇನನ ತೊಡೆಯನ್ನು ಮಥನ ಮಾಡಿದರು. ಆಗ ಪೃಥು ಹುಟ್ಟಿದನು. ಅವನು ಅತ್ಯಂತ ಧರ್ಮಿಷ್ಠನಾದನು. ಎಲ್ಲ ಋಷಿಮುನಿಗಳ ಅನುಗ್ರಹಕ್ಕೆ ಪಾತ್ರನಾದನು. ಸಮಗ್ರ ಭೂಮಂಡಲವನ್ನು ಸಮತಟ್ಟನ್ನಾಗಿ ಮಾಡಿದನು. ಅವನಿಂದಲೇ ಈ ಭೂಮಿಗೆ 'ಪಾರ್ಥವ' ಎಂಬ ಹೆಸರು ಬಂದಿತು.

ಕಿಂ ವೈ ತೂಷ್ಣೀಂ ಧ್ಯಾಯಸಿ ಸೃಂಜಯ ತ್ವಂ
ನ ಮೇ ರಾಜನ್ ವಾಚಮಿಮಾಂ ಶೃಣೋಷಿ ।
ನ ಚೇನ್ಮೋಘಂ ವಿಪ್ರಲಪ್ತಂ ಮಯೇದಂ
ಪಥ್ಯಂ ಮುಮೂಷೋರಿವ ಸಮ್ಯಗುಕ್ತಮ್ ॥೧೪೨॥

ಸೃಂಜಯನೇ! ನಾನಿಷ್ಟು ಹೇಳುತ್ತಿದ್ದರೂ ಕೂಡ ನೀನು ಸುಮ್ಮನೆ ಕುಳಿತು ಏನನ್ನು ಯೋಚನೆ ಮಾಡುತ್ತಿರುವಿ? ನನ್ನ ಮಾತನ್ನೇಕೆ ಕೇಳುತ್ತಿಲ್ಲ? ಸಾಯುತ್ತಿರುವ ಮನುಷ್ಯನಿಗೆ ಪಥ್ಯವು ಹೇಗೆ ವ್ಯರ್ಥವಾಗುತ್ತದೋ, ಅದರಂತೆ ನಾನು ಹೇಳುತ್ತಿರುವ ಹಿತವಾಕ್ಯಗಳು ನಿನ್ನಲ್ಲಿ ವ್ಯರ್ಥವಾಗುವುದಿಲ್ಲ ತಾನೇ?

ಶೃಣೋಮಿ ತೇ ನಾರದ ವಾಚಮೇನಾಂ
ವಿಚಿತ್ರಾರ್ಥಾಂ ಸ್ರಜಮಿವ ಪುಣ್ಯಗಂಧಾಮ್ ।

ರಾಜರ್ಷೀಣಾಂ ಪುಣ್ಯಕೃತಾಂ ಮಹಾತ್ಮನಾಂ
ಕೀರ್ತ್ಯಾ ಯುಕ್ತಾಂ ಶೋಕನಿರ್ನಾಶನಾರ್ಥಮ್ ॥೧೪೩॥

ಸ್ಯಂಜಯ – ಮಹಾತ್ಮರಾದ ನಾರದರೇ! ಶ್ರದ್ಧೆಯಿಂದ ನಿಮ್ಮ ಮಾತನ್ನು ಕೇಳುತ್ತಿ-ರುವೆನು. ಆ ನಿಮ್ಮ ಮಾತುಗಳು ವಿಚಿತ್ರಾರ್ಥಗಳಿಂದ ಸಹಿತವಾಗಿವೆ. ಪವಿತ್ರವಾದ ಗಂಧದಿಂದ ಕೂಡಿರುವ ಮಾಲೆಯಂತೆ ಅದನ್ನು ನಾನು ಸಂತೋಷದಿಂದ ಸ್ವೀಕರಿಸಿರುವೆ. ಪುಣ್ಯಾತ್ಮರಾದ ಎಲ್ಲಾ ರಾಜರ್ಷಿಗಳ ಕೀರ್ತಿಯನ್ನು ಕೊಂಡಾಡುವ, ಆ ನಿಮ್ಮ ಮಾತುಗಳು ನನ್ನ ದುಃಖವನ್ನು ಸಂಪೂರ್ಣವಾಗಿ ಪರಿಹರಿಸಿವೆ.

ನ ತೇ ಮೋಘಂ ವಿಪ್ರಲಪ್ತಂ ಮಹರ್ಷೇ
ದೃಷ್ಟೇವ ತ್ವಾಂ ನಾರದಾಹಂ ವಿಶೋಕಃ।
ಶುಶ್ರೂಷೇ ತೇ ವಚನಂ ಬ್ರಹ್ಮವಾದಿನ್
ನ ತೇ ತೃಪ್ಯಾಮ್ಯಮೃತಸ್ಯೇವ ಪಾನಾತ್ ॥೧೪೪॥

ಮಹರ್ಷಿಗಳೇ ! ತಾವು ನನಗೆ ಹೇಳಿದ ಮಾತುಗಳು ಸರ್ವಥಾ ವ್ಯರ್ಥವಾಗು-ವುದಿಲ್ಲ. ತಮ್ಮನ್ನು ನೋಡಿದಾಕ್ಷಣವೇ ನನ್ನ ದುಃಖವೆಲ್ಲವೂ ಪರಿಹಾರವಾಗಿದೆ. ಬ್ರಹ್ಮಜ್ಞಾನಿಗಳೇ ! ಅಮೃತಪಾನದಂತಿರುವ ನಿಮ್ಮ ಮಾತುಗಳನ್ನು ಎಷ್ಟು ಕೇಳಿದರೂ ನನಗೆ ತೃಪ್ತಿಯಾಗುತ್ತಿಲ್ಲ. ಪುನಃ ಕೇಳಬೇಕೆನಿಸುತ್ತಿದೆ.

ಅಮೋಘದರ್ಶನ್ಮಮ ಚೇತ್ ಪ್ರಸಾದಂ
ಸುತಾಘದಗ್ಧಸ್ಯ ವಿಭೋ ಪ್ರಕುರ್ಯಾಃ।
ಮೃತಸ್ಯ ಸಂಜೀವನಮದ್ಯ ಮೇ ಸ್ಯಾತ್
ತವ ಪ್ರಸಾದಾತ್ ಸುತಸಂಗಮಶ್ಚ ॥೧೪೫॥

ತಮ್ಮ ದರ್ಶನವೇ ಅಮೋಘವಾಗಿದೆ. ನಾನು ಪುತ್ರನ ವಿಯೋಗದಿಂದ ದುಃಖ-ಸಂತಪ್ತನಾಗಿರುವೆನು. ನೀವು ಪ್ರಸನ್ನರಾದಲ್ಲಿ ಸತ್ತು ಹೋದ ಆ ಮಗನು ಜೀವಂತ-ವಾಗಿ ಪುನಃ ಬರುತ್ತಾನೆ. ಅಂಥ ಶಕ್ತಿ ನಿಮ್ಮಲ್ಲಿದೆ. ತಮ್ಮ ಪ್ರಸಾದದಿಂದ ನನಗೆ ಪುನಃ ಪುತ್ರ ಸಮಾಗಮವು ಉಂಟಾಗುವಂತೆ ಕರುಣಿಸಿರಿ.

ಯಸ್ತೇ ಪುತ್ರೋ ದಯಿತೋಽಯಂ ವಿಜಾತಃ
ಸ್ವರ್ಣಷ್ಠೀವೀ ಯಮದಾತ್ ಪರ್ವತಸ್ತೇ।
ಪುನಸ್ತೇ ತಂ ಪುತ್ರಮಹಂ ದದಾಮಿ
ಹಿರಣ್ಯನಾಭಂ ವರ್ಷಸಹಸ್ರಿಣಂ ಚ ॥೧೪೬॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ತ್ರಿಂಶೋಽಧ್ಯಾಯಃ ॥೩೦॥

ನಾರದರು – ಸೃಂಜಯನೇ! ನಿನಗೆ ಪರ್ವತನು ಅನುಗ್ರಹಿಸಿದ ಸ್ವರ್ಣಷ್ಠೀವಿ ಎಂಬ ಮಗನು ಮೃತನಾಗಿದ್ದಾನೆ. ಅವನ ದೇಹವಷ್ಟೇ ನಿನ್ನ ಮನೆಯಲ್ಲಿ ಮಲಗಿದೆ. ಈ ದೇಹದಲ್ಲಿ ಪುನಃ ಅವನು ಬಂದು ನೆಲೆಸುವಂತೆ ಮಾಡುತ್ತೇನೆ. ಅವನನ್ನು ಬದುಕಿಸುತ್ತೇನೆ. ಅವನು ಸ್ವರ್ಣಸಮಾನವಾದ ದೇಹಕಾಂತಿಯಿಂದ ಸಾವಿರವರ್ಷ-ಕಾಲ ಬದುಕುತ್ತಾನೆ. ಹೀಗೆ ಆ ಸೃಂಜಯನಿಗೆ ನಾರದರು ಅನುಗ್ರಹವನ್ನು ಮಾಡಿದರು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೩೦ನೆಯ ಅಧ್ಯಾಯವು ಮುಗಿಯಿತು.

* * * *

೩೧. ಮೂವತ್ತೊಂದನೆಯ ಅಧ್ಯಾಯ

ನಾರದ ಹಾಗೂ ಪರ್ವತರ ಕಥೆಯನ್ನು ಶ್ರೀ ಕೃಷ್ಣನು ಧರ್ಮರಾಜನಿಗೆ ತಿಳಿಸುತ್ತಿದ್ದಾನೆ.

ಯುಧಿಷ್ಠಿರಃ

ಸ ಕಥಂ ಕಾಂಚನಷ್ಠೀವೀ ಸೃಂಜಯಸ್ಯ ಸುತೋಽಭವತ್।
ಪರ್ವತೇನ ಕಿಮರ್ಥಂ ಚ ದತ್ತಃ ಕೇನ ಮಮಾರ ಚ ॥೧॥

ಶ್ರೀಕೃಷ್ಣನೇ! ಸ್ವರ್ಣಷ್ಠೀವಿಯು ಆ ಸೃಂಜಯನಿಗೆ ಹೇಗೆ ಮಗನಾದನು? ಪರ್ವತ ಋಷಿಯು ಸ್ವರ್ಣಷ್ಠೀವಿಯನ್ನು ಸೃಂಜಯನಿಗೆ ಯಾವ ಕಾರಣಕ್ಕಾಗಿ ನೀಡಿದನು? ಯಾವ ಕಾರಣಕ್ಕಾಗಿ ಆ ಸ್ವರ್ಣಷ್ಠೀವಿಯು ಮರಣವನ್ನು ಹೊಂದಿದನು?

ಯದಾ ವರ್ಷಸಹಸ್ರಾಯುಸ್ತದಾ ಭವತಿ ಮಾನವಃ।
ಕಥಮಪ್ರಾಪ್ತಕೌಮಾರಃ ಸೃಂಜಯಸ್ಯ ಸುತೋ ಮೃತಃ ॥೨॥

ಆ ಕಾಲದಲ್ಲಿ ಪ್ರತಿಯೊಬ್ಬ ಮಾನವನು ಸಾವಿರ ವರ್ಷಗಳ ಕಾಲ ಜೀವಿಸುತ್ತಿದ್ದನು. ಹೀಗಿದ್ದರೂ ಕೌಮಾರಾವಸ್ಥೆಯನ್ನು ಹೊಂದುವ ಮೊದಲೇ ಆ ಸೃಂಜಯನ ಮಗನು ಏಕೆ ಮರಣವನ್ನು ಹೊಂದಿದನು?

ಉತಾಹೋ ನಾಮಮಾತ್ರಂ ವೈ ಸುವರ್ಣಷ್ಠೀವಿನೋಽಭವತ್।
ತಥ್ಯಂ ವಾ ಕಾಂಚನಷ್ಠೀವೀತ್ಯೇತದಿಚ್ಛಾಮಿ ವೇದಿತುಮ್ ॥೩॥

ಅವನಿಗೆ 'ಸ್ವರ್ಣಷ್ಠೀವಿ' ಎಂಬುದು ಕೇವಲ ಹೆಸರು ಮಾತ್ರವೋ? ಅಥವಾ ಸಕಾರಣಕವಾಗಿ ಆ ಹೆಸರು ಬಂದಿದೆಯೋ? ಈ ವಿಷಯವನ್ನು ತಮ್ಮಿಂದ ತಿಳಿಯಲು ಬಯಸುತ್ತೇನೆ.

ಶ್ರೀಭಗವಾನ್

ಅತ್ರ ತೇ ಕಥಯಿಷ್ಯಾಮಿ ಯಥಾವೃತ್ತಂ ಜನೇಶ್ವರ।
ನಾರದಃ ಪರ್ವತಶ್ಚೈವ ಪ್ರಾಗ್ ಋಷೀ ಲೋಕಪೂಜಿತೌ ॥೪॥

ಶ್ರೀಕೃಷ್ಣ – ಜನೇಶ್ವರನೇ ! ಈ ಸಂದರ್ಭದಲ್ಲಿ ಅವನ ಚರಿತ್ರೆಯನ್ನು ನಿನಗೆ ತಿಳಿಸುತ್ತೇನೆ ಕೇಳು. ನಾರದ ಹಾಗೂ ಪರ್ವತ ಇವರಿಬ್ಬರು ಮಹರ್ಷಿಗಳು ಲೋಕದಲ್ಲಿ ಎಲ್ಲರಿಂದಲೂ ಪೂಜಿತರಾದವರು.

ಮಾತುಲೋ ಭಾಗಿನೇಯಶ್ಚ ದೇವಲೋಕಾದಿಹಾಗತೌ।
ವಿಹರ್ತುಕಾಮೌ ಸಂಪ್ರೀತ್ಯಾ ಮಾನುಷೇಷು ಪುರಾ ಪ್ರಭೂ ॥೫॥

ಅವರಿಬ್ಬರಲ್ಲಿ ನಾರದರು ಸೋದರಮಾವ ಆಗಬೇಕು. ಪರ್ವತಋಷಿಯು ಸೋದರಳಿಯ ಆಗಬೇಕು. ಇವರಿಬ್ಬರು ಒಮ್ಮೆ ಭೂಲೋಕದಲ್ಲಿ ಸಂಚಾರ ಮಾಡಬೇಕೆಂಬ ಆಪೇಕ್ಷೆಯಿಂದ ದೇವಲೋಕದಿಂದ ಭೂಲೋಕಕ್ಕೆ ಆಗಮಿಸಿದರು.

ಹವಿಃಪವಿತ್ರಭೋಜ್ಯೇನ ದೇವಭೋಜ್ಯೇನ ಚೈವ ಹ।
ನಾರದೋ ಮಾತುಲಶ್ಚೈವ ಭಾಗಿನೇಯಶ್ಚ ಪರ್ವತಃ ॥೬॥

ಸೋದರಮಾವ ಹಾಗೂ ಅಳಿಯಂದಿರಾದ ನಾರದರು ಹಾಗೂ ಪರ್ವತ-ಋಷಿಯು ಭೂಲೋಕದಲ್ಲಿ ದೊರೆಯುವ ಹವಿಸ್ಸನ್ನು ಪವಿತ್ರವಾದ ದೇವತೆಗಳು ಉಪಯೋಗಿಸುವ ಆಹಾರಪದಾರ್ಥವನ್ನು ತಿನ್ನುತ್ತಾ ಭೂಲೋಕದಲ್ಲಿ ಸಂಚಾರ ಮಾಡಿದರು.

ತಾವುಭೌ ತಪಸೋಪೇತಾವವನೀತಲಚಾರಿಣೌ।
ಭುಂಜಾನೌ ಮಾನುಷಾನ್ ಭೋಗಾನ್ ಯಥಾವತ್
ಪರ್ಯಧಾವತಾಮ್ ॥೭॥

ಅವರಿಬ್ಬರು ಭೂಮಿಯಲ್ಲಿ ತಪಸ್ಸನ್ನು ಆಚರಿಸುತ್ತಿದ್ದರು. ಮನುಷ್ಯರು ಉಪಯೋಗಿಸುವ ಆಹಾರಗಳನ್ನೇ ತಿನ್ನುತ್ತಿದ್ದರು. ಭೂಮಿಯಲ್ಲೆಡೆ ಸಂಚಾರ ಮಾಡುತ್ತಿದ್ದರು.

ಪ್ರೀತಿಮಂತೌ ಮುದಾ ಯುಕ್ತೌ ಸಮಯಂ ತತ್ರ ಚಕ್ರತುಃ।
ಯೋ ಭವೇದ್ ಹೃದಿ ಸಂಕಲ್ಪಃ ಶುಭೋ ವಾ ಯದಿ ವಾಶುಭಃ ॥೮॥

ಅನ್ಯೋನ್ಯಸ್ಯ ಸ ಆಖ್ಯೇಯೋ ಮೃಷಾ ಶಾಪೋऽನ್ಯಥಾ ಭವೇತ್।
ತೌ ತಥೇತಿ ಪ್ರತಿಜ್ಞಾಯ ಮಹರ್ಷೀ ಲೋಕಪೂಜಿತೌ।
ಸೃಂಜಯಂ ಶೈವಲ್ಯಮಭ್ಯೇತ್ಯ ರಾಜಾನಮಿದಮೂಚತುಃ ॥೯॥

ಅವರಿಬ್ಬರು ಪರಸ್ಪರಪ್ರೀತಿಯುಳ್ಳವರಾಗಿದ್ದರು. ಒಮ್ಮೆ ತಮ್ಮ-ತಮ್ಮಲ್ಲಿಯೇ ಒಂದು ನಿರ್ಬಂಧವನ್ನು ಮಾಡಿಕೊಂಡರು. ''ತಮ್ಮಲ್ಲಿ ಒಬ್ಬರಿಗೊಬ್ಬರು ಯಾವುದೇ ವಿಚಾರವನ್ನು ಮುಚ್ಚಿಡಬಾರದು. ಅದು ಒಳ್ಳೆಯದೇ ಆಗಿರಲಿ ಕೆಟ್ಟದ್ದೇ ಆಗಿರಲಿ. ತಮ್ಮ ಮನಸ್ಸಿನಲ್ಲಿ ಹುಟ್ಟಿದ ಸಂಕಲ್ಪವನ್ನು ಮತ್ತೊಬ್ಬನಿಗೆ ಹೇಳಬೇಕು. ಹಾಗೇ ಹೇಳದಿದ್ದರೆ, ಅಥವಾ ಸುಳ್ಳು ಹೇಳಿದರೆ ಅವನು ಶಾಪಕ್ಕೆ ಭಾಗಿಯಾಗುತ್ತಾನೆ'' ಎಂದು.

ಹೀಗೆ ಲೋಕಪೂಜಿತರಾದ ಮಹರ್ಷಿಗಳಾದ ನಾರದರು ಮತ್ತು ಪರ್ವತರು ಹಾಗೆಯೇ ಆಗಲೆಂದು ಪರಸ್ಪರವಾಗಿ ಒಪ್ಪಿಕೊಂಡರು. ಪ್ರತಿಜ್ಞಾವಾಕ್ಯವನ್ನು ಅನುಸರಿಸಿದರು. ಅನಂತರ ರಾಜಶ್ರೇಷ್ಠನಾದ, ಶ್ವೇತರಾಜನ ಮಗನಾದ ಸೃಂಜಯನ ಬಳಿ ತೆರಳಿ ಹೀಗೆ ಹೇಳಿದರು -

ಆವಾಂ ಭವತಿ ವತ್ಸ್ಯಾವಃ ಕಂಚಿತ್ಕಾಲಂ ಹಿತಾಯ ತೇ।
ಯಥಾವತ್ ಪೃಥಿವೀಪಾಲ ಆವಯೋಃ ಪ್ರಗುಣೋಭವ ॥೧೦॥
ತಥೇತಿ ಕೃತ್ವಾತೌ ರಾಜಾ ಸತ್ಕೃತ್ಯೋಪಚಚಾರ ಹ।

ಮಹಾರಾಜನೇ! ನಾವಿಬ್ಬರೂ ನಿನಗೆ ಹಿತವನ್ನು ಬಯಸುತ್ತೇವೆ. ಅದಕ್ಕಾಗಿ ಕೆಲವು ಕಾಲದ ತನಕ ನಿನ್ನ ಸಮೀಪದಲ್ಲಿ ವಾಸಮಾಡುತ್ತೇವೆ. ನಾವು ಎಷ್ಟು ದಿವಸಗಳ ಕಾಲ ಇರುತ್ತೇವೋ, ಅಲ್ಲಿಯ ತನಕ ನೀನು ನಮಗೆ ಅನುಕೂಲವಾದ ಸೌಕರ್ಯಗಳನ್ನು ಕಲ್ಪಿಸಿಕೊಡು. ಹೀಗೆ ನಾರದ ಹಾಗೂ ಪರ್ವತನ ಮಾತನ್ನು ಕೇಳಿದ ರಾಜನು ಬಹಳ ಸಂತೋಷಪಟ್ಟನು. ಹಾಗೆಯೇ ಆಗಲಿ ಎಂದನು. ಅವರನ್ನು ಸತ್ಕಾರ ಮಾಡಿ ಎಲ್ಲಾ ಉಪಚಾರಗಳನ್ನು ಮಾಡಿ, ಸ್ವಾಗತ ಮಾಡಿದನು.

ತತಃ ಕದಾಚಿತ್ ತೌ ರಾಜಾ ಮಹಾತ್ಮಾನೌ ತಥಾಗತೌ।
ಅಬ್ರವೀತ್ ಪರಮಪ್ರೀತಃ ಸುತೇಯಂ ವರವರ್ಣಿನೀ ॥೧೧॥

ಏಕೈವ ಮಮ ಕನ್ಯೇಷಾ ಯುವಾಂ ಪರಿಚರಿಷ್ಯತಿ।
ದರ್ಶನೀಯಾನವದ್ಯಾಂಗೀ ಶೀಲವೃತ್ತಸಮನ್ವಿತಾ ॥೧೨॥
ಸುಕುಮಾರೀ ಕುಮಾರೀ ಚ ಪದ್ಮಕಿಂಜಲ್ಕಸನ್ನಿಭಾ ॥

ಸ್ವಲ್ಪ ಕಾಲವು ಕಳೆದ ಮೇಲೆ ಋಷಿಗಳ ವಿಷಯದಲ್ಲಿ ಪರಮಪ್ರೀತನಾದ ಸೃಂಜಯನು ಮಹಾತ್ಮರಾದ ನಾರದ ಹಾಗೂ ಪರ್ವತರ ಬಳಿ ತೆರಳಿದನು. ಬಹಳ ಸಂತೋಷದಿಂದ ಅವರ ಬಳಿ ಹೀಗೆ ಹೇಳಿದನು -

ಮಹರ್ಷಿಗಳೇ! ರೂಪಲಾವಣ್ಯಗಳಿಂದ ಕಂಗೊಳಿಸುತ್ತಿರುವ ಈ ಹೆಣ್ಣುಮಗಳು ನನ್ನ ಏಕೈಕಪುತ್ರಿ. ಇವಳು ದೇವಕನ್ಯೆಯಂತಿದ್ದಾಳೆ. ಒಳ್ಳೆಯ ಶೀಲ ಹಾಗೂ

ಸ್ವಭಾವಗಳನ್ನು ಹೊಂದಿದ್ದಾಳೆ. ಕಮಲದ ಕುಸುರಿನಿಂತೆ ಕಾಂತಿಯುಕ್ತಳಾಗಿದ್ದಾಳೆ. ಸುಕುಮಾರಿ ಎಂಬ ಹೆಸರಿನ ಈ ಕುಮಾರಿಯು ತಮ್ಮ ಬಳಿಯಲ್ಲಿದ್ದು ತಮ್ಮ ಸೇವೆಯನ್ನು ಮಾಡಲು ಬಯಸುತ್ತಾಳೆ.

ಪರಮಂ ಸೌಮ್ಯ ಇತ್ಯುಕ್ತಸ್ತಭ್ಯಾಂ ರಾಜಾ ಶಶಾಸ ತಾಮ್ ।
ಕನ್ಯೇ ಏಷ್ಯಾವುಪಚರ ದೇವವತ್ ಪಿತೃವಚ್ಚ ಹ ॥೧೩॥

ಸೃಂಜಯನ ಮಾತುಗಳನ್ನು ಕೇಳಿ ಇಬ್ಬರು ಮುನಿಗಳು 'ಬಹಳ ಸಂತೋಷ ಹಾಗೆಯೇ ಆಗಲಿ' ಎಂದು ಒಪ್ಪಿದರು. ಆಗ ರಾಜನು ಮಗಳನ್ನು ಕರೆದನು. ಮಗಳೇ! ಇವರಿಬ್ಬರು ಶ್ರೇಷ್ಠ ಮುನಿಗಳಾಗಿದ್ದಾರೆ. ಇವರನ್ನು ದೇವತೆಗಳಂತೆ, ತಂದೆಯಂತೆ ಭಕ್ತಿಯಿಂದ ಸೇವೆಯನ್ನು ಮಾಡು.

ಸಾ ಕು ಕನ್ಯಾ ತಥೇತ್ಯುಕ್ತ್ವಾ ಪಿತರಂ ಧರ್ಮಚಾರಿಣೀ ।
ಯಥಾನಿದೇಶಂ ರಾಜ್ಞಸ್ತೌ ಸತ್ಕೃತ್ಯೋಪಚಚಾರ ಹ ॥೧೪॥

ಆಗ ಆ ಕನ್ಯೆಯು ಹಾಗೆಯೇ ಆಗಲಿ ಎಂದು ಸಂತೋಷದಿಂದ ಹೇಳಿದಳು. ತಂದೆಯ ಆಜ್ಞೆಯಂತೆ ಆ ಇಬ್ಬರು ಮಹರ್ಷಿಗಳನ್ನು ಭಕ್ತಿಯಿಂದ ಉಪಚಾರವನ್ನು ಮಾಡುತ್ತಿದ್ದಳು.

ತಸ್ಯಾಸ್ತಥೋಪಚಾರೇಣ ರೂಪೇಣಾಪ್ರತಿಮೇನ ಚ ।
ನಾರದಂ ಹೃಚ್ಛಯಸ್ಫೂರ್ಜಂ ಸಹಸೈವಾನ್ವಪದ್ಯತ ॥೧೫॥

ಅವಳು ಮಾಡುತ್ತಿದ್ದ ಉಪಚಾರಗಳಿಂದ ಮತ್ತು ಅವಳಲ್ಲಿರುವ ಅಪ್ರತಿಮವಾದ ರೂಪಲಾವಣ್ಯದಿಂದ ನಾರದರ ಮನಸ್ಸು ಕದಲಿತು. ಅವರ ಮನಸ್ಸಿನಲ್ಲಿ ಸುಪ್ತನಾದ ಕಾಮದೇವನು ಎದ್ದುನಿಂತನು.

ವವೃಧೇ ಚ ತತಸ್ತಸ್ಯ ಹೃದಿ ಕಾಮೋ ಮಹಾತ್ಮನಃ ।
ಯತಾ ಶುಕ್ಲಸ್ಯ ಪಕ್ಷಸ್ಯ ಪ್ರವೃತ್ತಾವುಡುರಾಟ್ ಶನೈಃ ॥೧೬॥

ನಾರದರ ಹೃದಯದಲ್ಲಿ ಕಾಮತಾಪವು ಹೆಚ್ಚಾಯಿತು. ಶುಕ್ಲಪಕ್ಷದ ಚಂದ್ರನಂತೆ ದಿನನಿತ್ಯ ಆ ಕಾಮವು ಬೆಳೆಯುತ್ತಿತ್ತು.

ನಚ ತಂ ಭಾಗಿನೇಯಾಯ ಪರ್ವತಾಯ ಮಹಾತ್ಮನೇ।
ಶಶಂಸ ಮನ್ಮಥಂ ತೀವ್ರಂ ವ್ರೀಡಮಾನಃ ಸ ಧರ್ಮವಿತ್ ॥೧೭॥

ಮಹಾತ್ಮನಾದ ತನ್ನ ಅಳಿಯನಾದ ಪರ್ವತನ ಬಳಿ ತನಗೆ ಆ ಹುಡುಗಿಯ ವಿಷಯದಲ್ಲಿ ಉಂಟಾದ ಕಾಮಭಾವವನ್ನು ಹೇಳಿಕೊಳ್ಳಲು ನಾಚಿಕೆ ಪಟ್ಟರು. ನಾಚಿಕೆಯ ಕಾರಣದಿಂದಾಗಿ ತಮ್ಮ ಹೃದಯದಲ್ಲಿ ಅಡಗಿದ ಕಾಮವಿಷಯವನ್ನು ಹೇಳಲಿಲ್ಲ.

ತಪಸಾ ಚೋಂಗಿತೇನಾಥ ಪರ್ವತೋಽಥ ಬುಬೋಧ ತತ್।
ಕಾಮಾರ್ತಂ ನಾರದಂ ಕ್ರುದ್ಧಃ ಶಶಾಪೈನಂ ತತೋ ಭೃಶಮ್ ॥೧೮॥

ಆದರೆ ತಮ್ಮ ತಪಸ್ಸಿನ ಪ್ರಭಾವದಿಂದ ಹಾಗೂ ನಾರದರ ಅಂಗಚೇಷ್ಟೆಗಳಿಂದ, ಮುಖದಲ್ಲಿದ್ದ ವಿಕಾರಗಳಿಂದ ಪರ್ವತಮುನಿಗೆ ಎಲ್ಲವೂ ತಿಳಿಯಿತು. ನಾರದರ ಮನಸ್ಸಿನಲ್ಲಿ ಕಾಡುತ್ತಿದ್ದ ಕಾಮಪೀಡೆಯು ಅರ್ಥವಾಯಿತು. ಬಹಳ ಕ್ರುದ್ಧರಾದರು. ಕಾಮಾರ್ಥರಾಗಿದ್ದ ನಾರದರನ್ನು ಕೂಡಲೇ ಶಪಿಸಿಬಿಟ್ಟರು.

ಕೃತ್ವಾ ಸಮಯಮವ್ಯಗ್ರೋ ಭವಾನ್ ವೈ ಸಹಿತೋ ಮಯಾ।
ಯೋ ಭವೇದ್ ಹೃದಿ ಸಂಕಲ್ಪಃ ಶುಭೋ ವಾ ಯದಿ ವಾಶುಭಃ ॥೧೯॥

ನೀನು ಹಿಂದೆ ನನ್ನ ಜೊತೆ ಏನೆಂದು ಶಪಥ ಮಾಡಿದ್ದೀ. ಅದನ್ನು ಈಗ ಮರೆತು -ಬಿಟ್ಟೆಯಾ? ಒಳ್ಳೆಯದಾಗಲೀ, ಕೆಟ್ಟದಾಗಲೀ ನಮ್ಮಿಬ್ಬರಲ್ಲಿ ಬಂದ ಸಂಕಲ್ಪವನ್ನು ಕೂಡಲೇ ಮತ್ತೊಬ್ಬರಿಗೆ ತಿಳಿಸಬೇಕು ಎಂದು ಮಾಡಿಕೊಂಡಿದ್ದೇವೆ ಅಲ್ಲವೇ?

ಅನ್ಯೋನ್ಯಸ್ಯ ಸ ಆಖ್ಯೇಯ ಇತಿ ತದ್ ವೈ ಮೃಷಾ ಕೃತಮ್।
ಭವತಾ ವಚನಂ ಬ್ರಹ್ಮಂಸ್ತಸ್ಮಾದೇತದ್ ವದಾಮ್ಯಹಮ್ ॥೨೦॥

ಇಂಥ ನಮ್ಮಿಬ್ಬರ ನಿರ್ಬಂಧವನ್ನು ನೀನೀಗ ದಾಟಿರುವಿ. ಅದನ್ನು ಸುಳ್ಳು ಮಾಡಿ -ರುವಿ. ಬ್ರಾಹ್ಮಣನೇ ! ಈಗ ನಾನು ನಿನಗೆ ಹೇಳುತ್ತಿದ್ದೇನೆ ಕೇಳು -

ನಹಿ ಕಾಮಂ ಪ್ರವರ್ತಂತಂ ಭವಾನಾಚಷ್ಟ ಮೇ ಪುರಾ ।
ಸುಕುಮಾರ್ಯಾಂ ಕುಮಾರ್ಯಾಂ ತೇ ತಸ್ಮಾದೇಷು ಶಪಾಮ್ಯಹಮ್॥೨೧॥

ಕುಮಾರಿಯಾದ ಈ ಸುಕುಮಾರಿಯ ವಿಷಯದಲ್ಲಿ ನಿನ್ನ ಮನಸ್ಸಿನಲ್ಲಿ ಕಾಮ-ಭಾವವು ಹುಟ್ಟಿದೆ. ಪ್ರತಿಜ್ಞೆಗೆ ಅನುಗುಣವಾಗಿ ಈ ಕಾಮವಿಕಾರವನ್ನು ನನ್ನೊಡನೆ ನೀನು ಹಂಚಿಕೊಳ್ಳಬೇಕಿತ್ತು. ಆದರೆ ನೀನು ಅದನ್ನು ನನಗೆ ತಿಳಿಸಿಲ್ಲ. ಆದ್ದರಿಂದ ನಿನಗೀಗ ಶಾಪವನ್ನು ನೀಡುತ್ತೇನೆ.

ಬ್ರಹ್ಮವಾದೀ ಗುರುರ್ಯಸ್ಮಾತ್ ತಪಸ್ವೀ ಬ್ರಾಹ್ಮಣಶ್ಚ ಸನ್ ।
ಅಕರ್ಷೀಃ ಸಮಯಭ್ರಂಶಮಾವಾಭ್ಯಾಂ ಯಃ ಕೃತೋ ಮಿಥಃ॥೨೨॥

ನೀನು ಬ್ರಹ್ಮಚಾರಿ ಆಗಿರುವಿ. ನನಗೆ ಸೋದರಮಾವನಾಗಿರುವುದರಿಂದ ಗುರುಸ್ಥಾನದಲ್ಲಿರುವಿ. ತಪಸ್ವಿಯಾಗಿರುವಿ, ಬ್ರಾಹ್ಮಣಕುಲದಲ್ಲಿ ಹುಟ್ಟಿರುವಿ. ಇಷ್ಟಿದ್ದರೂ ನಾವಿಬ್ಬರೂ ಮಾಡಿಕೊಂಡ ಶಪಥವನ್ನು ಸುಳ್ಳು ಮಾಡಿರುವಿ.

ಶಪ್ಸ್ಯೇ ತಸ್ಮಾತ್ ಸುಸಂಕ್ರುದ್ಧೋ ಭವಂತಂ ತಂ ನಿಬೋಧ ಮೇ ।
ಸುಕುಮಾರೀ ಚ ತೇ ಭಾರ್ಯಾ ಭವಿಷ್ಯತಿ ನ ಸಂಶಯಃ ॥೨೩॥

ವಾನರಂ ಚೈವ ಕನ್ಯಾ ತ್ವಾಂ ವಿವಾಹಾತ್ ಪ್ರಭೃತಿ ಪ್ರಭೋ ।
ಸಂದ್ರಕ್ಷ್ಯಂತಿ ನಾರಶ್ಚಾನ್ಯೇ ಸ್ವರೂಪೇಣ ವಿನಾಕೃತಮ್ ॥೨೪॥

ಇದರಿಂದ ನನಗೆ ಬಹಳ ಕೋಪವುಂಟಾಗಿದೆ. ನಾನು ನಿನಗೀಗ ಶಪಿಸುತ್ತಿದ್ದೇನೆ. ನೀನು ಯಾರನ್ನು ಕಾಮಿಸಿರುವೆಯೋ, ಆ ಸುಕುಮಾರಿಯೇ ನಿನ್ನ ಹೆಂಡತಿ-ಯಾಗುತ್ತಾಳೆ. ಇದರಲ್ಲಿ ಸಂಶಯವಿಲ್ಲ. ಆದರೆ ವಿವಾಹವಾದ ಕೂಡಲೇ ನೀನು ಕಪಿಯಾಗುವಿ. ನಿನ್ನ ಸ್ವರೂಪವನ್ನೇ ಕಳೆದುಕೊಳ್ಳುವಿ. ಎಲ್ಲ ಮನುಷ್ಯರು ನೀನು ನಿಜರೂಪವನ್ನು ಕಳೆದುಕೊಂಡು ಕಪಿರೂಪ ಹೊಂದಿದ್ದನ್ನು ಕಾಣುವರು.

ಸ ತದಾಶ್ರವ್ಯಂ ತು ವಿಜ್ಞಾಯ ನಾರದಃ ಪರ್ವತಾತ್ತದಾ ।
ಅಶಪತ್ತಮಪಿ ಕ್ರೋಧಾದ್ ಭಾಗಿನೇಯಂ ಸ ಮಾತುಲಃ ॥೨೫॥

ಯುಧಿಷ್ಠಿರನೇ! ಆ ಪರ್ವತಮುನಿಯ ಶಾಪವಾಕ್ಯವನ್ನು ಕೇಳಿದ ಕೂಡಲೇ ನಾರದರು ಹೆದರಲಿಲ್ಲ. ಅವರಿಗೂ ಕೂಡ ಕೋಪವು ಬಂದಿತು. ಆ ಕೋಪಾವೇಶದಿಂದ ಸೋದರಳಿಯನನ್ನು ಶಪಿಸಿದರು.

ತಪಸಾ ಬ್ರಹ್ಮಚರ್ಯೇಣ ಸತ್ಯೇನ ಚ ದಮೇನ ಚ।
ಯುಕ್ತೋಽಪಿ ಧರ್ಮನಿತ್ಯಶ್ಚ ನ ಸ್ವರ್ಗವಾಸಮಾಪ್ಸ್ಯಸಿ ॥೨೬॥

ಪರ್ವತನೇ ! ತಪಸ್ಸು, ಬ್ರಹ್ಮಚರ್ಯ, ಸತ್ಯ, ಇಂದ್ರಿಯನಿಗ್ರಹ ಮೊದಲಾದ ಉತ್ತಮಗುಣಗಳಿಂದ ನಿತ್ಯವಾಗಿಯೂ ನೀನು ಧರ್ಮನಿರತನಾಗಿರುವಿ. ಹಾಗಿದ್ದರೂ ನಿನಗೆ ಪುನಃ ಪುನಃ ಸ್ವರ್ಗಕ್ಕೆ ಹೋಗುವ ಶಕ್ತಿಯು ನಶಿಸಲಿ.

ತೌ ತು ಶಪ್ತ್ವಾ ಭೃಶಂ ಕ್ರುದ್ಧೌ ಪರಸ್ಪರಮಮರ್ಷಣೌ।
ಪ್ರತಿಜಗ್ಮತುರನ್ಯೋನ್ಯಂ ಕ್ರುದ್ಧಾವಿವ ಗಜೋತ್ತಮೌ ॥೨೭॥

ಹೀಗೆ ಅವರಿಬ್ಬರು ಸಹನೆಯಿಲ್ಲದೇ ಪರಸ್ಪರವಾಗಿ ಕ್ರುದ್ಧರಾದರು. ಪರಸ್ಪರ ಶಾಪಗಳನ್ನು ಕೊಟ್ಟರು. ಕೋಪಗೊಂಡು ಎರಡು ಆನೆಗಳಂತೆ ವಿರುದ್ಧವಾದ ದಿಕ್ಕುಗಳಿಗೆ ಹೊರಟು ಹೋದರು.

ಪರ್ವತಃ ಪೃಥಿವೀಂ ಕೃತ್ಸ್ನಾಂ ವಿಚಚಾರ ಮಹಾಮುನಿಃ।
ಪೂಜ್ಯಮಾನೋ ಯಥಾನ್ಯಾಯಂ ತೇಜಸಾ ಸ್ವೇನ ಭಾರತ ॥೨೮॥

ಮಹಾಮುನಿಗಳಾದ ಪರ್ವತರು ತಮ್ಮ ತೇಜಸ್ಸಿನ ಪ್ರಭಾವದಿಂದ ಪ್ರಪಂಚದೆಲ್ಲೆಡೆ ಸಂಚಾರ ಮಾಡತೊಡಗಿದರು. ಯಥೋಚಿತವಾದ ಸತ್ಕಾರಗಳನ್ನು ಪಡೆಯುತ್ತಾ ಅಖಂಡಭೂಮಂಡಲವನ್ನೇ ಸಂಚರಿಸಿದರು.

ಅಥ ತಾಮಲಭತ್ ಕನ್ಯಾಂ ನಾರದಃ ಸೃಂಜಯಾತ್ಮಜಾಮ್।
ಧರ್ಮೇಣ ಧರ್ಮಪ್ರವರಃ ಸುಕುಮಾರೀಮನಿಂದಿತಾಮ್ ॥೨೯॥

ವಿಪ್ರಶ್ರೇಷ್ಠರಾದ ನಾರದಋಷಿಗಳು ರಾಜಕುಮಾರಿಯಾದ ಸೃಂಜಯನ ಮಗಳಾದ ಆ ಸುಕುಮಾರಿಯನ್ನು ಧರ್ಮರೀತಿಯಿಂದ ವಿವಾಹವಾದರು.

ಸಾ ತು ಕನ್ಯಾ ಯಥಾಶಾಪಂ ನಾರದಂ ತಂ ದದರ್ಶ ಹ।
ಪಾಣಿಗ್ರಹಣಮಂತ್ರಾಣಾಂ ಪ್ರಯೋಗಾದೇವ ವಾನರಮ್ ॥೩೦॥

ಆ ವಿವಾಹದಲ್ಲಿ ವಧು-ವರರು ಕೈಹಿಡಿಯುವಾಗ ಯಾವ ಪಾಣಿಗ್ರಹಣ ಮಂತ್ರವನ್ನು ಉಚ್ಚರಿಸುತ್ತಾರೋ, ಅದು ಮುಗಿಯುಷ್ಟರಲ್ಲಿಯೇ ನಾರದರ ಮುಖವು ಕಪಿಮುಖವಾಯಿತು. ಇದನ್ನು ಆ ರಾಜಕುಮಾರಿಯಾದ ಸುಕುಮಾರಿಯು ನೋಡಿದಳು.

ಸುಕುಮಾರೀ ಚ ದೇವರ್ಷಿಂ ವಾನರಪ್ರತಿಮಾನನಮ್।
ನೈವಾಮನ್ಯತ ತದಾ ಪ್ರೀತಿಮತ್ಯೇವ ಚಾಭವತ್ ॥೩೧॥

ತನ್ನ ಪತಿಯಾದ ನಾರದರ ಮುಖವು ಕಪಿಮುಖವಾದರೂ ಕೂಡ ತಿರಸ್ಕಾರ-ಭಾವವನ್ನು ಹೊಂದಲಿಲ್ಲ. ಮಹಾಪತಿವ್ರತೆಯಾಗಿದ್ದಳು. ನಾರದರಲ್ಲಿ ಸಂಪೂರ್ಣ ಪ್ರೀತಿಯನ್ನೇ ತೋರಿಸಿದಳು.

ಉಪತಸ್ಥೇ ಚ ಭರ್ತಾರಂ ನಚಾನ್ಯಂ ಮನಸಾಪ್ಯಗಾತ್।
ದೇವಂ ಮುನಿಂ ವಾ ಯಕ್ಷಂ ವಾ ಪತಿತ್ವೇ ಪತಿವತ್ಸಲಾ ॥೩೨॥

ಪತಿಸೇವೆಯಲ್ಲಿ ರತಳಾದ ಆ ಸುಕುಮಾರಿಯು ತನ್ನ ಗಂಡನು ಕಪಿಮುಖನಾಗಿದ್ದಾನೆಂಬ ಕಾರಣದಿಂದ ಬೇರೆಯವರ ಬಗ್ಗೆ ಯೋಚನೆ ಮಾಡಲಿಲ್ಲ. ದೇವತೆಗಳನ್ನಾಗಲೀ, ಮುನಿಗಳನ್ನಾಗಲೀ, ಯಕ್ಷರನ್ನಾಗಲೀ ಯಾವುದೇ ಕಾರಣಕ್ಕೂ ಪತಿರೂಪದಲ್ಲಿ ಯೋಚನೆ ಮಾಡಲಿಲ್ಲ.

ತತಃ ಕದಾಚಿದ್ ಭಗವಾನ್ ಪರ್ವತೋಽನುಸಸಾರ ಹ।
ವನಂ ವಿರಹಿತಂ ಕಿಂಚಿತ್ ತತ್ರಾಪಶ್ಯತ್ ಸ ನಾರದಮ್ ॥೩೩॥

ಹೀಗೆ ಕೆಲವು ದಿವಸಗಳು ಕಳೆದವು. ಒಮ್ಮೆ ಮುನಿವ್ರತ ಪರಾಯಣರಾದ ಪರ್ವತಮುನಿಗಳು ನಿರ್ಜನವಾದ ಕಾಡಿನಲ್ಲಿ ಒಬ್ಬರೇ ತೆರಳುತ್ತಿದ್ದರು. ಅಲ್ಲಿ ಕಪಿಮುಖವನ್ನು ಹೊಂದಿದ ನಾರದರನ್ನು ಕಂಡರು.

ತತೋಽಭಿವಾದ್ಯ ಪ್ರೋವಾಚ ನಾರದಂ ಪರ್ವತಸ್ತದಾ ।
ಭವಾನ್ ಪ್ರಸಾದಂ ಕುರುತಾಂ ಸ್ವರ್ಗದೇಶಾಯ ಮೇ ಪ್ರಭೋ ॥೩೪॥

ಕೂಡಲೇ ಪರ್ವತಮುನಿಗಳು ನಾರದರಿಗೆ ನಮಸ್ಕಾರವನ್ನು ಮಾಡಿ, ದೈನ್ಯದಿಂದ ಕೈಮುಗಿದು ಹೀಗೆ ಪ್ರಾರ್ಥಿಸಿದರು - ಪ್ರಭುವೇ! ನನಗೆ ಸ್ವರ್ಗಕ್ಕೆ ಹಿಂತಿರುಗಿ ಹೋಗುವಂತೆ ಅನುಗ್ರಹಿಸು ಎಂದು.

ತಮುವಾಚ ತತೋ ದೃಷ್ಟ್ವಾ ಪರ್ವತಂ ನಾರದಸ್ತದಾ ।
ಕೃತಾಂಜಲಿಮುಪಾಸೀನಂ ದೀನಂ ದೀನತರಃ ಸ್ವಯಮ್ ॥೩೫॥

ಆಗ ನಾರದರು ಆ ಪರ್ವತಮುನಿಗಳಿಗೆ ಹೇಳಿದರು - ಪರ್ವತಮುನಿಯ ದೈನ್ಯಸ್ಥಿತಿಯನ್ನು ಕಂಡು ಕನಿಕರಗೊಂಡರು. ಆ ಪರ್ವತಮುನಿಯಾದರೂ ಕೈಮುಗಿದು ಅತ್ಯಂತ ದೀನರಾಗಿ ನಿಂತಿದ್ದರು.

ತ್ವಯಾಹಂ ಪ್ರಥಮಂ ಶಪ್ತೋ ವಾನರಸ್ತ್ವಂ ಭವಿಷ್ಯಸಿ ।
ಇತ್ಯುಕ್ತೇನ ಮಯಾ ಪಶ್ಚಾಚ್ಛಪ್ತಸ್ತ್ವಮಪಿ ಮತ್ಸರಾತ್ ॥೩೬॥

ಅದ್ಯಪ್ರಭೃತಿ ವೈ ವಾಸಂ ಸ್ವರ್ಗೇ ನಾವಾಪ್ಸ್ಯಸೀತಿ ಹ ॥

ಪರ್ವತನೇ! ಮೊದಲು ನನಗೆ ವಾನರ ಮುಖ ಬರಲಿ ಎಂದು ಶಾಪವನ್ನು ನೀಡಿದವನು. ನೀನು ನೀಡಿದ ಶಾಪವನ್ನು ಕೇಳಿ ಮಾತ್ಸರ್ಯದಿಂದ ನಾನೂ ಸಹ ಇವತ್ತಿನಿಂದ ನಿನಗೆ ಸ್ವರ್ಗಕ್ಕೆ ತೆರಳದಂತೆ ಆಗಲಿ ಎಂದು ಶಾಪವನ್ನು ನೀಡಿದೆನು.

ತವ ನೈತದ್ಧಿ ಸದೃಶಂ ಪುತ್ರಸ್ಥಾನೇ ಹಿ ಮೇ ಭವಾನ್ ।
ನಿವರ್ತಯೇತಾಂ ತೌ ಶಾಪಮನ್ಯೋಽನ್ಯೇನ ತದಾ ಮುನೀ ॥೩೭॥

ಪರ್ವತನೇ! ನೀನು ನನಗೆ ಶಾಪವನ್ನು ನೀಡಬಾರದಿತ್ತು. ಏಕೆಂದರೆ ನೀನು ನನ್ನ ಪುತ್ರನ ಸ್ಥಾನದಲ್ಲಿರುವಿ. ನನಗೆ ಸೋದರಳಿಯನಾಗಿರುವಿ. ಹೀಗೆ ಪರಸ್ಪರ ಮಾತನಾಡಿಕೊಂಡು ನಾರದ ಹಾಗೂ ಪರ್ವತರು ಪಶ್ಚಾತ್ತಾಪವನ್ನು ಪಟ್ಟರು. ಪರಸ್ಪರ ಶಾಪಗಳನ್ನು ನಿವೃತ್ತಿಗೊಳಿಸಿದರು.

ಶ್ರೀಸಮೃದ್ಧಂ ತದಾ ದೃಷ್ಟ್ವಾ ನಾರದಂ ದೇವರೂಪಿಣಮ್ ।
ಸುಕುಮಾರೀ ಪ್ರದುದ್ರಾವ ಪರಪತ್ಯಾಭಿಶಂಕಯಾ ॥೩೮॥

ಈಗ ನಾರದರಿಗೆ ಉತ್ತಮರೂಪವು ಬಂದಿತು. ದೇವತೆಗಳಂತೆ ದಿವ್ಯವಾಗಿ ಕಂಗೊಳಿಸಿದರು. ಇಂಥ ನಾರದರನ್ನು ಕಂಡು ಪತ್ನಿಯಾದ ಸುಕುಮಾರಿಯು ಓಡಲು ಪ್ರಾರಂಭಿಸಿದಳು. ಇವರು ನನ್ನ ಪತಿಯಲ್ಲ. ಪರಪುರುಷರಾಗಿದ್ದಾರೆಂದು ತಿಳಿದು ಬಿಟ್ಟಳು.

ತಾಂ ಪರ್ವತಸ್ತೋ ದೃಷ್ಟ್ವಾ ಪ್ರದ್ರವಂತೀಮನಿಂದಿತಾಮ್ ।
ಅಬ್ರವೀತ್ ತವ ಭರ್ತೇಷ ನಾತ್ರ ಕಾರ್ಯಾ ವಿಚಾರಣಾ ॥೩೯॥

ಓಡುತ್ತಿರುವ ಸುಕಮಾರಿಯನ್ನು ಪರ್ವತಮುನಿಗಳು ಕಂಡರು. ನಿಷ್ಕಲಂಕಳಾದ ಆ ಸುಕುಮಾರಿಗೆ ಹೇಳಿದರು. ಸುಕುಮಾರಿಯೇ! ಇವನೇ ನಿನ್ನ ಪತಿ ಈ ವಿಷಯದಲ್ಲಿ ಸ್ವಲ್ಪವೂ ವಿಚಾರ ಮಾಡಬೇಡ.

ಋಷಿಃ ಪರಮಧರ್ಮಾತ್ಮಾ ನಾರದೋ ಭಗವಾನ್ ಪ್ರಭುಃ ।
ತವೈವಾಭೇದ್ಯಹೃದಯೋ ಮಾ ತೇ ಭೂದತ್ರ ಸಂಶಯಃ ॥೪೦॥

ನಾರದಮಹರ್ಷಿ ಪರಮಧರ್ಮಿಷ್ಠನಾಗಿದ್ದಾನೆ. ಸರ್ವಜ್ಞನಾಗಿದ್ದಾನೆ. ನಿನ್ನಲ್ಲಿ ನಿತ್ಯವಾಗಿಯೂ ಅನುರಕ್ತನಾಗಿದ್ದಾನೆ. ಈ ವಿಷಯದಲ್ಲಿ ನಿನಗೆ ಸ್ವಲ್ಪವೂ ಸಂಶಯವು ಬೇಡ.

ಸಾನುನೀತಾ ಬಹುವಿಧಂ ಪರ್ವತೇನ ಮಹಾತ್ಮನಾ ।
ಶಾಪದೋಷಂ ಚ ತಂ ಭರ್ತುಃ ಶ್ರುತ್ವಾಸ್ವಾಂ ಪ್ರಕೃತಿಂ ಗತಾ ॥೪೧॥
ಪರ್ವತೋऽಥ ಯಯೌ ಸ್ವರ್ಗಂ ನಾರದೋऽಥ ಯಯೌ ಗೃಹಾನ್॥

ಯುಧಿಷ್ಠಿರನೇ! ಹೀಗೆ ಮಹಾತ್ಮರಾದ ಆ ಪರ್ವತಮುನಿಗಳು ನಾರದರ ಪತ್ನಿಯಾದ ಸುಕುಮಾರಿಗೆ ಅನೇಕ ವಿಧದಲ್ಲಿ ಸಾಂತ್ವನದ ಮಾತುಗಳನ್ನು ಹೇಳಿದರು.

ಮತ್ತು ನಾರದರಿಗೆ ಬಂದ ಶಾಪದ ವಿಷಯವನ್ನು ಆ ಸುಕುಮಾರಿಗೆ ತಿಳಿಸಿದರು. ಈ ವಿಷಯವನ್ನು ಪರ್ವತಮುನಿಗಳಿಂದ ಸುಕುಮಾರಿಯು ತಿಳಿದು ಸಮಾಧಾನಚಿತ್ತ-ಳಾದಳು. ಅನಂತರ ಆ ಪರ್ವತಮುನಿಯು ಸ್ವರ್ಗಕ್ಕೆ ತೆರಳಿದರು. ನಾರದರು ತನ್ನ ಪತ್ನಿಯ ಜೊತೆ ಮನೆಗೆ ತೆರಳಿದರು.

ಪ್ರತ್ಯಕ್ಷಕರ್ಮಾ ಸರ್ವಸ್ಯ ನಾರದೋಽಯಂ ಮಹಾನ್ ಋಷಿಃ।
ಏಷ ವಕ್ಷ್ಯತಿ ವೈ ಪೃಷ್ಟೋ ಯಥಾವೃತ್ತಂ ನರೋತ್ತಮ ॥೪೨॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ
ರಾಜಧರ್ಮೇ ನಾರದಪರ್ವತಚರಿತ್ರಂ ನಾಮೈಕತ್ರಿಂಶೋಽಧ್ಯಾಯಃ ॥೩೧॥

ನರಶ್ರೇಷ್ಠನಾದ ಯುಧಿಷ್ಠಿರನೇ ! ನಿನ್ನ ಎದುರು ನಿಂತಿರುವ ನಾರದರೇ ಈ ಎಲ್ಲ ಘಟನೆಗಳ ಮುಖ್ಯಪಾತ್ರಧಾರಿಗಳು. ಸುವರ್ಣಷ್ಠೀವಿಯ ಹುಟ್ಟುಸಾವುಗಳನ್ನು ಪ್ರತ್ಯಕ್ಷ-ವಾಗಿ ಕಂಡವರು. ಆಗ ಯಥಾವತ್ತಾಗಿ ಎಲ್ಲವನ್ನೂ ಕೂಡ ನಿನಗೆ ತಿಳಿಸುತ್ತಾರೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ನಾರದ ಮತ್ತು ಪರ್ವತರ ಚರಿತ್ರೆಯನ್ನು ಹೇಳುವ ೩೧ನೆಯ ಅಧ್ಯಾಯವು ಮುಗಿಯಿತು.

* * * * *

೩೨. ಮೂವತ್ತೆರಡನೆಯ ಅಧ್ಯಾಯ

ಸುವರ್ಣಷ್ಠೀವಿಯ ಜನನ, ಮರಣ, ಪುನರ್ಜನ್ಮಗಳ ಚರಿತ್ರೆಯನ್ನು
ನಾರದರು ಯುಧಿಷ್ಠಿರನಿಗೆ ಹೇಳಿದರು.

ವೈಶಂಪಾಯನಃ

ತತೋ ರಾಜಾ ಪಾಂಡುಸುತೋ ನಾರದಂ ಪ್ರತ್ಯಭಾಷತ।
ಭಗವನ್ ಶ್ರೋತುಮಿಚ್ಛಾಮಿ ಸುವರ್ಣಷ್ಠೀವಿಸಂಭವಮ್ ॥೧॥

ವೈಶಂಪಾಯನರು – ಪಾಂಡುವಿನ ಮಗನಾದ ರಾಜನಾದ ಯುಧಿಷ್ಠಿರನು ನಾರದರನ್ನು ಕುರಿತು, ಶ್ರೀಕೃಷ್ಣನ ಸಲಹೆಯಂತೆ ಪ್ರಶ್ನಿಸುತ್ತಾನೆ - ''ಭಗವನ್

ನಾರದರೇ! ಸುವರ್ಣಷ್ಠೀವಿಯ ಜನನದ ವೃತ್ತಾಂತವನ್ನು ಕೇಳಲು ನಾನು ಅಪೇಕ್ಷಿಸುತ್ತೇನೆ. ದಯವಿಟ್ಟು ತಿಳಿಸಿರಿ''.

ಏವಮುಕ್ತಃ ಸ ಚ ಮುನಿರ್ಧರ್ಮರಾಜೇನ ನಾರದಃ।
ಆಚಾಚಕ್ಷೇ ಯಥಾವೃತ್ತಂ ಸುವರ್ಣಷ್ಠೀವಿನಂ ಪ್ರತಿ ॥೨॥

ಧರ್ಮರಾಜನು ಹೀಗೆ ಪ್ರಶ್ನಿಸಿದಾಗ ನಾರದರು ಸಂತೋಷಪಟ್ಟರು. ಸುವರ್ಣಷ್ಠೀವಿಯ ಚರಿತ್ರೆಯನ್ನು ಯಥಾವತ್ತಾಗಿ ಯುಧಿಷ್ಠಿರನಿಗೆ ಹೇಳಲು ಪ್ರಾರಂಭಮಾಡಿದರು.

ಏವಮೇತನ್ಮಹಾರಾಜ ಯಥಾಯಂ ಕೇಶವೋಽಬ್ರವೀತ್।
ಕಾರ್ಯಸ್ಯಾಸ್ಯ ತು ಯಚ್ಛೇಷಂ ತತ್ ತೇ ವಕ್ಷ್ಯಾಮಿ ಪೃಚ್ಛತಃ ॥೩॥

ಮಹಾರಾಜನಾದ ಯುಧಿಷ್ಠಿರನೇ! ಶ್ರೀಕೃಷ್ಣಪರಮಾತ್ಮನು ಹೇಳಿದ ಕಥೆ ಬಹಳ ಸತ್ಯವಾಗಿದೆ. ಅದರ ಮುಂದಿನ ಕಥೆಯನ್ನು ಪ್ರಶ್ನೆ ಮಾಡಿದ ನಿನಗೆ ಹೇಳುತ್ತೇನೆ ಕೇಳು.

ಅಹಂ ಚ ಪರ್ವತಶ್ಚೈವ ಸ್ವಸ್ರೀಯೋ ಮೇ ಮಹಾಮುನಿಃ।
ವಸ್ತುಕಾಮಾವಿಭಗತೌ ಸೃಂಜಯಂ ಜಯತಾಂ ವರಮ್ ॥೪॥

ನಾನು ಮತ್ತು ನನ್ನ ಸಹೋದರಿಯ ಮಗನಾದ ಮಹಾಮುನಿಯಾದ ಪರ್ವತಮುನಿಯು ಜಯಿಸುವವರಲ್ಲಿ ಶ್ರೇಷ್ಠನಾದ ಸೃಂಜಯರಾಜನ ಅರಮನೆಯಲ್ಲಿ ಕೆಲವು ಕಾಲ ಇರಬೇಕೆಂಬ ಅಪೇಕ್ಷೆಯಿಂದ ತೆರಳಿದ್ದೆವು.

ತತ್ರ ಸಂಪೂಜಿತೌ ತೇನ ವಿಧಿದೃಷ್ಟೇನ ಕರ್ಮಣಾ।
ಸರ್ವಕಾಮೌ ಸುವಿಹಿತೌ ನಿವಸಾವೋಽಸ್ಯ ವೇಶ್ಮನಿ ॥೫॥

ಆ ಸಂದರ್ಭದಲ್ಲಿ ಅವನು ನಮ್ಮಿಬ್ಬರಿಗೆ ಆದರಪೂರ್ವಕವಾಗಿ ಸತ್ಕಾರವನ್ನು ಮಾಡಿದನು. ವಿಧಿಪ್ರಕಾರವಾಗಿ ಅರ್ಘ್ಯಪಾದ್ಯಾದಿಗಳನ್ನು ನೀಡಿದನು. ಅಭಿಲಿಷಿತ-

ವಾದ ಪದಾರ್ಥಗಳನ್ನು ಒದಗಿಸುತ್ತಿದ್ದನು. ಹೀಗೆ ಅವನ ಮನೆಯಲ್ಲಿ ವಾಸಮಾಡಿದೆವು.

ವ್ಯತಿಕ್ರಾಂತಾಸು ವರ್ಷಾಸು ಸಮಯೇ ಗಮನಸ್ಯ ಚ।
ಪರ್ವತೋ ಮಾಮುವಾಚೇದಂ ಕಾಲೇ ವಚನಮರ್ಥವತ್ ॥೬॥

ವರ್ಷಾಕಾಲವು ಕಳೆಯುತ್ತಾ ಬಂದಿತು. ಆ ಸಂದರ್ಭದಲ್ಲಿ ಅವನ ಅರಮನೆಯಿಂದ ಹೊರಡುವ ಕಾಲುವು ಪ್ರಾಪ್ತವಾಯಿತು. ಆಗ ಆ ಪರ್ವತಮುನಿಯು ನನ್ನ ಜೊತೆ ಸಮಯೋಚಿತವಾದ ಮಾತುಗಳನ್ನು ಹೀಗೆ ಹೇಳಿದನು -

ಆವಾಮಸ್ಯ ನರೇಂದ್ರಸ್ಯ ಗೃಹೇ ಪರಮಪೂಜಿತೌ।
ಉಷಿತೌ ಸಮಯೇ ಬ್ರಹ್ಮಂಶ್ಚಿಂತ್ಯತಾಮತ್ರ ಸಾಂಪ್ರತಮ್ ॥೭॥

ಈ ಸೃಂಜಯರಾಜನು ನಮ್ಮನ್ನು ಇಲ್ಲಿಯ ತನಕ ಬಹಳ ಆದರದಿಂದ ಸತ್ಕಾರ ಮಾಡಿದ್ದಾನೆ. ಇವನಿಗೆ ನಾವು ಹೊರಡುವ ಸಮಯದಲ್ಲಿ ಯಾವುದಾದರೂ ರೀತಿಯಲ್ಲಿ ಉಪಕಾರವನ್ನು ಮಾಡಬೇಕು. ಉಪಕಾರವನ್ನು ಮಾಡದೇ ಹೊರಡಬಾರದು. ಅದಕ್ಕೇನಾದರೂ ಮಾರ್ಗವನ್ನು ಯೋಚಿಸು ಎಂದನು.

ತತೋಽಹಮಬ್ರುವಂ ರಾಜನ್ ಪರ್ವತಂ ಶುಭದರ್ಶನಮ್।
ಸರ್ವಮೇತತ್ ತ್ವಯಿ ವಿಭೋ ಭಾಗಿನೇಯೋಪಪದ್ಯತೇ ॥೮॥

ವರೇಣ ಛಂದ್ಯತಾಂ ರಾಜಾ ಲಭತಾಂ ಯದ್ ಯದಿಚ್ಛತಿ।
ಆವಯೋಸ್ತಪಸಾ ಸಿದ್ಧಿಂ ಪ್ರಾಪ್ನೋತಿ ಯದಿ ಮನ್ಯಸೇ ॥೯॥

ಧರ್ಮಜನೇ! ಶುಭದರ್ಶನನಾದ ಸೋದರಳಿಯನಾದ ಆ ಪರ್ವತಮುನಿಗೆ ನಾನು ಹೀಗೆ ಹೇಳಿದನು - ''ನೀನು ಸೃಂಜಯರಾಜನನ್ನೇ ಕೇಳು. ಅವನು ಏನು ಕೇಳುತ್ತಾನೋ, ಅದೆಲ್ಲವನ್ನು ನಾವು ನಡೆಸಿಕೊಡೋಣ. ನೀನು ಸೂಕ್ತವೆಂದು ಭಾವಿಸುವುದಾದರೆ ನಮ್ಮ ತಪಸ್ಸಿನ ಪ್ರಭಾವದಿಂದ ರಾಜನು ಯಾವ ಸಿದ್ಧಿಯನ್ನು ಬೇಕಾದರೂ ಪಡೆದುಕೊಳ್ಳಲಿ''.

ತತ್ ಆಹೂಯ ರಾಜಾನಂ ಸೃಂಜಯಂ ಶುಭದರ್ಶನಮ್ ।
ಪರ್ವತೋऽನುಮತಂ ವಾಕ್ಯಮುವಾಚ ಮುನಿಪುಂಗವಃ ॥೧೦॥

ನಾನು ಹೀಗೆ ಹೇಳಿದ ಮೇಲೆ ಪರ್ವತಮುನಿಯು ನನ್ನ ಅನುಮತಿಯನ್ನು ಪಡೆದುಕೊಂಡು ಶುಭದರ್ಶನನಾದ ರಾಜನಾದ ಸೃಂಜಯನನ್ನು ಕರೆದನು. ಆ ಮುನಿಪುಂಗವನು ಸೃಂಜಯರಾಜನನ್ನು ಕುರಿತು ಹೀಗೆ ಹೇಳಿದನು -

ಪ್ರೀತೌ ಸ್ವೋ ನೃಪ ಸತ್ಕಾರೈಸ್ತವ ಹ್ಯಾರ್ಜವಸಂಭೃತೈಃ ।
ಆವಾಭ್ಯಾಮಭ್ಯನುಜ್ಞಾತೋ ವರಂ ನೃವರ ಚಿಂತಯ ॥೧೧॥

"ರಾಜನೇ! ನೀನು ಮಾಡಿದ ಸತ್ಕಾರದಿಂದ ನಾವಿಬ್ಬರು ಪರಮಪ್ರೀತರಾಗಿದ್ದೇವೆ. ಅತ್ಯಂತ ಸರಳತೆಯಿಂದ ನೀನು ಮಾಡಿದ ಪ್ರೀತಿವಿಶ್ವಾಸಗಳಿಂದ ಪ್ರಸನ್ನರಾಗಿದ್ದೇವೆ. ನೀನು ನಮ್ಮಿಬ್ಬರಿಂದ ಯಾವುದೇ ವರವನ್ನು ಪಡೆದುಕೊಳ್ಳಬಹುದು. ನಾವಾಗಿಯೇ ಆ ವರಗಳನ್ನು ಇಷ್ಟಪಟ್ಟು ಕೊಡುತ್ತೇವೆ. ಆಲೋಚನೆ ಮಾಡಿ ಹೇಳು.

ದೇವಾನಾಮವಿಹಿಂಸಾಯಾಂ ಯದ್ ಭವೇನ್ಮಾನುಷಕ್ಷಮಮ್ ।
ತದ್ ಗೃಹಾಣ ಮಹಾರಾಜ ಪೂಜಾರ್ಹೋ ನೌ ಮತೋ ಭವಾನ್॥೧೨॥

ನೀನು ಕೇಳುವ ವರದಿಂದ ದೇವತೆಗಳಿಗೆ ಹಿಂಸೆಯಾಗಬಾರದು. ಮನುಷ್ಯರಿಗೆ ಯಾವುದೇ ಹಾನಿಯು ಆಗಬಾರದು. ಅಂಥ ವರವನ್ನಷ್ಟೇ ಕೇಳು. ನೀನು ನಮ್ಮಿಂದ ಅಭಿನಂದನೀಯ ಆಗಿರುವಿ ಎಂಬುದು ನಮ್ಮ ಅಭಿಪ್ರಾಯವಾಗಿದೆ.

ಸೃಂಜಯಃ

ಪ್ರೀತೌ ಭವಂತೌ ಯದಿ ಮೇ ಕೃತಮೇತಾವತಾ ಮಮ ।
ಏಷ ಏವ ಪರೋ ಲಾಭೋ ನಿರ್ವೃತ್ತೋ ಮೇ ಮಹಾಫಲಃ ॥೧೩॥

ಸೃಂಜಯ – ಪ್ರಭುಗಳೇ ! ತಾವು ಸಂತುಷ್ಟರಾದರೆ ಸಾಕು. ನಿಮ್ಮ ಸಂತೋಷವೇ ನನ್ನ ಜೀವನದ ದೊಡ್ಡ ಲಾಭ. ಇದೇ ನಾನು ಪಡೆದ ಮಹಾಫಲವಾಗಿದೆ.

ನಾರದಃ

ತಮೇವಂವಾದಿನಂ ಭೂಯಃ ಪರ್ವತಃ ಪ್ರತ್ಯಭಾಷತ।
ವೃಣೀಷ್ವ ರಾಜನ್ ಸಂಕಲ್ಪೋ ಯಸ್ತೇ ಹೃದಿ ಚಿರಂ ಸ್ಥಿತಃ ॥೧೪॥

ನಾರದರು – ಯುಧಿಷ್ಠಿರನೇ ! ಸೃಂಜಯನು ಹೀಗೆ ಪುನಃ ಪುನಃ ಹೇಳುತ್ತಿದ್ದರೂ ಪರ್ವತಮುನಿಯು ಮತ್ತೊಮ್ಮೆ ಆ ರಾಜನಿಗೆ ಹೇಳುತ್ತಾನೆ - ''ಮಹಾರಾಜನೇ! ನಿನ್ನ ಹೃದಯದಲ್ಲಿ ಬಹುಕಾಲದಿಂದ ಇರುವ ಕೋರಿಕೆಯನ್ನು ಈಗ ಕೇಳಿಕೋ. ನಿನ್ನ ಕೋರಿಕೆಯನ್ನು ಈಡೇರಿಸಿಕೊಳ್ಳಲು ವರವನ್ನು ಕೇಳಿಕೋ''.

ಸೃಂಜಯಃ

ಅಭೀಪ್ಸಾಮಿ ಸುತಂ ವೀರಂ ವೀರ್ಯವಂತಂ ದೃಢವ್ರತಮ್।
ಆಯುಷ್ಮಂತಂ ಮಹಾಭಾಗಂ ದೇವರಾಜಸಮದ್ಯುತಿಮ್ ॥೧೫॥

ಸೃಂಜಯ – ವೀರನು, ದೀರ್ಘಾಯುಷ್ಮಂತನು, ದೃಢವ್ರತವನು ಭಾಗ್ಯವಂತನು, ದೇವೇಂದ್ರನಿಗೆ ಸಮಾನನಾದವನು ಆದ ಪುತ್ರನನ್ನು ನಾನು ಅಪೇಕ್ಷಿಸುತ್ತಿರುವೆ. ತಾವು ನನಗೆ ಅಂಥ ಪುತ್ರನನ್ನು ಕರುಣಿಸಬೇಕು.

ಪರ್ವತಃ

ಭವಿಷ್ಯತ್ಯೇಷ ತೇ ಕಾಮೋ ನ ತ್ವಾಯುಷ್ಮಾನ್ ಭವಿಷ್ಯತಿ।
ದೇವರಾಜಾಭಿಭೂತ್ಯರ್ಥಂ ಸಂಕಲ್ಪೋ ಹ್ಯೇಷ ತೇ ಹೃದಿ ॥೧೬॥

ಪರ್ವತಮುನಿ – ರಾಜನೇ ! ಹಾಗೆಯೇ ಆಗಲಿ. ನಿನ್ನ ಕಾಮನೆಯು ಈಡೇರುತ್ತದೆ. ಆದರೆ ನಿನ್ನ ಆ ಮಗನು ದೀರ್ಘಾಯುಷ್ಯವನ್ನು ಹೊಂದುವುದಿಲ್ಲ. ಏಕೆಂದರೆ ದೇವರಾಜನಾದ ಇಂದ್ರನನ್ನು ಸೋಲಿಸುವ ಸಂಕಲ್ಪವನ್ನು ನೀನು ಮಾಡಿರುವಿ. ಏತನ್ಮೂಲಕ ದೇವತೆಗಳನ್ನು ಹಿಂಸೆ ಮಾಡಬೇಕೆಂಬುದು ನಿನ್ನ ಮನಸ್ಸಿನಲ್ಲಿದೆ.

ಸುವರ್ಣಷ್ಠೀವನಾಚ್ಚೈವ ಸ್ವರ್ಣಷ್ಠೀವೀ ಭವಿಷ್ಯತಿ।
ರಕ್ಷ್ಯಶ್ಚ ದೇವರಾಜಾತ್ ಸ ದೇವರಾಜಸಮದ್ಯುತಿಃ ॥೧೭॥

ನಿನ್ನ ಮಗನು ಸುವರ್ಣಷ್ಠೀವಿ ಎಂಬ ಹೆಸರಿನಿಂದ ಪ್ರಖ್ಯಾತನಾಗುತ್ತಾನೆ. ದೇವೇಂದ್ರನ ಸಮಾನವಾದ ತೇಜಸ್ಸನ್ನು ಹೊಂದಿರುವ ಅವನನ್ನು ದೇವೇಂದ್ರನಿಂದ ನೀನೇ ರಕ್ಷಣೆ ಮಾಡಿಕೊಳ್ಳಬೇಕು.

ತಚ್ಛ್ರುತ್ವಾ ಸೃಂಜಯೋ ವಾಕ್ಯಂ ಪರ್ವತಸ್ಯ ಮಹಾತ್ಮನಃ।
ಪ್ರಸಾದಯಾಮಾಸ ತದಾ ನೈತದೇವಂ ಭವೇದಿತಿ ॥೧೮॥

ಮಹಾತ್ಮನಾದ ಪರ್ವತಮುನಿಯ ಮಾತನ್ನು ಕೇಳಿ ಸೃಂಜಯರಾಜನು ಅವನನ್ನು ಸಂತೋಷಗೊಳಿಸುವುದಕ್ಕಾಗಿ ಹೀಗೆ ಪ್ರಾರ್ಥನೆ ಮಾಡಿದನು - ಶ್ರೇಷ್ಠಮುನಿಗಳೇ ! ನನ್ನ ಮಗನಿಗೆ ದಯವಿಟ್ಟು ಅಲ್ಪಾಯುಷ್ಯವನ್ನು ನೀಡಬೇಡಿರಿ.

ಆಯುಷ್ಮಾನ್ ಮೇ ಭವೇತ್ ಪುತ್ರೋ ಭವತಸ್ತಪಸಾ ಮುನೇ।
ನಚ ತಂ ಪರ್ವತಃ ಕಿಂಚಿದುವಾಚೇಂದ್ರವ್ಯಪೇಕ್ಷಯಾ ॥೧೯॥

ಮುನಿಗಳೇ! ನಿಮ್ಮ ತಪಸ್ಸಿನ ಪ್ರಭಾವದಿಂದ ನನ್ನ ಮಗನು ದೀರ್ಘಾಯುಷ್ಯ-ವನ್ನು ಹೊಂದಬೇಕು ಎಂದು ದೈನ್ಯದಿಂದ ಬೇಡಿದನು. ಆಗ ಪರ್ವತಮುನಿಯು ದೇವೇಂದ್ರನಿಗೆ ದ್ರೋಹ ಮಾಡಬಾರದೆಂಬ ದೃಷ್ಟಿಯಿಂದ ಏನನ್ನೂ ಮಾತನಾಡದೇ ಸುಮ್ಮನಿದ್ದನು.

ತಮಹಂ ನೃಪತಿಂ ದೀನಮಬ್ರುವಂ ಪುನರೇವ ತು।
ಸ್ಮರ್ತವ್ಯೋಽಹಂ ಮಹಾರಾಜ ದರ್ಶಯಿಷ್ಯಾಮಿ ತೇ ಸ್ಮೃತಃ ॥೨೦॥

ಆಗ ನಾನು ಅತ್ಯಂತ ದೀನನಾದ ರಾಜನನ್ನು ನೋಡಿ, ಮಹಾರಾಜನೇ! ಆ ಮಗನಿಗೆ ವಿಪತ್ತು ಬಂದಾಗ ನನ್ನನ್ನು ಸ್ಮರಣೆ ಮಾಡು. ನಾನು ನಿನಗೆ ದರ್ಶನವನ್ನು ನೀಡುತ್ತೇನೆಂದು ಸಾಂತ್ವನವನ್ನು ನೀಡಿದನು.

ಅಹಂ ತೇ ದಯಿತಂ ಪುತ್ರಂ ಪ್ರೇತರಾಜವಶಂ ಗತಮ್।
ಪುನರ್ದಾಸ್ಯಾಮಿ ತದ್ ರೂಪಂ ಮಾ ಶುಚಃ ಪೃಥಿವೀಪತೇ ॥೨೧॥

ಪೃಥಿವೀಪತಿಯೇ! ನಿನ್ನ ಮಗನು ಯಮನ ಕೈಗೆ ಸಿಕ್ಕಿದ್ದರೂ ಯಾವುದೇ

ತೊಂದರೆ ಆಗದಂತೆ ಅವನನ್ನು ಪುನಃ ಕರೆದು ಆ ದೇಹದಲ್ಲಿ ಸೇರುವಂತೆ ಮಾಡುತ್ತೇನೆ. ದುಃಖಿಸಬೇಡ ಎಂದನು.

ಏವಮುಕ್ತ್ವಾ ತು ನೃಪತಿಂ ಪ್ರಯಾತೌ ಸ್ವೋ ಯಥೇಪ್ಸಿತಮ್ ।
ಸೃಂಜಯಶ್ಚ ಯಥಾಕಾಮಂ ಪ್ರವಿವೇಶ ಸ್ವಮಂದಿರಮ್ ॥೨೨॥

ಹೀಗೆ ಆ ರಾಜನಿಗೆ ನಾನು ವಾಗ್ದಾನವನ್ನು ಮಾಡಿದೆನು. ಅನಂತರ ಅಲ್ಲಿಂದ ನಾವು ಹೊರಟು ಹೋದೆವು. ಸೃಂಜಯನು ತನ್ನ ಅರಮನೆಗೆ ಹೋದನು.

ಸೃಂಜಯಸ್ಯಾಥ ರಾಜರ್ಷೇಃ ಕಸ್ಮಿಂಶ್ಚಿತ್ ಕಾಲಪರ್ಯಯೇ ।
ಜಜ್ಞೇ ಪುತ್ರೋ ಮಹಾವೀರ್ಯಸ್ತೇಜಸಾ ಪ್ರಜ್ವಲನ್ನಿವ ॥೨೩॥

ಕೆಲವು ದಿವಸಗಳು ಕಳೆದ ಮೇಲೆ ರಾಜರ್ಷಿಯಾದ ಸೃಂಜಯನಿಗೆ ಒಬ್ಬ ಮಗನು ಹುಟ್ಟಿದನು. ತೇಜಸ್ಸಿನಿಂದ ಬೆಳಗುತ್ತಿದ್ದನು.

ವವೃಧೇ ಸ ಯಥಾಕಾಲಂ ಸರಸೀವ ಮಹೋತ್ಪಲಮ್ ।
ಬಭೂವ ಕಾಂಚನಷ್ಠೀವೀ ಯಥಾರ್ಥಂ ನಾಮ ತಸ್ಯ ತತ್ ॥೨೪॥

ಸರೋವರದಲ್ಲಿ ಕಮಲವು ಹೇಗೆ ವಿಕಸಿತವಾಗುತ್ತದೋ, ಅದರಂತೆ ಈ ಸೃಂಜಯನ ಪುತ್ರನೂ ಕೂಡ ಕಾಲಕ್ಕೆ ಅನುಗುಣವಾಗಿ ಬೆಳೆಯುತ್ತಾ ಬಂದನು. ಸುವರ್ಣವನ್ನು ಉಗುಳುವಂಥ ಕಾಂತಿಯನ್ನು ಹೊಂದಿದ್ದರಿಂದ ಸುವರ್ಣೇಷ್ಠಿ ಎಂದು ಅವನನ್ನು ಎಲ್ಲರು ಕರೆದರು.

ತದದ್ಭುತತಮಂ ಲೋಕೇ ಪಪ್ರಥೇ ಕುರುಸತ್ತಮ ।
ಬುಬುಧೇ ತಚ್ಚ ದೇವೇಂದ್ರೋ ವರದಾನಂ ಮಹಾತ್ಮನೋಃ ॥೨೫॥

ಮಹಾತ್ಮನಾದ ಪರ್ವತಮುನಿಗಳ ವರಬಲದಿಂದ ಇಂಥ ಅದ್ಭುತನಾದ ಮಗನು ಹುಟ್ಟಿದ್ದಾನೆಂಬ ವಿಷಯವು ಲೋಕವೆಲ್ಲವೂ ತಿಳಿಯಿತು. ದೇವೇಂದ್ರನೂ ಕೂಡ ತಿಳಿದುಕೊಂಡನು.

ಟಿಪ್ಪಣಿ- ಪಪ್ರಥೇ ಕುರುಸತ್ತಮ ಇತ್ಯತ್ರ **ಪಪ್ರಥೇ** ಪ್ರಥಿತಮಭೂತ್ ।

'ಪ್ರಪಥೇ' ಎಂದರೆ ಪ್ರಸಿದ್ಧನಾದನು ಎಂದರ್ಥ.

ತತಸ್ತ್ವಭಿಭವಾದ್ ಭೀತೋ ಬೃಹಸ್ಪತಿಮತೇ ಸ್ಥಿತಃ ।
ಕುಮಾರಸ್ಯಾಂತರಪ್ರೇಕ್ಷೀ ಬಭೂವ ಬಲವೃತ್ರಹಾ ॥೨೬॥

ಬಲಿಷ್ಠನಾದ ವೃತ್ರಾಸುರನನ್ನು ಕೊಂದ, ಆ ಇಂದ್ರನಿಗೆ ಈ ಬಾಲಕನಿಂದ ಹೆದರಿಕೆ ಪ್ರಾರಂಭವಾಯಿತು. ಈ ಬಾಲಕನು ನನ್ನನ್ನು ಸೋಲಿಸುತ್ತಾನೆ ಅದಕ್ಕೆ ಉಪಾಯವನ್ನು ಈಗಲೇ ಮಾಡಬೇಕೆಂದು ತಿಳಿದು ಬೃಹಸ್ಪತಿಯ ಬಳಿ ಆಲೋಚನೆಯನ್ನು ಮಾಡಿದನು. ಆ ರಾಜಕುಮಾರನಿಗೆ ಏನಾದರೂ ಹಾನಿಯನ್ನು ಮಾಡಬೇಕೆಂದು ಪ್ರತಿನಿತ್ಯವು ಅವಕಾಶವನ್ನು ನಿರೀಕ್ಷಿಸಲು ತೊಡಗಿದನು.

ಚೋದಯಾಮಾಸ ವಜ್ರಂ ಸ ದಿವ್ಯಾಸ್ತ್ರಂ ಮೂರ್ತಿಸಂಸ್ಥಿತಮ್ ।
ವ್ಯಾಘ್ರೋ ಭೂತ್ವಾ ಜಹೀಮಂ ತ್ವಂ ರಾಜಪುತ್ರಮಿತಿ ಪ್ರಭೋ॥೨೭॥

ಒಂದು ದಿನ ದೇವೇಂದ್ರನು ಸಾಕ್ಷಾತ್ತಾಗಿ ಬಂದು ನಿಂತು ಬಿಟ್ಟನು. ತನ್ನ ದಿವ್ಯಾಸ್ತ್ರವಾದ ವಜ್ರಾಯುಧಕ್ಕೆ ಆದೇಶ ಮಾಡಿದನು. ಈ ರಾಜಪುತ್ರನನ್ನು ನೀನು ವ್ಯಾಘ್ರರೂಪವನ್ನು ತಾಳಿ ಸಂಹಾರ ಮಾಡು ಎಂದು.

ವಿವೃದ್ಧಃ ಕಿಲ ವೀರ್ಯೇಣ ಮಾಮೇಷೋऽಭಿಭವಿಷ್ಯತಿ ।
ಸೃಂಜಯಸ್ಯ ಸುತೋ ವಜ್ರ ಯಥೈನಂ ಪರ್ವತೋ ದದೌ ॥೨೮॥

ಅದರ ಪ್ರಕಾರ ವಜ್ರಾಯುಧದ ಜೊತೆ ದೇವೇಂದ್ರನು ಹೀಗೆ ಕಾರಣವನ್ನು ಹೇಳಿದನು. ವಜ್ರಾಯುಧವೇ! ವೀರ್ಯ ಹಾಗೂ ಪರಾಕ್ರಮಗಳಿಂದ ಬೆಳೆಯುತ್ತಿರುವ ಸುವರ್ಣಷ್ಠೀವಿಯು ದೊಡ್ಡವನಾದ ಮೇಲೆ ನನ್ನನ್ನು ಪರಾಭವಗೊಳಿಸುತ್ತಾನೆ. ಸೃಂಜಯನ ಅಪೇಕ್ಷೆಯಿಂದ ಹುಟ್ಟಿದ ವೀರನಾಗಿದ್ದಾನೆ. ನನ್ನ ಬಲಕ್ಕೆ ಸಮಾನವಾದ ಬಲವನ್ನು ಪರ್ವತಮುನಿಯು ಈ ಸೃಂಜಯನ ಮಗನಿಗೆ ಅನುಗ್ರಹಿಸಿದ್ದಾನೆ. ಆದ್ದರಿಂದ ಅವನನ್ನು ಈಗಲೇ ಕೊಂದುಬಿಡು.

ಏವಮುಕ್ತಸ್ತು ಶಕ್ರೇಣ ವಜ್ರಃ ಪರಪುರಂಜಯಃ।
ಕುಮಾರಸ್ಯಾಂತರಪ್ರೇಕ್ಷೀ ನಿತ್ಯಮೇವಾನ್ವಪದ್ಯತ ॥೨೯॥

ಯುಧಿಷ್ಠಿರನೇ! ಹೀಗೆ ದೇವೇಂದ್ರನು ಆ ವಜ್ರಾಯುಧಕ್ಕೆ ಹೇಳಿದ ಮೇಲೆ ಶತ್ರುಗಳ ಪಟ್ಟಣವನ್ನು ಗೆಲ್ಲಲು ಸಾಮರ್ಥ್ಯವನ್ನು ಹೊಂದಿರುವ ಆ ವಜ್ರಾಯುಧವು ಹೊರಟೇ ಬಿಟ್ಟಿತು. ತನ್ನ ಒಡೆಯನಾದ ದೇವೇಂದ್ರನ ಆಜ್ಞೆಗೆ ಅನುಗುಣವಾಗಿ ಸೃಂಜಯಕುಮಾರನನ್ನು ಸಂಹರಿಸಲು ನಿತ್ಯವೂ ಹೊಂಚು ಹಾಕುತ್ತಿತ್ತು.

ಸೃಂಜಯೋಽಪಿ ಸುತಂ ಪ್ರಾಪ್ಯ ದೇವರಾಜಸಮದ್ಯುತಿಮ್।
ಹೃಷ್ಟಃ ಸಾಂತಃಪುರೋ ರಾಜಾ ವನನಿತ್ಯೋಽಭವತ್ತದಾ ॥೩೦॥

ಆ ಸೃಂಜಯನೂ ಕೂಡ ದೇವೇಂದ್ರನಿಗೆ ಸಮಾನವಾದ ಬಲಪರಾಕ್ರಮಗಳನ್ನು ಹೊಂದಿದ ತನ್ನ ಕುಮಾರನನ್ನು ಕಂಡು, ನಿತ್ಯವೂ ಸಂತೋಷವನ್ನು ಅನುಭವಿಸುತ್ತಲೇ ಇದ್ದನು. ಅಂತಃಪುರದ ಪರಿವಾರದವರ ಜೊತೆ ನಿತ್ಯವೂ ಅರಣ್ಯಸಂಚಾರವನ್ನು ಮಾಡುತ್ತಾ ಸಂತೋಷದಲ್ಲಿ ಕಾಲಕಳೆಯುತ್ತಿದ್ದನು.

ತತೋ ಭಾಗೀರಥೀತೀರೇ ಕದಾಚಿದ್ ವನನಿರ್ಝರೇ।
ಧಾತ್ರೀದ್ವಿತೀಯೋ ಬಾಲಃ ಸ ಕ್ರೀಡಾರ್ಥಂ ಪರ್ಯಧಾವತ ॥೩೧॥

ಒಮ್ಮೆ ಆ ಸುವರ್ಣಷ್ಠೀವಿಯು ಯಾರೂ ಇಲ್ಲದ ಭಾಗೀರಥೀ ತೀರಕ್ಕೆ ತೆರಳಿದ್ದನು. ದಾದಿಯೊಬ್ಬಳ ಜೊತೆ ಅಲ್ಲಿ ಆಟವಾಡುತ್ತಿದ್ದನು.

ಪಂಚವರ್ಷಕದೇಶೀಯೋ ಬಾಲೋ ನಾಗೇಂದ್ರವಿಕ್ರಮಃ।
ಸಹಸೋತ್ಪತಿತಂ ವ್ಯಾಘ್ರಮಾಸಸಾದ ಮಹಾಬಲಮ್ ॥೩೨॥

ಆಗ ಆ ಮಗುವಿಗೆ ಕೇವಲ ಐದುವರ್ಷಗಳಿದ್ದವು. ಆದರೆ ಮಹಾಗಜದಂತೆ ಅತ್ಯಂತ ಬಲಿಷ್ಠನಾಗಿದ್ದನು. ಅವನಿಗೆ ತಿಳಿಯದಂತೆ ಹಿಂದಿನಿಂದ ಒಂದು ದೊಡ್ಡ ಹೆಬ್ಬುಲಿಯು ಬಂದು ಅವನ ಮೇಲೆ ಬಿದ್ದಿತು.

ಟಿಪ್ಪಣಿ- ಸಹಸೋತ್ಪತಿತಂ ವ್ಯಾಘ್ರಮಾಸಾದ್ ಮಹಾಬಲಮ್ । ಸ ಬಾಲಸ್ತೇನ ನಿಷ್ಪಿಷ್ಟ ಇತ್ಯತ್ರ ವ್ಯಾಘ್ರಹಿಂಸಿತತ್ವೇನೋಕ್ತಂ ಸ್ವರ್ಣಷ್ಠೀವಿರೂಪಂ ಪ್ರಾಕ್ । ಚೋರೈ-ರ್ನಾಶಿತಸ್ಯ ತಸ್ಯ ನಾರದೇನ ದತ್ತಂ ಪ್ರತಿರೂಪಮ್ ಇದಾನೀಂ ಪುನಃ ಪರ್ವತೇನ ರಕ್ಷಿತಮ್। ತಸ್ಮಾತ್ ಕಥಾದ್ವಯಸ್ಯಾಪಿ ನ ವಿರೋಧಃ।

ತೇನ ಚೈವ ವಿನಿಷ್ಪಿಷ್ಟೋ ವೇಪಮಾನೋ ನೃಪಾತ್ಮಜಃ।
ವ್ಯಸುಃ ಪಪಾತ ಮೇದಿನ್ಯಾಂ ತತೋ ಧಾತ್ರೀ ವಿಚುಕ್ರುಶೇ ॥೩೩॥

ತನ್ನ ಮೇಲೆ ಬೀಳುತ್ತಿರುವ ಹುಲಿಯ ಆರ್ಭಟವನ್ನು ಕಂಡು, ಬಾಲಕನು ನಡುಗಿಹೋದನು. ಆ ಸಂದರ್ಭದಲ್ಲಿ ಹುಲಿಯು ಅವನ ಮೇಲೆ ಬಿದ್ದು, ಅಪ್ಪಳಿಸಿತು. ಕೂಡಲೇ ಆ ಕುಮಾರನು ಪ್ರಾಣಬಿಟ್ಟನು. ಇದನ್ನು ಕಂಡು ದಾದಿಯು ಉಚ್ಚಕಂಠದಿಂದ ಕೂಗ ತೊಡಗಿದಳು.

ಹತ್ವಾತು ರಾಜಪುತ್ರಂ ಸ ತತ್ರೈವಾಂತರಧೀಯತ।
ಶಾರ್ದೂಲೋ ದೇವರಾಜಸ್ಯ ಮಾಯಯಾಂತರ್ಹಿತಸ್ತದಾ ॥೩೪॥

ಹುಲಿಯು ಹೀಗೆ ಆ ರಾಜಪುತ್ರನನ್ನು ಕೊಂದಿತು. ಆನಂತರ ದೇವರಾಜನ ಮಾಯೆಯಿಂದ ಆಗಮಿಸಿದ ಆ ಹುಲಿಯು ಅಲ್ಲಿಯೇ ಅಂತರ್ಧಾನವನ್ನು ಹೊಂದಿತು.

ಧಾತ್ರ್ಯಾಸ್ತು ನಿನದಂ ಶ್ರುತ್ವಾ ರುದತ್ಯಾಃ ಪರಮಾರ್ತವತ್ ।
ಅಭ್ಯಧಾವತ ತಂ ದೇಶಂ ಸ್ವಯಮೇವ ಮಹೀಪತಿಃ ॥೩೫॥

ದಾದಿಯ ಆಕ್ರಂದನವು ಸೃಂಜಯನಿಗೆ ಕೇಳಿಸಿತು. ಕೂಡಲೇ ಸ್ವತಃ ತಾನೇ ಓಡಿಬಂದನು.

ಸ ದದರ್ಶ ಗತಾಸುಂ ತಂ ಶಯಾನಂ ಪೀತಶೋಣಿತಮ್ ।
ಕುಮಾರಂ ವಿಗತಾನಂದಂ ನಿಶಾಕರಮಿವ ಚ್ಯುತಮ್ ॥೩೬॥

ತನ್ನ ಮಗನು ಪ್ರಾಣಶೂನ್ಯನಾಗಿ ನೆಲದ ಮೇಲೆ ಬಿದ್ದಿದ್ದನು. ಹುಲಿಯು

ರಕ್ತಪಾನವನ್ನು ಮಾಡಿದ್ದರಿಂದ ರಕ್ತಶೂನ್ಯನಾಗಿದ್ದನು. ಆಕಾಶದಲ್ಲಿರುವ ಚಂದ್ರನು ನೆಲದ ಮೇಲೆ ಬಿದ್ದಂತೆ ಆನಂದವನ್ನು ಕಳೆದುಕೊಂಡ ತನ್ನ ಮಗನು ಅಲ್ಲಿ ಬಿದ್ದನು.

ಸ ತಮುತ್ಸಂಗಮಾರೋಪ್ಯ ಪರಪೀಡಿತವಕ್ಷಸಮ್ ।
ಪುತ್ರಂ ರುಧಿರಸಂಸಿಕ್ತಂ ಪರ್ಯದೇವಯದಾತುರಃ ॥೩೭॥

ಆ ಸೃಂಜಯನಿಗೆ ಒಮ್ಮೆಲೇ ದುಃಖವು ಉಮ್ಮಳಿಸಿತು. ಎದೆಯನ್ನು ಬಡೆದುಕೊಳ್ಳುತ್ತಿದ್ದನು. ಆ ಬಾಲಕನ ಮೃತದೇಹವನ್ನು ಎತ್ತಿ ತನ್ನ ತೊಡೆಯ ಮೇಲಿಟ್ಟುಕೊಂಡನು. ಗಟ್ಟಿಯಾಗಿ ಗಳಗಳನೆ ಅತ್ತುಬಿಟ್ಟನು.

ತತಸ್ತಾ ಮಾತರರಸ್ತಸ್ಯ ರುಂದತ್ಯಃ ಶೋಕಕರ್ಶಿತಾಃ ।
ಅಭ್ಯಧಾವಂತ ತಂ ದೇಶಂ ಯತ್ರ ರಾಜಾ ಸ ಸೃಂಜಯಃ ॥೩೮॥

ಅದೇ ಸಂದರ್ಭದಲ್ಲಿ ಆ ಬಾಲಕನ ತಾಯಿಂದಿರು ಕೂಡ ಓಡಿ ಬಂದರು. ಸೃಂಜಯನು ಆಕ್ರಂದನ ಮಾಡುತ್ತಿದ್ದನು. ಅವನ ಬಳಿ ಬಂದು ತಾವು ಅಳಲು ಪ್ರಾರಂಭ ಮಾಡಿದರು.

ತತಃ ಸ ರಾಜಾ ಸಸ್ಮಾರ ಮಾಮಂತರ್ಗತಮಾನಸಃ ।
ತಚ್ಚಾಹಂ ಚಿಂತಿತಂ ಜ್ಞಾತ್ವಾ ಗತವಾಂಸ್ತಸ್ಯ ದರ್ಶನಮ್ ॥೩೯॥

ಇದೇ ಸಂದರ್ಭದಲ್ಲಿ ಅಂದು ನಾನು ಅವನಿಗೆ ಹೇಳಿದ ಮಾತು ನೆನಪಾಯಿತು. ನನ್ನನ್ನು ಮನಸ್ಸಿನಲ್ಲಿ ನೆನೆಸಿಕೊಂಡನು. ಆಗ ಸ್ಮರಣೆ ಮಾಡಿಕೊಳ್ಳುತ್ತಿದ್ದಾನೆಂದು ತಿಳಿದ ಕೂಡಲೇ ನಾನು ಅವನಿಗೆ ದರ್ಶನವನ್ನು ನೀಡಿದೆನು.

ಸ ಮಯ್ಯೇತಾನಿ ವಾಕ್ಯಾನಿ ಶ್ರಾವಿತಃ ಶೋಕಲಾಲಸಃ ।
ಯಾನಿ ತೇ ಯದುವೀರೇಣ ಕಥಿತಾನಿ ಮಹೀಪತೇ ॥೪೦॥

ಶ್ರೀಕೃಷ್ಣ ಪರಮಾತ್ಮನು ಯಾವ ಮಾತುಗಳನ್ನು ಹೇಳುತ್ತಾ ನಿನಗೆ ಸಮಾಧಾನವನ್ನು ಮಾಡುತ್ತಿದ್ದಾನೋ, ಅಂಥ ಮಾತುಗಳನ್ನೇ ನಾನೂ ಕೂಡ ಸೃಂಜಯನಿಗೆ

ಪ್ರಾರಂಭ ಮಾಡಿದೆನು. ಬಗೆ ಬಗೆಯಾಗಿ ಅವನಿಗೆ ಸಾಂತ್ವನವನ್ನು ಮಾಡಲು ಪ್ರಯತ್ನಪಟ್ಟೆನು.

ಸಂಜೀವಿತಶ್ಚಾಪಿ ಮಯಾ ವಾಸವಾನುಮತೇ ತದಾ ।
ಭವಿತವ್ಯಂ ತಥಾ ತಚ್ಚ ನ ತಚ್ಛಕ್ಯಮತೋಽನ್ಯಥಾ ॥೪೧॥

ಅವನ ದುಃಖವನ್ನು ನೋಡಿ, ಮಗುವನ್ನು ಬದುಕಿಸಬೇಕೆಂದು ಸಂಕಲ್ಪ ಮಾಡಿದೆನು. ಮೊದಲು ದೇವೇಂದ್ರನ ಬಳಿ ಅನುಮತಿಯನ್ನು ಪಡೆದುಕೊಂಡೆನು. ಪುನಃ ಬಾಲಕನನ್ನು ಬದುಕಿಸಿ ಬಿಟ್ಟೆನು. ಬದುಕಿದ ಮೇಲೆ ಇವನು ಇಂದ್ರನನ್ನು ಅನುಸರಿಸಬೇಕೇ ಹೊರತು, ಅವನಿಗೆ ವಿರುದ್ಧವಾಗಿ ನಡೆಯಬಾರದು. ಇಲ್ಲದಿದ್ದರೆ ಬದುಕಿಸಲು ಸಾಧ್ಯವಿಲ್ಲವೆಂದು ಹೇಳಿದನು.

ಅತ ಊರ್ಧ್ವಂ ಕುಮಾರಃ ಸ ಸ್ವರ್ಣಷ್ಠೀವೀ ಮಹಾಯಶಾಃ ।
ಚಿತ್ತಂ ಪ್ರಸಾದಯಾಮಾಸ ಪಿತುರ್ಮಾತುಶ್ಚ ವೀರ್ಯವಾನ್ ॥೪೨॥

ನನ್ನ ಮಾತಿಗೆ ಸೃಂಜಯರಾಜನು ಒಪ್ಪಿದನು. ಅನಂತರ ಆ ಮಗುವನ್ನು ಬದುಕಿಸಿದೆನು. ಅನಂತರ ಸುವರ್ಣಷ್ಠೀವಿಯು ಕೀರ್ತಿಯಲ್ಲಿ, ಪರಾಕ್ರಮದಲ್ಲಿ ಪ್ರಖ್ಯಾತನಾದನು. ತಂದೆ-ತಾಯಿಯರಿಗೆ ಸಂತೋಷವನ್ನುಂಟು ಮಾಡಿದನು.

ಕಾರಯಾಮಾಸ ರಾಜ್ಯಂ ಸ ಪಿತರಿ ಸ್ವರ್ಗತೇ ವಿಭುಃ ।
ವರ್ಷಾಣಾಮೇಕಶತವತ್ ಸಹಸ್ರಂ ಭೀಮವಿಕ್ರಮಃ ॥೪೩॥

ತನ್ನ ತಂದೆಯಾದ ಸೃಂಜಯನು ಸ್ವರ್ಗಕ್ಕೆ ತೆರಳಿದ ಮೇಲೆ ಸುವರ್ಣಷ್ಠೀವಿಯು ಸಿಂಹಾಸನವನ್ನೇರಿದನು. ಹನ್ನೊಂದು ನೂರು ವರ್ಷಗಳ ಕಾಲ ಭೀಮಪರಾಕ್ರಮನಾದ ಸುವರ್ಣಷ್ಠೀವಿಯು ರಾಜ್ಯವನ್ನಾಳಿದನು.

ತತ ಇಷ್ಟ್ವಾ ಮಹಾಯಜ್ಞೈರ್ಬಹುಭಿರ್ಭೂರಿದಕ್ಷಿಣೈಃ ।
ತರ್ಪಯಾಮಾಸ ದೇವಾಂಶ್ಚ ಪಿತೄಂಶ್ಚೈವ ಮಹಾದ್ಯುತಿಃ ॥೪೪॥

ತನ್ನ ರಾಜ್ಯಭಾರದಲ್ಲಿ ಸುವರ್ಣಷ್ಠೀವಿಯು ಬಹುದಕ್ಷಿಣಾಕವಾದ ಅನೇಕ

ಮಹಾಯಾಗಗಳನ್ನು ಆಚರಿಸಿದನು. ದೇವತೆಗಳನ್ನು, ಪಿತೃಗಳನ್ನು ಆ ಮಹಾದ್ಯುತಿಯು ಸಂತೋಷ ಪಡಿಸಿದನು.

ಉತ್ಪಾದ್ಯ ಚ ಬಹೂನ್ ಪುತ್ರಾನ್ ಕುಲಸಂತಾನಕಾರಿಣಃ।
ಕಾಲೇನ ಮಹತಾ ರಾಜನ್ ಕಾಲಧರ್ಮಮುಪೇಯಿವಾನ್ ॥೪೫॥

ಅನೇಕ ಪುತ್ರರನ್ನು ಪಡೆದನು. ಪ್ರತಿಯೊಬ್ಬರು ಸಂತಾನಾಭಿವೃದ್ಧಿಗೆ ಕಾರಣರಾಗಿದ್ದರು. ಚಿರಕಾಲ ಭೂಮಿಯಲ್ಲಿದ್ದು ತಾನೂ ಸಹ ಕಾಲಧರ್ಮಕ್ಕೆ ಅನುಗುಣವಾಗಿ ಲೋಕಾಂತರಕ್ಕೆ ತೆರಳಿದನು.

ಸ ತ್ವಂ ರಾಜೇಂದ್ರ ಸಂಜಾತಂ ಶೋಕಮೇತನ್ನಿವರ್ತಯ।
ಯಥಾ ತ್ವಾಂ ಕೇಶವಃ ಪ್ರಾಹ ವ್ಯಾಸಶ್ಚ ಸುಮಹಾತಪಾಃ ॥೪೬॥

ಧರ್ಮರಾಜನೇ! ನೀನೂ ಕೂಡ ಈ ಶೋಕವನ್ನು ಬಿಡಬೇಕು. ಶ್ರೀಕೃಷ್ಣಪರಮಾತ್ಮಹಾಗೂ ಶ್ರೀವೇದವ್ಯಾಸದೇವರು ಹೇಳಿದಂತೆ ನಡೆದುಕೋ.

ಪಿತೃಪೈತಾಮಹಂ ರಾಜ್ಯಮಾಸ್ಥಾಯ ಧುರಮುದ್ವಹ।
ದೃಷ್ಟ್ವಾ ಪುಣ್ಯೈರ್ಮಹಾಯಜ್ಞೈರಿಷ್ಟಾಂಲ್ಲೋಕಾನವಾಪ್ಸ್ಯಸಿ ॥೪೭॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ನಾರದೇನ ಸ್ವರ್ಣಷ್ಠೀವಿಜನ್ಮಕಥನಂ ನಾಮ ದ್ವಾತ್ರಿಂಶೋಽಧ್ಯಾಯಃ ॥೩೨॥

ನಿನ್ನ ತಾತ, ಮುತ್ತಾತಂದಿರಿಂದ ವಂಶಪಾರಂಪರ್ಯಕವಾಗಿ ಬಂದಿರುವ ಪುಣ್ಯಕರವಾದ ಮಹಾಯಾಗಗಳನ್ನು ನಡೆಸು. ಆಗ ನಿನ್ನ ಅಭೀಷ್ಟವಾದ ಪುಣ್ಯಲೋಕಗಳನ್ನು ಪಡೆಯುವಿ.

ದ್ರೋಣಪರ್ವದಲ್ಲಿಯೂ ಈ ಕಥೆಯು ಬಂದಿದೆ. ಆದರೆ ಸುವರ್ಣೇಷ್ಠಿಯು ಹೇಗೆ ಹುಟ್ಟಿದ? ಹೇಗೆ ಸತ್ತ? ಎಂಬ ಕಥೆಯಷ್ಟೇ ಅಲ್ಲಿ ಬಂದಿದೆ. ವಿವಾಹದ ಕಥೆಯು ದ್ರೋಣಪರ್ವದಲ್ಲಿ ಬಂದಿರುವುದಿಲ್ಲ. ಅದರ ವಿವರಣೆ ಇಲ್ಲಿ ಪ್ರಸಕ್ತವಾಗಿದೆ. ನಾರದರ ಬಗ್ಗೆ ಬೇರೆ ಬೇರೆ ಪುರಾಣಗಳಲ್ಲಿ ಬಂದ ಕಥೆಯ ಸಂಕ್ಷೇಪ ವಿವರಣೆ ಹೀಗಿದೆ -

ಲಿಂಗಪುರಾಣದಲ್ಲಿ ಬರುವ ಕಥೆ ಹೀಗಿದೆ - ಅಂಬರೀಷ ಎಂಬ ಪ್ರಸಿದ್ಧನಾದ ರಾಜನಿಗೆ ಶ್ರೀಮತಿ ಎಂಬ ಮಗಳಿದ್ದಳು. ಅವನ ಬಳಿ ಒಮ್ಮೆ ನಾರದರು ಹಾಗೂ ಪರ್ವತ ಮಹರ್ಷಿಗಳು ಆಗಮಿಸಿದರು. ಅವನ ಮಗಳನ್ನು ನೋಡಿ, ಮೋಹಿತರಾದರು. ಇಬ್ಬರಲ್ಲೂ ಪರಸ್ಪರ ಜಗಳ ಪ್ರಾರಂಭವಾಯಿತು. ಶ್ರೀಮತಿ-ಯನ್ನು ನಾನು ವಿವಾಹ ಮಾಡಿಕೊಳ್ಳುತ್ತೇನೆಂದು ನಾರದರು ಹೇಳಿದರೆ, ಪರ್ವತ ಋಷಿಗಳು ನಾನು ವಿವಾಹ ಮಾಡಿಕೊಳ್ಳುತ್ತೇನೆಂದು ಹೇಳುತ್ತಾರೆ. ಕೊನೆಯಲ್ಲಿ ಇಬ್ಬರೂ ಕೂಡ ಪರಸ್ಪರ ಶಾಪವನ್ನು ನೀಡಿದರು. ಪರ್ವತ ಋಷಿಯು ನಾರದರಿಗೆ 'ನೀನು ಕಪಿಮುಖಿದವನಾಗು' ಎಂಬುದಾಗಿ ಶಾಪವನ್ನು ನೀಡಿದರು. ನಾರದರು ಪರ್ವತ ಋಷಿಗೆ 'ನೀನು ಕತ್ತೆಮುಖಿದವನಾಗು' ಎಂಬುದಾಗಿ ಶಾಪವನ್ನು ನೀಡಿದರು. ಕೊನೆಯಲ್ಲಿ ಇಬ್ಬರಿಗೂ ಶ್ರೀಮತಿಯನ್ನು ವರಿಸಲು ಸಾಧ್ಯವಾಗದೇ ಅಂಬರೀಷನನ್ನೇ ಶಪಿಸಲು ಮುಂದಾದರು. ಅಂತಿಮವಾಗಿ ಅಂಬರೀಷನು ಭಗವಂತನನ್ನೇ ಮೊರೆಹೊಕ್ಕನು. ಮತ್ತು ತನ್ನ ಮಗಳನ್ನು ಭಗವಂತನಿಗೆ ಕೊಟ್ಟು ವಿವಾಹ ಮಾಡಿದನು.

ದೈವೀಭಾಗವತದಲ್ಲಿ ನಾರದರ ಬಗ್ಗೆ ಹೀಗೆ ಬರುತ್ತದೆ - ಒಮ್ಮೆ ನಾರದರು ಶ್ವೇತದ್ವೀಪಕ್ಕೆ ತೆರಳಿದ್ದರು. ಅಲ್ಲಿ ಮುಕ್ತಜೀವರನ್ನು ಹಾಗೂ ಪರಮಾತ್ಮನನ್ನು ನೋಡಿ ಬಹಳ ಸಂತೋಷ ಪಟ್ಟರು. ಅನಂತರ ನಿನ್ನ ಮಾಯೆಯನ್ನು ನನಗೂ ಕೂಡ ತಿಳಿಸು ಎಂಬುದಾಗಿ ಭಗವಂತನನ್ನು ಶರಣಾಗತರಾದರು. ಆಗ ಪರಮಾತ್ಮನು ನಾರದರನ್ನು ಗರುಡನ ಮೇಲೆ ಕುಳ್ಳಿರಿಸಿಕೊಂಡು ಹೊರಟನು. ಕಾಮ್ಯಕುಬ್ಜ ಎಂಬ ಉತ್ತರಪ್ರದೇಶದಲ್ಲಿರುವ ಕ್ಷೇತ್ರವಿಶೇಷದಲ್ಲಿ ಗರುಡನಿಂದ ನಾರದರನ್ನು ಇಳಿಸಿದನು. ಇಲ್ಲಿರುವ ಸರೋವರದಲ್ಲಿ ಸ್ನಾನ ಮಾಡಿಬಾ ಎಂಬುದಾಗಿ ಭಗವಂತನು ನಾರದರಿಗೆ ಹೇಳಿದರು. ಅದರಂತೆ ನಾರದರು ಸ್ನಾನ ಮಾಡಿದರು. ಆದರೆ ಕೂಡಲೇ ಹೆಣ್ಣಾಗಿ ಬಿಟ್ಟರು. ಹೆಣ್ಣಾದ ನಾರದರು ವಿಷ್ಣುವಿನ ಬಳಿ ತೆರಳಲು ನಾಚಿಕೆ ಪಟ್ಟರು. ಆಗ ನಾರದರ ಕಮಂಡಲು, ವೀಣೆಗಳನ್ನು ಭಗವಂತನು ತೆಗೆದುಕೊಂಡು ತೆರಳಿಬಿಟ್ಟನು. ಇಷ್ಟರಲ್ಲಿ ಆ ಕಾಮ್ಯಕುಬ್ಜದ ತಾಲಧ್ವಜ ಎಂಬ ರಾಜನು ಅಲ್ಲಿಗೆ ಬಂದನು. ನಾರದರನ್ನು ನೋಡಿ ವಿವಾಹವಾದನು. ಆ ತಾಲಧ್ವಜನಿಂದ ವೀರವರ್ಮ, ಸುಧನ್ವ

ಮೊದಲಾದ ಇಪ್ಪತ್ತು ಮಂದಿ ಮಕ್ಕಳು ಹುಟ್ಟಿದರು. ಆ ಇಪ್ಪತ್ತು ಮಕ್ಕಳಿಗೂ ಮಕ್ಕಳಾದರು. ಹೀಗೆ ವಂಶವು ಅಭಿವೃದ್ಧವಾಯಿತು. ಒಮ್ಮೆ ತಾಲಧ್ವಜನ ಮೇಲೆ ಶತ್ರುರಾಜ್ಯದವರು ಆಕ್ರಮಣ ಮಾಡಿದರು. ಆಗ ಯುದ್ಧದಲ್ಲಿ ತಾಲಧ್ವಜನು ಸೇರಿದಂತೆ ಮಕ್ಕಳು, ಮೊಮ್ಮಕ್ಕಳೂ ಎಲ್ಲರೂ ಕೂಡ ಯುದ್ಧದಲ್ಲಿ ಸತ್ತುಹೋದರು. ಆಗ ಹೆಣ್ಣಿನ ವೇಷದಲ್ಲಿರುವ ನಾರದರು ರಣರಂಗಕ್ಕೆ ಬಂದು, ಗಂಡ, ಮಕ್ಕಳು, ಮೊಮ್ಮಕ್ಕಳು ಎಲ್ಲರೂ ಮಡಿದದ್ದನ್ನು ಕಂಡು ಗೋಳಾಡಲು ಪ್ರಾರಂಭಮಾಡಿದರು. ಆಗ ಮಹಾವಿಷ್ಣು ಒಬ್ಬ ಮುದುಕನ ವೇಷದಲ್ಲಿ ಅಲ್ಲಿಗೆ ಬಂದನು. ನಾರದರನ್ನು ಸಾಂತ್ವನ ಮಾಡಿದನು. ಗಂಡನಿಗೆ ಮಕ್ಕಳು, ಮೊಮ್ಮಕ್ಕಳಿಗೆ ತಿಲೋದಕವನ್ನು ಕೊಡಿಸಿದನು. ಅನಂತರ ಸಮೀಪದಲ್ಲೇ ಇದ್ದ ಪುಂತೀರ್ಥದಲ್ಲಿ ಸ್ನಾನ ಮಾಡಲು ಹೇಳಿದನು. ಆಗ ಅಲ್ಲಿ ಸ್ನಾನ ಮಾಡಿದ ನಾರದರಿಗೆ ಪುರುಷರೂಪವು ಬಂದಿತು.

ಭಾಗವತದಲ್ಲಿ ಬರುವ ಕಥೆ ಹೀಗಿದೆ - ಚತುರ್ಮುಖಬ್ರಹ್ಮದೇವರ ತೊಡೆಯಿಂದ ನಾರದರು ಹುಟ್ಟಿದರು. ಅನಂತರ ಚತುರ್ಮುಖಬ್ರಹ್ಮದೇವರ ಬಳಿ ನಾನು ಬ್ರಹ್ಮಚಾರಿಯಾಗಿಯೇ ಇರುತ್ತೇನೆಂದು ಆ ನಾರದರು ಹೇಳಿದರು. ಆಗ ಚತುರ್ಮುಖಬ್ರಹ್ಮದೇವರು ಸನಕಾದಿಗಳು ಈಗಾಗಲೇ ಬ್ರಹ್ಮಚಾರಿಗಳಾಗಿದ್ದಾರೆ. ಆದ್ದರಿಂದ ನೀನು ಗೃಹಸ್ಥಾಶ್ರಮವನ್ನು ಸ್ವೀಕಾರ ಮಾಡು ಎಂದು ಹೇಳಿದರು. ಆದರೆ ನಾರದರು ಸಾಧ್ಯವಿಲ್ಲವೆಂದು ಉತ್ತರಿಸಿದರು. ಕುಪಿತರಾದ ಬ್ರಹ್ಮದೇವರು ಒಂದು ವಿವಾಹವನ್ನು ಮಾಡಿಕೊಳ್ಳಲು ನಿರಾಕರಿಸಿದ ನಿನಗೆ ಐವತ್ತು ವಿವಾಹವಾಗಲಿ ಎಂದು ಶಾಪವನ್ನು ನೀಡಿದರು. ಮತ್ತು ಉಪಬರ್ಹಣ ಎಂಬ ಗಂಧರ್ವ ಜನ್ಮದ ಮುಂದಿನ ಜನ್ಮದಲ್ಲಿ ಒಬ್ಬ ದಾಸಿಯ ಮಗನಾಗಿ ಹುಟ್ಟುವಿ. ಆ ಜನ್ಮದಲ್ಲಿಯೂ ದೊಡ್ಡ ಹರಿಭಕ್ತನಾಗುವಿ. ಅನಂತರ ನನ್ನ ಮಗನಾಗಿ ಜನಿಸುವಿ ಎಂಬುದಾಗಿ ಚತುರ್ಮುಖಬ್ರಹ್ಮದೇವರು ಹೇಳುತ್ತಾರೆ.

ಚಿತ್ರಕೇತು ಎಂಬ ಗಂಧರ್ವನೊಬ್ಬನು ಶಿವನನ್ನು ಕುರಿತು ತಪಸ್ಸು ಮಾಡುತ್ತಾನೆ. ಅವನ ತಪಸ್ಸಿಗೆ ಶಿವನು ಮೆಚ್ಚುತ್ತಾನೆ. ನಾರದನು ನಿನ್ನ ಮಗನಾಗಿ ಜನಿಸುತ್ತಾನೆಂಬ ವರವನ್ನು ಶಿವನು ನೀಡುತ್ತಾನೆ. ಆಗ ನಾರದನಿಗೆ ಉಪಬರ್ಹಣ ಎಂಬುದಾಗಿ ನಾಮಕರಣವನ್ನು ಚಿತ್ರಕೇತುವು ಮಾಡುತ್ತಾನೆ. ಆ ಉಪಬರ್ಹಣನು ದೊಡ್ಡ

ಹರಿಭಕ್ತನಾಗಿದ್ದನು. ಬೃಹಸ್ಪತ್ಯಾಚಾರ್ಯರಿಂದಲೇ ಎಲ್ಲ ವಿದ್ಯೆಗಳ ಉಪದೇಶವಾಗುತ್ತದೆ. ಹಿಮಾಲಯದ ತಪ್ಪಲಿನಲ್ಲಿ ಒಮ್ಮೆ ತಪಸ್ಸು ಮಾಡುತ್ತಿದ್ದರು. ಸಮಾಧ್ಯವ್ಯಸ್ಥೆಯಲ್ಲಿ ಇದ್ದಾಗ ಚೈತ್ರರಥ ಎಂಬ ಗಂಧರ್ವನ ಐವತ್ತು ಮಕ್ಕಳು ಆ ತಪಸ್ಸು ಮಾಡುತ್ತಿರುವ ಸ್ಥಳಕ್ಕೆ ಆಗಮಿಸಿದರು. ಪ್ರಾರಂಭದಲ್ಲಿ ತಪಸ್ಸಿಗೆ ವಿಘ್ನ ಬಾರದಿದ್ದರೂ ಸ್ವಲ್ಪ ಕಾಲ ಕಳೆದ ಮೇಲೆ ಐವತ್ತು ಜನರನ್ನು ನೋಡಿ, ಮನಸ್ಸು ವಿಕಾರವಾಯಿತು. ಆ ಐವತ್ತು ಜನರ ಜೊತೆ ವಿವಾಹವಾದನು. ತನ್ನ ಅರಮನೆಯಲ್ಲಿ ಸುಖವಾಗಿ ಕಾಲಕಳೆಯುತ್ತಿದ್ದನು. ಈ ಉಪವರ್ಹಣನು ಸಂಗೀತ, ವೀಣೆ ಮೊದಲಾದವುಗಳಲ್ಲಿ ಪ್ರಾವೀಣ್ಯವನ್ನು ಪಡೆದಿದ್ದನು. ಒಮ್ಮೆ ದೇವತೆಗಳು ಈ ಉಪಬರ್ಹಣನನ್ನು ಬಹ್ಮಲೋಕಕ್ಕೆ ಕರೆದುಕೊಂಡು ಹೋದರು. ಉಪಬರ್ಹಣನು ದೇವತೆಗಳ ಜೊತೆ ಬ್ರಹ್ಮಲೋಕಕ್ಕೆ ಹೋದನು. ಅಲ್ಲಿ ರಂಭೆಯೂ ಕೂಡ ಬಂದಿದ್ದಳು. ಆ ರಂಭೆಯನ್ನು ನೋಡಿ, ಈ ಉಪಬರ್ಹಣನಿಗೆ ಮನಸ್ಸು ವಿಕಾರವಾಯಿತು. ಇದನ್ನರಿತ ಪ್ರಜಾಪತಿಗಳಿಗೆ ಸಿಟ್ಟು ಬಂದಿತು. ಕೂಡಲೇ ಶಪಿಸಿದರು. ಇದರಿಂದ ಖಿನ್ನನಾದ ಉಪಬರ್ಹಣನು ತನ್ನ ಅರಮನೆಗೆ ಹಿಂತಿರುಗಿ ಬಂದು ಅತ್ಯಂತ ದುಃಖದಿಂದ ಪ್ರಾಯೋಗವೇಷಕ್ಕಾಗಿ ದರ್ಭಾಸನದ ಮೇಲೆ ಕುಳಿತುಬಿಟ್ಟನು. ಆ ಉಪಬರ್ಹಣನ ಹಿರಿಯ ಪತ್ನಿಯಾದ ಮಾಲತಿಯೆಂಬುವಳು ಇದನ್ನು ತಿಳಿದು ಎಲ್ಲ ಪ್ರಜಾಪತಿಗಳಿಗೆ ತಾನೇ ಶಾಪನೀಡುತ್ತೆನೆಂದು ಧಾವಿಸಿ ಹೊರಟಳು. ನನ್ನ ಪತಿಗೆ ಮರಣ ಬರುವಂತೆ ಏಕೆ ಶಾಪವನ್ನು ನೀಡಿದ್ದೀರಿ? ಎಂದು ಗದರಿಸಿದಳು. ಎಲ್ಲ ಪ್ರಜಾಪತಿಗಳು ವಿಷ್ಣುವನ್ನು ಮೊರೆಹೊಕ್ಕರು. ಮಹಾವಿಷ್ಣುವೇ ಬಂದು ಮಾಲತಿಗೆ ಸಮಾಧಾನ ಹೇಳಿದನು. ದೇವತೆಗಳೂ ಕೂಡ ಆ ಮಾಲತಿಗೆ ಸಮಾಧಾನದ ಮಾತುಗಳನ್ನು ಹೇಳಿದರು. ಹಿಂದೆ ಚತುರ್ಮುಖಬ್ರಹ್ಮನು ವರವನ್ನು ನೀಡಿದ್ದನು. ಅದಕ್ಕೆ ಅನುಗುಣವಾಗಿ ಈಗ ಉಪಬರ್ಹಣನು ಮರವಣವನ್ನು ಹೊಂದಿದರೂ ಕೂಡ ಚತುರ್ಮುಖಬ್ರಹ್ಮನಿಂದ ಹುಟ್ಟುತ್ತಾನೆಂದು ತಿಳಿಸಿದರು. ಪ್ರಜಾಪತಿಗಳ ಶಾಪದ ಪ್ರಭಾವದಿಂದ ಉಪಬರ್ಹಣನು ಮರಣವನ್ನು ಹೊಂದಿದನು. ಮೃತನಾದ ಮೇಲೆ ಮಹಾವಿಷ್ಣುವು ಮುದುಕು ಬ್ರಾಹ್ಮಣನ ವೇಷದಿಂದ ಅಲ್ಲಿಗೆ ಬಂದನು. ಎದ್ದೇಳು ಮೇಲೆ ಎಂಬುದಾಗಿ ಆ ಉಪಬರ್ಹಣನ ತಲೆಯ ಮೇಲೆ ಕೈ ಇಟ್ಟನು. ಕಣ್ಣು ತಿಕ್ಕಿ ಉಪಬರ್ಹಣನು ನಿದ್ದೆಯಿಂದ ಎಚ್ಚೆತ್ತವನಂತೆ ಬದುಕಿ ಬಂದನು. ಪುನಃ ತನ್ನ

ಹೆಂಡಂದಿರ ಜೊತೆ ಸುಖವಾಗಿ ಬದುಕಿದನು. ಅನಂತರ ಆ ಐವತ್ತು ಮಂದಿ ಹೆಂಡಂದಿರಲ್ಲಿ ಮಕ್ಕಳು ಹುಟ್ಟಿದಳು. ಅವರಿಗೂ ಮಕ್ಕಳಾಗಿ ಸಂತಾನವು ಅಭಿವೃದ್ಧವಾಯಿತು. ತಾನು ಪುನಃ ಮರಣವನ್ನು ಹೊಂದುತ್ತೇನೆಂದು ಅವನಿಗೆ ತಿಳಿಯಿತು. ಆ ಸಂದರ್ಭದಲ್ಲಿ ವಯೋವೃದ್ಧನಾದ ಉಪಬರ್ಹಣನು ಗಂಗಾನದಿ ತೀರಕ್ಕೆ ಮಾಲತಿಯ ಜೊತೆ ತೆರಳಿ ತಪಸ್ಸನ್ನು ಆಚರಿಸಿದನು. ಅಲ್ಲಿ ಮೃತನಾದನು. ಮಾಲತಿಯೂ ಕೂಡ ಮೃತಳಾದಳು.

ಆದರೆ ಪ್ರಚಲಿತ ಭಾಗವತದ ಏಳನೆಯ ಸ್ಕಂಧದಲ್ಲಿ ಉಪಬರ್ಹಣನ ಕಥೆಯು ಹೀಗಿರುವುದಿಲ್ಲ. ಸತ್ಯಲೋಕಕ್ಕೆ ಸಂಗೀತವನ್ನು ಹಾಡಲು ತೆರಳಿದ ಉಪಬರ್ಹಣನು ಸರಿಯಾದ ಸಂಗೀತ ಕಛೇರಿಯನ್ನು ನಡೆಸಲಿಲ್ಲ. ಅದಕ್ಕಾಗಿ ಪ್ರಜಾಪತಿಗಳು ಶಾಪವನ್ನು ನೀಡಿದರು ಎಂದು ಇರುತ್ತದೆ. ಇದೇ ಉಪಬರ್ಹಣನು ಮುಂದೆ ದಾಸಿಯ ಪುತ್ರನಾದ ಕಥೆಯು ಭಾಗವತದ ಪ್ರಥಮಸ್ಕಂಧದಲ್ಲಿ ಬರುತ್ತದೆ. ಕಾಮ್ಯಕುಬ್ಜ ಎಂಬ ಪಟ್ಟಣದಲ್ಲಿ ದ್ರುಮಿಳ ಎಂಬ ರಾಜನಿದ್ದನು. ಕಲಾವತಿ ಎಂಬುವಳು ಇವನ ಹೆಂಡತಿಯಾಗಿದ್ದಳು. ಇವನು ಗಂಗಾನದಿಯ ತೀರದಲ್ಲಿ ತಪಸ್ಸನ್ನು ಆಚರಿಸಿದನು. ಕಶ್ಯಪಋಷಿಗಳನ್ನು ಕಲಾವತಿಯು ಸಂತೋಷ ಪಡಿಸಿದಳು. ಕಶ್ಯಪಋಷಿಗಳ ತಪಃಶಕ್ತಿಯಿಂದ ಅವಳು ತನ್ನ ಪತಿಯ ಮೂಲಕ ಗರ್ಭಿಣಿಯಾದಳು. ಪತಿಯು ವಿರಕ್ತನಾಗಿ ವಾನಪ್ರಸ್ಥಾಶ್ರಮಕ್ಕೆ ಹೊರಟಾಗ ತಾನೂ ಕೂಡ ಪತಿಯ ಸೇವೆ ಮಾಡಿಕೊಂಡು ಕಾಲವನ್ನು ಕಳೆಯುತ್ತೇನೆಂದು ಸಂಕಲ್ಪ ಮಾಡಿದಳು. ಆ ಸಂದರ್ಭದಲ್ಲಿ ನಿನ್ನ ಉದರದಲ್ಲಿ ಪುತ್ರನು ಬೆಳೆಯುತ್ತಿದ್ದಾನೆ. ಆದ್ದರಿಂದ ಪತಿಸೇವೆಗಾಗಿ ವಾನಪ್ರಸ್ಥಾಶ್ರಮಕ್ಕೆ ತೆರಳಬೇಡ ಎಂದು ಆಕಾಶವಾಣಿ ಆಯಿತು. ಅನಂತರ ಪತಿಯೊಬ್ಬನೇ ವಾನಪ್ರಸ್ಥಾಶ್ರಮಕ್ಕೆ ಹೊರಟನು. ಇವಳು ತನ್ನ ದೇಶವನ್ನು ಬಿಟ್ಟು, ಮತ್ತೊಂದು ಊರಿಗೆ ಬಂದು, ಒಬ್ಬ ಬ್ರಾಹ್ಮಣ ಮನೆಯಲ್ಲಿ ಸೇವೆಗಾಗಿ ಸೇರಿಕೊಂಡಳು. ನವಮಾಸವು ತುಂಬಿದ ಮೇಲೆ ಸುಪುತ್ರನಿಗೆ ಜನ್ಮವನ್ನಿತ್ತಳು. ಆ ಊರಿಗೆ ದೊಡ್ಡ ಪ್ರಮಾಣದಲ್ಲಿ ಬರಗಾಲವು ಬಂದಿತ್ತು. ಈ ಮಗವು ಹುಟ್ಟಿದ ಕೂಡಲೇ ಧಾರಾಕಾರವಾಗಿ ಮಳೆಯು ಬಂದಿತ್ತು. 'ನಾರ' ಶಬ್ದಕ್ಕೆ ನೀರು ಎಂಬರ್ಥವೂ ಇದೆ. ನೀರನ್ನು ಕೊಟ್ಟಿರುವ ಕಾರಣ ಮಗುವಿಗೆ 'ನಾರದ' ಎಂದು

ಹೆಸರನ್ನಿಟ್ಟರು. ಈ ಮಗುವು ದೊಡ್ಡವನಾದ ಮೇಲೆ ಆ ತಾಯಿಯು ಸರ್ಪದಿಂದ ಕಚ್ಚಿಸಿಕೊಂಡು ಮೃತಳಾದಳು. ಈ ಮಗುವು ಅನಾಥವಾಯಿತು. ಅನಂತರ ವಿರಕ್ತರಾದ ನಾರದರು ತಪೋನಿರತರಾದರು. ಭಗವಂತನನ್ನು ತಮ್ಮ ಹೃದಯಕಮಲದಲ್ಲಿ ಕಂಡು ಜೀವನವನ್ನು ಸಾರ್ಥಕ ಮಾಡಿಕೊಂಡರು. ಇಷ್ಟು ಪ್ರಥಮಸ್ಕಂಧದಲ್ಲಿ ಬರುವ ಕಥೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ನಾರದರಿಂದ ಹೇಳಲ್ಪಟ್ಟ ಸುವರ್ಣಷ್ಠೀವಿ ಜನ್ಮಕಥನವೆಂಬ ೩೨ನೆಯ ಅಧ್ಯಾಯವು ಮುಗಿಯಿತು.

* * * * *

೩೨. ಮೂವತ್ತೊರನೆಯ ಅಧ್ಯಾಯ

ವೇದ್ಯವ್ಯಾಸದೇವರು ಯುಕ್ತಿಯುಕ್ತವಾದ ಮಾತುಗಳಿಂದ ಯುಧಿಷ್ಠಿರನನ್ನು ಸಮಾಧಾನ ಮಾಡುತ್ತಾರೆ. ಅನೇಕ ತತ್ವಗಳನ್ನು ಹೇಳುವ ಮೂಲಕ ಕ್ಷತ್ರಿಯ ಧರ್ಮದ ಪರಿಪಾಲನೆಯ ಬಗ್ಗೆ ಉಪದೇಶಿಸುತ್ತಾರೆ.

ವೈಶಂಪಾಯನಃ

ತೂಷ್ಣೀಂಭೂತಂ ತು ರಾಜಾನಂ ಶೋಚಮಾನಂ ಯುಧಿಷ್ಠಿರಮ್ ।
ತಪಸ್ವೀ ಧರ್ಮತತ್ತ್ವಜ್ಞಃ ಕೃಷ್ಣದ್ವೈಪಾಯನೋಽಬ್ರವೀತ್ ॥೧॥

ವೈಶಂಪಾಯನರು – ಜನಮೇಜಯರಾಜನೇ ! ನಾರದರು ವಿವರವಾಗಿ ಇಷ್ಟು ಹೇಳಿದರೂ ಕೂಡ ಯುಧಿಷ್ಠಿರನ ದುಃಖವು ಶಮನವಾಗಲಿಲ್ಲ. ಮೌನವಾಗಿಯೇ ಕುಳಿತುಬಿಟ್ಟನು. ಆಗ ಎಲ್ಲ ಧರ್ಮಗಳ ಮರ್ಮವನ್ನು ಪೂರ್ಣವಾಗಿ ಅರಿತ ಕೃಷ್ಣದ್ವೈಪಾಯನರು ರಾಜನಾದ ಧರ್ಮರಾಜನನ್ನು ಕುರಿತು ಹೀಗೆ ಉಪದೇಶಿಸಲು ಪ್ರಾರಂಭ ಮಾಡುತ್ತಾರೆ.

ಪ್ರಜಾನಾಂ ಪಾಲನಂ ಧರ್ಮೋ ರಾಜ್ಞಾಂ ರಾಜೀವಲೋಚನ ।
ಧರ್ಮಃ ಪ್ರಮಾಣಂ ಲೋಕಸ್ಯ ನಿತ್ಯಂ ಧರ್ಮಾನುವರ್ತನಮ್ ॥೨॥

ರಾಜೀವಲೋಚನನೇ! ರಾಜರಿಗೆ ಪ್ರಜೆಗಳನ್ನು ಪರಿಪಾಲನೆ ಮಾಡುವುದೇ

ಪರಮಧರ್ಮವಾಗಿದೆ. ನಿರಂತರ ಧರ್ಮವನ್ನು ಅನುಸರಿಸುವವರಿಗೆ ಧರ್ಮವೇ ಪ್ರಮಾಣವಾಗಿರುತ್ತದೆ.

ಅನುತಿಷ್ಠಸ್ವ ವೈ ರಾಜನ್ ಪಿತೃಪೈತಾಮಹಂ ಪದಮ್ ।
ಬ್ರಾಹ್ಮಣೇಷು ಚ ಯೋ ಧರ್ಮಃ ಸ ನಿತೊಯೇ ವೇದನಿಶ್ಚಿತಃ ॥೩॥

ರಾಜನೇ! ನೀನು ಧರ್ಮಮಾರ್ಗದಲ್ಲಿಯೇ ಮುನ್ನಡೆಯಬೇಕು. ನಿನ್ನ ತಂದೆ, ತಾತಂದಿರ ಮಾರ್ಗವನ್ನೇ ನೀನು ಹಿಂಬಾಲಿಸಬೇಕು. ಅವರೆಲ್ಲರೂ ಧರ್ಮಕ್ಕೆ ಅನುಸಾರಿಯಾಗಿ ರಾಜ್ಯವನ್ನು ಪರಿಪಾಲನೆ ಮಾಡುತ್ತಿದ್ದರು. ಅದರಂತೆ ನೀನೂ ಕೂಡ ಈ ರಾಜ್ಯವನ್ನು ಪರಿಪಾಲನೆ ಮಾಡು. ಬ್ರಾಹ್ಮಣನಿಗೆ ತಪಸ್ಸನ್ನು ಮಾಡುವುದು ಧರ್ಮವಾಗಿದೆ. ಇದು ಶಾಶ್ವತವಾಗಿ ಪ್ರಮಾಣಭೂತವಾದ ವೇದಗಳಿಂದ ನಿರ್ಧರಿಸಲ್ಪಟ್ಟಿದೆ.

ತತ್ ಪ್ರಮಾಣಂ ಪ್ರಮಾಣಾನಾಂ ಶಾಶ್ವತಂ ಭರತರ್ಷಭ ।
ತಸ್ಯ ಧರ್ಮಸ್ಯ ಕೃತ್ಸ್ನಸ್ಯ ಕ್ಷತ್ರಿಯಃ ಪರಿರಕ್ಷಿತಾಃ ॥೪॥

ಬ್ರಾಹ್ಮಣ ಮೊದಲಾದ ಎಲ್ಲಾ ವರ್ಣದವರ ಧರ್ಮಗಳಿಗೆ ಕ್ಷತ್ರಿಯರಾದ ರಾಜರೇ ಪರಿರಕ್ಷಕನು.

ತಥಾ ಯಃ ಪ್ರತಿಹಂತ್ಯಸ್ಯ ಶಾಸನಂ ವಿಷಯೇ ನರಃ ।
ಸ ಬಾಹುಭ್ಯಾಂ ವಿನಿಗ್ರಾಹ್ಯೋ ಲೋಕಯಾತ್ರಾವಿಘಾತಕಃ ॥೫॥

ಯಾವ ಕ್ಷತ್ರಿಯನು ವಿಷಯಲೋಲುಪನಾಗಿ ಧರ್ಮಕ್ಕೆ ವಿರುದ್ಧವಾಗಿ ನಡೆಯುತ್ತಾನೋ, ಅವನು ಲೋಕಯಾತ್ರೆಗೆ ವಿಘಾತಕನಾಗುತ್ತಾನೆ. ಕ್ಷತ್ರಿಯನಾದವನು ಅಂಥ ಸಮಾಜಘಾತಕನನ್ನು ತನ್ನೆರಡು ಭುಜಪರಾಕ್ರಮದಿಂದ ನಿಗ್ರಹ ಮಾಡಬೇಕು. (ಅಥವಾ ಅವನ ತೋಳುಗಳನ್ನೇ ತುಂಡರಿಸಬೇಕು.)

ಪ್ರಮಾಣಮಪ್ರಮಾಣಂ ಯಃ ಕುರ್ಯಾನ್ಮೋಹವಶಂ ಗತಃ ।
ಭೃತ್ಯೋ ವಾ ಯದಿ ವಾ ಪುತ್ರಸ್ತಪಸ್ವೀ ವಾಪಿ ಕಶ್ಚನ ॥೬॥
ಪಾಪಾನ್ ಸರ್ವೈರುಪಾಯೈಸ್ತಾನ್ ನಿಯಚ್ಛೇದ್ ಘಾತಯೇತ ವಾ॥

ಯಾವ ವ್ಯಕ್ತಿಯು ಮೋಹಪಾಶಕ್ಕೆ ಸಿಲುಕಿ ಪ್ರಮಾಣವನ್ನು ಅಪ್ರಮಾಣವನ್ನಾಗಿ ಮಾಡುತ್ತಾನೋ, ಅಂಥವನು ಭೃತ್ಯನಾಗಿರಲಿ, ಪುತ್ರನಾಗಿರಲಿ, ತಪಸ್ವಿಯಾಗಿರಲಿ ಅಥವಾ ಬೇರೆ ಯಾರೇ ಆಗಿರಲಿ ಎಲ್ಲಾ ವಿಧವಾದ ಉಪಾಯಗಳಿಂದ ಆ ಪಾಪಿಯನ್ನು ವಿನಾಶಗೊಳಿಸಬೇಕು. ಅಥವಾ ಮತ್ತೊಬ್ಬರಿಂದಲಾದರೂ ಕೊಲ್ಲಿಸ-ಬೇಕು.

ಅತೋಽನ್ಯಥಾ ವರ್ತಮಾನೋ ರಾಜಾ ಪ್ರಾಪ್ನೋತಿ ಕಿಲ್ಬಿಷಮ್ ।
ಧರ್ಮಂ ವಿನಶ್ಯಮಾನಂ ಹಿ ಯೋ ನ ರಕ್ಷೇತ್ ಸ ಧರ್ಮಹಾ ॥೭॥

ಒಂದು ವೇಳೆ ಪಾಪಿಯಾದವನನ್ನೂ ಕೂಡ ನಿಗ್ರಹ ಮಾಡದೇ ಕ್ಷಮಿಸಿಬಿಟ್ಟರೆ, ಆ ರಾಜನೂ ಕೂಡ ಪಾಪಿಯ ಪಾಪಕ್ಕೆ ಭಾಗಿಯಾಗುತ್ತಾನೆ. ಕ್ರಮೇಣ ನಾಶ-ಹೊಂದುವ ಧರ್ಮವನ್ನು ಸಂರಕ್ಷಣೆ ಮಾಡದ ರಾಜನೂ ಕೂಡ ಧರ್ಮ-ಘಾತುಕನೇ ಆಗುತ್ತಾನೆ.

ತೇ ತ್ವಯಾ ಧರ್ಮಹಂತಾರೋ ನಿಹತಾಃ ಸಪದಾನುಗಾಃ ।
ಸ್ವಧರ್ಮೇ ವರ್ತಮಾನಸ್ತ್ವಂ ಕಿನ್ನು ಶೋಚಸಿ ಪಾಂಡವ ॥೮॥
ರಾಜಾ ಹಿ ಹನ್ಯಾದ್ ದದ್ಯಾಚ್ಚ ಪ್ರಜಾ ರಕ್ಷೇಚ್ಚ ಧರ್ಮತಃ ॥

ಯುಧಿಷ್ಠಿರನೇ! ನೀನು ಅತ್ಯಂತಯೋಗ್ಯವಾದ ಕಾರ್ಯವನ್ನು ಮಾಡಿರುವಿ. ಆ ದುರ್ಯೋಧನಾದಿಗಳು ಧರ್ಮಘಾತುಕರಾಗಿದ್ದರೂ ನೀನು ಅದನ್ನು ಸಹಕರಿಸಿದ ಅವರ ಪರಿವಾರಗಳ ಜೊತೆ ನಿಗ್ರಹ ಮಾಡಿರುವಿ. ಇದಕ್ಕೋಸ್ಕರ ಏಕೆ ದುಃಖ-ಪಡುತ್ತಿರುವಿ? ರಾಜನಾದವನು ಯುದ್ಧದಲ್ಲಿ ಶತ್ರುಗಳನ್ನು ಕೊಲ್ಲಲೇ ಬೇಕು. ಆರ್ಥಿಗಳಾದ ಪ್ರಜೆಗಳನ್ನು ಧರ್ಮದಿಂದ ಪರಿಪಾಲನೆ ಮಾಡಬೇಕು.

ಯುಧಿಷ್ಠಿರಃ

ನ ತೇಽಭಿಶಂಕೇ ವಚನಂ ಯದ್ ಬ್ರವೀಷಿ ತಪೋಧನ ।
ಅಪರೋಕ್ಷೋ ಹಿ ತೇ ಧರ್ಮಃ ಸರ್ವಧರ್ಮಭೃತಾಂ ವರ ॥೯॥

ಯುಧಿಷ್ಠಿರ – ತಪೋಧನರೇ! ತಾವು ಹೇಳುವ ಮಾತುಗಳಲ್ಲಿ ನನಗೆ ಸಂಶಯ

-ವಿಲ್ಲ. ತಾವು ಸಂಪೂರ್ಣವಾಗಿ ಧರ್ಮವನ್ನು ಅರಿತವರು. ಎಲ್ಲ ಧರ್ಮಗಳನ್ನು ಪ್ರತ್ಯಕ್ಷವಾಗಿ ಕಾಣುವವರು.

ಮಯಾ ಹ್ಯವಧ್ಯಾ ಬಹವೋ ಘಾತಿತಾ ರಾಜ್ಯಕಾರಣಾತ್ ।
ತಾನ್ಯಕಾರ್ಯಾಣಿ ಮೇ ಬ್ರಹ್ಮನ್ ದಹಂತಿ ಚ ತಪಂತಿ ಚ ॥೧೦॥

ಆದರೆ ನಾನು ಕೊಲ್ಲಬಾರದ ಅನೇಕ ರಾಜರನ್ನು ಸಂಹಾರ ಮಾಡಿಬಿಟ್ಟೆನು. ಇದುವೇ ನನ್ನ ಪರಿತಾಪಕ್ಕೆ ಕಾರಣವಾಗಿದೆ. ಅವಧ್ಯರಾದ ಅನೇಕರನ್ನು ಸಂಹಾರ ಮಾಡಿರುವುದೇ ನನ್ನ ಮನಸ್ಸನ್ನು ಸುಡುತ್ತಿದೆ. ಮತ್ತು ದಹಿಸುತ್ತಿದೆ.

ವ್ಯಾಸಃ

ಈಶ್ವರೋ ವಾ ಭವೇತ್ ಕರ್ತಾ ಪುರುಷೋ ವಾಪಿ ಭಾರತ ।
ಭದ್ರೇ ವಾ ವರ್ತತೇ ಲೋಕೇ ಕರ್ಮಜಂ ವಾ ಫಲಂ ಸ್ಮೃತಮ್॥೧೧॥

ವೇದವ್ಯಾಸದೇವರು – ಭಾರತನೇ! ನೀನು ವಿಮರ್ಶೆ ಮಾಡು. ಎಲ್ಲ ಕರ್ಮ-ಗಳನ್ನು ಮಾಡುವವನು ಈಶ್ವರನೋ? ಅಥವಾ ಮನುಷ್ಯನೋ? ಸುಖ-ದುಃಖಾದಿಗಳು ಲೋಕದಲ್ಲಿ ಹೇಗೆ ಬರುತ್ತದೆ? ಆ ಸುಖ-ದುಃಖಗಳು ಅವರವರ ಕರ್ಮದಿಂದ ಉಂಟಾಗುತ್ತವೆಯೇ? ಇದರ ಬಗ್ಗೆ ಯೋಚನೆ ಮಾಡು.

ಟಿಪ್ಪಣಿ- ಭದ್ರೇ ವಾ ವರ್ತತೇ ಲೋಕೇ ಇತ್ಯತ್ರ ವಾಪದೇನ ಅಭದ್ರೇ ವರ್ತತ ಇತ್ಯಧ್ಯಾಹಾರಣೀಯಮ್ । **ಕರ್ಮಜಮ್** ಉಭಯವಿಧಕರ್ಮಜಂ **ಫಲಂ ಸ್ಮೃತಂ** ಸ್ಮೃತಿಯುಕ್ತಮ್ ।

'ಭದ್ರೇ ವಾ ವರ್ತತೇ ಲೋಕೇ' ಎಂಬಲ್ಲಿರುವ 'ವಾ' ಪದದಿಂದ 'ಅಭದ್ರೇ ವರ್ತತೇ' ಎಂಬುದನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. **ಕರ್ಮಜಮ್** ಎಂಬುದಕ್ಕೆ ಉಭಯವಿಧವಾದ ಕರ್ಮದಿಂದ ಹುಟ್ಟಿದಎಂದರ್ಥ. **ಫಲಂ ಸ್ಮೃತಂ** ಎಂದರೆ ಸ್ಮೃತಿಯಿಂದ ಸಿದ್ಧವಾಗಿದೆ ಎಂದರ್ಥ.

ವಿವರಣೆ - ಯುಧಿಷ್ಠಿರನು ಅವಧ್ಯರಾದವರನ್ನು ವಧಿಸಿಬಿಟ್ಟೆ ಎಂದು ಹೇಳುತ್ತಿದ್ದಾನೆ. ಇದಕ್ಕೆ ವೇದವ್ಯಾಸದೇವರು ವಿಮರ್ಶಾತ್ಮಕವಾಗಿ ಉತ್ತರವನ್ನು

ನೀಡುತ್ತಿದ್ದಾರೆ. ಯುಧಿಷ್ಠಿರನೇ ! ನಿನ್ನ ಮಾತುಗಳಿಂದ ನೀನೇ ಸರ್ವಕರ್ತಾ ಎಂದು ತಿಳಿಯುತ್ತಿದೆ. ಇದು ಹೇಗೆ ಸರಿ ? ಎಂಬುದನ್ನು ವಿಮರ್ಶೆ ಮಾಡು. ಯಾವುದನ್ನು ಸುಲಭವಾಗಿ ನಿರ್ಧರಿಸಲು ಆಗುವುದಿಲ್ಲ. ಎಲ್ಲ ಶುಭಾಶುಭ ಕರ್ಮಗಳಿಗೆ ಈಶ್ವರನೇ ಪ್ರೇರಕನಾಗಿರುತ್ತಾನೆ. ಮತ್ತು ಮನುಷ್ಯನು 'ನಾನು ಕರ್ತಾ' ಎಂದಷ್ಟೇ ತಿಳಿದುಬಿಡುತ್ತಾನೆ. ವಾಸ್ತವಿಕವಾಗಿ ಮನುಷ್ಯನು ಈಶ್ವರನ ಅಧೀನವಾದ ಕರ್ತೃತ್ವ-ವನ್ನಷ್ಟೇ ಹೊಂದಿರುತ್ತಾನೆ. ಆ ಮನುಷ್ಯನ ಯೋಗ್ಯತೆ ಅವನು ಪೂರ್ವಜನ್ಮದಲ್ಲಿ ಮಾಡಿದ ಕಾರಣಗಳು ಪ್ರತಿಯೊಂದು ಕಾರ್ಯಗಳ ಹಿಂದೆ ಕಾರಣಭೂತವಾಗಿ ಇರುತ್ತವೆ. ಸುಖ-ದುಃಖಗಳೆಲ್ಲವೂ ತಮ್ಮ ಹಿಂದಿನ ಕರ್ಮದ ಅಧೀನವಾಗಿಯೇ ನಡೆಯುತ್ತದೆ. ಹೀಗಿರುವಾಗ ಎಲ್ಲವನ್ನು ನಾನೇ ಮಾಡಿಬಿಟ್ಟೆ ಎಂಬ ಕರ್ತೃತ್ವಾ-ಭಿಮಾನವನ್ನೇಕೆ ಮಾಡುತ್ತಿರುವಿ ಎಂದಭಿಪ್ರಾಯ.

ಈಶ್ವರೇಣ ನಿಯುಕ್ತಾ ಹಿ ಸಾಧ್ವಸಾಧು ಚ ಪಾರ್ಥಿವ।
ಕುರ್ವಂತಿ ಪುರುಷಾಃ ಕರ್ಮ ಫಲಮೀಶ್ವರಗಾಮಿ ತತ್ ॥೧೨॥

ಮನುಷ್ಯನಾದವನು ಈಶ್ವರನ ಪ್ರೇರಣೆಗೆ ಒಳಪಟ್ಟು ಕರ್ಮಗಳನ್ನು ನಡೆಸು-ತ್ತಾನೆ. ಜೀವನು ಮಾಡುವ ಶುಭಾಶುಭಕರ್ಮಗಳೆರಡಕ್ಕೂ ಈಶ್ವರನೇ ಮುಖ್ಯ-ಕಾರಣನು. ಆದ್ದರಿಂದ ಪುರುಷನು ಮಾಡುವ ಶುಭಾಶುಭಕರ್ಮಗಳ ಫಲವು ಈಶ್ವರನಿಗೆ ತಲಪುತ್ತದೆ.

ಟಿಪ್ಪಣಿ- ಫಲಮೀಶ್ವರಗಾಮಿ ತದ್ ಇತ್ಯತ್ರ **ಈಶ್ವರಗಾಮಿ** ಲೋಕದೃಷ್ಟ್ಯಾ ಈಶ್ವರಗಾಮಿ। ತಸ್ಯ ಚಾತಿಸಮರ್ಥತ್ವಾತ್ ನ ಫಲಭೋಕ್ತೃತೇತಿ ಭಾವಃ। ತರ್ಹಿ ನಿಷ್ಫಲಂ ಕರ್ಮೇತ್ಯತ ಆಹ - **ಅಥವಾ ಇತಿ** ॥

'ಈಶ್ವರಗಾಮಿ' ಎಂಬುದಕ್ಕೆ ಲೋಕದೃಷ್ಟಿಯಿಂದ ಈಶ್ವರನನ್ನು ಹೊಂದುತ್ತವೆ ಎಂದಷ್ಟೇ ಅರ್ಥ. ಈಶ್ವರನು ಅತ್ಯಂತ ಸಮರ್ಥನಾದ್ದರಿಂದ ಯಾವುದೇ ಫಲಭೋಕ್ತೃತ್ವ ಅವನಲ್ಲಿ ಬರುವುದಿಲ್ಲ. ಹಾಗಾದರೆ ಎಲ್ಲ ಕರ್ಮಗಳು ನಿಷ್ಫಲವಾಗುತ್ತವಲ್ಲವೇ ? ಎಂಬ ಪ್ರಶ್ನೆಗೆ ಮುಂದಿನ ಅಥವಾ ಎಂಬ ಶ್ಲೋಕವು ಉತ್ತರಿಸುತ್ತಿದೆ.

ಟಿಪ್ಪಣಿ - ತೇನವಿನಾ ತೃಣಮಪಿ ಅಚಲತಿ' ಈಶ್ವರನಿಲ್ಲದೇ ಹುಲ್ಲೂ ಸಹ ಚಲಿಸುವುದಿಲ್ಲ ಎಂಬ ಮಾತಿನಂತೆ ಪ್ರತಿಯೊಬ್ಬರೂ ಮಾಡುವ ಕಾರ್ಯಗಳಿಗೂ

ಈಶ್ವರನೇ ಪ್ರೇರಕನಾಗಿರುತ್ತಾನೆ. ಆದ್ದರಿಂದ ಅದರ ಫಲವೂ ಕೂಡ ಈಶ್ವರನನ್ನೇ ಹೊಂದುತ್ತದೆ. ಇದರ ಅಭಿಪ್ರಾಯ ನಾವು ಮಾಡುವ ಕೆಟ್ಟಕೆಲಸ ಮತ್ತು ಒಳ್ಳೆಯ ಕೆಲಸದಿಂದ ಈಶ್ವರನಿಗೆ ದುಃಖವಾಗುತ್ತದೆ ಅಥವಾ ಸುಖವಾಗುತ್ತದೆಂದರ್ಥವಲ್ಲ. ಸರ್ವತಂತ್ರಸ್ವತಂತ್ರನಾದ್ದರಿಂದ ಪ್ರಾಕೃತವಾದ ಸುಖ-ದುಃಖಗಳೆರಡೂ ಅವನಿಗೆ ತಟ್ಟುವುದೇ ಇಲ್ಲ. ಆದ್ದರಿಂದ ಎಲ್ಲವೂ ಈಶ್ವರನನ್ನು ಸೇರುವಂತೆ ಇವುಗಳೂ ಕೂಡ ಈಶ್ವರನನ್ನು ಸೇರುತ್ತವೆ ಎಂದರೆ ಅವನ ಅಧೀನವಾಗಿ ಇರುತ್ತವೆ ಎಂದಷ್ಟೇ ಅಭಿಪ್ರಾಯವನ್ನು ವಿವಕ್ಷಿಸಬೇಕು.

ಯಥಾ ಹಿ ಪುರುಷಶ್ಛಿಂದ್ಯಾದ್ ವೃಕ್ಷಂ ಪರಶುನಾ ವನೇ।
ಛೇತ್ತುರೇವ ಭವೇತ್ ಪಾಪಂ ಪರಶೋರ್ನ ಕಥಂಚನ ॥೧೩॥

ಒಬ್ಬ ಮನುಷ್ಯನು ಕೊಡಲಿಯಿಂದ ಮರವನ್ನು ಕಡಿದಾಗ ಅದರಿಂದ ಬರುವ ಪಾಪವು ಕಡಿಯುವ ವ್ಯಕ್ತಿಗೆ ಬರುತ್ತದೆ ಹೊರತು, ಕೊಡಲಿಗೆ ಬರುವುದಿಲ್ಲ.

ಅಥವಾ ತದುಪಾದಾನಾತ್ ಪ್ರಾಪ್ನುಯುಃ ಕರ್ಮಣಃ ಫಲಮ್।
ದಂಡಶಸ್ತ್ರಕೃತಂ ಪಾಪಂ ಪುರುಷೇ ತನ್ನ ವಿದ್ಯತೇ ॥೧೪॥

ಕೊಡಲಿಯು ಛೇದನಕ್ರಿಯೆಗೆ ಉಪಾದಾನ ಕಾರಣವಾಗಿದೆ. ಅಚೇತನವಾದ ಕೊಡಲಿಗೆ ಪಾಪವು ಬರಲು ಸಾಧ್ಯವಿಲ್ಲವೆಂದು ಹೇಳಿದರೆ, ಆ ಕೊಡಲಿಯನ್ನು ನಿರ್ಮಾಣ ಮಾಡಿದ ವ್ಯಕ್ತಿಗೆ ಪಾಪವು ಕತ್ತರಿಸುವವನಿಗೆ ಬರುತ್ತದೆ, ಕೊಡಲಿಗೆ ಬರುವುದಿಲ್ಲ.

ಟಿಪ್ಪಣಿ - ಒಬ್ಬ ಪುರುಷನು ಮರವನ್ನು ಕಡಿಯುತ್ತಾನೆ. ಆ ವೃಕ್ಷವನ್ನು ಕಡಿಯುವುದರಿಂದ ಅವನಿಗೆ ಪಾಪವು ಬರುತ್ತದೆ. ಇಂಥ ಸಂದರ್ಭದಲ್ಲಿ ಕೊಡಲಿಗೆ ಪಾಪವು ಸರ್ವಥಾ ಬರುವುದಿಲ್ಲ. ಕೊಡಲಿಯಿಂದ ವೃಕ್ಷವನ್ನು ಕತ್ತರಿಸುವವನಿಗಷ್ಟೇ ಪಾಪವು ಬರುತ್ತದೆ. ಕೊಡಲಿಯು ಇಲ್ಲಿಯ ಮರವನ್ನು ಕಡಿದಿದ್ದರೂ ಕೂಡ ಅದು ಉಪಾದಾನಕಾರಣವಾಗಿರುವುದರಿಂದ, ಮತ್ತು ಜಡವಾಗಿರುವುದರಿಂದ ತಾನೇ ಕತ್ತರಿಸಿದೆ ಎಂದು ಅದು ಹೇಳಿಕೊಳ್ಳುವುದಿಲ್ಲ. ಪುರುಷನಾದವನು ಕೊಡಲಿಯ ಪಾತ್ರವನ್ನು ಹೇಳದೇ ತಾನೇ ಸಂಪೂರ್ಣವಾಗಿ ಕತ್ತರಿಸಿಬಿಟ್ಟೆ ಎಂದು ಹೇಳಿ-

ಕೊಳ್ಳುತ್ತಾನೆ. ಆದ್ದರಿಂದ ಪಾಪಭಾಗಿಯಾಗುತ್ತಾನೆ. ಅದರಂತೆ ಇಲ್ಲಿಯೂ ಕೂಡ ಈಶ್ವರಪ್ರೇರಣೆಯನ್ನು ಮರೆತು ಎಲ್ಲವನ್ನೂ ತಾನೇ ಮಾಡಿದೆ ಎಂದು ಹೇಳಿದರೆ ಎಲ್ಲಾ ಫಲಗಳಿಗೆ ಆ ಜೀವನು ಭಾಗಿಯಾಗುತ್ತಾನೆ.

ಟಿಪ್ಪಣಿ - ತದುಪಾದಾನಾದ್ ಇತ್ಯತ್ರ ತೇನ ಈಶ್ವರೇಣ ಉಪಾದಾನಾತ್ ಜಡವಿಲಕ್ಷಣಜೀವಸ್ಯ ಈಷತ್ಕರ್ತೃತ್ವಸಂಭವೇನ ಫಲೋಪಾದಾನಾತ್ ।

'ತದುಪಾದಾನಾದ್' ಎಂಬಲ್ಲಿ ಆ ಫಲಕ್ಕೆ ಜೀವನು ಉಪಾದಾನನಾಗಿದ್ದಾನೆ. ಜಡವಿಲಕ್ಷಣನಾಗಿರುವುದರಿಂದ ಈಷತ್ಕರ್ತೃತ್ವವು ಜೀವನಿಗೆ ಬರುತ್ತದೆ ಎಂದಭಿಪ್ರಾಯ.

ನ ಚೈತದಿಷ್ಟಂ ಕೌಂತೇಯ ಯದನ್ಯೇನ ಫಲಂ ಕೃತಮ್ ।
ಪ್ರಾಪ್ನುಯಾದಿತಿ ತಸ್ಮಾಚ್ಚ ಈಶ್ವರೇ ತನ್ನಿವೇಶಯ ॥೧೫॥

ಒಬ್ಬನು ಮಾಡಿದ ಕರ್ಮಕ್ಕೆ ಮತ್ತೊಬ್ಬನು ಭಾಗಿಯಾಗುತ್ತಾನೆ ಎಂದು ಹೇಳುವುದೂ ಕೂಡ ಸಮ್ಮತವಲ್ಲ. ಆದ್ದರಿಂದ ನೀನೂ ಸಹ ನಿನ್ನನ್ನು ಅಚೇತನ ಸ್ಥಾನದಲ್ಲಿ ತಿಳಿದು ಕರ್ಮಫಲವನ್ನು ಈಶ್ವರನಿಗೆ ಒಪ್ಪಿಸು.

ಟಿಪ್ಪಣಿ - ಯದ್ಯನ್ಯೇನ ಫಲಂ ಕೃತಮ್ ಇತ್ಯತ್ರ **ಯದಿ ಅನ್ಯೇನ ಕೃತಂ ಫಲಮ್** ಅನ್ಯಃ ಪ್ರಾಪ್ನುಯಾದಿತಿ ನೇಷ್ಟಮ್, ತರ್ಹಿ **ತತ್** ಸಾಮರ್ಥ್ಯಂ **ಈಶ್ವರೇ ನಿವೇಶಯ,** ಈಶ್ವರಸಾಮರ್ಥ್ಯಾದೇತಜ್ಜಾತಮಿತಿ ಸ್ಮರ।

'ಯದಿ ಅನ್ಯೇನ ಕೃತಂ ಫಲಮ್ ಅನ್ಯಃ ಪ್ರಾಪ್ನೆ' ಯುದ್ದದಲ್ಲಿ ಶತ್ರುಗಳನ್ನು ನಿಗ್ರಹ ಮಾಡಿದ ಸಾಮರ್ಥ್ಯವು ಈಶ್ವರಾಧೀನವೆಂದು ತಿಳಿದುಬಿಡು.

ಅಥಾಪಿ ಪುರುಷಃ ಕರ್ತಾ ಕರ್ಮಣೋಃ ಶುಭಪಾಪಯೋಃ ।
ನ ಪರಂ ವಿದ್ಯತೇ ತಸ್ಮಾದೇವಮನ್ಯಚ್ಛುಭಂ ಕುರು ॥೧೬॥

ಒಂದುವೇಳೆ ಪುರುಷನು ಈಶ್ವರಾಧೀನವಾದ ಕರ್ತೃತ್ವವನ್ನು ಹೊಂದಿದ್ದಾನೆಂದು ಒಪ್ಪುವುದಾದರೆ ಪುಣ್ಯಕರ್ಮ ಹಾಗೂ ಪಾಪಕರ್ಮಗಳಿಗೆ ಪುರುಷನು ಕಾರಣನಾಗುತ್ತಾನೆ. ಈಶ್ವರದತ್ತವಾದ ಕರ್ತೃತ್ವಕ್ಕಿಂತ ಮತ್ತೊಂದು ಕಾರಣವಿಲ್ಲದ್ದರಿಂದ ನೀನು ಶುಭಕರ್ಮವನ್ನೇ ಆಚರಿಸಬೇಕು.

ಟಿಪ್ಪಣಿ-ಅಥಾಪಿ ಪುರುಷಃ ಕರ್ತಾ ಇತ್ಯತ್ರ **ಅಥಾಪಿ** ಈಶ್ವರಸ್ಯ ಸರ್ವಕರ್ತೃತ್ವೇऽಪಿ। **ತಸ್ಮಾದ್** ಈಶ್ವರದತ್ತಕರ್ತೃತ್ವಾತ್ । 'ಅಥಾಪಿ' ಈಶ್ವರನು ಸರ್ವಕರ್ತೃವಾದರೂ ಕೂಡ, 'ತಸ್ಮಾದ್' ಈಶ್ವರನಿಂದ ಕೊಡಲ್ಪಟ್ಟ ಕರ್ತೃತ್ವ ಇರುವುದರಿಂದ ಎಂದರ್ಥ.

ವಿವರಣೆ - ಈ ಶ್ಲೋಕಕ್ಕೆ ಅನೇಕ ರೀತಿಯಲ್ಲಿ ವ್ಯಾಖ್ಯಾನಗಳನ್ನು ಮಾಡುತ್ತಾರೆ. ಶುಭಾಶುಭಕರ್ಮಗಳಿಗೆ ದೈವವು ಕಾರಣವೇ ಅಲ್ಲ ಎಂದು ನೀನು ತಿಳಿಯುವುದಾದರೆ, ಈಶ್ವರನು ಕೇವಲ ಸಾಕ್ಷಿಮಾತ್ರ ಆಗುತ್ತಾನೆ. ಆದ್ದರಿಂದ ನೀನು ದುಃಖಿಸಲು ಕಾರಣವಿಲ್ಲವೆಂದು ಆಪಾತತಃ ಇದರ ಅರ್ಥವು ತೋರುತ್ತದೆ. ಆದರೆ ವೇದವ್ಯಾಸದೇವರು ಹೀಗೆ ಈಶ್ವರನಲ್ಲಿ ಸರ್ವತಂತ್ರ ಕರ್ತೃತ್ವವನ್ನು ನಿರಾಕರಣೆ ಮಾಡಿ ಉತ್ತರಿಸಲು ಸಾಧ್ಯವಿಲ್ಲ. ಆದ್ದರಿಂದ ಈಶ್ವರನು ಸ್ವತಂತ್ರ ಕರ್ತೃವಾಗಿದ್ದಾನೆ. ಆದರೂ ಕೂಡ ಜೀವನಲ್ಲಿ ಅಸ್ವತಂತ್ರ ಕರ್ತೃತ್ವವನ್ನು ಒಪ್ಪಿ ನೀನು ಮಾತನಾಡುವುದಾದರೆ ಎಂಬಭಿಪ್ರಾಯವನ್ನೇ ಅಥಾಪಿ ಎಂಬ ಪದಕ್ಕೆ ವಿವಕ್ಷಿಸಬೇಕು. ಇದನ್ನು ಲಕ್ಷ್ಮಾಂಲಂಕಾರದಲ್ಲಿ ಸ್ಪಷ್ಟಪಡಿಸಿದ್ದಾರೆ.

ನಹಿ ಕಶ್ಚಿತ್ ಕ್ವಚಿದ್ ರಾಜನ್ ದಿಷ್ಟಂ ಪ್ರತಿನಿವರ್ತತೇ।
ದಂಡಶಸ್ತ್ರಕೃತಂ ಪಾಪಂ ಪುರುಷೇ ತನ್ನ ವಿದ್ಯತೇ ॥೧೭॥

ಯಾರೇ ಆಗಲಿ, ಎಲ್ಲಿಯೇ ಆಗಲಿ ವಿಧಿನಿಯಮವನ್ನು ಉಲ್ಲಂಘಿಸುವುದಿಲ್ಲವೋ, ಅವನಿಗೆ ಯಾವುದೇ ಪಾಪಗಳು ಬರುವುದಿಲ್ಲ. ಕ್ಷತ್ರಿಯನಾದವನು ದಂಡಧಾರಣನಿಯಮವನ್ನು ಅನುಸರಿಸಿದಾಗ ಅವನಿಗೆ ಯಾವುದೇ ಪಾಪವು ತಟ್ಟುವುದಿಲ್ಲ.

ವಿವರಣೆ - ಕೊಡಲಿಯು ವೃಕ್ಷವನ್ನು ಕತ್ತರಿಸುತ್ತದೆ. ಕತ್ತರಿಸಿದ ಪಾಪ ಕೊಡಲಿಗೆ ಬರುವುದಿಲ್ಲ. ಅಥವಾ ಕೊಡಲಿಯನ್ನು ಸ್ವಧರ್ಮದಂತೆ ತಯಾರು ಮಾಡಿದ ವ್ಯಕ್ತಿಗೂ ಕೂಡ ಪಾಪವು ಬರುವುದಿಲ್ಲ. ಅದರಂತೆ ಯುದ್ಧದಲ್ಲಿ ನೀನು ಅನೇಕ ಶತ್ರುಗಳ ಸಂಹಾರವನ್ನು ಮಾಡಿರುವಿ. ಇದರಿಂದ ಯಾವುದೇ ಪಾಪವು ನಿನಗೆ ಬರುವುದಿಲ್ಲ.

ಯದಿ ವಾ ಮನ್ಯಸೇ ರಾಜನ್ ಹತೇ ಲೋಕಂ (ಸರ್ವಂ) ಪ್ರತಿಷ್ಠಿತಮ್ ।
ಏವಮಪ್ಯಶುಭಂ ಕರ್ಮ ನ ಭೂತಂ ನ ಭವಿಷ್ಯತಿ ॥೧೮॥

ಒಂದು ವೇಳೆ ನೀನು ಲೋಕವು ಆಯಾ ಜೀವರ ಸ್ವಭಾವದಲ್ಲಿ ನೆಲೆನಿಂತಿದೆ ಎಂದು ಭಾವಿಸುವುದಾದರೆ, ಅದಕ್ಕಾಗಿ ಏಕೆ ಚಿಂತಿಸುವಿ ? ದುಷ್ಟರಾದ ಶತ್ರುಗಳ ಸಂಹಾರವನ್ನು ನೀನು ಮಾಡಿದ್ದರೂ ಕೂಡ ನಿನ್ನಲ್ಲಿ ಅಶುಭಕರ್ಮವು ಇದುವರೆಗೂ ನಡೆದಿಲ್ಲ. ಮುಂದೆ ನಡೆಯಲೂ ಕೂಡ ಸಾಧ್ಯವಿಲ್ಲ.

ಟಿಪ್ಪಣಿ - ಹತೇ ಸರ್ವಂ ಪ್ರತಿಷ್ಠಿತಮ್ ಏವಮಪಿ ಇತ್ಯತ್ರ ಹತೇ ತ್ರಿವಿಧಜೀವಾನಾಂ ಯೋಗ್ಯತಾಲಕ್ಷಣಸ್ವಭಾವೇ। ಏವಮಪಿ ಶಿಕ್ಷಾಯೋಗ್ಯಾನಾಂ ದುಷ್ಟಾನಾಂ ಶಿಕ್ಷಣಾದ್ ಅಶುಭಂ ಕರ್ಮ ತ್ವಯಿ ನ ಭೂತಮ್, ನ ಭವಿಷ್ಯತಿ।

ಹತೇ = ತ್ರಿವಿಧಜೀವರ ಯೋಗ್ಯತಾ ಎಂಬ ಸ್ವಭಾವದಲ್ಲಿ ಎಂದರ್ಥ. ಶಿಕ್ಷೆಗೆ ಯೋಗ್ಯರಾದ ದುಷ್ಟರನ್ನು ಶಿಕ್ಷಣೆ ಮಾಡುವುದರಿಂದ ಅಶುಭಕರ್ಮವು ನಿನ್ನಲ್ಲಿ ಹಿಂದೆಯು ಅಂಟಲ್ಲ. ಮುಂದೆಯೂ ಕೂಡ ಅಂಟಲು ಸಾಧ್ಯವಿಲ್ಲ ಎಂದಭಿಪ್ರಾಯ.

ವಿವರಣೆ - ಈ ಶ್ಲೋಕವನ್ನು ಕೂಡ ಕೆಲವರು ಎಲ್ಲವೂ ಆಕಸ್ಮಿಕವಾಗಿಯೇ ನಡೆಯುತ್ತದೆ. ನೀನೇಕೆ ಚಿಂತಿಸುತ್ತೀ ಎಂಬುದಾಗಿ ದೇವರನ್ನು ಒಪ್ಪದಂತೆ ವ್ಯಾಖ್ಯಾನ ಮಾಡುತ್ತಾರೆ. ಇದು ಸರಿಯಲ್ಲ. ಪ್ರತಿಯೊಂದು ಕರ್ಮಗಳಿಗೆ ಆಯಾ ಜೀವರ ಯೋಗ್ಯತೆಯೂ ಕೂಡ ಒಂದು ಕಾರಣವಾಗಿರುತ್ತದೆ. ಅವರವರ ಯೋಗ್ಯತೆಗೆ ತಕ್ಕಂತೆ ಪುಣ್ಯಪಾಪಕರ್ಮಗಳು ಬರುತ್ತವೆ ಎನ್ನುವುದಾದರೆ, ನೀನು ಯಾವುದೇ ಅಶುಭಕರ್ಮವನ್ನು ಮಾಡಿದಂತಾಗಲಿಲ್ಲ. ಮುಂದೆಯೂ ಕೂಡ ಮಾಡಲು ಸಾಧ್ಯವಿಲ್ಲ. ಎಂಬುದಾಗಿ ವೇದವ್ಯಾಸದೇವರು ಸಾಂತ್ವನ ಮಾಡುತ್ತಿದ್ದಾರೆಂದು ಭಾವಿಸಬೇಕು.

ಅಥಾಭಿಪತ್ತಿರ್ಲೋಕಸ್ಯ ಕರ್ತವ್ಯಾ ಶುಭಪಾಪಯೋಃ।
ಅಭಿಪನ್ನಮಿದಂ ಲೋಕೇ ರಾಜ್ಞಾಮುದ್ಯತದಂಡನಮ್ ॥೧೯॥

ಅಥವಾ ಪುಣ್ಯ-ಪಾಪಗಳನ್ನು ಲೋಕದ ಮರ್ಯಾದೆಗೆ ಅನುಗುಣವಾಗಿ ತಿಳಿಯಬೇಕೆಂದು ನೀನು ಹೇಳುವುದಾದರೆ, ರಾಜರು ತಪ್ಪು ಮಾಡಿದವರಿಗೆ ಶಿಕ್ಷಿಸುವುದು ಲೋಕಮರ್ಯಾದೆಯೇ ಆಗಿದೆ. ಆದ್ದರಿಂದಲೂ ನೀನು ಚಿಂತಿಸಲು ಕಾರಣವಿಲ್ಲ. ಸಮಸ್ತಲೋಕವು ನೀನು ಮಾಡಿದ ದಂಡಧಾರಣವನ್ನು ಪ್ರಶಂಸೆ ಮಾಡುತ್ತದೆ.

ವಿವರಣೆ - ಲೋಕದಲ್ಲಿ ತಪ್ಪು ಮಾಡಿದವರಿಗೆ, ಅಧಾರ್ಮಿಕರಿಗೆ, ಶಿಕ್ಷೆಯನ್ನು ನೀಡಬೇಕೆಂದು ಎಲ್ಲರೂ ಹೇಳುತ್ತಾರೆ. ಆದ್ದರಿಂದ ದುರ್ಮಾರ್ಗಿಗಳನ್ನು ದಂಡಿಸಿದ್ದಕ್ಕೆ ನೀನು ವ್ಯಥೆ ಪಡಬೇಕಾಗಿಲ್ಲ ಎಂದಭಿಪ್ರಾಯ.

ಅದ್ಯಾಪಿ ಲೋಕೇ ಕರ್ಮಾಣಿ ಸಮಾವರ್ತಂತ ಭಾರತ।
ಶುಭಾಶುಭಫಲಂ ಚೇಮೇ ಪ್ರಾಪ್ನುವಂತೀತಿ ಮೇ ಮತಿಃ ॥೨೦॥

ಇಂದೂ ಕೂಡ ಲೋಕದಲ್ಲಿ ಶುಭಾಶುಭಕರ್ಮಗಳನ್ನು ಪ್ರತಿಯೊಬ್ಬರೂ ಕೂಡ ಆಚರಿಸುತ್ತಲೇ ಇದ್ದಾರೆ. ದಂಡಧಾರಣವಿದ್ದರೂ ಕೂಡ ಶುಭಾಶುಭಫಲವನ್ನು ಪ್ರಜೆಗಳು ಹೊಂದುತ್ತಲೇ ಇದ್ದಾರೆ ಎಂಬುದು ನನ್ನ ಅಭಿಪ್ರಾಯ.

ಏವಂ ಸತ್ಯಂ ಶುಭಾದೇಶಂ ಕರ್ಮಣಸ್ತತ್ಫಲಂ ಧ್ರುವಮ್ ।
ತ್ಯಜ ತದ್ ರಾಜಶಾರ್ದೂಲ ಮೈವಂ ಶೋಕೇ ಮನಃ ಕೃಥಾಃ ॥೨೧॥

ಆದ್ದರಿಂದ ಇಷ್ಟು ನಿನಗೆ ಸತ್ಯವನ್ನು ಹೇಳುತ್ತೇನೆ. ನೀನು ಶುಭವನ್ನೇ ಆಚರಣೆ ಮಾಡು. ಇದರಿಂದ ನಿನಗೆ ನಿಶ್ಚಯವಾಗಿ ಶುಭಫಲವು ದೊರಕುತ್ತದೆ. ದುಷ್ಕರ್ಮ-ಗಳನ್ನು ಬಿಟ್ಟುಬಿಡು. ಆದ್ದರಿಂದ ಮನಸ್ಸಿನಲ್ಲಿ ಯಾವುದೇ ದುಃಖವನ್ನು ಅನು-ಭವಿಸಬೇಡ.

ಸ್ವಧರ್ಮೇ ವರ್ತಮಾನಸ್ಯ ಸಾಪವಾದೇಽಪಿ ಭಾರತ।
ಏವಮಾತ್ಮಪರಿತ್ಯಾಗಸ್ತವ ರಾಜನ್ನ ಶೋಭನಃ ॥೨೨॥

ರಾಜನೇ! ಯಾರು ತನ್ನ ಧರ್ಮವನ್ನು ಅಚ್ಚುಕಟ್ಟಾಗಿ ಪಾಲನೆ ಮಾಡುತ್ತಿರು-ತ್ತಾನೋ, ಅಂಥವನು ಅಪವಾದ ಬಂದರೂ ಕೂಡ ಸ್ವಧರ್ಮವನ್ನು ಬಿಡಬಾರದು. ಆದ್ದರಿಂದ ಶತ್ರುನಿಗ್ರಹವನ್ನು ಮಾಡಿ ಸ್ವಧರ್ಮವನ್ನು ಪಾಲನೆ ಮಾಡಿದ ನೀನು ಆತ್ಮವನ್ನು ಪರಿತ್ಯಾಗ ಮಾಡುತ್ತೇನೆಂದು ಹೇಳುವುದು ಕ್ಷೇಮಕರವಲ್ಲ.

ವಿಹಿತಾನಿ ಹಿ ಕೌಂತೇಯ ಪ್ರಾಯಶ್ಚಿತ್ತಾನಿ ಕರ್ಮಿಣಾಮ್ ।
ಶರೀರವಾಂಸ್ತಾನಿ ಕುರ್ಯಾದಶರೀರಃ ಪರಾಭವೇತ್ ॥೨೩॥

ಕುಂತಿಪುತ್ರನೇ! ಸ್ವಧರ್ಮಗಳನ್ನು ಆಚರಣೆ ಮಾಡಿದಾಗ ಕೆಲವೊಮ್ಮೆ ದುಷ್ಕರ್ಮಗಳು ನಡೆದರೆ ಅದಕ್ಕೆ ಅನೇಕ ಪ್ರಾಯಶ್ಚಿತ್ತಗಳನ್ನು ಧರ್ಮಶಾಸ್ತ್ರಗಳು ಹೇಳುತ್ತವೆ. ಅಂತಹ ದುಷ್ಕರ್ಮವನ್ನು ಮಾಡಿದ ಕಳಂಕಗಳನ್ನು ಪ್ರಾಯಶ್ಚಿತ್ತಗಳನ್ನು ಆಚರಿಸುವ ಮೂಲಕ ಶುದ್ಧನಾಗಬೇಕು. ಅದನ್ನು ಬಿಟ್ಟು ಶರೀರವನ್ನು ಪರಿತ್ಯಾಗ ಮಾಡಿದರೆ, ಅಧೋಗತಿಯನ್ನು ಹೊಂದುತ್ತಾನೆ.

ವಿವರಣೆ - ಕೆಲವೊಬ್ಬರು ಪಾಪಗಳನ್ನು ಮಾಡಿದ್ದೇವೆಂದು ಭಾವಿಸಿ, ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾರೆ. ಇಂಥವರು ಮತ್ತಷ್ಟು ಅನರ್ಥಗಳನ್ನೇ ಎದುರಿಸಬೇಕಾಗುತ್ತದೆ. ಶರೀರವನ್ನು ಸುರಕ್ಷಿತವಾಗಿಟ್ಟುಕೊಂಡು, ಶಾಸ್ತ್ರದಲ್ಲಿ ಹೇಳಿದ ಪ್ರಕಾರ ಪ್ರಾಯಶ್ಚಿತ್ತಾದಿಗಳನ್ನು ಮಾಡಿಕೊಂಡು, ಆ ಪಾಪಗಳನ್ನು ಪರಿಹಾರ ಮಾಡಿಕೊಳ್ಳಲು ಅವಕಾಶವಿದೆ. ಪ್ರಾಣವನ್ನು ಪರಿತ್ಯಾಗ ಮಾಡಿದರೆ ದೇಹಾಂತರದಲ್ಲಿ ಮಹಾದುಃಖವನ್ನು ಅನುಭವಿಸಬೇಕಾಗುತ್ತದೆ.

ಯುಧಿಷ್ಠಿರನೇ! ನೀನು ಸರ್ವಥಾ ಯಾವುದೇ ಪಾಪವನ್ನು ಆಚರಿಸಿಲ್ಲ. ಒಂದು ವೇಳೆ ಪಾಪಕರ್ಮವನ್ನು ಮಾಡಿದ್ದೇನೆಂದು ನಿನಗೆ ಅನ್ನಿಸಿದರೆ ಅದಕ್ಕೆ ಪ್ರಾಯಶ್ಚಿತ್ತಗಳನ್ನು ಮಾಡಿಕೋ. ಇದನ್ನು ಬಿಟ್ಟು, ರಾಜ್ಯವನ್ನು ಪರಿತ್ಯಾಗ ಮಾಡುವುದು ಮತ್ತಷ್ಟು ಅಧರ್ಮಗಳನ್ನು ಆಚರಣೆ ಮಾಡುವುದು, ಪ್ರಾಣ-ತ್ಯಾಗವನ್ನು ಮಾಡುವುದು, ಇದೆಲ್ಲವೂ ಕೂಡ ಮುಂದೆ ನಿನಗೆ ಮಹಾ ಅನರ್ಥ-ಗಳನ್ನೇ ನೀಡುತ್ತವೆ ಎಂದಭಿಪ್ರಾಯ.

ತದ್ ರಾಜನ್ ಜೀವಮಾನಸ್ತ್ವಂ ಪ್ರಾಯಶ್ಚಿತ್ತಂ ಚರಿಷ್ಯಸಿ।
ಪ್ರಾಯಶ್ಚಿತ್ತಮಕೃತ್ವಾತು ಪ್ರೇತ್ಯ ತಪ್ತಾಸಿ ಭಾರತ ॥೨೪॥

ರಾಜೇಂದ್ರನೇ! ನೀನು ಬದುಕಿ, ಪ್ರಾಯಶ್ಚಿತ್ತವನ್ನು ಮಾಡಿಕೊಂಡು, ಶುದ್ಧನಾಗು. ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದೇ ಪ್ರಾಣವನ್ನು ಪರಿತ್ಯಾಗ ಮಾಡಿದರೆ, ಮುಂದೆ ದೇಹತ್ಯಾಗ ಮಾಡಿದ ಮೇಲೆ ಪಶ್ಚಾತ್ತಾಪ ಪಡಬೇಕಾಗುತ್ತದೆ.

ಯುಧಿಷ್ಠಿರಃ

ಹತಾಃ ಪುತ್ರಾಶ್ಚ ಪೌತ್ರಾಶ್ಚ ಭ್ರಾತರಃ ಪಿತರಸ್ತಥಾ।
ಶ್ವಶುರಾ ಗುರವಶ್ಚೈವ ಮಾತುಲಾಃ ಸಪಿತಾಮಹಾಃ ॥೨೫॥

ಯುಧಿಷ್ಠಿರ – ಪಿತಾಮಹರೇ ! ನಾನು ರಾಜ್ಯದ ಆಸೆಯಿಂದ ವಿವೇಚನೆಯಿಲ್ಲದೇ ಅನೇಕರ ಸಾವಿಗೆ ಕಾರಣನಾದೆನು. ಮಕ್ಕಳು, ಮೊಮ್ಮಕ್ಕಳು, ಸಹೋದರರು, ಪಿತೃಗಳು, ಮಾವಂದಿರು, ಗುರುಗಳು, ಸೋದರಮಾವಂದಿರು, ಪಿತಾಮಹರು, ಇವರೆಲ್ಲರೂ ನನ್ನಿಂದ ಮೃತರಾದರು.

ಕ್ಷತ್ರಿಯಾಶ್ಚ ಮಹಾತ್ಮಾನಃ ಸಬಂಧಿಸುಹೃದಸ್ತಥಾ ।
ವಯಸ್ಯಾ ಜ್ಞಾತಯಶ್ಚೈವ ಭ್ರಾತರಶ್ಚ ಪಿತಾಮಹ ॥೨೬॥

ಕ್ಷತ್ರಿಯರು, ಅನೇಕ ಮಹಾತ್ಮರು, ಸಂಬಂಧಿಗಳು, ಸ್ನೇಹಿತರು, ಸುಹೃದರು, ಬಂಧುಜನರು, ಅಣ್ಣ-ತಮ್ಮಂದಿರು ಇವರೆಲ್ಲರೂ ಮೃತರಾದರು.

ಬಹವಶ್ಚ ಮನುಷ್ಯೇಂದ್ರಾ ನಾನಾದೇಶಸಮಾಗತಾಃ ।
ಘಾತಿತಾ ರಾಜ್ಯಲುಬ್ಧೇನ ಮಯೈಕೇನ ಪಿತಾಮಹ ॥೨೭॥

ಅನೇಕ ದೇಶಗಳಿಂದ ಆಗಮಿಸಿದ ಅಸಂಖ್ಯಾತರಾಜರನ್ನೆಲ್ಲ ರಾಜ್ಯವು ಸಿಗುತ್ತದೆಂಬ ಆಸೆಯಿಂದ ನಾನೇ ಕೊಲ್ಲಿಸಿಬಿಟ್ಟೆನು. ಪಿತಾಮಹರೇ! ನಾನೊಬ್ಬನೇ ಅವರೆಲ್ಲರ ಸಾವಿಗೆ ಕಾರಣನಾಗಿರುವೆನು.

ತಾಂಸ್ತಾದೃಶಾನಹಂ ಹತ್ವಾ ಧರ್ಮನಿತ್ಯಾನ್ ಮಹೀಕ್ಷಿತಃ ।
ಅಸಕೃತ್ ಸೋಮಪಾನ್ ವೀರಾನ್ ಕಿಂ ಪ್ರಾಪ್ಸ್ಯಾಮಿ ತಪೋಧನ ॥೨೮॥

ಯುದ್ಧಕ್ಕಾಗಿ ಆಗಮಿಸಿದ ರಾಜರು ಸಾಮಾನ್ಯರಲ್ಲ. ನಿತ್ಯವಾಗಿಯೂ ಧರ್ಮದಲ್ಲಿ ಆಸಕ್ತರಾಗಿದ್ದರು. ಅನೇಕ ಬಾರಿ ಯಜ್ಞಗಳನ್ನು ಮಾಡಿ ಸೋಮಪಾನವನ್ನು ಮಾಡಿದ್ದರು. ಮಹಾವೀರರಾಗಿದ್ದರು. ತಪೋಧನರೇ ! ಅಂಥ ಮಹಾನುಭಾವರನ್ನು ನಾನು ಸಂಹರಿಸಿ ಏನನ್ನು ತಾನೇ ಪಡೆದುಕೊಳ್ಳಲು ಹೊರಟಿದ್ದೇನೆ?

ದಹ್ಯಾಮ್ಯನಿಶಮದ್ಯಾಹಂ ಚಿಂತಯಾನಃ ಪುನಃ ಪುನಃ ।
ಹೀನಾಂ ಪಾರ್ಥಿವಸಿಂಹೈಸ್ತೈಃ ಶ್ರೀಮದ್ಭಿಃ ಪೃಥಿವೀಮಿಮಾಮ್ ॥೨೯॥

ಇದೇ ವಿಷಯವನ್ನು ಎಷ್ಟು ಬಾರಿ ಚಿಂತನೆ ಮಾಡುತ್ತಿದ್ದರೂ ನನಗೆ ಸಮಾಧಾನವು ದೊರಕುತ್ತಿಲ್ಲ. ಬಹಳ ಸಂಕಟವಾಗುತ್ತಿದೆ. ಆ ಸಂಕಟದಿಂದ ಬೆಂದುಹೋಗುತ್ತಿದ್ದೇನೆ. ಶ್ರೀಮಂತರಾದ, ಧರ್ಮನಿಷ್ಠರಾದ ರಾಜರುಗಳನ್ನು ಕಳೆದುಕೊಂಡ ಈ ಪೃಥ್ವಿಯು ನನಗೆ ಶೂನ್ಯವಾಗಿ ಕಾಣಿಸುತ್ತಿದೆ.

ದೃಷ್ಟ್ವಾಜ್ಞಾತಿವಧಂ ಘೋರಂ ಹತಾಂಶ್ಚ ಶತಶಃ ಪರಾನ್ ।
ಕೋಟಿಶಶ್ಚ ನರಾನನ್ಯಾನ್ ಪರಿತಪ್ಯೇ ಪಿತಾಮಹ ॥೩೦॥

ಜ್ಞಾತಿಗಳ ಘೋರವಾದ ಸಂಹಾರವನ್ನು ಕಂಡು, ನೂರಾರು ರಾಜರು ಮಡಿದದ್ದನ್ನು ಕಂಡು ಕೋಟಿಗಟ್ಟಲೆ ಸೈನಿಕರು ಪ್ರಾಣಪರಿತ್ಯಾಗವನ್ನು ಮಾಡಿದ್ದನ್ನು ಕಂಡು ನನಗೆ ಬಹಳ ದುಃಖವಾಗುತ್ತಿದೆ.

ಕಾ ನು ತಾಸಾಂ ವರಸ್ತ್ರೀಣಾಮವಸ್ಥಾದ್ಯ ಭವಿಷ್ಯತಿ ।
ವಿಹೀನಾನಾಂ ಸ್ವತನಯೈಃ ಪತಿಭಿರ್ಭ್ರಾತೃಭಿಸ್ತಥಾ ॥೩೧॥

ಆ ಕ್ಷತ್ರಿಯಸ್ತ್ರೀಯರಿಗೆ ಎಂಥ ದುರವಸ್ಥೆಯು ಪ್ರಾಪ್ತವಾಗಿದೆ. ಅವರೆಲ್ಲರೂ ತಮ್ಮ ಸಂಬಂಧಿಗಳನ್ನು, ಮಕ್ಕಳನ್ನು, ಗಂಡಂದಿರನ್ನು, ಅಣ್ಣ-ತಮ್ಮಂದಿರನ್ನು ಕಳೆದುಕೊಂಡು ದುಃಖದ ಮಡುವಿನಲ್ಲಿ ಮುಳುಗಿದ್ದಾರೆ.

ಅಸ್ಮಾನಂತಕರಾನ್ ಘೋರಾನ್ ಪಾಂಡವಾನ್ ವೃಷ್ಣಿಸಂಹಿತಾನ್ ।
ಆಕ್ರೋಶಂತ್ಯಃ ಕೃಶಾ ದೀನಾ ನಿಪತಂತ್ಯಶ್ಚ ಭೂತಲೇ ॥೩೨॥

ಆ ಎಲ್ಲ ಸ್ತ್ರೀಯರು ಈಗ ತಮ್ಮ ಸಂಬಂಧಿಗಳ ವಿನಾಶಕ್ಕೆ ಕಾರಣರಾದ, ಅವರ ದೃಷ್ಟಿಯಿಂದ ಘೋರ ಪಾಪಿಗಳಾದ ವೃಷ್ಣಿಗಳಿಂದ ಕೂಡಿರುವ ಪಾಂಡವರನ್ನು ನಿಂದಿಸುತ್ತಿದ್ದಾರೆ. ಶಪಿಸುತ್ತಿದ್ದಾರೆ, ದೀನರಾಗಿ, ದುರ್ಬಲರಾಗಿ ನೆಲದ ಮೇಲೆ ಬಿದ್ದು ಹೊರಳಾಡಿ ಆಕ್ರಂದನವನ್ನು ಮಾಡುತ್ತಿದ್ದಾರೆ.

ಅಪಶ್ಯಂತ್ಯಃ ಪಿತೄನ್ ಭ್ರಾತೄನ್ ಪತೀನ್ ಪುತ್ರಾಂಶ್ಚ ಯೋಷಿತಃ ।
ತ್ಯಕ್ತ್ವಾ ಪ್ರಾಣಾನ್ ಪ್ರಿಯಾನ್ ಸರ್ವಾನ್ ಗಮಿಷ್ಯಂತಿ
ಯಮಕ್ಷಯಮ್ ॥೩೩॥

ಆ ಸ್ತ್ರೀಯರು ತಮ್ಮ ಮಕ್ಕಳನ್ನು, ಗಂಡಂದಿರನ್ನು, ಪಿತೃಗಳನ್ನು, ಸಹೋದರರನ್ನು ಕಾಣದೇ ಪ್ರಾಣವನ್ನು ಪರಿತ್ಯಾಗ ಮಾಡಿ ಯಮಲೋಕಕ್ಕೆ ಹೋಗುವ ಪರಿಸ್ಥಿತಿಯಲ್ಲಿದ್ದಾರೆ.

ವತ್ಸಲತ್ವಾದ್ ದ್ವಿಜಶ್ರೇಷ್ಠ ತತ್ರ ಮೇ ನಾಸ್ತಿ ಸಂಶಯಃ।
ವ್ಯಕ್ತಂ ಸೌಕ್ಷ್ಮ್ಯಚ್ಚ ಧರ್ಮಸ್ಯ ಪ್ರಾಪ್ಸ್ಯಾಮಃ ಸ್ತ್ರೀವಧಂ ವಯಮ್ ॥೩೪॥

ಓ ದ್ವಿಜಶ್ರೇಷ್ಠರೇ! ಆ ಸ್ತ್ರೀಯರಿಗೆ ತಮ್ಮ ಸಂಬಂಧಿಕರ ಮೇಲೆ ಅಧಿಕವಾದ ವಾತ್ಸಲ್ಯವಿದೆ. ಆದ್ದರಿಂದಲೇ ತಮ್ಮ ಪ್ರಾಣಗಳನ್ನು ಧರಿಸಲು ಅವರು ಈಗ ಸಮರ್ಥರಾಗಿರುವುದಿಲ್ಲ. ಪ್ರಾಣಬಿಡುತ್ತಾರೆಂಬ ವಿಷಯದಲ್ಲಿ ನನಗೆ ಸಂಶಯವೂ ಇಲ್ಲ. ಧರ್ಮದ ಮಾರ್ಗವು ಅತ್ಯಂತಸೂಕ್ಷ್ಮವಾಗಿದೆ. ನಿಶ್ಚಯವಾಗಿಯೂ ನಾವು ಅಸಂಖ್ಯಾತರಾದ ಕುಲಸ್ತ್ರೀಯರನ್ನು ವಧೆ ಮಾಡಿದ ಪಾಪಭಾಜನರಾಗುತ್ತಿದ್ದೇವೆ.

ತೇ ವಯಂ ಸುಹೃದೋ ಹತ್ವಾ ಕೃತ್ವಾ ಪಾಪಮನಂತಕಮ್।
ನರಕೇ ನಿಪತಿಷ್ಯಾಮೋ ಹ್ಯಧಃಶಿರಸ ಏವ ಚ ॥೩೫॥

ಇಂಥ ನಾವು ಎಲ್ಲಾ ಸುಹೃದರನ್ನು ಕೊಂದಿದ್ದೇವೆ. ಅಪಾರವಾದ ಪಾಪವನ್ನು ಸಂಪಾದನೆ ಮಾಡಿದ್ದೇವೆ. ಈ ಕಾರಣದಿಂದ ಘೋರ ನರಕದಲ್ಲಿ ನಾವು ತಲೆಕೆಳಗಾಗಿ ಬೀಳುತ್ತೇವೆ. ಈ ವಿಷಯದಲ್ಲಿ ನನಗೆ ಸಂಶಯವಿಲ್ಲ.

ಶರೀರಾಣಿ ವಿಮೋಕ್ಷ್ಯಾಮಸ್ತಪಸೋಗ್ರೇಣ ಸತ್ತಮ।
ಆಶ್ರಮಾಂಶ್ಚ ವಿಶೇಷಾಂಸ್ತ್ವಂ ಸಮಾಚಕ್ಷ್ವ ಪಿತಾಮಹ ॥೩೬॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ
ರಾಜಧರ್ಮೇ ವ್ಯಾಸವಾಕ್ಯಂ ನಾಮ ತ್ರಯಸ್ತ್ರಿಂಶೋಽಧ್ಯಾಯಃ ॥೩೩॥

ಆದ್ದರಿಂದ ಅತ್ಯಂತ ಉಗ್ರವಾದ ತಪಸ್ಸನ್ನು ಮಾಡಿ, ನಾನು ಈ ಶರೀರವನ್ನು ಪರಿತ್ಯಾಗ ಮಾಡುತ್ತೇನೆ. ಸತ್ಪುರುಷರಲ್ಲಿ ಶ್ರೇಷ್ಠರಾದ ಪಿತಾಮಹರೇ! ನಾನೀಗ ಯಾವ ಆಶ್ರಮಧರ್ಮವನ್ನು ಪರಿಪಾಲನೆ ಮಾಡಬೇಕು. ಅದರ ಬಗ್ಗೆ ನನಗೆ ಉಪದೇಶಿಸಿರಿ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೩೩ನೆಯ ಅಧ್ಯಾಯವು ಮುಗಿಯಿತು.

೩೪. ಮೂವತ್ನಾಕನೆಯ ಅಧ್ಯಾಯ

ವೇದವ್ಯಾಸದೇವರು ಯುಧಿಷ್ಠಿರನಿಗೆ ಅನೇಕ ಬಗೆಯಲ್ಲಿ ಸಮಾಧಾನವನ್ನು ಮಾಡುತ್ತಿದ್ದಾರೆ. ಪಾಪಗಳಿಗೆ ಪ್ರಾಯಶ್ಚಿತ್ತಾದಿಗಳನ್ನು ತಿಳಿಸುತ್ತಿದ್ದಾರೆ. ಕಾಲದ ಪ್ರಾಬಲ್ಯವನ್ನು ಹೇಳಿ, ದೇವಾಸುರರ ಯುದ್ಧದ ಉದಾಹರಣೆಯನ್ನು ನೀಡುವ ಮೂಲಕ ಅಧರ್ಮಿಕರನ್ನು ದಮನ ಮಾಡುವುದು ಅತ್ಯಂತ ಉಚಿತವೆಂದು ವಿವರಿಸುತ್ತಿದ್ದಾರೆ.

ವೈಶಂಪಾಯನಃ

ಯುಧಿಷ್ಠಿರಸ್ಯ ತದ್ ವಾಕ್ಯಂ ಶ್ರುತ್ವಾ ದ್ವೈಪಾಯನಸ್ತದಾ।
ಸಮೀಕ್ಷ್ಯ ನಿಪುಣಂ ಬುದ್ಧ್ಯಾ ಋಷಿಃ ಪ್ರೋವಾಚ ಪಾಂಡವಮ್ ॥೧॥

ವೈಶಂಪಾಯನರು – ಯುಧಿಷ್ಠಿರನ ಎಲ್ಲಾ ಬಗೆಯ ಮಾತುಗಳನ್ನು ವೇದವ್ಯಾಸ-ಋಷಿಗಳು ಕೇಳಿಸಿಕೊಂಡರು. ತಮ್ಮ ನಿಪುಣವಾದ ಬುದ್ಧಿಯಿಂದ ಸರಿಯಾಗಿ ವಿಮರ್ಶಿಸಿ, ಆ ಪಾಂಡವನಿಗೆ ಮುಂದೆ ಹೇಳುವಂತೆ ಸಮಾಧಾನಕರವಾದ ಮಾತುಗಳನ್ನು ಹೇಳಿದರು.

ಮಾ ವಿಷಾದಂ ಕೃಥಾ ರಾಜನ್ ಕ್ಷತ್ರಧರ್ಮಮನುಸ್ಮರ।
ಸ್ವಧರ್ಮೇಣ ಹತಾ ಹ್ಯೇತೇ ಕ್ಷತ್ರಿಯಾಃ ಕ್ಷತ್ರಿಯರ್ಷಭ ॥೨॥

ಓ ಕ್ಷತ್ರಿಯಶ್ರೇಷ್ಠನೇ! ಕ್ಷತ್ರಿಯರ ಧರ್ಮವನ್ನು ಒಮ್ಮೆ ನೆನಪು ಮಾಡಿಕೋ. ಬಹಳ ದುಃಖಪಡಬೇಡ. ಎಲ್ಲಾ ಕ್ಷತ್ರಿಯರು ಸ್ವಧರ್ಮವನ್ನು ಅನುಷ್ಠಾನ ಮಾಡಿಯೇ ಮೃತರಾಗಿದ್ದಾರೆ.

ಕಾಂಕ್ಷಮಾಣಾಃ ಶ್ರಿಯಂ ಕೃತ್ಸ್ನಾಂ ಪೃಥಿವ್ಯಾಂ ಚ ಮಹದ್ ಯಶಃ।
ಕೃತಾಂತವಿಧಿಸಂಯುಕ್ತಾಃ ಕಾಲೇನ ನಿಧನಂ ಗತಾಃ ॥೩॥

ಯುದ್ಧದಲ್ಲಿ ಪಾಲ್ಗೊಂಡ ಪ್ರತಿಯೊಬ್ಬ ಕ್ಷತ್ರಿಯರಿಗೂ ಕೂಡ ಸಮಗ್ರ ಭೂಮಂಡಲದ ಆಧಿಪತ್ಯದ ಅಪೇಕ್ಷೆಯಿತ್ತು. ಆದರೆ ಆ ಯಮರಾಜನ ನಿಯಮಕ್ಕೆ ಅಧೀನವಾಗಿ ಅವರೆಲ್ಲರೂ ಪ್ರಾಣವನ್ನು ಕಳೆದುಕೊಂಡರು.

ನ ತ್ವಂ ಹಂತಾ ನ ಭೀಮೋಽಪಿ ನಾರ್ಜುನೋ ನ ಯಮಾವಪಿ।
ಕಾಲಃ ಪರ್ಯಾಯಧರ್ಮೇಣ ಪ್ರಾಣಾನಾದತ್ತ ದೇಹಿನಾಮ್ ॥೪॥

ಆ ಕ್ಷತ್ರಿಯರ ಹಂತಕ ನೀನಲ್ಲ. ಭೀಮಸೇನ, ಅರ್ಜುನ, ನಕುಲ-ಸಹದೇವ ಇವರುಗಳಲ್ಲಿ ಯಾರೂ ಸಹ ಅವರನ್ನು ಕೊಂದಿರುವುದಿಲ್ಲ. ಅವರವರ ಕಾಲವು ಪಕ್ವವಾದಾಗ ಆ ಕಾಲನೇ ಪ್ರಾಣಗಳನ್ನು ಅಪಹರಿಸಿಕೊಂಡು ಹೋಗಿರುವನು.

ನ ತಸ್ಯ ಮಾತಾಪಿತರೌ ನಾನುಗ್ರಾಹ್ಯೋಽಸ್ತಿ ಕಶ್ಚನ।
ಕರ್ಮಸಾಕ್ಷೀ ಪ್ರಜಾನಾಂ ಯಸ್ತೇನ ಕಾಲೇನ ಸಂಹೃತಾಃ ॥೫॥

ಆ ಕಾಲನಾಮಕನಾದ ಪರಮಾತ್ಮನಿಗೆ ಯಾರೊಬ್ಬ ತಂದೆಯೂ ಇಲ್ಲ. ತಾಯಿಯೂ ಇಲ್ಲ. ಅವನು ಯಾರೊಬ್ಬರ ಅನುಗ್ರಹಕ್ಕೂ ಪಾತ್ರನಲ್ಲ. ಆಯಾ ಜೀವರುಗಳು ಮಾಡುವ ಕರ್ಮಗಳಿಗೆ ಸಾಕ್ಷಿಭೂತನಾಗಿ ನಿಂತಿರುವನು. ಅಂಥ ಕಾಲನಾಮಕನಾದ ಪರಮಾತ್ಮನಿಂದಲೇ ನಿನ್ನೆಲ್ಲಾ ಶತ್ರುಗಳು ಸಂಹೃತರಾಗಿದ್ದಾರೆ.

ಹೇತುಮಾತ್ರಮಿದಂ ತಸ್ಯ ಕಾಲಸ್ಯ ಪುರುಷರ್ಷಭ।
ಯದ್ ಹಂತಿ ಭೂತೈರ್ಭೂತಾನಿ ತದಸ್ಮೈ ರೂಪಮೈಶ್ವರಮ್ ॥೬॥

ಆ ಕಾಲನಿಗೆ ಈ ಮಹಾ ಯುದ್ಧವು ಕೇವಲ ನಿಮಿತ್ತವಾಗಿತ್ತು. ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಯನ್ನು ಆ ಕಾಲನೇ ಸಂಹಾರ ಮಾಡಿಸಿರುವನು. ಇದು ಆ ಕಾಲನ ವಿಭೂತಿಶಕ್ತಿಯಾಗಿದೆ ಎಂದಷ್ಟೇ ತಿಳಿದುಬಿಡು.

ಕರ್ಮಸೂತ್ರಾತ್ಮಕಂ ವಿದ್ಧಿ ಸಾಕ್ಷಿಣಂ ಶುಭಪಾಪಯೋಃ।
ಸುಖದುಃಖಗುಣೋದರ್ಕಂ ಕಾಲಂ ಕಾಲಫಲಪ್ರದಮ್ ॥೭॥

ಆ ಕಾಲನು ಪ್ರತಿಯೊಬ್ಬರ ಪುಣ್ಯಪಾಪಗಳಿಗೆ ಸಾಕ್ಷಿಭೂತನಾಗಿರುವನು. ಪ್ರತಿಯೊಬ್ಬರ ಕರ್ಮಗಳಿಗೂ ಸೂತ್ರಪ್ರಾಯನಾಗಿರುವನು. ಆ ಪುಣ್ಯ-ಪಾಪಗಳಿಂದ ದೊರೆಯುವ ಸುಖ-ದುಃಖಗಳ ಆವಿರ್ಭಾವಕ್ಕೂ ಅವನೇ ಕಾರಣನಾಗಿರುವನು. ಸಮಯವು ಪಕ್ವವಾದಾಗ ಅವರವರ ಕರ್ಮಗಳಿಗೆ ಅನುಗುಣವಾಗಿ ಫಲವನ್ನು ಅವನೇ ನೀಡುವನು.

ತೇಷಾಮಪಿ ಮಹಾಬಾಹೋ ಕರ್ಮಾಣಿ ಪರಿಚಿಂತಯ।
ವಿನಾಶಹೇತುಕಾರಿತ್ವೇ ಯೈಸ್ತೇ ಕಾಲವಶಂ ಗತಾಃ ॥೮॥

ಯುದ್ಧದಲ್ಲಿ ಮರಣವನ್ನು ಹೊಂದಿದ, ಆ ದುರ್ಯೋಧನಾದಿಗಳ ಪುಣ್ಯಕಾರ್ಯ, ಪಾಪಕಾರ್ಯವು ಎಷ್ಟು ಇರುವುದೆಂದು ನೀನೇ ಊಹಿಸು. ತಮ್ಮ ವಿನಾಶಕ್ಕೆ ಎಷ್ಟು ಪಾಪಕೆಲಸಗಳನ್ನು ಮಾಡಬೇಕೋ, ಅಷ್ಟನ್ನೂ ಕೂಡ ಸಂಪಾದನೆ ಮಾಡಿ, ಆ ಕಾಲನ ಆಧೀನವಾಗಿಯೇ ಮರಣವನ್ನು ಹೊಂದಿರುವರು.

ಆತ್ಮನಶ್ಚ ವಿಜಾನೀಹಿ ನಿಯಮವ್ರತಶೀಲತಾಮ್।
ಯದಾ ತ್ವಮೀದೃಶಂ ಕರ್ಮ ವಿಧಿನಾಕ್ರಮ್ಯ ಕಾರಿತಃ ॥೯॥

ಮತ್ತು ನಿನ್ನ ನಡೆ-ನುಡಿಗಳು ಎಷ್ಟು ಶುಭದಾಯಕವಾಗಿವೆ ಎಂಬುದನ್ನು ಗಮನಿಸು. ನೀನು ಮಾಡುತ್ತಿರುವ ನಿಯಮನಿಷ್ಠವಾದ ವ್ರತಗಳನ್ನು ಅನುಷ್ಠಾನಗಳನ್ನು, ಸದ್ಗುಣಗಳನ್ನು ಗಮನಿಸು. ನಿನ್ನಲ್ಲಿರುವ ಅಪಾರವಾದ ಸದ್ಗುಣಗಳ ಆಧೀನವಾಗಿಯೇ ನಿನಗೆ ಜಯವನ್ನು ತಂದು, ಆ ದುಷ್ಟರನ್ನು ಆ ಕಾಲನು ವಿನಾಶಗೊಳಿಸಿರುವನು.

ತಪ್ಪೈವ ವಿಹಿತಂ ಯಂತ್ರಂ ಯಥಾ ಸ್ಥಾಪಯಿತುರ್ವಶೇ।
ಕರ್ಮಣಾ ಕಾಲಯುಕ್ತೇನ ತಥೇದಂ ಭ್ರಾಮ್ಯತೇ ಜಗತ್ ॥೧೦॥

ಯಾವರೀತಿಯಾಗಿ ಬಡಗಿಯಿಂದ ನಿರ್ಮಿತವಾದ ಕೀಲುಬೊಂಬೆಯು ಅವನ ಆಧೀನವಾಗಿ ಚೇಷ್ಟೆಯನ್ನು ಮಾಡುತ್ತದೋ, ಅದರಂತೆ ಕಾಲನಾಮಕನಾದ ಭಗವಂತನ ಆಧೀನವಾಗಿ ಈ ಜಗತ್ತು ತನ್ನ ವ್ಯಾಪಾರದಲ್ಲಿ ತೊಡಗಿದೆ.

ಟಿಪ್ಪಣಿ - ಅಥಾಭಿಪತ್ತಿಃ ಇತ್ಯತ್ರ **ಅಥ** ತಸ್ಮಾತ್ ಕಾರಣಾತ್ ಶುಭಪಾಪಯೋಃ ಅಭಿಪತ್ತಿಃ ಪ್ರಾಪ್ತಿಃ ಲೋಕಸ್ಯ ಕರ್ತವ್ಯಾ। ಉದ್ಯತದಂಡನಂ ಉದ್ಯತಂ ಸನ್ನದ್ಧಂ ದಂಡನಂ ದುಷ್ಟಾನಾಂ ಶಿಕ್ಷಣಂ ಯಸ್ಮಿನ್ ತದಿದಂ ರಾಜ್ಯಮ್ ಅಭಿಪನ್ನಂ ತವ ಪ್ರಾಪ್ತಮ್।

ಸ್ವಧರ್ಮೇ ವರ್ತಮಾನಸ್ಯ ಇತ್ಯತ್ರ ಸಾಪವಾದೇ ಕ್ವಚಿದ್ ದುಷ್ಟಾನಾಂ ಶಿಕ್ಷಣಂ ಕರ್ತವ್ಯಮಿತ್ಯಪವಾದಸಹಿತೇ ಸ್ವಧರ್ಮೇ।

ಕರ್ಮಣಾ ಕಾಲಯುಕ್ತೇನ ಇತ್ಯತ್ರ ಕಾಲಃ ಸಂಹಾರಕೋ ನಾರಾಯಣಃ।

'ಕಾಲಯುಕ್ತೇನ' ಎಂಬಲ್ಲಿ ಕಾಲಶಬ್ದಕ್ಕೆ ಸಂಹಾರಕರ್ತೃವಾದ ನಾರಾಯಣ ಎಂದರ್ಥ.

ಸಮಸ್ತಪ್ರಪಂಚವು ಕಾಲಾಧೀನವಾಗಿದೆ ಎಂದು ವೇದವ್ಯಾಸದೇವರು ಯುಧಿಷ್ಠಿರನಿಗೆ ಬೋಧಿಸುತ್ತಿದ್ದಾರೆ. ಜಡವಾದ ಕಾಲವನ್ನು ವಿವಕ್ಷಿಸಿ ನಾಸ್ತಿಕ್ಯವನ್ನು ಬೋಧಿಸುತ್ತಿದ್ದಾರೆಂದು ತಿಳಿಯಬಾರದು. ಭಗವಂತನಿಗೆ ಕಾಲವೆಂಬ ರೂಪವಿದೆ. ಈ ರೂಪವೇ ಸಮಸ್ತ ಪ್ರಾಣಿಗಳ ಸಂಹಾರಕ್ಕೆ ಕಾರಣವಾಗಿದೆ. ಇಂಥ ಕಾಲ-ನಾಮಕನಾದ ಪರಮಾತ್ಮನು ಪ್ರತಿಯೊಬ್ಬರ ಕರ್ಮಗಳಿಗೆ ಸಾಕ್ಷಿಯಾಗಿರುತ್ತಾನೆ. ಮತ್ತು ಅವರವರ ಕರ್ಮಗಳಿಗೆ ಫಲಪ್ರದನೂ ಕೂಡ ಆಗಿರುತ್ತಾನೆ. ದುರ್ಯೋಧನಾದಿಗಳು ಆಚರಿಸಿದ ದುಷ್ಕರ್ಮಗಳಿಗೂ ಸಾಕ್ಷಿಯಾಗಿದ್ದಾನೆ. ಧರ್ಮರಾಜಾದಿಗಳು ಆಚರಿಸುತ್ತಿದ್ದ, ಸತ್ಕರ್ಮಗಳಿಗೂ ಕೂಡ ಸಾಕ್ಷಿಯಾಗಿದ್ದಾನೆ. ದುರ್ಯೋಧನಾದಿಗಳು ಮಾಡಿದ ನೀಚ ಕಾರ್ಯಗಳಿಗೆ ವಿನಾಶವನ್ನೇ ಫಲವನ್ನಾಗಿ ನೀಡಿದ್ದಾನೆ. ಯುಧಿಷ್ಠಿರಾದಿಗಳು ಮಾಡಿದ ಸತ್ಕಾರ್ಯಗಳಿಗೆ ಅನಂತಕಾಲದ ತನಕ ವಿಜಯವನ್ನು ಸುಖಸಮೃದ್ಧಿಯ ಸೌಭಾಗ್ಯವನ್ನು ದಯಪಾಲಿಸುತ್ತಾನೆ. ಇಂಥ ಕಾಲನನ್ನು ನಿಯಂತ್ರಿಸುವ ಶಕ್ತಿ ಯಾರಿಗೂ ಇರುವುದಿಲ್ಲ. ದುರ್ಯೋಧನಾದಿ-ಗಳ ವಿನಾಶವನ್ನು ನಿಯಂತ್ರಣ ಮಾಡಲು ಎಷ್ಟೇ ಪ್ರಯತ್ನಪಟ್ಟರೂ ಯುಧಿ-ಷ್ಠಿರನಿಂದಲೂ ಸಾಧ್ಯವಾಗುವುದಿಲ್ಲ. ತನ್ನ ಮಕ್ಕಳ ವಿನಾಶವನ್ನೂ ಕೂಡ ತಪ್ಪಿಸಲು ಯುಧಿಷ್ಠಿರನಿಗೆ ಸಾಧ್ಯವಾಗುವುದಿಲ್ಲ. ಇದೆಲ್ಲವೂ ಕಾಲನಾಮಕನಾದ ಪರಮಾತ್ಮನ ಮಹಿಮೆ ಎಂದಷ್ಟೇ ತಿಳಿದುಕೊಳ್ಳಬೇಕು. ಇದನ್ನು ಹೊರತಾಗಿ ಅಭಿಮನ್ಯು ಮೊದಲಾದವರ ಮೃತ್ಯುವನ್ನು ನಾನು ತಪ್ಪಿಸಬಹುದಿತ್ತು ಎಂಬ ಪರಿತಾಪವು ಅರ್ಥವಿಲ್ಲದ್ದು ಎಂಬುದು ವೇದವ್ಯಾಸದೇವರ ಅಭಿಪ್ರಾಯವಾಗಿದೆ.

ಪುರುಷಸ್ಯ ಹಿ ದೃಷ್ಟ್ವೇಮಾಮುತ್ಪತ್ತಿಮನಿಮಿತ್ತತಃ।
ಯದೃಚ್ಛಯಾ ವಿನಾಶಂ ಚ ಶೋಕಹರ್ಷಾವನರ್ಥಕೌ ॥೧೧॥

ಮನುಷ್ಯನ ಜನ್ಮಕ್ಕೆ ಏನು ಕಾರಣ? ಎಂದು ತಿಳಿಯಲು ಸಾಧ್ಯವಿಲ್ಲ. ಅದರಂತೆ ಅವನ ನಾಶವನ್ನೂ ಕೂಡ ತಿಳಿಯುವುದು ಸಾಧ್ಯವಿಲ್ಲ. ಎಲ್ಲವೂ ಕೂಡ ಆ ಕಾಲನ ಇಚ್ಛೆಯಂತೆಯೇ ನಡೆಯುತ್ತದೆ.

ಟಿಪ್ಪಣಿ - ಉತ್ಪತ್ತಿಮನಿಮಿತ್ತತ ಇತ್ಯತ್ರ ಅನಿಮಿತ್ತತಃ ಅಕಾರವಾಚ್ಯನಾರಾಯಣಾಖ್ಯಸ್ವತಂತ್ರನಿಮಿತ್ತತಃ।

'ಉತ್ಪತ್ತಿಮನಿಮಿತ್ತತಃ' ಎಂಬಲ್ಲಿ ಅನಿಮಿತ್ತತಃ ಎಂಬುದಕ್ಕೆ ಅಕಾರಶಬ್ದದಿಂದ ಪ್ರತಿಪಾದ್ಯನಾದ ನಾರಾಯಣನು ಸ್ವತಂತ್ರವಾಗಿ ಕಾರಣನಾಗಿದ್ದಾನೆ ಎಂದರ್ಥ.

ನಾವು ಏಕೆ ಹುಟ್ಟುತ್ತಿದ್ದೇವೆ? ಏಕೆ ಸಾಯುತ್ತೇವೆ? ಎಂಬುದನ್ನು ನಮ್ಮಿಂದ ತಿಳಿಯಲು ಸಾಧ್ಯವಾಗುವುದಿಲ್ಲ. ಪ್ರತಿಯೊಂದೂ ಕೂಡ ನಮ್ಮ ಕರ್ಮಕ್ಕೆ ಅನುಗುಣವಾಗಿ ಆ ಕಾಲನ ಅಧೀನವಾಗಿ ಹುಟ್ಟು-ಸಾವುಗಳನ್ನು ಅನುಭವಿಸುತ್ತಿದ್ದೇವೆ. ಜನನವು ಸುಖಪ್ರದವಾಗಿದೆ ಎಂದು ನಮ್ಮ ಇಚ್ಛೆಗೆ ಅನುಗುಣವಾಗಿ ಹುಟ್ಟಲು ಸಾಧ್ಯವಿಲ್ಲ. ಮರಣವು ದುಃಖಪ್ರದವೆಂಬ ಕಾರಣದಿಂದ ಅದನ್ನು ತಡೆಯಲೂ ಕೂಡ ನಮ್ಮಿಂದ ಸಾಧ್ಯವಾಗುವುದಿಲ್ಲ. ಆದ್ದರಿಂದ ಒಬ್ಬನು ಹುಟ್ಟುವುದರಿಂದ ಸಂತೋಷ ಪಡಬಾರದು. ಮತ್ತೊಬ್ಬನು ಸತ್ತನೆಂಬ ಕಾರಣದಿಂದ ದುಃಖವನ್ನು ಪಡಬಾರದು.

ವ್ಯಲೀಕಂ ಚಾಪಿ ಯತ್ತ್ವತ್ರ ಚಿತ್ತಂ ವೈತಂಸಿಕ್ತಂ ತವ।
ತದರ್ಥಮಿಷ್ಯತೇ ರಾಜನ್ ಪ್ರಾಯಶ್ಚಿತ್ತಂ ತದಾಚರ ॥೧೨॥

ದುರ್ಯೋಧನಾದಿಗಳು ತಮ್ಮ ಕರ್ಮಕ್ಕೆ ಅನುಗುಣವಾಗಿ ಮೃತರಾಗಿದ್ದಾರೆ. ಆದರೆ ನಾನು ಅವರನ್ನು ಕೊಂದಿದ್ದೇನೆಂಬ ಕಾರಣದಿಂದ ಮನಸ್ಸನ್ನು ಕುಟಿಲವನ್ನಾಗಿ ಮಾಡಿಕೊಂಡಿರುವಿ. ಈ ಪಾಪದ ನಿವೃತ್ತಿಗಾಗಿ ಅನೇಕ ಪ್ರಾಯಶ್ಚಿತ್ತಗಳು ಶಾಸ್ತ್ರಗಳಲ್ಲಿ ಉಕ್ತವಾಗಿವೆ. ನೀನು ಆ ಪ್ರಾಯಶ್ಚಿತ್ತಗಳನ್ನು ಆಚರಿಸಿ, ಮನಸ್ಸನ್ನು ಶುದ್ಧಿಮಾಡಿಕೊಳ್ಳಬೇಕು.

ಟಿಪ್ಪಣಿ - ದುರ್ಯೋಧನಾದಿಗಳನ್ನು ಸಂಹರಿಸುವವನು ನೀನಲ್ಲ. ಆದರೆ ನಾನೇ ಸಂಹಾರ ಮಾಡಿದ್ದೇನೆಂದು ಮನಸ್ಸನ್ನು ಹಾಳುಮಾಡಿಕೊಂಡಿರುವಿ. ನಿನ್ನ

ಮನಸ್ಸು ಅತ್ಯಂತ ಉದ್ವಿಗ್ನವಾಗಿದೆ. ಆದ್ದರಿಂದಲೇ ನಿನಗೆ ಪಾಪವು ಅಂಟಿದೆ. ಇದಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕೆಂದು ವ್ಯಾಸರು ಉಪದೇಶಿಸುತ್ತಿದ್ದಾರೆ.

ಟಿಪ್ಪಣಿ - ಚಿತ್ತಂ ವೈತಂಸಿಕಂ ತವ ಇತ್ಯತ್ರ ವೈತಂಸಿಕಂ ಕುಟಿಲಮ್ । 'ವೈತಂಸಿಕಃ ಕೌಟಿಕಶ್ಚ' ಇತ್ಯಮರಃ ।

ಚಿತ್ತಂ ವೈತಂಸಿಕಂ ತವ ಎಂಬಲ್ಲಿ ವೈತಂಸಿಕಂ ಎಂಬುದಕ್ಕೆ ಕುಟಿಲವಾದದ್ದು ಎಂದರ್ಥ. 'ವೈತಂಸಿಕಃ ಕೌಟಿಕಶ್ಚ' ಎಂಬುದಾಗಿ ಅಮರಕೋಶದಲ್ಲಿ ಹೇಳಲಾಗಿದೆ.

ಇದಂ ಚ ಶ್ರೂಯತೇ ಪಾರ್ಥ ಯುದ್ಧೇ ದೇವಾಸುರೇ ಪುರಾ ।
ಅಸುರಾ ಭ್ರಾತರೋ ಜ್ಯೇಷ್ಠಾ ದೇವಾಶ್ಚಾಪಿ ಯವೀಯಸಃ ॥೧೩॥

ಯುಧಿಷ್ಠಿರನೇ! ಹಿಂದೆ ದೇವತೆಗಳಿಗೂ ಅಸುರರಿಗೂ ಘೋರವಾದ ಯುದ್ಧವೊಂದು ನಡೆದಿತ್ತು. ಪ್ರಕೃತ ಆ ಪ್ರಸಂಗವನ್ನು ನಿನಗೆ ಹೇಳುತ್ತೇನೆ ಕೇಳು. ಅಸುರರು ಜ್ಯೇಷ್ಠಭ್ರಾತೃಗಳಾಗಿದ್ದರು, ದೇವತೆಗಳು ಕನಿಷ್ಠಭ್ರಾತೃಗಳಾಗಿದ್ದರು.

ತೇಷಾಮಪಿ ಶ್ರೀನಿಮಿತ್ತಂ ಮಹಾನಾಸೀತ್ ಸಮುಚ್ಛ್ರಯಃ ।
ಯುದ್ಧಂ ವರ್ಷಸಹಸ್ರಾಣಿ ದ್ವಾತ್ರಿಂಶದಭವತ್ ಕಿಲ ॥೧೪॥

ತ್ರೈಲೋಕ್ಯಾಧಿಪತ್ಯವೆಂಬ ಸಂಪತ್ತು ಯಾರಿಗೆ ಸೇರಬೇಕೆಂಬ ವಿಷಯದಲ್ಲಿ ಅವರಿಬ್ಬರಿಗೂ ಘೋರವಾದ ಯುದ್ಧವು ನಡೆಯಿತು. ಮೂವತ್ತೆರಡು ಸಾವಿರ ವರ್ಷಗಳ ಕಾಲ ಮಹಾಯುದ್ಧವನ್ನು ದೇವತೆಗಳು ಹಾಗೂ ಅಸುರರು ಮಾಡಿದರು.

ಏಕಾರ್ಣವಾಂ ಮಹೀಂ ಕೃತ್ವಾ ರುಧಿರೇಣ ಪರಿಪ್ಲುತಾಮ್ ।
ಜಘ್ನುರ್ದೈತ್ಯಾಂಸ್ತದಾ ದೇವಾಸ್ತ್ರಿದಿವಂ ಚೈವ ಲೇಭಿರೇ ॥೧೫॥

ಸಮಸ್ತ ಭೂಮಂಡಲವು ದೈತ್ಯರ ರಕ್ತದಿಂದ ತುಂಬಿಹೋಯಿತು. ಭೂಮಂಡಲದ ಸುತ್ತಲೂ ಇರುವ ಸಮುದ್ರಗಳು ರಕ್ತದ ಸಮುದ್ರಗಳಾದವು. ತಮ್ಮ ಹಿರಿಯ ಸಹೋದರರಾದ ದೈತ್ಯರನ್ನು ಕೊಂದು, ಎಲ್ಲ ದೇವತೆಗಳು ವಿಜಯಶಾಲಿಗಳಾದರು. ತ್ರಿಲೋಕಗಳಿಗೆ ಒಡೆಯರಾದರು.

ತಥೈವ ಪೃಥಿವೀಂ ಲಬ್ಧ್ವಾ ಬ್ರಾಹ್ಮಣಾ ವೇದಪಾರಗಾಃ।
ಸಂಶ್ರಿತಾ ದಾನವಾನಾಂ ವೈ ಸಾಹ್ಯಾರ್ಥೇ ದರ್ಪಮೋಹಿತಾಃ ॥೨೪॥

ಶಾಲಾವೃಕಾ ಇತಿ ಖ್ಯಾತಾಸ್ತ್ರಿಷು ಲೋಕೇಷು ಭಾರತ।
ಅಷ್ಟಾಶೀತಿಸಹಸ್ರಾಣಿ ತೇ ಚಾಪಿ ವಿಬುಧೈರ್ಹತಾಃ ॥೨೫॥

ವೇದಪಾರಂಗತರಾದ ಶಾಲಾವೃಕ ಎಂಬುದಾಗಿ ಪ್ರಸಿದ್ಧಿಯನ್ನು ಪಡೆದ ೮೮೦೦೦ ಬ್ರಾಹ್ಮಣರು ದರ್ಪದಿಂದ ಕೂಡಿದ್ದರು, ಮೋಹವಶರಾಗಿದ್ದರು, ದೈತ್ಯರಿಗೆ ಅಸುರರಿಗೆ ಸಹಾಯವನ್ನು ಮಾಡುವುದಕ್ಕಾಗಿ ಅಸುರರ ಪಕ್ಷವನ್ನು ಸೇರಿದ್ದರು. ಆದರೆ ದೇವತೆಗಳು ಆ ಬ್ರಾಹ್ಮಣರನ್ನೂ ಕೂಡ ಸಂಹಾರ ಮಾಡಿದರು. ಭೂಮಂಡಲವನ್ನು ತಮ್ಮ ಅಧೀನವನ್ನಾಗಿ ಮಾಡಿಕೊಂಡರು.

ಧರ್ಮವ್ಯುಚ್ಛಿತ್ತಿಮಿಚ್ಛಂತೋ ಯೇऽಧರ್ಮಸ್ಯ ಪ್ರವರ್ತಕಾಃ।
ಹಂತವ್ಯಾಸ್ತೇ ದುರಾತ್ಮಾನೋ ದೇವೈರ್ದೈತ್ಯಾ ಇವೋಲ್ಬಣಾಃ ॥೨೬॥

ಧರ್ಮಮಾರ್ಗವು ಸಂಪೂರ್ಣವಾಗಿ ನಾಶವಾಗಬೇಕೆಂಬ ಇಚ್ಛೆಯಿಂದ ಯಾರು ಅಧರ್ಮಕ್ಕೆ ಪ್ರೇರಕರಾಗಿರುತ್ತಾರೋ, ಅಂಥ ದುರಾತ್ಮರನ್ನು ಕೊಲ್ಲಲೇಬೇಕು. ಈ ದೃಷ್ಟಿಯಿಂದ ದೇವತೆಗಳು ಎಲ್ಲಾ ದೈತ್ಯರನ್ನು ಸಂಹಾರ ಮಾಡಿದರು. ಅದರಂತೆ ನೀನೂ ಸಹ ದುಷ್ಟರನ್ನು ಸಂಹಾರ ಮಾಡಬೇಕು.

ಏಕಂ ಹತ್ವಾ ಯದಿ ಕುಲೇ ಶಿಷ್ಟಾನಾಂ ಸ್ಯಾದನಾಮಯಮ್।
ಕುಲಂ ಹತ್ವಾಚ ರಾಷ್ಟ್ರಂ ವಾ ನ ತದ್ಧೃತೋಪಘಾತಕಮ್ ॥೨೭॥

ಒಬ್ಬನನ್ನು ಕೊಲ್ಲುವುದರಿಂದ ಕುಲದಲ್ಲಿರುವ ಉಳಿದೆಲ್ಲಾ ಸತ್ಪುರುಷರಿಗೆ ಕ್ಷೇಮವಾಗುವುದಾದರೆ ಅವನನ್ನು ಕೊಲ್ಲುವುದೇ ಧರ್ಮ. ಒಂದು ದುಷ್ಟಕುಲವನ್ನು ಸಂಹಾರ ಮಾಡುವುದರಿಂದ ಸಜ್ಜನರಿಂದ ಕೂಡಿದ ಸಮಸ್ತರಾಷ್ಟ್ರಕ್ಕೆ ಕ್ಷೇಮವಾಗುವುದಾದರೆ, ಆ ಕುಲವನ್ನು ಸಂಪೂರ್ಣವಾಗಿ ನಾಶ ಮಾಡುವುದೇ ಧರ್ಮವಾಗುತ್ತದೆ. ಇದರಿಂದ ಕುಲವನ್ನು, ಧರ್ಮವನ್ನು ನಾಶ ಮಾಡಿದ ಪಾಪವು ಬರುವುದಿಲ್ಲ.

ಅಧರ್ಮರೂಪೋ ಧರ್ಮೋ ಹಿ ಕಶ್ಚಿದಸ್ತಿ ನರಾಧಿಪಃ।
ಧರ್ಮಶ್ಚಾಧರ್ಮರೂಪೋಽಸ್ತಿ ತಚ್ಚ ಜ್ಞೇಯಂ ವಿಪಶ್ಚಿತಾ ॥೨೮॥

ಕೆಲವೊಮ್ಮೆ ನಾವು ಮಾಡುವ ಕರ್ಮವು ಅಧರ್ಮದಂತೆ ಕಾಣಬಹುದು. ವಿಚಾರ ಮಾಡಿದರೆ ಅದು ಧರ್ಮವೇ ಆಗಿರುತ್ತದೆ. ಕೆಲವೊಮ್ಮೆ ನಾವು ಮಾಡುವ ಪಾಪಕೆಲಸಗಳು ಧರ್ಮದಂತೆ ಕಾಣಬಹುದು. ಆದರೆ ವಿಚಾರ ಮಾಡಿದರೆ ಅದು ಅಧರ್ಮವೇ ಆಗಿರುತ್ತದೆ. ಹೀಗೆ ವಿದ್ವಾಂಸರು ಧರ್ಮಾಧರ್ಮಗಳ ಸೂಕ್ಷ್ಮ-ರಹಸ್ಯವನ್ನು ಅರಿತುಕೊಳ್ಳಬೇಕು.

ಟಿಪ್ಪಣಿ - ಅಧರ್ಮರೂಪೋ ಧರ್ಮೋ ಹಿ ಇತ್ಯತ್ರ **ಕಶ್ಚಿದ್ಧರ್ಮಃ** ದುಷ್ಟವಧಾಖ್ಯೋ **ಧರ್ಮಃ ಅಧರ್ಮರೂಪಃ** ಹಿಂಸಾಮಾತ್ರೇಣ ಅಜ್ಞಾನಿನಾಮ್ ಅಧರ್ಮವದ್ ರೂಪಂ ಯಸ್ಯ ಸಃ ಅಧರ್ಮರೂಪಃ। ಧರ್ಮಃ ಚೋರೈಃ ಪ್ರಶ್ನೇ ಕೃತೇ ಸತಿ ಅನೇನ ಪಥಾ ಬ್ರಾಹ್ಮಣಾ ಗತಾ ಇತಿ **ಸತ್ಯರೂಪತ್ವಾದ್** ಧರ್ಮಃ ಅಜ್ಞಾನಾಂ ಧರ್ಮವತ್ ಪ್ರತೀಯಮಾನಃ **ಅಧರ್ಮಃ** ವಿಪ್ರಹಿಂಸಾಹೇತುತ್ವಾನ್ಮಹಾನಧರ್ಮಃ।

ಅಧರ್ಮರೂಪೋ ಧರ್ಮೋ ಹಿ ಎಂಬಲ್ಲಿ **ಕಶ್ಚಿದ್ಧರ್ಮಃ** ಎಂಬುದಕ್ಕೆ ದುಷ್ಟವಧೆ ಎಂದರ್ಥ. ಹಿಂಸೆಯನ್ನು ಮಾಡುವುದರಿಂದ ಅಜ್ಞಾನಿಗಳಿಗೆ ಅಧರ್ಮದಂತೆ ಕಾಣಿಸುತ್ತದೆ ಎಂದಭಿಪ್ರಾಯ. 'ಧರ್ಮಃ' - ಚೋರರು ಪ್ರಶ್ನೆ ಮಾಡಿದಾಗ ಈ ಮಾರ್ಗದಲ್ಲಿಯೇ ಬ್ರಾಹ್ಮಣನು ಹೋದನು ಎಂಬುದಾಗಿ ಅಜ್ಞಾನಿಗಳಿಗೆ ಧರ್ಮವೆಂದು ಕಾಣಿಸುತ್ತದೆ. ಆದರೆ ವಿಪ್ರಹಿಂಸೆಗೆ ಕಾರಣವಾಗಿರುವುದರಿಂದ ದೊಡ್ಡ ಅಧರ್ಮವೇ ಆಗಿದೆ.

ತಸ್ಮಾತ್ ಸಂಸ್ತಂಭಯಾತ್ಮಾನಂ ಶ್ರುತವಾನಸಿ ಪಾಂಡವ।
ದೇವೈಃ ಪೂರ್ವಗತಂ ಮಾರ್ಗಮನುಯಾತೋಽಸಿ ಭಾರತ ॥೨೧॥

ಯುಧಿಷ್ಠಿರನೇ! ಆದ್ದರಿಂದ ನೀನು ಬಹುಶ್ರುತನಾಗಿರುವಿ. ಶ್ರೇಷ್ಠಪುರುಷರಿಂದ ಉಪದೇಶವನ್ನು ಪಡೆದುಕೊಂಡಿರುವಿ. ನಿನ್ನ ಮನಸ್ಸನ್ನು ಸ್ಥಿರಗೊಳಿಸು. ದೇವತೆಗಳು ಹಿಂದೆ ಯಾವ ಮಾರ್ಗವನ್ನು ಅನುಸರಿಸಿದ್ದರೋ, ಅದೇ ಮಾರ್ಗವನ್ನು ಅನುಸರಿಸು.

ನ ಹೀದೃಶಾ ಗಮಿಷ್ಯಂತಿ ನರಕಂ ಪಾಂಡವರ್ಷಭ।
ಭ್ರಾತೄನಾಶ್ವಾಸಯೈತಾಂಸ್ತ್ವಂ ಸೃಹೃದಶ್ಚ ಪರಂತಪ ॥೨೨॥

ಓ ಪಾಂಡವಶ್ರೇಷ್ಠನೇ ! ನಿನ್ನಂಥ ಶ್ರೇಷ್ಠರು ಯಾರೂ ಸಹ ನರಕಭಾಜನರಾಗಲು ಸಾಧ್ಯವಿಲ್ಲ. ಪರಂತಪನೇ! ಇನ್ನು ಮುಂದಾದರೂ ನಿನ್ನ ತಮ್ಮಂದಿರನ್ನು ಸಂತೈಸಿ, ರಾಜ್ಯಪರಿಪಾಲನೆಯಲ್ಲಿ ದೃಢಮನಸ್ಸನ್ನು ಮಾಡುವವನಾಗು.

ಯೋ ಹಿ ಪಾಪಸಮಾರಂಭೇ ಕಾರ್ಯೇ ತದ್ಭಾವಭಾವಿತಃ।
ಕುರ್ವನ್ನಪಿ ತಥೈವ ಸ್ಯಾತ್ ಕೃತ್ವಾ ಚ ನಿರಪತ್ರಪಃ ॥೨೩॥

ತಸ್ಮಿಂಸ್ತತ್ ಕಲುಷಂ ಸರ್ವಂ ಸಮಾಪ್ತಮಿತಿ ಶಬ್ದಿತಮ್ ।
ಪ್ರಾಯಶ್ಚಿತ್ತಂ ನ ತಸ್ಯಾಸ್ತಿ ಹ್ರಾಸೋ ವಾ ಪಾಪಕರ್ಮಣಃ ॥೨೪॥

ಯಾವ ವ್ಯಕ್ತಿಯು ಪಾಪಭಾವನೆಯನ್ನು ಮನಸ್ಸಿನಲ್ಲಿ ತುಂಬಿಕೊಂಡು ಅದರಿಂದ ಪ್ರಭಾವಿತನಾಗಿ ಪಾಪಕರ್ಮದಲ್ಲಿ ಪ್ರವೃತ್ತನಾಗುತ್ತಾನೋ, ಆ ಕೆಲಸವು ಮುಗಿದ ಮೇಲೆ ನಾನು ಮಾಡಿದ್ದು ತಪ್ಪಾಯಿತೆಂದು ಪಶ್ಚಾತ್ತಾಪ ಪಡುವುದಿಲ್ಲವೋ, ತಾನು ಮಾಡಿದ ಪಾಪಕರ್ಮಕ್ಕೆ ನಾಚಿಕೆ ಪಡುವುದಿಲ್ಲವೋ, ಅಂಥವನಲ್ಲಿ ಆ ಪಾಪ-ಕಾರ್ಯವು ಪೂರ್ಣರೂಪದಲ್ಲಿ ಪ್ರತಿಷ್ಠಿತವಾಗಿರುತ್ತದೆಂದು ಶಾಸ್ತ್ರಗಳು ಪ್ರತಿಪಾದನೆ ಮಾಡುತ್ತವೆ. ಅಂಥವನಿಗೆ ಯಾವುದೇ ಪ್ರಾಯಶ್ಚಿತ್ತಗಳಿರುವುದಿಲ್ಲ. ಲೋಕದ ದೃಷ್ಟಿಯಲ್ಲಿ ಬಲಾತ್ಕಾರಕ್ಕೆ ಅವನು ಪ್ರಾಯಶ್ಚಿತ್ತ ಮಾಡಿಕೊಂಡರೂ ಅವನ ಪಾಪವು ಸ್ವಲ್ಪವೂ ಸಹ ಕಡಿಮೆಯಾಗುವುದಿಲ್ಲ.

ತ್ವಂ ತು ಶುಕ್ಲಾಭಿಜಾತೀಯಃ ಪರದೋಷೇಣ ಕಾರಿತಃ।
ಅನಿಚ್ಛಮಾನಃ ಕರ್ಮೇದಂ ಕೃತ್ವಾ ಚ ಪರಿತಪ್ಯಸೇ ॥೨೫॥

ಯುಧಿಷ್ಠಿರನೇ! ನೀನು ಸ್ವಭಾವತಃ ಪರಿಶುದ್ಧನಾಗಿರುವವನು. ನಿನಗೆ ಯುದ್ಧ ಮಾಡಬೇಕೆಂಬ ಇಚ್ಛೆಯು ಸರ್ವಥಾ ಇರಲಿಲ್ಲ. ಶತ್ರುಗಳಾದ ಕಾರಣದಿಂದ ಅನಿ-ವಾರ್ಯವಾಗಿ ನೀನು ಯುದ್ಧವನ್ನು ಮಾಡಬೇಕಾಯಿತು. ಮನಸ್ಸಿಲ್ಲದಿದ್ದರೂ

ಯುದ್ಧವನ್ನು ಪೂರ್ಣಗೊಳಿಸಿರುವಿ. ಯುದ್ಧವಾದ ಮೇಲೂ ಸಹ ಪಶ್ಚಾತ್ತಾಪವನ್ನು ಪಡುತ್ತಿರುವಿ.

ಟಿಪ್ಪಣಿ - 'ಪರದೋಷೇಣ ಕಾರಿತಃ' ಇತ್ಯತ್ರ ಪರೇಷಾಂ ದುರ್ಯೋ-ಧನಾದೀನಾಂ ದೋಷೇಣ ಕಪಟದ್ಯೂತರಾಜ್ಯಾಪಹಾರಲಾಕ್ಷಾಗೃಹಾದಿಕರಣ-ದೋಷೇಣ।

'ಪರದೋಷೇಣ ಕಾರಿತಃ' ಎಂಬಲ್ಲಿ ಪರರೆಂದರೆ ದುರ್ಯೋಧನಾದಿಗಳು ಎಂದರ್ಥ. ಅವನು ಮಾಡಿದ, ಕಪಟದ್ಯೂತ, ರಾಜ್ಯಾಪಹಾರಲಾಕ್ಷಾಗೃಹದಾಹ, ಇವೇ ಮೊದಲಾದ ಪಾಪಕಾರ್ಯಗಳಿಂದ ಎಂದರ್ಥ.

ಅಶ್ವಮೇಧೋ ಮಹಾಯಜ್ಞಃ ಪ್ರಾಯಶ್ಚಿತ್ತಮುದಾಹೃತಮ್ ।
ತಮಾಹರ ಮಹಾರಾಜ ವಿಪಾಪ್ಮೈವಂ ಭವಿಷ್ಯಸಿ ॥೨೬॥

ಇಚ್ಛೆ ಇಲ್ಲದಿದ್ದರೂ ನಡೆದು ಹೋದ ಸರ್ವವಿನಾಶಕ್ಕೆ ಒಂದು ಪ್ರಾಯಶ್ಚಿತ್ತವಿದೆ. ಮಹಾಯಜ್ಞವೆನಿಸಿದ ಅಶ್ವಮೇಧಯಾಗವನ್ನು ಪ್ರಾಯಶ್ಚಿತ್ತವನ್ನಾಗಿ ಉದಾಹರಿಸ-ಲಾಗಿದೆ. ಆ ಅಶ್ವಮೇಧಯಾಗವನ್ನು ನೀನು ಆಚರಿಸು. ಅನಂತರ ನಿನ್ನ ಮನಸ್ಸಿನ-ಲ್ಲಿರುವ ಕಲ್ಮಶವು ಪರಿಹಾರವಾಗಿ ಪಾಪರಹಿತನಾಗುವಿ.

ಮರುದ್ಭಿಃ ಸಹ ಜಿತ್ವಾರೀನ್ ಮಘವಾನ್ ಪಾಕಶಾಸನಃ ।
ಏಕೈಕಂ ಕ್ರತುಮಾಹೃತ್ಯ ಶತಕೃತ್ವಃ ಶತಕ್ರತುಃ ॥೨೭॥

ಪಾಕಶಾಸನನಾದ ದೇವೇಂದ್ರನು ಎಲ್ಲ ಮರುದ್ಗಣಗಳ ಜೊತೆ ಆ ದೈತ್ಯರನ್ನು ಜಯಿಸಿದನು. ಒಮ್ಮೊಮ್ಮೆ ಜಯಸಿದಾಗಲೂ ಒಂದೊಂದು ಅಶ್ವಮೇಧಯಾಗವನ್ನು ಆಚರಿಸುತ್ತಿದ್ದನು. ಹೀಗೆ ನೂರು ಬಾರಿ ಜಯಿಸಿ, ನೂರು ಅಶ್ವಮೇಧಯಾಗಗಳನ್ನು ಆಚರಿಸಿದನು. ಆದ್ದರಿಂದಲೇ ಶತಕ್ರತು ಎಂಬುದಾಗಿ ಅನ್ವರ್ಥನಾಮವನ್ನು ಹೊಂದಿದನು.

ಪೂತಪಾಪ್ಮಾ ಜಿತಸ್ವರ್ಗೋ ಲೋಕಾನ್ ಪ್ರಾಪ್ಯ ಸುಖೋದಯಾನ್ ।
ಮರುದ್ಗಣವೃತಃ ಶಕ್ರಃ ಶುಶುಭೇ ಭಾಸಯನ್ ದಿಶಃ ॥೨೮॥

ಸಕಲಪಾಪಗಳಿಂದ ರಹಿತನಾದ ಸ್ವರ್ಗಲೋಕವನ್ನು ಜಯಿಸಿದ ಆ ದೇವೇಂದ್ರನು ಎಲ್ಲ ಪುಣ್ಯಲೋಕಗಳಿಗೆ ತೆರಳಿದನು. ದೇವತೆಗಳ ಸಮೂಹದಿಂದ ಪರಿವೃತನಾಗಿ ಹತ್ತುದಿಕ್ಕುಗಳಲ್ಲಿಯೂ ಬೆಳಗುತ್ತಾ ಪ್ರಕಾಶಿಸಿದನು.

ಸ್ವರ್ಗಲೋಕೇ ಮಹೀಯಂತಮಪ್ಸರೋಭಿಃ ಶಚೀಪತಿಮ್ ।
ಋಷಯಃ ಪರ್ಯುಪಾಸಂತೇ ದೇವಾಶ್ಚ ವಿಬುಧೇಶ್ವರಮ್ ॥೨೯॥

ಸ್ವರ್ಗಲೋಕದಲ್ಲಿ ಅಪ್ಸರೆಯರಿಂದ ಸೇವಿಸಲ್ಪಟ್ಟನು. ದೇವೇಶ್ವರನಾದ ಶಚೀಪತಿಯಾದ ಆ ಇಂದ್ರನನ್ನು ದೇವತೆಗಳಾದರೂ ನಿರಂತರ ಇಂದೂ ಸಹ ಉಪಾಸನೆ ಮಾಡುತ್ತಲೇ ಇದ್ದಾರೆ.

ಸೋಽಯಂ ತ್ವಮಿಹ ಸಂಕ್ರಾಂತೋ ವಿಕ್ರಮೇಣ ವಸುಂಧರಾಮ್ ।
ನಿರ್ಜಿತಾಶ್ಚ ಮಹೀಪಾಲಾ ವಿಕ್ರಮೇಣ ತ್ವಯಾನಘ ॥೩೦॥

ಪಾಪರಹಿತನೇ! ನಿನ್ನ ಭುಜಪರಾಕ್ರಮದಿಂದ ಸಮಗ್ರ ಭೂಮಂಡಲವನ್ನು ನೀನು ಗೆದ್ದಿರುವಿ. ಎಲ್ಲ ರಾಜರನ್ನು ಸೋಲಿಸಿರುವಿ. ನಿನಗೆ ಸಮಸ್ತ ಭೂಮಂಡಲವು ಈಗ ಅಧೀನವಾಗಿದೆ.

ತೇಷಾಂ ಪುರಾಣಿ ರಾಷ್ಟ್ರಾಣಿ ಗತ್ವಾ ರಾಜನ್ ಸುಹೃದ್ವೃತಃ ।
ಭ್ರಾತೄನ್ ಪುತ್ರಾಂಶ್ಚ ಪೌತ್ರಾಂಶ್ಚ ಸ್ವೇ ಸ್ವೇ ರಾಜ್ಯೇಽಭಿಷೇಚಯ ॥೩೧॥

ನಿನ್ನಿಂದ ಹತರಾದ ಎಲ್ಲ ರಾಜರುಗಳ ಪಟ್ಟಣಗಳಿಗೆ ತೆರಳು. ರಾಷ್ಟ್ರಗಳಿಗೆ ತೆರಳು. ಅಲ್ಲಿರುವ ಸುಹೃಜ್ಜನರನ್ನು, ರಾಜರ ಅನುಜರನ್ನು, ಮಕ್ಕಳನ್ನು, ಮೊಮ್ಮಕ್ಕಳನ್ನು, ಆಯಾ ರಾಜ್ಯದ ಸಿಂಹಾಸನದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕವನ್ನು ಮಾಡು.

ಬಾಲಾನಪಿ ಚ ಗರ್ಭಸ್ಥಾನ್ ಸಾಂತ್ವಾನಿ ಸಮುದಾಚರನ್ ।
ರಂಜಯನ್ ಪ್ರಕೃತೀಃ ಸರ್ವಾಃ ಪರಿಪಾಹಿ ವಸುಂಧರಾಮ್ ॥೩೨॥

ಒಂದುವೇಳೆ ಮಕ್ಕಳುಗಳು ಉಳಿದಿದ್ದರೆ, ಅಥವಾ ಗರ್ಭದಲ್ಲಿ ಶಿಶುಗಳಿದ್ದರೆ, ಆ ರಾಜಪರಿವಾರದವರಿಗೆ ಮುಂದೆ ಆ ಶಿಶುವನ್ನೇ ಸಿಂಹಾಸನದಲ್ಲಿ ಕುಳ್ಳಿರಿಸಿ ಪಟ್ಟ-ಗಟ್ಟುತ್ತೇನೆಂದು ಆಶ್ವಾಸನೆಯನ್ನು ನೀಡು. ಅವರನ್ನು ಸಮಾಧಾನಗೊಳಿಸು. ಎಲ್ಲಾ ಪ್ರಜೆಗಳನ್ನು ಸಂತೋಷಪಡಿಸಿ, ಸಮಗ್ರಭೂಮಂಡಲಗಳನ್ನು ಪರಿಪಾಲನೆ ಮಾಡು.

ಕುಮಾರೋ ನಾಸ್ತಿ ಯೇಷಾಂ ಚ ಕನ್ಯಾಸ್ತತ್ರಾಭಿಷೇಚಯ।
ಕಾಮಾಶಯೋ ಹಿ ಸ್ತ್ರೀವರ್ಗಃ ಶೋಕಮೇವಂ ಪ್ರಹಾಸ್ಯಸಿ ॥೩೩॥

ಒಂದು ವೇಳೆ ಯಾವುದಾದರೂ ರಾಜವಂಶದಲ್ಲಿ ಗಂಡುಮಕ್ಕಳಿಲ್ಲದಿದ್ದರೆ, ಕುಮಾರಿಯರನ್ನೇ ಸಿಂಹಾಸನದಲ್ಲಿ ಕುಳ್ಳಿರಿಸಿ, ಪಟ್ಟಾಭಿಷೇಕವನ್ನು ಮಾಡು. ಹೀಗೆ ಮಾಡುವುದರಿಂದ ಅಂತಃಪುರದ ಸ್ತ್ರೀಯರಿಗೆ ಬಹಳ ಸಂತೋಷವಾಗುತ್ತದೆ. ಅವರ ಕಾಮನೆಗಳು ಪೂರ್ಣವಾದಂತಾಗಿ ಅವರ ಶೋಕವನ್ನು ನೀನು ಪರಿಹಾರ ಮಾಡಿ-ದಂತಾಗುತ್ತದೆ.

ಏವಮಾಶ್ವಾಸನಂ ಕೃತ್ವಾ ಸರ್ವರಾಷ್ಟ್ರೇಷು ಭಾರತ।
ಯಜಸ್ವ ವಾಜಿಮೇಧೇನ ಯಥೇಂದ್ರೋ ವಿಜಯೀ ಪುರಾ ॥೩೪॥

ಭಾರತನೇ ! ಪ್ರತಿಯೊಂದು ರಾಷ್ಟ್ರಗಳಿಗೂ ಭೇಟಿ ನೀಡು. ದುಃಖಿತರಾದ ಎಲ್ಲ ಪ್ರಜೆಗಳನ್ನು ಸಮಾಧಾನಪಡಿಸು. ಇಂದ್ರನು ಹೇಗೆ ಅಶ್ವಮೇಧಯಾಗವನ್ನು ಮಾಡಿದನೋ, ಅದರಂತೆ ನೀನೂ ಸಹ ಅಶ್ವಮೇಧಯಾಗವನ್ನು ಆಚರಿಸು.

ಅಶೋಚ್ಯಾಸ್ತೇ ಮಹಾತ್ಮಾನಃ ಕ್ಷತ್ರಿಯಾಃ ಕ್ಷತಿಯರ್ಷಭ।
ಸ್ವಕರ್ಮಭಿರ್ಗತಾ ನಾಶಂ ಕೃತಾಂತಬಲಮೋಹಿತಾಃ ॥೩೫॥

ಯುದ್ಧದಲ್ಲಿ ಯಾರು ಇಚ್ಛೆಪಟ್ಟು ಮೃತರಾಗಿದ್ದಾರೋ, ಅಂಥ ಕ್ಷತ್ರಿಯರ ವಿಷಯದಲ್ಲಿ ನೀನು ದುಃಖಪಡಲು ಕಾರಣವಿಲ್ಲ. ಕ್ಷತ್ರಿಯಶ್ರೇಷ್ಠನೇ ! ಕೃತಾಂತನಾದ ಕಾಲರೂಪಿ ಪರಮಾತ್ಮನ ಬಲದಿಂದ ಮೋಹಿತರಾಗಿ ಅವರೆಲ್ಲರೂ ತಮ್ಮತಮ್ಮ ಕರ್ಮಗಳಿಂದಲೇ ಮೃತರಾಗಿದ್ದಾರೆ.

ಅವಾಪ್ತಃ ಕ್ಷತ್ರಧರ್ಮಸ್ತೇ ರಾಜ್ಯಂ ಪ್ರಾಪ್ತಮಕಲ್ಮಷಮ್ ।
ಚಾರಸ್ವ ಧರ್ಮಂ ಕೌಂತೇಯ ಶ್ರೇಯಾನ್ ಯಃ ಪ್ರೇತ್ಯ ಭಾರತ॥೨೬॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ಅಶ್ವಮೇಧಪ್ರಶಂಸನಂ ನಾಮ ಚತುಸ್ತ್ರಿಂಶೋऽಧ್ಯಾಯಃ ॥೩೪॥

ನೀನು ನಿನ್ನ ಸ್ವಧರ್ಮವಾದ ಕ್ಷತ್ರಿಯಧರ್ಮಕ್ಕೆ ಅನುಸಾರಿಯಾಗಿ ನಡೆದುಕೊಂಡಿರುವಿ. ಇದರ ಫಲವಾಗಿಯೇ ಯಾರೊಬ್ಬ ಶತ್ರುಗಳಿಲ್ಲದ ರಾಜ್ಯಸಂಪತ್ತು ನಿನಗೆ ಲಭಿಸಿದೆ. ಯಾವಧರ್ಮವು ನಿನಗೆ ಬದುಕಿರುವಾಗ ಮತ್ತು ಪರಲೋಕದಲ್ಲಿ ಶ್ರೇಯಸ್ಸನ್ನು ಉಂಟುಮಾಡುತ್ತದೋ, ಅಂಥ ಧರ್ಮವನ್ನು ನೀನು ಪರಿರಕ್ಷಣೆ ಮಾಡು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ಅಶ್ವಮೇಧ ಪ್ರಶಂಸೆ ಎಂಬ ೩೪ನೆಯ ಅಧ್ಯಾಯವು ಮುಗಿಯಿತು.

* * * * *

೩೫. ಮೂವತ್ತೈದನೆಯ ಅಧ್ಯಾಯ

ವೇದವ್ಯಾಸದೇವರು ಯುಧಿಷ್ಠಿರನಿಗೆ ಪ್ರಾಯಶ್ಚಿತ್ತಕ್ಕೆ ಕಾರಣವಾದ ಪಾಪಕರ್ಮಗಳ ಬಗ್ಗೆ, ಪ್ರಾಯಶ್ಚಿತ್ತಗಳ ಬಗ್ಗೆ ವಿವರಿಸುತ್ತಾರೆ. ಯಾವ ಪ್ರಾಯಶ್ಚಿತ್ತವನ್ನು ಮಾಡುವುದರಿಂದ ಯಾವ ಪಾಪವು ಪರಿಹಾರವಾಗುತ್ತದೆ ಎಂಬುದರ ವಿವೇಚನೆ.

ಯುಧಿಷ್ಠಿರಃ

ಕಾನಿ ಕೃತ್ವೇಹ ಕರ್ಮಾಣಿ ಪ್ರಾಯಶ್ಚಿತ್ತೀಯತೇ ನರಃ ।
ಕಿಂ ಕೃತ್ವಾ ಚೈವ ಮುಚ್ಯೇತ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಪಿತಾಮಹರೇ! ಯಾವ ಕರ್ಮವನ್ನು ಆಚರಣೆ ಮಾಡುವುದರಿಂದ ಮನುಷ್ಯನಾದವನು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾಗುತ್ತದೆ. ಯಾವ ಬಗೆಯ ಪ್ರಾಯಶ್ಚಿತ್ತಗಳನ್ನು ಮಾಡುವುದರಿಂದ ಆ ಪಾಪಗಳು ಪರಿಹಾರವಾಗುತ್ತವೆ. ಈ ವಿಷಯಗಳನ್ನು ನನಗೆ ದಯವಿಟ್ಟು ವಿವರಿಸಿರಿ.

ವ್ಯಾಸಃ

ಅಕುರ್ವನ್ ವಿಹಿತಂ ಕರ್ಮ ಪ್ರತಿಷಿದ್ಧಾನಿ ಚಾಚರನ್ ।
ಪ್ರಾಯಶ್ಚಿತ್ತೀಯತೇ ಹ್ಯೇವಂ ನರೋ ಮಿಥ್ಯಾ ಚ ವರ್ತಯನ್ ॥೨॥

ಯುಧಿಷ್ಠಿರನೇ ! ವೇದಶಾಸ್ತ್ರದಲ್ಲಿ ಯಾವ ಕರ್ಮಗಳನ್ನು ಮಾಡಬೇಕೆಂದು ವಿಧಿ-ಸಲಾಗಿರುತ್ತದೋ, ಅದನ್ನು ಆಚರಿಸದೇ ಇರುವವನು, ಹಾಗೂ ವೇದಶಾಸ್ತ್ರಗಳಲ್ಲಿ ನಿಷೇಧ ಮಾಡಲ್ಪಟ್ಟ ಕರ್ಮಗಳನ್ನು ಆಚರಿಸುವವನು ಪ್ರಾಯಶ್ಚಿತ್ತವನ್ನು ಮಾಡಿ-ಕೊಳ್ಳಬೇಕು. ಶಾಸ್ತ್ರವಿರುದ್ಧವಾದ ಆಚರಣಶೀಲನೇ ಪ್ರಾಯಶ್ಚಿತ್ತಭಾಗಿಯಾಗುತ್ತಾನೆ.

ಸೂರ್ಯೋಽಭ್ಯುದಿತೋ ಯಶ್ಚ ಬ್ರಹ್ಮಚಾರೀ ಭವತ್ಯುತ ।
ತಥಾ ಸೂರ್ಯಾಭಿನಿರ್ಮುಕ್ತಃ ಕುನಖೀ ಶ್ಯಾವದನ್ನಪಿ ॥೩॥

ಸೂರ್ಯೋದಯ ಹಾಗೂ ಸೂರ್ಯಾಸ್ತಗಳಲ್ಲಿ ಯಾವ ಬ್ರಹ್ಮಚಾರಿಯು ಮಲಗಿರುತ್ತಾನೋ ಅವನು ಪ್ರಾಯಶ್ಚಿತ್ತಭಾಗಿಯಾಗುತ್ತಾನೆ. ಉಗುರುಗಳನ್ನು ಬೆಳಿಸಿ-ಕೊಂಡವನು, ಹಲ್ಲುಗಳನ್ನು ಕಪ್ಪಾಗಿ ಇಟ್ಟುಕೊಂಡವನು ಪ್ರಾಯಶ್ಚಿತ್ತಕ್ಕೆ ಭಾಗಿ-ಯಾಗುತ್ತಾನೆ.

ಟಿಪ್ಪಣಿ - ಸೂರ್ಯೋಽಭ್ಯುದಿತ ಇತ್ಯತ್ರ **ಯಶ್ಚ ಬ್ರಹ್ಮಚಾರೀ** ಅರ್ಘ್ಯಾತ್ ಪೂರ್ವಂ **ಸೂರ್ಯೇಣ ಅಭ್ಯುದಿತೋ ಭವತಿ** ಸೋಽಪಿ ಪ್ರಾಯಶ್ಚಿತ್ತೀ । ತಥಾ ಸಾಯಮರ್ಘ್ಯಕಾಲೇ ಸೂರ್ಯೇಣ ಅಭಿನಿರ್ಮುಕ್ತಃ ಅರ್ಘ್ಯಕಾಲೇ ಸೂರ್ಯ-ರಹಿತ ಇತ್ಯರ್ಥಃ । ತಾವುಭೌ ಪ್ರಾಯಶ್ಚಿತ್ತಿನೌ । 'ಪೂರ್ವಾಂ ಸಂಧ್ಯಾಂ ಸನಕ್ಷತ್ರಾ-ಮುತ್ತರಾಂ ಸದಿವಾಕರಾಮ್' ಇತಿ ಸ್ಮೃತೇಃ ।

ಸೂರ್ಯೇಣಾಭ್ಯುದಿತ ಎಂಬಲ್ಲಿ ಯಾವ ಬ್ರಹ್ಮಚಾರಿಯು ಸೂರ್ಯೋದ-ಯಕಾಲದಲ್ಲಿ ಅರ್ಘ್ಯವನ್ನು ನೀಡುವುದಿಲ್ಲವೋ, ಸೂರ್ಯಾಸ್ತಕಾಲದಲ್ಲಿ ಯಾರು ಅರ್ಘ್ಯವನ್ನು ನೀಡುವುದಿಲ್ಲವೋ, ಅವನೂ ಸಹ ಪಾಪಭಾಗಿಯಾ-ಗುತ್ತಾನೆ. 'ಪೂರ್ವಾಂ ಸಂಧ್ಯಾಂ ಸನಕ್ಷತ್ರಾಮುತ್ತರಾಂ ಸದಿವಾಕರಾಮ್' ಎಂಬ ಸ್ಮೃತಿಯ ವಾಕ್ಯದಂತೆ ಸೂರ್ಯನು ಇಲ್ಲದೇ ಇರುವ ನಕ್ಷತ್ರವು ಹುಟ್ಟುವ ಬೆಳಿಗ್ಗೆಯ ಕಾಲದಲ್ಲಿ ಅರ್ಘ್ಯವನ್ನು ನೀಡಬೇಕು. ಸಾಯಂಕಾಲದಲ್ಲಿ ಸೂರ್ಯನು

ಇರುವಾಗಲೇ ಅರ್ಘ್ಯವನ್ನು ನೀಡಬೇಕು. ಎರಡನ್ನೂ ಆಚರಿಸದೇ ಇದ್ದರೆ, ಮಹಾಪಾಪಕ್ಕೆ ಭಾಗಿಯಾಗುತ್ತಾನೆಂದಭಿಪ್ರಾಯ.

ಪರಿವಿತ್ತಿಃ ಪರಿವೇತ್ತಾ ಬ್ರಹ್ಮಘ್ನೋ ಯಶ್ಚ ಕುತ್ಸಕಃ।
ದಿಧಿಷೂಪಪತಿರ್ಯಃ ಸ್ಯಾದಗ್ರೇ ದಿಧಿಷುರೇವ ಚ ॥೪॥

ಹಿರಿಯಸಹೋದರನು ವಿವಾಹವಾಗದೇ ಇದ್ದಾಗ ತಮ್ಮನಾದವನು ವಿವಾಹವಾದರೆ 'ಪರಿವೇತ್ತಾ' ಎಂಬುದಾಗಿ ಕರೆಸಿಕೊಳ್ಳುತ್ತಾನೆ. ಅವನ ಹೆಂಡತಿಯು ಪರಿವಿತ್ತಿ ಎಂಬುದಾಗಿ ಕರೆಸಿಕೊಳ್ಳುತ್ತಾಳೆ. ಇವರಿಬ್ಬರೂ ಪ್ರಾಯಶ್ಚಿತ್ತಭಾಗಿಗಳು. ಇದರಂತೆ ಬ್ರಾಹ್ಮಣರ ಹನನವನ್ನು ಮಾಡಿದವನು, ಲೋಕದಲ್ಲಿ ನಿಂದಿತನಾದವನು, ಒಮ್ಮೆ ವಿವಾಹವಾದ ನಾರಿಯನ್ನು ವಿವಾಹವಾಗುವ ದಿಧಿಷು ಹಾಗೂ ವಿವಾಹಿತಳಾದ ದಿಧಿಷೂ ಇವರಿಬ್ಬರು ಪ್ರಾಯಶ್ಚಿತ್ತಕ್ಕೆ ಭಾಜನರಾಗುತ್ತಾರೆ.

ಟಿಪ್ಪಣಿ - ದಿಧಿಷೂಪಪತ್ತಿಶ್ಚೈವ ಇತ್ಯತ್ರ **ಪರಿವೇತ್ತಾ** ಜ್ಯೇಷ್ಠೇ ಅನೂಢೇ **ಸತಿ** ವಿವಾಹಕರ್ತಾ ಅನುಜಃ। **ಪರಿವಿತ್ತಿಃ** ತಸ್ಯ ಭಾರ್ಯಾ। 'ಪರಿವೇತ್ತಾನುಜೋऽನೂಢೇ ಜ್ಯೇಷ್ಠೇ ದಾರಪರಿಗ್ರಹಾತ್। ಪರಿವಿತ್ತಿಸ್ತು ತಜ್ಜ್ಞಾಯಾನ್' ಇತ್ಯಮರಃ। ದ್ವಿಃ ಊಢಾ ನಾರೀ ದಿಧಿಷೂಃ ತಸ್ಯಾಃ ಉಪಪತಿಃ ಜಾರಃ। **ಅಗ್ರೇದಿಧಿಷುಃ** ದ್ವಿರೂಢಾಯಾಃ **ಪತಿಃ**। 'ಪುನರ್ಭೂರ್ದಿಧಿಷೂರೂಢಾ ದ್ವಿಸ್ತಸ್ಯಾ ದಿಧಿಷುಃ ಪತಿಃ' ಇತ್ಯಮರಃ। ದ್ವಿಃ ಊಢಾ ನಾರೀ ಪುನರ್ಭೂಃ ದಿಧಿಷೂಃ ಇತ್ಯುಚ್ಯತೇ। ತಸ್ಯಾಃ ಪತಿಃ ದಿಧಿಷುಃ ಇತ್ಯುಚ್ಯತೇ ಇತ್ಯರ್ಥಃ॥

'ಪರಿವೇತ್ತಾ' ಅಣ್ಣನು ಮದುವೆಯಾಗದಿದ್ದಾಗ ತಮ್ಮನು ವಿವಾಹವಾದರೆ ಪರಿವೇತ್ತಾ ಎಂಬುದಾಗಿ ಕರೆಸಿಕೊಳ್ಳುತ್ತಾನೆ. ಅವನ ಹೆಂಡತಿಯು ಪರಿವತ್ತಿ ಎಂಬುದಾಗಿ ಕರೆಸಿಕೊಳ್ಳುತ್ತಾನೆ. 'ಪರಿವೇತ್ತಾನುಜೋऽನೂಢೇ ಜ್ಯೇಷ್ಠೇ ದಾರಪರಿಗ್ರಹಾತ್। ಪರಿವಿತ್ತಿಸ್ತು ತಜ್ಜ್ಞಾಯಾನ್' ಎಂಬುದಾಗಿ ಅಮರಕೋಶವು ಹೇಳುತ್ತದೆ. ಆದ್ದರಿಂದ ಅಣ್ಣನ ಮದುವೆಯಾಗದಿದ್ದಾಗ ತಮ್ಮನು ಮದುವೆಯಾದರೆ ತಮ್ಮ ಹಾಗೂ ತಮ್ಮನ ಹೆಂಡತಿಯು ಪಾಪಭಾಜನರಾಗುತ್ತಾರೆಂದು ತಿಳಿಯಬೇಕು.

ಯಾವ ನಾರಿಯು ಎರಡು ಬಾರಿಯು ವಿವಾಹವಾಗಿರುತ್ತಾಳೋ, ಅವಳನ್ನು 'ದಿಧಿಷೂ' ಎಂಬುದಾಗಿ ಕರೆಯುತ್ತಾರೆ. ಅವಳನ್ನು ವಿವಾಹವಾದವನು ಜಾರ ಎಂಬುದಾಗಿ ಕರೆಸಿಕೊಳ್ಳುತ್ತಾನೆ. 'ಅಗ್ರೇದಿಧಿಷುಃ' ಎಂಬುದಕ್ಕೂ ಎರಡು ಬಾರಿ ವಿವಾಹವಾದವಳ ಪತಿ ಎಂದರ್ಥ. 'ಪುನರ್ಭೂರ್ದಿಧಿಷೂರೂಢಾ ದ್ವಿಸ್ತಸ್ಯಾ ದಿಧಿಷುಃ ಪತಿಃ' ಎಂಬುದಾಗಿ ಅಮರಕೋಶವು ಹೇಳುತ್ತದೆ. ಎರಡು ಬಾರಿ ವಿವಾಹವಾದ ನಾರಿಯು 'ದಿಧಿಷೂ' ಎಂಬುದಾಗಿ ಕರೆಸಿಕೊಳ್ಳುತ್ತಾಳೆ. ಅವಳ ಪತಿಯು 'ದಿಧಿಷುಃ' ಎಂಬುದಾಗಿ ಕರೆಸಿಕೊಳ್ಳುತ್ತಾನೆ.

ಅವಕೀರ್ಣೋ ಭವೇದ್ ಯಶ್ಚ ದ್ವಿಜಾತಿವಧಕಸ್ತಥಾ।
ಅತೀರ್ಥೇ ಬ್ರಹ್ಮಣಸ್ತ್ಯಾಗೀ ತೀರ್ಥೇ ಚಾಪ್ರತಿಪಾದಕಃ ॥೫॥

ಬ್ರಹ್ಮಚರ್ಯವ್ರತವನ್ನು ನಾಶಮಾಡಿಕೊಂಡವನು ದ್ವಿಜಾತಿಗಳನ್ನು ವಧೆ ಮಾಡು-ವವನು. ಅಪಾತ್ರನಿಗೆ ದಾನ ಮಾಡುವವನು. ಪಾತ್ರನಿಗೆ ದಾನ ಮಾಡದವನು. ಇವರೆಲ್ಲರೂ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲು ಅರ್ಹರಾಗುತ್ತಾರೆ.

ಟಿಪ್ಪಣಿ - ಅವಕೀರ್ಣೀ ಇತ್ಯತ್ರ **ಅವಕೀರ್ಣೀ** ರೇತಃಸ್ಖಲನಾದಿನಾ ಕ್ಷತವ್ರತೋ ಬ್ರಹ್ಮಚಾರೀ। 'ಅವಕೀರ್ಣೀ ಕ್ಷತವ್ರತಃ' ಇತ್ಯಮರಃ। **ಅತೀರ್ಥೇ** ಅಪಾತ್ರೇ **ಬ್ರಹ್ಮಣಃ** ಬ್ರಾಹ್ಮಣಸ್ಯ **ತ್ಯಾಗೀ**। 'ನಿದಾನಾಗಮಯೋಸ್ತೀರ್ಥಮೃಷಿಜುಷ್ಟೇ ಜಲೇ ಗುರೌ' ಇತ್ಯಮರಃ। ನಿದಾನಂ ದಾನಸ್ಯಾದಿಕಾರಣಮ್, ಪಾತ್ರಮಿತ್ಯರ್ಥಃ।

ಅವಕೀರ್ಣೀ = ರೇತಃಸ್ಖಲನಾದಿಗಳಿಂದ ಬ್ರಹ್ಮಚರ್ಯವ್ರತವನ್ನು ಹಾಳು ಮಾಡಿಕೊಂಡವನು. ದ್ವಿಜಾತಿವದಕಃ = ವೈಶ್ಯ, ಕ್ಷತ್ರಿಯ, ಬ್ರಾಹ್ಮಣ ಇವರನ್ನು ಕೊಲ್ಲುವವನು. ಅತೀರ್ಥೇ = ಅಪಾತ್ರರಲ್ಲಿ, ಬ್ರಹ್ಮಣಃ = ಬ್ರಾಹ್ಮಣನ, ತ್ಯಾಗೀ = ತ್ಯಾಗವು, ತೀರ್ಥೇಚ = ಪಾತ್ರರಲ್ಲಿ, ಅಪ್ರತಿಪಾದಕಃ = ದಾನವನ್ನು ಮಾಡದವನು.

ಗ್ರಾಮಘಾತೀ ಚ ಕೌಂತೇಯ ಮಾಂಸಸ್ಯ ಪರಿವಿಕ್ರಯೀ।
ಶೂದ್ರಸ್ತ್ರೀವಧಕೋ ಯಶ್ಚ ಪೂರ್ವಃ ಪೂರ್ವಸ್ತು ಗರ್ಹಿತಃ ॥೬॥

ಕೌಂತೇಯನೇ! ಯಾರು ಗ್ರಾಮವನ್ನು ನಾಶಗೊಳಿಸುತ್ತಾನೋ, ಮಾಂಸಾದಿ-ಗಳನ್ನು ಮಾರಾಟ ಮಾಡುತ್ತಾನೋ, ಸ್ತ್ರೀಯರನ್ನು, ಶೂದ್ರರನ್ನು ನಾಶಮಾಡು-

ಇರುವಾಗಲೇ ಅರ್ಘ್ಯವನ್ನು ನೀಡಬೇಕು. ಎರಡನ್ನೂ ಆಚರಿಸದೇ ಇದ್ದರೆ, ಮಹಾಪಾಪಕ್ಕೆ ಭಾಗಿಯಾಗುತ್ತಾನೆಂದಭಿಪ್ರಾಯ.

ಪರಿವಿತ್ತಿಃ ಪರಿವೇತ್ತಾ ಬ್ರಹ್ಮಘ್ನೋ ಯಶ್ಚ ಕುತ್ಸಕಃ।
ದಿಧಿಷೂಪಪತಿರ್ಯಃ ಸ್ಯಾದಗ್ರೇ ದಿಧಿಷುರೇವ ಚ ॥೪॥

ಹಿರಿಯಸಹೋದರನು ವಿವಾಹವಾಗದೇ ಇದ್ದಾಗ ತಮ್ಮನಾದವನು ವಿವಾಹವಾದರೆ 'ಪರಿವೇತ್ತಾ' ಎಂಬುದಾಗಿ ಕರೆಸಿಕೊಳ್ಳುತ್ತಾನೆ. ಅವನ ಹೆಂಡತಿಯು ಪರಿವಿತ್ತಿ ಎಂಬುದಾಗಿ ಕರೆಸಿಕೊಳ್ಳುತ್ತಾಳೆ. ಇವರಿಬ್ಬರೂ ಪ್ರಾಯಶ್ಚಿತ್ತಭಾಗಿಗಳು. ಇದರಂತೆ ಬ್ರಾಹ್ಮಣರ ಹನನವನ್ನು ಮಾಡಿದವನು, ಲೋಕದಲ್ಲಿ ನಿಂದಿತನಾದವನು, ಒಮ್ಮೆ ವಿವಾಹವಾದ ನಾರಿಯನ್ನು ವಿವಾಹವಾಗುವ ದಿಧಿಷು ಹಾಗೂ ವಿವಾಹಿತಳಾದ ದಿಧಿಷೂ ಇವರಿಬ್ಬರು ಪ್ರಾಯಶ್ಚಿತ್ತಕ್ಕೆ ಭಾಜನರಾಗುತ್ತಾರೆ.

ಟಿಪ್ಪಣಿ - ದಿಧಿಷೂಪಪತಿಶ್ಚೈವ ಇತ್ಯತ್ರ **ಪರಿವೇತ್ತಾ** ಜ್ಯೇಷ್ಠೇ ಅನೂಢೇ **ಸತಿ** ವಿವಾಹಕರ್ತಾ ಅನುಜಃ। **ಪರಿವಿತ್ತಿಃ** ತಸ್ಯ ಭಾರ್ಯಾ। 'ಪರಿವೇತ್ತಾನುಜೋऽನೂಢೇ ಜ್ಯೇಷ್ಠೇ ದಾರಪರಿಗ್ರಹಾತ್। ಪರಿವಿತ್ತಿಸ್ತು ತಜ್ಜ್ಞಾಯಾನ್' ಇತ್ಯಮರಃ। ದ್ವಿಃ ಊಢಾ ನಾರೀ ದಿಧಿಷೂಃ ತಸ್ಯಾಃ ಉಪಪತಿಃ ಜಾರಃ। **ಅಗ್ರೇದಿಧಿಷುಃ** ದ್ವಿರೂಢಾಯಾಃ **ಪತಿಃ**। 'ಪುನರ್ಭೂರ್ದಿಧಿಷೂರೂಢಾ ದ್ವಿಸ್ತಸ್ಯಾ ದಿಧಿಷುಃ ಪತಿಃ' ಇತ್ಯಮರಃ। ದ್ವಿಃ ಊಢಾ ನಾರೀ ಪುನರ್ಭೂಃ ದಿಧಿಷೂಃ ಇತ್ಯುಚ್ಯತೇ। ತಸ್ಯಾಃ ಪತಿಃ ದಿಧಿಷುಃ ಇತ್ಯುಚ್ಯತೇ ಇತ್ಯರ್ಥಃ॥

'ಪರಿವೇತ್ತಾ' ಅಣ್ಣನು ಮದುವೆಯಾಗದಿದ್ದಾಗ ತಮ್ಮನು ವಿವಾಹವಾದರೆ ಪರಿವೇತ್ತಾ ಎಂಬುದಾಗಿ ಕರೆಸಿಕೊಳ್ಳುತ್ತಾನೆ. ಅವನ ಹೆಂಡತಿಯು ಪರಿವತ್ತಿ ಎಂಬುದಾಗಿ ಕರೆಸಿಕೊಳ್ಳುತ್ತಾನೆ. 'ಪರಿವೇತ್ತಾನುಜೋऽನೂಢೇ ಜ್ಯೇಷ್ಠೇ ದಾರಪರಿಗ್ರಹಾತ್। ಪರಿವಿತ್ತಿಸ್ತು ತಜ್ಜ್ಞಾಯಾನ್' ಎಂಬುದಾಗಿ ಅಮರಕೋಶವು ಹೇಳುತ್ತದೆ. ಆದ್ದರಿಂದ ಅಣ್ಣನ ಮದುವೆಯಾಗದಿದ್ದಾಗ ತಮ್ಮನು ಮದುವೆಯಾದರೆ ತಮ್ಮ ಹಾಗೂ ತಮ್ಮನ ಹೆಂಡತಿಯು ಪಾಪಭಾಜನರಾಗುತ್ತಾರೆಂದು ತಿಳಿಯಬೇಕು.

ಯಾವ ನಾರಿಯು ಎರಡು ಬಾರಿಯು ವಿವಾಹವಾಗಿರುತ್ತಾಳೋ, ಅವಳನ್ನು 'ದಿಧಿಷೂ' ಎಂಬುದಾಗಿ ಕರೆಯುತ್ತಾರೆ. ಅವಳನ್ನು ವಿವಾಹವಾದವನು ಜಾರ ಎಂಬುದಾಗಿ ಕರೆಸಿಕೊಳ್ಳುತ್ತಾನೆ. 'ಅಗ್ರೇದಿಧಿಷುಃ' ಎಂಬುದಕ್ಕೂ ಎರಡು ಬಾರಿ ವಿವಾಹವಾದವಳ ಪತಿ ಎಂದರ್ಥ. 'ಪುನರ್ಭೂರ್ದಿಧಿಷೂರೂಢಾ ದ್ವಿಸ್ತಸ್ಯಾ ದಿಧಿಷುಃ ಪತಿಃ' ಎಂಬುದಾಗಿ ಅಮರಕೋಶವು ಹೇಳುತ್ತದೆ. ಎರಡು ಬಾರಿ ವಿವಾಹವಾದ ನಾರಿಯು 'ದಿಧಿಷೂ' ಎಂಬುದಾಗಿ ಕರೆಸಿಕೊಳ್ಳುತ್ತಾಳೆ. ಅವಳ ಪತಿಯು 'ದಿಧಿಷುಃ' ಎಂಬುದಾಗಿ ಕರೆಸಿಕೊಳ್ಳುತ್ತಾನೆ.

ಅವಕೀರ್ಣೋ ಭವೇದ್ ಯಶ್ಚ ದ್ವಿಜಾತಿವಧಕಸ್ತಥಾ ।
ಅತೀರ್ಥೇ ಬ್ರಹ್ಮಣಸ್ತ್ಯಾಗೀ ತೀರ್ಥೇ ಚಾಪ್ರತಿಪಾದಕಃ ॥೫॥

ಬ್ರಹ್ಮಚರ್ಯವ್ರತವನ್ನು ನಾಶಮಾಡಿಕೊಂಡವನು ದ್ವಿಜಾತಿಗಳನ್ನು ವಧೆ ಮಾಡು -ವವನು. ಅಪಾತ್ರನಿಗೆ ದಾನ ಮಾಡುವವನು. ಪಾತ್ರನಿಗೆ ದಾನ ಮಾಡದವನು. ಇವರೆಲ್ಲರೂ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲು ಅರ್ಹರಾಗುತ್ತಾರೆ.

ಟಿಪ್ಪಣಿ - ಅವಕೀರ್ಣೇ ಇತ್ಯತ್ರ **ಅವಕೀರ್ಣೇ** ರೇತಃಸ್ಖಲನಾದಿನಾ ಕ್ಷತವ್ರತೋ ಬ್ರಹ್ಮಚಾರೀ । 'ಅವಕೀರ್ಣೇ ಕ್ಷತವ್ರತಃ' ಇತ್ಯಮರಃ । **ಅತೀರ್ಥೇ** ಅಪಾತ್ರೇ **ಬ್ರಹ್ಮಣಃ** ಬ್ರಾಹ್ಮಣಸ್ಯ **ತ್ಯಾಗೀ** । 'ನಿದಾನಾಗಮಯೋಸ್ತೀರ್ಥಮೃಷಿಜುಷ್ಟೇ ಜಲೇ ಗುರೌ' ಇತ್ಯಮರಃ । ನಿದಾನಂ ದಾನಸ್ಯಾದಿಕಾರಣಮ್, ಪಾತ್ರಮಿತ್ಯರ್ಥಃ ।

ಅವಕೀರ್ಣೇ = ರೇತಃಸ್ಖಲನಾದಿಗಳಿಂದ ಬ್ರಹ್ಮಚರ್ಯವ್ರತವನ್ನು ಹಾಳು ಮಾಡಿಕೊಂಡವನು. ದ್ವಿಜಾತಿವದಕಃ = ವೈಶ್ಯ, ಕ್ಷತ್ರಿಯ, ಬ್ರಾಹ್ಮಣ ಇವರನ್ನು ಕೊಲ್ಲುವವನು. ಅತೀರ್ಥೇ = ಅಪಾತ್ರರಲ್ಲಿ, ಬ್ರಹ್ಮಣಃ = ಬ್ರಾಹ್ಮಣನ, ತ್ಯಾಗೀ = ತ್ಯಾಗವು, ತೀರ್ಥೇಚ = ಪಾತ್ರರಲ್ಲಿ, ಅಪ್ರತಿಪಾದಕಃ = ದಾನವನ್ನು ಮಾಡದವನು.

ಗ್ರಾಮಘಾತೀ ಚ ಕೌಂತೇಯ ಮಾಂಸಸ್ಯ ಪರಿವಿಕ್ರಯೀ ।
ಶೂದ್ರಸ್ತ್ರೀವಧಕೋ ಯಶ್ಚ ಪೂರ್ವಃ ಪೂರ್ವಸ್ತು ಗರ್ಹಿತಃ ॥೬॥

ಕೌಂತೇಯನೇ! ಯಾರು ಗ್ರಾಮವನ್ನು ನಾಶಗೊಳಿಸುತ್ತಾನೋ, ಮಾಂಸಾದಿ-ಗಳನ್ನು ಮಾರಾಟ ಮಾಡುತ್ತಾನೋ, ಸ್ತ್ರೀಯರನ್ನು, ಶೂದ್ರರನ್ನು ನಾಶಮಾಡು-

ತ್ತಾನೋ, ಇವರುಗಳಲ್ಲಿ ಕೊನೆಯವರಿಗಿಂತ ಮೊದಲಿನವರು ಹೆಚ್ಚು ಪಾಪಿಷ್ಠರಾಗಿರುತ್ತಾರೆ. ಅವರೇ ಹೆಚ್ಚು ಪ್ರಾಯಶ್ಚಿತ್ತಭಾಗಿಗಳಾಗುತ್ತಾರೆ.

ವೃಥಾ ಪಶುಸಮಾಲಂಭೀ ವನದಾಹಸ್ಯ ಕಾರಕಃ।
ಅನೃತೇನೋಪವರ್ತೀ ಚ ಪ್ರತಿರೋದ್ಧಾ ಗುರೋಸ್ತಥಾ ॥೭॥

ವ್ಯರ್ಥವಾಗಿ ಯಾರು ಪಶುಗಳನ್ನು ವಧೆ ಮಾಡುತ್ತಾರೋ, ಕಾಡುಗಳಿಗೆ ಬೆಂಕಿ ಹಚ್ಚುತ್ತಾರೋ, ಸುಳ್ಳು ಹೇಳುತ್ತಾರೋ, ಗುರುವನ್ನು ಅವಮಾನಗೊಳಿಸುತ್ತಾರೋ, ಇವರೆಲ್ಲರೂ ಪಾಪಭಾಜನರು.

ಯಶ್ಚಾಗ್ನೀನಪವಿದ್ಧ್ಯೇತ ತಥೈವ ಬ್ರಹ್ಮವಿಕ್ರಯೀ।
ಏತಾನ್ಯೇನಾಂಸಿ ಸರ್ವಾಣಿ ವ್ಯತ್ಕ್ರಾಂತಸಮಯಶ್ಚ ಯಃ ॥೮॥

ಯಾರು ಅಗ್ನಿಯ ಪರಿರಕ್ಷಣೆ ಮಾಡಿಕೊಂಡಿರುವುದಿಲ್ಲವೋ, ಪರಮಾತ್ಮನ ಸಾನ್ನಿಧ್ಯವನ್ನು ಹೊಂದಿದ ವಸ್ತುವನ್ನು ಯಾರು ಮಾರಾಟ ಮಾಡುತ್ತಾನೋ, ಪ್ರತಿಜ್ಞಾಭಂಗವನ್ನು ಮಾಡಿಕೊಂಡಿರುತ್ತಾನೋ, ಸಮಯ ಪರಿಪಾಲನೆಯನ್ನು ಮಾಡುವುದಿಲ್ಲವೋ, ಇವರೆಲ್ಲರೂ ಪಾಪಭಾಜನರಾಗುತ್ತಾರೆ. ಆದ್ದರಿಂದ ಇವರು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲೇ ಬೇಕು.

ಅಕಾರ್ಯಾಣ್ಯಪಿ ವಕ್ಷ್ಯಾಮಿ ಯಾನಿ ತಾನಿ ನಿಬೋಧ ಮೇ।
ಲೋಕವೇದವಿರುದ್ಧಾನಿ ತಾನ್ಯೇಕಾಗ್ರಮನಾಃ ಶೃಣು ॥೯॥

ಧರ್ಮರಾಜನೇ! ವೇದಕ್ಕೆ ವಿರುದ್ಧವಾದ, ಲೋಕಕ್ಕೆ ವಿರುದ್ಧವಾದ ಮಾಡಬಾರದ ಕೆಲಸಗಳು ಯಾವುದು ಎಂಬುದನ್ನು ವಿವರವಾಗಿ ಹೇಳುತ್ತೇನೆ. ಅವೆಲ್ಲವನ್ನೂ ಏಕಾಗ್ರಚಿತ್ತದಿಂದ ಕೇಳುವವನಾಗು.

ಸ್ವಧರ್ಮಸ್ಯ ಪರಿತ್ಯಾಗಃ ಪರಧರ್ಮಸ್ಯ ಚ ಕ್ರಿಯಾ।
ಅಯಾಜ್ಯಯಾಜನಂ ಚೈವ ತಥಾಭಕ್ಷಸ್ಯ ಭಕ್ಷಣಮ್ ॥೧೦॥

ಶರಣಾಗತಸಂತ್ಯಾಗೋ ಭೃತ್ಯಸ್ಯಾಭರಣಂ ತಥಾ ।
ರಸಾನಾಂ ವಿಕ್ರಯಶ್ಚಾಪಿ ತಿರ್ಯಗ್ಯೋನಿವಧಸ್ತಥಾ ॥೧೧॥

ಆಧಾನಾದೀನಿ ಕರ್ಮಾಣಿ ಶಕ್ತಿಮಾನ್ನ ಕರೋತಿ ಯಃ ।
ಅಪ್ರಯಚ್ಛಂಶ್ಚ ಸರ್ವಾಣಿ ನಿತ್ಯಂ ದೇಯಾನಿ ಭಾರತ ॥೧೨॥

ದಕ್ಷಿಣಾನಾಮದಾನಂ ಚ ಬ್ರಾಹ್ಮಣ್ಯಸ್ಯಾಭಿಮರ್ಶನಮ್ ।
ಸರ್ವಾಣ್ಯೇತಾನ್ಯಕಾರ್ಯಾಣಿ ಪ್ರಾಹುರ್ಧರ್ಮವಿದೋ ಜನಾಃ॥೧೩॥

ಸ್ವಧರ್ಮವನ್ನು ಪರಿತ್ಯಾಗ ಮಾಡುವುದು, ಪರಧರ್ಮವನ್ನು ಅನುಷ್ಠಾನ ಮಾಡುವುದು, ಯಜ್ಞ ಮಾಡಲು ಅನಧಿಕಾರಿಯಾದವನಿಂದ ಯಜ್ಞವನ್ನು ಮಾಡಿಸುವುದು. ತಿನ್ನ ಬಾರದ ಪದಾರ್ಥಗಳನ್ನು ತಿನ್ನುವುದು. ಶರಣಾಗತರಾಗಿ ಬಂದವರನ್ನು ರಕ್ಷಣೆ ಮಾಡದಿರುವುದು. ನಂಬಿದ ಸೇವಕರನ್ನು ರಕ್ಷಣೆ ಮಾಡದಿರುವುದು. ಉಪ್ಪು ಬೆಲ್ಲ ಮೊದಲಾದ ರಸಪದಾರ್ಥಗಳನ್ನು ಮಾರಾಟ ಮಾಡುವುದು. ಪಶು-ಪಕ್ಷಿ ಮೊದಲಾದ ತಿರ್ಯಗ್ಯೋನಿಗಳನ್ನು ಕೊಲ್ಲುವುದು. ಅನುಷ್ಠಾನ ಮಾಡಲು ಸಾಮರ್ಥ್ಯವಿದ್ದರೂ ಕೂಡ ಆಧಾನ ಮೊದಲಾದ ವೇದೋಕ್ತ ಕರ್ಮಗಳನ್ನು ಅನುಷ್ಠಾನ ಮಾಡದೇ ಇರುವುದು. ನಿತ್ಯವು ಕೊಡಬೇಕಾದ ಗೋಗ್ರಾಸಾದಿಗಳನ್ನು ಕೊಡದಿರುವುದು. ಸತ್‌ಪಾತ್ರರಿಗೆ ದಕ್ಷಿಣೆಗಳನ್ನು ಕೊಡದಿರುವುದು. ಬ್ರಾಹ್ಮಣರ ಸ್ವತ್ತನ್ನು ಅಪಹಾರ ಮಾಡುವುದು. ಈ ಎಲ್ಲಾ ಕಾರ್ಯಗಳು ಸರ್ವಥಾ ಮಾಡಲು ಅಯೋಗ್ಯವಾಗಿವೆ. ಧರ್ಮವನ್ನು ತಿಳಿದ ವಿದ್ವಾಂಸರು ಮೇಲೆ ಉಲ್ಲೇಖಿಸಿದ್ದರಲ್ಲಿ ಯಾವುದನ್ನೂ ಕೂಡ ಮಾಡಬಾರದೆಂದು ಹೇಳುತ್ತಾರೆ.

ಪಿತ್ರಾ ವಿಭಜತೇ ಪುತ್ರೋ ಯಶ್ಚ ಸ್ಯಾದ್ ಗುರುತಲ್ಪಗಃ ।
ಅಪ್ರಜಾಯನ್ನಧರ್ಮೇಣ ಭವತ್ಯಾಧರ್ಮಿಕೋ ಜನಃ ॥೧೪॥

ಯಾರು ತಂದೆಯ ಆಸ್ತಿಯನ್ನು ಕಸಿದುಕೊಂಡು ಪ್ರತ್ಯೇಕವಾಗಿ ಇರಲು ಬಯಸುತ್ತಾನೋ, ಅಂಥ ಪುತ್ರನು, ಗುರುಪತ್ನಿಯ ಸಮಾಗಮವನ್ನು ಬಯಸುವ

ಶಿಷ್ಯನು, ಮಕ್ಕಳನ್ನು ಪಡೆಯಲು ಪ್ರಯತ್ನಿಸದ ಪತಿಯು ಅಧಾರ್ಮಿಕರೆಂದು ಕರೆಸಿಕೊಳ್ಳುತ್ತಾರೆ.

ಉಕ್ತಾನ್ಯೇತಾನಿ ಕರ್ಮಾಣಿ ವಿಸ್ತರೇಣೇತರೇಣ ಚ।
ಯಾನಿ ಕುರ್ವನ್ನಕುರ್ವಂಶ್ಚ ಪ್ರಾಯಶ್ಚಿತ್ತೀಯತೇ ಜನಃ ॥೧೫॥

ಯಾವ ಕರ್ಮಗಳನ್ನು ಆಚರಣೆ ಮಾಡುವುದರಿಂದ ಮನುಷ್ಯನು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾಗುತ್ತದೋ, ಯಾವ ಕರ್ಮವನ್ನು ಮಾಡದಿದ್ದರೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾಗುತ್ತದೋ, ಆ ಎಲ್ಲ ಕರ್ಮಗಳನ್ನು ನಿನಗೆ ವಿಸ್ತಾರವಾಗಿ ತಿಳಿಸಿರುವೆನು.

ಟಿಪ್ಪಣಿ - ಯಾನಿ ಕುರ್ವನ್ನಕುರ್ವಂಶ್ಚ ಇತ್ಯತ್ರ **ಯಾನಿ** ಅವಿಹಿತಾನಿ ತಾನಿ **ಕುರ್ವನ್**, **ಯಾನಿ** ವಿಹಿತಾನಿ ತಾನಿ **ಅಕುರ್ವನ್**।

ಅವಿಹಿತವಾದ ಕರ್ಮಗಳನ್ನು ಮಾಡುವುದರಿಂದ, ಅಕುರ್ವನ್ ವಿಹಿತವಾದ ಕರ್ಮಗಳನ್ನು ಮಾಡದೇ ಇರುವುದರಿಂದ ಪ್ರಾಯಶ್ಚಿತ್ತಭಾಗಿಯಾಗುತ್ತಾನೆ ಎಂದರ್ಥ.

ಏತಾನ್ಯೇವ ತು ಕರ್ಮಾಣಿ ಕ್ರಿಯಮಾಣಾನಿ ಮಾನವಾನ್।
ಯೇಷು ಯೇಷು ನಿಮಿತ್ತೇಷು ನ ಲಿಂಪಂತ್ಯಥ ತಚ್ಛೃಣು ॥೧೬॥

ಮುಂದೆ ಯಾವ ಕಾರಣಗಳಿಂದ ಮನುಷ್ಯನು ಯಾವ ಕರ್ಮಗಳನ್ನು ಮಾಡಬಾರದು, ಮಾಡಿದರೂ ಪಾಪಗಳಿಂದ ಮುಕ್ತನಾಗುವುದಿಲ್ಲವೋ ಅದರ ಬಗ್ಗೆ ಹೇಳುತ್ತೇನೆ ಕೇಳು.

ಪ್ರಗೃಹ್ಯ ಶಸ್ತ್ರಮಾಯಾಂತಮಪಿ ವೇದಾಂತಗಂ ರಣೇ।
ಜಿಘಾಂಸಂತಂ ಜಿಘಾಂಸೀಮಾನ್ನ ತೇನ ಬ್ರಹ್ಮಹಾ ಭವೇತ್ ॥೧೭॥

ವೇದವೇದಾಂಗಗಳನ್ನು ಅಧ್ಯಯನ ಮಾಡಿದ, ಒಬ್ಬ ಬ್ರಾಹ್ಮಣನು ತನ್ನ ಧರ್ಮವನ್ನು ಪರಿತ್ಯಾಗ ಮಾಡಿ, ಶಸ್ತ್ರಾಸ್ತ್ರಗಳನ್ನು ಹಿಡಿದು ರಣರಂಗಕ್ಕೆ ಬಂದರೆ,

ಅಂಥ ಬ್ರಾಹ್ಮಣನು ಕೊಲ್ಲಲು ಉದ್ಯುಕ್ತನಾದರೆ, ಆ ಸಮಯದಲ್ಲಿ ಆ ಬ್ರಾಹ್ಮಣನನ್ನು ಕೊಂದರೂ ಕೂಡ ಬ್ರಹ್ಮಹತ್ಯಾ ಪಾಪವು ಬರುವುದಿಲ್ಲ.

ಅಪಿ ಚಾಪ್ಯತ್ರ ಕೌಂತೇಯ ಮಂತ್ರೋ ವೇದೇಷು ಪಠ್ಯತೇ।
ವೇದಪ್ರಮಾಣವಿಹಿತಂ ತಂ ಧರ್ಮಂ ಪ್ರಬ್ರವೀಮಿ ತೇ ॥೧೮॥

ಕುಂತೀಪುತ್ರನೇ! ಇದೇ ವಿಷಯದಲ್ಲಿ ವೇದಗಳಲ್ಲಿ ಒಂದು ಮಂತ್ರವನ್ನು ಹೇಳಲಾಗಿದೆ. ಆ ಮಂತ್ರದಿಂದ ತಿಳಿಯುವ ಧರ್ಮವನ್ನು ನಿನಗೆ ಈಗ ಹೇಳುತ್ತೇನೆ ಕೇಳುವವನಾಗು.

ಅಪೇತಂ ಬ್ರಾಹ್ಮಣಂ ವೃತ್ತಾದ್ ಯೋ ಹನ್ಯಾದಾತತಾಯಿನಮ್।
ನ ತೇನ ಬ್ರಹ್ಮಹಾ ಸ ಸ್ಯಾನ್ಮನ್ಯುಸ್ತಂ ಮನ್ಯುಮೃಚ್ಛತಿ ॥೧೯॥

ಬ್ರಾಹ್ಮಣನು ಮಾಡಬೇಕಾದ ಕರ್ತವ್ಯಗಳನ್ನು ಮಾಡದೇ, ಭ್ರಷ್ಟನಾಗಿ ಶಸ್ತ್ರವನ್ನು ಹಿಡಿದು ಯುದ್ಧಕ್ಕೆ ಬರುತ್ತಾನೋ, ಅಂಥ ಆತತಾಯಿಯನ್ನು ಸಂಹರಿಸಬೇಕು. ಇದರಿಂದ ಬ್ರಹ್ಮಹತ್ಯಾ ಪಾಪವು ಬರುವುದಿಲ್ಲ. ಅವನ ಕೋಪಕ್ಕೆ ಎದುರಾಗಿ ಮತ್ತೊಂದು ಕೋಪವು ಅವನನ್ನು ಸಂಹಾರ ಮಾಡುತ್ತದೆ.

ಪ್ರಾಣಾತ್ಯಯೇ ತಥಾಜ್ಞಾನಾದಚರನ್ ಮದಿರಾಮಪಿ।
ಅಚೋದಿತೋ ಧರ್ಮಪರೈಃ ಪುನಃ ಸಂಸ್ಕಾರಮರ್ಹತಿ ॥೨೦॥

ಯಾರು ಅಜ್ಞಾನದಿಂದ ಮದ್ಯಪಾನವನ್ನು ಮಾಡಿರುತ್ತಾನೋ, ಅವನಿಗೂ ಕೂಡ ಪ್ರಾಯಶ್ಚಿತ್ತವಾಗಲೇಬೇಕು. ಅಥವಾ ಪ್ರಾಣಹೋಗುವ ಸಂದರ್ಭದಲ್ಲಿ ಔಷಧಿಯ ರೂಪದಲ್ಲಿ ಮದ್ಯವನ್ನು ಪಾನ ಮಾಡಿದವನೂ ಕೂಡ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲೇ ಬೇಕು. ಧರ್ಮನಿಷ್ಠರಾದ ಸತ್ಪುರುಷರ ಬಳಿ ತನ್ನ ಪಾಪಕಾರ್ಯ-ವನ್ನು ತಿಳಿಸಿ, ಅವನ ಮಾರ್ಗದರ್ಶನದಂತೆ ಸಂಸ್ಕಾರವನ್ನು ಮಾಡಿಕೊಳ್ಳಬೇಕು.

ಟಿಪ್ಪಣಿ - ಆಚರನ್ ಮದಿರಾಮಪಿ ಇತ್ಯತ್ರ 'ಚರ ಗತಿಭಕ್ಷಣಯೋಃ' ಇತಿ ಧಾತುಃ।

'ಚರ ಗತಿಭಕ್ಷಣಯೋಃ' ಎಂಬ ಧಾತುವಿನಿಂದ ಅಚರನ್ ಎಂಬ ಪದವು ನಿಷ್ಪನ್ನವಾಗಿದೆ. ಮದ್ಯಪಾನವನ್ನು ಮಾಡುವವನು ಎಂದರ್ಥ.

ಏತತ್ ತೇ ಸರ್ವಮಾಖ್ಯಾತಂ ಕೌಂತೇಯಾಭಕ್ಷ್ಯಭಕ್ಷಣಮ್ ।
ಪ್ರಾಯಶ್ಚಿತ್ತವಿಧಾನೇನ ಸರ್ವಮೇತೇನ ಶುದ್ಧ್ಯತಿ ॥೨೧॥

ಕೌಂತೇಯನೇ ! ಯಾವುದನ್ನು ಭಕ್ಷಣ ಮಾಡಬಾರದೋ, ಅದೆಲ್ಲವನ್ನು ನಿನಗೆ ಯಥಾರ್ಥವಾಗಿ ಹೇಳಿರುತ್ತೇನೆ. ಪ್ರಾಯಶ್ಚಿತ್ತದ ವಿಧಿಯನ್ನು ಶಾಸ್ತ್ರದ ಮೂಲಕ ತಿಳಿದುಕೊಂಡು, ಆ ಪ್ರಾಯಶ್ಚಿತ್ತದಿಂದ ಅಭಕ್ಷ್ಯಭಕ್ಷಣದಿಂದ ಪ್ರಾಪ್ತವಾಗುವ ಪಾಪವನ್ನು ಪರಿಹಾರ ಮಾಡಿಕೊಂಡು ಶುದ್ಧನಾಗಬೇಕು.

ಗುರುತಲ್ಪಂ ಹಿ ಗುರ್ವರ್ಥೇ ನ ದೂಷಯತಿ ಮಾನವಮ್ ।
ಉದ್ದಾಲಕಃ ಶ್ವೇತಕೇತುಂ ಜನಯಾಮಾಸ ಶಿಷ್ಯತಃ ॥೨೨॥

ಗುರುಗಳ ಪತ್ನಿಯನ್ನು ಸಮಾಗಮ ಮಾಡಿದರೆ ಮಹಾಪಾಪವು ಪ್ರಾಪ್ತವಾಗುತ್ತದೆ. ಆದರೆ ಗುರುವಿನ ಅಪ್ಪಣೆಯ ಮೇರೆಗೆ ಗುರುವಿನ ಕಾರ್ಯಸಿದ್ಧಿಗಾಗಿ ಗುರುತಲ್ಪವನ್ನು ಮಾಡಿದರೆ ದೂಷಿತನಾಗುವುದಿಲ್ಲ. ಉದ್ದಾಲಕನು ಮಗನಾದ ಶ್ವೇತಕೇತುವನ್ನು ಶಿಷ್ಯನ ಮೂಲಕವಾಗಿಯೇ ಪಡೆದುಕೊಂಡನು.

ಟಿಪ್ಪಣಿ - ಈ ಶ್ಲೋಕವು ಅಪರೋಕ್ಷಜ್ಞಾನಿಗಳ ವಿಷಯದಲ್ಲಿ ವಿವಕ್ಷಿಸಬೇಕು. ಏನೂ ತಿಳಿಯದ ಅಜ್ಞಾನಿಯಾದ ಗುರುವು ಶಿಷ್ಯನಿಗೆ ಗುರುತಲ್ಪವನ್ನು ವಿಧಿಸಿದರೆ ಗುರುಶಿಷ್ಯರಿಬ್ಬರು ನರಕಕ್ಕೆ ತೆರಳುತ್ತಾರೆ. ಭೂತಭವಿಷ್ಯತ್ ವರ್ತಮಾನಕಾಲಗಳ ಬಗ್ಗೆ ಎಚ್ಚರವಿದ್ದ ಉನ್ನತ ಮಟ್ಟದ ಹರಿಚಿತ್ತವನ್ನು ಅರಿತ ಅಪರೋಕ್ಷಜ್ಞಾನಿಯಾದ ಗುರುವಿಗೆ ಮಾತ್ರ ಈ ಶ್ಲೋಕವು ಸಂಬಂಧಪಟ್ಟಿದೆ.

ಸ್ತೇಯಂ ಕುರ್ವಂಸ್ತು ಗುರ್ವರ್ಥಮಾಪತ್ಸು ನ ನಿಬಧ್ಯತೇ ।
ಬಹುಶಃ ಕಾಮಕಾರೇಣ ನ ಚೇದ್ಯಃ ಸಂಪ್ರವರ್ತತೇ ॥೨೩॥

ಕಳ್ಳತನವನ್ನು ಸರ್ವಥಾ ಮಾಡಬಾರದು. ಆದರೆ ಆಪತ್ಕಾಲದಲ್ಲಿ ಗುರುಗಳ

ಪರಿರಕ್ಷಣೆಗೋಸ್ಕರ, ಅಥವಾ ಗುರುದಕ್ಷಿಣೆಯನ್ನು ಕೊಡಬೇಕಾದ ಪರಿಸ್ಥಿತಿಯು ಬಂದಾಗ ಆಪತ್ಕಾಲದಲ್ಲಿ ಕಳ್ಳತನವನ್ನು ಮಾಡಬಹುದು.

ಅನ್ಯತ್ರ ಬ್ರಾಹ್ಮಣಸ್ವೇಭ್ಯ ಆದದಾನೋ ನ ದುಷ್ಯತಿ।
ಸ್ವಯಮಪ್ರಾಶಿತಾ ಯಶ್ಚ ನ ಸ ಪಾಪೇನ ಲಿಪ್ಯತೇ ॥೨೪॥

ಬ್ರಾಹ್ಮಣರ ಸ್ವತ್ತನ್ನು ಬಿಟ್ಟು, ಉಳಿದವರ ಸ್ವತ್ತನ್ನು ಆಪತ್ಕಾಲದಲ್ಲಿ ತೆಗೆದುಕೊಳ್ಳುವುದು ತಪ್ಪಾಗುವುದಿಲ್ಲ. ಆದರೆ ಆ ವಸ್ತುವನ್ನು ಸ್ವಾರ್ಥಕ್ಕೋಸ್ಕರ ತನ್ನ ಸುಖಕ್ಕೋಸ್ಕರ ಉಪಯೋಗಿಸಬಾರದು. ಆಗ ಪಾಪದ ಲೇಪವು ಪ್ರಾಪ್ತವಾಗುವುದಿಲ್ಲ.

ಪ್ರಾಣತ್ರಾಣೇऽನೃತಂ ವಾಚ್ಯಮಾತ್ಮನೋ ವಾ ಪರಸ್ಯ ವಾ।
ಗುರ್ವರ್ಥೇ ಸ್ತ್ರೀಷು ಚೈವ ಸ್ಯಾದ್ ವಿವಾಹಕರಣೇಷು ಚ ॥೨೫॥

ಸುಳ್ಳನ್ನು ಹೇಳಿದರೆ ಪಾಪವು ಬರುತ್ತದೆ. ಆದರೆ ಪ್ರಾಣವನ್ನು ಪರಿರಕ್ಷಣೆ ಮಾಡಿಕೊಳ್ಳುವ ಸಂದರ್ಭದಲ್ಲಿ ಸುಳ್ಳನ್ನು ಹೇಳಬಹುದು. ಬೇರೆಯವರ ಆಪತ್ಕಾಲದಲ್ಲೂ ಕೂಡ ಸುಳ್ಳನ್ನು ಹೇಳಬಹುದು. ಮತ್ತು ಗುರುಗಳ ಮರ್ಯಾದೆಯನ್ನು ಪರಿರಕ್ಷಣೆ ಮಾಡುವ ಸಂದರ್ಭದಲ್ಲಿ ಸ್ತ್ರೀಯರ ಜೊತೆ ವಿನೋದಕ್ಕಾಗಿ ಮಾತನಾಡುತ್ತಿರುವ ಸಂದರ್ಭದಲ್ಲಿ ವಿವಾಹವನ್ನು ಮಾಡುವ ಉದ್ದೇಶಕ್ಕಾಗಿ ಸುಳ್ಳನ್ನು ಹೇಳಬಹುದು.

ನಾವರ್ತತೇ ವ್ರತಂ ಸ್ವಪ್ನೇ ಶುಕ್ರಮೋಕ್ಷೇ ಕಥಂಚನ।
ಆಜ್ಯಾಹೋಮಃ ಸಮಿದ್ಧೇऽಗ್ನೌ ಪ್ರಾಯಶ್ಚಿತ್ತಂ ವಿಧೀಯತೇ ॥೨೬॥

ಬ್ರಹ್ಮಚಾರಿಯಾದವನು ಸ್ವಪ್ನಕಾಲದಲ್ಲಿಯೂ ಕೂಡ ರೇತಸ್ಖಲನವನ್ನು ಮಾಡಬಾರದು. ಆದರೆ ತಿಳಿಯದೇ ಸ್ವಪ್ನಕಾಲದಲ್ಲಿ ರೇತಸ್ಖಲನವಾದರೆ, ಉಪನಯನ ಸಂಸ್ಕಾರವನ್ನು ಮಾಡಿಕೊಳ್ಳಬೇಕಾಗಿಲ್ಲ. ಪ್ರತಿನಿತ್ಯ ಮಾಡುವ ಸಮಿದ್ಧಾಗ್ನಿಯಲ್ಲಿಯೇ ಆಜ್ಯಹೋಮವನ್ನು ಮಾಡುವ ಮೂಲಕ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು.

ಟಿಪ್ಪಣಿ - ನಾವರ್ತತೇ ವೃಷಮ್ ಇತ್ಯತ್ರ ನಾವರ್ತತೇ ತಸ್ಮಾತ್ ಪರಾವೃತ್ಯ ನಾಯಾತಿ। ತತ್ರೈವ ತಿಷ್ಠತೀತ್ಯರ್ಥಃ।

ಪಾರಿವಿತ್ತ್ಯಂ ಚ ಪತಿತೇ ನಾಸ್ತಿ ಪ್ರವ್ರಜಿತೇ ತಥಾ।
ಭಿಕ್ಷಿತೇ ಪಾರದಾರ್ಯಂ ಚ ನ ತದ್ಧರ್ಮಸ್ಯ ದೂಷಕಮ್ ॥೨೭॥

ಒಂದು ವೇಳೆ ಅಣ್ಣನು ಪತಿತನಾಗಿದ್ದರೆ, ಅಥವಾ ಸನ್ಯಾಸಿಯಾಗಿದ್ದರೆ ತಮ್ಮನು ವಿವಾಹವನ್ನು ಮಾಡಿಕೊಳ್ಳಬಹುದು. ಮತ್ತು ಪರಸ್ತ್ರೀಸಂಗವು ಅತ್ಯಂತ ಪಾಪಕೆಲಸವಾಗಿದ್ದರೂ ಕೂಡ ಸಂತಾನದ ಅಪೇಕ್ಷೆಯಿಂದ ಪರಸ್ತ್ರೀಯು ಭಿಕ್ಷೆಯನ್ನು ಬೇಡಿದಾಗ ಶಾಸ್ತ್ರೋಕ್ತವಿಧಿವಿಧಾನಗಳಿಗೆ ಅನುಸಾರಿಯಾಗಿ ಪರಸ್ತ್ರೀ ಸಂಗವನ್ನು ಮಾಡಬಹುದು.

ಟಿಪ್ಪಣಿ - ಪಾರಿವಿತ್ತ್ಯಂ ತು ಪತಿತ ಇತ್ಯತ್ರ ಜ್ಯೇಷ್ಠೇ ಪತಿತೇ ಸತಿ ಪ್ರವ್ರಜಿತೇ ಚ ಸತಿ ಪಾರಿವಿತ್ತ್ಯಂ ಪರಿವಿತ್ತ್ಯಾಖ್ಯದೋಷೋ ನಾಸ್ತಿ।

ಜ್ಯೇಷ್ಠನಾದ ಸಹೋದರನು ಪತಿತನಾಗಿದ್ದರೆ, ಸನ್ಯಾಸಿಯಾಗಿದ್ದರೆ ಪಾರಿವಿತ್ತ ಎಂಬ ದೋಷವು ತಮ್ಮನಿಗೆ ಬರುವುದಿಲ್ಲ. ವಿವಾಹವಾಗಬಹುದು.

ಬೇರೆ ಯುಗಗಳಲ್ಲಿ ಸಂತಾನಕ್ಕೋಸ್ಕರ ಮತ್ತೊಬ್ಬ ಪುರುಷನನ್ನು ಅವಲಂಬಿಸಿ, ಸಂತಾನವನ್ನು ಹೊಂದುವ ಅವಕಾಶವು ಇತ್ತು.

ವೃಥಾ ಪಶುಸಮಾಲಂಭಂ ನೈವ ಕುರ್ಯಾನ್ನ ಕಾರಯೇತ್।
ಅನುಗ್ರಹಃ ಪಶೂನಾಂ ಹಿ ಸಂಸ್ಕಾರೋ ವಿಧಿಚೋದಿತಃ ॥೨೮॥

ಪಶುಗಳನ್ನು ಕೊಂದು ಮಾಂಸವನ್ನು ತಿನ್ನುವುದು ಅಧರ್ಮವಾಗಿದೆ. ಆದರೆ ವಿದ್ಯುಕ್ತವಾದ ಸಂಸ್ಕಾರಗಳನ್ನು ಮಾಡಿ, ಯಜ್ಞಕ್ಕೋಸ್ಕರ ಪಶುವಧೆಯನ್ನು ಮಾಡ-ಬಹುದು. ಇದು ಪಶುಗಳಿಗೆ ಮಾಡುವ ಅನುಗ್ರಹವೇ ಆಗುತ್ತದೆ. ಇದರಿಂದ ಪಶು-ಗಳಿಗೆ ಉತ್ತಮ ಲೋಕವು ಪ್ರಾಪ್ತವಾಗುತ್ತದೆ.

ಟಿಪ್ಪಣಿ - ಯಾವುದೇ ಪ್ರಾಣಿಗಳನ್ನು ಸರ್ವಥಾ ಕೊಲ್ಲಬಾರದು. ಯಜ್ಞ-ಕ್ಕೋಸ್ಕರ ಹಿಂದಿನ ಯುಗಗಳಲ್ಲಿ ಪ್ರಾಣಿವಧೆಯನ್ನು ಮಾಡುತ್ತಿದ್ದರು. ಆದರೆ

ಕಲಿಯುಗದಲ್ಲಿ ಇದನ್ನೂ ಕೂಡ ನಿಷೇಧ ಮಾಡಲಾಗಿದೆ. ಯಜ್ಞಕ್ಕಾಗಿ ಅಥವಾ ಬೇರೆ ಯಾವುದೇ ಧರ್ಮದ ಕಾರ್ಯಗಳಿಗಾಗಿ ಪಶುವಧೆಯನ್ನು ಮಾಡಬಾರದು. ಆದರೆ ಇಂದಿನ ಯುಗದಲ್ಲಿ ಅನೇಕರು ಪ್ರಾಣಿವಧೆಯನ್ನು ಮಾಡಿ, ಮಾಂಸ-ಭಕ್ಷಣೆಯನ್ನು ಮಾಡುತ್ತಿದ್ದಾರೆ. ಇದು ಅತ್ಯಂತಧರ್ಮವಿರುದ್ಧವಾದ ಕಾರ್ಯ-ವಾಗಿದೆ.

ಅನರ್ಹೇ ಬ್ರಾಹ್ಮಣೇ ದತ್ತಮಜ್ಞಾನಾತ್ತನ್ನ ದೂಷಕಮ್ ।
ಸತ್ಕಾರಾಣಾಂ ತಥಾತೀರ್ಥೇ ನಿತ್ಯಂ ವಾ ಪ್ರತಿಪಾದನಮ್ ॥೨೯॥

ಯೋಗ್ಯನಲ್ಲದ ಬ್ರಾಹ್ಮಣನಿಗೆ ದಾನವನ್ನು ಮಾಡುವುದು ತಪ್ಪು. ಆದರೆ ಇವನು ಅನರ್ಹನಾಗಿದ್ದಾನೆಂದು ತಿಳಿಯದೇ ದಾನ ಮಾಡಿದಾಗ ಪಾಪವು ಬರುವುದಿಲ್ಲ. ಅದೇ ರೀತಿಯಾಗಿ ಸತ್ಪಾತ್ರನೆಂದು ತಿಳಿಯದೇ ಇದ್ದಾಗ ದಾನ ಮಾಡದೇ ಇದ್ದರೆ ಪಾಪಭಾಜನನಾಗುವುದಿಲ್ಲ.

ಟಿಪ್ಪಣಿ - ತಥಾತೀರ್ಥ ಇತ್ಯತ್ರ ಅತೀರ್ಥೇ ಇತಿ ಪದಚ್ಛೇದಃ।

ಯಾರು ಸತ್ಪಾತ್ರನೋ ಅವನಿಗೆ ದಾನ ಮಾಡಲೇ ಬೇಕು. ಅಪಾತ್ರನಿಗೆ ದಾನ ಮಾಡಲೇ ಬಾರದೆಂಬ ಧರ್ಮವನ್ನು ಈ ಹಿಂದೆ ಹೇಳಿದ್ದರು. ಒಂದುವೇಳೆ ಸತ್ಪಾತ್ರನೆಂದು ತಿಳಿಯದೇ ಇದ್ದರೆ, ದಾನವನ್ನು ಕೊಡದಿದ್ದರೂ ಕೂಡ ತಪ್ಪಾಗು-ವುದಿಲ್ಲ. ಕೆಲವರು ತಮ್ಮನ್ನು ಸತ್ಪಾತ್ರರೆಂದು ಗುರುತಿಸಿಕೊಳ್ಳಲು ಇಚ್ಛಿಸುವುದಿಲ್ಲ. ಅಂಥ ಸಂದರ್ಭದಲ್ಲಿ ಇವರನ್ನು ಸತ್ಪಾತ್ರರೆಂದು ಗುರುತಿಸುವುದೇ ಕಷ್ಟವಾಗುತ್ತದೆ. ಮತ್ತು ಅಪಾತ್ರರಿಗೆ ಸರ್ವಥಾ ದಾನ ಮಾಡಬಾರದು. ಕೆಲವರು ತಾವು ಮಾಡಿದ ದೊಡ್ಡ ದೊಡ್ಡ ಪಾಪಗಳನ್ನು ಜಗತ್ತಿನಲ್ಲಿ ಹಂಚಿಕೊಂಡಿರುವುದೇ ಇಲ್ಲ. ಅಂಥವರನ್ನು ಮೇಲ್ನೋಟಕ್ಕೆ ಅವರ ವೇಷಭೂಷಣಗಳನ್ನು ನಾವು ಸತ್ಪಾತ್ರರೆಂದು ಗುರುತಿಸಿ ದಾನವನ್ನು ಮಾಡುತ್ತೇವೆ. ಅಂತರಂಗದಲ್ಲಿ ಅವರು ಮಾಡಿದ ತಪ್ಪುಗಳು ನಮಗೆ ತಿಳಿದಿರುವುದಿಲ್ಲ. ಇಂಥ ಸಂದರ್ಭದಲ್ಲಿ ದಾನ ಮಾಡಿದವನಿಗೆ ಪಾಪವು ಬರುವುದಿಲ್ಲ. ಆದರೆ ದಾನವನ್ನು ತೆಗೆದುಕೊಂಡ ಅಂಥ ಅಪಾತ್ರನಿಗೆ ಬಹಳಷ್ಟು ಪಾಪವು ಬರುತ್ತದೆ. ಮತ್ತು ಅಪಾತ್ರನಿಗೆ ದಾನ ಮಾಡಿದ ಯಜಮಾನನ ಪಾಪವೂ ಕೂಡ ಅವನಿಗೇ ಬರುತ್ತದೆ ಎಂಬುದಾಗಿ ತಿಳಿಯಬೇಕು.

ಸ್ತ್ರಿಯಾಸ್ತಥಾಪಚಾರಿಣ್ಯಾ ನಿಷ್ಕೃತಿಃ ಸ್ಯಾದದೂಷಿಕಾ ।
ಅಪಿ ಸಾ ಪೂಯತೇ ತೇನ ನತು ಭರ್ತಾ ಪ್ರದುಷ್ಯತಿ ॥೩೦॥

ಹೆಂಡತಿಯನ್ನು ಎಂದೂ ಸಹ ತಿರಸ್ಕಾರ ಮಾಡಬಾರದು. ಆದರೆ ಒಂದು ವೇಳೆ ಅವಳು ಪರಪುರುಷರ ಸಂಪರ್ಕವನ್ನು ಮಾಡಿದ್ದರೆ, ಅವಳನ್ನು ತಿರಸ್ಕಾರ ಮಾಡ-ಬೇಕು. ಇದರಿಂದ ಯಾವುದೇ ಪಾಪವು ಬರುವುದಿಲ್ಲ. ಅಂಥ ಪತ್ನಿಯ ಜೊತೆ ಭೋಜನಾದಿಗಳನ್ನು ಮಾಡಬಾರದು. ದೈಹಿಕಸಂಪರ್ಕವನ್ನೂ ಕೂಡ ಮಾಡ-ಬಾರದು. ಇದೇ ಅವಳಿಗೆ ಪ್ರಾಯಶ್ಚಿತ್ತವಾಗಿದೆ. ಪತ್ನಿಯನ್ನು ಪರಿತ್ಯಾಗ ಮಾಡುವುದ-ರಿಂದಲೇ ಅವಳು ಪರಿಶುದ್ಧಳಾಗುತ್ತಾಳೆ.

ಟಿಪ್ಪಣಿ - ನಿಷ್ಕೃತಿಃ ಸ್ಯಾದದೂಷಿಕಾ ಇತ್ಯತ್ರ **ನಿಷ್ಕೃತಿಃ** ವಿಕ್ರಯಣಮ್ ।

ತತ್ತ್ವಂ ಜ್ಞಾತ್ವಾತು ಸೋಮಸ್ಯ ವಿಕ್ರಯಃ ಸ್ಯಾದದೂಷಕಃ ।
ಅಸಮರ್ಥಸ್ಯ ಭೃತ್ಯಸ್ಯ ವಿಸರ್ಗಃ ಸ್ಯಾದದೋಷವಾನ್ ॥
ವನದಾಹೋ ಗವಾಮರ್ಥೇ ಕ್ರಿಯಮಾಣೋ ನ ದೂಷಕಃ ।

ಸೋಮಲತೆಯನ್ನು ಯಜ್ಞಕ್ಕೋಸ್ಕರ ಬಳಸಲಾಗುತ್ತದೆ ಎಂಬ ಉದ್ದೇಶವನ್ನು ಅರ್ಥಮಾಡಿಕೊಂಡು ವಿಕ್ರಯ ಮಾಡಿದರೆ ಯಾವುದೇ ದೋಷವು ಬರುವುದಿಲ್ಲ. ಯಾರು ಸೋಮಲತೆಯನ್ನು ಹಣಕ್ಕಾಗಿ ತೆಗೆದುಕೊಂಡು ಅದರ ರಸವನ್ನು ತೆಗೆದು ಕುಡಿದು ಮತ್ತನಾಗುವ ಉದ್ದೇಶವನ್ನು ಹೊಂದಿರುತ್ತಾನೋ, ಅಂಥವನಿಗೆ ವಿಕ್ರಯ-ವನ್ನು ಮಾಡುವುದು ತಪ್ಪಾಗುತ್ತದೆ. ಅದರಂತೆ ಯಾರು ಭೃತ್ಯನೋ ಅವನು ಕೆಲಸ ಕಾರ್ಯಗಳನ್ನು ಮಾಡಲು ಸಮರ್ಥನಾಗದಿದ್ದರೆ. ಅಂಥವನನ್ನು ಪರಿತ್ಯಾಗ ಮಾಡು -ವುದರಿಂದ ಯಾವುದೇ ದೋಷವು ಬರುವುದಿಲ್ಲ. ಹಸುಗಳಿಗೋಸ್ಕರ ಕಾಡನ್ನು ಸುಡುವುದೂ ತಪ್ಪಾಗುವುದಿಲ್ಲ.

ಟಿಪ್ಪಣಿ - ತತ್ತ್ವಂ ಜ್ಞಾತ್ವಾ ತು ಸೋಮಸ್ಯ ಇತ್ಯತ್ರ **ಸೋಮಸ್ಯ** ಸೋಮ-ಲತಾಯಾಃ ತತ್ತ್ವಂ ಯಾಥಾರ್ಥ್ಯಮ್ । ಅನ್ಯಲತಾಮಾನೀಯ ಸೋಮಲತೇತ್ಯ-ನೃತೇನ ವಿಕ್ರಯಣಂ ನಿಷಿದ್ಧಮಿತಿ ಸೂಚಯಿತುಂ **ತತ್ತ್ವಂ ಜ್ಞಾತ್ವಾ** ಇತ್ಯುಕ್ತಮ್ ।

ಸೋಮರಸವನ್ನು ಕೇವಲ ಸುಖಕ್ಕೋಸ್ಕರ ಪಾನ ಮಾಡುವುದು ತಪ್ಪು. ಯಜ್ಞಪ್ರಕ್ರಿಯೆಗೋಸ್ಕರವೇ ಇದನ್ನು ಉಪಯೋಗಿಸಬೇಕು. ಇದನ್ನು ಅರ್ಥ-ಮಾಡಿಕೊಳ್ಳದೇ ಸುಮ್ಮನೆ ಮಾರಾಟ ಮಾಡಿದರೆ ಅಧರ್ಮವಾಗುತ್ತದೆ. ಮತ್ತು ಸೇವಕನಾದವನು ಯಜಮಾನನನ್ನು ನಂಬಿ ಬದುಕುತ್ತಿರುತ್ತಾನೆ. ಅಂದಮಾತ್ರಕ್ಕೆ ಅವನು ಕೆಲಸ ಮಾಡದಿದ್ದರೂ ಕೂಡ ಅವನಿಗೆ ಸಂಬಳ ಕೊಡಬೇಕೆಂಬ ನಿಯಮವು ಇರುವುದಿಲ್ಲ. ಕೆಲಸವನ್ನು ಮಾಡಲು ಅವನಿಗೆ ಶಕ್ತಿಯು ಹ್ರಾಸ-ವಾದರೆ, ಅಥವಾ ಕೆಲಸದಲ್ಲಿ ವಂಚನೆ ಮೊದಲಾದವುಗಳನ್ನು ಮಾಡಿದರೆ ಅಂಥ ಸೇವಕನನ್ನು ಕೆಲಸದಿಂದ ಬಿಡಿಸಬಹುದು. ಸಂಬಳವನ್ನು ಕೊಡಬೇಕಾಗಿಲ್ಲ. ಆಗ ಯಜಮಾನನಿಗೆ ಯಾವುದೇ ಪಾಪವು ಬರುವುದಿಲ್ಲ.

ಅರಣ್ಯದಲ್ಲಿ ಹಸುಗಳನ್ನು ತಿನ್ನುವ ಅನೇಕ ಪ್ರಾಣಿಗಳಿರುತ್ತವೆ. ಅಂಥ ದುಷ್ಟ-ಪ್ರಾಣಿಗಳನ್ನು ಓಡಿಸಲು ಸಾಧ್ಯವಾಗದೇ ಇದ್ದಾಗ ಆ ಅರಣ್ಯಪ್ರದೇಶವನ್ನು ಸುಟ್ಟು ವನ್ಯಮೃಗಗಳನ್ನು ಅಲ್ಲಿಂದ ಓಡಿಸಬಹುದು. ಇದರಿಂದ ಹಸುಗಳು ಸಂರಕ್ಷಿತ-ವಾಗುತ್ತದೆ. ಇಂಥ ಸಂದರ್ಭದಲ್ಲಿ ಕಾಡಿಗೆ ಬೆಂಕಿ ಹಚ್ಚುವುದೂ ಕೂಡ ಪಾಪ-ಕೆಲಸವಾಗುವುದಿಲ್ಲ.

ಉಕ್ತಾನ್ಯೇತಾನಿ ಕರ್ಮಾಣಿ ಯಾನಿ ಕುರ್ವನ್ನ ದುಷ್ಯತಿ।
ಪ್ರಾಯಶ್ಚಿತ್ತಾನಿ ವಕ್ಷ್ಯಾಮಿ ವಿಸ್ತರೇಣೈವ ಭಾರತ ॥೩೨॥

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ ರಾಜಧರ್ಮೇ ಪಂಚತ್ರಿಂಶೋಽಧ್ಯಾಯಃ ॥೩೫॥

ಯುಧಿಷ್ಠಿರನೇ ! ಯಾವ ಕರ್ಮಗಳು ಪಾಪಕರವಾಗುತ್ತವೆ. ಯಾವ ಕರ್ಮಗಳು ಪಾಪಕರವಾಗುವುದಿಲ್ಲಎಂಬುದನ್ನು ಇಲ್ಲಿಯ ತನಕ ಹೇಳಿದ್ದೇನೆ. ಈಗ ಪಾಪಕರವಾದ ಕಾರ್ಯಗಳಿಗೆ ಯಾವ ಬಗೆಯ ಪ್ರಾಯಶ್ಚಿತ್ತಗಳನ್ನು ಮಾಡಿಕೊಳ್ಳ-ಬೇಕೆಂಬ ವಿಚಾರವನ್ನು ಮುಂದೆ ಹೇಳುತ್ತೇನೆ.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೩೫ನೆಯ ಅಧ್ಯಾಯವು ಮುಗಿಯಿತು.

* * * * *

೩೬. ಮೂವತ್ತಾರನೆಯ ಅಧ್ಯಾಯ

ಪರಸ್ತ್ರೀಗಮನ, ಪರಪುರುಷಸಂಪರ್ಕ, ಬ್ರಹ್ಮಹತ್ಯಾ , ಸುರಾಪಾನ, ವಿವಿಧ ಪಾತಕಗಳು, ಉಪಪಾತಕಗಳು. ಈ ಎಲ್ಲಾ ದೋಷಗಳಿಗೆ ಪ್ರಾಯಶ್ಚಿತ್ತಗಳು.

ವ್ಯಾಸಃ

ತಪಸಾ ಕರ್ಮಭಿಶ್ಚೈವ ಪ್ರದಾನೇನ ಚ ಭಾರತ।
ಪುನಾತಿ ಪಾಪಂ ಪುರುಷಃ ಪೂತಶ್ಚೇನ್ನ ಪ್ರವರ್ತತೇ ॥೧॥

ವೇದವ್ಯಾಸದೇವರು – ಯುಧಿಷ್ಠಿರನೇ! ಯಾವ ಮನುಷ್ಯನು ಪಾಪವನ್ನು ಆಚರಿಸಿರುತ್ತಾನೋ, ಅಂಥ ಮನುಷ್ಯನು ಆ ಪಾಪಗಳ ಪರಿಹಾರಕ್ಕಾಗಿ ಕೃಚ್ಛ್ರ, ಚಾಂದ್ರಾಯಣ ಮೊದಲಾದ ವ್ರತಗಳನ್ನು ಆಚರಿಸಬೇಕು. ಮತ್ತು ಅನೇಕ ಬಗೆಯ ದಾನಗಳನ್ನು ಮಾಡಬೇಕು. ಆಗ ಅವನು ಮಾಡಿದ ಪಾಪಗಳು ನಾಶವಾಗುತ್ತವೆ. ಆದರೆ ಮುಂದೆಂದೂ ಅದೇ ತಪ್ಪನ್ನು ಸರ್ವಥಾ ಮಾಡಬಾರದು.

ಏಕಕಾಲಂ ತು ಭುಂಜಾನಶ್ಚರನ್ ಭೈಕ್ಷಂ ಸ್ವಕರ್ಮಕೃತ್।
ಕಪಾಲಪಾಣಿಃ ಖಟ್ವಾಂಗೀ ಬ್ರಹ್ಮಚಾರೀ ಸದೋತ್ಥಿತಃ ॥೨॥

ಮಹಾಪಾಪವನ್ನು ಆಚರಿಸಿದವನು ಒಂದೇ ಹೊತ್ತು ಊಟ ಮಾಡಬೇಕು. ತನ್ನ ವೈಯಕ್ತಿಕ ಕೆಲಸಗಳನ್ನು ತಾನೇ ಮಾಡಿಕೊಳ್ಳಬೇಕು. ಭಿಕ್ಷೆ ಬೇಡಿ ಊಟವನ್ನು ಮಾಡಬೇಕು. ಬ್ರಹ್ಮಚರ್ಯವ್ರತದಲ್ಲಿರಬೇಕು. ಸದಾಕಾಲವು ಪರಮಾತ್ಮನ ವಿಷಯ -ದಲ್ಲಿ ಜಾಗೃತನಾಗಿರಬೇಕು. ಕಪಾಲವನ್ನು, ದಂಡವನ್ನು ಕೈಯಲ್ಲಿ ಹಿಡಿದು-ಕೊಂಡಿರಬೇಕು.

ಟಿಪ್ಪಣಿ - ಕಪಾಲಪಾಣಿಃ ಖಟ್ವಾಂಗೀ ಇತ್ಯತ್ರ ಕಪಾಲಪಾಣಿಃ ಭಿಕ್ಷಾಸಂಗ್ರಹಾಯ ಮೃಣ್ಮಯಕಪಾಲಪಾಣಿಃ । ಖಟ್ವಾಂಗೀ ಪಶ್ವಾದಿನಿವಾರಣಾಯ ಖಟ್ವಾಂಗೋ ಲಗುಡಮ್, ತದ್ವಾನ್ ।

ಭಿಕ್ಷೆಯ ಸಂಗ್ರಹಕ್ಕೋಸ್ಕರ ಮೃಣ್ಮಯವಾದ ಕಪಾಲವನ್ನು ಕೈಯಲ್ಲಿ ಹಿಡಿದು-ಕೊಂಡಿರಬೇಕು. ಖಟ್ವಾಂಗೀ ಅಂದರೆ ಪಶು ಮೊದಲಾದವುಗಳ ನಿವಾರಣೆ-ಗೋಸ್ಕರ ಒಂದು ಕೋಲನ್ನು ಹಿಡಿದುಕೊಂಡಿರಬೇಕು ಎಂದು ಅಭಿಪ್ರಾಯ.

ಅನಸೂಯುರಧಃಶಾಯೀ ಕರ್ಮ ಲೋಕೇ ಪ್ರಕಾಶಯನ್ ।
ಪೂರ್ಣೈರ್ದ್ವಾದಶಭಿರ್ವರ್ಷೈರ್ಬ್ರಹ್ಮಹಾ ವಿಪ್ರಮುಚ್ಯತೇ ॥೩॥

ಮತ್ತೊಬ್ಬರಲ್ಲಿ ದೋಷವನ್ನು ಎಣಿಸಬಾರದು. ನೆಲದ ಮೇಲೆ ಮಲಗಿಕೊಳ್ಳಬೇಕು. ತನ್ನ ಪಾಪಕರ್ಮವನ್ನು ಲೋಕದಲ್ಲಿ ಪ್ರಸಿದ್ಧಿಗೊಳಿಸಬೇಕು. ಹೀಗೆ ಹನ್ನೆರಡು ವರ್ಷಗಳ ಕಾಲ ವ್ರತವನ್ನು ಆಚರಿಸಿದರೆ ಬ್ರಹ್ಮಹತ್ಯಾ ಮೊದಲಾದ ಪಾಪಗಳಿಂದ ವಿಮುಕ್ತನಾಗುತ್ತಾನೆ.

ಲಕ್ಷ್ಯಃ ಶಸ್ತ್ರಭೃತಾಂ ವಾಸ್ಯಾದ್ ವಿದುಷಾಮಿಚ್ಛಯಾತ್ಮನಃ ।
ಪ್ರಾಸ್ಯೇದಾತ್ಮಾನಮಗ್ನೌ ವಾ ಸಮಿದ್ಧೇ ನಿರವಾಕ್ಕಿರಾಃ ॥೪॥

ಇವನು ಬ್ರಹ್ಮಹತ್ಯೆಯನ್ನು ಮಾಡಿದ್ದಾನೆ ಎಂಬುದಾಗಿ ತಿಳಿದು ಶಸ್ತ್ರಧಾರಿಗಳು ಇವನ ಮೇಲೆ ಲಕ್ಷ್ಯವನ್ನಿಟ್ಟರೆ, ಸ್ವೇಚ್ಛೆಯಿಂದ ಆ ಶಸ್ತ್ರಕ್ಕೆ ಭಾಗಿಯಾಗಬೇಕು. ಉರಿಯುವ ಬೆಂಕಿಯಲ್ಲಿ ತಲೆಕೆಳಗಾಗಿ ಮಾಡಿ, ಧುಮುಕಬೇಕು.

ಟಿಪ್ಪಣಿ - ಶಸ್ತ್ರಘಾತದ ಮೂಲಕ ಅಸುನೀಗಲು ಸಿದ್ಧನಿರಬೇಕು. ಉರಿಯುವ ಬೆಂಕಿಯಲ್ಲಿ ಇಚ್ಛೆಪಟ್ಟು ಧುಮುಕಬೇಕು. ಇಷ್ಟೊಂದು ಘೋರವಾದ ಶಿಕ್ಷೆಯನ್ನು ಅನುಭವಿಸಿದರೆ ಅವನಿಗೆ ಉದ್ಧಾರವಾಗಲು ಸಾಧ್ಯ. ಇಲ್ಲದಿದ್ದರೆ ನೂರಾರು ವರ್ಷಗಳ ಕಾಲ ನರಕ ದುಃಖವನ್ನು ಹೀನ ಯೋನಿಗಳನ್ನು ಅನುಭವಿಸಬೇಕಾಗುತ್ತದೆ. ಇದನ್ನೆಲ್ಲಾ ಗಮನಿಸಿ ಮಹಾಪಾತಕಗಳನ್ನು ಮಾಡುವ ಸಂದರ್ಭದಲ್ಲಿ ಇಂಥ ಘೋರ ಶಿಕ್ಷೆಯ ಎಚ್ಚರವನ್ನು ಹೊಂದಿರಬೇಕು.

ಜಪನ್ ವಾನ್ಯತಮಂ ವೇದಂ ಯೋಜನಾನಾಂ ಶತಂ ವ್ರಜೇತ್ ।
ಸರ್ವಸ್ವಂ ವಾ ವೇದವಿದೇ ಬ್ರಾಹ್ಮಣಾಯೋಪಪಾದಯೇತ್ ॥೫॥

ನೂರು ಯೋಜನಗಳ ತನಕ ವೇದವನ್ನು ಪಠಿಸುತ್ತಾ, ನಡೆದು ಹೋಗಬೇಕು. ವೇದಜ್ಞನಾದ ಬ್ರಾಹ್ಮಣನಿಗೆ ತನ್ನ ಸರ್ವಸ್ವವನ್ನು ದಾನ ಮಾಡಬೇಕು.

ಧನಂ ವಾ ಜೀವನಾಯಾಲಂ ಗೃಹಂ ವಾ ಸಪರಿಚ್ಛದಮ್ ।
ಮುಚ್ಯತೇ ಬ್ರಹ್ಮಹತ್ಯಾಯಾ ಗೋಪ್ತಾ ಗೋಬ್ರಾಹ್ಮಣಸ್ಯ ಚ ॥೬॥

ಒಬ್ಬ ಬ್ರಾಹ್ಮಣನಿಗೆ ಜೀವನಕ್ಕೆ ಬೇಕಾಗುವಷ್ಟು ಹಣವನ್ನು ದಾನ ಮಾಡಬೇಕು. ಸುವ್ಯವಸ್ಥಿತವಾದ ಮನೆಯನ್ನು ದಾನಮಾಡಬೇಕು. ಗೋ-ಬ್ರಾಹ್ಮಣರ ಸಂರಕ್ಷಣೆಯನ್ನು ನಿರಂತರವಾಗಿ ಮಾಡಬೇಕು. ಆಗ ಬ್ರಹ್ಮಹತ್ಯಾಪಾಪದಿಂದ ವಿಮುಕ್ತನಾಗುತ್ತಾನೆ.

ಷಡ್‌ಭಿರ್ವರ್ಷೈಃ ಕೃಚ್ಛ್ರಭೋಜೀ ಬ್ರಹ್ಮಹಾ ಪೂಯತೇ ನರಃ।
ಮಾಸೇ ಮಾಸೇ ಸಮಶ್ನಂಸ್ತು ತ್ರಿಭಿರ್ವರ್ಷೈಃ ಪ್ರಮುಚ್ಯತೇ ॥೭॥

ಆರು ವರ್ಷಗಳ ಕಾಲ ಹೀಗೆ ಕೃಚ್ಛ್ರವ್ರತದ ಕ್ರಮದಲ್ಲಿ ಭೋಜನವನ್ನು ಮಾಡುತ್ತಿದ್ದರೆ, ಬ್ರಹ್ಮಹತ್ಯಾ ಪಾಪವು ಪರಿಹಾರವಾಗುತ್ತದೆ. ಅಥವಾ ಮಾಸಕ್ರಮದಲ್ಲಿ ಕೃಚ್ಛ್ರವ್ರತವನ್ನು ಆಚರಣೆ ಮಾಡಿದರೆ, ಮೂರು ವರ್ಷಗಳಲ್ಲಿಯೇ ಬ್ರಹ್ಮಹತ್ಯಾ ಪಾಪವು ಪರಿಹಾರವಾಗುತ್ತದೆ.

ಟಿಪ್ಪಣಿ - ಮಾಸೇ ಮಾಸೇ ಸಮಶ್ನಂಸ್ತು ಇತ್ಯತ್ರ **ಸಮಶ್ನನ್** ಮಾಸೋಪವಾಸಂ ಕೃತ್ವಾ ಮಾಸೇ ಸಂಪೂರ್ಣೇ ಸತಿ ಸಮಶ್ನನ್ । **ತ್ರಿರಾವಾಕ್ಕಿರಾ** ಇತ್ಯತ್ರ ಋಗಾದಿವೇದಾನಾಂ ಮಧ್ಯೇ ಏಕಂ ವೇದಂ ತ್ರಿರ್ಜಪನ್ ।

ಮನುಸ್ಮೃತಿಯಲ್ಲಿ ಕೃಚ್ಛ್ರವ್ರತವನ್ನು ಹೀಗೆ ಹೇಳಿದ್ದಾರೆ - 'ತ್ರ್ಯಹಂ ಪ್ರಾತಸ್ತ್ರ್ಯಹಂ ಸಾಯಂ ತ್ರ್ಯಹಮದ್ಯಾದಯಾಚಿತಮ್ । ತ್ರ್ಯಹಂ ಪರಂ ಚ ನಾಶ್ನೀಯಾತ್ಪ್ರಾಜಾಪತ್ಯಂ ಚರನ್ದ್ವಿಜಃ ॥ (ಅ ೧೧, ಶ್ಲೋಕ ೨೧೧). ಮೂರು ದಿವಸಗಳು ಹಗಲು ಊಟ ಮಾಡಬೇಕು. ಮೂರು ದಿವಸಗಳು ರಾತ್ರಿ ಊಟ ಮಾಡಬೇಕು. ಮೂರು ದಿವಸಗಳು ಯಾರ ಬಳಿಯೂ ಬೇಡದೇ ಇರುವಷ್ಟನ್ನೇ ಊಟ ಮಾಡಬೇಕು. ಮೂರು ದಿವಸಗಳು ಉಪವಾಸ ಮಾಡಬೇಕು. ಹೀಗೆ ಹನ್ನೆರಡು ದಿವಸಗಳ ಪರ್ಯಂತವಾಗಿ ವ್ರತವನ್ನು ಆರು ವರ್ಷಗಳ ಕಾಲ ಆಚರಿಸಬೇಕು. ಆಗ ಬ್ರಹ್ಮಹತ್ಯಾ ಪಾಪದಿಂದ ವಿಮುಕ್ತನಾಗುತ್ತಾನೆ.

ಅಥವಾ ಮಾಸಿಕಾವಿಧಾನದಲ್ಲಿ ಈ ವ್ರತವನ್ನು ಹೀಗೆ ತಿಳಿಸುತ್ತಾರೆ - ಒಂದು ತಿಂಗಳು ಹಗಲು ಭೋಜನ. ಒಂದು ತಿಂಗಳು ರಾತ್ರಿ ಭೋಜನ. ಒಂದು ತಿಂಗಳು ಅಯಾಚಿತವಾಗಿ ಸಿಕ್ಕಿದ್ದಷ್ಟನ್ನು ಊಟ ಮಾಡಬೇಕು. ಮತ್ತೊಂದು ತಿಂಗಳು ಸಂಪೂರ್ಣವಾಗಿ ಉಪವಾಸವನ್ನು ಮಾಡಬೇಕು. ಹೀಗೆ ಮಾಡಿದರೆ ಮೂರು

ವರ್ಷಗಳಲ್ಲಿಯೇ ಬ್ರಹ್ಮಹತ್ಯೆಯ ಪಾಪದಿಂದ ವಿನಿರ್ಮುಕ್ತನಾಗುತ್ತಾನೆ. ಅಥವಾ ಒಂದು ವರ್ಷದಲ್ಲಿಯೇ ಬ್ರಹ್ಮಹತ್ಯೆಯು ಪರಿಹಾರವಾಗುತ್ತದೆಂದು ಕೆಲವೆಡೆ ಹೇಳಲಾಗಿದೆ.

ಬ್ರಹ್ಮಹತ್ಯಾಪಾಪವಷ್ಟೇ ಅಲ್ಲದೇ, ಪರಸ್ತ್ರೀಗಮನ, ಪರಪುರುಷ ಸಂಪರ್ಕ, ಮದ್ಯಪಾನ ಮೊದಲಾದ ಮಹಾಪಾತಕಗಳ ಪರಿಹಾರಕ್ಕೂ ಕೂಡ ಕೃಚ್ಛ್ರಚಾಂದ್ರಾಯಣವ್ರತವನ್ನು ಶಾಸ್ತ್ರದಲ್ಲಿ ತಿಳಿಸುತ್ತಾರೆ.

ಸಂವತ್ಸರೇಣ ಮಾಸಾಶೀ ಪೂಯತೇ ನಾತ್ರ ಸಂಶಯಃ।
ತಥೈವೋಪವಸನ್ ರಾಜನ್ ಸ್ವಲ್ಪೇನಾಪಿ ಪ್ರಮುಚ್ಯತೇ ॥೮॥

ಒಂದು ಮಾಸದಲ್ಲಿ ಭೋಜನಕ್ರಮವನ್ನು ವ್ಯತ್ಯಾಸ ಗೊಳಿಸುತ್ತಾ ಕೃಚ್ಛ್ರವ್ರತವನ್ನು ಆಚರಣೆ ಮಾಡಿದರೆ ಕೂಡಲೇ ಬ್ರಹ್ಮಹತ್ಯಾ ಪಾಪದಿಂದ ವಿಮುಕ್ತನಾಗುತ್ತಾನೆ. ಇದರಲ್ಲಿ ಸಂಶಯವಿಲ್ಲ.

ಕ್ರತುನಾ ಚಾಶ್ವಮೇಧೇನ ಪೂಯತೇ ನಾತ್ರ ಸಂಶಯಃ।
ಯೇ ಚಾಪ್ಯವಭೃಥಸ್ನಾತಾಃ ಕೇಚಿದೇವಂವಿಧಾ ನರಾಃ ॥೯॥

ಅಶ್ವಮೇಧಯಾಗವನ್ನು ಮಾಡಿದರೂ ಕೂಡ ಬ್ರಹ್ಮಹತ್ಯಾಪಾಪವು ಪರಿಹಾರವಾಗುತ್ತದೆ. ಇದರಲ್ಲಿಯೂ ಯಾವುದೇ ಸಂಶಯವಿರುವುದಿಲ್ಲ. ಬ್ರಹ್ಮಹತ್ಯೆಗೆ ಸಮಾನವಾದ ಬೇರೆ ಪಾಪಾಗಳಿಗೂ ಕೂಡ ಅಶ್ವಮೇಧಯಾಗವನ್ನು ಮಾಡಿ ಅವಭೃಥ ಸ್ನಾನ ಮಾಡುವುದರಿಂದ ಶುದ್ಧಿಯನ್ನು ಹೊಂದಬಹುದು.

ತೇ ಸರ್ವೇ ಪೂತಪಾಪ್ಮಾನೋ ಭವಂತೀತಿ ಪರಾ ಶ್ರುತಿಃ।
ಬ್ರಾಹ್ಮಣಾರ್ಥೇ ಹತೋ ಯುದ್ಧೇ ಮುಚ್ಯತೇ ಬ್ರಹ್ಮಹತ್ಯಯಾ ॥೧೦॥

ಗವಾಂ ಶತಸಹಸ್ರಂ ತು ಪಾತ್ರೇಭ್ಯಃ ಪ್ರತಿಪಾದಯನ್।
ಬ್ರಹ್ಮಹಾ ವಿಪ್ರಮುಚ್ಯೇತ ಸರ್ವಪಾಪೇಭ್ಯ ಏವ ಚ ॥೧೧॥

'ಸರ್ವಂ ಪಾಪ್ಮಾನಂ ತರತಿ ತರತಿ ಬ್ರಹ್ಮಹತ್ಯಾಂ ಯೋಽಶ್ವಮೇಧೇನ ಯಜತೇ'

ಎಂಬ ಶ್ರುತಿಯು ಅಶ್ವಮೇಧಯಾಗದಿಂದ ಎಲ್ಲಾ ಪಾಪಗಳು ಪರಿಹಾರವಾಗುತ್ತವೆ ಎಂದು ಹೇಳುತ್ತಿದೆ. ಬ್ರಹ್ಮಹತ್ಯೆಯನ್ನು ಮಾಡಿದವನು ಬ್ರಾಹ್ಮಣರ ರಕ್ಷಣೆಗೋಸ್ಕರ ಯುದ್ಧವನ್ನು ಮಾಡಬೇಕು. ಆ ಸಂದರ್ಭದಲ್ಲಿ ಮೃತನಾದರೆ, ಆ ಮಹಾಪಾಪದಿಂದ ವಿಮುಕ್ತನಾಗುತ್ತಾನೆ. ಒಂದು ಲಕ್ಷ ಗೋವುಗಳನ್ನು ಸತ್ಪಾತ್ರರಿಗೆ ದಾನ ಮಾಡುವುದರಿಂದಲೂ ಬ್ರಹ್ಮಹತ್ಯಾಪಾಪವು ಪರಿಹಾರವಾಗುತ್ತದೆ. ಮತ್ತು ಉಳಿದೆಲ್ಲಾ ಪಾಪಗಳಿಂದಲೂ ಕೂಡ ವಿಮುಕ್ತನಾಗುತ್ತಾನೆ.

ಕಪಿಲಾನಾಂ ಸಹಸ್ರಾಣಿ ಯೋ ದದ್ಯಾತ್ ಪಂಚವಿಂಶತಿಮ್ ।
ದೋಗ್ಧ್ರೀಣಾಂ ಸ ಚ ಪಾಪೇಭ್ಯಃ ಸರ್ವೇಭ್ಯೋ ವಿಪ್ರಮುಚ್ಯತೇ ॥೧೨॥

ಯಥೇಚ್ಛವಾಗಿ ಹಾಲನ್ನು ನೀಡುವ ೨೫೦೦೦ ಕಪಿಲಗೋವುಗಳನ್ನು ಸತ್ಪಾತ್ರನಿಗೆ ದಾನ ಮಾಡುವುದರಿಂದ ಎಲ್ಲಾ ಪಾಪಗಳಿಂದಲೂ ಕೂಡ ವಿಮುಕ್ತನಾಗುತ್ತಾನೆ.

ಗೋ ಸಹಸ್ರಂ ಸವತ್ಸಾನಾಂ ದೋಗ್ಧ್ರೀಣಾಂ ಪ್ರಾಣಸಂಶಯೇ ।
ಸಾಧುಭ್ಯೋ ವೈ ದರಿದ್ರೇಭ್ಯೋ ದತ್ವಾಮುಚ್ಯೇತ ಕಿಲ್ಬಿಷಾತ್ ॥೧೩॥

ಪ್ರಾಣ ಹೋಗುವ ಸಂದರ್ಭದಲ್ಲಿ ಯಾವ ಸಾಧಕನು ಹಾಲನ್ನು ನೀಡುವ ಕರುಗಳುಳ್ಳ ೧೦೦೦ ಹಸುಗಳನ್ನು ಸಾಧುಗಳಾದ ಸಂಪತ್ತಿಲ್ಲದ ಸತ್ಪುರುಷರಿಗೆ ದಾನವನ್ನು ಮಾಡುತ್ತಾನೋ ಅವನು ಜೀವನದಲ್ಲಿ ಮಾಡಿದ ಎಲ್ಲ ಪಾಪಗಳಿಂದಲೂ ಕೂಡ ವಿಮುಕ್ತನಾಗುತ್ತಾನೆ.

ಶತಂ ವೈ ಯಸ್ತು ಕಾಂಭೋಜಾನ್ ಬ್ರಾಹ್ಮಣ್ಯೇಭ್ಯಃ ಪ್ರಯಚ್ಛತಿ ।
ನಿಯತೇಭ್ಯೋ ಮಹೀಪಾಲ ಸ ಚ ಪಾಪಾತ್ ಪ್ರಮುಚ್ಯತೇ ॥೧೪॥

ನಿಯಮಾನುಸಾರಿಯಾಗಿ ಸದ್ಬ್ರಾಹ್ಮಣನಿಗೆ ಕಾಂಭೋಜದೇಶದ ನೂರು ಕುದುರೆಗಳನ್ನು ದಾನ ಮಾಡುವುದರಿಂದ ಎಲ್ಲಾ ಪಾಪಗಳಿಂದ ವಿನಿರ್ಮುಕ್ತನಾಗುತ್ತಾನೆ.

ಮನೋರಥಂ ತು ಯೋ ದದ್ಯಾದೇಕಸ್ಮಾ ಅಪಿ ಭಾರತ ।
ನ ಕೀರ್ತಯೇತ ದತ್ವಾ ಯಃ ಸ ಚ ಪಾಪಾತ್ ಪ್ರಮುಚ್ಯತೇ ॥೧೫॥

ಯಾವ ಬ್ರಾಹ್ಮಣನ ಮನೋರಥವನ್ನು ಸಂಪೂರ್ಣವಾಗಿ ಪೂರ್ಣಗೊಳಿಸಿದರೂ ಕೂಡ ಮತ್ತು ತಾನು ದಾನ ಮಾಡಿದ ವಸ್ತುವನ್ನು ಮತ್ತೊಬ್ಬರಿಗೆ ಹೇಳದೇ ಇರುವುದರಿಂದಲೂ ಕೂಡ ಬ್ರಹ್ಮಹತ್ಯಾದಿ ಪಾಪಗಳಿಂದ ವಿಮುಕ್ತನಾಗುತ್ತಾನೆ.

ಸುರಾಪಾನಂ ಸಕೃತ್ ಪೀತ್ವಾ ಯೋಽಗ್ನಿವರ್ಣಾಂ ಪಿಬೇದ್ ದ್ವಿಜಃ।
ಸ ಪಾವಯತ್ಯಥಾತ್ಮಾನಮಿಹ ಲೋಕೇ ಪರತ್ರ ಚ ॥೧೬॥

ಒಮ್ಮೆ ಸುರಾಪಾನವನ್ನು ಮಾಡಿದರೂ ಸಾಕು ಮಹಾಪಾಪವು ಬರುತ್ತದೆ. ಈ ಪಾಪದ ಪರಿಹಾರಕ್ಕಾಗಿ ಕೆಂಪಗೆ ಕಾದು ಕುದಿಯುತ್ತಿರುವ ಕೆಂಪು ಬಣ್ಣದ ಸುರೆಯನ್ನು ಕುಡಿದು ಬಿಡಬೇಕು.

ಟಿಪ್ಪಣಿ -ಯೋಽಗ್ನಿವರ್ಣಾಂ ಸುರಾಂ ಪಿಬೇದ್ ಇತ್ಯತ್ರ **ಅಗ್ನಿವರ್ಣಾಂ** ಪುನಃಪುನಃ ಕ್ವಥನೇನ ಅಗ್ನಿಸಮಾನವರ್ಣಾಮ್ ।

ಸುರಾಂಬುಘೃತಗೋಮೂತ್ರಪಯಸಾಮಗ್ನಿಸನ್ನಿಭಮ್ ।
ಸುರಾಪೋನ್ಯತಮಂ ಪೀತ್ವಾ ಮರಣಾಚ್ಛುದ್ಧಿಮೃಚ್ಛತಿ ॥

ಸುರೆ, ಜಲ, ತುಪ್ಪ, ಗೋಮೂತ್ರ ಹಾಲು ಇವುಗಳಲ್ಲಿ ಯಾವುದಾದರೂ ಒಂದನ್ನು ಚೆನ್ನಾಗಿ ಕುದಿಸಿ ಪ್ರಾಶನ ಮಾಡಿ ಪ್ರಾಯಶ್ಚಿತ್ತವನ್ನು ಮಾಡಿಕೊಂಡರೂ ಈಗಲೂ ಪರಲೋಕದಲ್ಲಿ ಪರಿಶುದ್ಧನಾಗುತ್ತಾನೆ.

ಮರುಪ್ರಪಾತಂ ಪ್ರಪತನ್ ಜ್ವಲನಂ ವಾ ಸಮಾವಿಶನ್ ।
ಮಹಾಪ್ರಸ್ಥಾನಮಾತಿಷ್ಠನ್ ಮುಚ್ಯತೇ ಸರ್ವಕಿಲ್ಬಿಷೈಃ ॥೧೭॥

ಮರುಭೂಮಿಯಲ್ಲಿರುವ ಪರ್ವತದ ತುದಿಯಿಂದ ಪ್ರಪಾತಕ್ಕೆ ತಲೆಕೆಳಗಾಗಿ ಬೀಳಬೇಕು. ಜ್ವಲಿಸುತ್ತಿರುವ ಅಗ್ನಿಯನ್ನು ಪ್ರವೇಶ ಮಾಡಬೇಕು. ಮರಣದೀಕ್ಷೆಯನ್ನು ಕೈಗೊಂಡು ಹಿಮಾಲಯದ ಕಡೆ ಮಹಾಪ್ರಸ್ಥಾನವನ್ನು ಮಾಡಬೇಕು. ಹೀಗೆ ಮಾಡುವುದರಿಂದ ಎಲ್ಲ ಬಗೆಯ ಪಾಪಗಳಿಂದ ವಿಮುಕ್ತನಾಗುತ್ತಾನೆ.

ಟಿಪ್ಪಣಿ - ಮರುಪ್ರಪಾತಮ್ ಇತ್ಯತ್ರ ಮರುಪ್ರಪಾತಂ ಮದುದೇಶಸ್ಥಕೂಪಮ್ ।

ಬೃಹಸ್ಪತಿಸವೇನೇಷ್ಟ್ವಾ ಸುರಾಪೋ ಬ್ರಾಹ್ಮಣಃ ಪುನಃ।
ಸಮಿತಿಂ ಬ್ರಾಹ್ಮಣೈರ್ಗಚ್ಛೇದಿತಿ ವೈ ಬ್ರಾಹ್ಮಣೇ ಶ್ರುತಿಃ ॥೧೮॥

ಮದ್ಯಪಾನವನ್ನು ಮಾಡಿದ ಬ್ರಾಹ್ಮಣನು ಬೃಹಸ್ಪತಿಸವನ ಎಂಬ ಯಾಗವನ್ನು ಮಾಡಬೇಕು. ಆಗ ಆ ಬ್ರಾಹ್ಮಣನು ಬ್ರಾಹ್ಮಣರ ಸಭೆಗೆ ತೆರಳಲು ಅರ್ಹನಾಗುತ್ತಾನೆ.

ಭೂಮಿಪ್ರದಾನಂ ಕುರ್ಯಾದ್ ಯಃ ಸುರಾಂ ಪೀತ್ವಾವಿಮತ್ಸರಃ।
ಪುನರ್ನ ಚ ಪಿಬೇದ್ ರಾಜನ್ ಸಂಸ್ಕೃತಃ ಶುದ್ಧ್ಯತೇ ನರಃ ॥೧೯॥

ಮದ್ಯಪಾನವನ್ನು ಮಾಡಿದ ವ್ಯಕ್ತಿಯು ಮಾತ್ಸರ್ಯರಹಿತನಾಗಿ, ಸತ್ಪಾತ್ರರಿಗೆ ಭೂದಾನವನ್ನು ಮಾಡಬೇಕು. ಮತ್ತೆಂದೂ ಸುರಾಪಾನವನ್ನು ಮಾಡಬಾರದು. ಹೀಗೆ ಸಂಸ್ಕೃತನಾಗಿ ಪರಿಶುದ್ಧಿಯನ್ನು ಹೊಂದಬೇಕು.

ಗುರುತಲ್ಪೀ ಶಿಲಾಂ ತಪ್ತಾಮಾಯಸೀಮಧಿಸಂವಿಶೇತ್।
ಪಾಣಾವಾಧಾಯ ವಾ ಶೇಫಂ ಪ್ರವ್ರಜೇದೂರ್ಧ್ವದರ್ಶನಃ ॥೨೦॥

ಯಾವ ಮನುಷ್ಯನು ಗುರುಪತ್ನಿಯ ಸಮಾಗಮವನ್ನು ಮಾಡಿರುತ್ತಾನೋ, ಅಂಥವನು ಕೆಂಪಗೆ ಕಾದಿರುವ ಲೋಹಮಯವಾದ ಶಿಲೆಯ ಮೇಲೆ ಮಲಗಿಕೊಳ್ಳಬೇಕು. ಅಥವಾ ತನ್ನ ಜನನೇಂದ್ರಿಯವನ್ನು ತುಂಡರಿಸಿ ತಲೆಯೆತ್ತಿಕೊಂಡು ಆಕಾಶವನ್ನು ನೋಡುತ್ತಾ ಪ್ರಯಾಣ ಮಾಡಬೇಕು.

ಶರೀರಸ್ಯ ವಿಮೋಕ್ಷೇಣ ಮುಚ್ಯತೇ ಕರ್ಮಣೋಽಶುಭಾತ್।
ಕರ್ಮಭ್ಯೋ ವಿಪ್ರಮುಚ್ಯಂತೇ ಯತ್ತಾಃ ಸಂವತ್ಸರಂ ಸ್ತ್ರಿಯಃ ॥೨೧॥

ಹೀಗೆ ಅನೇಕ ಶಾರೀರಿಕವಾದ ಶಿಕ್ಷೆಯನ್ನು ನೀಡುತ್ತಾ ಶರೀರವನ್ನು ಪರಿತ್ಯಾಗ ಮಾಡಿದರೆ ಮಾತ್ರ ಆ ಗುರುತಲ್ಪಗನ ಮಹಾಪಾಪವು ಪರಿಹಾರವಾಗುತ್ತದೆ. ಯಾವ ಸ್ತ್ರೀಯು ಗುರುತಲ್ಪಗಮನಕ್ಕೆ ಭಾಗಿಯಾಗಿರುತ್ತಾಳೋ, ಅವಳು ಒಂದು ವರ್ಷಗಳ ಕಾಲ ಜಿತೇಂದ್ರಿಯಳಾಗಿದ್ದರೆ, ಆ ಪಾಪದಿಂದ ವಿನಿರ್ಮುಕ್ತಳಾಗುತ್ತಾಳೆ.

ಮಹಾವ್ರತಂ ಚರೇದ್ ಯಸ್ತು ದದ್ಯಾತ್ ಸರ್ವಸ್ವಮೇವ ತು।
ಗುರ್ವರ್ಥೇ ವಾ ಹತೋ ಯುದ್ಧೇ ಸ ಮುಚ್ಯೇತ್
ಕರ್ಮಣೋಽಶುಭಾತ್ ॥೨೨॥

ಒಂದು ತಿಂಗಳ ಕಾಲ ನೀರನ್ನೂ ಸಹ ಕುಡಿಯದೇ ಉಪವಾಸದಲ್ಲಿ ಮಹಾ-ವ್ರತವನ್ನು ಆಚರಣೆ ಮಾಡಬೇಕು. ತನ್ನಲ್ಲಿರುವ ಸರ್ವಸ್ವವನ್ನು ಸದ್ಬ್ರಾಹ್ಮಣನಿಗೆ ದಾನ ಮಾಡಬೇಕು. ಮತ್ತು ಗುರುವಿಗೋಸ್ಕರ ಯುದ್ಧದಲ್ಲಿ ಪ್ರಾಣವನ್ನು ಪರಿತ್ಯಾಗ ಮಾಡಿ ತಾನು ಮಾಡಿದ ಅಶುಭಕರ್ಮದಿಂದ ವಿಮುಕ್ತನಾಗಬೇಕು.

ಅನೃತೇನೋಪಚರ್ತಾ ಚ ಪ್ರತಿರೋದ್ಧಾ ಗುರೋಸ್ತಥಾ।
ಉಪಹೃತ್ಯ ಪ್ರಿಯಂ ತಸ್ಮೈ ತಸ್ಮಾತ್ ಪಾಪಾತ್ ಪ್ರಮುಚ್ಯತೇ ॥೨೩॥

ಯಾರು ಸುಳ್ಳನ್ನು ಹೇಳಿ, ಗುರುವಿನ ಉಪಸತ್ತಿಯನ್ನು ಮಾಡುತ್ತಾನೋ, ಗುರುವಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಾನೋ, ಅಂಥವನಿಗೂ ಪಾಪವು ಬರುತ್ತದೆ. ಅದರ ಪರಿಹಾರಕ್ಕಾಗಿ ಗುರುವಿಗೆ ಯಾವ ವಸ್ತುವನ್ನು ಕೊಡುವುದರಿಂದ ಸಂತೋಷವಾಗುತ್ತದೋ, ಆ ವಸ್ತುವನ್ನು ಕೊಟ್ಟು ಪ್ರಸನ್ನಗೊಳಿಸಬೇಕು.

ಅವಕೀರ್ಣಿನಿಮಿತ್ತಂ ತು ಬ್ರಹ್ಮಹತ್ಯಾವ್ರತಂ ಚರೇತ್।
ಖರಚರ್ಮವಾಸಾಃ ಷಣ್ಮಾಸಂ ತಥಾ ಮುಚ್ಯೇತ ಕಿಲ್ಬಿಷಾತ್ ॥೨೪॥

ಬ್ರಹ್ಮಚರ್ಯ ವ್ರತದಿಂದ ಯಾರು ಭ್ರಷ್ಟನಾಗಿರುತ್ತಾನೋ, ಅಂಥವನು ಮಹಾ-ಪಾಪಿಯಾಗುತ್ತಾನೆ. ಅಂಥವನು ತಾನು ಮಾಡಿದ ಪಾಪಪರಿಹಾರಕ್ಕೆ ಬ್ರಹ್ಮಹತ್ಯಾ ಪಾಪದ ನಿರಸನಕ್ಕೆ ಹೇಳಿರುವ ವ್ರತವನ್ನೇ ಮಾಡಬೇಕು. ಮತ್ತು ಕತ್ತೆಯ ಚರ್ಮವನ್ನು ಹೊದ್ದುಕೊಂಡಿರಬೇಕು. ಹೀಗೆ ಆರುತಿಂಗಳು ಕಾಲ ಮಾಡುವು-ದರಿಂದ ಬ್ರಹ್ಮಚರ್ಯವ್ರತಭಂಗದಿಂದ ಉಂಟಾದ ಪಾಪವು ಪರಿಹಾರವಾಗುತ್ತದೆ.

ಸ್ತೇಯಂ ತು ಯಸ್ಯಾಪಹರೇತ್ ತಸ್ಮೈ ದದ್ಯಾತ್ ಸಮಂ ವಸು।
ವಿವಿಧೇನಾಭ್ಯುಪಾಯೇನ ತೇನ ಮುಚ್ಯೇತ ಕಿಲ್ಬಿಷಾತ್ ॥೨೫॥

ಯಾರು ಪರಸ್ವವನ್ನು ಅಪಹರಣ ಮಾಡಿರುತ್ತಾನೋ, ಅವನು ಅದಕ್ಕೆ ಸಮಾನವಾದ ವಸ್ತುವನ್ನು ತಂದು ಅವನಿಗೆ ನೀಡಬೇಕು. ಅನೇಕ ಬಗೆಯಿಂದ ಅವನನ್ನು ಸಂತೋಷಗೊಳಿಸಬೇಕು. ಹೀಗೆ ಮಾಡುವುದರಿಂದ ಪರಸ್ವಾಪಹರಣದ ದೋಷವು ಪರಿಹಾರವಾಗುತ್ತದೆ.

ಕೃಚ್ಛ್ರಾದ್ ದ್ವಾದಶರಾತ್ರೇಣ ಸಂಯತಾತ್ಮಾ ವ್ರತೇ ಸ್ಥಿತಃ।
ಪರಿವೇತ್ತಾ ಭವೇತ್ ಪೂತಃ ಪರಿವಿತ್ತಿಶ್ಚ ಭಾರತ ॥೨೬॥

ಅಣ್ಣನು ಮದುವೆಯಾಗುವ ಮೊದಲೇ ತಮ್ಮನು ಮದುವೆಯಾದರೆ ಪರಿವೇತ್ತಾ ಎಂದು ಕರೆಸಿಕೊಳ್ಳುತ್ತಾನೆ. ಇಂಥವನು ಹನ್ನೆರಡು ರಾತ್ರಿಗಳ ಪರ್ಯಂತವಾಗಿ ಕೃಚ್ಛ್ರವ್ರತವನ್ನು ಆಚರಣೆ ಮಾಡುವುದರಿಂದ ಪರಿಶುದ್ಧನಾಗುತ್ತಾನೆ. ಅವನ ಹೆಂಡತಿಯಾದ ಪರಿವಿತ್ತಿಗೂ ಇದೇ ಪ್ರಾಯಶ್ಚಿತ್ತವನ್ನು ಹೇಳಲಾಗಿದೆ.

ಟಿಪ್ಪಣಿ - ಕೃಚ್ಛ್ರಾದ್ ದ್ವಾದಶರಾತ್ರೇಣ ಇತ್ಯತ್ರ ಲ್ಯಬ್ಲೋಪನಿಮಿತ್ತಾ ಪಂಚಮೀ।
ಕೃಚ್ಛ್ರಾತ್ ಕೃಚ್ಛ್ರವ್ರತಂ ಸಂಪಾದ್ಯ ॥

ನಿವೇಶ್ಯಸ್ತು ಭವೇತ್ತೇನ ಸದಾ ತಾರಯಿತಾ ಪಿತೄನ್।
ನತು ಸ್ತ್ರಿಯಾ ಭವೇತ್ ದೋಷೋ ನತು ಸಾ ತೇನ ಲಿಪ್ಯತೇ ॥೨೭॥

ನಿರಂತರವಾಗಿ ಪಿತೃಗಳನ್ನು ಸಂತೋಷಪಡಿಸುವ ಅಣ್ಣನು ತಮ್ಮನ ವಿವಾಹವಾದ ಮೇಲೆ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ವಿವಾಹವನ್ನು ಮಾಡಿಕೊಳ್ಳಬೇಕು. ಹೀಗೆ ಮಾಡುವುದರಿಂದ ಅಣ್ಣನ ಹೆಂಡತಿಗೆ ಯಾವುದೇ ದೋಷವು ತಟ್ಟುವುದಿಲ್ಲ. ಮತ್ತು ಯಾವುದೇ ಬಗೆಯ ಪಾಪಭಾಜನಳೂ ಆಗುವುದಿಲ್ಲ.

ಟಿಪ್ಪಣಿ - ನಿವೇಶ್ಯಸ್ತು ಭವೇತ್ ತೇನ ಸದಾ ಇತ್ಯತ್ರ ಪ್ರಾಯಶ್ಚಿತ್ತೇನ **ನಿವೇಶ್ಯಃ** ನಿವೇಶನಂ ಗೃಹಂ ಕೃತ್ವಾ ಸ್ಥಾತುಂ ಯೋಗ್ಯಃ।

ಭೋಜನಂ ಹ್ಯಂತರಾ ಶುದ್ಧಂ ಚಾತುರ್ಮಾಸ್ಯೇ ವಿಧೀಯತೇ।
ಸ್ತ್ರಿಯಸ್ತೇನ ವಿಶುದ್ಧ್ಯಂತಿ ಇತಿ ಧರ್ಮವಿದೋ ವಿದುಃ ॥೨೮॥

ಚಾತುರ್ಮಾಸ್ಯಕಾಲದಲ್ಲಿ ಒಂದು ದಿನ ಊಟ ಮಾಡಬೇಕು. ಮತ್ತೊಂದು

ದಿನ ಉಪವಾಸ ಮಾಡಬೇಕು. ಹೀಗೆ ಧಾರಣೆಪಾರಣೆ ವ್ರತವನ್ನು ಆಚರಣೆ ಮಾಡುವುದರಿಂದ ಸ್ತ್ರೀಯರು ಪರಿಶುದ್ಧರಾಗುತ್ತಾರೆ. ಈ ವ್ರತವನ್ನು ಧರ್ಮಜ್ಞರು ತಿಳಿಸಿದ್ದಾರೆ.

ಟಿಪ್ಪಣಿ - ಭೋಜನಂ ಹ್ಯಂತರಾ ಇತ್ಯತ್ರ **ಭೋಜನಂ ಅಂತರಾ** ವಿನಾ।

ಸ್ತ್ರಿಯಸ್ತ್ವಾಶಂಕಿತಾಃ ಪಾಪೈರ್ನೋಪಗಮ್ಯಾ ಹಿ ಜಾನತಾ ।
ರಜಸಾ ತಾ ವಿಶುದ್ಧ್ಯಂತೇ ಭಸ್ಮನಾ ಭಾಜನಂ ಯಥಾ ॥೨೯॥

ಒಂದು ವೇಳೆ ಪತ್ನಿಯು ವ್ಯಭಿಚಾರಿಯಾಗಿದ್ದಾಳೆ ಎಂಬ ಶಂಕೆಯು ಉಂಟಾದರೆ, ಪತಿಯಾದವನು ಅವಳು ರಜಸ್ವಲೆಯಾಗುವ ತನಕ ಸಮಾಗಮವನ್ನು ಮಾಡಬಾರದು. ಭಸ್ಮಲೇಪನವನ್ನು ಮಾಡುವುದರಿಂದ ಪಾತ್ರೆಯು ಹೇಗೆ ಶುದ್ಧವಾಗುತ್ತದೋ, ಅದರಂತೆ ಸ್ತ್ರೀಯರು ರಜೋದರ್ಶನದಿಂದ ಪರಿಶುದ್ಧರಾಗುತ್ತಾರೆ.

ಟಿಪ್ಪಣಿ - ಪಾಪೇನೋಪಗಮ್ಯ ವಿಜಾನತೀಃ ಇತ್ಯತ್ರ **ಪಾಪೇನ** ಪಾಪಿಷ್ಠೇನ ಜಾರಾದಿನಾ ಉಪಗಮ್ಯ ಕಾಪಟ್ಯೇನ ಬಲೇನ ವಾ ಉಪಾಗಮ್ಯ ।

ಸ್ತ್ರೀಯರು ಪರಪುರುಷರನ್ನು ಸಂಪರ್ಕ ಮಾಡಬಹುದು. ರಜೋದರ್ಶನದ ನಂತರ ಅವರು ಶುದ್ಧರಾಗುತ್ತಾರೆ ಎಂಬುದು ಇದರ ಅಭಿಪ್ರಾಯವಲ್ಲ. ಪುರುಷನು ಹೇಗೆ ಪರಸ್ತ್ರೀ ಸಂಪರ್ಕವನ್ನು ಮಾಡಿದರೆ ಕೃಚ್ಛ್ರಚಾಂದ್ರಾಯಣಾದಿ ವ್ರತಗಳಿಂದಷ್ಟೇ ಪರಿಶುದ್ಧನಾಗುತ್ತಾನೋ, ಸ್ತ್ರೀಯೂ ಕೂಡ ಅಷ್ಟೇ ಕಠಿಣವ್ರತದ ಅನುಸರಣೆಯಿಂದಷ್ಟೇ ಪರಿಶುದ್ಧಳಾಗುತ್ತಾಳೆ. ಒಂದು ವೇಳೆ ಸ್ತ್ರೀ ಮತ್ತೊಬ್ಬ ಪುರುಷನ ಸಂಪರ್ಕವನ್ನು ಮಾಡಿದ್ದಾಳೆಯೇ? ಇಲ್ಲವೇ? ಎಂಬ ಸಂಶಯವು ಬಂದಾಗ ರಜಸ್ವಲೆಯಾದ ನಂತರ ತನ್ನ ಸಂಶಯವನ್ನು ಪರಿಹಾರ ಮಾಡಿಕೊಳ್ಳಬೇಕು. ರಜಸ್ವಲೆಯಾಗುವುದರಿಂದ ಸ್ತ್ರೀಯು ಪರಿಶುದ್ಧಳಾಗಿದ್ದಾಳೆ ಎಂದು ಭಾವಿಸಬೇಕು ಎಂಬುದು ಈ ಶ್ಲೋಕದ ಭಾವವಾಗಿದೆ. ರಜಸ್ವಲೆಯಾಗದಿದ್ದರೆ ಅವಳು ಪತಿತಳಾದ್ದರಿಂದ ಪಾಪಭಾಜನಳಾಗಿದ್ದಾಳೆಂದು ತಿಳಿಯಬೇಕು.

ಪಾದಜೋಚ್ಛಿಷ್ಟಕಾಂಸ್ಯಂ ಚ ಗವಾಘ್ರಾತಮಥಾಪಿ ವಾ ।
ಗಂಡೂಷೋಚ್ಛಿಷ್ಟಮಪಿ ವಾ ವಿಶುದ್ಧ್ಯೇದ್ ದಶಭಿಸ್ತು ತತ್ ॥೩೦॥

ಕಂಚಿನ ಪಾತ್ರೆಗೆ ಅಂತ್ಯಜನ ಎಂಜಲು ಸಂಪರ್ಕವಾದರೆ ಹಸು ಮೂಸಿದರೆ ಕಂಚಿನ ಪಾತ್ರೆಯಲ್ಲಿ ಬಾಯಿಮುಕ್ಕಳಿಸಿದರೆ ಹತ್ತು ಬಗೆಯಲ್ಲಿ ಅದನ್ನು ಪರಿಶುದ್ಧ ಮಾಡಬೇಕು.

ಟಿಪ್ಪಣಿ - ಹಸುವಿನ ಬಾಲದಲ್ಲಿ ದೇವತೆಗಳ ಸಾನ್ನಿಧ್ಯವಿರುತ್ತದೆ. ಆದರೆ ಅದು ತಿಂದುಳಿದದ್ದು ಎಂಜಲು ಎಂದೇ ಭಾವಿಸಬೇಕು. ಹತ್ತು ಬಗೆಯಲ್ಲಿ ಕಂಚಿನ ಪಾತ್ರೆಯ ಶುದ್ಧಿಯನ್ನು ತಿಳಿಸುತ್ತಾರೆ. ಹಾಲು, ಮೊಸರು, ತುಪ್ಪ, ಗೋಮೂತ್ರ, ಗೋಮಯ, ಮಣ್ಣು, ನೀರು, ಭಸ್ಮ, ಹುಳಿ, ಅಗ್ನಿ ಈ ಹತ್ತು ಪದಾರ್ಥಗಳು ಎಂದು.

ಚತುಷ್ಪಾತ್ ಸಕಲೋ ಧರ್ಮೋ ಬ್ರಾಹ್ಮಣಾನಾಂ ವಿಧೀಯತೇ।
ಪಾದಾವಕೃಷ್ಟೋ ರಾಜನ್ಯೇ ತಥಾ ಧರ್ಮೋ ವಿಧೀಯತೇ ॥೩೧॥
ತಥೈವ ವೈಶ್ಯೇ ಚ ಶೂದ್ರೇ ಚ ಪಾದಃ ಪಾದೋ ವಿಧೀಯತೇ।

ಬ್ರಾಹ್ಮಣನು ನಾಕುಪಾದಗಳ ಧರ್ಮವನ್ನು ಆಚರಿಸಬೇಕು. ಕ್ಷತ್ರಿಯನು ಮೂರು ಪಾದಗಳ ಧರ್ಮವನ್ನು ಆಚರಿಸಬೇಕು. ವೈಶ್ಯನು ಎರಡು ಪಾದಗಳ ಧರ್ಮವನ್ನು ಆಚರಿಸಬೇಕು. ಶೂದ್ರನು ಒಂದು ಪಾದದ ಧರ್ಮವನ್ನು ಆಚರಿಸಬೇಕು.

ಟಿಪ್ಪಣಿ - ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ ಎಂಬ ಷಟ್ಕರ್ಮಗಳನ್ನು ಬ್ರಾಹ್ಮಣನು ಆಚರಿಸಬೇಕು. ಅಧ್ಯಯನ, ದಾನ, ಯಜನ ಎಂಬ ಮೂರು ಕರ್ಮಗಳನ್ನು ಕ್ಷತ್ರಿಯರು ಹಾಗೂ ವೈಶ್ಯರು ಆಚರಿಸಬೇಕು. ಶೂದ್ರನು ಉತ್ತಮರ ಸೇವೆ ಎಂಬ ಒಂದು ಕರ್ಮವನ್ನಷ್ಟೇ ಆಚರಿಸಬೇಕು.

ವಿದ್ಯಾದೇವಂ ವಿಧೇನೈಷಾಂ ಗುರುಲಾಘವನಿಶ್ಚಯಮ್ ॥೩೨॥

ತಿರ್ಯಗ್ಯೋನಿವಧಂ ಕೃತ್ವಾ ದ್ರುಮಾಶ್ಚಿತ್ತ್ವೇತರಾನ್ ಬಹೂನ್।
ತ್ರಿರಾತ್ರಂ ವಾಯುಭಕ್ಷಃ ಸ್ಯಾತ್ ಕರ್ಮ ಚ ಪ್ರಥಯೇನ್ನರಃ ॥೩೩॥

ಹೀಗೆ ಪಾಪಕರ್ಮಗಳ ಅಲ್ಪತ್ವ ಹಾಗೂ ಮಹತ್ವಗಳನ್ನು ನಿಶ್ಚಯಿಸಿ, ಪ್ರಾಯಶ್ಚಿತ್ತವನ್ನು ಎಷ್ಟು ಆಚರಿಸಬೇಕೆಂಬುದನ್ನು ಮಹಾತ್ಮರ ಮೂಲಕ ದೃಢ-

ಪಡಿಸಿಕೊಳ್ಳಬೇಕು. ಪಾಪವು ಗುರುತರವಾಗಿದ್ದರೆ ಒಂದು ವರ್ಷ ಸಂಪೂರ್ಣವಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಅಲ್ಪವಾಗಿದ್ದರೆ, ಮೂರು ದಿವಸಗಳ ಅನುಷ್ಠಾನದಿಂದಲೇ ಪರಿಹಾರವಾಗುತ್ತದೆ. ಪಶುಪಕ್ಷಿಗಳನ್ನು ಸಂಹರಿಸಿದಾಗ ಬರುವ ಪಾಪದ ಪ್ರಾಯಶ್ಚಿತ್ತಕ್ಕೆ ಮೂರು ರಾತ್ರಿಗಳ ತನಕ ವಾಯುಭಕ್ಷಕನಾಗಿ ತಾನು ಮಾಡಿದ ಪಾಪವನ್ನು ಎಲ್ಲರ ಬಳಿ ಹೇಳಿಕೊಳ್ಳುತ್ತಾ ಇರಬೇಕು. ಆಗ ಸಂಹಾರ ಮಾಡಿದ ಪಾಪವು ವೃಕ್ಷಗಳನ್ನು ಕತ್ತರಿಸಿದ ಪಾಪವು ಪರಿಹಾರವಾಗುತ್ತದೆ.

ಅಗಮ್ಯಾಗಮನೇ ರಾಜನ್ ಪ್ರಾಯಶ್ಚಿತ್ತಂ ವಿಧೀಯತೇ।
ಆರ್ದ್ರವಸ್ತ್ರೇಣ ಷಣ್ಮಾಸಂ ವಿಹಾರ್ಯಂ ಭಸ್ಮಶಾಯಿನಾ ॥೩೪॥

ಧರ್ಮರಾಜನೇ! ಪರಸ್ತ್ರೀಸಂಗವನ್ನು ಮಾಡಿದರೆ, ಹೀಗೆ ಪ್ರಾಯಶ್ಚಿತ್ತವು ವಿಹಿತವಾಗಿದೆ -ಒದ್ದೆ ಬಟ್ಟೆಯನ್ನು ಉಟ್ಟುಕೊಂಡು, ಆರು ತಿಂಗಳ ಕಾಲ ಸಂಚಾರ ಮಾಡುತ್ತಲೇ ಇರಬೇಕು. ರಾತ್ರಿಯ ಹೊತ್ತು, ಬೂದಿಯ ಮೇಲೆ ಮಲಗಿಕೊಳ್ಳ-ಬೇಕು.

ಏಷ ಏವ ತು ಸರ್ವೇಷಾಮಕಾರ್ಯಾಣಾಂ ವಿಧಿರ್ಭವೇತ್।
ಬ್ರಾಹ್ಮಣೋಕ್ತೇನ ವಿಧಿನಾ ದೃಷ್ಟಾಂತಾಗಮಹೇತುಭಿಃ ॥೩೫॥

ಇದೇ ಪ್ರಾಯಶ್ಚಿತ್ತವು ಪ್ರತಿಯೊಬ್ಬರಿಗೂ ಹೇಳಲ್ಪಟ್ಟಿದೆ. ಮಾಡಬಾರದ ಕೆಲಸಗಳನ್ನು ಎಸಗಿದರೆ, ಅದರಿಂದ ಉಂಟಾಗುವ ಎಲ್ಲಾ ಬಗೆಯ ಪಾಪಗಳಿಗೆ ಇದೇ ಪ್ರಾಯಶ್ಚಿತ್ತ ವಿಧಿಸಲ್ಪಟ್ಟಿದೆ. ವೇದಭಾಗವೆನಿಸಿದ ಬ್ರಾಹ್ಮಣದಲ್ಲಿ ಅನೇಕ ದೃಷ್ಟಾಂತ-ಗಳಿಂದ ಕಾರಣಗಳನ್ನು ನೀಡುವ ಮೂಲಕ ಪ್ರಾಯಶ್ಚಿತ್ತವನ್ನು ಹೇಳಲಾಗಿದೆ.

ಸಾವಿತ್ರೀಮಪ್ಯಧೀಯಾನಃ ಶುಚೌ ದೇಶೇ ಮಿತಾಶನಃ।
ಅಹಿಂಸೋಽಮಂದಕೋಽಜಲ್ಪನ್ ಮುಚ್ಯತೇ ಸರ್ವಕಿಲ್ಬಿಷೈಃ ॥೩೬॥

ಯಾರು ಪವಿತ್ರವಾದ ಸ್ಥಳದಲ್ಲಿ ಕುಳಿತು, ಅಲ್ಪವಾದ ಆಹಾರವನ್ನು ತೆಗೆದು-ಕೊಳ್ಳುತ್ತಾ, ಹರಿಧ್ಯಾನರತನಾಗುತ್ತಾನೋ, ಅಹಿಂಸಾವ್ರತವನ್ನು ಕೈಗೊಳ್ಳುತ್ತಾನೋ, ರಾಗದ್ವೇಷ-ಮಾನ-ಅಪಮಾನ ಮೊದಲಾದವುಗಳನ್ನು ಬಿಡುತ್ತಾನೋ, ಮೌನಿ-

ಯಾಗಿರುತ್ತಾನೋ, ಗಾಯತ್ರೀಮಂತ್ರವನ್ನು ನಿರಂತರ ಜಪಿಸುತ್ತಾನೋ, ಅಂಥವನು ಎಲ್ಲಾ ಬಗೆಯ ಪಾಪಗಳಿಂದ ವಿಮುಕ್ತನಾಗುತ್ತಾನೆ.

ಅಹಃಸು ಸತತಂ ತಿಷ್ಠೇದಭ್ರಾಕಾಶಂ ನಿಶಿ ಸ್ವಪೇತ್ ।
ತ್ರಿರಹ್ನಸ್ತ್ರಿರ್ನಿಶಾಯಾಶ್ಚ ಸವಾಸಾ ಜಲಮಾವಿಶೇತ್ ॥೩೭॥

ತಿಳಿಯದೇ ಮಾಡಿದ ಪಾಪಗಳ ಪ್ರಾಯಶ್ಚಿತ್ತಕ್ಕೆ ಈ ವ್ರತವನ್ನು ಆಚರಿಸಬೇಕು - ಹಗಲಿನಲ್ಲಿ ನಿರಂತರ ನಿಂತುಕೊಂಡಿರಬೇಕು. ಕುಳಿತುಕೊಳ್ಳಬಾರದು. ರಾತ್ರಿಯ ಕಾಲದಲ್ಲಿ ಆಕಾಶವನ್ನೇ ಹೊದಿಕೆಯನ್ನಾಗಿ ಮಾಡಿಕೊಂಡು ಮಲಗಿಕೊಳ್ಳಬೇಕು. ಮೂರು ಹಗಲು, ಮೂರು ರಾತ್ರಿ ಉಟ್ಟಬಟ್ಟೆಯಲ್ಲಿಯೇ ನೀರಿನಲ್ಲಿ ಮುಳುಗಿ ಸ್ನಾನವನ್ನು ಮಾಡಬೇಕು. ಮತ್ತೊಬ್ಬರ ಜೊತೆ ಸಂಭಾಷಣೆಯನ್ನು ಮಾಡಬಾರದು.

ಸ್ತ್ರೀಶೂದ್ರಪತಿತಾಶ್ಚಾಪಿ ನಾಭಿಭಾಷೇದ್ ವ್ರತಾನ್ವಿತಃ ।
ಪಾಪಾನ್ಯಜ್ಞಾನತಃ ಕೃತ್ವಾ ಮುಚ್ಯೇದೇವಂವ್ರತೋ ದ್ವಿಜಃ ॥೩೮॥

ವ್ರತಾನುಷ್ಠಾನದಲ್ಲಿರುವನು ಸ್ತ್ರೀಯರ ಜೊತೆ ಶೂದ್ರರ ಜೊತೆ ಪತಿತರ ಜೊತೆ ಮಾತನಾಡಬಾರದು. ಆಗ ಅಜ್ಞಾನದಿಂದ ಮಾಡಿದ ದೋಷಗಳು ಪರಿಹಾರವಾಗುತ್ತವೆ.

ಶುಭಾಶುಭಫಲಂ ಪ್ರೇತ್ಯ ಲಭತೇ ಭೂತಸಾಕ್ಷಿಕಃ ।
ಅತಿರಿಚ್ಯೇತ ಯೋ ಯತ್ರ ತತ್ಕರ್ತಾ ಲಭತೇ ಫಲಮ್ ॥೩೯॥

ಯಾವ ಮನುಷ್ಯನು ಶುಭಕರ್ಮಗಳನ್ನು ಹಾಗೂ ಪುಣ್ಯಕರ್ಮಗಳನ್ನು ಮಾಡುತ್ತಾನೋ, ಅವನು ಮಾಡುವ ಎಲ್ಲ ಕರ್ಮಗಳಿಗೆ ಪಂಚಭೂತಗಳೇ ಸಾಕ್ಷಿಯಾಗಿರುತ್ತವೆ. ಮರಣವನ್ನು ಹೊಂದಿದ ಮೇಲೆ ತಾನು ಮಾಡಿದ ಕರ್ಮಗಳ ಫಲವನ್ನು ಪಡೆದುಕೊಳ್ಳುತ್ತಾನೆ.

ಟಿಪ್ಪಣಿ - ಅತಿರಿಚ್ಯೇತ ಯೋ ಯತ್ರ ಇತ್ಯತ್ರ **ಅತಿರಿಚ್ಯೇತ** ಪುಣ್ಯೇನ **ಅತಿರಿಚ್ಯೇತ** ।

ತಸ್ಮಾದ್ ದಾನೇನ ತಪಸಾ ಕರ್ಮಣಾ ಚ ಶುಭಂ ಫಲಮ್ ।
ವರ್ಧಯೇದಶುಭಂ ಕೃತ್ವಾ ಯಥಾ ಸ್ಯಾದತಿರೇಕವಾನ್ ॥೪೦॥

ಆದ್ದರಿಂದ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಬೇಕೆಂದರೆ ದಾನವನ್ನು ಮಾಡಬೇಕು. ತಪಸ್ಸನ್ನು ಆಚರಿಸಬೇಕು. ಶುಭಕರ್ಮಗಳನ್ನು ನಿರಂತರ ಅಭಿವೃದ್ಧಿಪಡಿಸಿಕೊಳ್ಳಬೇಕು. ಆಗ ಶುಭವಾದ ಫಲವನ್ನೇ ಪಡೆದುಕೊಳ್ಳುತ್ತಾನೆ. ಇದಕ್ಕೆ ವಿಪರೀತವಾಗಿ ಅಶುಭಕರ್ಮಗಳನ್ನು ಮಾಡುತ್ತಿದ್ದರೆ ಕೆಟ್ಟಫಲಗಳನ್ನೇ ಅನುಭವಿಸುತ್ತಾನೆ.

ಕುರ್ಯಾಚ್ಛುಭಾನಿ ಕರ್ಮಾಣಿ ನಿಮಿತ್ತೇ ಪಾಪಕರ್ಮಣಾಮ್ ।
ದದ್ಯಾನ್ನಿತ್ಯಂ ಚ ವಿತ್ತಾನಿ ತಥಾ ಮುಚ್ಯೇತ ಕಿಲ್ಬಿಷಾತ್ ॥೪೧॥

ನಿರಂತರ ಶುಭಕರ್ಮಗಳನ್ನೇ ಮಾಡಬೇಕು. ಅನಿವಾರ್ಯವಾದಾಗ ಪಾಪಕರ್ಮಗಳನ್ನು ಮಾಡುವ ಪ್ರಸಂಗವು ಬಂದರೆ, ಅದರ ಪ್ರಾಯಶ್ಚಿತ್ತಕ್ಕೆ ತನ್ನಲ್ಲಿರುವ ಸಂಪತ್ತನ್ನು ಧನವನ್ನು ದಾನ ಮಾಡಬೇಕು. ಆಗ ತಾನು ಮಾಡಿದ ಅಲ್ಪಪಾಪದಿಂದಲೂ ವಿಮುಕ್ತನಾಗುತ್ತಾನೆ.

ಅನುರೂಪಂ ಹಿ ಪಾಪಸ್ಯ ಪ್ರಾಯಶ್ಚಿತ್ತಮುದಾಹೃತಮ್ ।
ಮಹಾಪಾತಕವರ್ಜಂ ತು ಪ್ರಾಯಶ್ಚಿತ್ತಂ ವಿಧೀಯತೇ ॥೪೨॥

ಆಯಾ ಪಾಪಕ್ಕೆ ಅನುಗುರೂಪವಾಗಿ ಪ್ರಾಯಶ್ಚಿತ್ತವನ್ನು ಶಾಸ್ತ್ರಗಳಲ್ಲಿ ಉದಾಹರಿಸಲಾಗಿದೆ. ಮಹಾಪಾತಕಕ್ಕೆ ಬಿಟ್ಟು, ಉಳಿದೆಲ್ಲ ಪಾಪಗಳಿಗೂ ಪ್ರಾಯಶ್ಚಿತ್ತವನ್ನು ವಿಧಿಸಲಾಗಿದೆ.

ಭಕ್ಷ್ಯಾಭಕ್ಷ್ಯೇಷು ಸರ್ವೇಷು ವಾಚ್ಯಾವಾಚ್ಯೇ ತಥೈವ ಚ ।
ಅಜ್ಞಾನಜ್ಞಾನಯೋ ರಾಜನ್ ವಿಹಿತಾನ್ಯವಿಜಾನತಾ ॥೪೩॥

ಯಾವುದನ್ನು ತಿನ್ನಬೇಕು, ಯಾವುದನ್ನು ತಿನ್ನಬಾರದು. ಹೇಗೆ ಮಾತನಾಡಬೇಕು, ಹೇಗೆ ಮಾತನಾಡಬಾರದು,ತಿಳಿಯದೇ ಮಾಡಿದ ಪಾಪಗಳಿಗೇನು ಪರಿಹಾರ? ತಿಳಿದು ಮಾಡಿದ ಪಾಪಗಳಿಗೆ ಏನು ಪರಿಹಾರ? ಧರ್ಮರಾಜನೇ ! ಇದೆಲ್ಲವನ್ನು ನಿನಗೀಗ ನಾನು ತಿಳಿಸಿರುವೆನು.

ಯಾಗಿರುತ್ತಾನೋ, ಗಾಯತ್ರೀಮಂತ್ರವನ್ನು ನಿರಂತರ ಜಪಿಸುತ್ತಾನೋ, ಅಂಥವನು ಎಲ್ಲಾ ಬಗೆಯ ಪಾಪಗಳಿಂದ ವಿಮುಕ್ತನಾಗುತ್ತಾನೆ.

ಅಹಃಸು ಸತತಂ ತಿಷ್ಠೇದಭ್ರಾಕಾಶಂ ನಿಶಿ ಸ್ವಪೇತ್ ।
ತ್ರಿರಹ್ನಸ್ತ್ರಿರ್ನಿಶಾಯಾಶ್ಚ ಸವಾಸಾ ಜಲಮಾವಿಶೇತ್ ॥೩೭॥

ತಿಳಿಯದೇ ಮಾಡಿದ ಪಾಪಗಳ ಪ್ರಾಯಶ್ಚಿತ್ತಕ್ಕೆ ಈ ವ್ರತವನ್ನು ಆಚರಿಸಬೇಕು - ಹಗಲಿನಲ್ಲಿ ನಿರಂತರ ನಿಂತುಕೊಂಡಿರಬೇಕು. ಕುಳಿತುಕೊಳ್ಳಬಾರದು. ರಾತ್ರಿಯ ಕಾಲದಲ್ಲಿ ಆಕಾಶವನ್ನೇ ಹೊದಿಕೆಯನ್ನಾಗಿ ಮಾಡಿಕೊಂಡು ಮಲಗಿಕೊಳ್ಳಬೇಕು. ಮೂರು ಹಗಲು, ಮೂರು ರಾತ್ರಿ ಉಟ್ಟಬಟ್ಟೆಯಲ್ಲಿಯೇ ನೀರಿನಲ್ಲಿ ಮುಳುಗಿ ಸ್ನಾನವನ್ನು ಮಾಡಬೇಕು. ಮತ್ತೊಬ್ಬರ ಜೊತೆ ಸಂಭಾಷಣೆಯನ್ನು ಮಾಡಬಾರದು.

ಸ್ತ್ರೀಶೂದ್ರಪತಿತಾಶ್ಚಾಪಿ ನಾಭಿಭಾಷೇದ್ ವ್ರತಾನ್ವಿತಃ ।
ಪಾಪಾನ್ಯಜ್ಞಾನತಃ ಕೃತ್ವಾ ಮುಚ್ಯೇದೇವಂವ್ರತೋ ದ್ವಿಜಃ ॥೩೮॥

ವ್ರತಾನುಷ್ಠಾನದಲ್ಲಿರುವನು ಸ್ತ್ರೀಯರ ಜೊತೆ ಶೂದ್ರರ ಜೊತೆ ಪತಿತರ ಜೊತೆ ಮಾತನಾಡಬಾರದು. ಆಗ ಅಜ್ಞಾನದಿಂದ ಮಾಡಿದ ದೋಷಗಳು ಪರಿಹಾರವಾಗುತ್ತವೆ.

ಶುಭಾಶುಭಫಲಂ ಪ್ರೇತ್ಯ ಲಭತೇ ಭೂತಸಾಕ್ಷಿಕಃ ।
ಅತಿರಿಚ್ಯೇತ ಯೋ ಯತ್ರ ತತ್ಕರ್ತಾ ಲಭತೇ ಫಲಮ್ ॥೩೯॥

ಯಾವ ಮನುಷ್ಯನು ಶುಭಕರ್ಮಗಳನ್ನು ಹಾಗೂ ಪುಣ್ಯಕರ್ಮಗಳನ್ನು ಮಾಡುತ್ತಾನೋ, ಅವನು ಮಾಡುವ ಎಲ್ಲ ಕರ್ಮಗಳಿಗೆ ಪಂಚಭೂತಗಳೇ ಸಾಕ್ಷಿಯಾಗಿರುತ್ತವೆ. ಮರಣವನ್ನು ಹೊಂದಿದ ಮೇಲೆ ತಾನು ಮಾಡಿದ ಕರ್ಮಗಳ ಫಲವನ್ನು ಪಡೆದುಕೊಳ್ಳುತ್ತಾನೆ.

ಟಿಪ್ಪಣಿ - ಅತಿರಿಚ್ಯೇತ ಯೋ ಯತ್ರ ಇತ್ಯತ್ರ **ಅತಿರಿಚ್ಯೇತ** ಪುಣ್ಯೇನ **ಅತಿರಿಚ್ಯೇತ ।**

ತಸ್ಮಾದ್ ದಾನೇನ ತಪಸಾ ಕರ್ಮಣಾ ಚ ಶುಭಂ ಫಲಮ್ ।
ವರ್ಧಯೇದಶುಭಂ ಕೃತ್ವಾ ಯಥಾ ಸ್ಯಾದತಿರೇಕವಾನ್ ॥೪೦॥

ಆದ್ದರಿಂದ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಬೇಕೆಂದರೆ ದಾನವನ್ನು ಮಾಡಬೇಕು. ತಪಸ್ಸನ್ನು ಆಚರಿಸಬೇಕು. ಶುಭಕರ್ಮಗಳನ್ನು ನಿರಂತರ ಅಭಿವೃದ್ಧಿಪಡಿಸಿಕೊಳ್ಳಬೇಕು. ಆಗ ಶುಭವಾದ ಫಲವನ್ನೇ ಪಡೆದುಕೊಳ್ಳುತ್ತಾನೆ. ಇದಕ್ಕೆ ವಿಪರೀತವಾಗಿ ಅಶುಭಕರ್ಮಗಳನ್ನು ಮಾಡುತ್ತಿದ್ದರೆ ಕೆಟ್ಟಫಲಗಳನ್ನೇ ಅನುಭವಿಸುತ್ತಾನೆ.

ಕುರ್ಯಾಚ್ಚುಭಾನಿ ಕರ್ಮಾಣಿ ನಿಮಿತ್ತೇ ಪಾಪಕರ್ಮಣಾಮ್ ।
ದದ್ಯಾನ್ನಿತ್ಯಂ ಚ ವಿತ್ತಾನಿ ತಥಾ ಮುಚ್ಯೇತ ಕಿಲ್ಬಿಷಾತ್ ॥೪೧॥

ನಿರಂತರ ಶುಭಕರ್ಮಗಳನ್ನೇ ಮಾಡಬೇಕು. ಅನಿವಾರ್ಯವಾದಾಗ ಪಾಪಕರ್ಮಗಳನ್ನು ಮಾಡುವ ಪ್ರಸಂಗವು ಬಂದರೆ, ಅದರ ಪ್ರಾಯಶ್ಚಿತ್ತಕ್ಕೆ ತನ್ನಲ್ಲಿರುವ ಸಂಪತ್ತನ್ನು ಧನವನ್ನು ದಾನ ಮಾಡಬೇಕು. ಆಗ ತಾನು ಮಾಡಿದ ಅಲ್ಪಪಾಪದಿಂದಲೂ ವಿಮುಕ್ತನಾಗುತ್ತಾನೆ.

ಅನುರೂಪಂ ಹಿ ಪಾಪಸ್ಯ ಪ್ರಾಯಶ್ಚಿತ್ತಮುದಾಹೃತಮ್ ।
ಮಹಾಪಾತಕವರ್ಜಂ ತು ಪ್ರಾಯಶ್ಚಿತ್ತಂ ವಿಧೀಯತೇ ॥೪೨॥

ಆಯಾ ಪಾಪಕ್ಕೆ ಅನುಗುರೂಪವಾಗಿ ಪ್ರಾಯಶ್ಚಿತ್ತವನ್ನು ಶಾಸ್ತ್ರಗಳಲ್ಲಿ ಉದಾಹರಿಸಲಾಗಿದೆ. ಮಹಾಪಾತಕಕ್ಕೆ ಬಿಟ್ಟು, ಉಳಿದೆಲ್ಲ ಪಾಪಗಳಿಗೂ ಪ್ರಾಯಶ್ಚಿತ್ತವನ್ನು ವಿಧಿಸಲಾಗಿದೆ.

ಭಕ್ಷ್ಯಾಭಕ್ಷ್ಯೇಷು ಸರ್ವೇಷು ವಾಚ್ಯಾವಾಚ್ಯೇ ತಥೈವ ಚ ।
ಅಜ್ಞಾನಜ್ಞಾನಯೋ ರಾಜನ್ ವಿಹಿತಾನ್ಯವಿಜಾನತಾ ॥೪೩॥

ಯಾವುದನ್ನು ತಿನ್ನಬೇಕು, ಯಾವುದನ್ನು ತಿನ್ನಬಾರದು. ಹೇಗೆ ಮಾತನಾಡಬೇಕು, ಹೇಗೆ ಮಾತನಾಡಬಾರದು,ತಿಳಿಯದೇ ಮಾಡಿದ ಪಾಪಗಳಿಗೇನು ಪರಿಹಾರ? ತಿಳಿದು ಮಾಡಿದ ಪಾಪಗಳಿಗೆ ಏನು ಪರಿಹಾರ? ಧರ್ಮರಾಜನೇ ! ಇದೆಲ್ಲವನ್ನು ನಿನಗೀಗ ನಾನು ತಿಳಿಸಿರುವೆನು.

ಟಿಪ್ಪಣಿ - ವಿಹಿತಾನ್ಯವಿಜಾನತಾ ಇತ್ಯತ್ರ **ಅವಿಜಾನತಾ ವಿಹಿತಾನಿ** ಪಾಪಾನಿ ಲಘೂನಿ।

ಜಾನತಾ ತು ಕೃತಂ ಪಾಪಂ ಗುರು ಸರ್ವಂ ಭವತ್ಯುತ।
ಅಜ್ಞಾನಾತ್ ಸ್ಖಲಿತೇ ದೋಷೇ ಪ್ರಾಯಶ್ಚಿತ್ತಂ ವಿಧಿಯತೇ ॥೪೪॥

ಪಾಪಕರ್ಮವು ಒಂದೇ ಆಗಿದ್ದರೂ ಅದನ್ನು ತಿಳಿದು ಮಾಡಿದರೆ ದೊಡ್ಡಮಟ್ಟ-ದಲ್ಲಿ ಪಾಪವು ಬರುತ್ತದೆ. ತಿಳಿಯದೇ ಮಾಡಿದರೆ ಅದೇ ಕರ್ಮವು ಸ್ವಲ್ಪವೇ ಪಾಪವನ್ನು ನೀಡುತ್ತದೆ. ಇದನ್ನು ಹೇಗೆ ಅವನಿಂದ ಪಾಪಕಾರ್ಯವು ನಡೆದಿದೆ ಎಂಬುದನ್ನು ವಿಚಾರ ಮಾಡಿ, ಪ್ರಾಯಶ್ಚಿತ್ತವನ್ನು ಶಾಸ್ತ್ರಗಳಲ್ಲಿ ವಿಧಾನ ಮಾಡ-ಲಾಗಿದೆ.

ಶಕ್ಯತೇ ವಿಧಿನಾ ಪಾಪಂ ಯಥೋಕ್ತೇನ ವ್ಯಪೋಹಿತುಮ್।
ಆಸ್ತಿಕೇ ಶ್ರದ್ದಧಾನೇ ತು ವಿಧಿರೇಷ ವಿಧೀಯತೇ ॥೪೫॥

ಧರ್ಮಶಾಸ್ತ್ರಗಳಲ್ಲಿ ವಿಧಾನ ಮಾಡಲ್ಪಟ್ಟ ಪ್ರಾಯಶ್ಚಿತ್ತಗಳ ಆಚರಣೆಯಿಂದ ಪಾಪಗಳನ್ನು ಖಂಡಿತವಾಗಲೂ ಪರಿಹಾರ ಮಾಡಿಕೊಳ್ಳಲು ಸಾಧ್ಯವಿದೆ. ಭಗವಂತ-ನನ್ನು ನಂಬಬೇಕು. ನಾನು ಪರಿಶುದ್ಧನಾಗಬೇಕೆಂಬ ದೀಕ್ಷೆಯಿರಬೇಕು. ಧರ್ಮದಲ್ಲಿ ಶ್ರದ್ಧೆಯಿರಬೇಕು. ಅಂಥವನಿಗಷ್ಟೇ ಶಾಸ್ತ್ರವು ಪ್ರಾಯಶ್ಚಿತ್ತವನ್ನು ವಿಧಾನ ಮಾಡುತ್ತದೆ.

ನಾಸ್ತಿಕಾಶ್ರದ್ದಧಾನೇಷು ಪುರುಷೇಷು ಕದಾಚನ।
ದಂಭದೋಷಪ್ರಧಾನೇಷು ವಿಧಿರೇಷ ನ ದೃಶ್ಯತೇ ॥೪೬॥

ನಾಸ್ತಿಕರಾದವರಿಗೆ, ಶ್ರದ್ಧೆಯಿಲ್ಲದವರಿಗೆ, ಅಹಂಕಾರವುಳ್ಳವರಿಗೆ, ಕೆಟ್ಟಕೆಲಸದಲ್ಲಿ ನಿರತರಾದವರಿಗೆ ಈ ಪ್ರಾಯಶ್ಚಿತ್ತವನ್ನು ಯಾವುದೇ ಶಾಸ್ತ್ರಗಳು ಸರ್ವಥಾ ಹೇಳು-ವುದಿಲ್ಲ.

ಶಿಷ್ಟಾಚಾರಶ್ಚ ಶಿಷ್ಟಶ್ಚ ಧರ್ಮೋ ಧರ್ಮಭೃತಾಂ ವರ।
ಸೇವಿತವ್ಯೋ ನರವ್ಯಾಘ್ರ ಪ್ರೇತ್ಯ ಚೇಹ ಸುಖಾರ್ಥಿನಾ ॥೪೭॥

ಶ್ರೇಷ್ಠನಾದ ಪುರುಷಶ್ರೇಷ್ಠನೇ! ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ಯಾರು ಸುಖವನ್ನು ಇಚ್ಛಿಸುತ್ತಾನೋ, ಅಂಥವನು ಶಿಷ್ಟಾಚಾರಸಂಪ್ರದಾಯವನ್ನು ಅನುಸರಿಸಲೇ ಬೇಕು. ವೇದಗಳಲ್ಲಿ ಹೇಳಲ್ಪಟ್ಟ ಧರ್ಮವನ್ನು ಶ್ರದ್ಧೆಯಿಂದ ಅನುಷ್ಠಾನ ಮಾಡಬೇಕು.

ಸ ರಾಜನ್ ಮೋಕ್ಷ್ಯಸೇ ಪಾಪಾತ್ ತೇನ ಪೂರ್ವೇಣ ಹೇತುನಾ।
ತ್ರಾಣಾರ್ಥಂ ವಾ ವಧೇನೈಷಾಮಥ ವಾ ನೃಪಕರ್ಮಣಾ ॥೪೮॥

ಧರ್ಮರಾಜನೇ ! ನೀನು ಶಿಷ್ಟಾಚಾರವನ್ನು ಅನುಸರಿಸುತ್ತಿರುವಿ. ಧರ್ಮ-ಮಾರ್ಗದಲ್ಲಿರುವಿ. ನೀನು ಮಾಡಿದ ಅಲ್ಪವಾದ ಪಾಪದಿಂದ ಖಂಡಿತವಾಗಿಯೂ ವಿಮುಕ್ತನಾಗುವಿ. ಪ್ರಾಣರಕ್ಷಣೆಗೋಸ್ಕರ ರಾಜ್ಯವನ್ನು ಪರಿತ್ಯಾಗ ಮಾಡಬೇಕೆಂಬ ನಿಶ್ಚಯವನ್ನು ಬಿಟ್ಟುಬಿಡು. ಪ್ರಾಯಶ್ಚಿತ್ತವನ್ನು ಮಾಡಿಕೋ. ದಾನ ಮಾಡುವುದರಿಂದ ಧರ್ಮದಿಂದ ಪರಿಪಾಲನೆ ಮಾಡುವಿಕೆಯಿಂದ ಕ್ಷತ್ರಿಯಧರ್ಮದ ಅನುಷ್ಠಾನ-ದಿಂದಲೂ ನೀನು ಪಾಪಗಳಿಂದಲೂ ವಿಮುಕ್ತನಾಗುವಿ.

ಅಥವಾ ತೇ ಘೃಣಾ ಕಾಚಿತ್ ಪ್ರಾಯಶ್ಚಿತ್ತಂ ಚರಿಷ್ಯಸಿ।
ಮಾ ತ್ವೇವಾನಾರ್ಯಜುಷ್ಟೇನ ಕರ್ಮಣಾ ನಿಧನಂ ಗಮಃ ॥೪೯॥

ಒಂದುವೇಳೆ ಯುದ್ಧವೆಂಬ ಘಟನೆಯಿಂದ ನಿನ್ನ ಮನಸ್ಸಿನಲ್ಲಿ ಅನುಕಂಪವು ಉಂಟಾಗಿದ್ದರೆ, ಅಕಾರ್ಯವನ್ನು ಎಸಗಿಬಿಟ್ಟೆ, ಪಶ್ಚಾತ್ತಾಪವುಂಟಾಗಿದ್ದರೆ, ಪ್ರಾಯಶ್ಚಿತ್ತವನ್ನು ಆಚರಿಸು. ಇದನ್ನು ಬಿಟ್ಟು, ಸಂಪ್ರದಾಯವನ್ನು ಅನುಸರಿಸದ ಅನಾರ್ಯರು ತೆರಳುವ ಮಾರ್ಗದಲ್ಲಿ ತೆರಳಬೇಡ. ದೈನ್ಯಾವಸ್ಥೆಯನ್ನು ಹೊಂದ-ಬೇಡ. ಆತ್ಮವಿನಾಶವನ್ನು ಮಾಡಿಕೊಳ್ಳಬೇಡ.

ಏವಮುಕ್ತೋ ಭಗವತಾ ಧರ್ಮರಾಜೋ ಯುಧಿಷ್ಠಿರಃ।
ಚಿಂತಯಿತ್ವಾಮುಹೂರ್ತಂ ತು ಪ್ರತ್ಯುವಾಚ ತಪೋಧನಮ್ ॥೫೦॥

ವೈಶಂಪಾಯನರು – ಜನಮೇಜಯನೇ! ಶ್ರೀವೇದವ್ಯಾಸದೇವರು ಹೀಗೆ ಯುಧಿ-ಷ್ಠಿರನಿಗೆ ಅನೇಕ ಬಗೆಯಲ್ಲಿ ಸಮಾಧಾನವನ್ನು ಮಾಡಿದರು. ಆ ಯುಧಿಷ್ಠಿರನು

ಒಂದು ಮುಹೂರ್ತಗಳ ಕಾಲ ಆತ್ಮವಿಮರ್ಶೆಯನ್ನು ಮಾಡಿಕೊಳ್ಳುತ್ತಾ, ತಪೋಧನರಾದ ಶ್ರೀವೇದವ್ಯಾಸದೇವರನ್ನು ಪುನಃ ಹೀಗೆ ವಿನಮ್ರನಾಗಿ ಪ್ರಶ್ನಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ಶಾಂತಿಪರ್ವಣಿ
ರಾಜಧರ್ಮೇ ಪ್ರಾಯಶ್ಚಿತ್ತೀಯೇ ಷಟ್‌ತ್ರಿಂಶೋಽಧ್ಯಾಯಃ ॥೩೬॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಮೂವತ್ತಾರನೆಯ ಅಧ್ಯಾಯವು ಮುಗಿಯಿತು.

* * * * *

– – – – –

॥ಶ್ರೀಮದ್ಭೇಶಾರ್ಪಣಮಸ್ತು॥

ಗೋಬ್ರಾಹ್ಮಣಾರ್ಥೇ ವ್ಯಸನೇ ಚ ರಾಜ್ಞಾಂ
ರಾಷ್ಟ್ರೋಪಮರ್ದೇ ಸ್ವಶರೀರಹೇತೋಃ ।
ಸ್ತ್ರೀಣಾಂ ಚ ವಿಕ್ರುಷ್ಟರುತಾನಿ ಶ್ರುತ್ವಾ
ವಿಪ್ರೋಪಿ ಯುದ್ಧ್ಯೇತ ಮಹಾಪ್ರಭಾವಃ ॥

ಗೋಬ್ರಾಹ್ಮಣರಿಗೆ ಸಂಕಟಸ್ಥಿಸಿ ಪ್ರಾಪ್ತವಾದಾಗ,
ರಾಜರುಗಳು ರಾಷ್ಟ್ರಕ್ಕೆದ್ರೋಹವೆಸಗುವಾಗ, ತನ್ನ
ಶರೀರವನ್ನು ಕಾಪಾಡಿಕೊಳ್ಳುವ ಸಂದರ್ಭ
ಒದಗಿದಾಗ, ಸ್ತ್ರೀಯರ ಆಕ್ರಂದನವನ್ನು
ಕೇಳಿದಾಗ ಬ್ರಾಹ್ಮಣನೂ ಕೂಡಾ
ಯುದ್ಧಕ್ಕೆ ಸಿದ್ಧನಾಗಬೇಕು.

ISBN: 978-93-88813-28-0